ನವಚೈತನ್ಯ

ಸೋಮವಾರ
ಜನವರಿ
೧೭--೧೯೫೩

ವರ್ಷ ೧೫ | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ ೪೦ | ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಬಿ. ಕೇಶವರಾವು

ಜನರಲ್ ಕಾರ್ಯಪ್ಪನವರ ನಿವೃತ್ತಿ.

ಇವೇ ತಿಂಗಳ ತಾ. ೧೫ ಕ್ಕೆ ನೇಜರ ಜನರಲ್ ಕೆ ಎಂ. ಕಾರ್ಯಪ್ಪನವರು ಭಾರತದ ಮುಖ್ಯ ಸೇನಾಪತಿತ್ವದಿಂದ ನಿವೃತ್ತರಾಗುವರು. ಕನ್ನಡ ಸೀಮೆಯಾದ ಕೊಡಗಿನ ಪುತ್ರರಿಂದ ಕಾರ್ಯಪ್ಪನವರು ಸ್ವತಂತ್ರ ಭಾರತದ ಪ್ರಥಮ ಮುಖ್ಯ ಸೇನಾಪತಿಯಾದುದು ಕನ್ನಡ ನಾಡಿಗೆ ಹೆಮ್ಮೆಯ ವಿಷಯವಾದರೂ ಈ ಪ್ರಸ್ತುತ ಅವರ ಹೊಣೆಗಾರಿಕೆಯ ಸ್ಥಾನದಲ್ಲಿ ಅವರು ಆರಿಸಿತ ಉತ್ಸಾಹದಿಂದ ದುಡಿದು, ಬ್ರಿಟಿಷ ಅಧಿಕಾರಿಗಳ ಸಿಗ್ನಾನದಿಂದ ಉಂಟಾದ ಅಂತರಾಳವನ್ನು ಯಶಸ್ವಿಯಾಗಿ ತುಂಬಿ, ಜೀವಿತ ಪ್ರಮುಖ ಸಂರಕ್ಷಣಾ ಬಲವನ್ನು ಸ್ವತಂತ್ರ ವ್ಯಕ್ತಿಗೂ ಆಗಿ ಕಟ್ಟಿ ಇಂದಿರಾಷ್ಟ್ರದ ಚಿಂತನ ಕೃತಜ್ಞತೆಗೆ ಪಾತ್ರರಾದುದು ಇನ್ನೂ ಅಭಿಮಾನಾಸ್ಪದ ಸಾಧನೆ. ರಾಜಕೀಯ ಸ್ವಾತಂತ್ರ್ಯ ಪೂರ್ತಿ ಬರುವ ಕಾಲದಲ್ಲಿ ಅನಿವಾರ್ಯವಾಗಿ ಸೈನ್ಯಕ್ಕೂ ನಾಗರಿಕರಿಗೂ ಸಂಬಂಧವೇ ಇಲ್ಲದ್ದು, ಅದು ಸಾಮ್ರಾಜ್ಯದ ಹಿಂಬಾಲಕನಾಗಿದೆಯೆಂಬ ಭಾವನೆ ಬೇರೂರಿತ್ತು. ಈ ಭಾವನೆಯನ್ನು ತೊಲಗಿಸಿ ಭಾರತೀಯ ಸೈನ್ಯವು ನಿಜವಾಗಿ ದೇಶದ್ರೋಹಿ ಪೇರ ಸೇನಾಕರ ವಿಸ್ತಾರ ಘಟನೆಂಬ ಅಂಕವನ್ನು ನಾಗರಿಕರಿಗೆ ಮನವರಿಕೆ ಮಾಡಿಕೊಡಲು ಕಾರ್ಯಪ್ಪನವರು ಅತ್ಯಂತ ಶ್ರಮಪಟ್ಟರು. ಸೈನ್ಯವನ್ನು ರಾಜಕಾರಣದಿಂದ ನಿರ್ಲಿಪ್ತವಿಡುವ ಸಂಗಡನೇ ಅವರು ಸೈನ್ಯದಲ್ಲಿ ಕರ್ತವ್ಯ ಜಾಗೃತಿಯನ್ನು ಜಾಗೃತಪಡಿಸಿದರು. ಕಾರ್ಯಪ್ಪನವರು ದೇಶದ ಉಜ್ವಲ ಭವಿಷ್ಯಕ್ಕೆ ಮಹತ್ವದ ಕೆಲಸ ಮಾಡಿ ಅನೇಕ ಯುವಕ ಜನ್ಮಾಯಿತ ಗಿದ್ದಾರೆ. ಸೇವೆ ಕ್ರಿಯೆ, ನಂತರ ಜೀವನವನ್ನು ನಿಷ್ಪಕ್ಷಪಾತ ನಿರ್ಣಾಯಕರ ಏಕಾಕಾರಕ್ಕೆ ಬೀಳಲಿಡುವ ನ್ಯಾಯವನ್ನು ಆಡಿ ತೋರಿಸಿದ್ದಾರೆ. ಆದರೆ ಅವರಂಥ ಪಕ್ಷಕ್ಕಾಗಿ ನೇಜರ ಪದವಿಯ ಪೇರ ಇದಕ್ಕೂ ಬಿಡಿದಿರುವ ಸರ್ವ ಅಪೇಕ್ಷಿಸಿದ ಸಂಭವವಿದೆ. ಯಾವ ಮುಂದು ರಾಜ್ಯದ ಗವರ್ನರ ಪದವಿ ಅವರಿಗಾಗಿ ಕಾದು ಕುಳಿತಿದೆ.

ಆದಾನಾ ಡಿ ಮುಖಿ ಕೋರ್ಟಿನಲ್ಲಿ

O. P. 12/52

(ತೀರಿ ಹೋದ ಪುರಿಮೆಟ್ಲ ಸೆದ್ದಲಿಂಗಸ್ವಾಮಿಗಳ ವಿಷಯ)

ಅರ್ಜಿದಾರರು:–

ಪುರಿಮೆಟ್ಲ ನವಣೆ ಮಾಡಿಪ್ಪ ವಗೈರಾ ಮತ್ತು

ಕೌಂಟರ್ ಅರ್ಜಿದಾರರು:–

ಪುರಿಮೆಟ್ಲ ಲಕ್ಷ್ಮಮ್ಮ ವಗೈರಾ

ಮೇಲ್ಕಂಡ ವಿಷಯದಲ್ಲಿ ಅರ್ಜಿದಾರರು ಅಂದ್ರ ಇಂಡಿಯನ್ ಕಂಪನಿಯಂತೆ ಸೆದ್ದಲಿಂಗಸ್ವಾಮಿಗಳಿಗೆ ಒರಬೇಕಾದ ಭೂಮಿ ಮೊತ್ತವನ್ನು ವಸೂಲಿ ಮಾಡಲು ಅಧಿಕಾರ ಪತ್ರ *(Succession Certificate)* ಕೊಡಬೇಕೆಂದು ಅರ್ಜಿ ಇಟ್ಟಿರುತ್ತಾರೆ. ಆ ಮೇಲೆ 20-1-53 ತೇದಿಗೆ ಇರುತ್ತದೆ. ಯಾರಿಗಾದರೂ ತಕರಾರು ಇದಲ್ಲಿ ಕೋರ್ಟಿನಲ್ಲಿ ಹಾಜರಾಗಿ ತಮ್ಮನು ನಾಡಿಕೊಳ್ಳಬಹುದು.

ಯಸ್. ನರಸಿಂಗರಾವ್
ಅರ್ಜಿದಾರರ ವಕೀಲರು

ಬಳ್ಳಾರಿ ಪ್ರಭಾತ್‌ದಲ್ಲಿ

9-1-53 ರಿಂದ

ಅವರ್ ಇಂಡಿಯಾದವರಿಂದ

★ನಾಯಿಲ್ಲು★ (ತೆಲುಗು)

ಶಾಂತಾಗಣ :– ಟಿ. ಆರ್. ರಾಜಕುಮಾರಿ.
ನಾಗೇಶ್ವರ ಲಿಂಗಮೂರ್ತಿ, ರಾಮಕರ್ಮ.

MY HOME

ಜಪಾನದ ಒಕ್ಕಲಿಗನ ಒಲವು ನಿಲವು

ಜಪಾನದ ಒಕ್ಕಲಿಗ ಸತತೋದ್ಯೋಗಿ. ಯಾವ ಹೊಲ ನೋಡಿದರೂ, ಒಕ್ಕಲತನವನ್ನು ಅರೆ ಮನಸ್ಸಿನಿಂದ ಮಾಡಿದ್ದು ಕಾಣುವದಿಲ್ಲ. ಅಲ್ಲಿಯು ಹೊಲಗಳಿಗೆ ಬೇಲಿಯೇ ಬೇಕಿಲ್ಲ. ಸಾಗಾಗಬಲ್ಲ ಭೂಮಿ ಸಾಗಾಗದೆ ಉಳಿದಿರುವದು ಒಂದು ಇಂಚಿನಷ್ಟೂ ಕೂಡಾ ಕಣ್ಣಿಗೆ ಬೀಳುವದಿಲ್ಲ. ಜಪಾನದ ಒಕ್ಕಲ ತನದಲ್ಲಿ ಕಂಡುಬರುವ ಕೆಲವು ಮನ ಸೆಳೆಯುವ ಒಲವು ನಿಲವುಗಳು ಇವು.

ಭತ್ತದ ಕೃಷಿಯಲ್ಲಿ ಮೂರು ಪ್ರಾಮುಖ್ಯ ಅನಕೆಗಳವೆ. (1) ಆಗೆಯನ್ನು ತಯಾರಿಸುವುದು, (2) ಆಗೆಯನ್ನು ಕಿತ್ತು ನಡುವುದು. ಮತ್ತು (3) ಬೆಳೆ ಪಕ್ವವಾಗುವ ವರೆಗೂ ಅದರ ರಕ್ಷಣೆ.

ಜಪಾನದ ಭತ್ತದ ಕೃಷಿ ಪದ್ಧತಿಯ ಒಂದು ಗಮನಾರ್ಹ ಅಂಶವೆಂದರೆ, ಆಗೆ ತಯಾರಿಸಲು ಬೀಜಗಳನ್ನು ತುಸು ಉಬ್ಬಿದ ಮಡಿಗಳಲ್ಲಿ ಬಿತ್ತುವುದು. ಇದ ರಿಂದ ಮಳೆ ಹೆಚ್ಚಾದರೆ ನಸಿಗಳು ಕೊಚ್ಚಿ ಕೊಂಡು ಹೋಗುವ ಮತ್ತು ದೀರ್ಘ ಕಾಲ ನೀರು ನಿಂತರೆ ಆಗೆಯ ಸತ್ವ ಕುಂದುವ ಭಯ ತಪ್ಪುತ್ತದೆ. ಆಗೆ ಬಿತ್ತಲು ರೈತನ ಮನೆಗೆ ಆನಷ್ಟು ಹತ್ತಿರವಾದ ಯೋಗ್ಯ ಹೊಲವನ್ನು ಆರಿಸುವರು. ಬೆಳೆಯು ಕೊಯ್ದು ಮುಗಿದ ಮೇಲೆ ಭೂಮಿಯನ್ನು ಉಳುವರು ನೆಲ ಗಟ್ಟಿಯಾಗಿ ಹೋಗಿದ್ದರೆ ಕೈಯಿಂದ ಅಗೆದು ಮಣ್ಣಿ ಹೆಂಟಿಗೆಗಳನ್ನು ಒಡೆದು ನೆಲವನ್ನು ಸಾಧ್ಯವಿನಷ್ಟು ನೆತ್ತಗೆ ಮಾಡಬೇಕು. ಹಟ್ಟಿ ಗೊಬ್ಬರವಿಲ್ಲದಿದ್ದರೆ (ಕಂಪೋಸ್ಟ್) ಗೊಬ್ಬರವನ್ನು ಗುಂಟೆಗೆ (ಎಕರೆ=40 ಗುಂಟೆ) ಒಂದು ಬಂಡಿಯ ಪ್ರಮಾಣದಲ್ಲಿ ಹಾಕಲಾಗುವುದು. ಆ ಮೇಲೆ 4 ರಿಂದ 6 ಫೂಟು ಹಗಲು, 3 ಇಂಚು ಎತ್ತರಗಳನ್ನು ಕೈಯಿಂದ ನೆಲದಲ್ಲಿ ಒತ್ತಬೇಕು. ಎಕರೆಗೆ 6 ರಿಂದ 10 ಪೌಂಡ್. ಬೀಜ ದಂತೆ ಬಿತ್ತಿದರೆ ಸಾಕು. ಒಂದೂ ಕಾಲು ಗುಂಟೆಯಲ್ಲಿ ಬಿತ್ತಿದ ಆಗೆ ಇಟ್ಟೇ ಒಂದೆ–ಕರೆ ಹೊಲಕ್ಕೆ ನಡಲು ಸಾಕು ಮಳೆ ಬೀಳದಿದ್ದರೆ ಪೈರುಗಳಿಗೆ ಕೈಯಿಂದಲೇ ನೀರುಣಿಸಬೇಕಾಗುವುದು ಬಿತ್ತಿ ಹತ್ತು ಹದಿನೈದು ದಿನಗಳ ನಂತರ ಮತ್ತೊಮ್ಮೆ ಗೊಬ್ಬರ ಹಾಕಬೇಕು. ಆಗಾಗ್ಗೆ ಕಳೆ ತೆಗೆದು ಪೈರುಗಳನ್ನು ಸ್ವಚ್ಛವಾಗಿಡಬೇಕು. ಬಿತ್ತಿದ ಸುಮಾರು 20 ದಿನಗಳಲ್ಲಿ ಆಗೆಯು ಕಿತ್ತು ನಡಲು ಸಿದ್ಧವಾಗುತ್ತದೆ. ಆಗೆಯನ್ನು ಕಲಿಕೆಯ ಸಹಾಯದಿಂದ ಕೀಳಬೇಕು. ಈ ಬಗೆಯಾಗಿ ಬಿತ್ತಿದರೆ ಪ್ರತಿ ಬೀಜಕ್ಕೂ 4-6 ಕವಲು ಒಡೆಯುತ್ತವೆ.

ಸಾಮಾನ್ಯ ದೇಶಿ ಭತ್ತದ ಕೃಷಿ ಪದ್ಧತಿಯಲ್ಲಿ ಸಗಣಿ, ಸೊಪ್ಪು ಪಡೆಗಳನ್ನು ಸುಟ್ಟು ಪಡುವ ಪಾತಳಿಯಾದ ಪೂಡಿಯ ಮೇಲೆಯೇ ಬೀಜ ಬಿತ್ತುವುದು ರೂಢಿ. ಹಟ್ಟಿ ಆಥವಾ ಒತ್ತಲು ಗೊಬ್ಬರವನ್ನು ಹಾಕುವುದಿಲ್ಲ. ಒಂದೆಕರೆ ಹೊಲದಲ್ಲಿ ನಡಲು 60 ರಿಂದ 90 ಪೌಂಡ್ ಬೀಜ ಉಪಯೋಗಿಸಲಾಗುತ್ತದೆ. (ಗುಜರಾತದ ಖೇಡಾ ಜಿಲ್ಲೆಯ ನಾಡಿಯಾದ ತಾಲೂಕಿನಲ್ಲಿ ಮಾತ್ರ ಎಕರೆಗೆ ಕೇವಲ 6 ರಿಂದ 10 ಪೌಂಡ್ ಬೀಜ ಉಪಯೋಗಿಸುತ್ತಾರೆ.) ಜಪಾನಿ ಪದ್ಧತಿಯನ್ನು ಉಪಯೋಗಿಸಲು ಅಂತೆ ನಡಬೇಕು. ಬೇರುಗಳಿಗೆ ಪಟ್ಟಾಗಿ ದಂತೆ ಎಚ್ಚರದಿಂದ ಒಂದೊಂದು ಗುಂಪಿಗೆ ಎರಪೆರಡು ಆಗೆಗಳಂತೆ ನಡಬೇಕು. ಸಾಲುಸಾಲಾಗಿ ನಡುವುದರಿಂದ ಕಳೆ ಕೀಳುವುದಕ್ಕೂ ನಡುವೆ ಅಕ್ಕಡಿ ಬೆಳೆ ಬೆಳೆಯಲಿಕ್ಕೂ ಸುಲಭವಾಗುವುದು.

ಕೋರಾ ಕೇಂದ್ರವಲ್ಲಿ ಮಿಶ್ರಣ ಗೊಬ್ಬರವನ್ನು ಮತ್ತೆರಡು ಬಾರಿ ಹಾಕಲಾಗುತ್ತದೆ. ಸಟ್ಟು ಆಗಿ ಒಂದು ತಿಂಗಳ ನಂತರ ಒಮ್ಮೆ, ಮತ್ತು ಮತ್ತೊಂದು ತಿಂಗಳ ನಂತರ ಇನ್ನೊಮ್ಮೆ. ಸಟ್ಟು ಗುಂಪಿಗಳ ನಡುಮತ್ತಲ ನೆಲವನ್ನು ಪ್ರತಿ ಸಲ ದಿನಕ್ಕೊಮ್ಮೆ ಕೈಯಿಂದಾಗಲಿ ವಿಶೇಷ ಸಲಕರಣೆಯಿಂದಾಗಲಿ ಕೆದಕುತ್ತಿರಬೇಕು. ಬೆಳೆ ಬೆಳೆಯುತ್ತಿರುವಾಗ ಮೂರನಾಲ್ಕು ಬಾರಿ ಹೀಗೆ ಮಾಡಲಾಗುವುದು. ಇದರಿಂದ ಆಗೆಯು ಕೆಟ್ಟು ಹೆಜ್ಜೆ ಕಪಚೊಪೆಯು ಅನಕಾವಶ್ಯವಾಗುತ್ತದೆ. ಗೊಬ್ಬರ ಹಾಕುವುದರಲ್ಲಿಯೂ ಕಳೆ ತೆಗೆಯುವುದರಲ್ಲಿಯೂ ಒಟ್ಟು ಕೃಷಿ ಕಾರ್ಯವಲ್ಲಿಯೂ ನಾವು ವಹಿಸುವ ಎಚ್ಚರವನ್ನು ಆವಲಂಬಿಸಿ 50 ರಿಂದ 120 ರ ವರೆಗೂ ಕವಲೊಡೆಯುವುದುಂಟು. ಪೇಟು ಕೊಡಿಯುವ ಕೈಮಿ ಯಾವುದಾದರೂ ಕವರಿಸಿ ಹಿಡಿದಿದ್ದರೆ ಆ ಕಣಿಲನ್ನೇ ಕಿತ್ತು ಸುಟ್ಟು ಇನ್ನು ವೇಶಿ ಪದ್ಧತಿಯಲ್ಲಿ ಆಗಾಗ್ಗೆ ಬುಡದ ನೆಲವನ್ನು ಕೆದರುವುದಾಗಲಿ ನಡುನೆ ಅಕ್ಕಡಿ ಬೆಳೆ ಬೆಳೆಯುವುದಾಗಲಿ ರೂಢಿಯಲ್ಲಿಲ್ಲ.

ಜಪಾನಿ ಪದ್ಧತಿಯಲ್ಲಿ ಭತ್ತ ಬೆಳೆಯುವ ಪ್ರಯೋಗಗಳು ಮುಂಬಯಿ ರಾಜ್ಯದ ಹಲವೆಡೆಗಳಲ್ಲಿ ಕಳೆದ ಎರಡು ಮೂರು ವರ್ಷಗಳಿಂದ ನಡೆದಿವೆ. ಈ ಪದ್ಧತಿಯಿಂದ ಎಕರೆಗೆ 3000 ದಿಂದ 5000 ಪೌಂಡು ಭತ್ತ ಹುಟ್ಟುತ್ತವೆಯೆಂದು ಪ್ರಯೋಗಗಳಿಂದ ಸೂಚಿತವಾಗುತ್ತದೆ. ಇದು ನಮ್ಮಲ್ಲಿನ ಸಾಮಾನ್ಯ ಪದ್ಧತಿಯಿಂದ ಬರುವ ಹುಟ್ಟುವಳಿಗಿಂತ ಮೂರ್ನಾಲ್ಕಿಯಾಗುತ್ತದೆ ಎನ್ನಲ್ಲಿ ಜಪಾನಿ ಪದ್ಧತಿಯು ದೇಶೀ ಪದ್ಧತಿಗಿಂತ ಹೆಚ್ಚು ಫಲದಾಯಕವಾಗಿ ತೋರಿಬರುವುದೋ ಅಲ್ಲೆಲ್ಲ ಈ ಪದ್ಧತಿಯನ್ನು ಹೆಚ್ಚಾಗಿ ಸ್ವೀಕಾರಮಾಡಲಾಗುವುದು.

—

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 406/52

ವಾದಿಗಳು:—

ರೆಡ್ಡಿ ಈರನಗೌಡ, ತಂದೆ ಗುರನಗೌಡ ವಯಸ್ಸು, 60 ವೀರಶೈವ, ಜಿರಾಯ್ತಿ, ಸಾ. ಧೂಪದಹಳ್ಳಿ, ತಾ. ಕೂಡ್ಲಿಗಿ.

Vs

ಪ್ರತಿವಾದಿ:—

ಕೋಗಳಿ ಹನುಮಂತಗೌಡ, ತಂದೆ ಪತ್ರೆಪ್ಪ, ಮೇಜರು, ವೀರಶೈವ, ಜಿರಾಯ್ತಿ, ಸಾ. ಧೂಪದಹಳ್ಳಿ, ತಾ. ಕೂಡ್ಲಿಗಿ.

ವಾದಿಗೆ ರೂ. 700–0–0 ಬಾಕಿ ಆಗಿ ಪ್ರತಿವಾದಿಯು ವಾದಿಗೆ ತಾ. 11-7-51 ರಲ್ಲಿ ಬರಕೊಟ್ಟ ವ್ಯಾಮುಸರಿ ನೋಟಿನ ಬಾಕಿ ವಸೂಲು ಮಾಡಲು ವಾದಿಯ ಮೇಲಿನ ದಾವಾ ಮಾಡಿರುತ್ತಾನೆ. ವಾಯಿದಾ ತಾ. 17–1–53 ಕ್ಕೆ ಇರುತ್ತದೆ. ಆ ದಿನ ಮೇಲಿನ ಕೋರ್ಟಿನಲ್ಲಿ ಪ್ರತಿವಾದಿಯು ಪ್ರಾತಃ ಕಾಲ 10 ಗಂಟೆಗೆ ಹಾಜರಾಗಿ ತಕರಾರು ಏನಾದರು ಇದ್ದಲ್ಲಿ ತಿಳಿಸಬೇಕಿದ್ದು. ತಪ್ಪಿದಲ್ಲಿ ವಾದಿ ಕೋರಿದಂತೆ ಎಕ್ಸ್‌ಪಾರ್ಟಿ ಡಿಕ್ರಿ ಮಾಡಲಾಗುವುದು.

ತಟ್ಟಿ ಕೃಷ್ಣರಾವ್
ತಟ್ಟಿ ರಂಗರಾವ್
ವಕೀಲರು, ಹೊಸಪೇಟೆ.

ಭಾರತದಲ್ಲಿಯ ಎಲ್ಲಾ ವಿಮಾನ ಸಾರಿಗೆ ಕಂಪನಿಗಳನ್ನು ಇದೇ ಏಪ್ರಿಲ್ 1 ನೇ ತಾರೀಖಿನೊಳಗಾಗಿ ಸರಕಾರವು ವಶಪಡಿಸಿಕೊಳ್ಳುವದೆಂದು ತಿಳಿಯುತ್ತದೆ.

ಆಲೂರು ತಾಲೂಕು ಹಿಂದೀ ಪ್ರೇಮಿಮಂಡಲಿ

ಶ್ರೀ ಮೋಟೂರು ಸತ್ಯನಾರಾಯಣರಿಂದ ಭವನೋದ್ಘಾಟನೋತ್ಸವ.

28-12-52 ನೆಯ ದಿನಾಂಕ ಬಳ್ಳಾರಿ ಜಿಲ್ಲೆಯ ಆಲೂರಿನಲ್ಲಿ ಸುಂದರವಾಗಿ ಆಚ್ಚುಕಟ್ಟಾಗಿ ನಿರ್ಮಿತವಾದ ಹಿಂದೀ ಭವನವನ್ನು ಮದ್ರಾಸ್ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸ್ಥಾನ ಕಾರ್ಯದರ್ಶಿಗಳಾದ ಶ್ರೀ ಮೋಟೂರಿ ಸತ್ಯನಾರಾಯಣರು ತೆರೆದರು ಈ ಭವನವು ಆಲೂರಿನ ಪಂಡಿತರಾದ ಶ್ರೀ ಕೆ.ಹೆಚ್. ಸತ್ಯನಾರಾಯಣರಾಯರ 11 ವರ್ಷದ ಅವಿಶ್ರಾಂತ ಶ್ರಮದ ಫಲ ಸರ್ಕಾರದವರು ಸುಮಾರು 5 ಸಾವಿರ ರೂ. ಗ್ರಾಂಟು ಕೊಟ್ಟರು. ಇನ್ನುಳಿದ 10 ಸಾವಿರ ರೂ. ಗಳನ್ನು ಶ್ರೀ ಸತ್ಯನಾರಾಯಣರಾಯರೂ ಅವರ ಮಿತ್ರರೂ ಇಡೀ ತಾಲೂಕನ್ನೇ ಸಂಚರಿಸಿ, ಸಂಗ್ರಹಿಸಿ, ಆವರ ಹೆಸರುಗಳನ್ನೆಲ್ಲಾ ಪ್ರಕಟಿಸಿ ಕೊನೆಯಲ್ಲಿ ಲೆಕ್ಕವನ್ನೆಲ್ಲಿಸಿ ಕೃತಜ್ಞತೆಯಿಂದ ವಂದನಾರ್ಪಣೆ ಮಾಡಿದರು.

ಆಲೂರಿನ ಸಮಾರಂಭವು ಜಿಲ್ಲೆಯ ಹಿಂದೀ ವರ್ಗಕ್ಕೆ ಭೂಷಣ. ಅಲ್ಲಿಯ ಸುವ್ಯವಸ್ಥೆ, ಶ್ರೀ ಸೀತಾರಾಮಾಚಾರ್ಯರ ನೇತೃತ್ವದಲ್ಲಿ ಆಹ್ವಾನಿತ ಆಫೀಸರುಗಳಿಗೂ, ಹಿಂದೀ ಪ್ರಚಾರಕರಿಗೂ ಆದ ಆದರೋಪಚಾರ, ಬಂಟಿಸ, ಫ್ಲೈಸಿವಾಹಕ ಸೇವಾನಿರತ ಸ್ವಯಂಸೇವಕರು, ಸೇಲಾಗಿ ನಿಶ್ಶಬ್ದದಿಂದ, ಆಸ್ಥೆ, ಶ್ರದ್ಧೆಗಳಿಂದ ಕೇಳಲು ಬಂದ ಸ್ತ್ರೀ ಪುರುಷ. ಶ್ರೋತವರ್ಗ ಇವೆಲ್ಲಾ ಸಂಘಟಕರಿಗೆ ಒಂದು ಅಮೂಲ್ಯಪಾಠವನ್ನು ಕೊಟ್ಟವು.

ಆ ಲೂ ರು
ತೆಲುಗು ಕವಿ ಸಮ್ಮೇಳನ.

ಬಳ್ಳಾರಿಯ ಶ್ರೀ ಕ. ಸಂಜೀವಮೂರ್ತಿರಾವ್, ಕಲುಗೋಡು ಆಶ್ವನಾಥರಾವ್ ರಾವಾಡ ವೆಂಕಟರಾಮಶಾಸ್ತ್ರಿ ಮತ್ತು ಆಂಧ್ರದ ಗಡಿಯಾರಂ ವೆಂಕಟರಮಣಶಾಸ್ತ್ರಿ ಮೊದಲಾದ ಕವಿಗಳೆಲ್ಲಾ ಬಂದಿದ್ದರು. 29ನೆಯ ತಾ. ಈ ಸಾಹಿತ್ಯ ಮಹೋತ್ಸವದಲ್ಲಿ ಶ್ರೀ ಮೋಟೂರಿ ಸತ್ಯನಾರಾಯಣರ 'ಭಾಷಾ ಸಂವರ್ಧನೆ'ಯನ್ನು ಕುರಿತು ವಿಚಾರ ಪರಿಪ್ಲುತ ಭಾಷಣವಾಯಿತು. ಇತರ ಕವಿಗಳೂಸಹ 'ಕವಿತಾ' ಸಂಬಂಧದಲ್ಲಿ ರಸವತ್ತಾದ ಭಾಷಣಗಳನ್ನು ಮಾಡಿದರು ಶ್ರೀ ಟೇಕೂರು ಕೃಷ್ಣಮೂರ್ತಿಯವರು ಎಲ್ಲರಿಗೂ ವಂದನಾರ್ಪಣೆಮಾಡಿದರು.

ಶ್ರೀ ಮೋ. ಸತ್ಯನಾರಾಯಣರಾಯರು ತಮ್ಮ ಸರಳ ಧಾರವಾಹಿ ಮತ್ತು ಜಕರ್ಷಕ ಶೈಲಿಯಲ್ಲಿ ಹಿಂದೀ ಮತ್ತು ತೆಲುಗು ಭಾಷೆಗಳಲ್ಲಿ ಹಿಂದಿಯ ಪ್ರಾಮುಖ್ಯತೆಯನ್ನು ಕುರಿತು ಮಾತಾಡಿ, ಭವನದ ಉದ್ಘಾಟನೆಮಾಡಿದರು. ಶ್ರೀ ಟಿ. ಸುಬ್ರಮಣ್ಯಂರು ತೆಲುಗಿನಲ್ಲಿ ಸಭಾರಂಭದ ಮಹತ್ವವನ್ನು ಹೇಳಿದರು. ಜಿಲ್ಲಾ ಹಿಂದೀ ಪ್ರೇಮಿ ಮಂಡಲದ ಪರವಾಗಿ ಶ್ರೀ ಟಿ. ಬಿ. ಕೇಶವರಾಯರು ತಮ್ಮ ಅಭಿನಂದನೆಗಳನ್ನರ್ಪಿಸಿದರು. ಇನ್ನು ಕೆಲವರು ಮಾತಾಡಿ ವಂದನಾರ್ಪಣೆಯ ನಂತರ ಪ್ರಾತಃಕಾಲದ ಸಭೆಯಂತ್ಯವಾಯಿತು.

ಮಧ್ಯಾಹ್ನ ಹಿಂದೀ ಪ್ರಚಾರಕರ ಸಮ್ಮೇಳನದಲ್ಲಿ ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ ಪ್ರಚಾರಕರು ಹಿಂದೀ ಪ್ರಚಾರದಲ್ಲಿರುವ ಕುಂದುಕೊರತೆಗಳನ್ನು ಹಿಂದಿಪಂಡಿತರಿಗಿರುವ ಕಷ್ಟಗಳನ್ನು ನಿವೇದಿಸಿದರು. ಶ್ರೀ ಸತ್ಯನಾರಾಯಣರು ಹಿಂದೀ ಮತ್ತು ತೆಲುಗು ಭಾಷೆಗಳಲ್ಲಿ ಸಮರ್ಪಕವಾಗಿ ಉತ್ತರವಿತ್ತರು.

ಆರಾತ್ರಿ ಆಲೂರಿನ ವಿದ್ಯಾರ್ಥಿಗಳಿಂದ ಹಿಂದೀ ತೆಲುಗು ನಾಟಕಗಳ ಪ್ರದರ್ಶನ ಮಾಡಿದರು.

ಆಂಧ್ರಪ್ರಾಂತ ರಚನೆ

ಭಾರತ ಸರ್ಕಾರದಿಂದ ನಿಯುಕ್ತರಾದ ನ್ಯಾಯಮೂರ್ತಿ ಮಾ ಭೂ ರ ಪ ರು ಮದ್ರಾಸಿಗೆ ಬಂದು ಆಂಧ್ರಪ್ರಾಂತ ವಿಷಯದಲ್ಲಿ ವಿಚಾರಣೆಗಾರಂಭಿಸಿದರು. ಈ ಸಾರಿ ಮದ್ರಾಸ್ ಮಂತ್ರಿಗಳೆಲ್ಲಾ ತಮ್ಮ ನೈಯುಕ್ತಿಕ ಅಭಿಪ್ರಾಯಗಳನ್ನು ಕೊಟ್ಟರು.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ತಮ್ಮನ್ನು 12-1-53 ನೆಯ ಸೋಮವಾರ ಕಾಣಲು ಆದೇಶ ಬಂದಿದೆ. ಆವರು ಅಸ್ವಸ್ಥರಿರುವಕಾರಣ ಸಮಿತಿಯ ಉಳಿದ ಸದಸ್ಯರಾದ ಶ್ರೀ ನಿಜಾನಂದ ಹೆಗಡೆ, ಸಿರಸಪ್ಪ ಇಜಾರಿ, ಟಿ. ಸುಬ್ರಮಣ್ಯಂ ಹಳ್ಳಿಕೇರಿ, ನೆಸ್ಸಿ, ಇವರು ಕಾಣಲಿದ್ದಾರೆ.

ಬಳ್ಳಾರಿ ಜಿಲ್ಲೆ
-: ವಿಭಜನೆಬೇಡ :-
ನ್ಯಾ. ನಾಂಭೂರಪರಿಗೆ ಬಿನ್ನಹ.
ಮದ್ರಾಸು ಸರ್ಕಾರದ ಅರಣ್ಯ ಶಾಖೆ ಮಂತ್ರಿ ಡಾ. ನಾಪನಗೌಡರು

ಆಂಧ್ರ ಪ್ರಾಂತ ರಚನೆಯಾದಲ್ಲಿ ಬಳ್ಳಾರಿ ಜಿಲ್ಲೆಯನ್ನು ಒಡೆಯದೆ, ಮದ್ರಾಸ್‌ದಲ್ಲಿ ಇದನ್ನು ಳಿಸಬೇಕು. ಗಡಿ ನಿರ್ಣಾಯಕ ಸಮಿತಿಯು ಬಳ್ಳಾರಿಯ ಕನ್ನಡ, ಆಂಧ್ರ ಪ್ರದೇಶಗಳನ್ನು ನಿರ್ಣಯಿಸುವಾಗ ಇದು ಮದ್ರಾಸ್‌ದಲ್ಲಿರಬೇಕು. ಕೇಳ್ಕರ ಅವಾರ್ಡದನ್ವಯ ಇದನ್ನು ವಿಭಜಿಸುವುದು ಉಚಿತವಲ್ಲ. ನನಗೂ ಮುಖ್ಯ ಮಂತ್ರಿಗಳಿಗೂ ಬಳ್ಳಾರಿಯನ್ನು ವಿಭಜಿಸಬಾರದೆಂದು ನೂರಾರು ತಂತಿಗಳು ಬರುತ್ತಲಿವೆ.

ಬಳ್ಳಾರಿ ಕನ್ನಡಿಗರು ಸಿದ್ದಿ ಸಿದ್ದ ಒಪ್ಪ, ಶ್ರೀಗಳಾದ ಬಿ. ಯಂ. ರೇವಣಸಿದ್ದಯ್ಯ, ಚನಿವೀರಶಾಸ್ತ್ರಿ ಕಣೇಕಲ್ ಬಿ. ರಂಗನಗೌಡ ವೈಸ್ ಪ್ರೆಸಿಡೆಂಟ್ ಜಿಲ್ಲಾಬೋರ್ಡು, ಕುರುಬರ ಸಂಘದ ಕಾರ್ಯದರ್ಶಿ ಹುಚ್ಚಪ್ಪ, ಡಿ. ಗೋಪಾಲರಾವ್, ಡಿ. ಹೆಚ್. ನೆಂಕೋಬರಾವ್. ವೀರಭದ್ರಪ್ಪ, ಕೆ. ಶಿವದುಪ್ಪ, ಯಜಮಾನ ಶಾಂತಶುದ್ರಪ್ಪ ವಗೈರೆ ಮಾಜಿನೀಯರು ಶ್ರೀ ಎ.ಬಿ ಶೆಟ್ಟರನ್ನು ಕಂಪು ಜಿಲ್ಲೆಯ ವಿಭಜನೆಯಾಗಬಾರದೆಂದೂ. ಉಳಿಪ ಮದ್ರಾಸ್ ಪ್ರಾಂತವಲ್ಲಿ ಉಳಿಯತಕ್ಕದೆಂದೂ, ಅನಂತಪುರದ ಕನ್ನಡ ಪ್ರದೇಶಗಳೂ ಸಹ ಮದ್ರಾಸ್‌ದಲ್ಲಿರಬೇಕೆಂಬ ತಮ್ಮ ವಿನ್ನಹ ಆರೋಗ್ಯಮಂತ್ರಿಗಳಾದ ಶ್ರೀ ಎ.ಬಿ. ಶೆಟ್ಟರಿಗೆ ಬಳ್ಳಾರಿಯಲ್ಲಿ 10-1-53 ನೆಯ ದಿನ ಸೂಚಿಸಿ ಕ್ಯಾಬಿನೆಟಿನಲ್ಲಿ ವರ್ತು 'ನಾಂಭೂರಪರರ್ಲ್ಲಿ ಇದನ್ನು ಪುಷ್ಟೀಕರಿಸಲು ಕೋರಿದರು.

ಬಳ್ಳಾರಿ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. S. 218/52

ವಾದಿ:—

ಸವ್ವರಲಾಲ್-ಜಮನಾದಾಸ್

ಮತ್ತು

ಪ್ರತಿವಾದಿ :—

ಭನ್ನು ಮತ್ತು ಇತರರು

ಟೀಕ್ಯ ಶಂಡೆ ಸುಬ್ಬ್ಯ ,ವಯಸ್ಸು ಸುಮಾರು 50 ವರ್ಷ ಲಂಬಾಣಿ, ಜಿರಾಯ್ತಿ ವೆಳಗಲ್ ತಾಂಡ ಬಳ್ಳಾರಿ ತಾಲೂಕು.

ಈತನಿಗೆ

ಮೇಲ್ಕಾಣಿಸಿದ ದಾವೆಯಲ್ಲಿ 13-1-53 ಕ್ಕೆ ನಿಮ್ಮ ಹಾಜರಿಗಾಗಿ ವಾಯ್ದೆ ಹಾಕಲಾಗಿದೆ. ಆದಿನ ನೀನು ಹಾಜರಾಗಿ ನಿಮ್ಮ ಅಕ್ಷೇಪಣೆ ತಿಳಿಸದಿದ್ದಲ್ಲಿ ನಿಮ್ಮನ್ನು ಎಕ್ಸ್ ವಾರ್ಟೆ ಮಾಡಲಾಗುತ್ತೆ.

ಬಿ. ವಿ. ರಾಮಕೃಷ್ಣರಾ
ಎವಿನ್ಯೂಸಿಯಲ್ ಸಿಬ್ಬಂದಿ

ಬಳ್ಳಾರಿ ಜಿಲ್ಲಾ ಹರಿಜನೋದ್ಧಾರ

—!! ಸಲಹೆ ಸಮಿತಿ !!—

ಈ ಸಮಿತಿಯು 15-1-1953 ರ ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಸೇರಿಸಬೇಕೆಂದು ಕಲೆಕ್ಟರ್ ಅಧ್ಯಕ್ಷರಿಗೆ ಸದಸ್ಯರಾದ ಶ್ರೀ ಟಿ.ಬಿ. ಕೇಶವರಾಯರು ಬರೆದಿದ್ದಾರೆ.

1 ಜಿಲ್ಲೆಯಲ್ಲಿ ಈ ವರ್ಷ ಇಲ್ಲಿಯವರಿಗೆ ಯಾವ ಯಾವ ಗ್ರಾಮಗಳಲ್ಲಿ ಮನೆ ಕಟ್ಟಿಕೊಳ್ಳಲು ಹರಿಜನರಿಗೆ ಸ್ಥಳಗಳನ್ನು ಒದಗಿಸಿಕೊಟ್ಟಿರುವಿರಿ.

2 ಈ ವರ್ಷ ಎಲ್ಲೆಲ್ಲಿ ಭಾವಿಗಳನ್ನು ತೆಗೆಸಿರುವಿರಿ. ಎಷ್ಟು ಮುಗಿದಿವೆ? ಎಷ್ಟು ಮುಗಿಯಲಿವೆ? ಸ್ಯಾಂಕ್ಷನ್ ಆದ ಹಣವೆಷ್ಟು ?

3 ಈ ವರ್ಷ ಎಷ್ಟು ಹರಿಜನ ಶಾಲೆಗಳನ್ನು ಮುಚ್ಚಿದಿರಿ? ಎಷ್ಟು ಹೊಸ ಶಾಲೆಗಳನ್ನು ಎಲ್ಲೆಲ್ಲಿ ಆರಂಭಿಸಿದಿರಿ.

4 ಬಳ್ಳಾರಿ ಹರಿಜನ ಬಾಲಿಕನಿಲಯ ಹರಿಜನ ಬಾಲಕರ ಹಾಸ್ಟೆಲ್ ಮ್ಯಾನೇಜ್‌ಮೆಂಟ್ ವಿರುದ್ಧವಾಗಿ ಬಂದ ತಕರಾರುಗಳ ಬಗ್ಗೆ ನಿಮ್ಮ ಅಭಿಪ್ರಾಯ ನಿರ್ಣಯಗಳೇನು ?

5 ಬಳ್ಳಾರಿಯಲ್ಲಿ ಹೊಸದಾಗಿ ಆರಂಭವಾದ ಶ್ರೀರಂಪುರ ಹರಿಜನ ಕಾಲೋನಿಗೆ ದೀಪ, ನೀರಿನ ಸೌಕರ್ಯ ಕೊಡಲು ನಮ್ಮ ಅಂಬೋಳನ ವ್ಯರ್ಥವಾಗಿ ಕಲೆಕ್ಟರು ಸರ್ಕಾರಕ್ಕೆ ಬರೆದಿದ್ದರು ಅದರ ಫಲಿತಾರ್ಥವೇನು ?

6 ಶಿರುಗುಪ್ಪ ತಾಲೂಕು ಕಲ್ಲುಕುಟ್ಟಿಗಿನ ಹಾಳು ಗ್ರಾಮದ ಹರಿಜನರ ಬೂಸಪ್ಪನಿಗೆ ಪಟ್ಟಾ ಕೊಡಬೇಕೆಂದು ತಹಸೀಲ್ದಾರ್‌ರು ಮತ್ತು ಡೆಪ್ಯುಟಿ ಕಲೆಕ್ಟರವರು ಸಿಫಾರ್ಸುಮಾಡಿದ ಕಾಗದ ಪತ್ರಗಳು ಕಲೆಕ್ಟರಾಫೀಸಿನಲ್ಲಿ ಏನಾದವು ? ಯಾರು ಇವುಗಳನ್ನು ಕಳೆದರು, ಅಥವಾ ಆದೃಶ್ಯಗೊಳಿಸಿದರು? ಸದರಿ ಸರ್ಕಾರಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿರುವ ಸಾಹುಕಾರನನ್ನು ಕೂಡಲೇ ಬಿಡಿಸಿ, ಹರಿಜನರಿಗೆ ಕೊಡಿಸಿರಿ.

7 ಕೂಡ್ಲಿಗಿ ತಾಲೂಕು ಮಹದೇವಪುರ ಗ್ರಾಮದ ಶ್ರೀ ವೀರಭದ್ರಪ್ಪನವರ ಅಪೀಲನ್ನು ರೆವಿನ್ಯೂಬೋರ್ಡಿನವರು ಹೊಡೆದುಹಾಕಿರುವದರಿಂದ ಆಭೂಮಿಯ ಸ್ವಾಧೀನದಲ್ಲಿರುವ ಹರಿಜನರಿಗೆ ಕೂಡ್ಲೆ ಪಟ್ಟಾಕೊಡಿರಿ.

9 ಕೊಟ್ಟೂರುಗ್ರಾಮದ ಸ.ನಂ. 429 ರ ಪಂಕಾಪೊರಂಬೋಕು ಭೂಮಿಯನ್ನು ಆಲೀಷ್ಟಿಸಿಂದ ತೆಗೆದುಹಾಕಿ. ಸದರಿ ಭೂಮಿಯಪಟ್ಟಾ ಹರಿಜನರ ಶ್ರೀಪರಸಣ್ಣ ಕೊಟ್ರಪ್ಪನಿಗೆ ಕೊಡಿರಿ. ಈ ವಿಷಯದಲ್ಲಿ ಹಿಂದಿನ ಪಶ್ಚಾತ್ತಾಪಹರ ನಮ್ಮ ತೀರ್ಮಾನ ನೋಡಿರಿ. ಹೊಸಪೇಟೆ ಡೆಪ್ಯುಟಿ ಕಲೆಕ್ಟರವರ ಎಸ್ಕ್ಪರ್ಟ್ ಆರ್ಡರ್ ರದ್ದುಮಾಡಿರಿ.

10 ಆದವಾನಿಯ – ಹಾಲ್ವಿ ಕಾತಿರ್ಕಿ ಗ್ರಾಮಗಳ ಪ್ರದೇಶದಲ್ಲಿ ಸುಮಾರು 650 ಎಕರೆ ಭೂಮಿಯನ್ನು ಫಾರೆಸ್ಟ್ ದಿಂದ ಬಿಡಿಸಿ, ತುಂಗಭದ್ರಾ ಕಾಲೋನಿಶೇಷನ್ ಕಾರ್ಯಕ್ಕೆ ಕೊಡಲಾಗಿದ್ದು, ಹಾಲ್ವಿ, ಕಾತಿರ್ಕೆ ಗ್ರಾಮದ ಇತರೇ ಭಾಗದ ಹರಿಜನ ರೈತರು ಸಾಗುವಳಿ ಮಾಡುತ್ತಲಿದ್ದಾರೆ. ಈ 3-4 ವರ್ಷ ಪೆನಾಲ್ಟಿ ಹಾಕಿದ್ದಿರೂ ಫಾರೆಸ್ಟ್ ಆಫೀಸದವರಿಂದ ಕಿರುಕುಳವಿದ್ದೇ ಇದೆ ಇದನ್ನು ಫಾರೆಸ್ಟ್ ಇಲಾಖೆಯಿಂದ ತಪ್ಪಿಸಿ, ರೆವಿನ್ಯೂ ಇಲಾಖೆಗೆ ಸೇರಿಸಲು ಸರ್ಕಾರಕ್ಕೆ ಕೂಡಲೇ ಬರೆಯಬೇಕು.

IN THE COURT OF THE Dt. MUNSIF BELLARY.
I. A. 449/52 in O. S 217/52

D. Ganganna .... Petitioner (Plaintiff)

AND

K Raghavendrachar *alias* K Raghavendra Rao. & others } Counter Petitioners (Defendants)

Notice to 2nd Counter Petitioner K. Narayana Char

Please take notice that the petitioner has filed the above Petition for injunction restraining you 2nd Counter Petitioner and other Counter Petitioners for drawing ½ of the Compensation amount decided by the Special Deputy Collector U. B. Project Bellary and that interim injunction was ordered with notice. You the 2nd Counter Petitioner should appear by yourself or by Pleader duly instructed on 21—1—53 at 11 A.M. before the above Court and state your objections if any failing which orders will be passed exparte.

K. Srinivasa Chari.
Advocate for plaintiff.

5—1—53

ಬಳ್ಳಾರಿ ಸ್ಮಾಲ್ ಕಾಸಸ್ ಕೋರ್ಟಿನಲ್ಲಿ
S. C ನಂ. 547/52

ಕೆ. ಶ್ರೀನಿವಾಸಾಚಾರ್ ವಾದಿ

ಮತ್ತು

ಲಿಂಗಮೂರ್ತಿ-ಪ್ರೊಪ್ರಯಟರ್ } ಪ್ರತಿ
ಗುರುನಾಥ ಪ್ರಿಂಟಿಂಗ್ ಪ್ರೆಸ್ } ವಾದಿ
ಬಳ್ಳಾರಿ

—ಪ್ರತಿವಾದಿಗೆ ನೋಟೀಸು—

ಮನೆಯ ಸಂಬಂಧ ಬಾಡಿಗೆ, ಅಥವಾ ಸ್ವಾಧೀನವಲ್ಲಿಟ್ಟುಕೊಂಡು ದುರುಪಯೋಗದ ಮೂಲಕ. ಸಂಭವಿಸಿದ ನಷ್ಟ ಪರಿಹಾರ–ಬಡ್ಡಿ–ಕೋರ್ಟು ಖರ್ಚು ವಗೈರೆ ನ್ಯಾಯಬದ್ಧತ್ಯಾ ಬರುವ ಜಾಣವನ್ನು ವಸೂಲಿ ಮಾಡಿಕೊಳ್ಳಲು ಫೀಳಿನ ನಂಬರಿನಲ್ಲಿ ವಾದಿಯು ಪ್ರತಿವಾದಿಯ ಮೇಲೆ ದಾವಾ ಹಾಕಿದ್ದಾನೆ. ಇದರ ವಾಯ್ದೆಯು 19-1-53 ನೆಯ ತೇದಿ ಇಪ್ಪೆ ಐದು ಗಂಟೆಗೆ ನೀವು ಖುದ್ದಾಗಲಿ ವಕೀಲಕ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದಲ್ಲಿ ಈ ಕೇಸಿನ ನಿರ್ಣಯವು ನಿಮ್ಮ ಪರೋಕ್ಷವಲ್ಲಿ ಆಗಲಿರುವ ದೆಂದು ಈ ಮೂಲಕ ತಿಳಿಸಲಾಗಿದೆ.

ಕೋಲಾರ ರಾಮರಾವು,
ಬಿ.ಎ.' ಬಿ.ಎಲ್',,

H. ಮಲ್ಲಿಕಾರ್ಜುನಗೌಡ
ಬಿ.ಎ. ಯುಲ್.ಯಲ್.ಬಿ.
ವಾದಿ ವಕೀಲರು.

ಪಾಕಿಸ್ತಾನದಲ್ಲಿ ದಂಗೆ

ಕರಾಚಿಯಲ್ಲಿ ವಿದ್ಯಾರ್ಥಿಗಳು ತಮ್ಮ ಫೀದರ ಕಮ್ಮಿಮಾಡಲು ಆಂದೋಳನ ಹೂಡಿದ್ದರು. ಆದು ಕೊನೆಯಲ್ಲಿ ಕೋಪಕ್ಕೆ ಹೋಗಿ ದಂಗೆಗಾರಂಭವಾಗಿ ಪ್ರಜೆಗಳಲ್ಲಿ ಮತ್ತು ಪೋಲೀಸರಲ್ಲಿ ಗುಂಡಿನ ಚಕಮಕಿ ನಡೆಯಿತು. 13 ಜನರು ಸತ್ತಿದ್ದು 100 ಜನರಿಗೆ ಗಾಯಗಳಾಗಿವೆಯೆಂದು ವರದಿಯಾಗಿದೆ.

ಯುಗಾದಿಯ ದಿನ ಅ-ಧ್ರೂರಾಜ್ಯಾರಂಭ ನೂಡಬೇಕೆಂದು ನ್ಯಾ. ನಾಂಭೂರಾವುರಿಗೆ ಕಮ್ಯೂನಿಸ್ಟ್ ಧುರೀಣರು ಮನವಿಯನ್ನು ಸಲ್ಲಿಸಿದ್ದಾರೆ.

ಏಶಿಯಾ ಸಮಾಜ ಪರಿಷತ್ತು ರಂಗೂನಿನಲ್ಲಿ ಸಮಾವೇಶವಾಗಿತ್ತು. ಬ್ರಿಟಿಷ ಲೇಬರಪಕ್ಷದ ಪರವಾಗಿ ಬ್ರಿಟನ್ನಿನ ಹಿಂದಿನ ಪ್ರಧಾನ ಮಂತ್ರಿ ಆಟ್ಲಿಯವರು ಬಂದಿದ್ದರು.

★ ಸುಭಾಷಿತಗಳು ★

ಹಸ್ತಾದಪಿ ನ ದಾತವ್ಯಂ ಗೃಹ್ಯಮಪಿ ನ ದೀಯತೇ ।
ಪರೋಪಕರಣಾರ್ಥಾಯ ವಜನೇ ಕಾ ವಿಚಾರಣಾ ॥

ತನ್ನ ಕೈಯಿಂದ ತೆಗೆದು ಕೊಡಬೇಕಾಗಿಲ್ಲ. ತನ್ನ ಮನೆಯಿಂದಲೂ ಕೊಡಬೇಕಾಗಿಲ್ಲ. ಮಾತಿನ ವೆಚ್ಚದಿಂದಲೇ ಪರರಿಗೆ ಉಪಕಾರವಾಗುವಾಗ ಆ ಒಳ್ಳೆಯ ಮಾತನ್ನೂ ವೆಚ್ಚ ಮಾಡದೆ ಅದಕ್ಕೂ ಬಡತನವನ್ನೇಕೆ ಸಂಪಾದಿಸಿಕೊಳ್ಳಬೇಕು?

ತನ್ನ ಮಾತಿನಿಂದ ಪರರಿಗೆ ಉಪಕಾರವಾಗುವ ಹಾಗಿದ್ದರೆ ಆ ಮಾತನ್ನಾಡಲು ಹಿಂದೆಗೆಯಬಾರದು.

ಪದಸ್ಥಿತಸ್ಯ ಪದ್ಮಸ್ಯ ಮಿತ್ರೇ ವರುಣಭಾಸ್ಕರೌ ।
ಪದಚ್ಯುತಸ್ಯ ತಸ್ಯೈವ ಕ್ಲೇದದಾಹಕರಾವುಭೌ ॥

ಜಲಾಭಿಮಾನಿ ದೇವತೆಯಾದ ವರುಣ, ಸೂರ್ಯ ಈ ಇಬ್ಬರೂ ನೀರಿನಲ್ಲಿ (ಒಳ್ಳೆಯ ಸ್ಥಾನದಲ್ಲಿ) ರುವವರೆಗೂ ತಾವರೆಗೆ ಗೆಳೆಯರೇ ಆಗಿರುತ್ತಾರೆ. ಅದೇ ತಾವರೆ ನೀರನ್ನು ಬಿಟ್ಟು ನೆಲದಲ್ಲಿರುವಾಗ ಅದೇ ವರುಣ ಮಳೆ ಸುರಿಸಿಯೂ ಅದೇ ಸೂರ್ಯ ಬಿಸಿಲು ಕಾಸಿಯೂ, ಅವನ್ನು ಕೊಳೆಯಿಸಿ ಒಣಗಿಸಿ ಅವರ ಶತ್ರುಗಳಾಗುತ್ತಾರೆ.

ಮಾನವನು ಒಳ್ಳೆಯ ಪದವಿಯಲ್ಲಿದ್ದಾಗ ಕೈಲಾದ ಮಟ್ಟಿಗೂ ಪರೋಪಕಾರ ಮಾಡಬೇಕು; ಪದಚ್ಯುತಿಯಾದಮೇಲೆ ಜನರಿಂದ ಏನು ಮಾಡುವದಕ್ಕೂ ಸಾಧ್ಯವಾಗುವುದಿಲ್ಲ.

[ಕನ್ನಡ ನುಡಿಯ ಕೃಪೆಯಿಂದ]

ಕರಭಾರದ ಪ್ರತಿಭಟನೆ

ಬಡ ಹಿಂದುಳಿದ ದೇಶವಲ್ಲಿ ಪ್ರಜಾ ಸತ್ತಾತ್ಮಕ ಯೋಗಕ್ಷೇಮ ರಾಜ್ಯವನ್ನು ಕಟ್ಟುವುದು ನೀರು ಕುಡಿದಷ್ಟು ಸುಲಭವಲ್ಲೆಂದು ಇಜಿಪ್ತಿನ ಮಹಮ್ಮದ್ ಅಲಿಯಂಥ ಮಹಾತ್ಮರೇ ಇಂದಿಗೆ ಮಹತ್ವಾಕಾಂಕ್ಷೆಯೇ ಇರಲಿ ಜನಹಿತ ಯೋಜನೆಗಳನ್ನು ಆಚರಣೆಗೆ ತಂದಾಗ ಪೆಂಬುರು ಪೈಪೈವಿದ್ದರೂ ಏನೂ ಕೊಡದೆ ಏನಾದರೂ ಪಡೆಯಬೇಕೆಂಬ ಪ್ರವೃತ್ತಿಯನ್ನು ಜಯಿಸುವಷ್ಟು ಈ ಮನವರಿಕೆ ನಮ್ಮಲ್ಲಿ ಇನ್ನೂ ಜನಿಯಲ್ಲಿ ಬೆಳೆದಿಲ್ಲ. ಮುಂಬಯಿ, ಮಹಾರಾಷ್ಟ್ರ ಕರ್ನಾಟಕ ನಿಯೋಧಿ ಪರತಾಳಗಳೂ ಮೊನ್ನೆ ತಾನೆ ಕೈಕ್ಕೆ ಪ್ರಾರಂಭವಾಗಿ ನಿಮೇಕದಿಂದ ಏನೇ ದಿಗಳಲ್ಲಿ ಮುಖ್ಯಾಯಗೊಂಡ ಮೋಟಾರ ಸಾರಿಗೆ ಯೋಜನೆಯ ಸಂಬಂಧ ಸೌರಾಷ್ಟ್ರದಲ್ಲಿ ಕಂಡ ಉಗ್ರರೂಪ ಧರಿಸಿದ ಮರಟ ಕರ ಪ್ರತಿಭಟನಾ ಚಳವಳಿಯೂ ಇದನ್ನೇ ತೋರಿಸುತ್ತಿದೆ. ಮುಂಬಾಯಿ ಮೋಟಾರ ಒಡೆಯರ ವಾದವೆನೋ ಬಲಿಷ್ಠವಾಗಿತ್ತು; ಆದರೆ ಪ್ರಕರಣವನ್ನು ಸರಕಾರ ಅವಶ್ಯವಾಗಿ ಪರಿಶೀಲಿಸಬೇಕು. ಸೌರಾಷ್ಟ್ರದಲ್ಲಿ ಜನತೆಗೆ ಭೂಕಂದಾಯ ಹೊರತು ಅನ್ಯ ವಿಧ ಕರಗಳು ಹೊಸತಾಗಿರುವುದರಿಂದ ಆದರೆ ವಿರುದ್ಧ ಜನಮತವೆನ್ನಿರುವ ಪ್ರಸಂಗವನ್ನು ಗಮನಿಸಿದೆ ತುಸು ಹೆಚ್ಚು ಬಲಪ್ರಯೋಗದ ಮನೋವೃತ್ತಿ ತೋರಿಸಿ ಸರಕಾರ ಆಪತ್ಕರತೆಗಿಂತ ಹೆಚ್ಚು ವೇಗ ತಂದುಕೊಂಡಿತೆಂದೂ ದೋಷಿಸಬಹುದು. ಆದರೆ ಬಂಡವಳವು ಪ್ರತ್ಯಕ್ಷ ಸಂಪು ಹೂಡುವದು ತುಸು ವಿಚಿತ್ರ ಪರಿಸ್ಥಿತಿಯೇ. ಈ ಕರ ಪ್ರತಿಭಟನಕರರು ಸರಕಾರದ ವೆಚ್ಚಕ್ಕಾಗಿ ಬೇರೆ ಉತ್ಪನ್ನದ ಮಾರ್ಗ ಸೂಚಿಸಲು ಸಮರ್ಥರಾಗಿಲ್ಲ. ತಾವು ಕೈಕೊಂಡ ಪ್ರತಿಭಟನೆ ನೀಪಾಯವು ಕರಕಂಡ ಮತು ಪ್ರಜಾಸತ್ತಾತ್ಮಕ ಪದ್ಧತಿಯ ಗೌರವ ಹಾನಿ ಮಾಡಿ ಹೆಚ್ಚು ಉಗ್ರ, ಸರ್ವಾಧಿಕಾರಾತ್ಮಕ ರಾಜಕೀಯ ಪಂಗಡಗಳ ಕೈಯನ್ನು ಬಲಪಡಿಸುವರೆಂದು ಪಬ್ಲಿಕ್ ವರ್ಗ ತುಸುಗಾಣಬೇಕು. ಈ ಪಂಗಡಗಳ ಕೈಕೋಲಾದರೆ ಯಾರಿಗೆ ಲಾಭ — ಹೇಳಬೇಕೆ?

ಬಳ್ಳಾರಿ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. S. 18/52

ವಾದಿ:-

ಬಿ. ಹರ್ಷವರ್ಧನರೆಡ್ಡಿ ಮೇಜರ್, ತಂದೆ ತಿಮ್ಮಾರೆಡ್ಡಿ ಕಾರು ಮುಜಾಂಬ್ ಆದವಾನಿ

Vs

1) ಶಳಪ್ಪ ಮೇಜರ್
2) ಸೀತಮ್ಮ ,,
(ಈಡಿಗ ಜನಾಂಗದ ಹೆಂಡತಿಯರು)
3) ಹನುಮಂತಪ್ಪ ನಾಯಡು, ಗಾರ್ಡಿಯನ್-ಸೀತಮ್ಮ ಈಡಿಗ ಜನಾಂಗದ ಹೆಂಡತಿ

[ಇವರೆಲ್ಲಾ ಈಡಿಗರದ್ದು-ಸಿರುಗುಪ್ಪೆ ವೈತರಿರುವರು]

ಮೇಲ್ಕಾಣಿಸಿದ ನಂಬರಿನಲ್ಲಿ ವಾದಿಯು ಪ್ರತಿವಾದಿಗೆ ರೂ. 1100 ಗಳಿಗೆ ದಾವಾ ದಾಖಲು ಮಾಡಿದ್ದಾನೆ. ಪದರಿ ನಂಬರ್ ವಾಯ್ದೆ 16-1-53 ಕ್ಕೆ ಇದೆ. ಆದಿನ ನೀವಾಗಲಿ ನಿಮ್ಮಪರ ವಕೀಲರಾಗಲಿ ಕೋರ್ಟಿಗೆ ಹಾಜರಾಗಿ ನಿಮ್ಮ ತಕರಾರನ್ನು ತಿಳಿಸದಿದ್ದಲ್ಲಿ ನಿಮ್ಮನ್ನು ಎಕ್ಸ ಪಾರ್ಟಿಯಾಗಿ ಮಾಡುವರೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಹೆಚ್. ಲಿಂಗಾರೆಡ್ಡಿ.
ವಾದಿಯ-ಅಡ್ವೊಕೇಟ್

ಸವಿನುಡಿ

ನೊಂದಲು ತಾಯ ಹಾಲ ಕುಡಿದು
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ನಾಡತಾವುದು—
ನಲ್ಲೆಯೊಲವ ತಿರಿದು ತಂದ
ನಾಡತಾವುದು—॥೧॥

ಸವಿಯ ಹಾಡ, ಕಥೆಯಿಂ, ಕಟ್ಟಿ,
ಕವಿಯಿಲೆರೆದು, ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು—
ನಮ್ಮ ಕನಿಗಳೆಂಬ ಕೋಡು
ತಲೆಗದಾವುದು—॥೨॥

ಜೋಳದರಾಶಿ:—

ನೂತನ ಪಂಚಾಯ್ತಿ ಬೋರ್ಡಿನ ಚುನಾವಣೆಯಲ್ಲಿ ಶ್ರೀ ಕೆ. ದೊಡ್ಡಗೌಡರು ಅಧ್ಯಕ್ಷರಾ ಯೂ, ಶ್ರೀಗಳಾದ ಸಂಜೀವರೆಡ್ಡಿ-ನೆಗಡ್ಡಿದೊಡ್ಡನಗೌಡ – ಹೊನ್ನನಗೌಡ ಬಸಪ್ಪ ಎಂಬ ಐವರು ಸದಸ್ಯರಾಗಿ ಆಯ್ಕೆಯಾಗಿ ನಿಯುಕ್ತರಾದರು.

7 Day's Matinee at "PRABHAT"
WARNERS BROS PRESENT.
Jack and the Beanstalk
(*IN TECHNICOLOR*)
Fea :— BUD ABBOT; LOW COSTELLO.
Hullo! Please meet your friends. They will be staying for seven days at our theatre.

★ ವೀರಮಾತೆ ★
ಕನ್ನಡ ಮಾಸಪತ್ರಿಕೆ ಧಾರವಾಡ
ಇಂದೇ ಚಂದಾದಾರರಾಗಿರಿ.
ಮುಖ್ಯ ಸಂಪಾದಕೆಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.
ಪ್ರಕಾಶಕರು :— ಶ್ರೀ ಬಿ. ನಾ. ಬೈಚವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ
ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ವೀಸಲಾಗಿಟ್ಟ ಮಾಸಪತ್ರಿಕೆ.
ಪ್ರತಿಯೊಬ್ಬರೂ ಓದಬೇಕಾದುದು.
ವಾರ್ಷಿಕ ಚಂದಾ ಪರಸ್ಥಳದವರಿಗೆ ೫ ರೂಪಾಯಿ.
,, ಸ್ಥಳೀಯರಿಗೆ 4 ರೂಪಾಯಿ.
ಬಿಡಿ ಸಂಚಿಕೆ 6 ಆಣೆ
ಮನೆಮನೆಯಲ್ಲೂ ಸುಖಸಂತೋಷಗಳನ್ನು ಬೀರಬಲ್ಲ
ಕನ್ನಡ ಮಾಸಪತ್ರಿಕೆ!

ಆದವಾನಿ ಡಿ॥ ಮುಂ॥ ಕೋರ್ಟಿನಲ್ಲಿ
S C. 204/52
ನರಸಾರೆಡ್ಡಿ ವಾದಿ:-
ಮತ್ತು
ನರಸಪ್ಪ ಪ್ರತಿವಾದಿ :—

ನಾಗರಹಾಳಿನ ವೆಂಕಟಪ್ಪನ ಮಗನಾದ ನರಸಪ್ಪನೆಂಬ ಪ್ರತಿವಾದಿಯ ಮೇಲೆ ವಾದಿಯು ತನಗೆ ಬರಬೇಕಾದ ರೂ. 81-8 9 ನುತ್ತು ಮುಂದಿನ ಬಡ್ಡಿ, ಕೋರ್ಟು ಖರ್ಚುಗಳೊಂದಿಗೆ ವಸೂಲಿ ಮಾಡಿಕೊಳ್ಳಲು ದಾವೆ ಹೂಡಿದ್ದು ಅದರ ವಿಚಾರಣೆಯು 22-1-53 ಕ್ಕೆ ಇದೆ. ಆದಿನ ಪ್ರತಿವಾದಿಯು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ತನ್ನ ಆಕ್ಷೇಪಣೆ ತಿಳಿಸದಿದ್ದರೆ ದಾವೆಯು ಏಕಪಕ್ಷವಾಗಿ ನಿರ್ಣಯಿಸಲ್ಪಡುವುದು.

ಹೆಚ್. ಸತ್ಯನಾರಾಯಣ ರಾವ್
ವಾದಿಯ-ಅಟ್ರ್ನೀಕೇಟ್

ಕರ್ನಾಟಕಲ್ಲು:—

ಒಳ್ಳಾರಿ ಜಿಲ್ಲೆಯನ್ನು ವಿಭಜಿಸಬಾರದೆಂದು ರಾಯದುರ್ಗ ತಾಲೂಕು ಕಣೇಕಲ್ಲುಗ್ರಾಮದ ವೈಶ್ಯರು ಮದ್ರಾಸ್ ಮುಖ್ಯಮಂತ್ರಿಗಳಿಗೆ ನ್ಯಾ. ವಾಂಛೂರವರಿಗೆ ತಾರುಕೊಟ್ಟಿದ್ದಾರೆಂದು H. M. ಚನವೀರಶಾಸ್ತ್ರಿಗಳು ತಿಳಿಸುತ್ತಾರೆ.

Matinee at "PRABHAT"
9 & 10th, @ 3-30 P.M. 11th, @ 9-30 A.M & 3-30 P.M.
WARNER BROS PRESNTT'S.
"A Street car named desire"
Starring :- Vivien Leigh, and Marlod Brando,
with Kim Hunter.
An Academic Award Inner!
Best performance; Best Story; and Best direction.
Won a special award by the Venice Judges.
Rate As Usual For Matinees

ಆಂಧ್ರ ಶಾಂತ ರಚನೆ

ಪೂರ್ವ ಕರ್ನಾಟಕ ಪರಿಷತ್ತಿನಧ್ಯಕ್ಷರಾದ ಶ್ರೀ T. H. M. ಚಂದ್ರಶೇಖರಶಾಸ್ತ್ರಿಗಳು ಒಳ್ಳಾರಿ ಅನಂತಪುರದ ಕನ್ನಡ ತಾಲೂಕುಗಳನ್ನೇ ನಾದರೂ ಆಂಧ್ರಪ್ರಾಂತಕ್ಕೆ ಸೇರಿಸಿದಲ್ಲಿ ಕೋರ್ಟಿನಲ್ಲಿ ತಾವು ಈ ಅನ್ಯಾಯದ ಬಗ್ಗೆ ಚರ್ಯೆ ತೆಗೆದುಕೊಳ್ಳಲಿರುವರೆಂದು ಸರ್ಕಾರಕ್ಕೆ ಬಳ್ಳಾರಿ - ಅನಂತಪುರ ಕಲೆಕ್ಟರವರ ಮೂಲಕ ತಿಳಿಸಿದ್ದಾರೆ.

NAVA BHARAT, BELLARY. (Regd. M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
೬ ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be acceptd for les than 6 months.

To

Sriman

12-1-53

Edited Printed & Published by T. B. Keshava Rao,-at Nava Bharath Press, Bellary.

ನವಚೈತನ್ಯ

ಸೋಮವಾರ
ಜನವರಿ
೧೯--೧೯೫೩

ವರ್ಷ ೧೫ | ಬಳ್ಳಾರಿಯ ಉಜ್ವಲ ಕಾಶ್ಮೀರಿಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ ೪೨ | ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧಕ !!! | ಟಿ. ಬಿ. ಕೇಶವರಾವು

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ನೆಹರೂರ — ಭಾಷಣದ ಸಾರ —

ನಮಗೆಲ್ಲಾ ಭಾರತದ ಆರ್ಥಿಕಾಭಿವೃದ್ಧಿಯೇ ಮುಖ್ಯ ಗುರಿಯಾಗಬೇಕು ಸಕಲ ದೇಶಗಳ ಸ್ನೇಹ ಸೌಹಾರ್ದಗಳು ನಮಗೆ ಬೇಕು. ಕೇವಲ ಭಾಷಾದೃಷ್ಟಿಯಿಂದ ಪ್ರಾಂತಗಳ ಪುನರ್ರಚನೆ ಇಲ್ಲ. ನಮ್ಮ ವಿದೇಶ ಮತ್ತು ಕಾಶ್ಮೀರ ಧೋರಣೆ – ಕೋರಿಯಾ ಗೊತ್ತುವಳಿ ಭಾರತದ ಶಾಂತಿಯ ಪ್ರತೀಕಗಳಾಗಿವೆ. ಭಾರತೀಯರು ವಿವೇಕದಿಂದ ಸುವ್ಯವಸ್ಥಿತವಾಗಿ ಉದ್ದೇಶ ಪೂರ್ವಕವಾಗಿ ನವ ಪ್ರಜಾರಾಜ್ಯ ನಿರ್ಮಾಣ ಕಾರ್ಯಕ್ರಮಕ್ಕಾಗಿ ಶ್ರದ್ಧೆ–ಪಟ್ಟಾಗಳಿಂದ ಮುನ್ನಡೆಯಬೇಕು.

ಕಾಂಗ್ರೆಸ್ ನಿಷಯ ನಿಯಾಮಕ ಸಮಿತಿಯಲ್ಲಿ ಜಾತೀಯತೆ ಖಂಡನೆಯ ಗೊತ್ತುವಳಿಯೂ ಸ್ವೀಕೃತವಾಯಿತು. ಶೇಕ್ ಅಬ್ದುಲ್ಲಾರವರು ಕಾಶ್ಮೀರ ಪರಿಸ್ಥಿತಿಯನ್ನು ನಿವೇದಿಸಿದರು.

ಹೈದರಾಬಾದ್ ಅಧಿವೇಶನ

ಹೈದರಾಬಾದ್ ನಗರಕ್ಕೆ ಸಮೀಪವಿರುವ ನಾನಲ್ ನಗರದ ಭವ್ಯವಾದ ಮಂಟಪದಲ್ಲಿ ಪಂಡಿತ ಜವಾಹರಲಾಲ ನೆಹರೂರ ಅಧ್ಯಕ್ಷತೆಯಲ್ಲಿ – ಕಾಂಗ್ರೆಸ್ ಅಧಿವೇಶನವು 14 ನೆಯ ತಾ. ನಿಂದ ಸಮಾವೇಶವಾಗಿತ್ತು. ಕಾಂಗ್ರೆಸ್ ಮಾರ್ಗದರ್ಶನ ಸಮಿತಿಯು ಕಾಂಗ್ರೆಸ್ ವಿದೇಶನೀತಿ – ದಕ್ಷಿಣಾಫ್ರಿಕಾದ ಬಗ್ಗೆ ಕಾಂಗ್ರೆಸ್ ನಿಲುಮೆ ಪಂಚವಾರ್ಷಿಕ ಯೋಜನೆಯಲ್ಲಿ ಜನತೆಯ ಬೇಡಲಪಟ್ಟ ವ್ಯಕ್ತತೆಗಳನ್ನು ಕುರಿತು ಗೊತ್ತುವಳಿಗಳನ್ನು ಮಾಡಿದೆ – ಇವುಗಳು ಮಹಾಧಿವೇಶನದಲ್ಲಿ ಇಡಲ್ಪಡುತ್ತವೆ.

ಅಧಿವೇಶನಕ್ಕಾಗಿ ಸಾವಿರಾರು ಪ್ರತಿನಿಧಿಗಳೂ ತದನಂತರ ದರ್ಶಕರೂ ಬಂದಿರುತ್ತಾರೆ – ಹೈದರಾಬಾದ್ ನಾಗರೀಕರ ದೃಷ್ಟಿಯೆಲ್ಲಾ – ಅಧಿವೇಶನದ ಕಡೆಗೇ ಇರುತ್ತದೆ. ಶ್ರೀ ವೀನೋಬಾರ ಭೂದಾನ ಯಜ್ಞಕ್ಕೆ ಪ್ರೋತ್ಸಾಹ ಸಹಾಯ ಒದಗಿಸಲು ನಿರ್ಮಾನವಾಗುವದಿದೆ.

ಹೈದರಾಬಾದ್-ಕಾಂಗ್ರೆಸ್ ಭಾಷಾವಾರ ಪ್ರಾಂತ

ರಾಜ್ಯಗಳ ಪುನರ್ಘಟನೆ ಮಾಡುವಾಗ ಭಾಷೆಯೇ ಅಲ್ಲದೆ ಇತರ ಅನೇಕ ಅಂಶಗಳನ್ನು ಪರೀಕ್ಷಿಸಿ, ಸರಿಯಾದ ನಿರ್ಣಯಕ್ಕೆ ಬರಬೇಕು. ಎಂದು ಶ್ರೀ ನೆಹರೂರವರು ಹೇಳಿದರು.

ಭಾಷೆ ಆಧಾರದಿಂದ ದೇಶವಿಭಾಗ ಮಾಡುವುದು ಪ್ರಯೋಜನಕರವಾಗದು. ಇದು ಕಾಡು ವಿಚಾರ - ನಾಗರೀಕತೆಯು ಕಾಡು ವಿಚಾರದಿಂದ ಪ್ರಾದೇಶಿಕ ಪ್ರಜಾಸರಕಾರವತ್ತ ಸಾಗಿದಂತಾಗುವದು, ಎಂದು ಶ್ರೀ ರಾಜಗೋಪಾಲಾಚಾರ್ಯರು ಹೇಳಿದರು

ಭಾಷಾವಾರ ರಾಜ್ಯಗಳ ನಿರ್ಮಾಣವು ಕ್ರಮೇಣವಾಗಿ ಎಲ್ಲಾ ಅಂಶಗಳ ಪರಿಶೀಲನೆಯಿಂದ ಆಗಬೇಕೆಂಬ ತೀರ್ಮಾನವು ನಿಷಯ ನಿಯಾಮಕ ಸಮಿತಿಯಲ್ಲಾಯಿತು.

ಕರ್ನಾಟಕ ಪ್ರಾಂತ ನಿರ್ಮಾಣ 'ನ್ಯೆಸೂರವರೇ ಅಡ್ಡಿ-" (ನೆಹರೂ)

ಹೈದರಾಬಾದ್ ಕಾಂಗ್ರೆಸ್ ಅಧಿವೇಶನದ ವಿಷಯ ನಿಯಾಮಕ ಸಮಿತಿಯಲ್ಲಿ ಶ್ರೀ ನೆಹರೂರು ಹೀಗೆ ಹೇಳಿದರು

"ಕರ್ನಾಟಕ ಪ್ರಾಂತ ರಚನೆಗೆ ಮೈಸೂರು ಪ್ರತ್ಯೇಕ್ಷವಾಗಿ ಬೆಂಬಲಕೊಡುವದೆಂದು ಹೇಳುವದು ಅಸಂಬದ್ಧವಾಗುದು ಮೈಸೂರು ಶಾಸನ ಸಭೆಯು ಕರ್ನಾಟಕ ಪ್ರಾಂತಕ್ಕೆ ಒಪ್ಪುವ ಕಾರಣವೇ ನಾವು ಸಂಕಟಪಡ್ಡೊಳಗಾಗಬೇಕಾಗಿವೆ. ಕರ್ನಾಟಕ ಪ್ರಾಂತರಚನೆಗೆ ತಮ್ಮ ಒಪ್ಪಿಗೆ ಇಲ್ಲವೆಂದು ಮೈಸೂರಿನ ಧುರೀಣರು ನನಗೆ ತಂತಿ ಸಕ್ರಗಳ ಮೂಲಕ ತಿಳಿಸಿದ್ದಾರಲ್ಲದೆ ನನ್ನ ಸಮಕ್ಷವೂ ಹೇಳಿದ್ದಾರೆ.

.... ಹೊಸಳ್ಳಿ ....

ಕೂಡ್ಲಿಗಿ ತಾ. ಹೊಸಹಳ್ಳಿ ಗ್ರಾಮದಲ್ಲಿ ಶ್ರೀ ಜೆ. ಮಹದೇವನ ಗೌಡ್ BA ಇವರ ನೇತೃತ್ವದಲ್ಲಿ ದಿನಾಂಕ 8-1-೫೩ ರಂದು ಪಂಚಾಯ್ತಿ ಬೋರ್ಡಿನ ಚುನಾವಣೆ ನಡೆಯ ಶ್ರೀ ಕೆ ಜಿ ರುದ್ರ ಗೌಡರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

.... ಹುಲಿಕೆರೆ ....

ಇದೇ ತಾಲೂಕು ಹುಲಿಕೆರೆ ಗ್ರಾಮದಲ್ಲಿ ಮೇಲಿನವರ ನೇತೃತ್ವದಲ್ಲಿಯೇ ಪಂಚಾಯ್ತಿ ಬೋರ್ಡಿನ ಚುನಾವಣೆಯು ನಡೆದು ಶ್ರೀ. ಹಿರೇಹಳ್ಳಿ ಶಿವಣ್ಣನವರು ಅಧ್ಯಕ್ಷ HB ಸೋಮಲೇಪುರ್ ಉ. ಅಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಯಾಗಿ ಅವರೋಧವಾಗಿ ಆರಿಸಲ್ಪಟ್ಟರು.

ಬಳ್ಳಾರಿ ಪ್ರಭಾತ್‌ದಲ್ಲಿ
2 ನೇ ವಾರ
9-1-53 ರಿಂದ
ಅವರ್ ಇಂಡಿಯಾರವರ
ನಾಯಿಲ್ಲು
(ತೆಲುಗು)
ನಾರಾಯಣ :- ಟಿ. ಆರ್ ರಾಜಕುಮಾರಿ. ನಾಗಯ್ಯ ಲಿಂಗಮೂರ್ತಿ

ನಿಸರ್ಗದತ್ತ ಭೂಮಿಯ ನಿರಾತಂಕ ಉಪಭೋಗ

ದುಡಿತವೇ ಆಸ್ತಿಯ ಮೂಲ.

ಈ ಜಗತ್ತಿನಲ್ಲಿ ಯಾರೂ ಭೂಮಿಯನ್ನು ತಮ್ಮ ಸ್ವಂತಪರಿಶ್ರಮದಿಂದ ನಿರ್ಮಿಸಿರುವದಿಲ್ಲ. ಅಥವಾ ತಮ್ಮ ಪರಿಶ್ರಮದಿಂದ ನಿರ್ಮಿತವಾದ ವಸ್ತು ವನ್ನು ಕೊಟ್ಟು ಪಾಗೆ ನಿರ್ಮಿಸಿದವರಿಂದ ಭೂಮಿಯನ್ನು ಪಡೆದಿರುವದಿಲ್ಲ. ಅಥವಾ ಪರಮಾತ್ಮನಿಂದ ಅದು ಅವನಿಗೆ "ಕಾಣಿಕೆ" ಯಿಂದೂ ಬಂದಿರುವದಿಲ್ಲ.

ಮಾನವನಿಗೆ ಕೆಲವೊಂದು ಮೂಲ ಭೂತ ಹಕ್ಕುಗಳಿರುವನೆಂಬುದು ನಿರ್ವಿವಾದ. ಬದುಕಿ ಬಾಳುವ ಹಕ್ಕು ಎಲ್ಲರಿಗೂ ಸರ್ವಸಾಮಾನ್ಯವಾದುದು. ಮನುಷ್ಯನಿಗೆ ಇಂಥ ಹಕ್ಕು ದೊರೆತಿರುವ ಕಾರಣವಾದರೂ ಏನು? ಎಂಬ ಪ್ರಶ್ನೆಗೆ ಒಂದೇ ಒಂದು ಉತ್ತರ. ಪ್ರತಿಯೊಬ್ಬನಿಗೂ ಜಗತ್ತಿನಲ್ಲಿ ಬದುಕಿ ಬಾಳಲು ದೇವರು ಕರುಣಿಸಿದ ಮೂಲ ಭೂತ ವಸ್ತುಗಳನ್ನು ನಿರಾತಂಕವಾಗಿ ಉಪಭೋಗಿಸುವ ಸ್ವಾತಂತ್ರ್ಯ ವಿರಬೇಕೆಂಬುದೇ ಈ ಉತ್ತರ.

ಮಾನವನು ಭೂಜೀವಿ. ನಿಸರ್ಗವು ಅವಾರ ಭೂಮಿಯನ್ನು ಪೂರೈಸಿದೆ. ಈ ಭೂಮಿಯ ಉಪಯೋಗದಲ್ಲಿ ಅವನಿಗೆ ಯಾವುದೇ ನಿಧವ ದ ಅಡ್ಡಿ ಆತಂಕಗಳು ಇರಕೂಡದು. ಅದರಂತೆ ಗಾಳಿ ಬೆಳಕು ಗಳೂ ಪುಕ್ಕಟೆಯಾಗಿ ದೊರೆಯುವಂತೆ ನಿಸರ್ಗವು ವಿಪಾಡು ಮಾಡಿದೆ. ಮನುಷ್ಯ ನಿರ್ಮಿತ ಯಾವ ಕಾನೂನಿಂದಲೂ ಮಾನವನ ಈ ಮೂಲ ಭೂತ ಹಕ್ಕಿಗೆ ಭಂಗ ಬರಲಾರದು. ಭಂಗ ಬಂದಿದೇ ಆದರೆ ಮಾನವ ಜೀವನವನ್ನು ಗಂಡಾಂತರದಲ್ಲಿ ನೂಕಿದಂತಾಗುವದು.

ಮಾನವನನ್ನು ಕೊಲೆಮಾಡುವದು ಮಹಾಪಾಪವೆಂದು ಎಲ್ಲಾ ಧರ್ಮಶಾಸ್ತ್ರ ಗಳು, ಕಾಯಿದೆಗಳು, ಸಾಂಪ್ರದಾಯ ಗಳು ಸಾರಿ ಸಾರಿ ಹೇಳುತ್ತಿರುವದರ ರಹಸ್ಯವು ಮೂಲಸತ್ವ ಜೀವನದ ಹಕ್ಕನ್ನೇ ದೃಢಪಡಿಸುತ್ತಿರುವ ದೆಂದು ಖಂಡಿತ ಹೇಳಬಹುದು. ಆದುದರಿಂದ ಮಾನವನ ಈ ಹಕ್ಕನ್ನು ಸಂರಕ್ಷಿಸುವ ಯಾವುದೇ ವಿಧಾನವು ಅದು ಸರಕಾರದ ಮುಖಾಂತರ ಬರಲಿ ಹೇಗೆ ಬರಲಿ .... ಈನೈತಿಕ ಕಾಯಿದೆಗೆ ಭಂಗ ತಂದಿದ್ದಲ್ಲಿ ಸಾಮಾಜಿಕ ಜನ್ಯಾಯಕ್ಕೆ ಕಾರಣ ವಾಗುವ 'ಮೂಲ ಪಾಪ' ನೆಂದನ್ನಲಡ್ಡಿಯಿಲ್ಲ.

ಸಂಸತ್ತಿನ ವಿತರಣೆಯ ವಿಚಾರ ಪ್ರಣಾಲಿಗಳಲ್ಲೆಲ್ಲ ಈ ನೈತಿಕ ನ್ಯಾಯ ತತ್ವವು ಅಡಕವಾಗಿರಬೇಕಾಗಿರುವದು ಅತ್ಯವಶ್ಯ ಈ ತತ್ವವನ್ನು ಕಡೆಗಣಿಸಿದಲ್ಲಿ ಕೇವಲ ಬಿಕ್ಷ ಸಂಭಂಧಗಳನ್ನು ನಾವು ವಿಮೋಧಿಸುವವರಾದು ಜಿಗುಪ್ಸೆಯ ಅವುಗಳಿಂದ ಪ್ರಯೋಜನೆಯನ್ನು ಪಡೆದುಕೊಳ್ಳುತ್ತ ಹೋಗಬೇಕಾಗುವದು.

(ಜೀವಿಕೆ:- ಇಂದ್ರು)

ಮೇಲಿನ ವಿಚಾರಣೆಯಿಂದ ಹೇಗೋ ನವೆಲ್ಲ ಬಂದ ಬಿಕ್ಷ ಸಂಬಂಧಗಳನ್ನು ನಾವು ಪತ್ತಿಕ್ಕಬೇಕಾಗುವದೆಂಬುದು ಸ್ಪಷ್ಟವಾಗುವದು. ಈಗ ಅವಶ್ಯಕ.

ಆದರೆ ಹೀಗೆ ಪಡೆದಿರುವ "ಆಸ್ತಿ" ಯು ನಾಶವಾಗುವಲ್ಲಿಯ ನಾವು 'ಪಾಪ' ಕ್ಕೆ ಪಾತ್ರರಾಗಬೇಕಾಗುವದೆಂದು ಕೆಲವರು ಹೇಳಬಹುದು. ಹಾಗೆಂದು "ಆಸ್ತಿ" ಯ ನಾಶವೆಂದರೆ 'ಪಾಪ' ವು ಜರುಗುವದೆಂದು ನಾವು ಒಪ್ಪುವೆವೆ. ಆಗದರೆ ಈ ಜನರ ಆಸ್ತಿ' ಯ ಕಲ್ಪನೆ ಸಾಮಾನ್ಯ ಬೇರೆ ನಾಶವನ್ನು ಪಾಪ ಪುಣ್ಯ ಜನ್ಯ ನಿಜವಾದ ಆಸ್ತಿಯ ವ್ಯಾಖ್ಯೆಯೇ ಬೇರೆ ಯಾಗಿದೆ.

ಯಾವುದೊಂದು ವಸ್ತುವು ನನ್ನ ದೆಂದು ಹೇಳುವಿಕೆಯಿಂದ ಅದನ್ನು ನಾನೇ ಸೃಷ್ಟಿಸಿರಬೇಕು. ಅಥವಾ ನನ್ನ ಸ್ವಂತ ಪರಿಶ್ರಮದಿಂದ ಅದನ್ನು ಒಡೆತನದ ವಸ್ತುವನ್ನಾಗಿ ಸಂಪಾದಿಸಿರಬೇಕು ಅಥವಾ ನನ್ನ ಪೂರ್ವಜರಿಂದ ಯನ್ನೋ, ನಾನು ಎಷ್ಟಪಡಿಸಿದವನಿಗೆ ನನ್ನೋ ಕೊಟ್ಟು ಆ ಸ್ವತ್ತಿಗೆ ನಾನು ವಸ್ತುವನ್ನು ಪಾಗೆ ಅವನ ಒಡೆತನವನ್ನು ಪಡೆದವನಿಂದ ನಾನು ಪಡೆದಿರಬೇಕು ಅಥವಾ ಅಂಥವನಿಂದ ನಾನು ಬೇರೆ ರೂಪವಾಗಿ ನನಗೆ ಈ ವಸ್ತುವು ಬಂದಿರಬೇಕು ಅಥವಾ ಒಟ್ಟಿನಲ್ಲಿ ಮೂಲ ದುಡಿಮೆಯಿಂದಲೇ ಆಸ್ತಿಯು ಉತ್ಪತ್ತಿಯಾಗಿರಬೇಕು. ಮೇಲಿನ ಯಾವುದೇ ಆಸ್ತಿಯ ಒಡೆತನವು ದೊರೆಯಲಾರದು. ನನ್ನ ದುಡಿಮೆಯಿಂದ ಬಂದ ವಸ್ತುವೇ ನನ್ನ ಆಸ್ತಿಯಾಗುವದು. ಇದೇ 'ಆಸ್ತಿ' ಯ ವ್ಯಾಖ್ಯೆಯು. ಇಂಥ ನಿಜವಾದ ಆಸ್ತಿ ಗಳನ್ನು ನಾಶಮಾಡುವ 'ಪಾಪ' ವೆಂಬುದೂ ಸ್ಪಷ್ಟವೇ.

ಸದ್ಯ ಭೂಮಿಯ ಒಡೆತನದ ಬಗ್ಗೆ ಇಷ್ಟು ಹಕ್ಕು ಬಾಧ್ಯತೆಗಳನ್ನು ಈ ತತ್ವ ಗಳಿಗೆ ವರೆಸಬ್ಬಿ ನೋಡಿದರೆ ಅನೇಕ್ಲಿಯೂ ಮಾಡಿ ಹೋಗುವದು ಯಾವ ವಸ್ತು ಪರಮ ಭೂಮಿಯನ್ನು ತನ್ನ ಪರಿಶ್ರಮದಿಂದ ನಿರ್ಮಿಸಿರುವದಿಲ್ಲ ಎಂದ ಒಳಿಕ ಅವರ ಒಡೆತನವು ಅವರಿಗೆ ಹೇಗೆ ಪ್ರಾಪ್ತವಾಗುವದು?

ಸುಧಾರಿಸಿದ ಮಾನವ ಗಿಂತಲೂ ಕಾಡು ಜನಪದ್ಲಿ 'ಆಸ್ತಿ' ಯ ಕಲ್ಪನೆಯು ಈ ಮೂಲ ತತ್ವಕ್ಕನುಸರಿಸಿದೆಯೆನ್ನ ಬಹುದು ಭೂಮಿಯು ತನ್ನದೆಂದು ಹೇಳಿ ಕೊಳ್ಳುವ ಧೈರ್ಯಕ್ಕೆ ಅಲ್ಲಿನವರಿಗೆ ಅವಕಾಶವಿಲ್ಲ.

ನಿಸರ್ಗ ನಿಯಮವು ಮೇರೆಗೆ ಭೂಮಿಯು, ಯಾರೊಬ್ಬರ 'ಆಸ್ತಿ' ಯಾಗಿ ಉಳಿಯಲಾರದೆಂಬುದೇ ಮೇಲಿನ ವಿಚಾರಣೆಯ ಮೊಳೆಯಾಗಿರುವದು ಹೀಗಾಗಿ ಸ್ಥಾವರ "ಆಸ್ತಿ" "ಸ್ವತ್ತು" ಮೊದಲಾದ ಸ್ಥಿತಿಗಳನ್ನು ಸಾರ್ವಭೌಮ ಎದಿಯಲ್ಲಿ ಸ್ಥಾಪಿಸಲು ಎದಿಯಲ್ಲಿದ್ದ

ಶಾಂತಿಮಂತ್ರ ಕೃತಿಯಲ್ಲಿಳಿಯಲಿ

ಭಾರತ ಕಮ್ಯುನಿಷ್ಟ ಪಕ್ಷದ ಕೇಂದ್ರ ಸಮಿತಿಯ ಕಳೆದ ಹತ್ತು ದಿನಗಳ ವರೆಗೆ ಕೂಡಿ ನಿರ್ಧರಿಸಿದ ಪಕ್ಷದ ಹೊಸ ಧೋರಣೆಯನ್ನು ಶ್ರೀಗಳಾದ ಡಾಂಗೆ, ಅಜಯಘೋಷ, ನಾರಾಯಣ ರೆಡ್ಡಿ ಮೊದಲಾದವರು ಕಲಕತ್ತೆಯಲ್ಲಿ ಲಕ್ಷ ಜನರ ಪ್ರಚಂಡ ಸಭೆಯಲ್ಲಿ ವಿವರಿಸಿದರು. ಈ ಧೋರಣೆಯ ಬಗ್ಗೆ ಕೇಂದ್ರ ಸಮಿತಿಯು ಪ್ರಕಟನೆಯೊಂದನ್ನು ಹೊರಡಿಸಿ ಅದನ್ನು ಸ್ಪಷ್ಟಪಡಿಸಿತು. ಶಾಂತಿಗಾಗಿ ಹೋರಾಟ ಸಾಗಿಸುವದು ಮತ್ತು ಸಾಮ್ರಾಜ್ಯವಾದಿಗಳ ಗುಂಪಿನಲ್ಲಿ ಇರುವ ಸಾಹಸದ ಪ್ರವೃತ್ತಿಯ ಜನರನ್ನು ಬೇರ್ಪಡಿಸುವದು ಭಾರತದ ಜನತೆಯ ಕರ್ತವ್ಯವಾಗಿದೆಯೆಂದು ಈ ಪ್ರಕಟನೆಯಲ್ಲಿ ಹೇಳಿದೆ. ಭಾರತ ಪಾಕಿಸ್ತಾನಗಳಲ್ಲಿ ಮೈತ್ರಿಯನ್ನು ಸಾಧಿಸುವದೇ ಈ ಶಾಂತಿ ಚಳವಳಿಯ ಮುಖ್ಯ ಭಾಗವಾಗಿದೆ. ಕಮ್ಯುನಿಷ್ಟರು ಶಾಂತಿಗಾಗಿ ಪ್ರಯತ್ನಿಸುವುದಾಗಿ ಸಾಂದ್ದು ಸಮಂಜಸವಾಗಿದ್ದರೂ ಅದಕ್ಕಾಗಿ ಬ್ರಿಟಿಶ್ ಕಾಮನ್ವೆಲ್ತಿನಿಂದ ಭಾರತವು ಹೊರಗುಳಿಯುವದು ಮತ್ತು ಭಾರತದ ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಬೀಜನದಲ್ಲಿ ಅಮೇರಿಕೆ ಕೈ-ಹಾಕದಂತೆ ನೋಡಿಕೊಳ್ಳುವದು ಅವಶ್ಯವೆಂದು ಅವರು ಅಭಿಪ್ರಾಯ ಪಡುತ್ತಿರುವದು ಉಚಿತವಾಗಿರುವದಿಲ್ಲ. ಶಾಂತಿಗಾಗಿ ಹೋರಾಟ ನಡೆಸಲು ಸಿದ್ಧರಾಗಿರುವ ಕಮ್ಯುನಿಸ್ಟರು ಮೊದಲು ರಾಷ್ಟ್ರದಲ್ಲಿ ತಾವು ಹಲವಾರು ಕಡೆ ನಡೆಸುತ್ತಿರುವ ಅಶಾಂತಿ ಕಾರ್ಯಗಳನ್ನು ಕೂಡಲೇ ನಿಲ್ಲಿಸಿ ಶಾಂತಿ ಮಂತ್ರವನ್ನು ಆಚರಣೆಯಲ್ಲಿ ತಂದು ಶ್ರೇಯಸ್ಸನ್ನು ಪಡೆಯಬೇಕು. ಬರಿ ಶಾಂತಿ ಮಂತ್ರದ ಪಠಣದಿಂದ ಉದ್ದೇಶ ಸಾಧಿಸುವದಿಲ್ಲ. ಆ ಶಾಂತಿಯನ್ನು ಪ್ರಸ್ಥಾಪಿಸುವದಕ್ಕಾಗಿಯೇ ಪ್ರಯತ್ನಿಸುತ್ತಿರುವ ರಾಷ್ಟ್ರ ದೊಡನೆ ಸರ್ವ ರೀತಿಯಿಂದ ಸಹಾಯ ಮಾಡುವದು ಆಗತ್ಯವಾಗಿದೆ. ಕಮ್ಯುನಿಸ್ಟರು ಹಿಂಸಾಕೃತಿಗಳನ್ನು ಬಿಟ್ಟು ಗೊಟ್ಟು ನಿಜ ಶಾಂತಿ ಪ್ರಸ್ಥಾಪನೆಗಾಗಿ ಸರಕಾರಕ್ಕೆ ನೈತಿಕ ಸಹಾಯವನ್ನು ಸಲ್ಲಿಸುವದು ಆ ಪಕ್ಷದ ಕರ್ತವ್ಯವಾಗಿದೆ.

ಕಲೆಕ್ಟರವರ ಟೀ ಪಾರ್ಟಿ

ಹೊಸ ವರ್ಷದಾರಂಭದದಿನ-ಜಿಲ್ಲಾ ಕಲೆಕ್ಟರ್ ಸುಂದರಂರವರು ವೃತ್ತಪತ್ರಿಕೋದ್ಯೋಗಿಗಳಿಗೆ ಚಾ ಪಾನದಿಂದ ಸತ್ಕರಿಸಿ ತಾವು ಮಾಡಿದ ಕೆಲಸ ತಿಳಿಸಿದರು. ಜಿಲ್ಲೆಗಾಗಿ ಬಂದ 4 ಲಕ್ಷ ರೂ ತಕಾವಿ ಹಣದಲ್ಲಿ ರಾಯದುರ್ಗ ತಾಲೂಕಿಗಾಗಿಯೇ 84 ಸಾವಿರ ರೂ. ಕೊಟ್ಟರುವುದಾಗಿಯೂ, ಇನ್ನು 50 ಸಾವಿರ ರೂ. ರಿಸರ್ವ ಇಟ್ಟರುವುದಾಗಿಯೂ ತಿಳಿಸಿದರು. ಜನವರಿ 53 ರಲ್ಲಿ ವಸೂಲಿ ಮಾಡಬೇಕಾದ ಕಂದಾಯವ ಕೆಸ್ತನ್ನು ಏಪ್ರಿಲ್‌ದವರೆಗೆ ಮುಂದುವರಿಸಿರುವದನ್ನು ತಿಳಿಸಿದರು (ರಾಯದುರ್ಗ-ಕೂಡ್ಲಿಗಿ ಗಂಗಾವತಿ ಮೇಲಾಲುನೆಯಪ್ಪು ಕೇಂದ್ರ ಸರಕಾರದವರು ಪಂಚವರ್ಷ ಪ್ರಣಾಲಿಕೆಯಲ್ಲಿ ಸೇರಿಸಬಹುದೆಂದು ಕಲೆಕ್ಟರರು ತಿಳಿಸಿದರು.

ರಾಯದುರ್ಗ ತಾಲೂಕಿನಲ್ಲಿ 6 ಕೂಡ್ಲಿಗಿ ಕಾ|| ಗುಡೆಕೋಟೆಯಲ್ಲಿ- ಗಂಜಿಕೇಂದ್ರ ನಡೆಯುತ್ತಿರುವುದಾಗಿಯೂ, ಅಲ್ಲಿಯೂ ಸಂಜೆ ಕಡಮೆಯಾಗುತ್ತಿರುವುದಾಗಿಯೂ ತಿಳಿಸಿದರು.

ಹೊಸಪೇಟೆ ಡಿ|| ಮುನ್ಸಿ ಕೋರ್ಟಿನಲ್ಲಿ

O. S. 361/52

ವಾದಿ:-

ಶ್ರೀ ವೆಂಕಟರಮಣ, ಪರ್ಮನೆಂಟ್ ಭಂಡಾರದ ಕೆಲಸಗಿ, ಆದ T. ಶ್ರೀನಿವಾಸಮೂರ್ತಿ ಆಚಾರ್, ತಂದೆ T. ಕೃಷ್ಣಾಚಾರ್ ಮೇಜರು, ಬ್ರಾಹ್ಮಣ, ಭೂಸ್ಥಿತಿ, ಸಾ|| ಹರಪನಹಳ್ಳಿ, ಕಾ|| ಹರಪನಹಳ್ಳಿ.

V/S

ಪ್ರತಿವಾದಿಗಳು :-

(1) ಸೋಮಪ್ಪನವರ ಸೋಮಪ್ಪ ತಂದೆ ಭರಮಪ್ಪ ಮೇಜರ್, ಲಿಂಗಾಯಿತ ಸುರ್ಜೀಂಟ್ ಸಾ|| ಹರಪನಹಳ್ಳಿ.

Or 5. R.I. C. P. C ಪ್ರಕಾರಕ್ಕೆ 1 ನೇ ಪ್ರತಿವಾದಿಯಾದ ನಿನಗೆ ಈ ಸಮನು ಮೂಲಕ ತಿಳಿಸುವುದೇನೆಂದರೆ ಮೇಲ್ಕಾಣಿಸಿದ ವಾದಿಯು ನಿಮ್ಮ ಮೇಲೆ ರೂ. 519-6-11 ಗಳಿಗೆ ದಾವಾ ದಾಖಲು ಮಾಡಿರುತ್ತಾರೆ. ಸದರಿ ದಾವಾಕ್ಕೆ ನಿನ್ನ ಆಕ್ಷೇಪಣೆ ಇದ್ದಲ್ಲಿ ತಾ. 3-2-53 ರ ವಾಯಿದಾ ದಿನ ಕೋರ್ಟಿಗೆ 11 ಘಂಟಿಗೆ ಸರಿಯಾಗಿ ಖುದ್ದಾಗಲಿ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸಬೇಕು. ತಪ್ಪಿದಲ್ಲಿ ನಿಮ್ಮ ಮೇಲೆ ಎಕ್ಸ್‌ಪಾರ್ಟಿ ತೀರ್ಪು ಮಾಡಲಾಗುವದು. ಎಂದು ಈ ಮೂಲಕ ತಿಳಿಯ ಪಡಿಸಿರುತ್ತದೆ.

ಹೊಸಪೇಟೆ } ಎ. ಕೆ. ಭಟ್
15-1-53 } ವಾದಿ ಪರ ಅಡ್ವೊಕೇಟ್

ಭಾರತ ಸಾಹಿತ್ಯ ವಿದ್ಯಾಪೀಠ ಹಂಪೆಯಲ್ಲಿರಿ

ಭಾರತ ಸರಕಾರವು ಸ್ಥಾಪಿಸಬೇಕೆಂದಿರುವ ಸಾಹಿತ್ಯ ವಿದ್ಯಾಪೀಠವನ್ನು ವಿಜಯನಗರ ಸಾಮ್ರಾಜ್ಯಕ್ಕೆ ರಾಜಧಾನಿಯಾಗಿದ್ದ ಹಂಪೆಯಲ್ಲಿ ಸ್ಥಾಪಿಸಿರಿ. ಇದು ಮುಖ್ಯವರ್ತಿ ಅನುಕೂಲ ಸ್ಥಳವಾಗಿದೆ ಎಂದು ಕರ್ನೂಲ್ ಜಿಲ್ಲೆಯ ಸಾಂಸ್ಕೃತಿಕ ಸಂಘಟನೆಯವರು ಭಾರತದ ಉಪಾಧ್ಯಕ್ಷ ಡಾ. ರಾಧಾಕೃಷ್ಣನ್‌ರವರಿಗೆ ಮನವಿಯೊಂದನ್ನು ಅರ್ಪಿಸಿದರು.

ಯೋಗ್ಯ ದರದಂಗಡಿಗಳು:-

ಆಕ್ಕಿಯ ಸರಬರಾಯಿ ಕಡಿಮೆ ಇರುವ ಕಾರಣ ಇನ್ನು ಮೇಲೆ ಯೋಗ್ಯದರದಂಗಡಿಗಳಲ್ಲಿ (Fair price shops) ಆಕ್ಕಿಯ ಪ್ರಮಾಣ ತಗ್ಗಿಸುವುದಾಗಿ ಮದ್ರಾಸ್ ಸರ್ಕಾರವು ನಿಶ್ಚಯಿಸಿದೆ. ಕೇಂದ್ರ ಸರಕಾರವು ಮದರಾಸಿಗೆ ೭೬ ಲಕ್ಷ ಟನ್

— ಬಳ್ಳಾರಿಯ ಸ್ಮಾಲ್‌ಕಾಸಸ್ ಕೋರ್ಟಿನಲ್ಲಿ —

S. C. 566/52

ಗಡಪಾಟಿ ವೆಂಕಟರಮಣಪ್ಪ-ಎನ್. ಹನುಮಾಪುರಂ .... ವಾದಿ

ಮತ್ತು

ಗಂಟ್ಲ ಪೆದ್ದಪೆನ್ನಯ್ಯ - ಎನ್. ಹನುಮಾಪುರಂ ... ಪ್ರತಿವಾದಿ

.... ಪ್ರತಿವಾದಿಗೆ ನೋಟೀಸು ....

ವಾದಿಯು ಪ್ರತಿವಾದಿಯ ಮೇಲೆ ತನಗೆ ಬರಬೇಕಾದ 325/- ರೂ. ಮೊತ್ತ ಆದರ ಬಡ್ಡಿ ಆಗುವ ಕೋರ್ಟು ಖರ್ಚುಗಳನ್ನು ವಸೂಲಿ ಮಾಡಿಕೊಳ್ಳಲು ದಾವಾ ಮಾಡಿದ್ದು - ಅದರ ವಾಯ್ದೆಯು 27-1-53 ಕ್ಕೆ 11 ಗಂಟೆಗೆ ಇದೆ. ಆದಿನ ಪ್ರತಿವಾದಿಯು ಸ್ವಯಂ ಆಗಲಿ ವಕೀಲರ ಮೂಲಕವಾಗಲಿ ಹಾಜರಾಗಿ, ಸಕಾಲದಲ್ಲಿ ತನ್ನ ಆಕ್ಷೇಪಣೆ ತಿಳಿಸದಿದ್ದರೆ - ದಾವೆಯ ನಿರ್ಣಯವು ಪ್ರತಿವಾದಿಯ ಪರೋಕ್ಷದಲ್ಲಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ.
10-1-53

ಡಿ. ಎಲ್. ಗಂಗಾಧರ ರೆಡ್ಡಿ.
ವಾದಿಯ ಅಡ್ವೊಕೇಟ್

ಸೋಮವಾರ ೧೯-೧-೧೯೫೩

ಆಂಧ್ರ ಪ್ರಾಂತ ನಿರ್ಮಾಣ

ನ್ಯಾಯಮೂರ್ತಿ ಪಾಂಥೂರವರ ವಿಷಯ ಸಂಗ್ರಹ.

ಆಂಧ್ರ ಪ್ರಾಂತ ನಿರ್ಮಾಣಕ್ಕೆ ಸಂಬಂಧಿಸಿದ ಅಂಕೆ ಸಂಖೆಗಳನ್ನು ಸಂಗ್ರಹಿಸಲು ಕೇಂದ್ರ ಸರ್ಕಾರದಿಂದ ನಿಯಮಿತರಾದ ನ್ಯಾಯನಿಷ್ಠವಾದ ನ್ಯಾಯ ಮೂರ್ತಿ ಪಾಂಥೂರವರು ಆಂಧ್ರಪ್ರಾಂತ ನಿರ್ಮಾಣಕ್ಕೆ ಅನುಕೂಲರಿರುವವರಿಂದ, ವಿರೋಧಿಗಳಿಂದ ಗಡಿಪ್ರತ್ಯಕ್ಷದಲ್ಲಿಂವವರಿಂದ ಸಮಗ್ರ ವಿಷಯಗಳನ್ನು ಸಂಗ್ರಹಿಸುತ್ತಲಿರುವರು.

ಕೃಷಿಕ-ಸೋಶಿಯಾಲಿಷ್ಟ್ ಪಾರ್ಟಿಯ ನಾಯಕರಾದ ಶ್ರೀ ಪ್ರಕಾಶಂರವರು—ಆಂಧ್ರ ಪ್ರಾಂತ ನಿರ್ಮಾಣವು ಮದ್ರಾಸ್ ನಗರ ರಾಜಧಾನಿಯಿಂದಾಗಬೇಕೆಂದೂ ಅಸುಪಾಸು ಪ್ರದೇಶಗಳೊಂದಿಗೆ ಮದ್ರಾಸ್ ನಗರವನ್ನು ಚೀಫ್ ಕಮೀಷನರ್ ಪ್ರಾಂತನನ್ನಾಗಿ ಮಾಡಬೇಕೆಂದೂ ವಾದಿಸಿದರು. ಇವರಿಗೆ ಆಂಧ್ರಪ್ರದೇಶದಲ್ಲಿ ಸಾಕಷ್ಟು ಬೆಂಬಲವುಂಟು, ಕೃಷಿಕಾರ್ ಲೋಕ ಪಾರ್ಟಿ ನಾಯಕರಾದ ಶ್ರೀ. ಎನ್. ಜಿ. ರಂಗಾರವರು ಭಾರತ ಸರ್ಕಾರದ ನಿರ್ಣಯವನ್ನು ಸ್ವಾಗತಿಸಿ ಮದ್ರಾಸಿಲ್ಲದ ಆಂಧ್ರ ಪ್ರಾಂತವನ್ನು ಕೋರಿದರು. ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ ಶಿಷ್ಟ, ಮಂಡಲಿಯು ಶ್ರೀ ಸಂಜೀವರೆಡ್ಡಿಯವರ ನೇತೃತ್ವದಲ್ಲಿ ಹೋಗಿ ಆಂಧ್ರ ದೇಶದಲ್ಲಿ ರಾಜಧಾನಿಯು ನಿಶ್ಚಿತವಾಗುವವರೆಗೂ ತಾತ್ಕಾಲಿಕವಾಗಿ ಮದ್ರಾಸ್‌ದಲ್ಲೇ ರಾಜಧಾನಿಯು ಇರತಕ್ಕದ್ದೆಂದು ಅಭಿಪ್ರಾಯ ಪಟ್ಟರು.

ರಾಯಲಸೀಮ ಮಹಾಸಭೆಯ ಶಿಷ್ಟ ಮಂಡಲಿಯು--ರಾಯಲಸೀಮಾ ಜಿಲ್ಲೆಗಳಾದ ಬಳ್ಳಾರಿ – ಕರ್ನೂಲು - ಕಡಪಾ ಅನಂತಪುರಗಳ ಆರ್ಥಿಕಾಭಿವೃದ್ಧಿಗಾಗುವವರೆಗೂ ಆಂಧ್ರಪ್ರಾಂತ ನಿರ್ಮಾಣವಾಗಬಾರದೆಂದು ಒತ್ತಾಯಪಡಿಸಿದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸುತ್ತು ಬಳ್ಳಾರಿ ಜಿಲ್ಲೆಯ ಕನ್ನಡಿಗರ ಪರವಾಗಿ ಹೋದ ಶಿಷ್ಟ ಮಂಡಲಿಯು ಇಡೀ ಬಳ್ಳಾರಿಜಿಲ್ಲೆಯನ್ನು ಅನಂತಪುರದ ಕನ್ನಡ ಪ್ರದೇಶಗಳನ್ನು ಮದ್ರಾಸ್‌ದಲ್ಲಿಡತಕ್ಕದ್ದೆಂದು ಧೃಢಪಡಿಸಿದರು. ಬಳ್ಳಾರಿ ಆಂಧ್ರ ಪಕ್ಷಗಳು ಇಡೀ ಬಳ್ಳೆರಿ ಜಿಲ್ಲೆಯು ಆಂಧ್ರದಲ್ಲಿ ಹೋಗಬೇಕೆಂದು ಸೂಚಿಸಿದರು.

ಬಳ್ಳಾರಿಯ ಹಿತದೃಷ್ಟಿಯಿಂದ ಜಿಲ್ಲೆಯನ್ನು ವಿಭಜಿಸಬಾರದು. ಇಡೀ ಬಳ್ಳಾರಿಯನ್ನು ಮದ್ರಾಸಿನಲ್ಲಿಡಬೇಕು. ಮದ್ರಾಸಿಗೆ ಬೇಡವಾದರೆ ಮೈಸೂರಲ್ಲಾದರೂ ಸೇರಿಸುವುದಾಗಬೇಕು. ಛಿದ್ರಮಾಡುವದರಿಂದ ಬಳ್ಳಾರಿಯ ಉಳಿದ 7 ತಾಲೂಕುಗಳಿಗೆ ಅತೀವ ಹಾನಿಯಾಗುವದು. ಅಲ್ಲದೆ ತುಂಗಭದ್ರಾಯೋಜನೆಯ ಸಾಫಲ್ಯದ ಉದ್ದೇಶವು ನೇವೇರಲಾರದು.

ಕೇಂದ್ರ ಸರಕಾರಕ್ಕೆ ಸೂಚಿತವಾಗಲಿರುವ ನ್ಯಾಯ ಮೂರ್ತಿ ಪಾಂಥೂರವರ ಏಕಾಸ್ಯಗಳಿಂದ ಬಳ್ಳಾರಿ ಜಿಲ್ಲೆಗೆ ಅನ್ಯಾಯವಾಗದೆಂದು ನಾವು ನಂಬಿದ್ದೇವೆ.

— ಪ್ರಾಂತ-ರಚನೆ —

ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರೂ ಮಾಜಿ ಲೆ. ಕರ್ನಲ್ ಸದಸ್ಯರೂ ಆದ ಶ್ರೀ. ವೈ. ಮಹಬಲೇಶ್ವರಪ್ಪನವರು ನ್ಯಾಯ ಮೂರ್ತಿ ಪಾಂಥೂರವರಿಗೂ ಜಿಲ್ಲೆಯಲ್ಲಿನ ಉಸನುಂತ್ರಿಗಳಾದ ದಾತಾರ, ಕರ ಮುರಕರರಿಗೂ ಈ ಕೆಳಗಿನಾಶಯದ ತಂತಿಗಳನ್ನು ಕಳುಹಿಸಿದ್ದಾರೆ.

"ಆಂಧ್ರ ಪ್ರಾಂತೀಕರಣದ ವಿಷಯದಲ್ಲಿ ಬಳ್ಳಾರಿ ಜಿಲ್ಲೆಯಲ್ಲಿನ ಆಂಧ್ರ-ಕರ್ನಾಟಕ, ಅನ್ಯಾಕ್ರಮಣಶೀಲವಾದ ಸ್ವದೇಶಭಕ್ತಿಯು [*hauvinism*] ಅಪಾಯಕರವಾದುದಾಗಿದೆ. ದೂರೀಕರಿಸಲು ಸಾಧ್ಯವಿದ್ದ ವಿಷಮತೆಯು ಬೆಳೆಯುತ್ತಲಿರಲಿ ಸರಹದ್ದ್ ಸಮಿತಿಯ ಶೀಘ್ರಸಿರ್ಮಾಣವು ಆವಶ್ಯಕ. ಇಲ್ಲವಾದರೆ ಕೇಂದ್ರಸರಕಾರವು ಜವಾಬ್ದಾರಿ ವಹಿಸಬೇಕಾಗುತ್ತೆ. ಅಂಕಿ ಸಂಖ್ಯೆಗಳನ್ನಾಗಿ ಹಳ್ಳಿಯು ಘ್ಲೇತ್ರವನ್ನು ಮುಖ್ಯವಾಗಿಟ್ಟುಕೊಂಡು ಗಡಿ ನಿರ್ಣಯ ಸಮಿತಿಗೆ ಆದೇಶ ಕೊಡಬೇಕು.

— ಆದವಾನಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟನಲ್ಲಿ —

O S. 36/50, E. P. 121/52.

ಗಟ್ಟುನೀರಯ್ಯ ಶೆಟ್ಟಿ - ಆದವಾನಿ. — — ವಾದಿ

ಮತ್ತು

ಬರಗಲದಿನ್ನೆ ಕಟ್ಟೆ ಪರಳಯ್ಯ ---- ಪ್ರತಿವಾದಿ
S/o ತಿಪ್ಪಯ್ಯ ಆದವಾನಿ

ಸರ್ವೆ ನಂ.	ಎಕರೆ-ಶೆಂಟ್ಸ್.	ತರಂ.	ಎಂಥಭೂಮಿ.	ಹಳ್ಳಿ.
95 C	11.01	12 6 0	ಸರ್ಕಾರು ಮಿಷ್ಟಿ	ಬಸರಳ್ಳಿ.
95 D	12 - 32	13 14 0	,,	ಸಿರುಗುಪ್ಪ ತಾ॥
95 E	7 . 64	8-10 0	,,	,,
103 A	7 . 70	8-11-0	,,	,,
104	3 . 46	3 14-0	,,	,,

ಮೇಲ್ಕಂಡ ನಂಬರು ಪ್ರಕಾರಕ್ಕೆ ಮೇಲ್ವಾಚಿಸಿದ ಹೊಲಗಳ ಯಾಲಂ ವಾಯ್ದೆ 13-2-53 ಕ್ಕೆ ಇದೆ. ಆದಿನ ನೀವು ಮುದ್ದಾಗಲಿ, ವಕೀಲರ ಮೂಲಕವಾಗಲಿ ಹಾಜರಾಗಿ ನಿಮಗೇನಾದರೂ ತಕರಾರು ಇದ್ದಲ್ಲಿ ಸೂಚಿಸಬೇಕು. ಇಲ್ಲವಾದರೆ ನಿಮ್ಮನ್ನು ಎಕ್ಸ್‌ಪಾರ್ಟಿವಾಡಿ ಯಾಲಂ ಕೆಲಸ ಮುಂದೆ ಸಾಗುತ್ತದೆ.

ಚೊಕ್ಕಾನಳ್ಳಿ ಶ್ರೀನಿವಾಸರಾವ್
ವಾದಿಯ ಅಡ್ವೊಕೇಟ್

ಮಹಾನಾಶಕಾರೀ

ಹೈಡ್ರೋಜನ್ ಬಾಂಬು

— ರಷ್ಯಾದಲ್ಲೂ ಇರಲಿಕ್ಕೆ ಸಾಕು —

ಅಮೆರಿಕವು ಇತ್ತೀಚೆಗೆ ಪರೀಕ್ಷಿಸಿದ ಬಾಂಬು ಪುಟ್ಟ ಹೈಡ್ರೋಜನ್ ಬಾಂಬೆಂಬುದು ಎಲ್ಲರಿಗೂ ಗೊತ್ತಾಗಿದೆ. ಅಮೆರಿಕಾದ ಅಧ್ಯಕ್ಷರಾಗಿದ್ದ ಟ್ರೂಮನರು ಭವಿಷ್ಯದ ಅಣುಯುದ್ಧದಲ್ಲಿ ರಷ್ಯಾದೇವನ್ನಿಲ್ಲಾ ನಾಶವಾಗಬಹುದೆಂದು ರಷ್ಯಾಕ್ಕೆ ಎಚ್ಚರಿಕೆ ಕೊಟ್ಟಿರುವರು. ಆದರೆ ಅಣುಶಕ್ತಿ ತಜ್ಞರ ಅಭಿಪ್ರಾಯನಂತೆ ರಷ್ಯಾಕ್ಕೂ ಕೂಡ ಹೈಡ್ರೋಜನ್ ಬಾಂಬಿನ ರಹಸ್ಯವು ತಿಳಿದಿದ್ದು ಸ್ವಲ್ಪಕಾಲದಲ್ಲೇ ಅದು ತಯಾರಿಸಲಿರುವುದರಿಂದ ಹೀಗಿದ್ದು ರಷ್ಯಾವು ನಾಶವಾಗುವುದಾದಲ್ಲಿ ಅಮೆರಿಕೆಯು ನಾಶವಾಗಬಹುದೆಂದು ತಜ್ಞರ ಅಭಿಪ್ರಾಯವಾಗಿದೆ.

ಮೊದಲು ಉಪಯೋಗಿಸಿದವರಕ್ಕೆ ಮೇಲಾಗಿ ಬಾಂಬು ಹಾಕಿಗೆ ಗುರಿಯಾದ ದೇಶವು ನೇಲಕ್ಕೇಳದಂತಾಗುವುದೆಂದು ಮತ್ತೊಂದು ವಾದ ಸರಣಿ.

"ಹೀರೋಶಿಮಾ" ನಗರವನ್ನು ನಾಶಮಾಡಿದ ಆಟಂ ಬಾಂಬಿನ ಶಕ್ತಿಯು 2 ಲಕ್ಷ ಟನ್ ಶಕ್ತಿಯುಳ್ಳದ್ದಾಗಿದ್ದರೆ ಹೈಡ್ರೋಜನ್ ಬಾಂಬಿನ ಶಕ್ತಿಯು 20 ಲಕ್ಷ ಟನ್ ಶಕ್ತಿಯುಳ್ಳದ್ದಾಗಿರುವುದು. ಅಂದರೆ 30 ಲಕ್ಷ ಜನಗಳ ವಿಸ್ತಾರವಾದ ನಗರವನ್ನು ಒಂದೇ ಬಾಂಬಿನಲ್ಲಿ ನಾಶವಾಡಬಹುದು. 30 ಚ. ಮೈಲ ಸುತ್ತಳತೆಯಲ್ಲಿ ಬೂದಿ ಸ್ಯಾಂಬೂ ಜೀವಸಹಿತವಾಗಿ ಉಳಿಯಲಾರದು. ಅದರ ಕೇಂದ್ರವು 140 ಚ. ಮೈಲಿಗಳಷ್ಟಾಗಿ ಪ್ರದೇಶವನ್ನು ಹಾನಿ, ನಷ್ಟವನ್ನು ಮಾಡುವುದು.

ಈ ಬಾಂಬಿನ ಯಾವ ಭಾಗಗಳಿಂದಾಗಲಿ "ವಿಷವಾಯು" ಸಿಡಿಯುವುದಿಲ್ಲವಾದರೂ ಅದರ ಉಪಯೋಗವನ್ನು ಮಾಡಲಿಕ್ಕಿಲ್ಲ. ಅದರ ಉಪಯೋಗದಿಂದ ರಷ್ಯಾ ಅಮೆರಿಕಾಗಳೆರಡೂ ನಾಶವಾಗುವ ಸಂಭವವುಂಟು. ಗಾಳಿ ಬೀಸಿದಂತೆ ನಾಶವು ಸಣಯುತ್ತಿ. ಹೀಗೆಯೇ ಆಟಂ ಬಾಂಬಿನ ಪ್ರಯೋಗದಿಂದ ಎರಡು ಪಕ್ಷಕ್ಕೂ ನಷ್ಟವಾಗುವ ಸಂಭವವಿರುತ್ತದೆ.

— ಬಳ್ಳಾರಿಯ ನ್ಯಾಯಾಲಯದ ಕೋರ್ಟಿನಲ್ಲಿ —

S. C. 565/52

ಗಡಪಾಟಿ ವೆಂಕಟರಮಣಪ್ಪ-ಎಸ್. ಹುಲಿಪುರಂ ... ವಾದಿ

ಮತ್ತು

ಗಂಟ್ಲ ಸುಬ್ಬಪೆನ್ನಯ್ಯ - ಎಸ್. ಹುಲಿಪುರಂ ... ಪ್ರತಿವಾದಿ

.... ಪ್ರತಿವಾದಿಗೆ ನೋಟೀಸು ....

ವಾದಿಯು ಪ್ರತಿವಾದಿಯ ಮೇಲೆ ತನಗೆ ಬರಬೇಕಾದ 500/- ರೂ. ನೊತ್ತ ಅದರ ಬಡ್ಡಿ ಆಗುವ ಕೋರ್ಟು ಖರ್ಚುಗಳನ್ನು ವಸೂಲಿ ಮಾಡಿಕೊಳ್ಳಲು ದಾವಾ ಹೂಡಿದ್ದು - ಅದರ ವಾಯ್ದೆಯು 27-1-53 ಕ್ಕೆ 11 ಗಂಟೆಗೆ ಇದೆ. ಆದಿನ ಸ್ವತಃ ವಿಯು ಸ್ವಯಂ ಆಗಲಿ ಪರಿಚಿತ ಸೂಚಿಸಮಾಗಲಿ ಹಾಜರಾಗಿ, ಸಕಾರಣವನ್ನೆ ತನ್ನ ಆಕ್ಷೇಪಣೆ ತಿಳಿಸದಿದ್ದರೆ - ದಾವೆಯ ನಿರ್ಣಯವು ಪ್ರತಿವಾದಿಯ ವಿರೋಧವಿಲ್ಲದಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ. 10-1-53

ಡಿ. ಎಲ್. ಗಂಗಾಧರ ಶೆಟ್ಟಿ, ವಾದಿಯ ಅಡ್ವೊಕೇಟ್

—ಪ್ರಜಾಭಿಪ್ರಾಯ—

ಪ್ರಜಾಭಿಪ್ರಾಯದ ಸ್ವರೂಪ

ವಾದಗ್ರಸ್ತ ವಿಷಯವನ್ನು ಕುರಿತು ಹೇಳಿಕೆಗೆ ಅಭಿಪ್ರಾಯವೆಂದು ಹೆಸರು ಇದೊಂದು ರೀತಿಯಾದ ನಂಬಿಕೆ. ಬರಿ ಕೋರಿಕೆಗಿಂತಲೂ, ಭಾವನೆಗಿಂತಲೂ ಮೇಲಾದದ್ದು; ಪ್ರಮಾಣಸಹಿತವಾದ ವಿಚಾರಾಭಿಪ್ರಾಯಕ್ಕಿಂತ ಕೀಳಾದದ್ದು. ಸಮಾಜ ವ್ಯಕ್ತಿಗಳಿಲ್ಲದಾಗ ಒಗೆಬಗೆಯಾದ ಅಭಿಪ್ರಾಯಗಳ ಪರಸ್ಪರ ಪ್ರತಿಕ್ರಿಯೆಯಿಂದ ಪ್ರಜಾ ಭಿಪ್ರಾಯ ರೂಪಗೊಳ್ಳುತ್ತದೆ. ಬಹುಸಂಖ್ಯೆಯ ಜನರ ಅಭಿಪ್ರಾಯವೇ ಜನಾಭಿಪ್ರಾಯ. ಹದಿನೈದು ಜನರಲ್ಲಿ ಹತ್ತು ಜನ ತಮಗೆ ಸಮತಾನವಾದವು ಇಷ್ಟವೆಂದು ಹೇಳಿದರೆ ಆಗ ಆವರ ಅಭಿಪ್ರಾಯವನ್ನು ಜನಾಭಿಪ್ರಾಯವೆಂದು ಪರಿಗಣಿಸಬಹುದು.

ಜನಾಭಿಪ್ರಾಯವೆಂದು ಸಾಧಾರಣವಾಗಿ ಯಾವುದನ್ನು ನಾವು ಪರಿಗಣಿಸುತ್ತೇವೋ ಅದನ್ನು ವಿಮರ್ಶೆಯಾಡುವರು, ಅದರಲ್ಲಿ ಜನವೂ ಇಲ್ಲ, ಅಭಿಪ್ರಾಯವೂ ಇಲ್ಲವೆಂದು ಟೀಕೆ ಮಾಡುತ್ತಾರೆ. ಜಾರಿಲ್ಲಿ ಪ್ರಚಲಿತವಾಗಿರುವ ಎಷ್ಟೋ ಅಭಿಪ್ರಾಯಗಳು ಸಮಾಜದ ಯ ಪುಢೋ ಒಂದು ಸ್ವಾರ್ಥದೃಷ್ಟಿಯವಗೆ ಕೈ ಸೇರಿರುತ್ತವೆ; ಅಥವಾ ಅಲ್ಪಸಂಖ್ಯೆಯ ಜನರವಾಗಿರುತ್ತದೆ; ಇಲ್ಲವೇ ಆಕಸ್ಮಿಕವಾದ ಕೆಲವು ನಾಯಕರ ಅಭಿಪ್ರಾಯ ಮಾತ್ರ ಆಗಿರುತ್ತದೆ. ಜನಸಮೂಹ ಇಂತಹ ವಿಷಯಗಳಲ್ಲಿ ಉದಾಸೀನವಾಗಿಯೋ ತಿಳುವಳಿಕೆಯಿಲ್ಲದೆಯೋ ಕಷ್ಟ ಎಳಿಸುಕೊಂಡೋ ಇದ್ದು ಬಿಡುವುದರಿಂದ ಈ ಅಧಿಕಾರಿಲ್ಲಿ ಜನಾಭಿಪ್ರಾಯ ಸಿಡಿವಾದ ಜನಾಭಿಪ್ರಾಯವಾಗದೆ ಇರಬಹುದು.

ಜನಾಭಿಪ್ರಾಯವೆಂಬುದು ಒಳ್ಳೆಯದಾಗಿ ಅಭಿಪ್ರಾಯವೇ ಆಗಿರುವುದಿಲ್ಲ. ಏಕೆಂದರೆ, ಅದರ ಹಿಂದೆ ವಿಸ್ತೃತವೂ, ನಿರ್ದಿಷ್ಟವೂ, ತರ್ಕಬದ್ಧವೂ ಆದ ಆಲೋಚನೆ ಸಾಕಷ್ಟು ಇರುವುದಿಲ್ಲ. ಹಲವು ಅಭಿಪ್ರಾಯಗಳು ಪೂರ್ವಗ್ರಹಿಕೆಗಳೋ, ಮೂಢ ನಂಬಿಕೆಗಳೋ, ಅಶುದ್ಧ ತೀರ್ಮಾನಗಳೋ, ಸಾಂಪ್ರದಾಯಿಕ ತತ್ವಗಳೋ ಆಗಿರುತ್ತವೆ. ನಿಶ್ಚಿತ ಅಭಿಪ್ರಾಯಕ್ಕೆ ತಲುಪಬೇಕಾದ ಅಭಿಲಾಷೆಯಾಗಲಿ, ಆಲೋಚನೆಯ ಕಷ್ಟಸಹಿಷ್ಣುತೆಯಾಗಲಿ, ಅನೇಕರಿಗಿರುವುದಿಲ್ಲ.

ನಂಬುವಂಥಾದ್ದು.

ಮರಿಗಳನ್ನು ಹಾಕುವ ಗಂಡು ಸಮುದ್ರ ಕುದರೆ

ಜಗತ್ತಿನ ಎಲ್ಲ ಪ್ರಾಣಿಗಳಲ್ಲಿ ತಾಯ್ತನವು ಹೆಣ್ಣು ಜಾತಿಗೆ ಸೇರಿದ್ದಾಗಿದೆ. ಆದರೆ ಸಮುದ್ರ ಕುದುರೆ ಜಾತಿ ಇದಕ್ಕೆ ಅಪವಾದವಾಗಿದ್ದು ಆ ಜಾತಿಯಲ್ಲಿ ಗಂಡು ಕುದುರೆ ಮರಿಗಳನ್ನು ಹಾಕುವದು ಎಂದು "ಟ್ರೂತ್ಸ್ ಫಾಯನ್ಸ್" ಪ್ರತಿಕೆಯಲ್ಲಿ ಚೆಸ್ಟರ ಎಸ್. ಗಿಯರರು ಬರೆದಿದ್ದಾರೆ

ಸಮುದ್ರ ಕುದುರೆ ಕೇವಲ ೫ ಇಂಚು ಉದ್ದವಿದ್ದು ಅದರ ತಲೆ ಭೂಮಿಯ ಮೇಲಿನ ಕುದುರೆಯಂತೆಯೇ ಇರುವದು. ಇದಕ್ಕೆ ಹಲ್ಲು ಇರುವದಿಲ್ಲ. ಇದು ಮಂಗಗಳಂತೆ ತನ್ನ ಬಾಲದಿಂದ ವಸ್ತುಗಳನ್ನು ಭದ್ರವಾಗಿ ಹಿಡಿದುಕೊಳ್ಳಬಲ್ಲದು. ಇತರ ವೈನೀಲೆ ಎಂಬಿನ ತಪ್ಪಿಗಳಿದ್ದು ಇದರಿಂದ ಇದರ ರಕ್ಷಣೆ ಯಾಗುವದು.

ಸಮುದ್ರ ಗರ್ಭದಲ್ಲಿರುವ ವನಸ್ಪತಿಗಳ ಬಣ್ಣಕ್ಕನುಗುಣವಾಗಿ ಇದು ತನ್ನ ಬಣ್ಣವನ್ನು ಬದಲಾಯಿಸಿಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುವದು.

ಆದರೆ ಈ ಸಮುದ್ರ ಕುದುರೆ ಜಾತಿಯಲ್ಲಿ ಸಂತತಿಯ ಉತ್ಪಾದನೆ ಕಾರ್ಯ ತೀರ ವಿಚಿತ್ರವಾಗಿದೆ. ಗಂಡು ಕುದುರೆಗೆ ಬಾಲದ ಬುಡದ ಸಮೀಪದಲ್ಲಿ ಹೊಟ್ಟೆಯ ಮೇಲೆ ಒಂದು ಅಗಲವಾದ ಚೀಲವಿರುವದು. ಹೆಣ್ಣು ಕುದುರೆಯೇ ನುಂದಾಗಿ ಕಾಮುಪ್ರಜೋದನೆ ಮಾಡುವದು. ಆ ಸಮಯದಲ್ಲಿ ಅದು ಒಂದು ವಿಧವಾದ ನರ್ತನ ಮಾಡಿ ಗಂಡನ್ನು ಕರ್ಷಿಸುವದು. ಆ ಬಳಿಕ ಅದು ತನ್ನಲ್ಲಿರುವ ತತ್ವಿಗಳನ್ನು ಗಂಡು ಕುದುರೆಯ ಹೊಟ್ಟೆಯ ಮೇಲಿರುವ ಚೀಲದಲ್ಲಿ ಬಿಡುವದು. ಒಂದು ಗಂಡು ಕುದುರೆಯ ಈ ಚೀಲದಲ್ಲಿ ಅನೇಕ ಹೆಣ್ಣು ಕುದುರೆಗಳು ತತ್ವಿಗಳನ್ನು ಬಿಡುವದೂ ಉಂಟು ಸಾಮಾನ್ಯವಾಗಿ ೪೫ ದಿನಗಳ ನಂತರ ಪತ್ತಿ ಒಡೆದು ಮರಿ ಹೊರಗೆ ಬರುತ್ತದೆ. ಹೆರಿಗೆ ಸಮಯ ಸನ್ನಿಹಿತವಾದಂತೆ ಗಂಡು ಕುದುರೆ ತುಂಬಾ ಅಸ್ವಸ್ಥವಾಗುವದು. ಕೊನೆಕೊನೆಗೆ ಅದು ತನ್ನ ಚೀಲವನ್ನು ಬಂಡೆಗಲ್ಲಿಗೆ ಕೂಡಿ ಅಪ್ಪಳಿಸುವದು. ಕೊನೆಯ ಗಳಿಗೆಯಲ್ಲಿ ಅದು ತನ್ನ ಬಾಲವನ್ನು ಯಾವುದಾದರೊಂದು ಜೊಂಗೆ ಮುಂತಾದಕ್ಕೆ ಸುತ್ತಿಕೊಂಡು ತತ್ವಿಗಳನ್ನು ಹೊರಹಾಕುವದು. ಒಂದು ಗಂಡು ಕುದುರೆ ಸುಮಾರು ೫೦೦ ಮತ್ತು ಅದಕ್ಕಿಂತ ಹೆಚ್ಚು ಮರಿಗಳನ್ನು ಹಾಕುವದಂಟು.

ಭಾರತದ ದಂಡನಾಯಕರಾದ ಶ್ರೀ. ಕರಿಯಪ್ಪನವರು ನಿವೃತ್ತರಾಗಿ ಅವರ ಸ್ಥಳದಲ್ಲಿ ಶ್ರೀ. ರಾಜೇಂದ್ರ ಸಿಂಹಜಿಯವರು ನಿಯುಕ್ತರಾಗಿದ್ದಾರೆ. ಶ್ರೀ. ಕರಿಯಪ್ಪನವರ ಗೌರವಾರ್ಥವಾಗಿ ಜೆಲ್ಲಿಯಲ್ಲಿ ಕೂಡು ಏರ್ಪಟ್ಟಿತ್ತು.

7 Days' Matinee at "PRABHAT"

From 16th Jan. to 22nd January 1953

WARNERS BROS PRESENT.

Jack and the Beanstalk

(IN TECHNICOLOR)

Fea :— BUD ABBOT; LOW COSTELLO.

Hullo! Please meet your friends. They will be staying for seven days at our theatre.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕಿಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :— ಶ್ರೀ ಬಿ. ನಾ. ಬೈಚನಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಿಟ್ಟ ಮಾಸಪತ್ರಿಕೆ

ಪ್ರತಿಯೊಬ್ಬರೂ ಓದಬೇಕಾದುದು.

ವಾರ್ಷಿಕ ಚಂದಾ ಪರರ್ಜೆಯವರಿಗೆ 5 ರೂಪಾಯಿ.

" ಸ್ವದೇಶದವರಿಗೆ 4 ರೂಪಾಯಿ

ಬಿಡಿ ಸಂಚಿಕೆ 6 ಆಣೆ

ಮನೆಮನೆಯಲ್ಲೂ ಸುಖಸಂತೋಷಗಳನ್ನು ಬೀರಬಲ್ಲ

ಕನ್ನಡ ಮಾಸಪತ್ರಿಕೆ!

NAVA BHARAT, BELLARY. (Regd. M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
೬ ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be acceptd for les than 6 months.

To

Sriman

19-1-53

Edited Printed & Published by T. B. Keshava Rao, at Nava Bharath Press, Bellary.

ಸಚಿತ್ರವಾರ್ತೆ

ಸೋಮವಾರ
ಜನವರಿ
೨೬--೧೯೫೩

ವರ್ಷ ೧೫
ಸಂಚಿಕೆ ೪೩

ಬಳ್ಳಾರಿಯ ಉಚ್ಚ್ರಾಯ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕರು
ಟಿ. ಜಿ. ಕೇಶವರಾವು

— ಮಲ್ಲಸಜ್ಜನ ವ್ಯಾಯಮಶಾಲೆ — ಬಳ್ಳಾರಿ-

.... ಯುವಜನೋತ್ಸವ ಸಮಿತಿ ....

1933 ರಿಂದ ಯುವಕರ ಶಾರೀರಿಕ, ಮಾನಸಿಕ ಮತ್ತು ನೈತಿಕ ಬೆಳವಣಿಗೆ ದು ದೃಷ್ಟಿಯಿಂದ ಸೇವೆ ಸಲ್ಲಿಸುತ್ತಿರುವ ಬಳ್ಳಾರಿಯ ಮಲ್ಲಸಜ್ಜನ ವ್ಯಾಯಾಮ ಶಾಲೆಯು ಈ ಸಲ ಏಪ್ರಿಲ್ ೨೫ ರಲ್ಲಿ ಯುವಜನೋತ್ಸವವನ್ನು ನೆರವೇರಿಸಲು ನಿಶ್ಚಯಿಸಿದೆ. ಈ ಸಂಸ್ಥೆಯು ರಿಜಿಸ್ಟರ್ ಇದ್ದು ಸದ್ಯಾನ್ ಸ್ಟೇಟ್ ಫಿಜಿಕಲ್ ಎಜುಕೇಷನ್ ಸಂಸ್ಥೆಗೆ ಸಂಬಂಧಿಸಿರುವಾಗಿದೆ. ಈ ಮಹೋತ್ಸವದಲ್ಲಿ ಭಾಗವಹಿಸುವವರಿಗೆ ವೈಲ್ವೆಯವರು ರಿಯಾಯ್ತಿ ತೋರಿಸುವರು.

ಯುವಕರ ದೈಹಿಕ ಮಾನಸಿಕ ಮತ್ತು ನೈತಿಕ ಬೆಳವಣಿಗೆಯೇ ಈ ಉತ್ಸವದ ಉದ್ದೇಶ ಮಹಾತ್ಮಾಗಾಂಧಿಯವರ ಸತ್ಯಾಗ್ರಹಾಶ್ರಮದ ರಾಜಘಾಟಿನಿಂದ ಜ್ಯೋತಿಯನ್ನು ಕಾಣ್ಮಾಡಿಗೆಯಲ್ಲಿ ತರುವುದು. ಈ ಉತ್ಸವದ ವೈವಿಧ್ಯ ವಾಲಿಬಲ್, ಸಾಫ್ ಬಾಲ್, ಹಿಡುಗುಡು, ಸ್ಲೋ ಸೌಂಪ್ ಬಾಲ್, ಜೇಸ್ಕಟ್ ಬಾಲ್, ಮುಂತಾದ ಆಟಗಳು ಪ್ರಭಂಧ ರಚನ, ಪಾಕ್ಸರ್ಧೆ. ಏಕಾಂಕ ನಾಟಕ ಪ್ರದರ್ಶನ, ಸಂಗೀತ ಸ್ಪರ್ಧೆ ಇರುತ್ತದೆ. ಇವುಗಳಲ್ಲಿ ಸುಮಾರು ೫೦೦ ಜನರು ಭಾಗವಹಿಸಲಿರುವರು. ೪ ದಿನಗಳಿಗೆ ಅವರಿಗೆ ಉಚಿತ ಭೋಜನ – ವಸತಿ ಏರ್ಪಾಡಾಗುತ್ತದೆ.

ಯುವಜನೋತ್ಸವ ಸಮಿತಿ – ಬಳ್ಳಾರಿ

— ಸಹಾಯ ಮಾಡಿದ ಸಂಸ್ಥೆಗಳ ಹೆಸರು —

ಬಳ್ಳಾರಿ ಜಿಲ್ಲಾ ಬೋರ್ಡ್	...	೫೦೦-೦-೦
,, ಮುನಿಸಿಪಲಿಟಿ	..	೫೦೦-೦-೦
ಆರವಾನಿ ಮುನಿಸಿಪಾಲಿಟಿ	..	೫೦೦-೦-೦
ತೊಗಟೆ ,,	...	೨೫೦-೦-೦
ಕೊಟ್ಟೂರು ಪಂಚಾಯ್ತಿ ಬೋರ್ಡ್		೨೫೦-೦-೦
ಹೊಳಗುಂದಿ ,,		೨೦೦-೦-೦
ಕೂಡ್ಲಿಗಿ ,,		೫೦-೦-೦
ಸಿರುಗುಪ್ಪ ,,		೫೦-೦-೦
ಸೋವೆಹಳ್ಳಿ		೧೦೦-೦-೦

ಆದ್ದರಿಂದ ಈ ಉತ್ಸವಕ್ಕೆ ಉದಾರವಾಗಿ ಧನಸಹಾಯ ಮಾಡಲು ಕೋರಿಕೆ

ಕಾರ್ಯದರ್ಶಿ
ಯುವಜನೋತ್ಸವ ಸಮಿತಿ ಬಳ್ಳಾರಿ

ಬಳ್ಳಾರಿ ಪ್ರಭಾತ್‌ದಲ್ಲಿ
3 ನೇ ವಾರ
9-1-53 ರಿಂದ
ನಾಯಿಲ್ಲು
(ತೆಲುಗು)

ಇಂದಿಗೂ ಟಿ. ಜಿ. ರಾಜಕುಮಾರಿ. ಹಾಗೆಯೆ ಲಿಂಗಮೂರ್ತಿ

ರಾಷ್ಟ್ರಪತಿ ರಾಜೇಂದ್ರಬಾಬು
. ದಕ್ಷಿಣದ ಪ್ರವಾಸ ....

ನೆಹರೂ ರವರಿಂದ ಏರ್ಪಾಡಾಗಿರುವ ಕೊಮ್ಮಾರ್ತರವೆಯನ್ನು ರಾಷ್ಟ್ರಪತಿಗಳು ಸ್ವೀಕರಿಸಿ ಮುಂದಿನ ಮೂಲಕ ಹಡಗಿಗೆ ಹಿಂದಿರುಗುವರು.

ಜಪಾನ ಯುದ್ಧ ಕೈದಿಗಳು

ಒಟ್ಟು ಚೀನದಲ್ಲಿರುವ ೫೦,೦೦೦ ಜಪಾನ್ ಯುದ್ಧ ಕೈದಿಗಳ ಸ್ವದೇಶಾಂತರದ ಬಗ್ಗೆ ಸಂಧಾನ ನಡೆಸಲಿಚ್ಛಿಸಿ ಜನವರಿಯ ಟೋಕಿಯೋದಿಂದ ಪೀಕಿಂಗ್‌ಗೆ ಹೋಗಲಿರುವರು.

ಜಂಗು ಹತ್ತಿಸುವ ಚೂರಿಗಳ ಶೋಧ

ಇಂಗ್ಲಂಡದಲ್ಲಿ ಒಂದೆಡೆಗೆ ಭೂಮಿಯನ್ನು ಅಗೆಯುವ ಗೈ ಜಂಗುಹತ್ತಿದ ೨೦೦೦ ವರುಷಗಳ ಹಿಂದಿನ ಚಾಕು ಚೂರಿಗಳು ದೊರೆತಿವೆ. ವಿಜ್ಞಾನಿಗಳು ಇದರ ಕಾರಣವನ್ನು ಶೋಧಿಸಿದಾಗ್ಗೆ ತೊಗಲಿನ ತಣ್ಣಗುಗಳು ಮತ್ತು ಮತ್ತಲೂ ವಿಶೇಷವರ ಗಾಳಿ ಅವುಗಳಿಗೆ ಪಂಪು ಹಾಕಿರುವಿಲ್ಲವೆಂದು ಕಂಡು ಬಂತು.

ಸೋಲಿನಲ್ಲಿ "ಬಾನಿಕ್ ಎಸಿಡ್" ವಿಷಗಾಳಿಯಿಂದ ಕಬ್ಬಿಣಕ್ಕೆ ಜಂಗು ಹತ್ತಿಸಲಾರದೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.

ಕಾಕಾಜಿಯಲ್ಲಿ ವಿದ್ಯಾರ್ಥಿಗಳ ದಂಗೆ

ಪಾಕಿಸ್ತಾನದ ಮುಖ್ಯಮಂತ್ರಿಗಳ ಉತ್ತರದಿಂದ ಅಸಮಾಧಾನಗೊಂಡು ಅಲ್ಲಿಯ ವಿದ್ಯಾರ್ಥಿಗಳು ೨೦ ಎಸಗಳ ಸಂಖ್ಯೆ ಹೂಡಿದ

ಸಿಕ್ಕಿ ಕಾಂಗ್ರೆಸಿಯವರಿಗೆ ಎಚ್ಚರಿಕೆ !

ಸ್ವತಂತ್ರ ಸಿಖ್ಖರನ್ನು ನಿಯಂತ್ರಿಸಿ ಬೆಲೆ ಮಾಡಬೇಕೆಂದು ಬಚ್ಚಿತಬಾ ರದೆಂದೂ ಸಿಕ್ಖರ ಕಾರ್ಯಾನೆಗಳಿಗೆ ಸರಕಾರವು ಎಚ್ಚರಿಕೆ

ಭಾರತವು ಯಾವಪಕ್ಷಕ್ಕೂ ಸೇರುವುದಿಲ್ಲ

—ಸಂಪಾದಕ—

ಭಾರತವು ಇಟ್ಟುಕೊಂಡಿದ್ದ ಪರದೇಶ ಧೋರಣವು ಇಡೀ ಜಗತ್ತಿನ ಬಹುಶಃ ರಾಷ್ಟ್ರಗಳ ಸಹಾನುಭೂತಿಯನ್ನು ಅದಕ್ಕೆ ಒದಗಿಸಿ ಕೊಟ್ಟಿದೆ. ಎಲ್ಲರನ್ನು ಒಲಿಸಲು ಯಾರಿಗೂ ಸಾಧ್ಯವಿಲ್ಲ ಎಂಬ ಮಾತು ಗೊತ್ತಿದ್ದರೂ ಭಾರತವು ಈ ಧೋರಣವನ್ನು ಅವ್ಯಾಹತವಾಗಿ ಹಿಡಿದುಕೊಂಡು ಬಂದಿದೆ.

ಇಂದು ಬಂದಿರುವುದು ಜಗತ್ತಿನ ಎರಡು ಪ್ರಬಲ ಪಕ್ಷಗಳ ವಿಷಯ. ಅವೆರಡು ಪಕ್ಷಗಳಲ್ಲಿ ಯಾವುದರ ಕಡೆಗೆ ಭಾರತವು ಹೋಗುವುದು ಎಂಬುದೇ ಪ್ರಮುಖ ವಿಷಯವಾಗಿದೆ. ಅದರೆ ಅವೆರಡು ಪಕ್ಷಗಳಲ್ಲಿ ಯಾವುದಕ್ಕೂ ಸೇರದೆ ತಟಸ್ಥವಾಗಿ ಉಳಿದು ಭಾರತವು ಇದುವರೆಗಿಂತೂ ಯಶಸ್ವಿಯಾಗಿ ನಡೆದಿದೆ.

ರಶಿಯಾ ದೇಶವು ಭಾರತದ ಬಗ್ಗೆ ತಪ್ಪು ಕಲ್ಪನೆಯನ್ನು ಮಾಡಿಕೊಂಡಿಲ್ಲ. ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುತ್ತಿದ್ದ ರಶಿಯಾ, ಭಾರತವು ಯಾವುದೇ ಪಕ್ಷಕ್ಕೆ ನಿಜವಾಗಿಯೂ ಅಂಟಿಕೊಂಡಿಲ್ಲ. ಎಂಬುದನ್ನು ಮನವರಿಕೆ ಮಾಡಿಕೊಂಡಿದೆ.

ಅಮೇರಿಕೆಯ ವಿಷಯವೂ ಅಷ್ಟೇ ಅದಕ್ಕೂ ಭಾರತದ ಬಗ್ಗೆ ಸಂಶಯವಿಲ್ಲ. ರಾಜಕಾರಣದ ಇಂದಿನ ಹೊಯಿಲಿಗೆ ಸಿಲಕದೆ ಸರಳ ಮತ್ತು ಸ್ಪಷ್ಟದಾರಿಯಿಂದ ಭಾರತವು ಸಾಗುತ್ತಿರುವುದೇ ಈ ಪರಿಸ್ಥಿತಿಗೆ ಕಾರಣವಾಗಿದೆ.

ಇತರ ಚಿಕ್ಕ-ಪುಟ್ಟ ರಾಷ್ಟ್ರಗಳಂತೂ ಈ ಬಗ್ಗೆ ಹೆಚ್ಚು ಆಸ್ಥೆ ವಹಿಸಿ ವಿಚಾರ ಮಾಡುವ ಕಾರಣವೇ ಇಲ್ಲ. ತಮ್ಮ ಸ್ವಾರ್ಥಕ್ಕೆ ಯಾವುದೇ ರಾಷ್ಟ್ರವು ಅಡ್ಡಿ ಬಂದರೆ ಇಲ್ಲವೆ ತಮಗೆ ಹಾನಿಮಾಡಿದರೆ ಅವು ವಿರೋಧ ಮಾಡುತ್ತವೆ.

ಈ ಮಾತನ್ನೂ ಭಾರತವು ಮಾಡಿಲ್ಲ. ಅದಕ್ಕೆ ಇನ್ನೊಬ್ಬರ ಸ್ನೇಹದ ಬಗೆ ಆಕೆಯೇ ಇಲ್ಲ. ಹೀಗೆ ನಿಸ್ಪೃಹವೃತ್ತಿಯನ್ನು ಕಂಡು ಬಂದಾಗ್ಗೆ ನಿಸ್ಪೃಹವೃತ್ತಿಯ ರಾಷ್ಟ್ರವು; ಯಾವುದೊಂದು ವಿಷಯದಲ್ಲಿ ಕೊಡುವ ಅಭಿಪ್ರಾಯದ ಬಗ್ಗೆ ಕೂಡ ಯಾರದೂ ತಪ್ಪು ತಿಳಿವಳಿಕೆಯಾಗುವುದಿಲ್ಲ. ಆ ಅಭಿಪ್ರಾಯದಿಂದ ತನಗೆ ಅಸಮಾಧಾನವಾದರೂ ಅದನ್ನು ಪಟ್ಟ ರಾಷ್ಟ್ರದ ಬಗ್ಗೆ ದ್ವೇಷವನ್ನು ಮಾಡಲು ಯಾರೂ ಮುಂದೆ ಬರುವುದಿಲ್ಲ. ಇಂತಹ ಪರಿಸ್ಥಿತಿಯು ಇಂದು ಜಗತ್ತಿನಲ್ಲಿ ಹುಟ್ಟಿದೆ.

ಆದರೆ ಭಾರತದ ಬಗ್ಗೆ ಅಪಪ್ರಚಾರ ಮಾಡುವ ಮತ್ತು ದ್ವೇಷವನ್ನು ಕಾರುವ ಒಂದು ದೇಶವಿದೆ. ಅದಾವುದೆಂದರೆ ಪಾಕಿಸ್ತಾನ. ಯಾರು ವಿರೋಧಿಕರಿಲ್ಲ ಎಂಬ ಮಾತಿಗೆ ಅಪವಾದವು ಇರದೆ ಇರಬಾರದೆಂದು ಅದು ಈ ರೀತಿ ವರ್ತಿಸುತ್ತಿದೆ.

ಇಂದು ಕಾಶ್ಮೀರದ ಬಗ್ಗೆ, ಇತರ ವಿಷಯಗಳ ಬಗ್ಗೆ ಭಾರತದೊಡನೆ ಒಂದೇ ಸವನೆ ವಿರೋಧಿಸುತ್ತಿರುವ ಪಾಕಿಸ್ತಾನವು ತನೇ ಸತ್ಯವಾದಿ ತನ್ನ ಮಾತೇ ಸರಿಯಾದದ್ದು, ಭಾರತವು ಆಕ್ರಮಣ ವೃತ್ತಿ ನಡೆಸಿದೆ. ಅದು ಅನ್ಯಾಯ ಮಾಡುತ್ತಿದೆ ಎಂಬ ಪ್ರಚಾರ ನಡೆಸಿ ಭಾರತದ ಹೆಸರನ್ನು ಕೆಡಿಸಲು ಯತ್ನಿಸುತ್ತಿದೆ. ಆದರೆ ಯಾವ ದೇಶವೂ ಈ ಪ್ರಚಾರದಿಂದ ಭಾರತದ ಬಗ್ಗೆ ತಪ್ಪು ತಿಳಿವಳಿಕೆ ಮಾಡಿಕೊಂಡಿಲ್ಲವೆಂಬುದನ್ನು ನೋಡಿದರೆ, ಪಾಕಿಸ್ತಾನದ ಪ್ರಚಾರದಲ್ಲಿ ಹುರುಳು ಎಷ್ಟಿದೆ ಮತ್ತು ಅದರಿಂದ ಪಾಕಿಸ್ತಾನಕ್ಕೆ ಎಷ್ಟು ಪ್ರಯೋಜನವಾಗುತ್ತಿದೆ ಎಂಬುದು ತನೇ ಸಿದ್ಧವಾಗುವುದು.

ಮತ್ತೊಂದು ಮಾತಿನಿಂದ ಭಾರತ ಬಗ್ಗೆ ಇದ್ದ ಇತರ ರಾಷ್ಟ್ರಗಳ ಸಹಾನುಭೂತಿಯನ್ನು ಅಳಿಯ ಬಹುದಾಗಿದೆ.

ಪಾಕಿಸ್ತಾನವು ತನ್ನ ಶಕ್ತಿಯನ್ನು ಬೆಳಸಿಕೊಳ್ಳಲೋಸುಗ ಮಧ್ಯಪೂರ್ವದಲ್ಲಿಯ ಮತ್ತು ಅತಿ ಪೂರ್ವದಲ್ಲಿಯ ಮುಸಲ್ಮಾನ ರಾಷ್ಟ್ರಗಳ ಒಂದು ಗುಂಪು ಗಟ್ಟಿ ಆ ಗುಂಪಿನ ಮುಖಂಡತ್ವವನ್ನು ತಾನು ವಹಿಸಬೇಕೆಂದು ಆಲೋಚಿಸಿತು. ಇದಕ್ಕಾಗಿ ಆ ಮುಸಲ್ಮಾನ ರಾಷ್ಟ್ರಗಳೊಡನೆ ಪತ್ರ ವ್ಯವಹಾರ ಮಾಡಿತು. ತನ್ನ ಪ್ರತಿನಿಧಿಗಳನ್ನು ಕಳಿಸಿ ಮಾತಾಡಿಸಿತ. ಇದಕ್ಕಾಗಿ ಆ ರಾಷ್ಟ್ರಗಳ ಮುಖ್ಯ ಮಂತ್ರಿಗಳ ಪರಿಷತ್ತನ್ನು ಕರಾಚಿಯಲ್ಲಿ ಕರೆಯಿತು

ಆದರೆ ಆ ಸಂಘಟನೆಗೆ ಯಾರೂ ಮನಸ್ಸು ಮಾಡಲಿಲ್ಲ, ಮತ್ತು ಆ ಸಭೆತ್ತಿಗೆ ಯಾರೂ ಬರಲಿಲ್ಲ. ಪರಿಷತ್ತನ್ನು ಕೂಡಿಸುವ ಕಾರ್ಯವನ್ನು ಪಾಕಿಸ್ತಾನವು ಅನಿಯಮಿತ ಅವಧಿಯವರೆಗೆ ಮುಂದಕ್ಕೆ ಹಾಕಿತು.

ಪಾಕಿಸ್ತಾನದ ಈ ವಿಚಾರಕ್ಕೆ ಆ ಮುಸಲ್ಮಾನ ರಾಷ್ಟ್ರಗಳು ಒಪ್ಪದಿರುವುದಕ್ಕೆ ಮತ್ತೆ ಕೆಲವು ಕಾರಣಗಳವೆ. ಪಾಕಿಸ್ತಾನವು ಹೊಸದಾಗಿ ನಿರ್ಮಿತವಾದ ಭಾಗವಾದ್ದರಿಂದ ಅದರಿಂದ ತಮಗೆ ಆಗಬೇಕಾದ ಲಾಭವು ಅಷ್ಟರಲ್ಲಿಯೇ ಇದೆ, ಎಂದು ತಿಳಿದುಕೊಂಡವು. ಮತ್ತು ಪಾಕಿಸ್ತಾನವು ಬ್ರಿಟಿಶರ ಅಳುತನಲ್ಲಿ ಸಿಕ್ಕಿದ್ದನ್ನು ಕಂಡು ಅವು ಮೂಗು ಮುಂದವು.

ಪಶ್ಚಿಮದ ಮುಸಲ್ಮಾನ ರಾಷ್ಟ್ರಗಳಾದ ಇಜಿಪ್ತ, ತುರ್ಕಿದೇಶಗಳು ಎಂದಿನಿಂದಲೂ ಭಾರತದೊಡನೆ ಸ್ನೇಹದಿಂದ ಇವೆ. ಇಸ್ರೇಲ್‌ದ ಬಗ್ಗೆ ತನ್ನ ಮನಸ್ಸನ್ನು ಕೊಡಲು ಬಹು ದಿನಸಗಳ ವರೆಗೆ ಭಾರತವು ತಡಮಾಡಿತು. ಈ ಮಾತಿನಿಂದ ಸೌದಿ ಅರೇಬಿಯಾ, ಇರಾಕ, ಜೋರ್ಡಾನ್, ಸೀರಿಯಾ, ಲೆಬೆನಾನ್ ಮೊದಲಾದ ಅರಬ ರಾಷ್ಟ್ರಗಳು ಭಾರತದ ಬಗ್ಗೆ ಸಹಾನುಭೂತಿಯುಳ್ಳಂಥವಾದವು. ಇತ್ತ ಪೂರ್ವದಲ್ಲಿ ಅಫಗಾಣಿಸ್ತಾನ ಮತ್ತು ಇಂಡೋನೇಶಿಯಾಗಳಿಂದಲೂ ಪಾಕಿಸ್ತಾನಕ್ಕೆ ಸಹಕಾರ ಸಿಗಲಿಲ್ಲ.

ಫಕ್ತೂನಿಸ್ತಾನದ ಬಗ್ಗೆ ಪಾಕಿಸ್ತಾನಕ್ಕೂ ಮತ್ತು ಅಫಗಾನಿಸ್ತಾನಕ್ಕೂ ಎಂದೋ ವಿರೋಧ ಬಿದ್ದು ಹೋಗಿದೆ. ಇಷ್ಟೇ ಅಲ್ಲದೆ, ಅಫಗಾನಿಸ್ತಾನವು ಭಾರತದ ಸ್ನೇಹ ಸಂಪಾದಿಸಿದೆ. ಇಂಡೋನೇಶಿಯಾ ದೇಶವು ಮುಸಲ್ಮಾನ ಪ್ರಜೆಗಳಿಂದಲೇ ಹೆಚ್ಚಾಗಿ ಕೂಡಿದ್ದರೂ ಅದು ಧರ್ಮಾತೀತ ರಾಷ್ಟ್ರವಾಗಿ ಕಾರ್ಯ ಮಾಡುತ್ತಿದೆ. ಇಷ್ಟೇ ಅಲ್ಲದೆ, ಸ್ವಾತಂತ್ರ್ಯ ಸಾಧನೆಯ ಕಾರ್ಯದಲ್ಲಿ ಅದು ಭಾರತದಿಂದ ಅನೇಕ ರೀತಿಯಿಂದ ಸಹಾಯ ಪಡೆದಿದ್ದೆ. ಮತ್ತು ಸ್ವಾತಂತ್ರ್ಯದ ನಂತರ ಅದು ಭಾರತದೊಡನೆ ಬಹಳ ಸ್ನೇಹದಿಂದ ನಡೆದುಕೊಳ್ಳುತ್ತಿದೆ. ಆದ್ದರಿಂದ ಕೇವಲ ಜಾತಿಯ ತಳಹದಿಯ ಮೇಲೆ ಒಂದು ಗುಂಪು ಕಟ್ಟಲು, ಅದೂ ಭಾರತದ ವಿರುದ್ಧವಾಗಿ ಸಂಘಟಿತವಾಗಲು ಅದು ನಿರಾಕರಿಸಿತು.

ಪಾಕಿಸ್ತಾನವು ಮಾಡಿದ ಈ ಮುಸಲ್ಮಾನ ರಾಷ್ಟ್ರಗಳ ಸಂಘಟನೆಯ ವಿಷಯದಲ್ಲಿ ಭಾರತವು ಚಕಾರ ಶಬ್ದವನ್ನಾಡಲಿಲ್ಲ. ಆದರೆ ಈ ತರಹದ ನಿಷ್ಪ್ರಯೋಜಕ, ನಿರರ್ಥಕ ವೃತ್ತಿಯೇ ಅದರ ವಿರುದ್ಧ ಲೆಕ್ಕ ಹಾಕುವ ಜನರನ್ನು ನಿಷ್ಪಲಗೊಳಿಸುತ್ತಿದೆ. [ಜ. ಹಿ]

ಬಿಸಿಲಹಳ್ಳಿ (ಬಳ್ಳಾರಿ)

19 ನೆಯ ತಾ. ಸೋಮವಾರ ಬಿಸಿಲಹಳ್ಳಿ–ಬೇವಿನ ಹಳ್ಳಿ ಪಂಚಾಯ್ತಿ ಬೋರ್ಡಿನ ಚುನಾವಣೆ ನಡೆದು ಈ ಕೆಳಗಿನ ಸುಜನೀಯರು ಅವಿರೋಧವಾಗಿ ಆರಿಸಲ್ಪಟ್ಟರು.

ಅಧ್ಯಕ್ಷರು:- ಶ್ರೀ B. N. ವೆಂಕಪ್ಪ
ಸದಸ್ಯರು:- ,, ಬೆಳ್ಳಿಕಟ್ಟಿಪ್ಪ
,, ದೊಡ್ಡಹೊನ್ನೂರಪ್ಪ
,, ಸಣ್ಣತಾಯಪ್ಪ
,, B. ಗುರುಸಿದ್ದನಗೌಡ
,, ಚಿಟ್ಟಾಲ ತಿಮ್ಮಪ್ಪ

ಎಲ್ಲರೂ ಅನುಮತಿಯಿಂದ ಶ್ರೀ. ಬಿ. ಗುರುಸಿದ್ದನಗೌಡರು ವೈಸ್-ಪ್ರೆಸಿಡೆಂಟರು ಮತ್ತು ಉಪಾಧ್ಯಕ್ಷರಾದರು.

ಪಾರ್ಟಗಳಿಂದ ಗಲಾಟೆಯಾಗುವುದೆಂದು ಅರ್ಜಿ ಹೋದ ಕಾರಣ ಬಳ್ಳಾರಿ ಕಸಬಾ ಸಬ್ ಇನ್ಸ್‌ಪೆಕ್ಟರ್ ಮತ್ತು 4 ಜನ ಕಾನ್ಸ್‌ಟೇಬಲ್‌ರು ಬಂದಿದ್ದರು ಆದರೆ ಯಾವ ಗಲಾಟೆಯೂ ಇಲ್ಲದೆ ಎಲ್ಲವೂ ಶಾಂತಿಯುತವಾಗಿ ಏನೂ ಸ್ಪರ್ಧೆಯಿಲ್ಲದೆ ಚುನಾವಣೆಯು ನಡೆಯಿತು.

ಬಳ್ಳಾರಿ ಡಿ॥ ಮುನ್ಸಿ ಕೋರ್ಟ್‌ನಲ್ಲಿ

O. S. 326/52

ವಾದಿ:–
ಜಾಯಿಂಟ್ ಸ್ಟಾಕ್ – ಉಮ್ಮಾಜಿ ಜೀವರಾಜು *By its manager* ಭಂಗಿನ್ ಲಾಲ್ ಬಳ್ಳಾರಿ.

V/S

ಪ್ರತಿವಾದಿ
ಆನಂದ ಕಟ್ಟಿ ಬಸಪ್ಪ s/o ಕೊಡ ಬಸಪ್ಪ ಲಿಂಗಾಯ್ತ, ವ್ಯಾಪಾರ, ಬಳ್ಳಾರಿ

ಪ್ರತಿವಾದಿಗೆ – ನೋಟೀಸು

ವಾದಿಯ ಹತ್ತಿರ 15–9–52 ನೆಯ ತೇದಿ ನಗದು ರೂ. 875/- ಪ್ರಾಮಿಸರಿ ನೋಟಿನ ಮೇಲೆ ತೆಗೆದುಕೊಂಡ ಹಣದ ಒಡ್ಡಿ ಖರ್ಚುಗಳ ನಮೇತ ವಸೂಲಿಗಾಗಿ ಸಾದಿಯು ದಾವಾಮಾಡಿದ್ದು ಅದರ ನಾಯ್ದೆಯು 30–1–53 ಕ್ಕೆ ಇದೆ. ಸದರಿ ವಾಯ್ದೆಗೆ ನೀವು ಖುದ್ದಾಗಲಿ ನಿಮ್ಮ ಲಕ್ಷೀಕರಾಗಲಿ ಹಾಜರಾಗಿ ನಿಮ್ಮ ಅಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ಎಕ್ಸ್‌ಪಾರ್ಟ್ ಡಿಸ್ಮಿ ಆಗಲಿರುವುದೆಂದು ಈ ಮೂಲಕ ತಿಳಿಸೋಣವಾಗಿದೆ.

ಎಂ. ವಿ. ಚೆಟ್ಟಿ BA-B.L
ವಾದಿ ಅಡ್ವೊಕೇಟ್

ಕೋರಿಯಾ ಯುದ್ಧದ ವಿರಾಮ ಮಾತುಕತೆಗಳು ಪುನಃ ಪ್ರಾರಂಭವಾಗುವ ಲಕ್ಷಣಗಳಿಲ್ಲವೆಂದು ಅಮೇರಿಕನ್ ದಳದ ಸೇನಾಧಿಪತಿ ಮ್ಯಾಥೂವಿಲ್ಸೆಯವರ ಕಚೇಯಿಂದ ಘೋಷಿಸಿದೆ.

ಹೊಸಪೇಟೆ ಡಿ॥ ಮುನ್ಸಿ ಕೋರ್ಟ್‌ನಲ್ಲಿ

O. S. 140/52 I. A. 1027/52

ವಾದಿ:–
ಧರ್ಮಸಾಗರದ ಬಸವರೆಡ್ಡಿ.

ಪ್ರತಿವಾದಿ:–
ಆಕ್ಸಾಲಿ ಶರಭಣ್ಣ [ಪೋತ] ವೈಶ್ಯರಿ

C.P.C. O 22, R. 4 ಪ್ರಕಾರ
– ಪ್ರತಿವಾದಿಗೆ ನೋಟೀಸು –

ಮೇಲಿನ ನಂಬರಿನಲ್ಲಿ 1 ನೇ ಪ್ರತಿವಾದಿ ಮೃತಪಟ್ಟಿರುವುದರಿಂದ ಸದರಿಯವರ ವಾರಸುದಾರರು 1) ಕೆಂಚತಿ ಬಸಮ್ಮ 2) ಮಗನಾದ ನೈನರು ನಾಗಲಿಂಗಪ್ಪ 3) ಮಗಳಾದ ಕಮಲಮ್ಮ (ನೈನರು) ಇವರುಗಳನ್ನು ಸದ್ರಿ ಹಾಲಿ ಇಸುಮಿಗೆ ಪಾರ್ಟುದಾರರಾಗಿ ದಾವೆಯಲ್ಲಿ ಸೇರಿಸಲು ಅರ್ಜಿ ಕೊಡೋಣವಾಗಿರುತ್ತದೆ. ಸದರಿ ಅರ್ಜಿಗೆ ತಕರಾರು ಮಾಡಿಕೊಳ್ಳುವವರು ತಾ. 30–1–53 ನೇಲಿನ ಕೋರ್ಟ್‌ನಲ್ಲಿ ಉದಯ 11 ಘಂಟೆಗೆ ಹಾಜರಾಗದಿದ್ದಲ್ಲಿ ಕೋರ್ಟ್‌ನವರು ನಿಮ್ಮ ಸರೋಕ್ಷದಲ್ಲಿ ಉತ್ತರ ಮಾಡುವರು.

ಯಂ. ಸಟೀಶಮೊದಲಿಯಸರ್
ಅಡ್ವೊಕೇಟ್

★ ಉಪನಿಷತ್ತುಗಳು ★

ಮಾನವ ಜಾತಿಯಲ್ಲಿ ನಿಜವಾದ ಶಾಂತಿ-ಪುಷ್ಟಿ-ತುಷ್ಟಿಗಳ ಸಾಮ್ರಾಜ್ಯವು ಸ್ಥಾಪನೆಯಾಗಬೇಕಾಗಿದ್ದರೆ ಮನುಷ್ಯನ ಆಂತರಿಕ ವಿಕಾಸವಾಗಬೇಕು. ಅವನ ನೈತಿಕಮಟ್ಟವೇರಬೇಕು. ಅವನ ಅಹಂಕಾರವಡಗಿ, ಹಸುವೃತ್ತಿಯಳಿದು ಅವನಲ್ಲಿ ದೈವೀ ಗುಣಗಳ ವರ್ಚಸ್ಸು ಬೆಳೆಯಬೇಕು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ತಮ್ಮನ್ನು ಕಾಣಬೇಕೆಂದು ಸ್ಥಾನಮಾನ ತಿಳಿಸಿದ ಕಾರಣ 28–1–53ನೆಯ ದಿನಾಂಕ 10 ಗಂಟೆಗೆ ಶ್ರೀ ನಿಜಲಿಂಗಪ್ಪನವರು ವಸ್ತು ಉಪಸಮಿತಿ ಸದ್ಯಸ್ಯರೂ ಮದ್ರಾಸದಲ್ಲಿ ಅವರನ್ನು ಕಾಣಲಿದ್ದಾರೆ.

ಸೀಕಂ ಪಿಮರ್ಸ
★ ಯುಗ-ಪುರುಷ ★
(ಕನ್ನಡ ಮಾಸಪತ್ರಿಕೆ)
ವಾರ್ಷಿಕ ಚಂದಾ ... 3-4 0
ಬಿಡಿ ಪತ್ರಿಕೆ. ... 0-4-0

ದಕ್ಷಿಣ ಕನ್ನಡದ ಸಿನ್ನಿಗೋಳಿಯಿಂದ ಹೊರಡುವ ಉತ್ತಮ ತರಗತಿಯ ಕನ್ನಡ ಮಾಸಪತ್ರಿಕೆ; ೧ನೆಯ ವರ್ಷವನ್ನು ಪ್ರವೇಶಿಸಿದೆ. ಉಪಯುಕ್ತವಾದ ಲೇಖನಗಳಿವೆ. ನೂತನ ಕವಿತೆಗಳಿಗೆ ಪ್ರೋತ್ಸಾಹ ದೊರೆಯುತ್ತಿದೆ. ಇದನ್ನು ಯಥಾವತ್ ಕನ್ನಡಿಗರು ಪ್ರೋತ್ಸಾಹಿಸಬೇಕೆಂದು ನಮ್ಮ ಆಶೆ.

ಕಮ್ಯೂನಿಷ್ಟ್-ಕಾಂಗ್ರೆಸ್ ಸ್ಪರ್ಧೆ

ಕಾಂಗ್ರೆಸ್ ಸಂಸ್ಥೆಯ ವಿರುದ್ಧ ಕತ್ತಿಯಬತ್ತಾಗಿ ಹೋರಾಡಲು ಅಸ್ಟೇ ಬಲವಾದ ಪ್ರತಿಕಕ್ಷಿಯೂಗಲು ಕಮ್ಯೂನಿಸ್ಟ್ ಪಕ್ಷವು ಸಿದ್ಧಿಸಿರುವುದೆಂದು ಪೋಲಿಟ್ ಬ್ಯೂರೋದ ಸದಸ್ಯರಾದ ಮುಜಫರ ಅಹಮದ್‌ರವರು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು. ಕೆಲಸಮಾಡದ ಸದಸ್ಯರನ್ನು ನಿರುತ್ತೇಜಿಸಿ ಅವರನ್ನು ಸಾಮಾನ್ಯಕಾರರ ವರ್ಗಕ್ಕೆ ಸೇರಿಸಲಾಗುವುದು. ಪಕ್ಷವನ್ನು ಸಜೀವಿತಸ್ಥ ಉಂಟು. ನೂರಾರು ತರುಣ ಹಾಗೂ ಉತ್ಸಾಹಿ ಕಾರ್ಯಕರ್ತರನ್ನು ಸೇರಿಸಿಕೊಳ್ಳಲಾಗುವುದು

ದೇಶಮುಖ-ದುರ್ಗಾಬಾಯಿ

ಕೇಂದ್ರದ ಆರ್ಥಿಕ ಮಂತ್ರಿ ಶ್ರೀ ಸಿ. ಡಿ. ದೇಶಮುಖ (ಮುಂಬಯಿ ರಾಜ್ಯ) ಮತ್ತು ಶ್ರೀಮತಿ ದುರ್ಗಾಬಾಯಿ ಆಂಧ್ರ ಇವರ ವಿವಾಹವು 22–1–53 ನೇಯ ಗುರುವಾರ ಸಾಯಂಕಾಲ 6 ಗಂಟೆಗೆ ದೆಲ್ಲಿ ನಗರದ ವೈಶ್ಯಿ ರೋಡದಲ್ಲಿ ಶ್ರೀಮತಿ ದುರ್ಗಾಬಾಯಿಯವರ ಮನೆಯಲ್ಲಿ-ಜರುಗಿತು. ಈ ಸಮಾರಂಭವು ತೀರ ಸಾದಾಸ್ವರೂಪವಿದ್ದು ಮಾ ಡೆಲ್ಲಿ ಡೆಪ್ಯುಟಿ ಕಮೀಶನರು ವಿವಾಹವನ್ನು ನೆರವೇರಿಸಿದರು.

ಶ್ರೀಮತಿ ದುರ್ಗಾ ಬಾಯಿ M.A-B.L. ಅಡ್ವೊಕೇಟ್ ವೃತ್ತಿಯನ್ನು ಮದ್ರಾಸದಲ್ಲಿ ನಡೆಸಿದ್ದರು ಶ್ರೀ ದೇಶಮುಖರಿಗೆ ಸುಮಾರು 50ವರ್ಷ ವಯಸ್ಸಿದೆ ಎಂದೂ ಸಮ ವಯಸ್ಕರಲ್ಲಿ ಕೆಲ ಭಾಗಗಳಿಂದ ಗೊತ್ತಾಗಿದೆ—
ಈ ವಿವಾಹವು ವಿಶೇಷ ವಿವಾಹ ಕಾಯ್ದೆಯನ್ವಯ ನಡೆಯಿತು.

— ಪ್ರಜಾಭಿಪ್ರಾಯ —

ಪ್ರಜಾಭಿಪ್ರಾಯವು ಪ್ರಸ್ತುತವಾ.

ಮುಂದುನೋಡುವು

ಇತರರು ಮಾಡಿದ ಅಭಿಪ್ರಾಯಗಳನ್ನೇ ಅನುಕರಣೆ ಮಾಡಿಕೊಂಡು ಅವನ್ನು ತಮ್ಮದೆಂದೇ ವಾದಿಸುತ್ತಾರೆ. ತಮ್ಮದೇ ಆದ ಅಭಿಪ್ರಾಯವನ್ನು ಹೊಂದಲು ಬೇಕಾದ ಜ್ಞಾನವೂ, ಹೊತ್ತೂ, ತಮಗೆ ಇಲ್ಲದಿರುವುದರಿಂದಲೇ ಇತರರ ಅಭಿಪ್ರಾಯವನ್ನು ಅವರು ಹೀಗೆ ಅಂಗೀಕರಿಸುವುದು. ಆದ್ದರಿಂದ ಜನಾಭಿಪ್ರಾಯವು ಸಾಧಾರಣವಾಗಿ ರಾಜಕೀಯ ನಾಯಕರ ನಿಸ್ಪರ್ಧತೆಯನ್ನೂ ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಸುಸಂಘಟಿತವೂ ವಾಗ್ಬಲವುಳ್ಳವೂ ಆದ ಅಲ್ಪ ಸಂಖ್ಯಾಕ ಸಜ್ಜನಗಳು ತಮ್ಮ ಅಭಿಪ್ರಾಯವೇ ಬಹು ಸಂಖ್ಯಾತ ಅಭಿಪ್ರಾಯವೆಂದು ಕೋಟಿ ಜನ ಸಂಭವವೂ ತಪ್ಪಿದ್ದಲ್ಲ.

ಜನಾಭಿಪ್ರಾಯವು ಪರಿಣಾಮಕಾರಿಯಾಗಬೇಕಾದರೆ ಅದು ಕೆಲವು ನಿಯಮಗಳಿಗೆ ಒಳಪಟ್ಟಿರಬೇಕು.

೧) ಜನರು ಬುದ್ಧಿವಂತರಾಗಿದ್ದು ಜನತೆಯ ಆಗುಹೋಗುಗಳ ವಿಷಯದಲ್ಲಿ ಎಚ್ಚರಿಕೆಯಿಂದ ಪರಿಶೀಲಿಸುತ್ತಿರಬೇಕು.

೨) ಜನರಲ್ಲಿ ನಿಕಟವಾದ ಸಮರಸವಿದ್ದು ಸಾಮೂಹಿಕ ಹಿತದ ದೃಷ್ಟಿಯಿಂದ ಪ್ರಸ್ತುತವಾಗಿರಬೇಕು. ಏಕೆಂದರೆ, ಜಾತಿ, ಕುಲ, ಸ್ವಾತಂತ್ರ್ಯಗಳ ಸ್ವಾರ್ಥ ಸಾಧಕವಾಗಿ ಯೋಜಿಸಲ್ಪಟ್ಟಕಾದ ವಿಷಯಗಳ ಮೇಲೆ ಅಭಿಪ್ರಾಯ ಆತಂಕಗಳನ್ನು ತಂದೊಡ್ಡಬಾರದು.

ಜನರಿಗೆ ತಿಳಿವಳಿಕೆಯನ್ನು ಕೊಟ್ಟು ಅವರ ಮೇಲೆ ಪ್ರಭಾವವನ್ನು ಬೀರುವ ಪ್ರಚಾರ ವಿಧಾನಗಳು ಪ್ರಾಮಾಣಿಕತೆಯಿಂದ ಕೂಡಿದ್ದು, ಇತರರನ್ನು ಮೋಸಗೊಳಿಸುವುದಕ್ಕಾಗಲೀ ಯಾವ ಸ್ವಾರ್ಥ ಸಾಧಕ ಸಜ್ಜನ ಹಿತವನ್ನು ಮುಂದುಮಾಡಲೂ ವ್ಯವಕ್ತಿಗಳೇ ಉಪಯೋಗವಾಗಬಾರದು.

'ಪ್ರಜಾಭಿಪ್ರಾಯ' (Public Opinion) ಎಂಬ ಪದಪ್ರಯೋಗವು ಬಹಳ ಹೊಸ ಸಮರ್ಪಕವಾದದ್ದು ಇದೇ ಶತಮಾನದ ಕೊನೆಯ ಭಾಗದಲ್ಲಿ. ಅದರಿಂದೀಚೆಗೆ ಈ ಶಬ್ದ ಪ್ರಪಂಚದ ಪತ್ರಿಕಾ ಭಾಗಗಳಲ್ಲಿ ಪ್ರಚಾರಕ್ಕೆ ಬಂತು. ಅದೊಂದು ಶಕ್ತಿಯಾಗಿ ಪರಿಣಮಿಸಿದ್ದರ ನಾನಾ ಕವೆಗಳಲ್ಲಿ ಹದಿನಂಟನೆಯ ಶತಮಾನದಿಂದ ಮುಂದೆ ದಿನಗೆಡುತ್ತಲೆ ಬಂತು.

ಯುರೋಪಿಯನ್ನರು ದಾರಿಗೆ ಬರುತ್ತಿದ್ದಾರೆ

ವರ್ಣದ್ವೇಷವನ್ನು, ಅಫ್ರಿಕೆಯಲ್ಲಿ ಬೆತ್ತಿದ ಯುರೋಪಿಯನ್ನರ ಮೂಲಕ ಅಲ್ಲಿಯ ಕರಿಜನರಾದವು ಜೀವಭಯ ಹಂಗು ದೊರೆದು ಹೋರಾಡುತ್ತಿದೆ. ಮೊದಲು ಅವರು ಬ್ಯಾಗ್, ಹಂಸಿಗಳಿಗೆ ತಲೆಯಲಿಸ್ಕಿಲ್ಲವೆಂದು ತಿಳಿಕೊಂಡಿದ್ದರು ಸುಮ್ಮನೆ ಒಳಾಡ್ಡರಾದ ಯುರೋಪಿಯನ್ನರ ಮೇಲೆಂದೆ ತಮ್ಮ ಆಟವು ನಡೆಯಲಿಕ್ಕಿಲ್ಲವೆಂದೂ ಅವರು ಭಾವಿಸಿದ್ದರು

ಆದರೆ ಆವರಲ್ಲಿ ಈಗ ಬಂದ ಶಕ್ತಿಯು ಅವರನ್ನೇ ಆತಂಕಗೊಳಿಸುತ್ತಿದೆ. ಕಪ್ಪಗಳಾದಂತೆ ಅವರ ಹೋರಾಟದ ಹುಮ್ಮಸ್ಸು ಬಲಿಯುತ್ತಿದೆ. ಮುಂದೆಷ್ಟು ಹಿಂಜಯನ್ನು ಹಿಂದೆ ತೆಗೆಯುಗೊಡಂದತೆ ಅವರು ಈಗ ನಿಶ್ಚಯಿಸಿದ್ದಾರೆ.

ಈ ಹೋರಾಟದಲ್ಲಿ ಅಲ್ಲಿಯ ಕರಿ ಜನರಿಗೆ ಆದ ಹಾನಿಯೋನೂ ಕಡಿಮೆಯಿಲ್ಲ. ಆದರೂ ಅವರು ತಮ್ಮ ಜೀವನವು ಇತರರಂತೆ ಮಾರ್ಪಾರು ಹೊಂದಬೇಕು ಇಲ್ಲಿ ಮಡಿಯಬೇಕು ಎಂದು ಟೊಂಕ ಕಟ್ಟಿದ್ದಾರೆ.

ಆಫ್ರಿಕೆಯಲ್ಲಿ ಕೆನಿಯಾ ಎಂಬ ಒಂದು ಭಾಗವಿದ್ದು ಅಲ್ಲಿ ಕೇಯು ಒಂಬ ಹೆಸರಿನ ಒಂದು ಜನಾಂಗವಿದೆ. ಅವರಲ್ಲಿ 'ಮಾವ್ ಮಾವ್' ಎಂಬ ಸಂಘವು ನಿರ್ಮಾಣವಾಗಿದ್ದು ಅದು ಕೇವಲ ಬಿಳಿಯರನ್ನು ನಾಶಮಾಡುತ್ತಾ ಅವರ ಆಸ್ತಿಯನ್ನು ನಾಶಗೊಳಿಸುವದನ್ನೇ ಧ್ಯೇಯವಾಗಿ ಇಟ್ಟುಕೊಂಡಿದೆ. ಈಗಾಗಲೇ ಅನೇಕ ಬಿಳಿಯರು ಪ್ರಾಣ ಆಸ್ತಿನಾಸ್ತಿ ನಿರ್ಮಾಮವಾಗಿದ್ದಾರೆ ಬಿಳಿಯರಿಗೆ ಸಹಾಯಮಾಡುವ ಕರಿಜನರನ್ನು ಕೂಡ ಈ ಮಾವ್ ಮಾವ್ ಜನರು ಬಿಡುವುದಿಲ್ಲ.

ಇವನ್ನು ಹಿಡಿತರಲ್ಲಿ ತರಲು ಬ್ರಿಟಿಷ ಸೈನ್ಯವು ಅಲ್ಲಿಗೆ ಹೋಗಿದೆ. ಆ ಸೈನಿಕರು ಕರಿಜನರ ಬೇಟೆಯನ್ನೇ ಆರಂಭಿಸಿದ್ದಾರೆ.

ಮಾವ್ ಮಾವ್ ಜನರೂ ಶಸ್ತ್ರಸಜ್ಜಿತರಾಗಿದ್ದಾರೆ. ಇವರು ಗುಪ್ತರೀತಿಯಿಂದ ತಮ್ಮ ಕಾರ್ಯಸಾಧಿಸುತ್ತಿದ್ದಾರೆ. ಸೈನಿಕರ ಮೂಲಕ ಒಳಾಗಿನ ಸಾಹಿತ ಪಡೆಯಲಿಕೆಯು ಕೂಡ ಅವರಿಗೆ ಇಲ್ಲವಾಗಿದೆ. ಬರಬರುತ್ತಾ ಅವರ ಚಟುವಟಿಕೆಗಳು ಹೆಚ್ಚಾಗುತ್ತಿವೆಯೇ ಹೊರತು ಕಡಿಮೆಯಾಗುತ್ತಿಲ್ಲ.

ಇದರಿಂದ ಅಲ್ಲಿಯ ಯುರೋಪಿಯನ್ನರು ಈ ಪರಿಸ್ಥಿತಿಯನ್ನು ನಿಲ್ಲಿಸಲು ಬೇರೆ ಮಾರ್ಗವನ್ನು ಹುಡುಕುತ್ತಿದ್ದಾರೆ. ಶಸ್ತ್ರಾಸ್ತ್ರಗಳ ಉಪಯೋಗದಿಂದ ಆ ಕಾರ್ಯ ಸಾಧಿಸಲ್ಪಡದಿಲ್ಲವೆಂಬ ಸೂಚನೆಯು ಅವರಿಗೆ ಆಗಿರಬಹುದು. ಅಲ್ಲಿಯ ಯುರೋಪಿಯನ್ನರ ದೃಷ್ಟಿಯೂ ಈ ವಿಷಯದಲ್ಲಿ ಎರಡು ಸ್ಪಷ್ಟಗಳಿವೆಯಂತೆ. ಕೇವಲ ಬೆಂಬಲಕ್ಕೆ ಮತ್ತು ಶಾಸನದಿಂದ ಕರಿಜನರನ್ನು ಅಂಕೆಗೆ ತರಲೇಕೆಂದು ಅವರಲ್ಲಿಯ ಒಂದು ಪಕ್ಷವು ಆಸ್ಪಷ್ಟಿದೆ. ಇನ್ನೊಂದು, ಆದಷ್ಟು ಸ್ವರೂಪವನ್ನು ತಿಳಿದು ಆದಷ್ಟಲ್ಲಿ ಕರಿಜನರಿಗೆ ಸ್ವಪಕ್ಷ ಕೊಟ್ಟು ಆಮೂಲ ಶಾಂತಿ ಸ್ಥಾಪನೆಗೆ ಸಹಕಾರ ಕೊಡಬೇಕು ಎನ್ನುತ್ತಿದೆ

ಕೆನಿಯಾದಲ್ಲಿ ಈಗ ರಾಜ್ಯ ವಾಡಳಿತವೆ ಬಿಗುವೇ ತಪ್ಪಿಹೋಗಿದೆ. ಯಾರಿಗೆ ಯಾವ ವೇಳೆಗೆ ಏನಾದೀತು ಎಂಬುದರ ಬಗ್ಗೆ ನಿಯಮವೇ ಇಲ್ಲದಾಗಿದೆ.

★ ವೀರಮಾತೆ ★

ಕನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕಿಯರು :- ಶ್ರೀಮತಿ ಸರೋಜಿನಿ ಮಹಿಷಿ. ಬಿ.ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ.ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ನೀತಿಸಲಾಗಿರುವ ಮಾಸಪತ್ರಿಕೆ

ಪ್ರತಿಯೊಬ್ಬರೂ ಓದಬೇಕಾದದ್ದು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೨ ರೂಪಾಯಿ.

" ಸ್ಥಳೀಯರಿಗೆ ೩-೮-೦ ರೂಪಾಯಿ

ಬಿಡಿ ಸಂಚಿಕೆ ೬ ಆಣೆ

ಮನೆಮನೆಯಲ್ಲೂ ಸುಮಸಂತೋಷಗಳನ್ನು ಬೀರಬಲ್ಲ

ಕನ್ನಡ ಮಾಸಪತ್ರಿಕೆ!

— ಕಮ್ಯೂನಿಜಂ ಮತ್ತು ಜಾತೀಯತೆ. —

ಹಿಂಸಾ ಮಾರ್ಗ ಹಿತಕರವಲ್ಲ

"ಕಮ್ಯುನಿಸ್ಟರು ಪ್ರಗತಿ, ಸಮಾನತೆ ಕಾಶ, ಬಡತನ ಬಡಪ ಒಲ್ಲದವರ ಭೇದವನ್ನು ಳೆಯುವ ಅನೇಕ ಉದ್ದುದ್ದ ಮಾತುಗಳ ನ್ನಾಡುತ್ತಾರೆ. ಇವು ಉತ್ಕೃಷ್ಟ ಆದರ್ಶಗ ಳೇನೋ ನಿಜ. ಆದರೆ ಇವುಗಳ ಸಾಧನೆಗೆ ಅವರು ಕೆಲ ಸಲ ಅವಲಂಬಿಸುವ ಹಿಂಸಾ ಮಾರ್ಗವು ಮಾತ್ರ ತೀರ ತಪ್ಪು. ಈ ಹಿಂಸಾ ಮಾರ್ಗವನ್ನವಲಂಬಿಸಿದ್ದೇ ಆದರೆ ಇಷೀ ದೇಶದೇ ಪೂಳಾಗಿ ಯಾವುದೇ ಕಲಹವು ಪ್ರಾರಂಭವಾಗಿ ಪ್ರಗತಿಯೇ ನಿಂತಾ ಹೋಗುವದೆಂದು ನನ್ನ ವೈಯಕ್ತಿಕ ಅಭಿಪ್ರಾಯವಿದೆ.

ಬೇಕಾದವರು ತಮಗೆ ಸರಿ ಕಂಡ ಆರ್ಥಿಕ ತತ್ವ ಮತ್ತು ಘೋರಣೆಗಳನ್ನು ಸರಿಸ ಬಹುದು ಆದರೆ ಅದಕ್ಕಾಗಿ ಹಿಂಸಾ ಮಾರ್ಗವನ್ನವಲಂಬಿಸಿದರೆ ಮಾತ್ರ ಯಾವದು ಕಲಹವು ಪ್ರಾರಂಭವಾಗಿ ಸ್ವಾತಂತ್ರ್ಯವು ಸ್ಥಲಿತಗೊಂಡು ದೇಶದ ಅನ ಸತಿಯಾಗುವದು ಖಂಡಿತ. ಈ ಮಾರ್ಗವು ಎಂದೆಂದಿಗೂ ಹಿತಕರವಲ್ಲ.

ನಮ್ಮುದ್ದೇಶ ಮಾತ್ರ ಒಳ್ಳೆಯದಿದ್ದರಾಗದು. ಅದನ್ನು ಸಾಧಿಸಲು ಉಪಾ ಯೋಗಿಸುವ ಮಾರ್ಗವೂ ಒಳ್ಳೆಯದಿರ ಬೇಕು, ತಪ್ಪುದಾರಿಯಿಂದ ಹೋದರೆ ತಪ್ಪು ಗುರಿಯನ್ನೇ ತಲುಪುವಿ" ಎಂದೂ ನೆಹರುರವರು ಹೇಳಿದರು.

ಕಮ್ಯುನಿಷ್ಟ ಮತ್ತು ಜಾತಿವಾದಿ ಗಳ ಘೋರಣೆ ಮತ್ತು ತತ್ವಗಳು ಅಜಗ ಜಾಂತರವಿದ್ದರೂ ಅವುಗಳ ಕಾರ್ಯಕಗಳಲ್ಲಿ ಮಾತ್ರ ಸಾಮ್ಯವು ವಿಶೇಷ ವಾಗಿದೆಯೆಂದು ನೆಹರುರವರು ಹೇಳಿದರು.

"ವಿಘಾತಕ ಮತ್ತು ಹಿಂಸಾತ್ಮಕ ಪ್ರಚಾ ರಗಳ ಬಗ್ಗೆ ಲುಭಯ ಸಂಸ್ಥೆಗಳ ದೃಷ್ಟಿ ಕೋನವು ಒಂದೇ ಇರುವದರಿಂದ ಕೆಲವು ಚಟುವಟಿಕೆಗಳನ್ನು ಅವರು ಸಂಯುಕ್ತ ವಾಗಿ ಮಾಡುತ್ತಾರೆ ಉತ್ತರ ಹಿಂದೂ ಸ್ಥಾನದಲ್ಲಿ ಈ ಎರಡೂ ಗುಂಪು ಗಳ ಕೆಲಸ ಒಂದೂಗೂಡಿ ಕೆಲಸ ಮಾಡುವ ವನ್ನು ಕಂಡು ಆಶ್ಚರ್ಯಪಡಬಹುದು. ಈ ಸಂಸ್ಥೆಗಳ ಘಾತಕ ಮತ್ತು ಹಿಂಸಾತ್ಮಕ ಚಟುವಟಿಕೆಗಳ ಬಗ್ಗೆ ಜನರು ಜಾಗ್ರತೆ ವಹಿಸಬೇಕು ಭಾರತದಲ್ಲಿ ಸಂಕ್ರಮಣ ಕಾಲದಲ್ಲಿದ್ದೆವು ನಮ್ಮ ನಾಡಿನ ಜನತೆಯ ಲ್ಲಿ ಒಕ್ಕಟ್ಟಿನಿಂದ ರಾಷ್ಟ್ರನಿರ್ಮಾಪಕ ಕಾರ್ಯದಲ್ಲಿ ನೆರವಾಗುವದು ಅವಶ್ಯವಿದೆ."

ರಶಿಯದ ಸಾಧನೆಗೂ ಕೆಲಕಾಲ ಹಿಡಿಯುವದು

ಮುಂದೆ ಅವರು ಸೋವಿಯೆಟ್ ಯೂ ನಿಯನ್‌ದಲ್ಲಿಯ ಪ್ರಗತಿಯ ಬಗ್ಗೆ ಹೊಗಳಿ ಅದು ಸಾಧಿಸಿದ ಅನೇಕ ಸಂ ಗತಿಗಳನ್ನು ಭಾರತವು ಕಲಿಯಬೇಕಾಗಿ ದ್ದರೂ ನಮಗೆ ಸರಿಬಾರದ ಅನೇಕ ಸಂಗ ತಿಗಳು ಅಲ್ಲಿವೆಯೆಂದರು "ರಶಿಯಾದ ಸಾಧನೆಗಳ ಬಗ್ಗೆ ನಾವು ಮಾತಾಡುವಾ ಗ ಅಷ್ಟೊಂದು ಸಾಧಿಸಲು ಅವರಿಗೆ ಎ ಷ್ಟುಕಾಲ ಹಿಡಿಯಿತೆಂಬುದನ್ನು ನೆನಪಿನ ಲ್ಲಿಟ್ಟುಕೊಳ್ಳಬೇಕು. ಮೊದಲಿನ ೧೫—೨೦ ವರ್ಷಗಳಲ್ಲಿ ರಶಿಯವು ತನ್ನ ಘೋರ ಆರ್ಥಿಕ ಗಣನೆಯ ತಳಪಾಯವನ್ನು ಮಾತ್ರ ಹಾಕಿಕೊಂಡಿತು ಅವಿಚ್ಛಿನ್ನವಾದ ಪ್ರಯತ್ನವನ್ನು ಅಲ್ಲಿಯ ಜನತೆಯು ಇಡೀಗ ಉಣ್ಣುತ್ತಿದ್ದಾರೆ.

ದೊಡ್ಡ ದೊಡ್ಡ ಗೊತ್ತುವಳಿಗಳನ್ನು ಮಾಡುವದು ಸುಲಭ. ಆದರೆ ಅವುಗಳನ್ನು ಕಾರ್ಯಗತಗೊಳಿಸಲು ಎಷ್ಟು ಅವಧಿ ಬೇ ಕೆಂಬುದನ್ನು ವಿಚಾರಿಸುವದಗತ್ಯ. ಚೀ ಯಾವ ಘಟೀಣರು ಕ್ರಾಂತಿಯಾದೊಡನೆ ಯೇ ನಾಡಿನ ಪ್ರತಿಯೊಬ್ಬ ಪುಗುಸಿಗೂ ಕಷ್ಟಾಯವಿಲ್ಲದೆ ಪುಕ್ಕಟೆ ಶಿಕ್ಷಣ ಕೊಡುವ ಯೋಜನೆ ಮಾಡಿದರೂ ಅದು ಹದಿನಾ ಲ್ಕು ವರುಷಗಳ ನಂತರ ಕಾರ್ಯರೂಪಕ್ಕೆ ಬಂದಿತು.

ಕಳೆದ ಐದು ವರುಷಗಳಲ್ಲಿ ಕಾಂಗ್ರೆಸ್ಸು ಅದನ್ನು ಮಾಡಿತ್ತು ಇದನ್ನು ಮಾಡಿತ್ತೆಂದು ಹೇಳುವವರು ಯೋಗ್ಯ ದೃಷ್ಟಿಕೋನದಿಂದ ಘಟನೆಗಳನ್ನು ಪರಿಶೀಲಿಸಬೇಕು. ನಾವು ಮಾಡಬೇಕೆಂದು ಬಯಸಿದ್ದನ್ನೆಲ್ಲ ಮಾಡಿಲ್ಲವೆಂಬುದು ನಿಜ. ಆದರೆ ಈ ಐದು ವರುಷಗಳಲ್ಲಿ ಸಾಧಿಸಲ್ಪಟ್ಟ ಕಾರ್ಯಗಳೇ ನು ಲಘುವಾದವುಗಳಲ್ಲ. ನನ್ನ ಈ ಸಾಧನೆಗಳನ್ನು ನೋಡಿದ ಅನೇಕ ವಿದೇ ಶೀಯರು ಎಚ್ಚರಿಕೆಯಿಂದ , ಬೆರಗು ಕಟ್ಟಿದ್ದಾರೆ.

ದೇಶದ ಆರ್ಥಿಕ ತಳಪಾಯವನ್ನು ಭದ್ರ ಗೊಳಿಸುವದೇ ನಮ್ಮ ಪ್ರಮುಖ ಶೀರ್ಷ ಪಂಚ ವಾರ್ಷಿಕ ಯೋಜನೆಯ ಈ ವಿಷ ಯವಲ್ಲಿ ಏನಾ ಸೋಡ್ಡಿ ಹೇಳಿದ್ದನ್ನು ಕಾರ್ಯರೂಪಕ್ಕೆ ತರುವ ಭಾರವು ಸರಕಾರದ ಮೇಲಿದೆ ದೇಶದ ಜನತೆಗೆ ಸಿರಿವಂತಿಕೆ ಹಿತವಾಗುವದಾದರೆ ಸಂದೇ ಹವಿಲ್ಲ.

ನವ ಚೀನದತ್ತ

ನಮಗೀಗಾದರೆ ಅಲ್ಪಾನಂತರದಲ್ಲಿಯೇ ಎಷ್ಟೋ ಸಂಗತಿಗಳನ್ನು ಸಾಧಿಸಲಾಗಿದೆ ಯೆಂದು ಅನೇಕರು ಹೇಳುತ್ತಾರೆ ಚೀನ ದಿಂದ ನಾವು ಅನೇಕ ಪಾಠಗಳನ್ನು ಕಲಿ ಯಬಹುದು. ಆದರೆ ಭಾರತವು ಚೀನ ದೈವಂತ ಎಷ್ಟೋಪಟ್ಟು ಹೆಚ್ಚು ಯೋಜನೆ ಗಳನ್ನು ಕೈ ಕೊಂಡಿದೆಯೆಂಬುವನ್ನು ಮ ಟೀಕಾಕಾರರಿಗು ನಾವು ಮಾಡಿದ್ದೆಲ್ಲವನ್ನು ಅವರು ಟೀಕಿಸುವರೆಂಬುದೇ ನಮ್ಮ ಸಾ ಮ್ಯ ತೋರಿದೆ. ಚೀನದಲ್ಲಿ ಸರಕಾರವನ್ನು ಯಾರೂ ಟೀಕಿಸುವಂತಿಲ್ಲ."

ನಂತರ ಅವರು ಜಾತೀಯತೆಯ ವಿಷ ಯವನ್ನೆತ್ತಿಕೊಂಡು "ದುಷ್ಟ ಶಕ್ತಿಗಳ ಜಾತೀಯ ವಿಷವನ್ನು ಪಸರಿಸುವದ ರಲ್ಲಿ ಯಶಸ್ವಿಯಾದರೆ ದೇಶಕ್ಕೊಂದ ದೊಡ್ಡ ಪಟ್ಟು ಕೂತಂತಾಗಿ ಹಾನಿಯೊಂ ಗುವದು ಖಂಡಿತ. ಜನ್ಮುದಲ್ಲಿಯ ಚು ಳಯು ಕೇವಲ ...ೀಯ ಸ್ವರೂಪ ದ್ದು ಅಲ್ಲಿ ಸರಕಾರವನ್ನು ಶಿಥಿಲಗೊಳಿಸು ವದೇ ಅದರ ಉದ್ದೇಶವಾಗಿದೆ" ಎಂದರು.

ಹೈದರಬಾದ ವಿಭಜನೆ ಬೇಡ

ನೆಹರುರವರು ಹೈದರಾಬಾದವಿಷಯ ದಲ್ಲಿ "ನೋಗಲು ಸಾಮ್ರಾಜ್ಯವು ತಿಳಿದಂತೆ ನಿಂದ ಹೈದರಾಬಾದವು ಜನಿಸಿದಾಗಿ ನಿಜವಾದರೂ ಪ್ರಸ್ತುತಿಗೆ ಬಲಿಯಾಗಿದ್ದರೂ ಉತ್ತರ ಮ ತ್ತು ದಕ್ಷಿಣಗಳ ಸಂಸ್ಕೃತಿಗಳ ಸಂಗಮವು ಇಲ್ಲಿಯಾದ್ದು ಒಳ್ಳೇ ಸಂಗತಿ. ಇದಕ್ಕಾ ಗಿ ಕೆಲ ಒತ್ತಾಯವನ್ನು ಸಯೋಗಿಸಲಾ ಯಿತು. ಮತ್ತು ಪ್ರಾದೇಶಿಕ ಸಂಸ್ಕೃತಿಗ ನ್ನು ಅಲಕ್ಷಿಸಲಾಯಿತು ಆದರೆ ಉತ್ತರ ದಕ್ಷಿಣ ಸಂಸ್ಕೃತಿಗಳ ಸಂಪರ್ಕದಿಂದಾದ ಲಾಭವನ್ನು ನಾವು ಕಡೆಗಣಿಸುವಂತಿಲ್ಲ. ಈ ಸಂಪರ್ಕವು ಳೀಳಿಯಬೇಕು.

ಹೈದರಾಬಾದನ್ನು ಭಾಷಾವಾರು ವಿಭ ಜಿಸಬೇಕೆಂದು ಹೇಳಲಾಗುತ್ತಿದೆ. ಆದರೆ ಸಧ್ಯಕ್ಕೆ ಹೈದರಾಬಾದವನ್ನು ಒಡೆಯುವ ದಿಂದು ಎಲ್ಲಾರಿಗೆ ನನ್ನ ಸಲಹೆಯಿದೆ ಎಂದೆಂದಿಗೂ ವಿಭಜನೆ ಮಾಡತಕ್ಕದ್ದಲ್ಲೆಂದು ನಾನು ಹೇಳುತ್ತೇನೆ. ಮುಂದೇನಾಗು ವದೋ ಬಲ್ಲವರಾರು? ಹೈದರಾಬಾದ ಜನತೆಯೇ ಈ ವಿಷಯವನ್ನು ಕೊನೆಯ ಣಾಗಿ ನಿರ್ಣಯಿಸಬಲ್ಲದು. ಸಧ್ಯಕ್ಕೆ ಪಾ ಸ್ತ ಈ ಕ್ರಮವು ಹೈದರಾಬಾದ ಜನತೆಗೆ ಮಾಡಿದ ಘೋರಕ್ಕೆ ಘಾತಕವಾಗದೆಂದು ನಾನು ಹೇಳುತ್ತೇನೆ ಮುಕ್ತ ಹೊಸ ಸಮಸ್ಯೆಗಳುದ್ಭವಿಸುವವರಿಂದ ನಿಮ್ಮ ಪ್ರಗತಿಯೆಡೆಗೆ ಲಕ್ಷ ಕೊಡ್ಬವು ನಿ ನ್ನಿಂದ ಸಾಧ್ಯವಾಗುವದಿಲ್ಲ. ಆದ್ದರಿಂದ ಹೈದರಾಬಾದನ್ನು ಸದ್ಯಕ್ಕೆ ಘಾತವಾರ ವಳಹುದಿಯ ಮೇಲೆ ವಿಭಜಿಸುವದು ಸಮಂಜಸವಲ್ಲ" ಎಂದು ಹೇಳಿದರು.

ಆಂಧ್ರಪ್ರಾಂತ ರಾಜಧಾನಿ

ನ್ಯಾಯ ಮೂರ್ತಿ ವಾಂಛೂರವರು ಈ ವಾರದೊಳಗಾಗಿ ಆಂಧ್ರಪ್ರಾಂತ ರಾಜಧಾನಿಯ ನಿರೀಕ್ಷಣೆಗಾಗಿ ವಿಜಯ ವಾಡ ಗುಂಟೂರ ಕಾಕಿನಾಡ ವಾಲ್ತೇರ್, ವಿಶಾಖಪಟ್ಟಣ, ಅನಂತ ಪುರ, ಕಡಪಾ ನಗೈರಿ ನಗರ ...

ಬಳ್ಳಾರಿ ಗೃಹೋದ್ಯೋಗ, ಕಲೆ ಮತ್ತು ವ್ಯವಸಾಯ ಪ್ರದರ್ಶನ 1953

[ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿ ಆಶ್ರಯದಲ್ಲಿ]

15-2-53 ರಿಂದ **22-2-53** ರವರಿಗೆ

ಸ್ಥಳ:— ಬಳ್ಳಾರಿ ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಗ್ರಾಮುಂಡ್ಸ್

ವ್ಯಾಪಾರಿಗಳು ಸ್ಟಾಲುಗಳನ್ನು ತೆಗೆದುಕೊಳ್ಳಲು ಅಮೂಲ್ಯಾವಕಾಶ.

ವಿವರಣ ಪಟ್ಟಿ, ಸ್ಟಾಲುಗಳಿಗಾಗಿ ಅರ್ಜಿ ವಗೈರೆ ಮಾಹಿತಿಗಾಗಿ ಈ ಕೆಳಗಿನವರಿಗೆ ಬರೆಯಿರಿ.

ಕಾರ್ಯದರ್ಶಿ,
ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡು
ಬಳ್ಳಾರಿ.

Matinee at "PRABHATH"

On 28th and 29th at 3-30 P. M.

Columbia

MUTINEERS

Fea:- John Hall

On 30th and 31st at 3-30 P. M.

Sunday the 1st Feb 53 at 9-30 A. M. & 3-30 P M.

Charge of the light Brigade

Fea:- ERROL FLYNA.

ಆದವಾನಿಯ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

O.S. 233/48, O.S.E P. 79/52

ವಾದಿ D. H.

ಸಂಕದಾರಿ ವೆಂಕಟರಾಮಯ್ಯ

VS

ಪ್ರತಿವಾದಿಗಳು. J. Ds

ಯಂಗಮ್ಮ ಮತ್ತು ಇತರರು

ಈ ನೋಟೀಸು ಮೂಲಕ ತಿಳಿಸುವ ದೇನಂದರೆ:—

ಇ. ಪಿ. ಯು. ಕೆಡ್ಯೂಲದಲ್ಲಿ ಕಾಣಿಸಿರುವ ಸ್ಥಿರಾಸ್ತಿಗಳು ಬಹಿರಂಗ ಯಾಲಂದಿಂದ ಆದವಾನಿಯ ಜಿಲ್ಲ ಮುನ್ಸಿಫರ ಕೋರ್ಟಿನ ಮುಂದೆ 13—2—53ನೆಯ ಶಾ. ಪ್ರಾತಃ ಕಾಲ 11ಗಂಟೆಗೆ ಮಾರಲ್ಪಡುವವು— ಕೊಳ್ಳಲಿಚ್ಛಿಸುವರು ಡಿಕ್ರಿಹೋಲ್ಡರರ ಅಡ್ವೊಕೇಟರಿಂದ ನಿವರಗಳನ್ನು ಪಡೆಯಬಹುದು.

ಪಿ. ತ್ರಿನಿವಾಸಮೂರ್ತಿ
ಡಿಕ್ರಿಹೋಲ್ಡರರ – ಅಡ್ವೋಕೇಟು

—ನ್ಯಾ ಮಾಂಭೂ—

ಆಂಧ್ರದ ಮುಖ್ಯ ಪಟ್ಟಣಗಳಲ್ಲಿ ಸಂಚರಿಸುತ್ತಿರುವ ನ್ಯಾಯಮೂರ್ತಿ ಮಾಂಭೂನರು ಇಸ್ಲು ೩ ಮಾಗಳಲ್ಲಿ ತಮ್ಮವರೆಗಿಯನ್ನು ಭಾರತ ಸರ್ಕಾರಕ್ಕೆ ಅರ್ಪಿಸುವದಾಗಿ ಹೇಳಿದರು.

ಕೊಟ್ಟೂರು – ಭಾರತ ವ್ಯಾಯಾಮ ಶಾಲೆಯ ೧೬ನೆಯ ವಾರ್ಷಿಕೋತ್ಸವವು 1—2—53ನೆ ರವಿವಾರ ವ್ಯಾಯಾಮಶಾಲೆಯ ಆವರಣದಲ್ಲಿ ನೆರವೇರಲಿದೆ—ಮುಖ್ಯ ಕಾರ್ಯಕ್ರಮಗಳಿಗೆ ಕಾರ್ಯಕಾರಿ ಸಮಿತಿಯು ಸರ್ವರಿಗೂ ಸ್ವಾಗತ ಕೋರುವದು.

NAVA BHARAT, BELLARY. (Regd. M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0 | One Year 6—0—0
೬ ತಿಂಗಳಿಗೆ 3—8—0 | Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವದಿಲ್ಲ. | Subscription will not be accepted for les than 6 months.

To

Sriman

26-1-53

Edited Printed & Published by T. B. Keshava Rao, at Nava Bharath Press, Bellary.

ನವಚೈತನ್ಯ

ಸೋಮವಾರ
ಫಿಬ್ರವರಿ
೨--೧೯೫೩

ವರ್ಷ ೧೫ | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ ೪೪ | ಉತ್ತಿಷ್ಠತ ! ಜಾಗೃತ !! ಸ್ವರ್ಗಸ್ಥರಾಗುವುದನ್ನು ಬೋಧಿಸತ !!! | ಟಿ. ಬಿ. ಕೇಶವರಾವು

— ಆಂಧ್ರಪ್ರಾಂತ —

ಶೀಘ್ರದಲ್ಲೇ ನಿರ್ಮಾಣವಾಗುವುದು - (ರಾಜಾಜಿ)

ಮದ್ರಾಸ್ ಮುಖ್ಯ ಮಂತ್ರಿಗಳಾದ ಶ್ರೀ ಸಿ. ರಾಜಗೋಪಾಲಾಚಾರ್ಯರು- ತಮ್ಮ ಕಡಲೂರು ಭಾಷಣವೊಂದರಲ್ಲಿ ಈ ಪ್ರಕಾರ ಹೇಳಿದರು.

"ಭಗವತ್ಕೃಪೆಯಿಂದ ಶೀಘ್ರ ಆಂಧ್ರ ಪ್ರಾಂತವು ಅಸ್ತಿತ್ವದಲ್ಲಿ ಬರುವುದು ಇಲ್ಲಿಯವರಿಗೂ ನಾವು ಕೂಡಿಯೇ ಇದ್ದೆವು. ಇನ್ನು ಮೇಲೆ ಪಾಲಾಗಬೇಕು-ಹಿಂದೂ ಸಂಯುಕ್ತ ಕುಟುಂಬದಿಂದ ಅಣ್ಣ ತಮ್ಮಂದಿರು ಹೊರ ಹೋಟಂತಿದೆ ಇದು. ಆಸ್ತಿ ವಿಭಾಗದ ಪ್ರಶ್ನೆಯು ಶೀಘ್ರದಲ್ಲೇ ನಿಶ್ಚಯವಾಗುವುದಿದೆ. ಆಸ್ತಿ ಕಡಮೆಯಾಗುವುದೆಂಬ ದುಃಖ ಬೇಡ. ಆಸ್ತಿ ಕಡಮೆಯಾದಂತೆ ನಮ್ಮ ಜವಾಬ್ದಾರಿಯೂ ಕಡಮೆಯಾಗುತ್ತೆ.

ನಾವು ಆಂಧ್ರರಿಗೆ ಶತ್ರುಗಳಲ್ಲ. ಅವರು ನಮ್ಮ ಸೋದರರು ಅವರೂ ನಾವೂ ಸ್ನೇಹ -- ಸೌಹಾರ್ದಗಳಿಂದ ಬೇರೆಯಾಗೋಣ. ಇನ್ನುಳಿದ ಭಾಗದಲ್ಲಿ ಐಕಮತ್ಯ ನೆರುವೆಂದೂ ಜಾತೀಯ ಒಣಗಳು ಅಂತ್ಯವಾಗುವೆಂದೂ ಆಶಿಸೋಣ"

.... ಸಂತ-ತುಲಸೀದಾಸರ ಉಪದೇಶ ....

ಗುರು ಕ್ರಿಸ್ತರಂತೆ ಸಂತ ತುಲಸೀದಾಸರಂತವರೂ ವಿಪತ್ಕಾರಿಗೆ ಉಪಕಾರವನ್ನು ಕರೆಯಲು ಕೇಳಿದ್ದಿಲ್ಲ.

ಜೋ ತೋಕೋ ಕಾಂಟಾ ಬುವೈ ತಾಹಿ ಬೋಯಿ ತೂ ಫೂಲ
ತೋಕೋ ಫೂಲಕೆ ಫೂಲ ಹೈ ವಾಕೊ ಹೈ ತಿರಶೂಲ

ಅರ್ಥ:- ನಿನ್ನ ಮಾರ್ಗದಲ್ಲಿ ಮುಳ್ಳುಗಳನ್ನು ಹಬ್ಬುವವಗೆ - ನೀನು ಪ್ರೀತಿಯಲ್ಲಿ ಹೂಗಳನ್ನು ಹರಡು ನಿನಗೆ ಮುಳ್ಳು ಹೂವಾಗುತ್ತವೆ-ಅವಗೆ ಹೂವು ಮುಳ್ಳಾಗುತ್ತವೆ.

— ಭಾರತ ಗಣರಾಜ್ಯ ದಿನ —

೨೬ ನೆಯ ತಾ ಭಾರತದ ಎಲ್ಲ ಮುಖ್ಯ ಭಾಗಗಳಲ್ಲಿ ಗಣರಾಜ್ಯ ರಜಪ್ಪ ದಿನವನ್ನಾಚರಿಸಲಾಯಿತು. ದೆಲ್ಲಿಯಲ್ಲಿ ಸೈನಿಕ ರಂಜನೆಯನ್ನು ಅನ್ಸಕ್ಷರು ಸ್ವೀಕರಿಸಿದರು.

ಭಾರತ ಪಾಕಿಸ್ತಾನಗಳಲ್ಲಿ ಯಾವಾಗಲೂ ಸ್ನೇಹವಿರಬೇಕೆಂಬುದು ತಮ್ಮ ಅಪೇಕ್ಷೆಯೆಂದು ಪ್ರಧಾನ ಮಂತ್ರಿ ನಾಜಿಮುದ್ದೀನರು ಭಾರತ ಗಣರಾಜ್ಯ ಉತ್ಸವದ ದಿನ ಭಾಷಣ ಕೊಟ್ಟರು.

ಯೋರಿಯವಲ್ಲಿ ಯುದ್ಧ ನಿಲ್ಲಿಸಲು ಪ್ರಯತ್ನವು ಮತ್ತೊಮ್ಮೆ ಪ್ರಯತ್ನ ನಡೆದಿದೆ ಚೀನದ ರಾಯಭಾರಿಗಳ ಮೂಲಕ ಭಾರತ ನಿರ್ಣಾಯಕವಲ್ಲಿ ಏನಾದರೂ ಸುಧಾರಣೆಯಾಗಬೇಕೆ ಎಂಬುದಿನ್ನು ತಿಳಿದು ನಂತರ ಹೆಜ್ಜೆ ಇಡಲಿದೆ.

ಆಂಧ್ರ ಪ್ರಾಂತವನ್ನು ಬೇರೆ ಮಾಡಲು ತೊಡಗಿದಾಗ ಅಣ್ಣಕಾಸಿನ ವ್ಯವಹಾರದಲ್ಲಿ ಯಾವ ರೀತಿಯಿಂದ ಹಂಚಿಕೊಳ್ಳುವ ತಕ್ಕಡ್ತೆಯಿದನ್ನು ನಿರ್ಣಯಿಸಲು ಪ್ರಾಂತೀಕ ಕಾಂಗ್ರೆಸ್ ಸಮಿತಿಗಳು ಸಲಹೆ ಕೊಡಲಿವೆ.

ಸಂಜೀವಿದ ಸುಪ್ರಸಿದ್ಧ ಕಾಂಗ್ರೆಸ್ ಭಕ್ತ ರಾಗಿದ್ದ ಡಾಕ್ಟರ್ ಪಿಟ್ಟಾ ರವರಿಗೆರಷ್ಟ್ರ ಶಾಂತಿ ಸಮಿತಿಯು ಜ್ವಾಲಿನ್ ಶಾಂತಿ ಪುರಸ್ಕಾರ ರೂಪದಲ್ಲಿ ಒಂದುಲಕ್ಷ ರೂ ಬಹುಮಾನ ಕೊಟ್ಟಿದೆ.

ಭಾರತ ಶೀಘ್ರ ನ್ಯಾಯಾಲಯ

ಹೊಸದಿಲ್ಲಿಯಲ್ಲಿ ಭಾರತ ಸ್ಥಾಪ್ರೀಮ್ ನ್ಯಾಯಾಲಯದ [illegible] ಅಂದಾಜು [illegible] ದನ್ನು ಕಟ್ಟಿ ಮುಗಿಸಲು ೨ ವರ್ಷಗಳು ಹಿಡಿಯಬಹುದು.

ಗಂಡನು ೧ ಕೋಟಿ ೨೦ ಲಕ್ಷ ಕೊಡಬೇಕು

ಶ್ರೀಮತಿ ಹೇಮಲತಳೆಂಬ ಶ್ರೀಮಂತಾರಿಯು ತನ್ನ ಗಂಡನಾದ ಪ್ರಸಿದ್ಧ ಅಲಿಜಾನ ನ್ನು ಬೇರ್ಪಡಿಸಿ ತನ್ನ ಜೀವನಾಂತರ್ಯಾಮಿ [illegible] ೧೦ ಲಕ್ಷ ರೂ ಕೊಡಿಸಬೇಕೆಂದು ಕೋರ್ಟಿಗೆ ಅರ್ಜಿ ಹಾಕಿದ್ದಾಳೆ.

ಬಳ್ಳಾರಿ ಪ್ರಭಾತ್‌ದಲ್ಲಿ
4 ನೇ ವಾರ
9-1-53 ರಿಂದ
ಅವರ್ ಇಂಡಿಯಾ ಥಿಯೇಟರ
ನಾಯಿಲ್ಲು
(ತೆಲುಗು)
ಕಾಕಾಗಿಲ :- ಟಿ. ಆರ್. ರಾಜಕುಮಾರಿ. ಸಾಗಯ್ಯ ರಂಗಮೂರ್ತಿ

NAVA BHARAT
ನವಭಾರತ
ಸಂಪಾದಕ-ವಿಶ್ವೇಶ್ವರಯ್ಯ

ಸೋಮವಾರ ೨-೨-೧೯೫೫

ಹಳ್ಳಿಗಳಲ್ಲಿ ಗೃಹನಿರ್ಮಾಣ

ಭಾರತದಲ್ಲಿ ಹಳ್ಳಿಗಳು ಹೆಚ್ಚಿಗಿದ್ದು ಪಟ್ಟಣಗಳು ಕೆಲವೇ ಇದ್ದರೂ ಹಳ್ಳಿಗಳಿಗಿಂತ ಪಟ್ಟಣಗಳಲ್ಲಿ ಗೃಹನಿರ್ಮಾಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಪಟ್ಟಣಗಳ ಬೆಳವಣಿಗೆಯು ಅತಿತ್ವರಿತವಾಗಿ ವೃದ್ಧಿಯಾಗುತ್ತಲಿರುವುದೇನೋ ನಿಜ. ಆದರೆ ಅನೇಕ ಹಳ್ಳಿಗಳಲ್ಲಿ ಜನಸಂಖ್ಯೆಯ ಅಧಿಕ್ಯದಿಂದ ಪರಿಸ್ಥಿತಿಯು ಬಹಳ ಕರುಣಾಜನಕವಾಗಿದೆ. ಒಂದೇ ಮನೆಯಲ್ಲಿ 3 ಕುಟುಂಬಗಳು ವಾಸಿಸುತ್ತಿರುವ ಉದಾಹರಣೆಗಳೆಷ್ಟೋ ಇವೆ. ಸಹಕಾರೀ ಸಂಸ್ಥೆಗಳದ್ವಾರಾ ಪಟ್ಟಣಗಳಲ್ಲಿ ಗೃಹನಿರ್ಮಾಣವಾದಂತೆ ಹಳ್ಳಿಗಳಲ್ಲೂ ಸಹಕಾರವು ಸಹಕಾರೀ ಸಂಸ್ಥೆಗಳಿಗೆ ಉತ್ತೇಜನ ಕೊಟ್ಟಿದ್ದರೆ, ದುರವಸ್ಥೆಯ ಸ್ವಲ್ಪಮಟ್ಟಿಗಾದರೂ ದೂರವಾಗುತ್ತಿತ್ತು.

ಮದ್ರಾಸ್ ರಾಜ್ಯದಲ್ಲಿ ಗೃಹನಿರ್ಮಾಣ ಮಂತ್ರಿ ಶ್ರೀ ಸುಬ್ಬಯ್ಯನವರ ಹೇಳಿಕೆಯು ಪ್ರಕಾರ ಕೈಗೆ ಸಾವಿರ ಗೃಹನಿರ್ಮಾಣ ಸಹಕಾರೀ ಸಂಸ್ಥೆಗಳಿದ್ದು ಇವುಗಳಿಗೆ ಪ್ರತಿವರ್ಷ ಮನೆಗಳನ್ನು ಕಟ್ಟಿಸಲಾಗಿದೆಯೆಂದೂ, ಆದರೆ ಹಳ್ಳಿಗಳಿಗಾಗಿ 4 ಸೊಸೈಟಿಗಳಿದ್ದು ಇದುವರೆವಿಗೆ ಒಂದಾವರೂ ಮನೆಯನ್ನು ಕಟ್ಟಿಲ್ಲದಿರುವುದು ಶೋಚನೀಯವೆಂದೂ ಗೊತ್ತಾಗಿದೆ. ಮನೆಕಟ್ಟುವ ಸ್ಥಳಗಳನ್ನು ಆಕ್ರಮಿಸುವವರಲ್ಲಿ ಆಗುವ ಆಲಸ್ಯ, ಹಳ್ಳಿಗರ ಸೋಮಾರಿತನ ಮೊದಲಾದವೇ ಇಂಥಾ ಪರಿಸ್ಥಿತಿಗೆ ಕಾರಣವೆಂದು ಸದರಿ ಮಂತ್ರಿಗಳು ಹೇಳಿದ್ದನ್ನು ನೆನಪಿನಲ್ಲಿಡಬೇಕು— ಕಳೆದ ೬ ವರ್ಷಗಳಲ್ಲಿ ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಲು ಸರಕಾರದವರು ಕೊಟ್ಟ ಹಣವೇ ವಿನಿಯೋಗವಾಗಿಲ್ಲದಿರುವುದರಿಂದ ಸರಕಾರದವರು ತಮ್ಮ ಆಯವ್ಯಯದ ಪದ್ಧತಿಯಲ್ಲಿ ಹಳ್ಳಿಗಳಲ್ಲಿ ಗೃಹನಿರ್ಮಾಣಕ್ಕೆಂದು ೧೯೫೫ ಲಕ್ಷ ರೂ. ತೆಗೆದಿಡುವುದರಿಂದ ಏನೂ ಲಾಭವಿಲ್ಲ. ಆ ಹಣದ ಸದ್ವಿನಿಯೋಗಕ್ಕಾಗಿ ತಕ್ಕ ಸೂಕ್ತ ಚರ್ಯೆಗಳನ್ನು ಅವಲಂಬಿಸಿಕೊಳ್ಳಬೇಕು. ಉದಾ ರಣೆಗೆ ಒಂದರಂತೆ ಮನೆಕಟ್ಟುವ ಪ್ರಯತ್ನ ಗಳನ್ನು ಸಡಿಲವಾಗಿದೆಯೆಂದು ಹೇಳಲಾಗುತ್ತಿದೆ. ಇದು ಸ್ವಲ್ಪ ಸಾಮಾನ್ಯಜ್ಞದ ಕೃತಿ.

ಕೂಲಿಕಾರರ ಮನೆಗಳನ್ನು ಕಟ್ಟಿಸುವ ಮುಖ್ಯ ಜವಾಬ್ದಾರಿಯನ್ನು ಕೇಂದ್ರ ಸರಕಾರವು ವಹಿಸಿರುವ ಕಾರಣ, ಈ ವಿಷಯದಲ್ಲಿ ಸಫಲತೆಗೆ ಮಾಡಲು ಪ್ರಾಂತೀಯ ಸರಕಾರಗಳು ಶ್ರದ್ಧೆ ಅಸಕ್ತಿಗಳಿಂದ ಮುಂದೆ ಬರಬೇಕು. ಯೋಜನೆಗಳಿಗಾಗಿ ಜನತಾ ಸಹಕಾರವು ಎಲ್ಲಿ ಬೇಡಲಾಗುವುದೋ ಅಲ್ಲಿ ಕೂಲಿಕಾರ ವರ್ಗಕ್ಕೆ ಮನೆಗಳನ್ನು ಕಟ್ಟಿಸಬೇಕು. ಗೃಹನಿರ್ಮಾಣ ಸಂಬಂಧ ಸಹಕಾರೀ ಸಂಸ್ಥೆಯ ಸದಸ್ಯನಾಗುವ ಯಾವ್ಯೆತನಿಗಾಗಲಿ ೩ ಸಾವಿರ ರೂಪಾಯಿಗಳಿಗೂ ಮೀರಿದ ಸಾಲ ಕೊಡಬೇಕು. ಅಂದರೆ ೨-೩ ಎಕರೆ ಭೂಮಿಯಿರುವ ರೈತನಿಗೂ ಸಹಾಯಹಸ್ತ ಚಾಚಿದಂತಾಗುತ್ತದೆ.

ಇನ್ನಾಗಿ ಸಾಲಕ್ಕೆ ಬಡ್ಡಿ ರೂ. ಆಗುವುದೆಂದು ಹೇಳುತ್ತಾರೆ. ಹೀಗೆಯೇ ವಿದ್ಯುತ್ ಶಾಖೆ ಸ್ತ್ರೀಯರುಗಳಿಂದ ಆಂಧ್ರ ಕರ ಭಾಗ್ಯಕ್ಕೆಗೆ ಕೋಟಿ ಯೂನಿಟ್ ವಿದ್ಯುತ್ಶಕ್ತಿ ದೊರೆಯುವುದೆಂದು ಅಂದಾಜು ಕೋಟಿ ರೂಪಾಯಿ ಖರ್ಚಿನ ಪ್ರಸ್ತಾವನೆ ದೊರೆಯುತ್ತಲಿದೆ. ಆಂಧ್ರರಿಗೆ ನ್ಯಾಯವಾಗಿ ದೊರೆಯಬೇಕಾದ ಕನಿಷ್ಠ ಪಕ್ಷ ೨ ಕೋಟಿ ಲಕ್ಷ ಯೂನಿಟ್ ವಿದ್ಯುಚ್ಛಕ್ತಿಗೆ ಸುಮಾರು ಕೋಟಿ ರೂ. ಅಂದರೆ ಆಂಧ್ರೇತರ ಭಾಗಗಳಿಂದ ಪ್ರತಿ ಲಿಯನ್ ಕೋಟಿ ರೂ. ಬರಬೇಕಾಗಿ ಆಂಧ್ರ ಕಾಂಗ್ರೆಸ್ ಹೇಳುತ್ತಿದೆ.

ಬ್ರಿಟಿಷ್ ಸೈಮನ್ ಕಮಿಷನ್ ಭಾರತದಲ್ಲಿ ಕಾಲಿಟ್ಟ ಸಂದರ್ಭದಲ್ಲಿ ಆಂಧ್ರರು ಬೇಕೆಂದೇ ಬಹಳ ಅನ್ಯಾಯಗಳಿಗೆ ಗುರಿಯಾದರು. ಜಗತ್ಪ್ರಸಿದ್ಧ ಇನ್ನೂ ಅಂತಹ ಅನ್ಯಾಯ ತಪ್ಪಿಲ್ಲ. ಆಂಧ್ರರಾಷ್ಟ್ರ ನಿರ್ಮಾಣ ಪ್ರಾರಂಭಕ್ಕೆ ಈ ಅಂಶವೂ ಕಾರಣವಾಗಿರುವುದೆನ್ನಬಹುದು. ಆದರೆ ರಾಷ್ಟ್ರನಿರ್ಮಾಣವು ತೀರಾ ಸ್ವಾಭಾವಿಕವಾಗಿ ಆಂಧ್ರರ ಸಮಗ್ರಾಭ್ಯುದಯದ ಕೋರಿಕೆಗಳನ್ನು ಮುಂದಿಟ್ಟು ಅತಿ ವಾದ-ಪದ ಚಾಳಿಯಿಂದ ತಮ್ಮ ಕೊಂತೆಮ್ಮ ಕೋರಿಕೆಗಳಿಗೆ ಜನರ ಸಾಮಾನುಭೂತಿಯನ್ನು ದೊರಕಿಸಿಕೊಂಡಿದೆ. ಈ ಆಂಧ್ರ ಕಾಂಗ್ರೆಸ್ ಎಂಬುದು ನಮ್ಮ ಸ್ವಿತಿಪ್ರಜ್ಞತೆಯ.

ಈಗಿನ ಪರಿಸ್ಥಿತಿಯಲ್ಲಿ ಯಾವಪಕ್ಷ ಸಂಘರ್ಷವಾಗಲಿ ಅನಿವಾರ್ಯವೇನೂ ಇಲ್ಲವೆಂದೂ ಹೇಳುವುದಾಗಲಿ ಸಹಿತ ಈ "ಅತಿವಾದ" ನಿವಾರಣೆಯಿಂದ ಪ್ರಾಂತ ನಿರ್ಮಾಣವನ್ನು ಮುಂದಕ್ಕೆ ಹಾಕಲು ಯತ್ನಿಸುತ್ತಿರುವವರು ಕೆಲವರಿದ್ದಾರೆ. ಆಂಧ್ರಪ್ರದೇಶ ನಾಯಕರು ಅಗ್ರಗಣ್ಯರು.

ರಾಯಲಸೀಮೆ ಕಾಂಗ್ರೆಸ್ ಶಾಸನ ಸಭೆಗಳಿಂದ ನಮಗೆ ಆಂಧ್ರ ಪ್ರಾಂತ ಬೇಡವೆಂಬ ಸಹರ ರವರಿಗೆ ಜವಾಬು ಒದಗಿಸಿದ ಶ್ರೀ ಸಂಜೀವಪ್ಪನವರು ಮುತ್ತೈದಿಯಂತೆ ಆಂಧ್ರಪ್ರಾಂತ ಬೇಕೆಂದು ತೀರ್ಮಾನ ಮಾಡಿಸಿ ತಿಪ್ಪರಲಾಗ ಹೊಡೆಯುತ್ತಿರುವ ತಮ್ಮಂಥ ಕಾಳೇಶ್ವರರಾವ್ ಡಿ. ಎಸ್. ವೆಂಕಟ ಸುಬ್ಬಾರೆಡ್ಡಿ ಯವರೊಂದಿಗೆ ಜಸ್ಟಿಸ್ ಪಕ್ಷದಲ್ಲಿಗೆ ಹೋಗಿ ೫೦ ಕೋಟಿ ಬೇಡಿಕೆ ಮಾಡಿಸುವವರೆಗೂ ಹೋರಾಟ ವೇನಿರಬಹುದು? ಇವರ ಉದ್ದೇಶಗಳನ್ನು ಸುಲಭವಾಗಿ ಊಹಿಸಬಹುದು

ನವೀನ ಆಂಧ್ರಪ್ರಾಂತದಲ್ಲಿ ಇವರಿಗೆ ಮೊದಲಿನ ಸ್ಥಿತಿಗೆ ಇರುವುದೋ ಇಲ್ಲವೋ ಇವರಿಗೇ ತಿಳಿಯದು. ಸಾಧ್ಯವಾದಷ್ಟು ಇನ್ನೂ ಕೆಲಕಾಲ ಆಂಧ್ರಪ್ರಾಂತವನ್ನು ಮುಂದೆ ಹಾಕಿ ತಾವೇ ನಿಜವಾದ ಆಂಧ್ರ ಪುತ್ರರೆಂದು ಜನತೆಯ ಮುಂದೆ ವೇಷ ಹಾಕುವುದು ಇವರಿಗೆ ಬೇಕಾಗಿದೆ.

ಆದರೆ ನವಚೈತನ್ಯದಿಂದ ಮುಂದೆ ಬರುತ್ತಿರುವ ಆಂಧ್ರಜನತೆಯು ಈ ಅವಕಾಶವಾದಿಗಳ ಬೊಬ್ಬಾಟವನ್ನು ಅರ್ಥಮಾಡಿಕೊಳ್ಳಬಹುದು. ಇದನ್ನೆಲ್ಲಾ ಬಹಿರಂಗಮಾಡಿ ಸರ್ವಾಂಗ ಸುಂದರವಾದ ಆಂಧ್ರಪ್ರಾಂತವನ್ನು ನಿರ್ಮಿಸಿಕೊಳ್ಳಬಲ್ಲದು. ಪ್ರಜಾಶಕ್ತಿಯ ಮುಂದೆ ಈ ಅವಕಾಶವಾದಿಗಳ ಗಾರುಡಿ ಏನೂ ಕೆಲಸಕ್ಕೆ ಬಾರದು.

"೫೦ ಕೋಟಿ ರೂ. ಬೇಡಿಕೆ - ಆಂಧ್ರಪ್ರಾಂತ ನಿರ್ಮಾಣವನ್ನು ಮುಂದೆ ಹಾಕಿದಂತೆ!!"

[ಕಮ್ಯೂನಿಸ್ಟ್ ಪಾರ್ಟಿ ದಿನಪತ್ರಿಕೆ "ವಿಶಾಲಾಂಧ್ರ" ದ ಸಂಪಾದಕೀಯ]

ಆಂಧ್ರದೇಶ ಕಾಂಗ್ರೆಸ್ ಸಮಿತಿಯವರು ನ್ಯಾಯಮೂರ್ತಿ ವಾಂಛೂರು ಸಮಿತಿಗೆ ಒಂದು ಜ್ಞಾಪಕಪತ್ರವನ್ನು ಸಲ್ಲಿಸಿ ಸ್ವೀಕಾರಯೋಜನೆ ಮತ್ತು ತಮಗೆ ಬರಬೇಕಾದ ಆಸ್ತಿಗಳ ಬಗ್ಗೆ ೫೦ ಕೋಟಿ ರೂ ನಷ್ಟಪರಿಹಾರ ಕೋರಿದ್ದಾರೆ. ಇದರಿಂದ ಆಂಧ್ರೇತರ ಭಾಗದಲ್ಲಿ ಕನಿಷ್ಠ ೪೦ ಸಾವಿರ ಎಕರೆ ಭೂಮಿ ಸ್ವಾಧೀನಕ್ಕೆ ಬಂದಿದ್ದು ಆಂಧ್ರಭಾಗದಲ್ಲಿ ೪೦ ಸಾವಿರ ಎಕರೆಮಾತ್ರ ಸ್ವಾಧೀನದಲ್ಲಿದೆ. ಇನ್ನು ಆಂಧ್ರೇತರಭಾಗದಲ್ಲಿ ಕನಿಷ್ಠ ೨ ಲಕ್ಷ ಜನ ಸ್ಥಾವಿಕೆ ಎಕ್ಕಡಿ ಸಾಗಾಗಲಿದೆ. ಇದಕ್ಕಾಗಿ ಈಗಿನ ಕನಿಷ್ಠ ಸ್ಥಿತಿಯ ಖರ್ಚುಗಳಿಗೆನ್ನುವ

★ ನಾವೇಕೆ ನಿರುದ್ಯೋಗಿಗಳಾದೆವು ★

ಶ್ರೀ ಡಿ ಯನ್. ಶಿವಿರಿ.

ಪ್ರಪಂಚದಲ್ಲಿ ನಿರುದ್ಯೋಗಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚಾಗುತ್ತಲಿದೆ. ಪ್ರತಿಯೊಂದು ದೇಶದಲ್ಲಿಯೂ ನಿರುದ್ಯೋಗಿಗಳ ಸಂಖ್ಯೆಯು ಲಕ್ಷಗಟ್ಟಲೆ ಇರುವದರಿಂದ ಜಗತ್ತಿಗೆ ಇದೊಂದು ನೂತನ ರೂಪವಾಗಿಯೇ ಪರಿಣಮಿಸಿದೆ ಈ ರೋಗ ನಿವಾರಣೆಗಾಗಿ ಮಾಡುವ ಪ್ರಯತ್ನಗಳೆಲ್ಲಾ ರೋಗವನ್ನು ಹೆಚ್ಚಿಸಲಿಕ್ಕೇನೇ ಸಾಧನಗಳಾಗಿ ಪರಿಣಮಿಸುತ್ತಿವೆ.

ಪ್ರಾಚೀನಕಾಲದಲ್ಲಿ ಈ ರೋಗವಿರಲಿಲ್ಲ ಎನ್ನಲೇ ಎಲ್ಲಜನರೂ ನಿರಂತರ ಉದ್ಯೋಗಿಗಳ ಗುಂಪೇ ಇದ್ದಿರಲು ಆ ಧುನಿಕ ಕಾಲವು ಯಂತ್ರಯುಗವಾಯಿತಲ್ಲೇ. ನಾವಿರ ಜನಗಳ ಕಾರ್ಯವನ್ನು ಒಂದೇ ಯಂತ್ರವು ಮಾಡಲುಶಕ್ತವಿರುವದರಿಂದ ೯೦೦ ಜನಗಳು ಉದ್ಯೋಗವಿಲ್ಲದೇ ಬೇರೊಂದು ಕಾರ್ಯವನ್ನು ಶೋಧಿಸಬೇಕಾಯಿತು. ಈ ಪ್ರಕಾರ ಹೊಸ ಸಲಕರಣೆಗಳೂ ಅನಂತವಾಗಿ ಉಂಟಾಪವು ಜಗತ್ತಿನ ಎಲ್ಲ ಭೂಭಾಗವೂ ವಾಸಸ್ಥಳವಾಯಿತು.

ಈ ವಿಧವಾದ ಜನಗಳ ಉದ್ಯೋಗ ಸ್ವಸಾರವುಳ್ಳಾ ಯಂತ್ರಮೂಲಕವಾಗಿಯೇ ಜರುಗಿದುದಿಂದ ನಿರುದ್ಯೋಗಿಗಳ ಸಂಖ್ಯೆಯನ್ನು ಪ್ರತ್ಯಾಸೇನೂ ಆಗಲಿಲ್ಲ ಈ ವಿಷಯವನ್ನು ಅತ್ಯಂತ ಮಹತ್ವವಾದ ಗಿರುವದರಿಂದ ಇಲ್ಲಿ ವಿವರಿಸಿದ್ದಾಗಿದೆ

೨೦ ೩೦ ವರ್ಷಗಳ ಹಿಂದೆ ಇಲ್ಲಿಯ ಒಬ್ಬ ಅಧ್ಯಾಪಕರು ಈ ಪ್ರಕಾರ ಭವಿಷ್ಯವನ್ನು ಹೇಳಿದ್ದರು. "ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಹಿಂದಿ ತರುಣನು ಚಿಪರಾಸಿ (ಪಟ್ಟವಾಲ-ಜವಾನ) ಕೆಲಸಕ್ಕೆ ಬರುವ ಸನ್ನಿವೇಶವು ಇಷ್ಟರಲ್ಲೇ ಬರುವುದು." ಆ ಭವಿಷ್ಯವು ನಿಜವಾಯಿತಿಂದು ಈ ಸ್ಥಿತಿಯೇ ದೃಷ್ಟಾಂತವಾಗಿದೆ.

ಕೆಲವು ಪದವೀಧರರು ರಿಕ್ಷಾ (ಜನರು ಎಳೆಯಿಕೊಂಡು ಹೋಗುವ ಬಂಡಿ) ಎಳೆದುಕೊಂಡು ಹೋಗಿ ಜೀವಿಸಲು ಪ್ರಾರಂಭಿಸಿದ್ದಾರೆ ಬಂಗಾಲದಲ್ಲಿ ಒಬ್ಬ ಪದವೀಧರನು ನಾವಿಕನ ಕೆಲಸವನ್ನು ಮಾಡುತ್ತಿದ್ದನೆಂಬ ಸುದ್ದಿಯನ್ನು ಕೇಳಿದ್ದೇನೆ. ಉದ್ಯೋಗ ದೊರೆಯದೆ ಅನೇಕ ಪದವೀಧರರು ಆತ್ಮಹತ್ಯೆ ಮಾಡಿಕೊಂಡಿರುವ ವರ್ತಮಾನವನ್ನು ಆಗಾಗ್ಗೆ ಓದುತ್ತಿದ್ದೇವೆ.

ಅನ್ಯ ದೇಶಗಳಲ್ಲಿ ನಿರುದ್ಯೋಗಿಗಳ ನಿಶ್ಚಿತ ಸಂಖ್ಯೆ ಎಷ್ಟಿಗೆ ಗೊತ್ತಾಗುತ್ತದೆಯೋ ಹಾಗೆಯೇ ಇಲ್ಲಿ ನಿರುದ್ಯೋಗಿಗಳ ನಿಶ್ಚಿತ ಸಂಖ್ಯೆಯು ಗೊತ್ತಿಲ್ಲ ಅದು ದರಿಂದ ಅನೇಕ ಭೀಕರ ಸ್ವರೂಪವು ನಮ್ಮ ದುರ್ದೈವಕ್ಕೆ ಇನ್ನೂ ಬರಲಿಲ್ಲವು.

ಶ್ರೀ ಜವ್ಹಾಹರಲಾಲ ನೆಹರೂರವರು ಈ ದೇಶದಲ್ಲಿ ಸಾಲ್ಮುಕೋಟಿ ಜನರು ನಿರುದ್ಯೋಗಿಗಳಿದ್ದಾರೆಂದು ಹೇಳುತ್ತಿದ್ದಾರೆ ಈ ಸಂಖ್ಯೆಯು ಕರಾರಾ ನಿಶ್ಚಿತವಾದುದನ್ನು ಪ್ರತಿಯೊಂದು ಹಳ್ಳಿಯ ಗುಡಿಸಲಿನ ಕೂಲಿಕಾರನಿಂದ ಪಟ್ಟಣದ ಭವನಗಳಲ್ಲಿರುವ ವಜೀಧರನ ವರೆಗೆ ಯಾವತರಗತಿಯ ಜನರಲ್ಲಿ ಎಷ್ಟು ಜನರು ಉದ್ಯೋಗವಿಲ್ಲದೇ ಸರಕಾರಿಯಿಂದಲೇ ಜೀವನವನ್ನು ತೆಗೆದರೆ ಆ ಸಂಖ್ಯೆಯು ನಮ್ಮ ಹೃದಯವನ್ನು ಭೇದಿಸದೆ ಇರಲಾರದು! ಪ್ರೊ. ಗ್ಲಿಟ್ಟಿಸೆಂಟ್ರೊ ಎಂಬವರು ಹೇಳಿರುವಂತೆ ಇಂಗ್ಲೆಂಡಿನ ನಿರುದ್ಯೋಗಿಗಳ ಸ್ಥಿತಿಗಿಂತ ಹಿಂದುಸ್ಥಾನದ ನಿರುದ್ಯೋಗಿಗಳ ಸ್ಥಿತಿಯು ಬಹಳ ಭೀಕರವಾದುದಾಗಿದೆ.

ಇಂಗ್ಲೆಂಡಿನಲ್ಲಿ ಕೋಟಿ ಜನರಲ್ಲಿ ೬೦ ಲಕ್ಷ ಜನರು ಮಾತ್ರ ನಿರುದ್ಯೋಗಿಗಳಿದ್ದಾರೆ. ಆದರೆ ಬೆಲಸಮಾಡದ ಮನೆಯಲ್ಲಿಯೇ ಕೂತು ಜೀವನವನ್ನು ಸರಕಾರದಿಂದ ಸೊಂದುತ್ತಿದ್ದಾರೆ. ಇನ್ನು ಅನುಕೂಲವಿದ್ದರೂ ನಿರುದ್ಯೋಗಿಗಳು ಆಗಾಗ್ಗೆ ಹೂಂಬಡಾಯಿಸುತ್ತಿದ್ದಾರೆ. ಅಂಗಡಿಗಳನ್ನು ಸೂರಿಯುತ್ತಿದ್ದಾರೆ. ಆದರೆ ಹಿಂದುಸ್ಥಾನದ ೩೬ ಕೋಟಿ ಜನಗಳಲ್ಲಿ ೧ ಕೋಟಿ ಜನಗಳು ಹೊಟ್ಟೆಗಿಲ್ಲದೆ ಬಳಲುತ್ತಿದ್ದರೂ ಆವರನ್ನು ಕೇಳುವವರೇ ಇಲ್ಲ. ಜೇನೆ ಬೇರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿರುವ ನಿರುದ್ಯೋಗಿಗಳ ಸಂಖ್ಯೆಯನ್ನು ಇವರು ಮಾಡಿಸುತ್ತಿರುವ ಗಲಾಟೆಗಳನ್ನು ನೋಡಿದರೆ ಹಿಂದುಸ್ಥಾನದ ಸ್ಥಿತಿಯು ಗೊತ್ತಾಗುವುದು.

ಇಲ್ಲಿನವರು ದೆಸೆಗೆ ಕೊಡಬೇಕಾದ ಬಡ್ಡಿ ಕರಾರಾಕ್ಕೆ ಕೊಡಬೇಕಾದ ಕಂದಾಯಗಳ ಕತ್ತೆಯಲ್ಲಿ ಸಿಕ್ಕಿ ಹಿಂಸೆ ಪಡುತ್ತಿದ್ದಾರೆ. ಸಾಲದ ಶೂಲವನ್ನು ತಪ್ಪಿಸಿಕೊಳ್ಳಬೇಕೆಂದು ಪಟ್ಟಣಗಳ ಗಿರಣಿ ಮೊದಲಾದವುಗಳಲ್ಲಿ ಕೂಲಿಗೆ ಹೋಗಿ ಸಾಕಾರದುಧ್ವಸಗಳಿಗೊಳಗಾಗಿ ಪಾಪ ಪ್ಲೇಗ ಜೊತೆಗೆ ಪ್ರಾಣವನ್ನೂ ಕಳೆದುಕೊಳ್ಳುವದನ್ನು ನೋಡಿದರೆ ಈ ದೇಶದ ನಿರುದ್ಯೋಗಿಗಳ ಪರಿಸ್ಥಿತಿಯು ಭೀಕರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಈಗ ಸಮಸ್ಯೆಯ ನಿವಾರಣೆಗಾಗಿ ರೇಡ್ಡೀ ಬೇರಾಲಾದ ಎಲ್ಲ ಶಾಸ್ತ್ರಗಳಲ್ಲಿಯೂ ಪರಿಶ್ರಮವಹಿಸಿ ಜನಗಳನ್ನು ಕೆಲಸದಿಂದ ತೆಗೆಯುತ್ತಾಹಿದ್ದಾರಷ್ಟೆ. ಇವರ ಪ್ರಯತ್ನವು ಮುಂದಿನ್ನಾಗಿ ಸ್ವಲ್ಪವಾದರೂ ಸಫಲವಾಗಿದೆ ಎಂದೆನಿಸಿದರೆ ಈ ಸಮಸ್ಯೆಯು ನಿರ್ಮೂಲವಾಗಿದೆ. ರಾಷ್ಟ್ರಕ್ಕೊದಗಿರುವ ಈ ವಿಷಮ ಸ್ಥಿತಿಗೆ ಬಿಳಿಯ ಸ್ವಾತಿಗೆ ಸಂಪೂರ್ಣವಾಗಿಯೇ ಕಾರಣವಾಗಿದೆ. ಸ್ವಪ್ರ ಆರ್ಥಿಕವಾಗಿ ಸುಧೃಢವಾಗುವವರೆಗೂ ಈ ಕಷ್ಟಸ್ಥಿತಿಯು ನಿವಾರಣೆಯಾಗಲಾರದು.

ರಾಯಬಾಗದಲ್ಲಿ ಶಿವರಾತ್ರಿ

ಪ್ರತಿವರ್ಷದಂತೆ ಈ ವರ್ಷವೂ ದಿನಾಂಕ 12—2—53 ನೆಯ ಗುರುವಾರ ರಾತ್ರಿ ಮಹೂರ್ತದಲ್ಲಿ ಶಿವಪ್ರತಿಷ್ಠೆ ಧರ್ಮಸಭೆಯು ಸಂಸ್ಕೃತಪಾಠಶಾಲೆಯ ಪ್ರಾರಂಭವಾಗಿ ಬ್ರಹ್ಮಚಾರಿಗಳಿಗೆ ಪ್ರಸಾದ ವೈದ್ಯಕೀಯ ಉಚಿತವಾಗಿ ಔಷಧಿಯ ಕೊಡುವ ಏರ್ಪಾಡು ಮಾಡಲಾಗಿದೆ. ಶಿವರಾತ್ರಿಯ ದಿವಸ ಬೆಳಿಗ್ಗೆ ೭ ಗಂಟೆಗೆ ಶ್ರೀ ಮಹಾಲಿಂಗೇಶ್ವರ ಮಹಾಪೂಜೆ ಆಗುವದು. ಮಧ್ಯಾಹ್ನ ೧ ಗಂಟೆಗೆ ಮಹಾಪ್ರಸಾದ ಜರುಗುವದು. ಸಾಯಂಕಾಲ ೭ ಗಂಟೆಗೆ ಶ್ರೀ ಮಹಾಲಿಂಗೇಶ್ವರ ಪಲ್ಲಕ್ಕಿ ಉತ್ಸವ ಮತ್ತು ಮಧ್ಯರಾತ್ರಿ ೧೨ ಗಂಟೆಗೆ ಮಹಾಪೂಜೆ ಆಗುವದು. ಸಂಗೀತ ಭಜನೆ ಮತ್ತು ಪುರಾಣ ಪ್ರವಚನ ಇತ್ಯಾದಿ ಕಾರ್ಯಕ್ರಮಗಳು ಜರುಗುವವು. ಸಮಸ್ತ ಭಕ್ತಾದಿಗಳು ಆಗಮಿಸಲು ಅಧ್ಯಕ್ಷರು ವಿದ್ಯಾವರ್ಧಕ ಸಂಘದ ಆಡಳಿತ ಮಂಡಳಿಯವರು ಶ್ರೀ ಜಯದೇವ ಸಿದ್ಧಪ್ಪನವರು ಕೋರಿಕೊಳ್ಳುತ್ತಾರೆ.

ಯಾಳ್ಳಿ (ಬೆಳಗಾವಿ)

ಖಾನಾಪೂರ ತಾಲೂಕಾ ಬೀಡಿ ಯಾಳ್ಳಿಯಲ್ಲಿ ಪ್ರಜಾತಂತ್ರ ದಿನವನ್ನು ೨೬ ನೆಯ ದಿನ ಆಚರಿಸಲಾಯಿತು. ಸ್ವಯಂಸೇವಕರ ಫೇರಿನಂತರ ಸಾಯಂಕಾಲ ಶ್ರೀ ರಾಮಾ ರಾಯರ ಅಧ್ಯಕ್ಷತೆಯಲ್ಲಿ ಗ್ರಾಮೋದ್ಧಾರ ಮತ್ತು ಮಹಿಳಾಜೀವನ ಕುರಿತು ಭಾಷಣಗಳಾದವು. ಶಾಲೋಪಾಧ್ಯಾಯರಾದ ಶ್ರೀ ಸುಬ್ಬರಾಯ ವೀರಣ್ಣ ಧಾರವಾಡೀ ಯವರ ಪ್ರತಾಪವೆಂಬ ಏಕಾಂಕ ನಾಟಕವು ಪ್ರದರ್ಶನವಾಯಿತು.

ಗೋವು ಸಂಪತ್ತಿನ ಜನನಿ!

ಭಾರತೀಯರಾದ ನಾವು ಗೋ
ನ್ನು ಬಹು ಪೂಜ್ಯವಾದುದೆಂದು ಪೂಜಿಸು
ವುದೊಂದನ್ನೇ ಬಲ್ಲೆವು. ಅದರ ರಕ್ಷಣೆಯ
ನ್ನು ಮಾತ್ರ ಸರಿಯಾಗಿ ಮಾಡುವುದಿಲ್ಲ.
ನಾವು ಹೊಟ್ಟೆಗಿಲ್ಲದೆ ಬಳಲುತಿದ್ದಾಗ ನ
ಮಗೆ ಆಹಾರವನ್ನು ಕೊಡುವುದು ನಮ್ಮ
ಪೂಜೆಯೋ? ನಮ್ಮ ಮುಂದೆ ಅಂಬಿದ್ದು
ಕೊಂಡಾಡಿ ಕರ್ಪೂರದ ಆರತಿಯನ್ನು ಬೆ
ಳಗುವುದು ನಮ್ಮ ಪೂಜೆಯೋ? ಹೊಟ್ಟೆ
ಯಲ್ಲಿ ಅಗ್ನಿಯು ನರ್ತನವನ್ನು ಬಿಡುತ್ತಿರು
ವಾಗ ಹೊರಗಿನ ಮಂಗಳಾರತಿಯು
ಶಾಂತಿಯನ್ನುಂಟುಮಾಡುವುದೆ?

ಗೋವುಗಳು ಹೊಟ್ಟೆಗಿಲ್ಲದೆ ಬಳಲು
ತ್ತಿರುವಾಗ ನಾವು ಅವುಗಳನ್ನು ಹುಲ್ಲು
ನೀರುಗಳಿಂ [illegible] ಸಲಹದೇ
ಕ್ಷೌಮುಗಿದು [illegible] ಮಾಡಿದರೇನು ಫಲ?
ಪ್ರತ್ಯಕ್ಷವು ಗೋರಕ್ಷಣೆಯನ್ನು ಹೇಗೆ
ಮಾಡುತ್ತಿರುವುದೆಂಬುದನ್ನು ನೋಡಿದರೆ
ನಾವು ಈ ವಿಷಯದಲ್ಲಿ ಎಷ್ಟು ಹಿಂದುಳಿ
ದಿದ್ದೇವೆಂಬುದು ತಿಳಿಯುವುದು.

[illegible] ಸಂಪತ್ತಿನ ಜನನಿ (The
Mother of Prosperity) ಎಂದು
ಹೇಳುತ್ತಾರೆ. ಆದುದರಿಂದ ಅವರು
ಗೋಪಾಲನಿಂದ ವಿಶೇಷ ಸಂಪತ್ತನ್ನು ಪೊಂ
ದುವುದಕ್ಕೆ ಮನಃಪೂರ್ವಕ ಪ್ರಯತ್ನಿಸು
ತ್ತಿದ್ದಾರೆ.

ಡೆನ್ಮಾರ್ಕ್ ದೇಶದವರು ೧೯೨೬
ನೆಯ ಇಸವಿಯಲ್ಲಿ ೬೯೦ ಲಕ್ಷ ಪೌಂಡ್
ಗಳ ಬೆಣ್ಣೆಯನ್ನು ಪರದೇಶಗಳಿಗೆ ಕಳ
ಹಿಸಿದರು. ರಷಿಯಾ ದೇಶವು ೧೯೨೬
ನೆಯ ವರ್ಷದಲ್ಲಿ ೪೯, ೪೦೦ ಮೆ
ಟ್ರಿಕ್ ಟನ್ ಬೆಣ್ಣೆಯನ್ನು ಸಿದ್ಧಗೊಳಿ
ಸಿತು. ಮುಂದೆ ಮೂರನೇ ವರ್ಷದಲ್ಲಿ
ಯೇ ರಷಿಯಾದೇಶವು ೧೧,೫೬,೦೦೦ ಟನ್
ಬೆಣ್ಣೆಯನ್ನುಂಟು ಮಾಡಿತು. ಈಗ
ವಾರ್ಷಿಕ ಉತ್ಪನ್ನವು ೬೦ ಲಕ್ಷ ಟನ್
ಗಳಿಗಿಂತ ಹೆಚ್ಚಿದೆ.

ರಷಿಯಾದೇಶದಲ್ಲಿ ೬,೫೦೦ ಪ್ರಸಿ
ದ್ಧ ಗೋಶಾಲೆಗಳಿವೆ. ಅವುಗಳಲ್ಲಿಯ
ತಿರ್ಣ ಗೋಕಾರ್ಖಗಳಲ್ಲಿರುವ ಗೋವುಗಳ
ಹಾಲನ್ನು ಹಿಂಡುವ ನೊವಲಾದ ಕೆಲಸ
ಗಳೆಲ್ಲ ಯಂತ್ರಶಕ್ತಿಯಿಂದಲೇ ನಡೆಯು
ತ್ತವೆ! ಹೊಸ ಗೋಶಾಲೆಗಳ ಸ್ಥಾಪನೆ
ಗಾಗಿ 6 ಕೋಟಿ ರುಬಲ್ ನಾಣ್ಯಗಳ
ಬಂಡವಾಳವನ್ನು ಮಾಡಿದ್ದಾರೆ. ಸಾಮು
ದಾಯಕ ಪದ್ಧತಿಯಿಂದ ೫೦ ಲಕ್ಷ ಹಿಂಡು
ಪ ದನಗಳನ್ನು ಜೋಪಾನ ಮಾಡುತ್ತಿ
ದ್ದಾರೆ. ಸಾಂಘಿಕ ಒಕ್ಕಲಿತನ ಶಾಖೆ
ಯವರು ೫೦ ಲಕ್ಷ ಗೋವುಗಳನ್ನು ಸಂ
ರಕ್ಷಿಸುತಿದ್ದಾರೆ. ಈ ಪ್ರಕಾರ ರಷಿಯಾ
ದೇಶವು ಗೋರಕ್ಷಣೆಯಲ್ಲಿಯೂ ಬಹು
ಮುಂದರಿದುದರಿಂದ ಹಾಲು ತುಪ್ಪಗಳು
ಆ [illegible]ಶದಲ್ಲಿ ಯಥೇಚ್ಛವಾಗಿ ದೊರೆಯ
ತ್ತಿವೆ.

ಅಮೇರಿಕೆಯಲ್ಲಿಯು ಕೂಡಾ ೧೯೦
೦ ರಿಂದ ೧೯೨೦ ರವರೆಗೆ ಗೋವುಗಳುಳ್ಳ
ಸಾಕಿದವರು ಕೆ ಶಾಲೆಗಳಿವೆ. ಅವು
ಗಳಿಂದ ಪ್ರತಿವರುಷ ಲಕ್ಷಾಂತರ ರೂ. ಗಳ
ಆದಾಯವಾಗುತ್ತಿದೆ. ೧೯೩೪ ನೆಯ ವರ್ಷದ
ಅಮೇರಿಕೆಯಲ್ಲಿಯು ಕೃಷಿ ಶಾಖೆಗೆ
೬,೦೬,೦೭,೫೫,೦೦೦ ಡಾಲರುಗಳ ಆದಾ
ಯವಾಯಿತು! ಅಮೇರಿಕೆಯ ಒಕ್ಕಲಿ
ತನದ ಶಾಖೆಯ ಕಾರ್ಯದರ್ಶಿಗಳು ಈ
ಪ್ರಕಾರ ಹೇಳಿದ್ದಾರೆ.

"ಅಮೇರಿಕೆಯಲ್ಲುಂಟಾಗುವ ಬಂ
ಗಾರವು ಈ ದೇಶದ ಗೋವುಗಳಿಂದುಂಟಾ
ಗುವ ಸಂಪತ್ತಿಗೆ ಎಂಥೂ ಸರಿಬಾರದು."
ಎಂದ ಮೇಲೆ ಅವರು ಗೋವು ಸಂಪತ್ತಿನ
ಜನನಿಯೆಂದು, ಹೇಳುವುದು ಯುಕ್ತವಲ್ಲವೇ?

ಇಪ್ಲಿಂಗ್ಟನ್ ಎಂಬಲ್ಲಿ ಗೋವು
ಗಳ ಒಂದು ಪ್ರದರ್ಶನವು ಸೇರಿದ್ದಿತು.
ಆ ಪ್ರದರ್ಶನದಲ್ಲಿ ಹೆಚ್ಚಿನದಾದ ಲೇಡಿ
ಪರ್ಲ ಎಂಬ ಗೋವು ಪ್ರತಿನಿತ್ಯ ೩೦ ಪ
ಕ್ಕಾ ಶೇರು ಹಾಲನ್ನು ಹಿಂಡುತ್ತಿದೆ. ಇದ
ರಿಂದ ೨ ಶೇರು ಬೆಣ್ಣೆ ಬರುತ್ತಿವೆ. ಇದು
ಜರ್ಸಿ ಜಾತಿಯ ಗೋವೆಂದು ಹೇಳು
ತ್ತಿದ್ದಾರೆ.

ಭಾರತೀಯರಾದ ನಾವು ಕೂಡಾ
ಸಂಘವೂಲಕ ಗೋರಕ್ಷಣೆಯ ಕಾರ್ಯ
ವನ್ನು ಮಾಡಿದರೆ ಬಹು ಪ್ರಯೋಜನ
ವಾಗುವುದು. ಕೂಡಿ ಕೆಲಸಮಾಡುವ
ಸ್ವಭಾವವೇ ನಮ್ಮನ್ನು ಜನರಲ್ಲಿ ಬಹುಕಡಿವೆ.
ಆದುದರಿಂದ ಈ ಸಾಂಘಿಕ ಯುಗದಲ್ಲಿ
ನಮ್ಮ ಯಾವ ಉದ್ಯೋಗಗಳೂ ಜಯಪ್ರ
ದವಾಗುತ್ತಾ ಇಲ್ಲ. ಗೋರಕ್ಷಣೆಯ ಪ
ವಿತ್ರ ಕಾರ್ಯವನ್ನು ನವ ಸಾಂಪತ್ತಿಕ
ವೈಸ್ಯಿಯಿಂದ ಒಂದು ಉದ್ಯೋಗವೆಂ
ತಿಳಿದು ಸಂಘವೂಲಕ ಮಾಡಿದರೆ ಇದ
ರಲ್ಲಿಕೂಡಾ ಅಭಿವೃದ್ಧಿಯಾಗುವುದರಲ್ಲಿ ಸಂ
ದೇಹವಿಲ್ಲ.

ವಿಜಯನಗರದಲ್ಲಿಯ ಗೋರಕ್ಷಣೆ
ಯ ಕಾರ್ಯವೇ ಇದಕ್ಕೆ ಸಾಕ್ಷಿಯಾಗಿದೆ.
ಕಳೆದ ೪ ವರ್ಷಗಳಲ್ಲಿ ಈ ಗೋರಕ್ಷಣೆ
ಯ ಸಂಸ್ಥೆಗೆ ೫,೫೬,೦೦೦ ರೂ. ಗಳ ಆ
ದಾಯವಾಯಿತು. ಈ ಹಣದಲ್ಲಿ ೪,೪೭೦
ಆಕಳುಗಳನ್ನು ಕಟುಕರ ಕೈಯಿಂದ
ತಪ್ಪಿಸುವುದಕ್ಕಾಗಿಯೂ ಆ ಪ್ರಾಣಿಗಳನ್ನು
ಪೋಷಿಸುವುದಕ್ಕಾಗಿಯೂ ೩,೧೭,೦೦೦
ರೂ ಗಳು ಖರ್ಚುವಾದವು. ಈ ಆಕಳು
ಗಳಿಂದ ೧೪೩೩ ದನಗಳು ಹೆಚ್ಚಿದವು. ಈ
ವರೆಗೆ ೭೧೦ ಆಕಳು ಎತ್ತುಗಳನ್ನು ಒಕ್ಕ
ಲಿಗರಿಗೆ ಉಚಿತವಾಗಿ ಕೊಟ್ಟಿದ್ದಾರೆಯಂತೆ.
ಈ ಸಂಸ್ಥೆಯಿಂದ ಗೋರಕ್ಷಣೆಯ ಜಾಗೃ
ತಿಗಾಗಿ ಲೇಖನ, ಭಾಷಣ, ಕರ್ತವ್ಯನಿಷ್ಠೆಗಳ
ಮೂಲಕವಾಗಿ ವಿಶೇಷ ಪ್ರಯತ್ನಿಸಲ್ಪ
ಟ್ಟಿದೆ.

ಬಳ್ಳಾರಿನಗರದಲ್ಲಿ ಸರ್ಕಾರಿ ಕಾಂಗ್ರೆಸ್
ಸಮಿತಿ ಆಶ್ರಯದಲ್ಲಿ ರಿಪಬ್ಲಿಕ್ ದಿನಾಚರ
ಣೆಯೂ, ಗಾಂಧಿ ದಿನಾಚರಣೆಯೂ
ಸ್ವತಂತ್ರವಾಗಿ ೩೬ ಮತ್ತು ೩೦ ದಿನಾಂಕ
ಆಚರಿಸಲಾಗಿ ಅವುಗಳ ಮಹತ್ವವನ್ನು
ಕುರಿತು ಭಾಷಣಗಳಾದವು.

ಬಳ್ಳಾರಿ ಜಿಲ್ಲಾ
ಮುನ್ಸಿಫರ ಕೋರ್ಟಿನಲ್ಲಿ
O. S. 218/52
I. A. 502/52

ನತ್ಯಾರನುಲ್ ಜಮ್ಮಾದಾಸ್ ... ವಾದಿ
ಮತ್ತು
ಭೀಮ್ಸಾ, ಟಿಕೆಯಾ,) ಪ್ರತಿ
ವೈ. ಮಹ ಬಲೇಶ್ವರಪ್ಪ) ವಾದಿಗಳು

2 ನೇ ಪ್ರತಿವಾದಿ ಟಿಕೆಯಾ ತಂಜೆ
ಪುಲಿಯಾ ಬೆಳಗಲ್ ತಾಂಡ
ಬಳ್ಳಾರಿ ತಾಲೂಕು ಇವರಿಗೆ

ನೀವು ತಾರಿಸಿದ I. A. 502/52
ಪ್ರಕಾರಕ್ಕೆ ನಿಮ್ಮ ಹಾಜರಿಗಾಗಿ
9-2-53 ನೇ ಮಂಗಳವಾರ ಬೆಳಿಗ್ಗೆ ೧೦ ಗಂಟೆಗೆ ಮುಂಚೆ ವಕೀಲರ
ಮೂಲಕವಾಗಲಿ ಹಾಜರಾಗದಿದ್ದರೆ
ನಿಮ್ಮನ್ನು ಎಕ್ಸಪಾರ್ಟಿಮೂಡಿ ದಾವೆಯು
ಮುಂದೆ ಸಾಗುವುದು.

ಬಿ. ವಿ. ರಾಮಕೃಷ್ಣರಾವ್,
ವಾದಿಯ ಅಡ್ವೊಕೇಟು.

ಪ್ರಜಾಭಿಪ್ರಾಯದ ಸ್ವರೂಪ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಕೈಗಾರಿಕೆಯಲ್ಲಿ ಮೂಡಿದ ಕ್ರಾಂತಿ ಪಟ್ಟಣಗಳನ್ನೂ ನಗರಗಳನ್ನೂ ಹೆಚ್ಚಾಗಿ ಸೃಷ್ಟಿಸಿತು. ಯಂತ್ರಯುಗ ಉದಯವಾಯಿತು. ಹಳ್ಳಿಯ ಬಾಳು ನಿಸ್ಸತ್ವ ವಾಯಿತು. ಜನ, ಜೀವನ ಸಂಗ್ರಾಮದಲ್ಲಿ ಮುಳುಗಿತು. ಹೊಟ್ಟೆಪಾಡಿಗಾಗಿ ಬಹು ಸಂಖ್ಯೆಯಲ್ಲಿ ಜನ, ಪಟ್ಟಣಗಳಲ್ಲಿ ಮೆತ್ತು ನಗರಗಳಲ್ಲಿ ತುಂಬುತ್ತ ಬಂತು. ಜನಸಂದಣಿ ಅಧಿಕಗೊಂಡಂತೆ ಪರಸ್ಪರ ಬಳಕೆಯೂ ಹೆಚ್ಚಿತು. ಅಭಿಪ್ರಾಯ ವಿನಿಮಯ. ಪ್ರಸಾರಗಳೂ ಹೊಸಬಿಟ್ಟುವು. ಕ್ರೈಸ್ತಧರ್ಮ ಸುಧಾರಣೆ (Reformation) ಪ್ಯಾಟ್ಸೆಂಟ್ ಧರ್ಮಗ್ರಂಥದ ಉದಯವಾಯಿತು. ಇವೆಲ್ಲ ನೂತನ ಚೈತನ್ಯವಾಗಿ ಯುರೋಪಿನಲ್ಲಿ ರಾಷ್ಟ್ರೀಯ ಮನೋಭಾವನೆಯೂ (Nationalism) ವಿಮರ್ಶಾಸಿದ್ಧ ಬುದ್ಧಿಯೂ (Rationalism) ಮೂಡಿದವು ಇವನ್ನು ನೆಪಮಾಡಿದ ಜನಾಭಿಪ್ರಾಯವೂ ರೂಪುಗೊಂಡು ಶಕ್ತಿಯುತವಾಗಿ ಪರಿಣಮಿಸಿತು

೧೬ ನೆಯ ಮತ್ತು ೧೭ ನೇ ಶತಮಾನಗಳಲ್ಲಿ ಪ್ರಪಂಚದ ನಾನಾ ಎಡೆಗಳಲ್ಲಿ ಧಾರ್ಮಿಕ ಸ್ವಾತಂತ್ರ್ಯಕ್ಕೊಸ್ಕರ ಅಭಿಪ್ರಾಯ ಸ್ಥೈರ್ಯ ತೃಷ್ಣೆಗೊಸ್ಕರ ಜನಹೋರಾಟದ ಪರಿಣಾಮವಾಗಿ ೧೮ ನೇ ಶತಮಾನದಲ್ಲಿ ಸ್ವಜಾಪ್ರಭುತ್ವದ ಉದಯವಾಯಿತು. ನೂತನವಾದ ಪದ್ಧತಿ ಹಾಗೂ ಪ್ರಾಬಲ್ಯಯ ಸ್ಥಿರ ಸುತಾಧಿಕಾರ. ಬಿತ್ತಿಯಿಲ್ಲದ ಪ್ರಾಥಮಿಕ ಶಿಕ್ಷಣ, ಸಂಚಾರ ಸಮಾಚಾರ ಸೌಕರ್ಯ, ವೃತ್ತಪತ್ರಿಕಾ ಪ್ರಚಾರ, ಇವೆಲ್ಲಾ ಜನಾಭಿಪ್ರಾಯ ರೂಢಿಸುವ ವಿವಿಧ ವಾಹನಗಳಾದವು.

ನಾವಿಂದು ನಿಜ್ಞಾತಿಯಾಗಿದ ಜೀವಿಗಳು. ವಿಶ್ವದ ಮಾನವ ಜಾತಿಯನ್ನು ಒಂದಾಗಿಸುವ ವಿಜ್ಞಾನಸಾಧನೆಗಳೆಷ್ಟೋ ಮುಂದಾಗಿವೆ. ಈ ಯುಗದಲ್ಲಿ. ಕಾಲ ಮತ್ತು ದೂರಗಳ ಅಂತರಗಳನ್ನು ಏಯ್ದಿಸುವ ಟೆಲಿಫ್ರಾಫ್, ಟೆಲಿಫೋನ್, ರೇಡಿಯೋ, ರೈಲು, ಜಲಯಾನ, ವಿಮಾನ ಮೊದಲಾದವು ಅಭಿಪ್ರಾಯ ಸಿದ್ಧೀಕರಣಕ್ಕೊ, ಅದರ ವಿನಿಮಯಕ್ಕೊ, ಪ್ರಸಾರಕ್ಕೊ ಅತ್ಯಮೂಲ್ಯ ಸಾಧನಗಳಾಗಿವೆ ಇವುಗಳ ಜೊತೆಗೆ ಎಂದಿನಂತೆಯೇ ಪರೋಕ್ಷ ಉಪನ್ಯಾಸ ವೇದಿಕೆಗಳೂ ಜನಾಭಿಪ್ರಾಯವನ್ನು ರೂಪಿಸುವ ಮತ್ತು ಪ್ರಕ್ಷುಬ್ಧ ಮನಸ್ಸಿನ ಕೇಂದ್ರಗಳಾಗಿ ಉಳಿದಿವೆ ಇಂತು ಇಂದು ಹರಡಿತ್ತ ಒರುತ್ತಿದೆ.

ಈ ಯುಗ ಸ್ಥಿತ ಪ್ರಭುತ್ವದ ಯುಗವಲ್ಲ. ವ್ಯಕ್ತಿಯ ಪೂರ್ಣಾಸಕ್ತ ಪ್ರಜಾಸಾರ್ವಭೌತ್ವದ ಸಾಧನಸ್ಥ. ರಾಷ್ಟ್ರದ ಒಡೆತನ ಆಡಳಿತ ಪ್ರಜಾಪರ್ಯಂತಕ್ಕೆ ಬಿಟ್ಟಿಗಿ. ಅಖಂಡವಾಗಿ, ಅಭಿನ್ನವಾಗಿ ಸೇರಿದ್ದು ತನ್ನ ದೇಶಕ್ಕೆ ಜೀವಕಾರುಣ್ಯ ತರುವ, ತನ್ನನ್ನು ಸಾಧಿಸುವ ಬಗೆ ಯೇಗೆ. ಯಾರು ಕೈಯಲ್ಲಿ ಸರ್ವಾಧಿಕಾರದ ಆಡಳಿತ ಸೂತ್ರವಿರಲೀಕ. ಎಂಬಂಥದನ್ನು ಗ್ರಹಿಸಿ ಪ್ರಜೆಯೂ ಮುಖ್ಯ ಸಿ, ಮಾನಸಿಕವಾಗಿ, ನಾಡಕೂಡಿ. ತನ್ನ ದೇ ಆದ ಒಂದು ವೈಶಿಷ್ಟ್ಯವನ್ನು, ಒಂದು ಅಭಿಪ್ರಾಯವನ್ನ, ರೂಪಿಸಿಕೊಳ್ಳಬೇಕಾದದ್ದು ಅವನ ಕರ್ತವ್ಯ. ಈ ಗೆಯಲ್ಲಿ ಪ್ರಜಾಸರ್ಕಾರ ಸ್ಥಿಪನಾ ಜಿಜ್ಞಾಸೆ ನಾಡಿ ತನ್ನ ರಿಣಾಮವಾಗಿ ಹೊರ ಹೊಮ್ಮಿದ ಅಭಿಪ್ರಾಯವೇ ಜನ ವರ್ಗದ ಅಭಿಪ್ರಾಯ ಅದೇ ನಿಜವಾದ ಜನಾಭಿಪ್ರಾಯ ಹೀಗಿರಬೇಕಾದರೆ ನ್ಯಾಯ, ಧರ್ಮ. ಆದಿ ಇದು ತತ್ವವಾತು. ವಿಚಾರ ಪೆಯಲ್ಲಿ ಕಾರ್ಯ ಇಂತಿಲ್ಲ.

ಸಭೆಯಲ್ಲಿ ಜನಾಭಿಪ್ರಾಯ ಈ ಬಗೆಯಲ್ಲಿ ಹುಟ್ಟಿ, ನಡೆದು ಬಂದೀ ಅಥವಾ ಸಮುದಾಯದೇ? ಎಲ್ಲಿ ಒಂದು ಜನಸಾರ್ವಜನಿಕ ಜಿಜ್ಞಾಸೆ ಾದಲು ಬಯಸುವುದೇ ಇಲ್ಲಿ ಜನರಿಗೆ ಸಮಸ್ಯೆ ಇಲ್ಲ. ವೇಳೆಯೂ ಇಲ್ಲ. ಆಚ್ಛಾದಿಸುವ ಲೋ. ಔಪಾಧ್ಯಾಯರಿಂದಲೋ, ಅಥವಾ ಪತ್ರಿಕೆಯಿಂದಲೋ, ಆಧಿಪತ್ಯ ಸಾಮ್ರಾಜ್ಯಧರ್ಮಗಳಿಂದಲೋ, ಜನಯೋಚಿಸಲಿಚ್ಛಿಸುವುದು ಅತಿ ವಿರಳ. ಹಾಗೆ ಒಂದು ವೇಳೆ ಯೋಚಿಸಿದರೂ, ತಿಳಿದುದನ್ನು ಧೈರ್ಯವಾಗಿ ಹೇಳುವ ದಿಟ್ಟತನ ತಾನೇ ಎಲ್ಲಿಂದ ಬಂತು? ಆರ್ಥಿಕ ಅವಲಂಬನತೆ ಅಧೀನತೆಗಳಲ್ಲಿ ಒಳಲುತ್ತಿರುವಾಗ, ಕೊಳಲುತ್ತಿರುವ ದೌರ್ಬಲ್ಯವಾವ ಬಗೆಯಲ್ಲಿ ಜನತೆ ತನ್ನ ಪೂರ್ಣ ವ್ಯಕ್ತಿತ್ವವನ್ನ ಉಳಿಸಿಕೊಂಡು ತಲೆಯೆತ್ತಿ ನಿಲ್ಲಲಾದೀತು?

ಜನಾಭಿಪ್ರಾಯ ನೈಜರೀತಿಯಲ್ಲಿ ಮೊಳೆತು ವ್ಯಕ್ತವಾಗದಿರಲು ಇನ್ನೂ ಅನೇಕ ಕಾರಣಗಳಿವೆ ವ್ಯಕ್ತಿ ಸಾಮಾನ್ಯನಲ್ಲಿ ಮೂಡುವ ಅಭಿಪ್ರಾಯ ಅನೇಕ ಪ್ರಭಾವಗಳ ಪರಿಣಾಮ. ಅತಿ ತೀಕ್ಷ್ಣ ಮಟ್ಟ ಮನಸ್ಸಿನ ರಕ್ತಿ, ಸಂಬಳ, ಸಾಮಾಜಿಕ ಆರ್ಥಿಕ ಧಾರ್ಮಿಕ ಒತ್ತಾಯಗಳ ದೃಷ್ಟಿ, ಇವುಗಳ ಪ್ರಭಾವಕ್ಕನುಗುಣವಾದ ಒಂದು ಭಾವನೆ ವ್ಯಕ್ತಿಯ ಮನಸ್ಸಿನಲ್ಲಿ ಪೂರ್ವಭಾವಿಯಾಗಿಯೇ ಒಂದು ವಿಷಯವನ್ನಲ್ಲಿ ಮೂಡುವುದೇನೂ ಅಚ್ಚರಿಯಲ್ಲ. ಅಂದರೆ ವ್ಯಕ್ತಿಯ ಮನಸ್ಸಿಗೆ ನಾಟಿಸುವ ಮುನ್ನ ಹೊಸಯುವ ಎಣಿಕೆ ಸಚಿತ ಸೂಚನೆಯಲ್ಲ. ವಿಮರ್ಶ ನಿಸ್ಪಷ್ಟ ಉದಾಹರಣೆಗೆ, ಭಾರತ ತನ್ನ ಆರ್ಥಿಕ ನೈಪಾದನೆಗೊಂಡಿನ ಮೌಲ್ಯದ ಕಾರ್ಯಾಯಿಸಿ ಸಂತೆಗಾಗಿಯಾದ ಸಿಪಾಯಿ ಪರಿಯನ್ನಸಿಕರಿಸಿತ್ತೆ. ಇಂಬು. ಸಂತೆಯ ವಿಷಯದಲ್ಲಿ ಪ್ರಜಾ ಭಿಪ್ರಾಯ ಮೂಡಿಬಿಡಬೇಕಾದರೆ ಈ ಅಂಶವನ್ನು ಕುರಿತ ವ್ಯಕ್ತಿಯ ಮನಸ್ಸಿನಲ್ಲಿ ಒಂದು ಭಾವನೆ ಅದು ಈ ಗಣಿಯ ಸಿಪಾಯಿಗೆ ಜಾಗ ಸಾಲದು ಅಧಿಕ ಏರೋಪ ಇರಬಹುದು. ತಪ್ಪಿರಬಹುದು. ಇದು ಸಹಾಯದಿಂದ ವಿನಯಸಿದ ಎಣಿಕೆಯಲ್ಲ. ಮನಸ್ಸಿನಲ್ಲಿ ಹೊಳೆದ ಒಂದು ಇಂಗಿತ. ಈ ಅಂಶವನ್ನು ಕುರಿತು ಭಾಷಣಗಳು ಪತ್ರಿಕೆಗಳು ಹೊರಬಿದ್ದವು. ಅನೇಕ ವ್ಯಕ್ತಿಗಳಿಗೂ ಮಾಹಿತಿಗಳನ್ನೂ ಸಮರ್ಪಿಸಿಮಾಡಿದವು. ಆಸಕ್ತಿಯಿದ್ದ ಅನೇಕರು ಇವುಗಳನ್ನೆಲ್ಲಾ ಓದಿದರೆ. ಆದರೆ ಮನಸ್ಸಿನಲ್ಲಿ ಭದ್ರವಾದ ಹಣ ವಿಸಿಯು ವಿಷಯವಾಗಿ ಒಂದು ಅಭಿಪ್ರಾಯ ಸ್ಫಟಿಕಿಸಲಿಲ್ಲ. ಇಂಥ ವ್ಯಕ್ತಗೊಂಡ ಅಭಿಪ್ರಾಯ ನೈಜವಾದ ಅಭಿಪ್ರಾಯವಲ್ಲ. ಏಕೆಂದರೆ, ಸರಿಯಾದ ಆಲೋಚನೆಯಿಂದ ಮತ್ತು ವಿಮರ್ಶೆಯಿಂದ ಈ ಅಭಿಪ್ರಾಯವನ್ನು ಪಡೆದುಕೊಂಡಿಲ್ಲ.

ಸಾಮಾನ್ಯ ವ್ಯಕ್ತಿಯಲ್ಲಿರುವ ಒಂದು ಸಂಕುಚಿತ ಸ್ವಭಾವವೆಂದರೆ ಒಂದು ವಿಷಯದಲ್ಲಿ ತನ್ನ ಮನಸ್ಸಿನಲ್ಲಿ ಸೊಳೆದ ಭಾವನೆಯೇ ಸರಿಯಾದುದೆಂದು ತಿಳಿಯುವುದು. ಅವನು ಮನನ ಮಾಡುವ ಅಂಶಗಳೂ ಹುಡುಕುವ ಸಾಕ್ಷಿಯೂ ಪೊಳ್ಳು, ಜಾಣ ಪೂರ್ಣವಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ತಾನು ಬುದ್ಧಿಗೆ ಅನುಗುಣವಾಗಿ, ತನ್ನ ಸಮಾಜಕ್ಕೆ ಸೇರವಾಗಿ, ನೋಡುವುದು ಸಹಜವಾಗಿದೆ. ಒಳಹೊಕ್ಕು ವಿಮರ್ಶಿಸಿ, ವಿಚಾರಿಸಿ, ಒಂದು ತೀರ್ಮಾನಕ್ಕೆ ಬರುವಷ್ಟು ತಾಳ್ಮೆಯೂ ಇಲ್ಲ. ವೇಳೆಯೂ ಇಲ್ಲ, ಗಸ್ತಿಯೂ ಇಲ್ಲ ಜನಕ್ಕೆ.

ರಾಜಕೀಯ ಸಮಸ್ಯೆಯೊಂದೇ ಅಲ್ಲ ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲೂ ಜನಾಭಿಪ್ರಾಯದ ಹಣೆಬರಹ ಇಷ್ಟೆ. ಅಸೂಚೀನವಾಗಿ ಬಂದುದಕ್ಕೆ ವರದಾನ ಕೊಡುವ ಮನೋಭಾವ ಜನರ ಪ್ರಗತಿಮಾರ್ಗದಲ್ಲಿರುವ ಒಂದು ಅಡಚಣೆ. ಈ ಅಡ್ಡ ಗೋಡೆಯು ಳಗಾವೆ ಅಯುಧ ಜ್ಞಾನೆಗೆ. ಅಂತೆ ಜನ ಸಾಮಾನ್ಯರಲ್ಲಿ ಕುರಿತ ಒಂದು ಮಿಥ್ಯೆ.

ಬಳ್ಳಾರಿ-ಗೃಹೋದ್ಯೋಗ, ಕಲೆ ಮತ್ತು ವ್ಯವಸಾಯ ಪ್ರದರ್ಶನ 1953

[ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿ ಆಶ್ರಯದಲ್ಲಿ]

15-2-53 ರಿಂದ 22-2-53 ರವರಿಗೆ

ಸ್ಥಳ:— ಬಳ್ಳಾರಿ ಜಿಲ್ಲಾ ಅಥೆಲಿಟಿಕ್ ಅಸೋಸಿಯೇಷನ್ ಗ್ರೌಂಡ್ಸ್
ವ್ಯಾಪಾರಿಗಳು ಸ್ಟಾಲುಗಳನ್ನು ತೆಗೆದುಕೊಳ್ಳಲು ಅಮೂಲ್ಯಾವಕಾಶ.
ವಿವರಣ ಪಟ್ಟಿ, ಸ್ಟಾಲುಗಳಿಗಾಗಿ ಅರ್ಜಿ ವಗೈರೆ ಮಾಹಿತಿಗಾಗಿ ಈ ಕೆಳಗಿನವರಿಗೆ ಬರೆಯಿರಿ.

ಸೆಕ್ರಟರಿ,
ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡ್
ಬಳ್ಳಾರಿ.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ
ಇಂದೇ ಚಂದಾದಾರರಾಗಿರಿ.
ಮುಖ್ಯ ಸಂಪಾದಿಕೆಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.
ಪ್ರಕಾಶಕರು :— ಶ್ರೀ ಬಿ. ನಾ. ಬೈಚವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ.
ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ
ಪ್ರತಿಯೊಬ್ಬರೂ ಓದಬೇಕಾದುದು.
ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
,, ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ
ಮನೆಮನೆಯಲ್ಲೂ ಸುಖಸಂತೋಷಗಳನ್ನು ಬೀರಬಲ್ಲ
ಕನ್ನಡ ಮಾಸಪತ್ರಿಕೆ!

ಸಕ್ಕರೆ—ಬೆಲ್ಲ

ಸಕ್ಕರೆ, ಬೆಲ್ಲಗಳ ಧಾರಣೆ ಹೆಚ್ಚಿಸಿದ ಕಾರಣ ಅವುಗಳನ್ನು ಪರದೇಶದಿಂದ ಹೊರಕ್ಕೆ ಕಳುಹಿಸಬಾರದೆಂದು ಭಾರತ ಸರ್ಕಾರವು ಆಜ್ಞೆ ಹೊರಡಿಸಿದೆ.

ನಾಂಥೂನರವರ

ಆಂಧ್ರಪ್ರಾಂತ ನಿರ್ಮಾಣವನ್ನು ಕುರಿತು ನ್ಯಾಯಮೂರ್ತಿ ನಾಂಥೂರವರು ಫೆಬ್ರವರಿ 10 ರೊಳಗಾಗಿ ತಮ್ಮ ವರದಿಯನ್ನು ಭಾರತ ಸರ್ಕಾರಕ್ಕೆ ಅರ್ಪಿಸಲಿರುವರೆಂದು ಖಚಿತವಾಗಿ ಗೊತ್ತಾಗಿದೆ.

ಹಾಲ್ಟಿ (ಆದವಾನಿ)

ಇಲ್ಲಿ ಪ್ರಜಾತಂತ್ರ ಯಾ ರಿಪಬ್ಲಿಕ್ ದಿನೋತ್ಸವವು ವೈಭವವಾಗಿ ಜರುಗಿಸಲ್ಪಟ್ಟಿತು. ಪ್ರಭಾತಫೇರಿಯನಂತರ ಶ್ರೀ ಶಾಲೆ ಪರಮೇಶ್ವರಪ್ಪ ಎಂ. ಎಲ್. ಎ ಇವರಧ್ಯಕ್ಷತೆಯಲ್ಲಿ ಸಭೆಯು ಸಮಾನೇ ಶವಾಗಿತ್ತು. ಲೇಬರ್ ಶಾಲೋಪಾಧ್ಯಾಯರಾದ ಶ್ರೀ ಶಾಸ್ತ್ರಿಯವರು ತೆಲ ಇನ್ಸ್. ಪ್ರೊಹಿಬಿಷನ್ ಇನ್ಸ್, ದಿನಾಚರಣೆಯ ಮಹತ್ವ ಕುರಿತು ಮಾತಾಡಿ ಜನತೆಯ ಬೆಂಬಲ ಕೋರಿದರು. ಶ್ರೀ ಪರಮೇಶ್ವರಪ್ಪನವರು ಪಂಚವರ್ಷ ಪ್ರಣಾಳಿಕೆ, ಗ್ರಾಮದ ಶಾಲಾಭಿವೃದ್ಧಿ ವಗೈರೆ ರಾಷ್ಟ್ರ ಹಿತಕಾರ್ಯಗಳನ್ನು ಕುರಿತು ಸವಿಸ್ತಾರಹೇಳಿದನಂತರ ಶ್ರೀ ನಾಯಕರ ರಾಮಲಿಂಗಪ್ಪನವರಕಡೆಯಿಂದ ಬಾಲಬಾಲಕಿಯರಿಗೆ ಮಿಠಾಯಿ ಹಂಚಲ್ಪಟ್ಟು ಸಭೆಯು ಅಂತವಾಯಿತು. ಎಂದು ಈ ಕಾರ್ಯಕ್ರಮಗಳೆಲ್ಲೆಲ್ಲ ಉತ್ಸಾಹದಿಂದ ಭಾಗವಹಿಸಿದ ಶ್ರೀ ಕೆ ಬಿ ನರಸಪ್ಪನವರು ತಿಳಿಸುತ್ತಾರೆ.

NAVA BHARAT, BELLARY. (Regd. M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
೬ ತಿಂಗಳಿಗೆ ೩—೮—೦	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be acceptd for les than 6 months.

To

Srinan

2-2-53

Edited Printed & Published by T. B. Keshava Rao,—at Nava Bharath Press, Bellary.

The Bellary Cottage Industries Arts And Agricultural Exhibition, 1953.

(Under the auspices of the District Planning Board, Bellary)

COMMENCES FROM 15-2-53

at the Bellary District Athletic Association grounds

A RARE OPPORTUNITY !!

To business men for taking up stalls.

For Prospectus, appliction forms for opening of stalls and for other particulars, Plase apply to The secretary.

District Planning Board Bellary.

ಬಳ್ಳಾರಿ-ಗೃಹೋದ್ಯೋಗ, ಕಲೆ ಮತ್ತು ವ್ಯವಸಾಯ ಪ್ರದರ್ಶನ 1953

[ಬಳ್ಳಾರಿ ಜಿಲ್ಲಾ ಯೋಜನಾ ಸಮಿತಿ ಆಶ್ರಯದಲ್ಲಿ]

15-2-53 ರಿಂದ 22-2-53 ರವರೆಗೆ

ಸ್ಥಳ:- ಬಳ್ಳಾರಿ ಜಿಲ್ಲಾ ಆಥೆಲಿಟಿಕ್ ಅಸೋಸಿಯೇಷನ್ ಗ್ರೌಂಡ್ಸ್

ವ್ಯಾಪಾರಿಗಳು ಸ್ಟಾಲುಗಳನ್ನು ಕೆಗೆದುಕೊಳ್ಳಲು ಅಮೂಲ್ಯಾವಕಾಶ.

ವಿವರಣ ಪಟ್ಟಿ, ಸ್ಟಾಲುಗಳಿಗಾಗಿ ಅರ್ಜಿ ವಗೈರೆ ಮಾಹಿತಿಗಾಗಿ ಈ ಕೆಳಗಿನವರಿಗೆ ಬರೆಯಿರಿ.

ಸೆಕ್ರಟರಿ,
ಡಿಸ್ಟ್ರಿಕ್ಟ್ ಪ್ಲಾನಿಂಗ್ ಬೋರ್ಡು
ಬಳ್ಳಾರಿ.

Matinee at "PRABHATH"

11th & 12th Feb'53 "COVER GIRL" in Techni Color

13th, 14th & 15th "THE LION AND THE HORSE"

Opening on 12—2—53

"BEWAFA" (Hindi)

[Nargis, Raja Kapur, Ashok Kumar]

NAVA BHARAT, BELLARY. (Regd. M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0 | One Year 6—0—0

ಆರು ತಿಂಗಳಿಗೆ 3—8—0 | Six months 3—8—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ. | Subscription will not be acceptd for les than 6 months.

To 9-2-53

Sruman

Edited Printed & Published by T. B. Keshava Rao, at Nava Bharath Press, Bellary.

ಬಳ್ಳಾರಿ ಸಬ್‌ಲಕಾಸಸ ಕೋರ್ಟಿನಲ್ಲಿ

S. C. 462/52

ವಾದಿ:- ಗೋವರ್ಧನ ಕನ್ಯಾಲಾಲ
ಬಳ್ಳಾರಿ

ಪ್ರತಿವಾದಿ

ಮುರಸ್ತ ಈಶ್ವರಪ್ಪ] ಬೆಣಕಲ್ಲು
ತಂದೆ ನಾಗಪ್ಪ] ಬಳ್ಳಾರಿ ತಾಲೂಕು

ನೋಟೀಸು

ಪ್ರತಿವಾದಿಯು--ವಾದಿಯಿಂದ ಪ್ರಾಮಿಸರಿ ನೋಟಿನ ಮೂಲಕ 245 ರೂ. ಹಣ ಪಡೆದಿದ್ದನ್ನು – ಅಸಲು – ಬಡ್ಡಿಗಳ ಸಮೇತ ವಾಪಸು ಪಡೆಯಲು--ವಾದಿಯು ದಾವಾ ಮಾಡಿದ್ದಾನೆ. ಅದರ ವಾಯ್ದೆಯು 11-2-1953ಕ್ಕೆ ಇದೆ.

ಆ ದಿನ ಪ್ರತಿವಾದಿಯು ಖುದ್ದಾಗಲಿ--ವಕೀಲರ ಮೂಲಕವಾಗಲಿ ಮೇಲ್ಕಾಣಿಸಿದ ಕೋರ್ಟಿಗೆ ಹಾಜರಾಗಿ ತನ್ನ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ಏಕಪಕ್ಷ ನಿರ್ಣಯವಾಗುವುದೆಂದು ಈ ಮೂಲಕ ತಿಳಿಸೋಣವಾಗಿದೆ.

ಕೋಲಾರ ರಾಮುರಾವ್
H. ಮಲ್ಲಿಕಾರ್ಜುನಗೌಡ
ವಾದಿಯ-- ಆಡ್ವೋಕೇಟ್ಸ್.

ಕುರುಗೋಡು ಫಿರ್ಕಾದಲ್ಲಿ ದುಸ್ಥಿತಿ

ಕುರುಗೋಡು ಫಿರ್ಕಾ ವ್ಯವಸಾಯ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಮರಿ ಬಸವನಗೌಡರು ಈ ಕೆಳಕಂಡ ಹೇಳಿಕೆ ವೃತ್ತಪತ್ರಿಕೆಗಳಿಗೆ ಕೊಟ್ಟಿದ್ದಾರೆ.

ಮುಂಗಾರಿ ಬಿತ್ತನೆಗೆ ಅನುಕೂಲವಾಗಿ ಮಳೆ ಬಂದೂ ಅವೆಷ್ಟು ದಿನಗಳಿವೆ. ಸಲಗಡಲಿ – ಮುಂಗಾರಿಹತ್ತಿಕೂಡ ಎರಡಾಣೆ-ಚಿಲ್ಲರೆಯಾಗಿದ್ದು, ಬಿತ್ತನೆಯಾದ ನಂತರ ಪೂರ್ಣವಾಗಿ ಕಳೆದ 4½ ತಿಂಗಳಿಂದ ಮಳೆಯೇ ಇಲ್ಲದೆ – ಮುಂಗಾರಿ ಬೈದಿಲ್ಲಾ ಕೆಟ್ಟುಹೋಯಿತು.

ಸೆಪ್ಟಂಬರ್ ಅಂತ್ಯ ಕೊನೆಯ ವಾದದಲ್ಲಿ ಒಂಗಾರಿ ಮಳೆಯ ಲಕ್ಷಣ ಕಾಣಿಸಿಕೊಂಡಿತಾಗಲಿ – ಸಮಾನವಾದ ಮತ್ತು ಸಾಕಷ್ಟಾದ ಮಳೆ ಎಲ್ಲಾ ಕಡೆ ಬೀಳಲಿಲ್ಲ. ಅದರೂ ಸ್ವಲ್ಪ ಹೆಚ್ಚಿಗೇ ರೈತರು ಬಿಳಿಜೋಳ ಬಿತ್ತಿದರು. ಮತ್ತು ಮುಂದೆ ಮಳೆ ಬರುವುದಲ್ಲಾ ಎಂಬ ಆಶೆಯಿಂದಲೇ ರೈತರು ಕೂತರು. ಹೆಚ್ಚುಭಾಗದಲ್ಲಿ ಹಿಂಗಾರಿ ಜೋಳದ ಬಿತ್ತನೆಯಾಗಿದ್ದರೂ--ಗಿಡ ಅಥವಾ 1½ ಅಡಿಗಿಂತ ಹೆಚ್ಚು ಬೆಳೆದಿಲ್ಲ. ಹಳ್ಳಿಗಳ ತಗ್ಗು ಪ್ರದೇಶಗಳಲ್ಲಿ ಮಾತ್ರ ½ ರಿಂದ ಳ ಅಣೆ ಬೆಳೆಯಬಹುದು.

ಈ ರೀತಿಯಲ್ಲಿ ಮುಂಗಾರಿಯ ಪೂರ್ಣ ನಾಶ--ಹಿಂಗಾರಿಯ ಮುಕ್ಕಾಲು ನಾಶದಿಂದ ರೈತರ ಪರಿಸ್ಥಿತಿಯು ಕರುಣಾಜನಕವಾಗಿ ತನ್ನ ಜೀವನಕ್ಕಾಗಿ ಅನೇಕ ರೈತರು ಊರುಬಿಟ್ಟು ಹೋಗಿದ್ದಾರೆ--ಜಿಲ್ಲಾಧಿಕಾರಿಗಳು ನಮ್ಮ ಫಿರ್ಕಾದಲ್ಲಿ ಸಂಚರಿಸಿ ಜನರ ನಿಜಪರಿಸ್ಥಿತಿಯರಿತು ವರದಿಮಾಡಬೇಕು. ಅಲ್ಲಿಪುರ-ಕೊಳಗಲ್ಲು-ತೀಗರಗಡ್ಡ ನೋಮನಮುದ್ರ--ಯರಂಗಳಿ--ಬಾದನಹಟ್ಟಿ-ಗುತ್ತಿಗನೂರು - ಯಮ್ಮಿಗನೂರು ಕುರುಗೋಡು--ವಡ್ಡಹಟ್ಟಿ--ಬಿಸಿನಹಳ್ಳಿ-ಬೂದಗುಂಪ ಈ ೧೨ ಗ್ರಾಮಗಳಲ್ಲಿ ಹೆಚ್ಚಿನ ದುಸ್ಥಿತಿಯಿದೆ.

ಕಲೆಕ್ಟರರು ತೀವ್ರಚರ್ಯೆ ತೆಗೆದುಕೊಂಡು ಸರ್ಕಾರಿ ಹಣದ ಸಹಾಯ ಮುಂದಕ್ಕೆ ಹಾಕಬೇಕು. ಪೂರ್ಣರಿಪೇರ್ಸಿಗೆ ಸಿಫಾರಸ್ ಮಾಡಬೇಕು. ರಸ್ತೆ ಕಾಮಗಾರಿ ಪ್ರಾರಂಭಮಾಡಿ ರೈತರಿಗೂ ಕೂಲಿಕಾರರಿಗೂ ಉದ್ಯೋಗ ಕೊಡಿಸಬೇಕು.

ಕಾಂಗ್ರೆಸ್ಸಿನ ಶುದ್ಧೀಕರಣ

ಇತ್ತೀಚೆಗೆ ಕಾಂಗ್ರೆಸ ಸಂಸ್ಥೆಯ ಶುದ್ಧೀಕರಣದ ಮಾತು ಅಲ್ಲಲ್ಲಿ ಕೇಳಬರಹತ್ತಿದೆ. ಕಾಂಗ್ರೆಸ್ಸು ಅಧಿಕಾರ ಸೂತ್ರವಹಿಸಿದಂದಿನಿಂದ ದೇಶದಲ್ಲಿದ್ದ ಕೊಳೆಯ ಒಹುಭಾಗವು ಈಗ ಕಾಂಗ್ರೆಸ್ಸಿನಲ್ಲಿ ನುಸುಳಿಕೊಂಡಿರುವದು ಸರ್ವತ್ರತಿಳಿದೆ. ಅದರ ಪರಿಣಾಮವು ಹಲವೆಡೆಗಳಲ್ಲಿ ಈಗಾಗಲೇ ಹೊರಬಿದ್ದಿದೆ. ಆದರೆ ಹಾಗೆ ಹೊರಬೀಳದ ಸ್ಥಳಗಳಲ್ಲಿ ಎಲ್ಲವೂ ಸರಿಯಿದೆಯೆಂದು ತಿಳಿಯುವದು ಮಾತ್ರ ಶುದ್ಧ ತಪ್ಪಾಗುವದು. ಕಾಂಗ್ರೆಸ ಕಾರ್ಯಕರ್ತರಲ್ಲಿಯೇ ಇಬ್ಬಣಕಾಗಿ ಎರಡೂ ಪಕ್ಷಗಳು ಸಮಬಲವಿದ್ದರೆ ಅಲ್ಲಿ ಘರ್ಷಣೆಯುಂಟಾಗುವದು. ಅದರಲ್ಲಿಯು ತತ್ವಗಳನ್ನೂ ನೀತಿ ನಿಬಂಧನೆಗಳನ್ನೂ ಮೂಲೆಗೊತ್ತಿ ಕೇವಲ ಅಧಿಕಾರಕ್ಕಾಗಿ ಹೋರಾಡುವವರಿದ್ದರೆ ಅಲ್ಲಿ ಪರಸ್ಪರ ತಿಕ್ಕಾಟವುಂಟಾಗುವದು ಸ್ವಾಭಾವಿಕ. ಆದರೆ ಇಂದಿನ ವರೆಗೆ ನಿಷ್ಠಾವಂತ ಬುದ್ಧಿಯಿಂದ ದುಡಿಯುತ್ತ ಬಂದವರು ಘರ್ಷಣೆಯ ಚಿನ್ಹೆಗಳು ಕಂಡುಬಂದ ಕೂಡಲೇ ಬದಿಗೆ ಸರಿದು ನಿಲ್ಲುವದರಿಂದ ಅಲ್ಲಲ್ಲಿ ಘರ್ಷಣೆಯುಂಟಾಗಲಿಕ್ಕಿಲ್ಲ. ಆದರೆ ಅಲ್ಲಿ ಎಲ್ಲವೂ ಸುಸೂತ್ರವಾಗಿ ಸಾಗಿದೆಯೆಂದು ಮಾತ್ರ ಹೇಳಲಿಕ್ಕಾಗುವದಿಲ್ಲ. ಈ ತರಹದ ಪರಿಸ್ಥಿತಿಯು ಇಂದು ಬಹುಶಃ ಎಲ್ಲ ಪ್ರದೇಶಗಳಲ್ಲಿಯೂ ಇದೆ.

ಅದರಲ್ಲಿಯೂ ಅಧಿಕಾರದಲ್ಲಿ ಬಂದವರು ಕಾಂಗ್ರೆಸ್ಸಿನ ಹೆಸರಿನಲ್ಲಿಯೇ ಅನೇಕ ಅವ್ಯಾಪಾರಗಳನ್ನು ನಡೆಸುತ್ತಿರುವದರಿಂದ ಅಂಥವರ ಕೃತಿಗಳ ಮೂಲಕ ಕಾಂಗ್ರೆಸ್ ಸಂಸ್ಥೆಯ ಹೆಸರಿಗೆ ಧಕ್ಕೆ ತಗಲುತ್ತಿದೆ. ಇದು ಹೀಗೇ ನಡೆದರೆ ಇನ್ನು ಅಲ್ಪಾವಧಿಯಲ್ಲಿ ಜನತೆಯ ಮೇಲಿರುವ ಕಾಂಗ್ರೆಸ್ಸಿನ ವರ್ಚಸ್ಸು ಕಡಮೆಯಾಗದೀತು. ಅದರಲ್ಲಿಯೂ ಈಗ ಕಾಂಗ್ರೆಸ್ಸು ದೇಶದ ಆಡಳಿತದ ಹೊಣೆ ಹೊತ್ತಿರುವದರಿಂದಲೂ ದೇಶದಲ್ಲಿ ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಇಳಿಯಲಿರುವದರಿಂದಲೂ ಜನತೆಯ ಸಹಕಾರವು ಕಾಂಗ್ರೆಸ್ಸಿಗೆ, ತನ್ಮೂಲಕ ಸರಕಾರಕ್ಕೆ ಆವಶ್ಯವಿದೆ.

ಆದುದರಿಂದ ಕಾಂಗ್ರೆಸ್ಸಿನಲ್ಲಿ ನುಸುಳಿಕೊಂಡಿರುವ ಕೊಳೆಯನ್ನು ಕಿತ್ತೊಗೆಯುವದಕ್ಕಾಗಿ ಪೆಸ್ಸು ಪ್ರದೇಶದಲ್ಲಿ ಕಾಂಗ್ರೆಸ ಅಧ್ಯಕ್ಷರು ಕೈಕೊಂಡ ಕ್ರಮದಂತೆ ಇತರ ಪ್ರದೇಶಗಳಲ್ಲಿಯೂ ಕೈಕೊಳ್ಳುವದು ಅತ್ಯವಶ್ಯವಿದೆಯೆಂದು ನಾವು ತಿಳಿಯುತ್ತೇವೆ.

[ಜಯಭಂದ

ನೋಟೀಸು

ಹೊಸಪೇಟೆ ಡಿ॥ ಮುಂ॥ ಕೋರ್ಟಿನಲ್ಲಿ

S. C. 463/52

ಅಕ್ಕಿಕೊಟ್ರಬಸಪ್ಪ. ವಾದಿ

ಘಾದಿಗರ ಮೇಣಿಗಪ್ಪ. ಪ್ರತಿವಾದಿ

ಮೇಲಿನ ನಂಬರಿನಲ್ಲಿ ಅಕ್ಕಿ ಕೊಟ್ರಬಸಪ್ಪ ನಾಗಿ ನೀವು ಕುದ್ರಿ ಈತನು ಮಾದಿಗರ ಮೇಣಿಗಪ್ಪ ತಾಯಮ್ಮರಿಯವ್ವ ನಾಗಿ ಬ್ಯಾಲಾಳು ಈತನ ಮೇಲೆ ಪ್ರಾಮಸ್ಸರಿ ನೋಟಿನ ಮೇಲೆ ರು 174-12-0 ವ್ಯತ್ತು ಕೋರ್ಟ ಖರ್ಚುಗಳಿಗೆ ದಾವೆಮಾಡಿರುತ್ತಾನೆ. ವಾಯದಾ 18-2-53 ಕ್ಕೆ ಇರುತ್ತಾದೆ. ತಕರಾರು ಇದ್ದಲ್ಲಿ ಪ್ರತಿವಾದಿ ಆ ದಿನಕೋರ್ಟಿಗೆ ಹಾಜರು ಆಗತಕ್ಕದ್ದು.

ಯಸ್. ನಾರಾಯಣರಾವ್
ವಕೀಲು ಹೊಸಪೇಟೆ
4-2-53

ದುಃಖವೇ ಸುಖವೇನ ಕರೈ, ಸುಖವೇ ಕರೈ ನ ಕೋಯ್
ಜೋ ಸುಖವೇ ಸುಮಿರನ ಕರೈ, ತೋ ದುಃಖ ಕಾಹೆ ಹೋಯ್॥

ಎಲ್ಲರೂ 'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ದುಃಖ ಬಂದಾಗ ಮಾತ್ರ ಭಗವಂತನನ್ನು ಸ್ಮರಿಸುವವರಾಗಲಿ ಸುಖದಲ್ಲಾರೂ ಹಾಗೆ ಮಾಡುವುದಿಲ್ಲ. ಸುಖವಿದ್ದಾಗ ದೇವ ಸ್ಮರಣೆ ಮಾಡುವವರಿಗೆ ದುಃಖವೆಲ್ಲಿಯದು? [ಕಬೀರ]

....ಹರಿವಾಣದ ಸಂಚಾಯ್ತಿ ಕೋರ್ಟಿನಲ್ಲಿ....

O. S. NO 5 OF 1952 ದಿ 15--4- 52

ವಾದಿ 1) ವೆಂಕಮ್ಮ 2) ರಾಜೇಶ್ವರಮ್ಮ ವಾದಿ ಸಾ|| ಹರಿವಾಣ (ಆದವಾನಿ ತಾ||)

ಪ್ರತಿವಾದಿ ಬ್ಯಾಗಾರು ಒಸಪ್ಪ ತಂದೆ-ವೈಸಪ್ಪ ಸಾ|| ಹರಿವಾಣ (ಆದವಾನಿ)

....ಪ್ರತಿವಾದಿಗೆ ನೋಟೀಸು....

ಪ್ರತಿವಾದಿಯಾದ ನೀನು ವಾದಿಗಳಿಗೆ 15-4-49 ನ್ಯಾಮಿಸರಿ ಕೋಟು ಒರೆಮಕೊಟ್ಟು 30-0-0 ಮೂವತ್ತು ರೂಪಾಯಿಗಳಿಗೆ ಖಾತಿ ಇರುತ್ತೀಯೆ. ಅಸಲು ಮತ್ತು 15-4-49 ರಿಂದ 14-4-52 ರವರೆಗಾಗಿರುವ ಬಡ್ಡಿಗಾಗಿ ಈ ಕೋರ್ಟಿನಲ್ಲಿ 15-4-52 ರ ದಿನ ಸಾವಾ ಮಾಡಲಾಗಿ, ಇದರ ವಾಯ್ದೆ 28-2-1953 ರ ದಿನವಿದೆ. ಪ್ರತಿವಾದಿಯಾದ ನೀನು ಎಲ್ಲಿರುವುದು ಗೊತ್ತಿಲ್ಲದ ಕಾರಣ-ಈ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ವಾಯ್ದೆಯ ದಿನ ನೀನಾಗಲಿ-ನಿನ್ನ ವಕೀಲರಾಗಲಿ ಮೂಲಕವಾಗಲಿ ಹಾಜರಾಗಿ ನಿನ್ನ ಆಕ್ಷೇಪಣೆ ತಿಳಿಸದಿದ್ದಲ್ಲಿ ವಾದಿಗಳಿಗೆ ಸಲ್ಲಬೇಕಾದ ಅಸಲು-ಬಡ್ಡಿ ಖರ್ಚುಗಳಿಗಾಗಿ ನಿನ್ನ ಮೇಲೆ ಎಕ್ಸ್‌ಪಾರ್ಟಿ ಡಿಕ್ರಿ ಮಾಡಲಾಗುವುದೆಂದು ಈ ಸೂಚನೆ ತಿಳಿಸೋಣಾಗಿದೆ.

ಕೆ. ಪೊಂಪಾರೆಡ್ಡಿ
(ವೆಂಕಮ್ಮ-ರಾಜೇಶ್ವರಮ್ಮ ಇವರ ಗಂಡ ಮತ್ತು ಪರವಾಗಿ ಹಾಜರುದಾರು)

ಭತ್ತ ಬೆಳೆಯುವ ಜಪಾನಿ ಪದ್ಧತಿ

ಎಂಟು ಪಟ್ಟು ಹೆಚ್ಚು ಬೆಳೆ

ರೈತರಿಗೆ ಧನ ಸಹಾಯ ಅವಶ್ಯ

ಜಪಾನಿ ಪದ್ಧತಿಯಿಂದ ಭತ್ತ ಬೆಳೆಯಬೇಕೆಂಬ ವಿಚಾರವು ಈಗ ಬರಬೇಯರ ಚಿತ್ತವನ್ನೆಳೆದಿರುವಿನ್ನ ಒಹುದು. ಈ ಪದ್ಧತಿಯಿಂದ ಎಂಟು ಪಟ್ಟು ಭತ್ತದಬೆಳೆಯನ್ನು ಹೆಚ್ಚಿಸಬಹುದೆಂದು ಕಂಡು ಬಂದಿದೆ. ಈವರೆಗೆ ಮದ್ರಾಸು ಮಾಂಬಯಿ ರಾಜ್ಯದಲ್ಲಿ ಕೋಯಮತ್ತೂರಿನಲ್ಲಿ ಈ ಪ್ರಯೋಗವು ನಡೆಯುತಿತು. ೬೦೦೦ ಕೊಂಡು ಭತ್ತ ಬೆಳೆಯಲಾಯಿತು. ಬೋರಿ ಬಲಿಯಲ್ಲಿಯೂ ಹೆಚ್ಚು ಬೆಳೆ ಬಂದಿತು ಈ ಪದ್ಧತಿಯನ್ನು ಇನ್ನೂ ಹೆಚ್ಚು ಅಭ್ಯಸಿಸಬೇಕೆಂದೂ ಒಕ್ಕಲಿಗರಲ್ಲಿ ಇದರಬಗೆ ಆಸ್ಥೆ ಹುಟ್ಟುವಂತೆ ಪ್ರಚಾರ ಮಾಡಬೇಕೆಂದೂ ಭಾರತ ಮುಖ್ಯ ಮಂತ್ರಿಗಳಾದ ಶ್ರೀ ನೆಹರುವರು ಸಲಹೆ ಯಿತ್ತರು. ಗಾಂಧಿ ಸ್ಮಾರಕ ನಿಧಿಯವರೂ ಕಸ್ತೂರಬಾ ಸ್ಮಾರಕ ನಿಧಿಯವರೂ ಈ ಪದ್ಧತಿಯ ಪ್ರಚಾರ ಮಾಡಲು ೯ ಲಕ್ಷ ರೂಗಳನ್ನು ಮೀಸಲಾಗಿಟ್ಟಿರುವದು ಸಂತೋಷದ ಮಾತು.

ಉತ್ತಮ ಗೊಬ್ಬರ ಹಾಗು ನಟಿ ಹೆಚ್ಚುವದು ಈ ಪದ್ಧತಿಯ ಮುಖ್ಯ ವೈಶಿಷ್ಟ್ಯಗಳಾಗಿವೆಯೆನ್ನಲಡ್ಡಿಯಿಲ್ಲ. ಜಪಾನಿ ಪದ್ಧತಿಯಲ್ಲಿ ಅತಿ ವಿಚ್ಛದ ಪರದರ್ಶಿ ಯಂತ್ರಗಳೇನು ಬೇಕಾಗಿಲ್ಲ. ಆದರೆ ಲಕ್ಷ್ಯಪೂರ್ವಕ ನುರಿತವು ಮಾತ್ರ ಬೇಕು.

ಈ ಪದ್ಧತಿಯಲ್ಲಿ ನಟ್ಟ ಬೆಳೆಯುವ ಕ್ಷೇತ್ರದಲ್ಲಿ ಮೂರು ಅಥವಾ ನಾಲ್ಕು ದಿಂದು ರಂಟೆ ಹೊಡೆಯಬೇಕು. ಭೂಮಿಯನ್ನು ಹಸನುಮಾಡಿ ಒಂದು ಗುಂತಕ್ಕೆ ಒಂದು ಚಕ್ಕಡಿ ಉತ್ತಮ ಗೊಬ್ಬರ ಹಾಕಬೇಕು. ಗೊಬ್ಬರವು ಜನ್ನಾಗಿ ಭೂಮಿಯಲ್ಲಿ ಬೆರೆಯಬೇಕು. ಬೀಜ ಬಿತ್ತುವ ಭೂಮಿಯ ಪಾತಳಿಯು ಹೊಲದಾಚಳಿಗಿಂತ ಎರಡು ಅಥವಾ ಮೂರು ಇಂಚು ಎತ್ತರವಿರಬೇಕು ಹೀಗೆ ಮಾಡುವದರಿಂದ ಹೆಚ್ಚಾಗಿ ನೀರು ಹರಿದುಹೋಗುವದಲ್ಲದೆ ಮಣ್ಣು ಮಾಡಲೂ ಅನುಕೂಲವಾಗುವದು ಮತ್ತು ನಟಿಗಳೂ ಚನ್ನಾಗಿ ಬೆಳೆಯುವುದಕ್ಕೆ ಬೆಳೆವ ನಂತರ ಕತ್ತಲಿಕ್ಕೂ ಸುಲಭವಾಗುವದು. ಕಂಪೋಸ್ಟ ಗೊಬ್ಬರದ ಥರದ ನೀಲಿ ಬೂದಿಯ ಥರವನ್ನು ಯಾಕುನವಿಂದ ನಟಿಗಳ ಬೆಳವಣಿಗೆಗೂ ಥರದಿಂದ ಆಗುವದು.

೧ ಎಕರೆ ಭೂಮಿಗೆ ಸಾಕಾಗುವಷ್ಟು ನಟಿಗಳನ್ನು ಬೆಳೆಸಲುಗಿ ೬ ಪೌಂಡ ಬೀಜ ಹಿಡಿಯುವದು. ಇಷ್ಟು ಬೀಜವನ್ನು ೧ ಅಥವಾ ೧½ ಗುಂಠೆ ಕ್ಷೇತ್ರದಲ್ಲಿ ಬಿತ್ತಬೇಕು ಬಿತ್ತುವ ಮೊದಲು ಬೀಜ ಹಾಗು ಗೊಬ್ಬರವನ್ನು ೧:೩ ಪ್ರಮಾಣದಲ್ಲಿ ಕೊಡಿಸಬೇಕು.

ಭಾರತವು ಜಗತ್ತಿನಲ್ಲಿ ಭತ್ತ ಬೆಳೆಯುವ ರಾಷ್ಟ್ರಗಳಲ್ಲಿ ಎರಡನೆಯದು ಮೊದ ದೇಶ. ಭಾರತದ ಭತ್ತದ ಕ್ಷೇತ್ರವು ೭೬೦ ಲಕ್ಷ ಎಕರೆಗಳಷ್ಟಿದೆ. ಆದರೂ ನಮ್ಮ ಈ ಮುಖ್ಯ ಆಹಾರದ ವಿಷಯದಲ್ಲಿ ಆದು ಸ್ವಾವಲಂಬಿಯಿರುವದಿಲ್ಲ. ಯುದ್ಧ ಪೂರ್ವದಲ್ಲಿ ೧೫ ಲಕ್ಷ ಟನ್ ಅಕ್ಕಿಯನ್ನು ಅದು ಬ್ರಹ್ಮದೇಶ ಮೊದಲಾದ ಪರದೇಶಗಳಿಂದ ತರಿಸುತ್ತಿದ್ದಿತು. ಆದರೆ ಸದ್ಯ ಪರಿಸ್ಥಿತಿ ಬದಲಾಗಿದೆ. ಧಾರಣೆಯು ಬೆಳೆದಿದೆ. ಬದ್ದು ಬೆಳೆ ಕೊಟ್ಟವರೂ ದೊರೆಯುವುದು ದುಸ್ತರವಾಗಿದೆ. ಮೇಲಾಗಿ ಪರದೇಶದ ವಿನಿಮಯದ ತೊಂದರೆ. ೧೯೫೧ ರಲ್ಲಿ ೬೫ ಕೋಟಿ ೮೦ ಲಕ್ಷರೂಪಾಯಿಗಳು ಇವರಲ್ಲಿಯೇ ಹೋದವೆಂದು ತಿಳಿಯುತ್ತದೆ.

NEW BHARAT

ಸಂಪಾದಕ-ಬಿ.ಶಿವೇಶ್ವರರಾವ್

ಸೋಮವಾರ ೯-೨-೧೯೫೩

—ಅಮೆರಿಕದ ಹೊಸ ಅಧ್ಯಕ್ಷರು—

ಯುದ್ಧದ - ಹಾದಿಯಲ್ಲಿ

ಅಮೆರಿಕದ ನೂತನಾಧ್ಯಕ್ಷರಾದ ಐಸನ್‌ಹಾವರರು ಅಧಿಕಾರ ಸ್ವೀಕಾರ ಮಾಡಿದ ಕೂಡಲೇ — ಫಾರ್ಮೋಸಾ ಜಲಸಂಧಿಯಲ್ಲಿ ಆಶ್ರಯಪಡೆದ ಚೀನದ ಚಿಂಗಕೇಶೇಕ್ (ಅಮೆರಿಕದ ಕೈಗೊಂಬೆ) ರಿಗೆ ಯುದ್ಧ ಕಹಳೆಯೂದಲು ಪ್ರೋತ್ಸಾಹ ಕೊಟ್ಟರು. ಚೀನದ ಮುಖ್ಯಭೂಮಿಯಿಂದ ಫಾರ್ಮೋಸಾದ ಮೇಲೆ ದಾಳಿಯಾಗದಂತೆ ಅಥವಾ ಫಾರ್ಮೋಸಾದಿಂದ ಚೀನದ ನೆಲೆ ದಾಳಿಯಾಗದಂತೆ ತಡೆಯಲು ಹಿಂದಿನ ಅಧ್ಯಕ್ಷರಾದ ಟ್ರೂಮನ್ ರವರು ಅಮೆರಿಕಾದ ಹಡಗುಪಡೆಯನ್ನು ಚೀನದ ಸಮುದ್ರದಲ್ಲಿಟ್ಟಿದ್ದರು. ಈಗ ನೂತನ ಅಧ್ಯಕ್ಷರು ಹಡಗುಪಡೆಯನ್ನು ತೆಗೆದು ಸಂಸ್ಥರ ದಾಳಿಗವಕಾಶ ಕೊಟ್ಟರು. ಇಷ್ಟೇಅಲ್ಲ, ತಮ್ಮ ಕೈಗೊಂಬೆಯಾದ ಚಿಂಗ್ ಕೇಶೇಕರಿಗೆ ಎಲ್ಲತರದ ಯುದ್ಧ ಸಾಮಗ್ರಿಗಳ ಸಹಾಯವನ್ನು ಒದಗಿಸಲು ವಾಗ್ದಾನವಿತ್ತಿರುವರು.

ಹೊಸ ಅಧ್ಯಕ್ಷರ ಈ ಪರಿವರ್ತಿತ ನೀತಿಯಿಂದ ಜಗತ್ತಿನ ಸಣ್ಣ-ಪುಟ್ಟದೇಶಗಳೆಲ್ಲವೂ ಭಯಂಕರ ಕಳವಳವ್ಯೂಟಾಗಿದೆ. ಒದಮಹಸಂಚಿದ ನಿನೇ ಯುದ್ಧಕ್ಕೆ ಹಾದಿಯೆಂದು ತಿಳಿದವರೆಲ್ಲಾ ಹೇಳುತ್ತಾರೆ.

ಚಿಂಗಕೇಶೇಕರು ಚೀನದ ಮೇಲೆ ದಾಳಿಮಾಡುವ ಮಾತಲ್ಲಿ. ಚೀನವು ಸುಮ್ಮನೆ ಕೂಡ್ರಲಾರದು. ಅದು ತಕ್ಕ ಪ್ರತೀಕಾರೋಪಾಯಗಳನ್ನು ಕೈಗೊಳ್ಳಬಹುದಾಗಿತ್ತದೆ. ಕೋರಿಯಾ ಮತ್ತು ಇಂಡೋಚೀನಗಳಲ್ಲಿ ಚೀನಿಯರ ಒತ್ತಾಯದಿಂದಾಗಿ ಅವರು ಸಂಧಿಗೆ ಬರುವಂತೆ ಮಾಡಬೇಕೆಂಬುದು ಅಮೆರಿಕದ ಅಧ್ಯಕ್ಷರ ಸುಹತ್ತಾಕಾಂಕ್ಷೆ ಆದರೆ ಇದಕ್ಕೆ ವಿರೋಧವಾಗಿ ಎಲ್ಲೆಡೆಯಲ್ಲೂ ಕೆದಿಗಳು ಹಾರುಹಾರುವು. ರಷ್ಯಾ ಚೀನಾಗಳು ಪರಸ್ಪರ ಬಲ್ಲಾಳ್ಯ. ಒಪ್ಪಂದವನ್ನು ಮಾಡಿಕೊಂಡಿರುವ ಕಾರಣ ಚೀನವು ಕಷ್ಟಕ್ಕೆ ಸಿಕ್ಕರೆ ರಷ್ಯಾ ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳಲಿಕ್ಕಿಲ್ಲ. ಮತ್ತೆ ಜಗತ್ತಿನ ಬಲಾಢ್ಯ ಗುಂಪುಗಳೆರಡಲ್ಲಿ ಯುದ್ಧವಾಗಲೇ ಬೇಕಾಗುತ್ತೆ.

ಅಮೆರಿಕಾದ ಹೊಸ ಅಧ್ಯಕ್ಷರ ಘೋಷಣೆಯಿಂದ-ರಷ್ಯಾದಲ್ಲಿನ ಪ್ರತಿಕ್ರಿಯೆಗಳು ತಿಳಿದುಬಂದಿಲ್ಲ. ಅಂತು ಇದು ಶಾಂತಿವಾತಾವರಣದ ಲಕ್ಷಣವಲ್ಲ. ಒಂದೆರಡು ತಿಂಗಳಲ್ಲಿ ಎಲ್ಲ ತಿಳಿದುಬರುತ್ತೆ.

—ಸಂಪಾದಕೀಯ—

ಬಳ್ಳಾರಿ ಪುರಸಭೆ

ಎಲ್ಲಾತೆಲುಗಾಗಬೇಕು.

31-1-53 ನೆಯ ದಿನಾಂಕ ಬಳ್ಳಾರಿ ಮುನಿಸಿಪಾಲಿಟಿ ಸಾಧಾರಣಸಭೆಯಲ್ಲಿ—ಮುನಿಸಿವಾಲಿಟಿಯ ವ್ಯವಹಾರವೆಲ್ಲ ಇನ್ನು ಮೇಲೆ ತೆಲುಗು ಭಾಷೆಯಲ್ಲಿರಬೇಕೆಂಬ ತೀರ್ಮಾನವು ಪಾಸಾಯಿತು.

[ಬಳ್ಳಾರಿ ಮುನಿಸಿಪಾಲಿಟಿಯಿಂದ ನಡೆಸಲ್ಪಡುವ ಎಲಿಮೆಂಟರಿ ಶಾಲೆಗಳಲ್ಲಿ ಒಂದಾದರೂ ಕನ್ನಡ ಶಾಲೆಯಿರುವುದಿಲ್ಲ. ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದವರು ಮಾತ್ರ ಒಂದು ಹೈಯರ್ ಎಲಿಮೆಂಟರಿ ಶಾಲೆ, ಒಂದು ಹೈಸ್ಕೂಲ್ ಮತ್ತು ಒಂದು ಕಾಲೇಜ್ ನಡೆಸುತ್ತಲಿದ್ದಾರೆ]

ಸಿರಿಗೆರೆ— ತರಳುಬಾಳು ಹುಣ್ಣಿಮೆ ಸೇವಾ ಸಮಿತಿಯ ಮುಖ್ಯಸ್ಥರು ಸನ್ಮಾನಗಂಭವು ಕೊಡಿಸಿಗಂಡಿತು. ಮೈಸೂರು ವಿದ್ಯಾಸಚಿವರಾದ ಶ್ರೀ ಎ. ಜಿ. ರಾಮಚಂದ್ರ ದೀಕ್ಷಿತರು ಭಕ್ತಗಾಲ ಸೇವಾಸಮಿತಿಯ ಮುಖ್ಯಸ್ಥರು ಭಾಷಣ ಮಾಡಿದರು.

ಹೊಸಪೇಟೆ:— ತುಂಗಭದ್ರಾ ಪ್ರಾಜೆಕ್ಟಿಗೆ ಸಂಬಂಧಿಸಿದ ವಂಕಾಬೈಬರ್ ಕಾಲೋನಿಯಲ್ಲಿ ಬೆಂಕಿ ಬಿದ್ದು 12 ಗುಡಿಸಲುಗಳು ಪೂರ್ಣವಾಗಿ ಸುಟ್ಟು ಹೋದವು. ಹೊಸಪೇಟೆ ಅಗ್ನಿ ಶಾಮಕದಳವು ಬೆಂಕಿಯನ್ನು ನಂದಿಸಿತು.

ಇಲ್ಲಿಯ ಕಾಸ್ಮೊಪಾಲಿಟನ್ ಕ್ಲಬ್ ಜಲ್ಲಿಂಗ್ ಫಂಡಿಗಾಗಿ 31ನೆಯ ತಾ. ಸದಸ್ಯರು ಒಂದು ನಿನೋದ ಕೂಟವನ್ನೇರ್ಪಡಿಸಿದ್ದರು ನಿ ಇಂಗ್ಲಿಷ್ ನಾಟಕ ದೃಶ್ಯಗಳ ಪ್ರದರ್ಶನಗಾಗಿ ಸುಮಾರು 4 ಸಾವಿರ ರೂ. ವಸೂಲಾಯಿತು. ಕಲೆಕ್ಟರ್ ಶ್ರೀ ಸುಂದರಂರವರು ಅಧ್ಯಕ್ಷತೆ ವಹಿಸಿದ್ದರು. ಭಾಗವಹಿಸಿದವರಲ್ಲಿ ಮುಖ್ಯರು ಡಾ ಕೃ ರ್ B. R. ಆಚಾರ್, ಶ್ರೀರಾಮುಲು, K. ಶ್ರೀನಿವಾಸಾಚಾರ್.

—ವರದಿ—

ಯಮ್ಮಿಗನೂರು (ಕಂಪ್ಲಿ)

ಈ ಪಂಚಾಯತಿ ಬೋರ್ಡಿನವರು ಒಂದು ಸಭೆಮಾಡಿ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಆಂಧ್ರದಲ್ಲಿ ಕೇರಿಸುವುದನ್ನು ವಿರೋಧಿಸುವುದಲ್ಲದೆ ತಾತ್ಕಾಲಿಕವಾಗಿಯಾದರೂ ಬಳ್ಳಾರಿ ಜಿಲ್ಲೆಯನ್ನು ಆಂಧ್ರದಲ್ಲಿ ಕೇರಿಸುವಾರದೆಂದೂ, ಆಂಧ್ರ ಕರ್ನಾಟಕ ಗಡಿ ನಿರ್ಧರಿಸುವವರೆಗೆ ಬಳ್ಳಾರಿ ಜಿಲ್ಲೆಯನ್ನೂ ಇತರ ಕನ್ನಡ ಮಾತನಾಡುವ ಪ್ರದೇಶಗಳನ್ನೂ ಹಾಗೆಯೇ ಉಳಿಸಬೇಕೆಂಬ ಗೊತ್ತುವಳಿಗಳನ್ನು ತೀರ್ಮಾನಿಸಿ ತೀರ್ಮಾನ ನಕಲುಗಳನ್ನು ಭಾರತ ಮತ್ತು ಮದ್ರಾಸು ಸರಕಾರದ ಮುಖ್ಯಾಧಿಕಾರಿಗಳವರಿಗೆ ಕಳುಹಿಸಿದರು.

ಆದವಾನಿಯಲ್ಲಿ ನೀರಿನ ಕೊರತೆ

ಆದವಾನಿ ಮುನಿಸಿಪಾಲಿಟಿ ಕೌನ್ಸಿಲರ್ಸ್ ಮೆಂಬರ್ಸ ಮತ್ತು ಕಮೀಶನರವರು ಮದ್ರಾಸ್ ಆರೋಗ್ಯ ಮಂತ್ರಿಗಳಾದ ಶ್ರಿ ಎ. ಬಿ. ಶೆಟ್ಟಿಯವರಿಗೆ ನೀರಿನ ಕೊರತೆಯನ್ನು ನಿವೇದಿಸಿ ಇದನ್ನು ನಿವಾರಿಸಲು ಸರ್ಕಾರದ ಸಹಾಯ ಕೋರಿದರು.

ಈಗಿರುವ ನೀರಿನ ವ್ಯವಸ್ಥೆಯಂತೆ 2 ನೆಯ ಜನವರಿಗೆ ತಲಾ 1½ಗ್ಯಾಲನುಗಳಂತೆ ಕುಡಿಯುವ ನೀರು ಒದಗಿಸಲು ಸಾಧ್ಯವಾಗುತ್ತಿತ್ತು. ಆದರೆ ಜನಸಂಖ್ಯೆಯು ಈಗ 60 ಸಾವಿರಕ್ಕೇರಿದ್ದು ಒಂದೊಂದು ಭಾಗದಲ್ಲಿ ಒಂದೊಂದು ಸಮಯದಲ್ಲಿ ನೀರು ಬಿಡುವ ಏರ್ಪಾಟು ಮಾಡಬೇಕಾಗಿದೆ. 1½ ಲಕ್ಷ ಪೆಚ್ಚಿನಾಗುವ ಒಂದು ಯೋಜನೆಯೂ ಇದೆ. ಅದನ್ನು ಸರ್ಕಾರದವರು ಒಪ್ಪಬೇಕು. ಇಷ್ಟೇ ಈಗಿನ ಜಲಾಗಾರದ ಹತ್ತಿರ ಸರಿಯಾದ ಅಭಿವೃದ್ಧಿ ಮಾಡಿಬೇಕು.

ಪುಣ್ಯಸ್ಮರಣೆ

ಮಹಾತ್ಮಾ ಗಾಂಧಿಯವರು ತಮ್ಮ ಶ್ವರ ದೇಹವನ್ನು ತ್ಯಜಿಸಿ ಕೀರ್ತಿಜೀವಿ ಳಾಗಿ ಇಂದಿಗೆ ಐದು ವರ್ಷಗಳಾದವು. ಐದು ವರ್ಷಗಳಲ್ಲಿ ಪ್ರಪಂಚದಲ್ಲಿಯೂ ಾರತದಲ್ಲಿಯೂ ಅನೇಕ ಸ್ಥಿತ್ಯಂತರ ಳಾಗಿವೆ. ಭಾರತದ ಹೊರಗೆ ಶಾಂತಿ ಾಪನೆಯ ಹೆಸರಿನಲ್ಲಿ, ಪ್ರಪಂಚದ ೀರಿ ಬೇರೆ ರಾಷ್ಟ್ರಗಳಲ್ಲಿ ಅಹನುಹಿಸಿ ಯ ಏರಾಟ ನಡೆದಿದ್ದು ಮತ್ತೊಂದು ು ಹ ಯು ದ್ಧ ದ ಪಿಡುಗು ಮತ್ತೆಲ್ಲಿ ರಬ್ಬುವುದೋ ಎಂಬ ಭೀತಿಗೆ ಾವಕಾಶವನ್ನುಂಟುಮಾಡಿದೆ.

ಈ ಘರ್ಷಣೆಯ ಮೂಲವನ್ನೇ ಡಿದುಹಾಕಬೇಕೆಂದು ಭಾರತವು ವಿಶ್ವ ಸಂಸ್ಥೆಯಲ್ಲಿ ಮೊದಮೊದಲು ಏಕಾಕಿ ಯಾಗಿ ಪ್ರಯತ್ನಿಸಿತು. ಅವಾಗ ಭಾರ ತವ ಯುಷ್ಣದತ್ತ ಬ ಲ ಗ ರ್ವಿ ಗಳಾದ ರಾಷ್ಟ್ರಗಳು ತಚ್ಛಕ್ತಿಯಿಂದ ನೋಡಿದವಲ್ಲವೆ, ಭಾರತದ ಉದ್ದೇಶದ ಉದಾತ್ತಾರ್ಥವನ್ನು ಕೂಡ ಮಾಡಲು ಹಲ ಕೆಲವು ರಾಷ್ಟ್ರಗಳು ಹಿಂಜರಿಯಲಿಲ್ಲ. ಆದರೆ ಬರಬರುತ್ತ ಭಾರತದ ನಿಲು ಮೆಯೇ ಸರಿಯಾದುದೆಂಬ ಮನವರಿಕೆ ಅನೇಕ ರಾಷ್ಟ್ರಗಳಿಗೆ ಆಗುತ್ತ ಬಂದಂತೆ ರಿಂದ ಆ ರಾಷ್ಟ್ರಗಳು ಈಗ ತಮ್ಮನಿಲುವೆ ಯನ್ನು ಪುನರ್ವಿಮರ್ಶಿಸತೊಡಗಿವೆ. ತಮ್ಮ ಇಚ್ಛೆಯು ಪ್ರಶ್ನೆಯೆಂದು ಅದ್ದ ಬರುತ್ತಿರುವದರಿಂದ ಆ ರಾಷ್ಟ್ರಗಳು ಇನ್ನೂ ಹಿಂಜರಿಯುತ್ತಿವೆ. ಆದರೆ ಇಂದಿಲ್ಲ ನಾಳೆಯಾದರೂ ಆ ರಾಷ್ಟ್ರಗಳ ಮತಪರಿವರ್ತನೆಯಾಗದಿ ರ ಲಾರದು. ಹಾಗಾಗಬೇಕಾದರೆ ಭಾರತವು ತನ್ನ ಬಲ ವನ್ನು ನೈತಿಕ ಬಲವನ್ನು-ಬೆಳೆಸಿಕೊಳ್ಳ ಬೇಕಾಗುವದು.

ಭಾರತದಲ್ಲಿ ಇಂದು ಅನೇಕ ಜನ್ಯಾ ನಿಷ್ಠ ಪ್ರಸಂಗಗಳ ಮೂಲಕ ನೈತಿಕ ಮಟ್ಟವು ತೀರ ಕೆಳತರಗತಿಗಿಳಿದಿದ್ದರೂ ಇತರ ರಾಷ್ಟ್ರಗಳ ನೈತಿಕ ಮಟ್ಟದೊಡನೆ ತುಲನೆಮಾಡುವಾಗ ಭಾರತವು ಉಳಿದೆಲ್ಲ ರಾಷ್ಟ್ರಗಳಿಗಿಂತ ತೀರ ಉನ್ನತಸ್ಥಾನ ದಲ್ಲಿರುವದೆಂದು ಯಾರೂ ಹೇಳುವಂತಿಲ್ಲ. ಭಾರತವಲ್ಲಿ ಎಲ್ಲವೂ ಇಷ್ಟೆ, ಆದರೆ ಭಾರತೀಯನಲ್ಲಿಯ ನಿಷ್ಠೆಯಿಯೆ ಮೂಲಕ ಏನೂ ಇಲ್ಲವಸ್ಥಿತಿಯೇನಿದಿದೆ. ಆ ನಿಷ್ಠೆಯಿಂದ ದೂರಾದರೆ ಭಾರತೀ ಯನು ಉದ್ಯೋಗಪ್ರಿಯನಾಗಿ ಭಾರತದ ಉತ್ಕರ್ಷಕ್ಕಾಗಿ ಅವ್ಯಾಹತ ಯತ್ನ ಮಾಡಿದರೆ, ಅಲ್ಪಾವಧಿಯಲ್ಲಿ ಭಾರತವು ಸಕಲ ಸಾಧನ ಸಂಪತ್ತುಗಳಿಂದ ಸಮೃದ್ಧವಾಗು ವದು. ಭಾರತೀಯರ ಜೀವನಕ್ಕೆ ಅವಶ್ಯ ವಿರುವ ಸಾಧನ ಸಾಮಗ್ರಿಯು ಉತ್ಪಾದನೆ ಹೆಚ್ಚಾಗಿ ಭಾರತನ ಸಕಲವಿಧೆಗಳಲ್ಲಿಯೂ ಸ್ವಾವಲಂಬಿಯಾದರೆ ತನ್ನ ಪ್ರಚಂಡವಾ ದ ಮಾನವಬಲದೊಡನೆ ಸ್ವಾವಲಂಬನ ದಿಂದುಂಟಾಗುವ ಸಮೃದ್ಧಿ, ಮತ್ತು ಆ ಸಮೃದ್ಧಿಯಿಂದುಂಟಾಗುವ ನೈತಿಕ ಬಲವೂ ವೃದ್ಧಿಂಗತವಾಗಿ ಭಾರತವು ಶ ವಾದಪಿ ಶರಾವಪಿ ' ಶ ಕ್ತಿ ಹ ರ್ತಾ, ಜಗತ್ತಿಗೆ ಶಾಂತಿಮಾರ್ಗವನ್ನು ತೋರಿಸ ಬಲ್ಲದು. ಇವೆಲ್ಲ ದೊರೆತುದು ಆ ಪೂಜ್ಯ ವ್ಯಕ್ತಿಯ ಮಾರ್ಗದರ್ಶನದಿಂದ. ಆದುದ ರಿಂದ ಆ ಪುಣ್ಯಶ್ಲೋಕ ಗಾಂಧೀಜೀ ಯ ವರು ಭಾರತಕ್ಕೆ ತೋರಿದ ದಿವ್ಯ ಮಾರ್ಗದಿಂದ ಭಾರತೀಯರೆಲ್ಲರೂ ಮುಂ ದೆ ಸಾಗಿ ಭಾರತವನ್ನು ಬಲಾಢ್ಯ ರಾಷ್ಟ್ರ ನನ್ನಾಗಿ ಮಾಡಬೇಕಾಗಿದೆ. ಅವರ ಸಂದೇಶವನ್ನು ಜಗತ್ತಿನ ಸಂದಿಗ್ಧಮೂ ಲೆಗಳಲ್ಲಿ ಪಸರಿಸಬೇಕಾಗಿದೆ. ಅದಕ್ಕಾಗಿ ಅವರ ಪುಣ್ಯಸ್ಮರಣೆಯನ್ನು ಭಾರತೀಯರು ಸದಾಕಾಲವೂ ಮಾಡುವದು ಅವಶ್ಯವಿ ದೆ. ಅದರಿಂದಲೇ ಭಾರತದ ಉದ್ಧಾರವಿ ದೆ. ಅದರಿಂದಲೇ ಜಾಗತಿಕ ಶಾಂತಿ ಸ್ಥಾಪನೆಯಾಗಲಿದೆ.

—ಸಂಪಾದಕ—

ಆಂಧ್ರಪ್ರಾಂತದಲ್ಲಿ ಮದ್ಯಪಾನ —ತ್ರಿವೆಂಭೂರ ಸಲಹೆ—

ನ್ಯಾಯಮೂರ್ತಿ ವಾಂಭೂರವರು 7—2—51 ನೆಯ ದಿನಾಂಕ ಮದ್ರಾಸಿಂದ ದೆಲ್ಲಿಯನ್ನು ತಲಪಿ-ಆಂಧ್ರಪ್ರಾಂತ ನಿರ್ಮಾಣದ ಬಗ್ಗೆ ತಮ್ಮ ವರದಿಯನ್ನು ಪ್ರಸಿದ್ಧಪಡಿಸಿದರು. ಆಂಧ್ರಪ್ರಾಂತಕ್ಕೆ ಈಗಾಗಲೇ ಪ್ರಕಟವಾಗಿರುವಂತೆ 5 ಕೋಟಿ ರೂ ಗಳ ಕೊರತೆ ಬೀಳುವುದೆಂದು ಅದನ್ನು ತುಂಬಲು ಮದ್ಯಪಾನ ನಿರೋಧ ಶಪಸನ ವನ್ನು ತೊಡೆದು ಹಾಕಬೇಕೆಂದೂ ವಾಂ ಭೂರವರು ಬೆಜವಾಡದಲ್ಲಿ ಹೇಳಿದರು. ವರದಿಯು ಫೂಲ್‌ಸ್ಕೇಪ್ ಸೈಜಿನ 100 ಪುಟಗಳಷ್ಟಿದೆಯಂತೆ ಅವರಿಗೆ 5000 ರೂ ಪ್ಪ ವತ್ತಕ್ಕೆ ಬಂದಿದ್ದು ಅವುಗಳನ್ನು ಗೃಹಶಾ ಟೆಗೆ ಒಪ್ಪಿಸಲಾಗುತ್ತೆ. ರಾಜಧಾನಿಗೂ— ಹೈಕೋರ್ಟಿಗೂ ಸರಿಯಾ ದಸ್ಥಳಗಳನ್ನು ಸೂಚಿಸಿರುವರಂತೆ.

ಹೊಸ ವರ್ಷದ ಪ್ರಾರಂಭ ದಿನ ಆಂಧ್ರ ಪ್ರಾಂತ ನಿರ್ಮಾಣವಾಗಬೇಕೆಂದು ಆಂ ಧ್ರರ ಬೇಡಿಕೆಯನ್ನೂ ವರದಿಯಲ್ಲಿ ಕಾಣಿ ಸಲಾಗಿದೆ.

ಸರ್ಕಾರದವರು ವಾಭೂಂಭವರದಿ ಯನ್ನು ಅಧ್ಯಯಿಸಿ ಅದನ್ನು ಪ್ರತಿಷ್ಠಾಪಿ ಲಿರುವರು.

ಮದ್ರಾಸ್ ಪಂಚಾಯ್ತಿ ಆಕ್ಟ್

ಈ ವಾರದ ಮದ್ರಾಸ್ ಸರ್ಕಾರದ ಗೆಜೆಟ್ಟಿನಲ್ಲಿ ಮದ್ರಾಸ್ ವಿಶೇಷ ಪಂಚಾ ಯ್ತಿ ಆಕ್ಟ್‌ಗೆ ಕೆಲ ರೂಲ್ಸುಗಳನ್ನು ಪ್ರತಿ ಷ್ಠಾಪಿಸಿದ್ದಾರೆ. ರೇಡಿಯೋ ಕೊಂಡು ಅದಕ್ಕೆ ಬರ್ಚಾಡುವ ವಿಷಯ ತೆಗೆದುಹಾಕುವದು ಸ್ಥಿರಾಸ್ತಿ ವಶಪಡಿಸಿಕೊಂಡು ಬೇರೆಯವ ರಿಗೆ ಮಾರುವುದು ಇಲ್ಲವೇ ಹರಿವರ್ತನ ಗೊಳಿಸುವುದು. ಪಂಚಾಯ್ತಿಗೆ ಬೇಕಾದ ಅವಶ್ಯಕ ಸಾಮಾನುಗಳನ್ನು ತರಿಸುವದು ಸಾರ್ವಜನಿಕ ರಸ್ತೆ ಸಂತೆ ಮತ್ತು ಜಾತ್ರೆ ಗಳನ್ನು ವಿವಿಧ ವರ್ಗಗಳಾಗಿ ವಿಂಗಡಿಸು ವುದು.

★ ವೀರಮಾತೆ ★
ಕನ್ನಡ ಮಾಸಪತ್ರಿಕೆ ಧಾರವಾಡ
ಇಂದೇ ಚಂದಾ ವಾರಣಾಗಿರಿ.
ಮುಖ್ಯ ಸಂಪಾದಿಕೆಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.
ಪ್ರಕಾಶಕರು :— ಶ್ರೀ ಬಿ. ಸಾ. ಜೈಜವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ
ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.
ಪ್ರತಿಯೊಬ್ಬರೂ ಓದಬೇಕಾದುದು.
ವಾರ್ಷಿಕ ಚಂದಾ ಪರದೇಶದವರಿಗೆ 5 ರೂಪಾಯಿ.
,, ಸ್ವದೇಶೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ
ಮನೆಮನೆಯಲ್ಲೂ ಸುಖಸಂತೋಷಗಳನ್ನು ಬೀರಬಲ್ಲ
ಕನ್ನಡ ಮಾಸಪತ್ರಿಕೆ

ಸಂಚಿಕೆ

ಸೋಮವಾರ
ಫೆಬ್ರುವರಿ
೯--೧೯೫೩

ವರ್ಷ ೧೫
ಸಂಚಿಕೆ ೪೧

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕರು:
ಟಿ. ಬಿ. ಕೇಶವರಾವು

ಪ್ರಜಾಭಿಪ್ರಾಯದ ಸ್ವರೂಪ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಪ್ರಭಾವ ಶಾಲಿಯಾದ ನಾಯಕನೊ
ನ ಅಥವಾ ಸಂಗಡ ಒಂದರ ಅಭಿಪ್ರಾ
ಯವನ್ನಂಗೀಕರಿಸುವುದು ಜನರಲ್ಲಿ
ಸಾಮಾನ್ಯವಾಗಿ ಕಂಡು ಬಂದಿರುವ ಪದ್ಧ
ತಿ. ಪ್ರತಿ ಅಂಶವನ್ನೂ ತಾನು ತನ್ನ
ವಿವೇಚನಾ ಶಕ್ತಿಯಿಂದ ವಿಚಾರಿಸಿ,
ಮಾದಿಸಿ, ನಿರ್ಧಾರವಾದ ಅಭಿಪ್ರಾಯಕ್ಕೆ
ಬರಬೇಕೆಂಬುದರ ಅರಿವು ಜನಸಾಮಾ
ನ್ಯರಲ್ಲಿಲ್ಲ. ಅನ್ಯರ ಭಾವನೆ ನಂಬಿಕೆಗ
ಳನ್ನು, ವಿಚಾರ ಮಾಡದೆ, ಬೆಲೆಕಟ್ಟದೆ,
ನಂಬಿ, ಅದನ್ನೇ ಅಸ್ಪಷ್ಟ ಪದಗಳನ್ನು
ಉಪಯೋಗಿಸಿದ ವಾದಸರಣಿಯಿಂದ ಅಭಿ
ಪ್ರಾಯವೆಂದು ಪ್ರತಿವಾದಿಸುವ "ಅಲ್ಪ
ವಿದ್ಯಾ ಮಹಾಗರ್ವಿ" ಗಳು ಹಲಕೆಲವ
ರಿದ್ದಾರೆ ಸಮಾಜದಲ್ಲಿ. ಇಂತಹ ಜನಾ
ಭಿಪ್ರಾಯ? ಸಾಲುದುದಕ್ಕೆ ಒಂದು ಅಭಿ
ಪ್ರಾಯದ ವಿಷಯವಾಗಿ ಅನ್ಯರ ಕಾಣಗ
ಳಿಂದ ಉದ್ರೇಕಗೊಳ್ಳುವುದಾಗಲೀ,
ಹೆಮ್ಮೆ ಯಿಂದ ಕೂಡಿರುವುದಾಗಲೀ,
ಕೃಪ್ತಿ ಸಮಾಧಾನ ಹೊಂದುವುದಾಗಲೀ,
ವ್ಯಕ್ತಿಯ ಸ್ವಭಾವಜನ್ಯ ಗುಣವಾಗಿದೆ.
ಇದರ ಪರಿಣಾಮವೇನು ? – ಮನುಷ್ಯ
ನನ್ನು ವಿಚಾರ ಸರಣಿಯಿಂದ ದೂರ
ಒಯ್ದಿರುವುದೇ ಆಗಿದೆ.

ಇವೆಲ್ಲಕ್ಕಿಂತ ಮಿಗಿಲಾದುದನ್ನೊಂದು. ಜನಾಭಿಪ್ರಾಯಕ್ಕೆ ಪ್ರಜಾಪ್ರಭುತ್ವದಲ್ಲಿ ಎಂತಹ ಸ್ಥಾನ ಏರಬೇಕೆಂಬುದರ ತಿಳಿವಳಿಕೆಯನಾದರೂ ಉಂಟೇನು ಜನಕ್ಕೆ ? — ಅದೂ ಇಲ್ಲ. ಹೋಗಲಿ, ಇಷ್ಟು ಪ್ರಮುಖವಾದ ಜನಾಭಿಪ್ರಾಯಕ್ಕೆ ಸರಿಯಾದ ಬೆಲೆಯನ್ನು ಇನ್ನು ಮುಂದಾದರೂ ಏರ್ಪಡಿಸುವ, ಅದಕ್ಕಾಗಿ ಪ್ರಯತ್ನಿಸುವ, ಎಂಬುವಾದರೂ ಉಂಟೇ ಎಂದು ನೋಡಿದರೆ ಅಂಥ ಭಾವನೆಯೂ ಇಲ್ಲ, ಪ್ರಯತ್ನವೂ ಇಲ್ಲ. ಇದುಸ್ಪಷ್ಟವಾಗಿದೆ ಇಂದಿನ ಸಮಾಜದಲ್ಲಿ.

ವ್ಯಕ್ತಿಯ ಅಭಿಪ್ರಾಯಕ್ಕೆ ಬೆಲೆ ಕೊಡುವಾಗ ಮತ್ತೊಂದು ವಿಷಯ ಗಮನದಲ್ಲಿಡಬೇಕು. ಪ್ರತಿಯೊಬ್ಬನೂ ತನ್ನ ಮತ್ತು ತನಗೆಬೇಕಾದವರ ಅಭಿಪ್ರಾಯದ ವಿಷಯದಲ್ಲಿ ಹೆಚ್ಚು ಲವಲವಿಕೆ ಮತ್ತು ಆಸಕ್ತಿ ತೋರುತ್ತಾನೆ. ತನ್ನಸ್ನೇಹಿತರೂ, ಪರಿಚಯಸ್ಥರೂ, ವ್ಯಕ್ತಪಡಿಸಿದ ಅಭಿಪ್ರಾಯ ಅಮೃತದಂತೆ ಸವಿ ಇತರರು ಮುಂದಿಟ್ಟ ಅಭಿಪ್ರಾಯ, ಅದು ಎಷ್ಟೇ ವಿಚಾರ ಪೂರ್ಣವಾಗಿರಲಿ, ಅಂಗೀಕಾರ ಯೋಗ್ಯವಲ್ಲ. ಇದು ಸಾಮಾನ್ಯ ವ್ಯಕ್ತಿಯ ಸ್ವಭಾವ. ಸರಿಯಾಗಿ ನಾಗರಿಕ ಕರ್ತವ್ಯನಿಷ್ಠೆ ವ್ಯಕ್ತಿಯ ದೀಕ್ಷೆಗೆತಿಗಳು ಜಂತಲ್ಲಿ ಅವನು ತನ್ನ ಅಭಿಪ್ರಾಯವನ್ನೇ ಹೊಗೆಗತಕ್ಕುವುದನ್ನು ಇದರ ವಿಷಯವಾಗಿ. ಚೆನ್ನಾಗಿ ಯೋಚಿಸಿ ನೈಜವಾದ ಅಭಿಪ್ರಾಯವನ್ನು ರೂಪಿಸಿಕೊಳ್ಳುವನು.

ಇಂದಿನ ಪ್ರಜಾಪ್ರಭುತ್ವದ ಯುಗದಲ್ಲಿ ಸರ್ಕಾರ ನಡೆಯುವುದೂ, ಅಡಳಿತ ನಡೆಯುವುದೊ, ಪ್ರಜಾ ವರ್ಗದ ಸದಭಿಪ್ರಾಯಗಳಿಗನುಗುಣವಾಗಿ. ಅಂದರೆ, ಜನಾಭಿಪ್ರಾಯ ನೈಜವಾದಂದು ಮಾತ್ರ ಪ್ರಜಾಸತ್ತೆಯೂ ನೈಜವಾಗಿ ಬೆಳೆವಣಿಗೆ ಹೊಂದುವುದೆಂದಾಯಿತು. ಪ್ರಜಾಸತ್ತೆಯೂ ಸತ್ಫಲ ಲಿಯಾದುದಾಗಿರಬೇಕಾದರೆ ಭಾವನೆಗಳ ಮತ್ತು ಅನುಭವಗಳ ವಿನಿಮಯ (exchage of ideas and experiences) ಅತ್ಯಗತ್ಯ ಆದುದರಿಂದ, ರಾಷ್ಟ್ರದಲ್ಲಿ ಸರಿಯಾದ ಜನಾಭಿಪ್ರಾಯ ಮೂಡಿ ಪ್ರತಿಬಿಂಬಿತವಾಗುವಂತೆ ಕೆಲಸ ಮಾಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯವೂ ಆಗಿರಬೇಕು.

ಒಂದು ರಾಷ್ಟ್ರದ ಉಳಿವು ಆ ರಾಷ್ಟ್ರದ ಎಲ್ಲಾ ಜನರಲ್ಲಿ ಹುದುಗಿರುವ ಭಾವನೆಯ ತಳಹದಿಯ ಮೇಲೆ ನಿಂತಿದೆ. ಪ್ರತಿಯೊಬ್ಬ ವ್ಯಕ್ತಿಯೂ ಸರ್ವರ ಹಿತವನ್ನು ಎಷ್ಟರ ಪ್ರಮಾಣದಲ್ಲಿ ಪ್ರತಿಬಿಂಬಿಸುತ್ತಾನೋ ಆದರ ಮೇಲೆ ನಿಂತಿದೆ. ಜನತೆಯ ಬೆಳವಣಿಗೆ. ತನ್ನ ಸಮಾಜದ ಅರಿವೇ ತನಗೆಲ್ಲಿಗಿದ್ದಲ್ಲಿ, ತನ್ನನ್ನು ತಾನು ಅರಿಯದವನಾಗಿದ್ದಲ್ಲಿ, ಅಂಥವನಿಂದ ರಾಷ್ಟ್ರದ ಹಿತಚಿಂತನೆ ಹೇಗೆ ತಾನೇ ಸಾಧ್ಯ? ಅಲ್ಲದೆ ಸಾಮಾನ್ಯ ಮತದಾರರ ತಿಳುವಳಿಕೆ ಮತ್ತು ಅನುಭವವನ್ನು ವಲಂಬಿಸಬೇಕಾಗಿದೆ. ಪ್ರಜಾಪ್ರತಿನಿಧಿ ಪ್ರಭುತ್ವ. ಅಂದರೆ, ಪೌರ ಸಾಮಾನ್ಯರು ತಮ್ಮ ಅಳವಿಗೆ ಎಟುಕದ, ದೃಷ್ಟಿಗೆ ಕಾಣದ, ಮನಸ್ಸಿಗೆ ಗೋಚರಿಸದ ಅಂಶಗಳನ್ನು ನಿರ್ವಹಿಸಬೇಕಾಗಿದೆ.

ಜನಾಭಿಪ್ರಾಯದ ಬಣ್ಣ ಇಂತಿದ್ದುದರಿಂದಲೇ ಈಗ ಎರಡು ಶತಮಾನಗಳ ಹಿಂದೆಯೂ ಅದರ ವಿಷಯವಾಗಿ ಅಪನಂಬಿಕೆಯೂ ವಿರೋಧವೂ ಏರ್ಪಟ್ಟಿದ್ದುವು. "ತಪ್ಪು ತಿಳಿವಳಿಕೆ, ಅಸಕ್ತಿ, ಅಸೂಯೆ ದುರ್ಭಾವನೆ, ಸದ್ಭಾವನೆ. ಹುಟ್ಟು, ವೃತ್ತಿ ಪತ್ರಿಕಾಸಮಾಚಾರ–ಇವುಗಳ ಆಳೆವೆ ಮಿಶ್ರಣವೇ ಜನಾಭಿಪ್ರಾಯ.

ಬಳ್ಳಾರಿ ಪ್ರಭಾತ್‌ದಲ್ಲಿ
5 ನೇ ವಾರ
9-1-53 ರಿಂದ
ಅವರ್ ಇಂಡಿಯಾರವರ
ನಾಯಿಲ್ಲು
(ತೆಲುಗು)
ತಾರಾಗಣ :– ಟಿ. ಆರ್ ರಾಜಕುಮಾರಿ. ನಾಗಯ್ಯ. ಲಿಂಗಮೂರ್ತಿ

ಸಿರಿಗನ್ನಡ

ಸ್ತೋಮವಾರ
ಫಿಬ್ರವರಿ
೧೬-೧೯೫೩

ವರ್ಷ ೧೫ ಸಂಚಿಕೆ ೭ | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!! | ಸಂಪಾದಕ ಮತ್ತು ಪ್ರಕಾಶಕ: ಟಿ. ಬಿ. ಕೇಶವರಾವ

Sale Notice.

In the Court of the District Munsif, Adoni.

O. S. E. P. No. 141/52 in O. S. 74/52

Between:— G. Rudrappa, ... Decree Holder

AND

T. Kuppayya .... Judgement-debtor

Where as in the above proceedings, the Decree Holder has applied for the sale of the schedule lands belonging to the judgement debtor, the Sale will take place in the Court House of the District Munsif Court Adoni on 10-4-53 at 11 A. M Conditions of Sale can be had from the Deupty Nazir's office as per sale papers filed therein.

SCHEDULE.

Lands situated in Kuppagal, Adoni Taluk within the Subregistration District of Adoni and the Registration district of Bellary.

Dry Sarkar	S. No.	Extent	Taran
	158 A	1-73	1-3-0
	158 D	0-70	0-8-0
	160	4-70	2-6-0

(Northern portion bounded on East: Narayanaswami's field. West: Thimmappa's field. North: Yenkappa's field. South: Anumanna's field.

Adoni. H. N. Dasvas Rao,
B. A., B. L.
Dated. 6-2-53. Advocate for Decree Holder.

ಬಳ್ಳಾರಿ ಪ್ರಭಾತದಲ್ಲಿ
12-2-53 ರಿಂದ
—ಬೇವಫಾ—
(ಹಿಂದೀ ಚಿತ್ರ)
[ತಾರಾಗಣ-ಪರಿ ಸ್ ರಾಜಕಪೂರ್-ಅಶೋಕ ಕುಮಾರ್]

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಒ. ಎ. ನಂಬರು 32/1951.

ಮೃತಪಾದಚಿ ಶಿಷ್ಟಗೌಡನ ಇನ್ವೆಸ್ಟೆನ್ಸ್ ಮೊತ್ತದ ವಿಷಯ.

1. ಸಕ್ಕಮ್ಮ 2) ಚನ್ನಮ್ಮ } ಅರ್ಜಿ
3. ಸಿದ್ದಪ್ಪ 4) ವಿರುಪಣ್ಣ } ದಾರರು
5) ಹನುಮಪ್ಪ 6) ಕ್ರಿಸ್ಟಪ್ಪ }

2 ನಂದು 6 ಮೈನರುಗಳು ನಿಗೇವಾ ಸಕ್ಕಮ್ಮ.

ನೋಟೀಸು

ಮೇಲ್ಕಂಡ ಅರ್ಜಿದಾರರು ಮೇಲ್ಕಂಡ ಓ. ಪಿ. ಯಲ್ಲಿ ಸಕ್ಸೆಷನ್ ಸರ್ಟಿಫಿಕೇಟನ್ನು ತಿದ್ದುಪಡಿಸಲು, I.A. No. 22/53ನ್ನು ಸರ್ಟಿಫಿಕೇಟಿನ ಮೊತ್ತವನ್ನು ಜೆಟ್ಟು ಮಾಡಲು I.A. No. 23/52 ನ್ನು ಕೋರ್ಟಿನಲ್ಲಿ ಅರ್ಜಿಗಳು ಫೈಲು ಮಾಡಿರುವರು. ಆ ಅರ್ಜಿಗಳು 9-3-53 ಕ್ಕೆ ವಿಚಾರಣೆಗೆ ಹಾಕಲ್ಪಟ್ಟಿವೆ. ಯಾರಿಗಾದರೂ ತಕರಾರು ಇದ್ದ ಪಕ್ಷದಲ್ಲಿ ಸ್ವತಃ ಆಗಲಿ, ವಕೀಲರ ದ್ವಾರಾ ಆಗಲಿ ಹಾಜರಾಗಿ ಕೋರ್ಟಿಗೆ ತಕರಾರು ತಿಳಿಸಕ್ಕದ್ದು, ಹಾಗೆ ಹಾಜರಾಗದಿದ್ದರೆ ಸದರಿ ವಿಷಯಗಳು ಏಕಪಕ್ಷವಾಗಿ ತೀರ್ಮಾನಿಸಲ್ಪಡುವವು.

ಡಿ. ಗುಂಡೂರಾವ್
ಅರ್ಜಿದಾರರ ಅಡ್ವೋಕೇಟು.

ತುಂಡು ಸುದ್ದಿಗಳು

ಬಳ್ಳಾರಿ ವ್ಯವಸಾಯ ಮತ್ತು ಇಂಡಸ್ಟ್ರೀಗಳ ಪ್ರದರ್ಶನವನ್ನು ಬಳ್ಳಾರಿ ನಗರದ ಬಿ. ಡಿ. ಎ. ಗ್ರೌಂಡಿನಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಕೃಷ್ಣ ರಾಯರು 15ನೆಯ ತಾ. ನೆರವೇರಿಸಿದರು.

ಅಮೆರಿಕನ್ನರ ಫಾರ್ಮೋಸಾ ನೀತಿಯಿಂದ ಪರಿಸ್ಥಿತಿಯು ಈಗ್ಗೆ ಹದಗೆಟ್ಟು ಶಾಂತಿಯ ಅವಕಾಶವು ದೂರವಾಗಬಹುದೆಂದು ಭಾರತ ಪ್ರಧಾನಿ ನೆಹರೂರವರು ವ್ಯಕ್ತಪಡಿಸಿದರು.

ಪರ್ಶಿಯಾದ ತುರೋಷ ಪಳ್ಳಿಯಲ್ಲಿ 13ನೆಯ ತಾ. ಭೂಕಂಪವಾಗಿ 1500 ಜನರಿಗೆ 1000 ಜನರು ಪ್ರಾಣ ಬಿಟ್ಟಿರುವರು. ರಾಜಧಾನಿ ಟೆಹರಾನಿನಿಂದ ಸಹಾಯವು ಹೋಗಿದೆ.

ಪಂಚವಾರ್ಷಿಕ ಯೋಜನೆ

ಭಾರತ ಸರಕಾರವು ಇತ್ತೀಚೆಗೆ ಮಂಜೂರು ಮಾಡಿದ ಪಂಚ ವಾರ್ಷಿಕ ಯೋಜನೆಯು ಸ್ವತಂತ್ರ ಸಕ್ಷಕಾರದ ಮಹತ್ಕಾರ್ಯಗಳಲ್ಲಿ ಒಂದಾಗಿರುತ್ತದೆ. ಇದನ್ನು ತಯಾರಿಸಲು ನೇಮಿಸಿದ್ದ ವ್ಯಾನಿಂಗ್ ಸಮಿತಿಯು 2½ ವರ್ಷಗಳಿಂದ ವಿವಿಧ ಪ್ರಾಂತ್ಯಗಳನ್ನು ಸಂದರ್ಶಿಸಿ, ಆಯಾ ಪ್ರದೇಶಗಳ ಸ್ವಾಭಾವಿಕ ಸಂಪತ್ತುಗಳಿಗೆ ಅನುಕೂಲವಾದ ಮತ್ತು ಸರಿಹೋಗುವ ಸುಧಾರಣೆಗಳನ್ನು ತಿಳಿದು ಈ ಯೋಜನೆಯಲ್ಲಿ ಸೇರಿಸಲ್ಪಟ್ಟಿರುತ್ತವೆ. ಜನರ ಆರ್ಥಿಕ ಸ್ಥಿತಿಯನ್ನು ಏರಿಸುವುದು ಮತ್ತು ನಮ್ಮ ರಾಷ್ಟ್ರದಲ್ಲಿರುವ ಕೊರತೆಗಳನ್ನು ಹೊಗಲಾಡಿಸುವುದೇ ಈ ಯೋಜನೆಯ ಗುರಿ. ಇದು ಭಾರತದ ಎಲ್ಲಾ ಪ್ರಾಂತ್ಯಗಳಿಗೂ ಅನ್ವಯಿಸುವುದು. ಈ ಯೋಜನೆಯನ್ನು ಸರಕಾರವು ತಯಾರಿಸಿದರೂ ಕೂಡಾ, ಭಾರತೀಯರೆಲ್ಲರೂ ಒಗ್ಗಟ್ಟಿನಿಂದ ಸಹಕರಿಸಿದರೆ ಮಾತ್ರ ಯೋಜನೆಯ ಗುರಿ ಸಂಪೂರ್ಣವಾಗಿ ಪೂರೈಸಲಾಗುವುದು. ಸರಕಾರವು ಅಭಿವೃದ್ಧಿ ಮಾರ್ಗವನ್ನು ತೋರಿಸಿ, ಸಾಧ್ಯವಿದ್ದಷ್ಟು ಮಟ್ಟಿಗೆ ಹಣ, ತಜ್ಞೀತಿ ಹೊಂದಿನ ನೌಕರರ ಸಹಾಯ ಕೊಡಲು ಸಾಧ್ಯವಾಗುವುದಲ್ಲದೆ, ಯೋಜನೆಯಿಂದ ಪರಿಪೂರ್ಣ ಸ್ವಯೋಜನ ಹೊಂದಬೇಕಾದರೆ ಎಲ್ಲರೂ ಶ್ರದ್ಧೆಯಿಂದ ತನುಮನ ಧನಗಳನ್ನರ್ಪಿಸುವುದು ಅಗತ್ಯ.

ಈಗಿನ ಪರಿಸ್ಥಿತಿಯಲ್ಲಿ ಆಹಾರದ ಸಮಸ್ಯೆಯು ಪ್ರಾಮುಖ್ಯವಾದುದು. ಅದುದರಿಂದಲೇ ಈ ಯೋಜನೆಯಲ್ಲಿ ಅಧಿಕ ಆಹಾರ ಉತ್ಪತ್ತಿಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ತಕ್ಷಣಕ್ಕೆ ವ್ಯವಸಾಯ ಅಭಿವೃದ್ಧಿ ದೃಷ್ಟಿಯಿಂದ ಜಮೀನ್ದಾರಿ ಮತ್ತು ಜಾಗೀರ್‌ದಾರಿ ಭೂಮಿಯನ್ನು ಸರಕಾರವು ವಶಪಡಿಸಿಕೊಂಡಿರುತ್ತದೆ. ಇನ್ನು ಮುಂದೆ ಸಂಘಗಳ ಮುಖಾಂತರ ವ್ಯವಸಾಯ ಮಾಡುವ ಏರ್ಪಾಡುಗಳನ್ನು ಪಳಕಕ್ಕೆ ತರುವ ವಿಚಾರದಲ್ಲಿ ಸರಕಾರವು ಗಮನಿಸುತ್ತಿದೆ.

ಈ ಯೋಜನೆಯಿಂದ ದೊರಕಬಹುದಾದ ಅಧಿಕ ಉತ್ಪತ್ತಿಯ ಅಂದಾಜು ವಿವರಗಳನ್ನು ಸ್ವಲ್ಪ ಮಟ್ಟಿಗೆ ಈ ತೆಳಗೆ ಕೊಡಲಾಗಿದೆ. 8 ಮಿಲಿಯ ಎಕರೆಗಳಿಗೆ ಅಣೆಕಟ್ಟುಗಳಿಂದಲೂ, 11 ಮಿಲಿಯ ಎಕರೆಗಳಿಗೆ ಮದಗಗಳಿಂದ ನೀರಿನ ಅನುಕೂಲತೆಯನ್ನೊದಗಿಸುವ ಏರ್ಪಾಡು ಈ ಪಂಚವಾರ್ಷಿಕ ಯೋಜನೆಯಲ್ಲಿದೆ. ಮಾತ್ರವಲ್ಲದೆ 7 ಮಿಲಿಯ ಬಂಜರು ಭೂಮಿಯನ್ನು ಸಾಗು ಮಾಡಲು ಕೂಡಾ ನಿರ್ಧರಿಸಿರುವುದು. ಈ ಕೆಲವು ಯೋಜನೆಗಳಿಂದಾಗಿ ಮಿಲಿಯ ಆಹಾರ ಧಾನ್ಯಗಳ ಅಧಿಕ ಉತ್ಪತ್ತಿ ದೊರೆಯುವುದೆಂದು ಅಂದಾಜು ಮಾಡಲಾಗಿದೆ. ಈ ಅಣೆಕಟ್ಟುಗಳಿಂದಾಗಿ ವಿದ್ಯುದುತ್ಪಾದನೆಯು ಒಂದು ಮಿಲಿಯ ಕಿಲೋವಾಟ್ಸ್‌ನಷ್ಟು ಕೂಡಿ ಹೆಚ್ಚುವುದು. ಈ ವಿದ್ಯುಚ್ಛಕ್ತಿಯಿಂದ ನಮ್ಮಲ್ಲಿಯ ಜನರಿಗೂ ಗಿರಣಿಗಳಿಗೂ ಅನೇಕ ಅನುಕೂಲತೆಗಳನ್ನು ಒದಗಿಸಿ, ದೇಶವು ಅಭಿವೃದ್ಧಿ ಹೊಂದಲು ಅವಕಾಶ ದೊರೆಯುವುದು.

ಇಷ್ಟು ಯಾತ್ರವಲ್ಲದೆ 12 ಲಕ್ಷ ಟೇಲು ಹತ್ತಿಯನ್ನೂ, 20 ಲಕ್ಷ ಟೇಲು ಗೋಣಿ ನಾರು ಕೂಡಾ ಈ ಯೋಜನೆಯಿಂದಾಗಿ ಅಧಿಕ ಉತ್ಪತ್ತಿಯಾಗುವುದು. ಈಗ ಕೈಮಗ್ಗಗಳಿಂದ ತಯಾರಿಸುವ 800 ಮಿಲಿಯ ಗಜ ವಸ್ತ್ರದ ಪರಿಮಾಣವನ್ನು 1,700 ಮಿಲಿಯ ಗಜದಷ್ಟಕ್ಕೆ ಏರಿಸಲಾಗುವುದು. ಇನ್ನು ಕಬ್ಬಣ, ಸಿಮೆಂಟು ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಉಪಕರಣಗಳ ತಯಾರಿಸುವಿಕೆಯನ್ನು ಹೆಚ್ಚಿಸಲಾಗುವುದು. ಇವು ಪಂಚ ವಾರ್ಷಿಕ ಯೋಜನೆಯ ಕೆಲವು ಕಾರ್ಯಕ್ರಮಗಳು.

ನಮ್ಮ ರಾಷ್ಟ್ರದ ಪರಿಸ್ಥಿತಿ ನೋಡಿದರೆ ಈ ಯೋಜನೆಯು ಬಹಳ ಚಿಕ್ಕದಾದುದೆಂದು ಅನೇಕರಿಗೆ ತೋರಬಹುದು. ಆದರೆ ಮುಂದೆ ಬರಲಿರುವ ಮಹತ್ತಾದ ಯೋಜನೆಗಳಿಗೆ ಇದು ಬುನಾದಿಯೆಂದು ತಿಳಿಯಬೇಕು. ಆದುದರಿಂದಾಗಿ ಈ ಯೋಜನೆಯಿಂದ ಹೆಚ್ಚು ಪ್ರತಿಫಲ ದೊರೆತಲ್ಲಿ ಭಾರತದ ಅಭಿವೃದ್ಧಿಗೆ ಇನ್ನೂ ವಿಕಾಲವಾದ ಯೋಜನೆಯನ್ನು ತಯಾರಿಸಲು ಅವಕಾಶ ದೊರೆಯುವುದು.

[ಕೃಷಿಕರ ಬಂಧು]

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 618/52.

ಯರ್ರಕಲ್ಲು ನರಸಪ್ಪನ ಹೆಂಡತಿ ಅಚ್ಚಮ್ಮ—ಕನಕೇಶ್ವರಿ ... ವಾದಿ.

1. ಕುಬುಸ ನಾಗಪ್ಪ
2. ಕುಬುಸ ಸಿದ್ದಪ್ಪ ... ಎದುರು ಪ್ರತಿವಾದಿಗಳು

ಮೇಲಿನ ನಂಬರು ಪ್ರಕಾರಕ್ಕೆ ವಾದಿಯು ತನಗೆ ಪ್ರತಿವಾದಿಗಳಿಂದ ಬರಬೇಕಾದ ಪ್ರೋನೋಟಿನ ಬಾಕಿಗಾಗಿ ರೂ. 350/-ಕ್ಕೆ ದಾವಾ ದಾಖಲು ಮಾಡಿರುತ್ತಾಳೆ. ಇದರ ವಾಯ್ದೆಯು 3-3-53ಕ್ಕೆ ಇದೆ. ಇದಕ್ಕೆ 2ನೇ ಪ್ರತಿವಾದಿಯಾದ ಕುರುಬ ಸಿದ್ದಪ್ಪನಿಗೆ ತಕರಾರು ಇದ್ದಲ್ಲಿ ವಾಯ್ದೆಯ ದಿನ ಹಗಲು 11 ಗಂಟೆಗೆ ಮುದ್ದು ಆಗಲಿ—ವಕೀಲರ ದ್ವಾರವಾಗಲಿ ಹಾಜರಾಗಬೇಕು. ಇಲ್ಲವಾದರೆ ಎಕ್ಸ್ ಪಾರ್ಟಿ ಡಿಕ್ರಿಯಾಗುವದು.

ಸಾಕ್ಷಿ ವೆಂಕೋಬಾಚಾರ್ಯ
ವಾದಿಯ-ಅಡ್ವೊಕೇಟು.

ಬಳ್ಳಾರಿ ಜಿಲ್ಲಾ ಬೋರ್ಡು-ಸ್ತ್ರೀಯರ ಕಾಲೇಜು

ಶ್ರೀ ಮಹಾಬಲೇಶ್ವರಪ್ಪನವರ ಸಲಹೆ

ಬಳ್ಳಾರಿ ಜಿಲ್ಲಾ ಬೋರ್ಡು ಆಯವ್ಯಯದಲ್ಲಿ ಹೆಚ್ಚಿನ ಉಳಿತಾಯವಾಗುವ ಕಾರಣ ಬಳ್ಳಾರಿ ನಗರದಲ್ಲಿ ಸ್ತ್ರೀಯರಿಗಾಗಿ ಕಾಲೇಜೊಂದನ್ನು ಪ್ರಾರಂಭಿಸಲು ಒಂದು ಲಕ್ಷ ರೂ ವೆಚ್ಚಿಸಬೇಕೆಂದೂ, ದೊಡ್ಡಪ್ಪತ್ರೆಯಲ್ಲಿ ಬಡಾವಣೆ ಕಟ್ಟಿಸಲು 55 ಸಾವಿರ ಕೊಡಬೇಕೆಂದೂ ಅಧ್ಯಕ್ಷರಾದ ಶ್ರೀ ವೈ. ಮಹಾಬಲೇಶ್ವರಪ್ಪನವರು ಸೂಚಿಸಿದರುಹಳೆಯ ಬಾಕಿಗಳನ್ನೆಲ್ಲಾ ವಸೂಲಿ ಮಾಡಿದ ಕಾರಣ ಅಕಸ್ಮಿಕವಾಗಿ ದೊರೆತ ಈ ಹೆಚ್ಚು ಹಣವನ್ನು ಮೇಲ್ಕಾಣಿಸಿದಂತೆ ವೆಚ್ಚಿಸಲು ಸದಸ್ಯರು ಒಪ್ಪಿದ್ದಲ್ಲಿ ಜಿಲ್ಲಾ ಬೋರ್ಡು ಸ್ವಾಧೀನದಲ್ಲಿ ಮುಗಿಯದಿರುವ ಹೈಸ್ಕೂಲ್ ಕಟ್ಟಡಗಳಿಗಾಗಿ ಈ ಹಣವನ್ನು ಉಪಯೋಗಿಸಲು ಅಧ್ಯಕ್ಷರು ಬೇಡಿದರು.

ಡಾ. ಸಾನಿಶ್ರೀಪಾಯಿಯವರು ಅಧ್ಯಕ್ಷರ ಸೂಚನೆಗಳಿಗೆ ವಿರುದ್ಧವಾಗಿ ಕೊಟ್ಟರು ಆದರೆ ಹಳ್ಳಿಗಳ ಕೊಂಡತೆಗಳನ್ನು ದುರಸ್ತಮಾಡಲು ಶ್ರೀಗಳ್ಳಿದ್ದ ಶಂಕರರೆಡ್ಡಿ, ಮರಿಸ್ವಾಮಿ, ವಿಶ್ವನಾಥಸಿಂಗ್ ಮತ್ತು ಚನ್ನಬಸವನಗೌಡರು ವಾದಿಸಿದರು ಚರ್ಚೆಯ ನಂತರ ಹಣವನ್ನು ಮುಗಿಯದಿರುವ ಹೈಸ್ಕೂಲ್ ಕಟ್ಟಡಗಳಿಗಾಗಿ ಉಪಯೋಗಿಸತಕ್ಕದ್ದೆಂಬ ನಿರ್ಣಯವಾಯಿತು ಬೋರ್ಡಿನ ಹಣದಿಂದ ಕಂಪ್ಲಿ ಪ್ರಸೂತಿ ಕೇಂದ್ರಕ್ಕೆ 5000ರೂ, ಬಳ್ಳಾರಿ ವಾಲ್ಮೀಕಿ ಹಾಸ್ಪೆಲ್‌ಗೆ 5000ರೂ, ಹುಣಸನಹಳ್ಳಿ ಬಣಾವಾರ ಹಾಸ್ಪೆಲ್‌ಗೆ ಕೊಡಿಗೆ ಯಾಯಿತು.

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

S. C. No. 301/52

ಮುತ್ತಿಗಿ ವಂಕಾರಪ್ಪ–ತಂದೆ ವೆಂಕಪ್ಪ
ಮೇಜರು–ವೈಶ್ಯ–ವ್ಯಾಪಾರ–
ವಾಸ–ಬನ್ನಿಕಲ್ಲು–ತಾಲೂಕು ಹಡಗಲಿ } ವಾದಿ

Vs.

ವಡ್ಡರ ಹುಲಿತಿಮ್ಮಪ್ಪ ತಂದೆ ವಡ್ಡರ
ಹುಲಿತಿಮ್ಮಣ್ಣನವರ ನಾಗಪ್ಪ–ಮೇಜರು
ಜಿರಾಯ್ತಿ–ಬನ್ನಿಕಲ್ಲು ತಾಲೂಕು ಹಡಗಲಿ } ಪ್ರತಿವಾದಿ

ಆರ್ಡರ್ ೨ ರೂಲ್ 1 C. P. C ಪ್ರಕಾರಕ್ಕೆ ಪ್ರತಿವಾದಿಗೆ ತಿಳಿಯಪಡಿಸುವದೇನಂದರೆ ವಾದಿಯು ನಿಮ್ಮಮೇಲೆ ಪ್ರಾಮಿಸರಿ ನೋಟಿನ ಬಾಬ್ತು ರೂ. 81-8-3 ಬದ್ದಾವಾಡಿಕೊಳ್ಳಲು ದಾವಾ ಮಾಡಿರುತ್ತಾನೆ. ಸದರಿ ದಾವಾ ವಾಯ್ದೆಯು 28–2–53 ಕ್ಕೆ ಇದೆ ಸದರಿ ವಾಯ್ದೆಯದಿನ ನೀವು ಸರಿಯಾಗಿ ಹಗಲು 10½ ಗಂಟೆಗೆ ಕೋರ್ಟಿನಲ್ಲಿ ಖುದ್ದಾಗಲಿ-ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸಬೇಕು. ತಪ್ಪಿದಲ್ಲಿ ಎಕ್ಸಪಾರ್ಟಿ ತೀರ್ಪು ಕೊಡೋಣಾಗುತ್ತದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಎ. ಕೃಷ್ಣಭಟ್

ವಾದಿಯ-ಅಡ್ವೋಕೇಟು.

ಪ್ರಜಾಭಿಪ್ರಾಯದ ಸ್ವರೂಪ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

"ತಪ್ಪುತಿಳಿವಳಿಕೆ, ಅಪಕ್ತಿ, ಅಸೂಯೆ, ದುರ್ಭಾವನೆ, ಸದ್ಭಾವನೆ, ಹಟ, ವೃತ್ತ ಪತ್ರಿಕಾಸಮಾಚಾರ—ಇವುಗಳ ಅಭೇದ್ಯ ಮಿಶ್ರಣವೇ ಜನಾಭಿಪ್ರಾಯ," ಎಂದು ಸರ್ ರಾಬರ್ಟ್ ಪೀಲ್ (Sir Robert peel) ಹೇಳಿದ್ದಾನೆ. "ಮತದಾರರು ಬಹುವಾಗಿ ಬುದ್ಧಿಹೀನರು. ರಾಜಕೀಯ ಅನೀತಿ ಮತ್ತು ಮಾತ್ಸರ್ಯ ಪೂರಿತ ವಾಗ್ಮಿಗಳ ಶಬ್ದಾಡಂಬರದಿಂದ ಮುಗ್ಧವಾದ ಮೂಕಪ್ರಾಣಿಗಳ ಜನ," ಎಂದು ಕಟುವಾಗಿ ಹೇಳಿದ್ದಾನೆ ಕಾರ್ಲೈಲ್ (Carlyle). ನ ಈ ತೆರನಾದ ಅಭಿಪ್ರಾಯ ಪ್ಲೇಟೋ ಮತ್ತು ಅರಿಸ್ಟಾಟಲರ ಕಾಲಕ್ಕೂ ಇದ್ದುವು. 'ನಾವು ಮಾನವನನ್ನು ಸಂಸ್ಕೃತನಾದ ಪ್ರಾಣಿ ಎಂದು ಕರೆಯುತ್ತೇನೆ. ಪ್ರಕೃತಿ ಅನನ ಮೇಲೆ ನಯೆ ಬೀರಿದರೆ, ಅವನ ಶಿಕ್ಷಣ ಸಂಯಾದರೆ, ಜೀವಿಗಳಲ್ಲಿ ಅಂಥವನು ಅತಿ ಸಂಸ್ಕೃತನೂ ದೈವಸನೂ ನನೂ ಆದವನಹುದು. ಆದರೆ ಅವನಿಗೆ ಶಾಕನ್ನು ಶಿಕ್ಷಣವಿಲ್ಲದಿದ್ದರೆ ಪ್ರಪಂಚದ ಜೀವಿಗಳಲ್ಲೆಲ್ಲಾ ಅತಿ ಅಸಂಸ್ಕೃತನಾಗುವನು ಮಾನವನು," ಎಂದು ಪ್ಲೇಟೋ ಅಭಿಪ್ರಾಯ ಪಟ್ಟಿಲ್ಲವೇ ? ಜನಜಂಗಳಯು ನಿರಂಕುಶತ್ವದಿಂದ (tyranny of the mob) ಪಾರಾಗುವುದೇ ಪ್ಲೇಟೋ ಮತ್ತು ಅರಿಸ್ಟಾಟಲರ ರಾಜಕೀಯ ಮತ್ತು ಸಾಮಾಜಿಕ ಸ್ವರೂಪಾದನೆಯ ಮುಖ್ಯಾಂಶ.

ಅಮೆರಿಕಾ ಭಾರತ ಸಂಬಂಧ ಕೆಡುತ್ತಲಿದೆ

ರಿಪಬ್ಲಿಕ್ ಪಾರ್ಟಿಯ ಈಸನ್-ಹವರ್‌ರು ಅಮೆರಿಕದ ಅಧ್ಯಕ್ಷರಾದ ನಂತರ ಅಮೆರಿಕಾ ಭಾರತ ಸಂಬಂಧವು ಕೆಡುತ್ತಲಿದೆಯೆಂದು ದೆಹಲ್ಲಿ ವಿಸ್ಕವಿದ್ಯಾಲಯದ ಪ್ರೊಫೆಸರೂ ಬ್ಯುರಿ ಅಮೆರಿಕವ ಸುಪ್ರಸಿದ್ಧ ಪತ್ರಿಕೆಯಾನ್ಯೂಯಾರ್ಕ್ ಟೈಮ್ಸ್‌ಗೆ ಬರೆದಿರು ತಾರೆತ ಹೊಸ ಪಾರ್ಟಿಯು ವಿಶೆಯಸ್ಪರ ಹಿತ ವಿರೋಧಗಳಿಗೆ ಬಲಿಯಬೊಡನೆಕಲೆ ತು ಕೆಲಸ ಮಾಡುತ್ತಿರುವದಾಗಿ ಭಾರತೀಯರ ಅನುಮಾನವುಂಟು. ಅಮೆರಿಕನರು ಬ್ರಿಟಿಷರೊಡನೆ ಜಲತು ಕಾಶ್ಮೀರದ ಸಂಬಂಧವಾಗಿ ಅನುಸರಿಸಿದ ಧೋರಣೆ–ಫ್ಲಿಪ್ಪರ್ ಚಾಲ್ಮರನ್ನು ಭಾರತದಲ್ಲಿ ಅಮೆರಿಕಾ ರಾಯಭಾರಿ ತೆಗೆದದ್ದು ಚೀನದ ವಿಷಯದಲ್ಲಿ ವರ್ತಿಸುತ್ತಿರುವ ನೀತಿ ಇವುಗಳಿಂದ ಅಮೆರಿಕಾ ವಿಷಯಕ್ಕೆ ಅಸಹ್ಯತೆ ಹುಟ್ಟುತ್ತಲಿವೆ.

ಶ್ರವಣಬೆಳಗೊಳ ಮಹಾಮಸ್ತಕಾಭಿಷೇಕ

— ಆಹ್ವಾನ —

೧೪ ವರ್ಷಗಳ ನಂತರ ಶ್ರೀ. ಗೋಮಟೇಶ್ವರ ಸ್ವಾಮಿಯವರ ಮಹಾಮಸ್ತಕಾಭಿಷೇಕವು ಫೆಬ್ರುವರಿ ತಿಂಗಳ ಅಂತ್ಯದಲ್ಲಿ ಮತ್ತು ಮಾರ್ಚ್‌ತಿಂಗಳ ಮೊದಲನೆ ವಾರದಲ್ಲಿ ಜರುಗುವುದು.

ಇಡೀ ಭಾರತದ ನಾನಾಕಡೆಗಳಿಂದ ೩ ಲಕ್ಷ ಮಂದಿ ಯಾತ್ರಾರ್ಥಿಗಳು ಇಲ್ಲಿಗೆ ಬರತಕ್ಕವರಿದ್ದಾರೆ.

ಸೇವಾದಳದ ಸಂಸ್ಥಾಪನಾಚಾರ್ಯರಾದ ಡಾ॥ ಹರ್ಡೀಕರ್ ರವರು ಹಿಂದೆ ಮಹಾ ಮಸ್ತಕಾಭಿಷೇಕದ ಸಮಯದಲ್ಲಿ ಸೇವಾ ದಳದ ಬಂಧುಗಳೊಡನೆ ಅಲ್ಲಿ ನಿಂತು ಅಮೂಲ್ಯ ಸೇವೆ ಸಲ್ಲಿಸಿ, ನಮಗೆ ಅವರ್ಣನೀಯರಾಗಿದ್ದಾರೆ.

ಈ ಬಾರಿ ಶಿಸ್ತಿನ ರಕ್ಷಣೆಗಾಗಿ ಸ್ಕೌಟ್ ಬಂಧುಗಳ ಜೊತೆಗೆ ಎಂದು ನೂರು ಮಂದಿ ಸೇವಾದಳದ ಸ್ವಯಂ ಸೇವಕರೂ, ಮತ್ತು ಇಡೀ ಕ್ಷೇತ್ರದ ಪಾರ್ಕಿಂಗು ಕಾರ್ಯಕ್ಕಾಗಿ ಒಂದು ನೂರು ಮಂದಿ ಸೇವಾದಳದ ಸ್ವಯಂಸೇವಕರೂ, ಮತ್ತು ಒಂದು ನೂರು ಮಂದಿ ಝಾಡಪಲಿ ಬಂಧುಗಳೂ ಸೇರಿ ಸೇವೆ ಸಲ್ಲಿಸಲು ಅವಕಾಶ ದೊರಕಿಬೆಟ್ಟು ೨೦೦ ನುಂದಿ ಸೇವಾದಳದ ಸ್ವಯಂ ಸೇವಕರ ಸೇವೆಯು ಅಗತ್ಯವಾಗಿದೆ. ಸಹಾಯಿ ಕೆಲಸವನ್ನ ಆರೋಗ್ಯ ಸಿಯಮಗಳಿಗೆ ಅನುಗುಣವಾಗಿ ಮಾಡಬೇಕಾಗಿದೆ.

ತಾ. ೨೦–೨–೫೩ ರಿಂದ ೭–೩–೫೩ ನೇ ದಿನಪರಿಗೆ ಈ ಸೇವಾಶಿಬಿರ ಜರುಗುವುದು ೩೮ ದಿನಗಳ ಪೂರ್ತಾ ಸೇವೆ ಸಲ್ಲಿಸುವವರು ಎಷ್ಟು ಮಂದಿ ಸ್ವಯಂಸೇವಕರು ಬರಬಹುದಾಗ್ಯ? ಒಂದು ವಾರಕ್ಕೆ ಕಡಿಮೆ ಇಲ್ಲದೆ ಸೇವೆ ಸಲ್ಲಿಸುವವರು ಯಾವ ತಾರೀಖಿನಿಂದ ಯಾವ ತಾರೀಖಿನವರೆಗೆ ಎಷ್ಟು ಮಂದಿ ಬರಲು ಸಾಧ್ಯ? ಎಂಬುದಕ್ಕೆ ದಯವಿಟ್ಟು ಈ ಕೆಳಗಿನ ವಿಳಾಸಗಳಿಗೆ ತಿಳಿಸುವುದು:–

ಒಂದೇಗುವ ಪ್ರಯಾಣದ ವೆಚ್ಚವನ್ನು ಶಿಬಿರ ಪ್ರಾರಂಭವಾದ ದಿನದಿಂದ ಮುಕ್ತಾಯವಾಗುವವರೆಗೆ ಸೇವೆ ಸಲ್ಲಿಸುವವರಿಗೆ ಮಾತ್ರ ಕೊಡಲಾಗುವುದು ತಾ॥ ೨೧–೨–೫೩ ರಂದು ತಾ॥ ೨೮–೨–೫೩ ರವರೆಗೆ ಶಿಬಿರದಲ್ಲಿ ಇರುವದಾದರೆ ಅವರಿಗೆ ಪ್ರಯಾಣದ ವೆಚ್ಚದಲ್ಲಿ ಒಂದು ಭಾಗವನ್ನು ಕೊಡಲಾಗುವುದು. ಎಲ್ಲರಿಗೂ ಉಚಿತ ವಸತಿ ಊಟದ ವ್ಯವಸ್ಥೆ ಮಾಡಲಾಗುವುದು.

೨. ಪ್ರಾಚೀನ ಸಂಸ್ಕೃತಿಯಲ್ಲಿ ಪ್ರಜಾಭಿಪ್ರಾಯದ ಸ್ಥಾನ

ಜನಾಭಿಪ್ರಾಯ ಹುಟ್ಟಿದುದು ಹದಿನೆಂಟನೇ ಶತಮಾನದಿಂದ ಈಚೆಗೆ, ಅದಕ್ಕೆ ಹಿಂದೆ ಜನಾಭಿಪ್ರಾಯವೇ ಇರಲಿಲ್ಲ ಎಂದು ಕೆಲವರು ವಾದಿಸುವುದುಂಟು. ಈ ವಾದದಲ್ಲಿ ತಿರುಳಿಲ್ಲ. ಇತಿಹಾಸದಿಂದ ಉದಹರಿಸುವುದಾದರೆ ಜನಾಭಿಪ್ರಾಯ ಪ್ರಾಚೀನ ಕಾಲದಿಂದಲೂ ಒಂದಲ್ಲ ಒಂದು ಬಗೆಯಲ್ಲಿ ಜೀವಿಸಿ ಬಂದಿರುತ್ತಿದೆಯೆಂಬ ಅಂಶ ದೃಢಪಡುವುದು.

ಹೀಬ್ರು ಜನರಲ್ಲಿ ಧರ್ಮಭೋಧಕರು ಜನ ಸಂವೇದನೆಯನ್ನು ದೈವಿಕ ಮಾತನಾಡಿ ಜನಾಭಿಪ್ರಾಯವನ್ನು ಸೂಡಿಸುತಿದ್ದರು. ಅಂದಿನ ಕಾಲದ ವ್ಯಕ್ತಿಯ ಸಾಮಾನ್ಯ ಸ್ವಭಾವ ಇತರರು ಅಂದುದನ್ನು ಅಂಗೀಕರಿಸುವುದು. ಅದುದರಿಂದ ಜನತೆಯಲ್ಲಿ ಧರ್ಮಬೋಧಕರ ಉಪದೇಶಗಳ ಸತ್ಯಾಸತ್ಯತೆಗೆ ಅವಕಾಶವಿರಲಿಲ್ಲ.

ಪ್ರಾಶ್ಚಾತ್ಯರಲ್ಲಿ ಸಂಸ್ಕೃತರೆಂದು ಪ್ರಸಿದ್ಧರಾದ ಗ್ರೀಕರಲ್ಲಿ ಜನಾಭಿಪ್ರಾಯ ಬಹುಚನ್ನಾಗಿ ವ್ಯಕ್ತಗೊಂಡಿತ್ತು. ಅವರಲ್ಲಿ ಕ್ರಿ. ಪೂ. ಆರನೇ ಶತಮಾನದ ವೇಳೆಗೇ ಇದು ಉತ್ತಮ ಬಗೆಯಲ್ಲಿ ಪ್ರಸ್ಫುಟಗೊಂಡಿತ್ತು. ಶ್ರೀಮಂತ ವರ್ಗದ : ನಿರಂಕುಶತೆ, ಆರ್ಫಿಸಂ ಸಿದ್ಧಾಂತದ ವಾರಲೌಕಿಕತೆ (Mystic other -- worldliness) ಇವೇ ಮೊದಲಾದವು ನಗರಗಳಲ್ಲಿನ-ಅವರಲ್ಲೂ ಅಥೆನ್ಸ್ ನಗರದ-ಜನರ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾದುವು. ಜನತೆಯಲ್ಲಿ ಗೋಚರವಾದ ಕೊರತೆಗಳನ್ನು ಪ್ರಜಾರ ಮಾಡಿ, ಅವುಗಳು ನಿವಾರಣೆಯ ಬಗ್ಗೆ ಪ್ರಜಾಭಿಪ್ರಾಯವನ್ನು ಸೂಡಿಸುತ್ತಿದ್ದರು ಪ್ರಾಚೀನ ಗ್ರೀಕರ ರಾಷ್ಟ್ರಗಳ ವಿಷಯದಲ್ಲಿ ಜನವೆಂದರೆ ಸ್ವತಂತ್ರರಾದ ಪೌರ ಜನ ಮಾತ್ರ. ಕ್ರಿ. ಪೂ. ೪ ನೇ ಶತಮಾನದಲ್ಲಿ ೧, ೫೦, ೦೦೦ ಜನಸಂಖ್ಯೆಯಿದ್ದ ಅಥೆನ್ಸ್ ನಗರದ ರಾಷ್ಟ್ರದಲ್ಲಿ ೪೦,೦೦೦ ಜನಮಾತ್ರ ಪೌರರೆನಿಸಿದ್ದರು; ಉಳಿದವರಲ್ಲಿ ಹಲವರು ಕಂಗಸರು, ಹಲವರ ಪೌರತ್ವರಹಿತವಾಸರು ಮತ್ತು ಪರದೇಯರು ಮತಾಧಿಕಾರ : ಪೌರರಿಗೆ ಮಾತ್ರ ಮೀಸಲು. ಸಾರ್ವಜನಿಕ ರಂಗಗಳಾದ "ಆಕ್ರೊಪಾಲಿಸ್" ಜನಾಯಿತ ಸಭೆಗಳಾದ "ಗೆರೂಷಿಯ," "ಆಸೆಲ್ಸಾ," "ಈಪರ್ಸ್" ಮುಂತಾದ ಸಭೆಗಳಿಗೆ ಸ್ವತಂತ್ರ ಪೌರರಿಗೆಲ್ಲಾ ಪ್ರವೇಶವಿತ್ತು. ಸಾರ್ವಜನಿಕ ವಿಷಯಗಳನ್ನು ಪ್ರಸಿದ್ಧಿಪತ್ರಿಕೆಗಳ ಮೂಲಕವಾಗಿ ಜನಕ್ಕೆ ತಿಳಿಸುತ್ತಿದ್ದ ಪ್ರಜಾಪ್ರಭುತ್ವ ನೇರವಾದುದಾಗಿದ್ದರಿಂದ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ನಿರ್ಧಾರಗಳೆಲ್ಲವೂ ಸಭೆಯುತ್ತಿದ್ದುದು ಸ್ವತಂತ್ರ ಪೌರಜನರ ಅಭಿಪ್ರಾಯಕ್ಕನುಗುಣವಾಗಿ.

ಪ್ರಜಾವಾಣಿಯೇ ದೇವವಾಣಿಯೆಂಬುದು ರೋಮನರ ಸಿದ್ಧಾಂತ (Vox populi Vox Dei) ಜನಾಭಿಪ್ರಾಯಕ್ಕೆ ಇದಕ್ಕಿಂತ ಹೆಚ್ಚಾದ ಬೆಲೆಯುಂಟೇನು? "ಕಮಿಷಿಯ ಕ್ಯೂರಿಯೇಟ" (Comitia Curiata) ಮತ್ತು "ಕಮಷಿಯ ಸಂಚುರಿಯೆಟ" (Comitia Centurata) ಸಭೆಗಳೇ ಇದಕ್ಕೆ ನಿದರ್ಶನ. ರೋಮಿನ ವಿಜಯಗಳು ದಿಗಂತ ವ್ಯಾಪಿಸಿದವಷ್ಟೆ ಇವುಗಳಿಂದ ರಾಜಕೀಯ, ಧಾರ್ಮಿಕ ಮತ್ತು ಆರ್ಥಿಕ ಪದ್ಧತಿಗಳು ಒಂದಿಡೆಯಿಂದ ಇನ್ನೊಂದೆಡೆಯಲ್ಲಿ ಹರಡಲು ಎಷ್ಟೋ ಅನುಕೂಲವಾದುವು. ರೋಮನರ ಸಾಮ್ರಾಜ್ಯವಿಸ್ತಾರ ನೀತಿ ಏನೇ ಇರಲಿ, ಅದರಿಂದ ವಾರ್ತಾಪ್ರಸಾರವಾಯಿತು, ಸಂಸ್ಕೃತಿ ವಿಕಾಸಗೊಂಡಿತು, ವಾರ್ತಾ ಪ್ರಸಾರಕ್ಕೆ ಒತ್ತಾಯವೂ ಏರ್ಪಟ್ಟಿತು. ಕ್ರಿ ಪೂ. ೬೦. ರಲ್ಲಿ ಕಾನ್ಸುಲ್ ಪದವಿಗೇರಿದ ಜ್ಯೂಲಿಯಸ್ ಸೀಸರ್ ದೈನಂದಿನ ಸಮಾಚಾರಗಳನ್ನು "ಎಕ್ಟಾ ಡೈಯರ್ನ" (Acta Diurna) ಮೂಲಕ ಜನತೆಗೆ ಪ್ರಚಾರ ಗೊಳಿಸಲು ಏರ್ಪಡಿಸಿದ್ದ. ವಿನೋದ, ಮಾತೀಯಸಂಸ್ಕಾರ, ಸೆನೆಟ್ ಸಭೆಯ ಕಾರ್ಯಕಲಾಪ, ಯುದ್ಧ, ಒಪ್ಪಂದ — ಇಂತು ಎಲ್ಲಾ ಅಂಶಗಳೂ ಜನರ ಅರಿವಿಗೆ ತನ್ಮೂಲಕ ಬರಲಾರಂಭವಾಯಿತು.

"ಜನನೇ ರಾಷ್ಟ್ರದ ಮುಖ್ಯಾಂಶ, ಅನಂತರ ರಾಷ್ಟ್ರದ ದೇವಸನುಂದಿರಗಳ, ಪ್ರಾಮುಖ್ಯತೆಯಲ್ಲಿ ಕೊನೆಯದು ಪ್ರಾಮಿಯಸ್ಥಾನ," ಎಂದು ಹೇಳಿರುವ ಮೆನ್ಸಿಯಸ್ಸಿನ (Mencius) ವಾಕ್ಯ ಚೈನಾದೇಶದ ರಾಜಕೀಯ ಸಿದ್ಧಾಂತದ ಸಾರ ಸ್ವರೂಪವನ್ನು ತಿಳಿಸುವುದು. ಲೆವಿಯರ್ಥ (Leviathan) ವಾದಿಸುವ ಸಿದ್ಧಾಂತಕ್ಕೂ (the theory) ಸ್ವೇಚ್ಛಾಚಾರ ದೈವಿಕ ಸಿದ್ಧಾಂತಕ್ಕೂ the theory of Divine Right ಚೀನೇಯರ ಸಿದ್ಧಾಂತ ಎಷ್ಟು ವಿರೋಧ? ಅದು ಶ್ರೇಷ್ಠ?

ಸುದ್ದಿ-ಸಮಾಚಾರ

(೧) ಸೈಕಲ್ ಮೇಲೆ ಜಗತ್ತನ್ನು ಸುತ್ತಿದ ಮಹಿಳೆ.

ನ್ಯೂಝುಲೆಂಡಿನ ಮಿಸ್ "ಲ್ಯೂಸಿ ಸದರ್ಲಂಡ" ಎಂಬ ಯುವತಿಯು ಸೈಕಲ್ ಮೇಲೆ ಜಗತ್ತಿನ ಪ್ರವಾಸ ಕೈಕೊಂಡಿದ್ದು ಇದೀಗ ಮುಂಬಯಿಗೆ ಬಂದಿದ್ದಾಳೆ. ಮುಂಬಯಿಯ ಹಿಂದೀಯರಿತ್ತ ಸ್ವಾಗತದಿಂದ ಅವಳಿಗೆ ತುಂಬ ಸಂತೋಷವಾಯಿತು. ಅವಳ ಮನೋ ಧೈರ್ಯ ಎಲ್ಲಕ್ಕೂ ಹಿರಿಯ. ಕೊರಡುವಾಗ ಅವಳು ವಿಶೇಷ ಧನವನ್ನಾಗಲಿ, ವಸ್ತುಗಳನ್ನಾಗಲಿ ತೆಗೆದುಕೊಂಡಿಲ್ಲವಂತೆ. ಅವಳ ಸೈಕಲ್ಲಿನ ಬಿಂದಿಗೆ ಒಂದು ಪೆಟ್ಟಿಗೆ ಮಾತ್ರ ಇದೆ ಇಗ ಅವಳು ಆಸ್ಟ್ರೇಲಿಯಾ, ಇಂಗ್ಲಂಡ, ಸ್ಕಾಟಲಂಡ, ಫ್ರಾನ್ಸ, ಸ್ವಿಟ್ಜರ್ಲಂಡ್ಸ, ಜರ್ಮನಿ, ಯುಗೋಸ್ಲೇವಿಯಾ ಗ್ರೀಸ, ತುರ್ಕಸ್ತಾನ, ಇರಾಣ, ಇರಾಕಗಳನ್ನು ಸುತ್ತಿ ಭಾರತಕ್ಕೆ ಬಂದಿದ್ದಾಳೆ. ಅವಳು ನಸಿರಿಂಗ ತಿಕ್ಷಣವನ್ನು ಪಡೆದವಳು, ಹಣದ ಕೊರತೆಯಾದಾಗ ಈ ತಿಕ್ಷಣದ ಲಾಭವನ್ನು ಪಡೆದುಕೊಳ್ಳುತ್ತಾಳೆ. ಇಮನವರಿಗೆ ತೀರ : ಆವಶ್ಯಕವಿದ್ದಷ್ಟೇ ಮಾತ್ರ ಅವಳು ಎರಡನೆಯ ವಾಹನಸೇವಕಯವನ್ನು ಸಂಯೋಗಿಸಿದ್ದಾಳಂತೆ.

— ನಾರೀ —

ಲೇ:- "ಸಹೋದಿನಿ"

(ಹಿಂದೀ ಕವಿತೆಯೊಂದರಿಂದ)

ಅರ್ಧ ಸತ್ಯ ನೀಂ, ಅರ್ಧ ಸ್ವಪ್ನ ನೀಂ,
ಆಕೆ-ನಿರಾಕೆಗಳರ್ಧವೆ ನೀಂ ಅರ್ಧಅಜಿತ ಜಿತ, ಅರ್ಧ ತೃಪ್ತಿ ನೀಂ, ಅತೃಪ್ತಿ-ಪಿಪಾಸೆಗಳ-ರಿಯೇ ನೀಂ.

ಅರ್ಧ ಕಾನುದೊಳ್ ಬೆಂಕಿಯ ಕಿಡಿ ನೀಂ, ಇನ್ನರ್ಧ ದೊಳ್ ನೀರೇ ನೀಂ.
ಅರ್ಧಾಂಗಿನೀ ದೇವೀ, ಆ ರೆಜೀವನದ ಪ್ರತಿನಿಧಿ ನಾರೀ ನೀಂ!

(ವೀರಮಾತೆ)

.... ಭಾರತ ರಕ್ಷಣ ಮಂತ್ರಿ ....
ಶ್ರೀ ಗೋಪಾಲ ಸ್ವಾಮಿ ಅಯ್ಯಂಗಾರರ ಮರಣ

ಭಾರತ ರಕ್ಷಣ ಮಂತ್ರಿಗಳಾದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರು ಮದ್ರಾಸ್ ಜನರಲ್ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಇವರು ಸಾಯುವಕಾಲಕ್ಕೆ 71 ವರ್ಷಗಳಾಗಿದ್ದವು 10ನೆಯ ತಾ. ಮಂಗಳವಾರ ಎಲ್ಲ ಮಿಲಿಟರಿ ಗೌರವದೊಡನೆ ಇವರ ಅತ್ಯಸಂಸ್ಕಾರವು ನೆರವೇರಿತು. ಭಾರತಾಸ್ಥೈರ್ಯಕ್ಕೆ ರಾಜೇಂದ್ರ ಪ್ರಸಾದ ಪ್ರಧಾನಿ ನೆಹರು ದೇಶ ವಿದೇಶಗಳ ಮುಖ್ಯರು ದುಃಖ ಸಂದೇಶ ಕಳುಹಿಸಿದ್ದರು.

ಬಳ್ಳಾರಿ ಸ್ಮಾಲ್ ಕಾಸಸ್ ಕೋರ್ಟಿನಲ್ಲಿ

S. C. No. 242/52 E. P. No. 374/52

BETWEEN

ರೂಪನಗುಡಿ ನಾರಾಯಣರಾವು S/o ಆಶ್ವಥರಾವ್–ಬ್ರಾಹ್ಮಣ–ಅಡ್ವೊಕೇಟ್ ಬಳ್ಳಾರಿ } DECREE HOLDER

AND

ರೆಡ್ಡಿ ಲಿಂಗಾರೆಡ್ಡಿ–ಲಿಂಗಾಯತ್–ಗ್ರಾಮಪಟೇಲು ಬೈರಾದೇವನಹಳ್ಳಿ–ಬಳ್ಳಾರಿ ತಾಲೂಕು } J. D.

ನೋ ಟೀ ಸು

[ಸಿವಿಲ್ ಪ್ರೊಸೀಜರ್ ಕೋಡು ಆ 21 ರೂ37]

ಪ್ರತಿವಾದಿಯನ್ನು ವಾರಂಟಿನ ಮೇಲೆ ಏಕೆ ಕೈದು ಮಾಡಬಾರದು?

ಪ್ರತಿವಾದಿಯಾದ ನಿಮ್ಮನ್ನು ಕೈದು ಮಾಡಿ ಬಂದಿಖಾನೆಯಲ್ಲಿಡುವುದರ ಮೂಲಕ 1952 ನೇಯ ನಂಬರು S. C. No. 242/52 ನೆಯ ವ್ಯಾಜ್ಯದ ಡಿಕ್ರಿ ಅಮಲ್ದಾರಿ ಬಗ್ಗೆ ವಾದಿ ಶ್ರೀ ಆರ್. ನಾರಾಯಣರಾಯರು ಈ ಕೋರ್ಟಿಗೆ ಅರ್ಜಿಮಾಡಿರುವರು. ಅದುದರಿಂದ ಸದರಿ ಡಿಕ್ರಿಯ ಅಮಲ್ದಾರಿಯಲ್ಲಿ ನಿಮ್ಮನ್ನು ಏಕೆ ಸಿವಿಲ್ ಬಂದಿಖಾನೆಯಲ್ಲಿ ಹಾಕಬಾರದೆಂಬುದಕ್ಕೆ ಸಬಬು ತೋರಿಸಲು 1953 ನೆಯ ಮಾರ್ಚ್ 12 ನೆಯ ತಾರೀಖಿಗೆ ವಾಯ್ದೆ ಹಾಕಲಾಗಿದೆ. ಆದಿನ ನೀವು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಅಕ್ಷೇಪಣೆ ತಿಳಿಸದಿದ್ದರೆ, ನಿಮ್ಮನ್ನು ಎಕ್ಸಪಾರ್ಟೆ ಮಾಡಿ ತೀರ್ಮಾನ ಕೊಡೋಣಾಗುತ್ತದೆ.

ಬಳ್ಳಾರಿ 10–2–53

ಕೆ. ಕೃಷ್ಣಶಾಸ್ತ್ರಿ
ಡಿಕ್ರಿ ಹೋಲ್ಡರರ–ಅಡ್ವೊಕೇಟು.

ಹೊಸ ಕಾಂಗ್ರೆಸ್ ಕಾರ್ಯಕಾರೀ ಮಂಡಳ

ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಜವಾಹರಲಾಲ ನೆಹರು ಅವರು ತಮ್ಮ ಹೊಸ ಕಾರ್ಯಕಾರೀ ಮಂಡಳವನ್ನು ರಚಿಸಿದ್ದು ಅದರಲ್ಲಿ ಶ್ರೀ. ಗಳಾದ (೧) ಜವಾಹರಲಾಲ ನೆಹರು (ಅಧ್ಯಕ್ಷ) (೨) ಮೌ. ಅಬುಲ ಕಲಂ ಆಝಾದ (೩) ಸಿ. ರಾಜಗೋಪಾಲಾಚಾರಿ (೪) ಹರಗೋವಿಂದ ವಲ್ಲಭ ಪಂತ [೫]ಡಾ. ಬಿ. ಸಿ. ರಾಯ [೬] ಜಗಜೀವನರಾಮ (೭) ರಫಿ ಅಹ್ಮದ ಕಿಡ್ವಾಯಿ (೮) ನವಕೃಷ್ಣ ಚೌಧರಿ (೯)ಖಂಡೂಭಾಯಿ ದೇಸಾಯಿ (೧೦) ಮಾಣಿಕಲಾಲ ವರ್ಮಾ (೧೧) ಸಂಜೀವರೆಡ್ಡಿ (೧೨) ಏ. ವಿ. ಕುಟ್ಟಿಅಮ್ಮಾಳ (೧೩) ಕೆ.ಪಿ.ಮಾಧವನ್ ನಾಯರ (೧೪) ದೇವಕಿನಂದನ ನಾರಾಯಣ (೧೫) ಗ್ಯಾನಿಗುರು ಮುಖಸಿಂಗ ಮುಸಾಫಿರ (೧೬)ಮುರಾರಜಿ ದೇಸಾಯಿ (ಕೋಶಾಧ್ಯಕ್ಷ) (೧೭) ಯು. ಶ್ರೀನಿವಾಸ ಮಲ್ಯ (ಕಾರ್ಯದರ್ಶಿ) (೧೮)ಬಳವಂತರಾಯ ಮೇಥಾ (ಕಾರ್ಯದರ್ಶಿ) (೧೯) ಎಸ್. ಎನ್. ಅಗರವಾಲ (ಕಾರ್ಯದರ್ಶಿ) ಇನ್ನಿಬ್ಬರ ಹೆಸರುಗಳನ್ನು ಹಿಂದಿನಿಂದ ಸಾರಲಾಗುವದು.

ಸ್ವಾವಲಂಬನೆ

—ತಾ. ೨೪—೧—೧೯೫೩ ಶನಿವಾರ ದಿವಸ, ಉತ್ತರ ಪ್ರದೇಶದ ಸುಲ್ತಾನಪುರದಿಂದ ಅಮೇಥಿಯಾ ಎಂಬಲ್ಲಿಯ ವರೆಗಿನ್ನ ಮೈಲು ಉದ್ದ ಮಾರ್ಗವನ್ನು ಹತ್ತು ತಾಸುಗಳಲ್ಲಿ ಆಲ್ಲಿಯ ಜನರೇ ಸಿದ್ಧಮಾಡಿದರು. ಒಟ್ಟು ೧೫೫ ಸಾವಿರ ಜನರು ಆದರಲ್ಲಿ ತೊಡಗಿದರು. ಆವರಲ್ಲಿ ಸರಕಾರೀ ಅಧಿಕಾರಿಗಳೂ ಮತ್ತು ಶಾಲಾ ವಿದ್ಯಾರ್ಥಿಗಳೂ ಇದ್ದರು

ಲಖಿಯಾನಾದಲ್ಲಿ ಭಾರತ ಸರಕಾರವು ಸಾಯಕಲ್ಲುಗಳ ಬಿಡಿಭಾಗಗಳನ್ನು ಸಿದ್ಧ ಮಾಡುವ ಕಾರಖಾನೆಯನ್ನು ಸ್ಥಾಪಿಸುವುದಿದ್ದು ಅದಕಾಗಿ ೩೦ ಲಕ್ಷ ರೂ ಪಾಯಿ ಹಣದ ಸಹಾಯ ಮಾಡಿದೆ. ಆದು ಈ ವರ್ಷದ ಮಧ್ಯದಿಂದ ತನ್ನ ಕಾರ್ಯ ಸ್ವಾರಂಭಿಸುವುದೆಂದು ಹೇಳಿದ್ದಾರೆ.

ಹುಳಸಿಯಿಂದ ಕರ್ಪೂರ

ಹುಳಸಿ ರಸದಿಂದ ಕರ್ಪೂರವನ್ನು ತಯಾರಿಸಬಹುದೆಂದು ಭಾರತೀಯ ಸಂಶೋಧಕರು ಕಂಡುಹಿಡಿದಿದ್ದಾರೆ. ಇದು ಯಶಸ್ವಿಯಾದಲ್ಲಿ ಎಲ್ಲೆಲ್ಲೂ ಕಾಳಸೀವನ ಗಳೇಳಬಹುದು, ಮತ್ತು ವರುಷಕ್ಕೆ ಅನೇಕ ಲಕ್ಷರೂಪಾಯಿಗಳು ಪರದೇಶಗಳಿಗೆ ಹರಿಯುವುದೂ ನಿಲ್ಲಬಹುದು

ಕನ್ನಡ ನಾಡಿನ ಸಂಸ್ಕೃತಿಯಲ್ಲಿ ಹರಿದಾಸರ ಪಾತ್ರ

ಶ್ರೀ ಯುಂ. ರಾಮರಾವ್, ಸುಜೋಧ

ಶ್ರೀ ಹರಿದಾಸರು ಕರ್ನಾಟಕದಲ್ಲಿ ಈಗ್ಗೆ ಮೂರು ನಾಲ್ಕು ಶತಮಾನಗಳಿಂದಲೂ ಜನತೆಗೆ ಶ್ರೀ ಹರಿನಾಮ ಸಂಕೀರ್ತನ, ಸತ್ಸಂಗ, ವಿಷದು ವಿಚಾರಣೆ, ಅಸಾರ ಸಂಸಾರದಲ್ಲಿ ಅನಾಸಕ್ತಿ ಈ ಮುಂತಾದ ವಿಚಾರಗಳನ್ನು ಸರ್ವ ಸುಲಭವಾದ ತಿಳಿಗನ್ನಡದ ಪದ್ಯದ ಶೈಲಿಯಲ್ಲಿ ಬೋಧಿಸುತ್ತಾ ಧರ್ಮ ನೀತಿ ಭಗವದ್ಭಕ್ತಿ ಮುಂತಾದ ಮಾರ್ಗಗಳಲ್ಲಿ ಜನಾಂಗವನ್ನು ತಿದ್ದಲು ಪ್ರಯತ್ನಿಸುತ್ತ ಬಂದಿದ್ದಾರೆ.

ನಮ್ಮ ನಾಡಿನ ಸಂಸ್ಕೃತಿಯಲ್ಲಿ ಮನುಷ್ಯನು ತನ್ನ ಲೌಕಿಕ ಯಾತ್ರೆಯಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷ ಈ ನಾಲ್ಕು ಪುರುಷಾರ್ಥಗಳನ್ನು ಸಾಧಿಸುವುದೇ ಅತಿಮುಖ್ಯ ಕರ್ತವ್ಯ ಎಂದು ವ್ಯಕ್ತವಾಗಿದೆ.

ಕರ್ಮ ವಿರುದ್ಧವಲ್ಲದ–ಭಗವತ್ಪರ ಚಿತ್ತವೃತ್ತಿಯಿಂದ ಕೂಡಿದ ಜೀವನ ನಿರ್ವಹಣ, ಧರ್ಮಮಾರ್ಗಕ್ಕೆ ವ್ಯತ್ಯಯ ಬಾರದಂತಹ ವೃತ್ತಿಯ ಅವಲಂಬನೆಯಿಂದ ಅರ್ಥಸಂಗ್ರಹ ಮಾಡಿ ತನ್ಮೂಲಕ ಸಂಸಾರನನ್ನು ಪೋಷಿಸುವುದು, ಮತ್ತು ಧರ್ಮವಿರುದ್ಧವಲ್ಲದ ರೀತಿಯಲ್ಲೇ ಕಾಮೋಪಭೋಗದಿಂದ ಸರ್ವವೂ ಭಗವತ್ಪ್ರೇಮೆ ಎಂಬ ದೃಷ್ಟಿಯಿಂದ ಜೀವನ ಯಾತ್ರೆಯನ್ನು ಸಾಧಿಸುವುದು ಮತ್ತು ಈ ಯುಕ್ತ ಮಾರ್ಗಾನುಸರಣದಿಂದ ಸದ್ಗತಿಯನ್ನು ಸಂವಾದಿಸುವುದು ಇದೇ ಶ್ರೀ ಹರಿದಾಸರು ಜಗತ್ತಿಗೆ ಹಾಕಿಕೊಟ್ಟ ಉತ್ಕೃಷ್ಟ ಧರ್ಮಪಥ.

ಧರ್ಮಾನುಸರಣೆಯಲ್ಲಿ ದಾಂಭಿಕತನ, ಕಪಟ ಆಚರಣೆಗಳು, ಕೋವಿಕೆಯ ಪೂಜೆವುರಸ್ಕಾರ– ಮಡಿ ಆಚಾರಗಳ ಆಡಂಬರ ಇವುಗಳನ್ನು ದಾಸರಾಯರು ಕಠಿನವಾಗಿ ಖಂಡಿಸಿದ್ದಾರೆ. ಅರ್ಥ ಸಂಪಾದನೆಯಲ್ಲಿ ನೀತಿನ್ಯಾಯಗಳಿಗೆ ವಿರುದ್ಧವಿಲ್ಲದಂತೆ, ಸುಳ್ಳು ಕಳ್ಳತನ ಮೋಸ ಕಾಪಟ್ಯಗಳಿಗೆ ಒಳಗಾಗದಂತೆ ಶುದ್ಧವಾದ ಲೌಕಿಕ ವೃತ್ತಿ ಉದ್ಯೋಗಗಳಲ್ಲಿ ತೊಡಗಿ ನ್ಯಾಯ ಬಾಹಿರವಲ್ಲದ ಮಾರ್ಗಗಳಿಂದ ಧನ ಸಂಗ್ರಹಣ ಮಾಡಬೇಕೆಂದು ಶ್ರೀ ಪುರಂದರ ದಾಸರು ಸಾರಿದ್ದಾರೆ.

[ಕನ್ನಡನುಡಿ]

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟ್‌ನಲ್ಲಿ

O. S. 302/52.

ಶೇಷಗಿರಿ ಸಣಾಪತಿಪುತ್ರ ಶಾಮ ಮತ್ತು ಇನ್ನು ೩ ಮಂದಿ ಸುಧಾಕರರೆಡ್ಡಿಯನ್ನೂ ಕೊಂಡ ಅವಿಭಕ್ತ ಕುಟುಂಬದ ಮ್ಯಾನೇಜರು [Joint-Family.] ವಾದಿ

ವಿರುದ್ಧ

1) ಕೋಳೂರು ಶಾಮರಾವ್
2) ,, ನರಸಿಂಹಮೂರ್
3) ,, ರಾಮರಾವ್
4) ,, ಮೈಸೂರ್ ಕೃಷ್ಣ ಮೂರ್ [ಕೋಳಿ ಮತ್ತು ಕುಂದಿ ಕೋಳೂರು ಶಾಮರಾವ್ ಮೊದಲಾದ ಪ್ರತಿವಾದಿ] ಪ್ರತಿವಾದಿಗಳು

ಮೇಲ್ಕಾಣಿಸಿದ ನಂಬರಿನ ಪ್ರಕಾರ ಕೈಪೋ ನೋಟೀಸಿನ ಬಾಬತು ರೂ 544/- ಆದ್ದಿ ಶೇಕಡ ತಂಗಕೊಂದಕ್ಕೆ 0-8-0 ಯಂತೆ ಕೋರ್ಟು ಖರ್ಚು ಸಮೇತವಾಗಿ ಪ್ರತಿವಾದಿಗಳಿಂದ ವಸೂಲಿಮಾಡಲು ಪಾವಾ ಮಾಡಿದ್ದು 27-2-1953 ಕ್ಕೆ ವಾಯ್ದೆ ಹಾಕಲಾಗಿದೆ. ಸದರಿ ವಾಯ್ದೆ ಯದಿನ ಪ್ರತಿವಾದಿಗಳು ಖುದ್ದಾಗಿಯಾಗಲಿ ವಕೀಲರ ಮೂಲಕವಾಗಿಯಾಗಲಿ ಕೋರ್ಟಿಗೆ ಹಾಜರಾಗಿ ತಮ್ಮ ಅಕ್ಷೇಪಣೆ ತಿಳಿಸದಿದ್ದರೆ ಏಕಪಕ್ಷ ತೀರ್ಮಾನವಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ ಜಿ. ಕೃಷ್ಣಶಾಸ್ತ್ರಿ
12-2-53. ವಾದಿಯ ಅಡ್ವೊಕೇಟರು

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇ. ಎ. ಜಿ. ಜಂ. ದಾ. ರ. ರಾ. ಗಿ.

ಮುಖ್ಯ ಸಂಪಾದಿಕೆಯರು :— ಶ್ರೀಮತಿ ಸರೋಜಿನಿ ಮುಜಿ

ಪ್ರಕಾಶಕರು :— ಶ್ರೀ ಟಿ. ಜಿ. ಕೃಷ್ಣಾಚಾರ್ ಬಿ. ಎ.

ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಶೇಷಾಭಿಮಾನಿಯೇ ಮೀಸಲಾಗಿಟ್ಟು ಮಾಸಪತ್ರಿಕೆ

ಪ್ರತಿಯೊಬ್ಬರೂ ಓದಬೇಕಾದುದು.

ವಾರ್ಷಿಕ ಚಂದಾ ಪರದೇಶದವರಿಗೆ 5 ರೂಪಾಯಿ.

,, ಸ್ವದೇಶದವರಿಗೆ 4-8-0 ರೂಪಾಯಿ.

ಪ್ರತಿ ಸಂಚಿಕೆ 6 ಆಣೆ.

ಮನೆಮನೆಯಲ್ಲೂ ಸುಸಂಸ್ಕೃತಗಳನ್ನು ಬೀರಬಲ್ಲ

ಕನ್ನಡ ಮಾಸಪತ್ರಿಕೆ

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

ಓ. ಪಿ. ನಂಬರು. 25/1951.

ಮೈಶನಾದ ಜಿ. ಪ್ರೆಸ್ಟಿಗೌಡರ ಇನ್ಸಾಲ್ವೆನ್ಸಿ ಮೊಕ್ಕದ ವಿಷಯ.

1. ಸಕ್ರಮ್ಮ
2. ಅಯ್ಯನಗೌಡ
3. ಅಮರಣ್ಣ

ಅರ್ಜಿದಾರರು

ನೋಟೀಸು

ಮೇಲ್ಕಂಡ ಅರ್ಜಿದಾರರು ಮೇಲ್ಕಂಡ ಓ. ಪಿ. ಯಲ್ಲಿ ಸಕ್ಸೆಸನ್ ಸರ್ಟಿಫಿಕೇಟನ್ನು ತಿದ್ದುಪಡಿಪಲು, I.A. No. 20/52ನ್ನು ಸರ್ಟಿಫಿಕೇಟಿನ ಮೊತ್ತವನ್ನು ಹೆಚ್ಚು ಮಾಡಲು I.A. No. 21/52 ನ್ನು ಕೋರ್ಟಿನಲ್ಲಿ ಅರ್ಜಿಗಳು ಫೈಲು ಮಾಡಿರುವರು. ಆ ಅರ್ಜಿಗಳು 9-3-53 ಕ್ಕೆ ವಿಚಾರಣೆಗೆ ಹಾಕಲ್ಪಟ್ಟಿವೆ. ಯಾರಿಗಾದರೂ ಶಕರಾರು ಇದ್ದಲ್ಲಿ ಪಕ್ಷವಲ್ಲಿ ಸ್ವತಃ ಅಗಲಿ, ವಕೀಲರು ಮುಖಾಂತರ ಅಗಲಿ ಹಾಜರಾಗಿ ಕೋರ್ಟಿಗೆ ತಕರಾರು ತಿಳಿಸತಕ್ಕದ್ದು; ಹಾಗೆ ಹಾಜರಾಗದಿದ್ದರೆ ಸದರಿ ವಿಷಯಗಳು ಏಕಪಕ್ಷವಾಗಿ ತೀರ್ಮಾನಿಸಲ್ಪಡುವವು.

ಬಿ. ಗುಂಡೂರಾವ್
ಅರ್ಜಿದಾರರ ಅಡ್ವೊಕೇಟು.

ಕೋಟಿನ ಸೃಷ್ಟಿ

ಫಲ ವೃಕ್ಷಗಳಿಗೆ ಅಳವಾಗಿ ಪಡಿ ತಂಟು ಅಡಿಸಿ ಕೋಟಿವನ್ನು ಅಳ ಕುಳ ವಾಗಿಹುವ ಅವಶ್ಯಕತೆ ಇಲ್ಲಿ. ಇದರಿಂದ ಬೇರುಗಳಿಗೆ ಧಕ್ಕೆಯಾಗಿ, ಹೋಗಿ ಬೀಳಿ ತ್ತವಾಗಿ, ಕ್ರಮೇಣ ಗಿಡಗಳು ಸಾಯುತ್ತಿ ರುವುದನ್ನು ನಾವು ಅನೇಕ ಬೈಕಲ ತೋ ಟಗಳಲ್ಲಿ ನೋಡಬಹುದು. ಆಗಾಗ್ಗೆ ಬೆಳೆ ಯುವ ಕಸ-ಕಳೆ ಕೆಡೆದರೆ ಸಾಕು. ಇದ ಕ್ಕಾಗಿ ಮೇರೆ ಮೋಳೆ ಕಡಿ, ಕುಂಟೆಯಾ ಡಿದರೆ ಸಾಕು. ಇಲ್ಲವೇ ಕುಸ್ಸಿ ಗ ಣ (nut grass) ಇಲ್ಲದ ಕಡೆ ಜುಟ್ಟಿ ಯರ್ ಹೋ ಎಂಬ ಕುಂಟೆಯನ್ನು ಉಪಯೋಗಿಸುವುದು ಬಹಳ ಒಳ್ಳೆಯದು.

NAVA BHARAT, BELLARY.

ನವ ಭಾರತ ಬಳ್ಳಾರಿ

(NATIONALIST WEEKLY)

(Regd.M.No. 4746)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year	6—0—0
೬ ತಿಂಗಳಿಗೆ 3—8—0	Six months	3—8—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.

Subscription will not be accepted for less than 6 months

To

16-2-53

Sriman

Edited Printed & Published by T. B Keshava

ಗಡಿವಾಣಿ

ಸೋಮವಾರ
ಫಿಬ್ರವರಿ
೨೩--೧೯೫೪

ವರ್ಷ ೧೫ | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ-
ಸಂಚಿಕೆ ೮೮ | ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಬಿ. ಕೇಶವರಾವ್

ಕುಟ್ಟಿದ ಅಕ್ಕಿ

ಕೆಲವೇ ವರ್ಷಗಳ ಹಿಂದೆ ನಾವೇ ನಮ್ಮ ಬತ್ತವನ್ನು ಕುಟ್ಟಿಕೊಳ್ಳುತ್ತಿದ್ದೆವು ಯಾಗು ಅಕ್ಕಿಯನ್ನು ನಾವೇ ಬೇಸಿಕೊಳ್ಳುತ್ತಿದ್ದೆವು.

ಪಾಲಿಶ್ ಮಾಡದೆ ಇದ ಅಕ್ಕಿ ಪೇಟೆಯಲ್ಲಿ ದೊರೆಯಲಾರದು. ಅದು ಕಣ್ಣಿಗೂ ಚಂದ ರುಚಿಗೂ ಸಿಹಿಯಾಗಿರುತ್ತದೆ. ಗಿರಣಿಗಳು ಇದಕ್ಕೆ ಸರಿಗಟ್ಟುವ ಅಕ್ಕಿಯನ್ನು ಎಂದಿಗೂ ತಯಾರಿಸಲಾರವು. ಇದರ ತಯಾರಿಕೆ ತೀರ ಸುಲಭ. ಒಕ್ಕ ತೊಳಲಿಕಲ್ಲಿನಿಂದ (ಬತ್ತ ಒಡೆಯಲು ಹಳ್ಳಿಗಳಲ್ಲಿ ಉಪಯೋಗಿಸುವ ಒಂದು ಕಟ್ಟಿಗೆ ಸಾಧನ) ಏನೂ ತೊಂದರೆಯಿಲ್ಲದೆ ಬತ್ತ ಒಡೆಯಬಹುದು ನನ್ನು ಕೆಲ ಜಾತಿಗಳ ಬತ್ತವನ್ನು ಒಡೆಯುವದು ಸುಲಭವಲ್ಲದ್ದರಿಂದ ಅಂಥ ಬತ್ತವನ್ನು ಮೊದಲು ಕುದಿಸಿ ನಂತರ ಹಿಪ್ಪೆ ತೆಗೆಯುತ್ತಾರೆ. ಇಂಥ ಅಕ್ಕಿ ಅತ್ಯಂತ ಪೌಷ್ಟಿಕವೆಂದೂ ಆರೋಗ್ಯವೆಂದೂ ಹೇಳುತ್ತಾರೆ ಹಳ್ಳಿಗಳಲ್ಲಿ ಕೈಯಿಂದ ಕುಟ್ಟಿದ್ದಿರಲಿ ಮೇಲಿನ ತೌಡು ತೆಗೆದದ್ದೇ ಇರುತ್ತದೆ

ಅಕ್ಕಿ ತಿನ್ನುವ ಲಕ್ಷಾಂತರ ಜನರು ಗಿರಣಿಗೆ ಹಾಕಿದ ನಿಸ್ಸತ್ವ ಅಕ್ಕಿಯನ್ನು ತಿಂದು ಸಿಪರೀತ ಹಾಸಿಗೊಂಡಾಗುತ್ತಿದ್ದಾರೆಂದು ಈ ನಡೆಸಿದ ನಿರೀಕ್ಷಣೆಗಳಿಂದ ಕಂಡು ಬಂದಿದೆ ಗ್ರಾಮ ಕಾರ್ಯಕರ್ತರು ಈ ವಿಷಯದ ಸತ್ಯಾಸತ್ಯತೆಯನ್ನು ತಾವೇ ಸ್ವತಃ ಒರೆಗಚ್ಚಿ ನೋಡಲಿ ಕುಟ್ಟಿದಕ್ಕಿಯನ್ನು ಪ್ರಯೋಗವಾಡಿ ನೋಡುವದರಿಂದ ಪ್ರಾಸವಾಗಲಾರದು.

ಮಹಾತ್ಮಾ ಗಾಂಧಿ



ಕೊರಿಯಾದ ಯುದ್ಧಭೂಮಿ

— ಸಂಯುಕ್ತ ಪಕ್ಷದ ವಿಜಯಗಳು

ಶ್ರವಣ ಬೆಳಗೊಳ (ಮೈಸೂರು) ಗೋಮಟೇಶ್ವರ ಮಹಾಮಸ್ತಕಾಭಿಷೇಕ

೫೪ ಅಡಿಎತ್ತರವಿರುವ ಏಕಶಿಲೆಯಲ್ಲಿ ಕೆತ್ತಲ್ಪಟ್ಟಿ- ವಿಂಧ್ಯಗಿರಿಯಮೇಲಿರುವ ಗೋಮಟೇಶ್ವರ ಬಗ್ಗದ ಮಹಾಮಸ್ತಕಾಭಿಷೇಕದ ಪ್ರಾರಂಭವು ಫೆಬ್ರವರಿ ೧೪ ಕ್ಕೆ ಆಯಿತು-ಮಸ್ತಕಾಭಿಷೇಕದ ದಿನ ಮಹಾಮಸ್ತಕಾಭಿಷೇಕವು ನಡೆಯಲಿದೆ—ಇದು ೧೩ ವರ್ಷಕ್ಕೊಮ್ಮೆ ನಡೆಯುವದು ಭಾರತದ ಎಲ್ಲಾ ಭಾಗಗಳಿಂದ ಸುಮಾರು ೩ ಲಕ್ಷ ಜೈನರು ಸೇರುತ್ತಾರೆ.

ಜಾರ್ಜ್ ತಲೆನ್ಕೋವರನ್ನು ಅಮೆರಿಕಾದ ರಾಯಭಾರಿಯಾಗಿ ಭಾರತದಲ್ಲಿರಿಸಲು ಭಾರತ ಸರ್ಕಾರವು ಅಮೆರಿಕಾಕ್ಕೆ ತಿಳಿಸಿದ

ಸಮ್ಮೆಲ್ಲೆ ಸ್ವರಂಜ ಯುದ್ಧವು ಭಯವಿಲ್ಲೆಂಬ ಅಮೆರಿಕಾದ ರಕ್ಷಣಾ ಖಾಪಿಯು ಮುಖರಾದ ಪಿನಾರ್ ಜ್ಯಾಡ್ಲೆಯವರು ಈ ವಾರ ಹೇಳಿದರು

ಬಳ್ಳಾರಿ ಜಿಲ್ಲೆಯ ಭವಿಷ್ಯ

ಮೈಸೂರಿನಲ್ಲಿ ಸೇರಿಸಿರಿ

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರೀ ಸಮಿತಿಯವರಲ್ಲಿ ಬಳ್ಳಾರಿ ವಿಶಾಲಾಂಧ್ರದಲ್ಲಿ ಸೇರಿಸಬೇಕೆಂಬ ಬಿನ್ನವತ್ತಳೆಯನ್ನು ಅರ್ಪಿಸಿ-ಮದ್ರಾಸ್ ಭಾಷಾವಾರು ಬಳ್ಳಾರಿ ಜಿಲ್ಲೆಯನ್ನು ಸ್ವಾಧೀನದಲ್ಲಿರಿಸಿಕೊಳ್ಳಲು ಮೈಸೂರಿನ ಸರ್ಕಾರಕ್ಕೆ ಒತ್ತಾಯ ಮಾಡಿತು- ಶಿವಮೊಗ್ಗದಲ್ಲಿ ಒಳಾಡಿಸಲಾದ ಕಾಂಗ್ರೆಸ್ ಕಾರ್ಯಕಾರಿ ಕಮಿಟಿ ಅಧ್ಯಕ್ಷರಾದ ಶ್ರೀ ಡಿ. ಬಿ. ಚಂದ್ರಮೆ ಕೋಬರ್ ಯವರು ಮುನಿಸಿಪಲ್ ಕೌನ್ಸಿಲರ್ ಕೇಮ್ಸ್ ಹೇಬರು, ಬಿ. ಎಂ. ರೇವಣಸಿದ್ದಯ್ಯ ಕೆ ಲಿಂಗಪ್ಪ ಮತ್ತು ಮೂವರು ಮಿತ್ರರಿದ್ದರು

ನಾವು ಆಂಧ್ರದಲ್ಲಿ ಒಂದು ದಿನವೂ ಇರಲಾರೆವು. ಬಲವಂತದಿಂದ ನಮ್ಮನ್ನು ಆಂಧ್ರದಲ್ಲಿ ಸೇರಿಸಿದರೆ ರಕ್ತ ಕ್ರಾಂತವಾದೀತು- ಜನರು ಅನೇಕಕಷ್ಟಗಳಿಗೆ ಗುರಿಯಾಗಬಹುದು—ವ್ಯವಸ್ಥಾಪಕ ವಿಧಾನಸಭೆಯು ಕರ್ನಾಟಕದ ಭಾಗಗಳನ್ನು ಕರ್ನಾಟಕಕ್ಕೆ ಸೇರಿಸುವ ನಿರ್ಣಯವನ್ನು ಒಪ್ಪಿದ್ದು ಬಳ್ಳಾರಿಯನ್ನು ಸಾವೇಶಗೊಳಿಸುವ ನಿರ್ಣಯವನ್ನು ಅಂಗೀಕರಿಸಲಿಲ್ಲವೆಂದು ಒಳಸಂಚಿಲ್ಲಿಯು ಕನ್ನಡ ಜಿಲ್ಲೆಯಿಂದ ಬಂದ ಒಕ್ಕಣೆಯಲ್ಲಿ ಹೇಳಲಾಗಿದೆ

೨. ಪ್ರಾಚೀನ ಸಂಸ್ಕೃತಿಯಲ್ಲಿ ಪ್ರಜಾಭಿಪ್ರಾಯದ ಸ್ಥಾನ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಇಂಗ್ಲೆಂಡಿನಲ್ಲಿ ಆಂಗ್ಲೋಸ್ಯಾಕ್ಸನರ ಕಾಲಕ್ಕೆ "ಫೋಕ್ ಮೂಟ್" (Folk-moot). "ಟೌನ್ ಮೂಟ್" (Town moot) ಮತ್ತು "ಹಂಡ್ರೆಡ್ ಮೂಟ್" (Hundred moot) ಎಂಬ ಸಭೆಗಳು ಪ್ರಜಾವಾಣಿಯನ್ನು ಪ್ರತಿಬಿಂಬಿಸುವ ವಾಹಿನಿಗಳಾಗಿದ್ದವು.

ಜನಾಭಿಪ್ರಾಯ ಒಂದು ಚೈತನ್ಯವಾಗಿ, ಒಂದು ಪವಿತ್ರಶಕ್ತಿಯಾಗಿ, ಆಹು ಹಿಂದಿನಿಂದಲೇ ಬೆಳೆದು ಬಂತು ಎನ್ನುವುದಕ್ಕೆ ಇಷ್ಟು ವಿವರಗಳು ಸಾಕು. ಪ್ರಜಾಸುರಾಗಿ ಸರ್ಕಾರ ಉದಯವಾದ ನಂತರವೇ ಅಂದರೆ ಹದಿನೆಂಟು, ಹತ್ತೊಂಬತ್ತನೇ ಶತಮಾನದಿಂದೀಚೆಗೇ—ಜನಾಭಿಪ್ರಾಯ ಹೊರಹೊಮ್ಮಿತು, ಅದಕ್ಕೆ ಮೊದಲು ಪ್ರಜಾಭಿಪ್ರಾಯವೇ ಇರಲಿಲ್ಲ ಅನ್ನುವಂತಾದ ಸರಣಿ ಸರಿಯಾದುದಲ್ಲವೆಂಬುದು ಇವರಿಂದ ದೃಢಪಡುತ್ತೆ.

ಇನ್ನು ನಮ್ಮ ದೇಶದಲ್ಲಿ, ಅದರಲ್ಲೂ ಪ್ರಾಚೀನ ಕಾಲದಲ್ಲಿ, ಜನಾಭಿಪ್ರಾಯ ಇತ್ತೇ, ಇದ್ದರೆ ಅದು ಹೇಗಿತ್ತು, ಅನ್ನುವ ವಿಷಯದ ಪರಿಶೀಲನೆಗೆ ತೆರಳುವ ಪ್ರಾಚೀನಭಾರತಜನಾಂಗಕ್ಕೆ ಜನಾಭಿಪ್ರಾಯದ ಬೆಲೆಯ ಅರಿವೇ ಇರಲಿಲ್ಲ, ಜನಾಭಿಪ್ರಾಯ ವಿಶೇಷವೂ ಅಮೂಲ್ಯವೂ ಆದ ಒಂದು ಶಕ್ತಿಎಂದವರು ಗ್ರಹಿಸಿರಲಿಲ್ಲ, ಎಂದು ಲಾರ್ಡ್ ಮೆಕಾಲೆ, ಲಾರ್ಡ್ ಸಿಡನ್ಹಾಂ ಮುಂತಾದ ಪಾಶ್ಚಾತ್ಯ ರಾಜಕಾರಣಿಗಳು ವಾದಿಸುತ್ತಾರೆ. ಈ ವಾದ ಒಂದು ಅಬದ್ಧಕಂತೆ ಎಂದು ನಿರೂಪಿಸಲು ಪ್ರಾಚೀನ ಭಾರತದಲ್ಲಿ ಮೂರಿದ್ದ ಜನಾಭಿಪ್ರಾಯದ ಸ್ವರೂಪವನ್ನು ತಿಳಿಯುವುದು ಅವಶ್ಯಕ.

ಋಗ್ವೇದದ ಕಾಲದಲ್ಲಿ ಜನಾಭಿಪ್ರಾಯ ಒಂದು ಚೇತನವಾಗಿಯೇ ಇತ್ತು. ಸಭಾ, ಸಮಿತಿ, ವಿದಥ ಗಣ ಜನಪದ, ಇಂತಹ ಜನಕೂಟಗಳು ಜನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತಿದ್ದುದು ಮಾತ್ರವಲ್ಲ, ಜನಾಭಿಪ್ರಾಯಕ್ಕನುಗುಣವಾಗಿ ರಾಷ್ಟ್ರದ ನಡವಳಿಕೆಯನ್ನೂ ನಿರ್ಧರಿಸುತ್ತಿದ್ದುವು. ವೇದಸಾಹಿತ್ಯದಲ್ಲಡಗಿರುವ ಈ ಭಾವನೆಯ ಅರ್ಥವೇನು' ಶಕ್ತಿಯೇನು ವಿಶಸ್ತ್ವಾ ಸರ್ವಾ ವಾಂಛಂತು"-(ಪೊರಿಯಾದನೀನು ಜನವರಿಂದಅಪೇಕ್ಷಣೀಯನಾಗು). ಈಪದ್ಧತಿ ಋಗ್ವೇದದ ಕಾಲದಿಂದ ಅಥರ್ವವೇದದ ಕಾಲದವರೆಗೂ ಪಡೆದುಬಂತು" ತ್ವಾಮಿಶೋವೃಣತಾಂ ರಾಜ್ಯಾಯ" ರಾಜನಸ್ಥಾನಕ್ಕೆ ನಿನ್ನನ್ನು ಪ್ರಜೆಗಳುವರಿಸಲಿ. ಎಂದು ಅಥರ್ವವೇದದಲ್ಲೂ ಹೇಳಿದೆ

ವೇದ ಸಂಹಿತೆಯಲ್ಲಿ ಇಂತಹ ಭಾವನೆಗಳು ವಿಪುಲವಾಗಿ ಅಡಗಿವೆ. "ಸಂವದಧ್ವಂ ಸಂವೋ ಮನಾಂಸಿ ಜಾನತಾಂ, ಸಮಾನೋಮಂತ್ರ:,ಸಮಿತಿ: ಸಮಾನೀ"ಸವನಾನಂಮನಃ, "ಸಹಚಿತ್ತಂ." ಈ ಭಾವನೆಗಳ ಅರ್ಥ ಜನಾಭಿಪ್ರಾಯ ಎಂತಿರಬೇಕೆನ್ನುವುದನ್ನು ಸೂಚಿಸಿದಂತಲ್ಲವೇ?

ವಿದಥ, ಎಂಬ ಸಭೆ ಪೌರೋಹಿತ್ಯವರ್ಗ ಮುಂದಿನ ಕ್ರಮಗಳ ಕುರಿತು ಚರ್ಚೆ ನಡೆಸುತ್ತಿತ್ತು. ಕುಟುಂಬದ ಪದ್ಧತಿಗಳೂ ಗ್ರಾಮದ ಹಿರಿಯರೂ ಈ ಸಭೆಯಲ್ಲಿ ಕೂಡುತ್ತಿದ್ದರು. ಸಮಿತಿ ಸ್ಥಳೀಯ ವಿದ್ಯಮಾನಗಳ ಪರೀಶಿಲನೆಗಾಗಿ ಏರ್ಪಟ್ಟಿದ್ದ ಸಂಸ್ಥೆಯಾಗಿತ್ತು. ಸಭಾ ರಾಜಕೀಯ ಮತ್ತು ಪ್ರಾಂತದ ವ್ಯವಹಾರಗಳನ್ನು ವಿಮರ್ಶಿಸುತ್ತಿತ್ತು. ಸಭಾ, ನೇದಾಗ ರಾಜನ್ ಅಧ್ಯಕ್ಷತೆ ವಹಿಸುತ್ತಿದ್ದ. ಅನೇಕ ಸಂದರ್ಭಗಳಲ್ಲಿ ಇವನು ಹಿರಿಯರ ಮತ್ತು ಚುನಾಯಿತ ಪ್ರಜಾಪ್ರತಿನಿಧಿಗಳ ಅಭಿಪ್ರಾಯವನ್ನು ಅನುಸರಿಸಿ ಆರಿಸಲ್ಪಡುತ್ತಿದ್ದ. ತನ್ನ ಜನರ ಇಷ್ಟಕ್ಕೆ ವಿರೋಧವಾಗಿ ನಡೆದುಕೊಂಡರೆ ತನ್ನ ಸರ್ವಸ್ವವನ್ನೂ ಕಳೆದುಕೊಳ್ಳಲು ಸಿದ್ಧನಿರುವೆನೆಂದು ರಾಜನು ಸಿಂಹಾಸನಾರೋಹಣ ಸಮಯದಲ್ಲಿ ಸ್ತವನ ಮಾಡುತ್ತಿದ್ದ. ಅಂದರೆ ಜನಾಭಿಪ್ರಾಯಕ್ಕೆ ಎಷ್ಟು ಮನ್ನಣೆಯಿತ್ತೆನ್ನುವುದುಗೊತ್ತಾಗಲಾರದೇ?

ಶ್ರುತಿಯಿಂದ ಸ್ಮೃತಿಯ ಕಾಲಕ್ಕೆ ವಿರೋಧ. ಅಲ್ಲೂಜನಾಭಿಪ್ರಾಯಕ್ಕೆ ಅದೇ ಬೆಲೆ, ಅದೇ ಗೌರವ, ತಮ್ಮ ದುರ್ವರ್ತನೆಯಿಂದ ಜನಾಭಿಪ್ರಾಯವನ್ನು ಅಲಕ್ಷಿಸಿ ಸಿಂಹಾಸನಚ್ಯುತರಾಗಿ ತಮ್ಮತಲೆಯನ್ನೇ ಒಪ್ಪಿಸಿದ ರಾಜರ ನಿದರ್ಶನಗಳನ್ನು ಮನು ಸೂಚಿಸಿದ್ದಾನೆ; ಬಹವೋಽವಿನಯಾನ್ನಷ್ಟಾ ವ್ಯಾಧಾಜಾನಃ ಪರಿಚ್ಛದಾಃ।ಮೋನೇವಿನಷ್ಟೋಽವಿನಯಾನ್ನಜಪತ್ಯೈವ ಪಾರ್ಥಿವಃ॥ ಸುದಾಸೋ ಯವನೇಶ್ವಿವ ಸುಮುಖೋ ನಿಮಿರೇವಚ;

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

S. C. 393/52 I. A. 352/52

ಭೀಮನಗೌಡ್ರ ನರಸನಗೌಡ ತಂದ ಹನುಮನಗೌಡ-ಜೀರಾಯ್ತಿ ಕಾಪು-40 ವಯಸ್ಸು-ವಾಸ- ಚಾನಾಳು-ಬಳ್ಳಾರಿ ತಾಲೂಕು ವಾ ವಿ

Vs

ಕಟ್ಟಗೆ ಲಿಂಗಾನಾಯ್ಕ-ತಂದೆ ನೋಮಾನಾಯ್ಕ ವಯಸ್ಸು 35 ಬೋಯ-ಜೀರಾಯ್ತಿ ವಾಸ ಚಾನಾಳು-ಬಳ್ಳಾರಿ ತಾಲೂಕು ಪ್ರತಿ ವಾ ವಿ

— ಪ್ರತಿವಾದಿಗೆ ನೋಟೀಸು —

ಮೇಲ್ಕಾಣಿಸಿದ ದಾವೆಯು ನಿಮ್ಮ ಹಾಜರಿಗಾಗಿ 26-2-1953ಕ್ಕೆ ವಾಯ್ದೆ ಹಾಕಲಾಗಿದೆ ನೀವು ಆ ದಿನ ಕೋರ್ಟಿಗೆ ಖುದ್ದಾಗಿಯಾಗಲಿ ವಕೀಲರ ಮೂಲಕವಾಗಲಿ ಹಾಜರಾಗದಿದ್ದರೆ- ದಾವೆಯು ಏಕಪಕ್ಷನಿರ್ಣಯವಾದೀತು.

ಯಸ್. ಗುರುರಾಜರಾವ್.
ಬಿ. ಎ. ಬಿ. ಎಲ್
ವಾದಿಯ ಅಡ್ವೊಕೇಟು

ಸಂಡೂರು ಯುವರಾಜರ ವಿವಾಹ ನಿಶ್ಚಯ

[ನಮ್ಮ ಸುದ್ದಿಗಾರರಿಂದ]

ಸಂಡೂರು ಯುವರಾಜರ ವಿವಾಹವು ಬರೋಡ ರಾಜಕುಮಾರಿ ವಸುಂಧರಾದೇವಿಯೆಡನೆ ಮಹರಾಷ್ಟ್ರದ ರಾಜಧಾನಿ ಪೂನಾ ನಗರದಲ್ಲಿ ನಡೆಯಲಿರುವದೆಂಬ ಸುವಾರ್ತೆಯು - ಅಂಪನೆಯಿಂದ ಘೋಷಿಸಲಾಯಿತು

ರಾಜಕುಮಾರಿಯು ಬೊಂಬಾಯಿ ವಿಶ್ವವಿದ್ಯಾಲಯದ ಮೆಟ್ರಿಕುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಈಗ ಬರೋಡ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವರು ಸಮಾಜ ಸೇವೆಯಲ್ಲಿ ರಾಜಕುಮಾರಿಯು ಆಸಕ್ತಳಿರುವಳು. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರವನ್ನು ತೆಗೆದುಕೊಂಡು ರಾಜಕುಮಾರರು ಯಶಸ್ವಿಯಾಗಿ ಶ್ರೇಣಿ ಪಡೆದಿರುವರು ಈಗ ಪಬ್ಲಿಕ್ ಸರ್ವಿಸ್ ಕಮೀಶನ್‌ನ ವಿದೇಶ ವ್ಯವಹಾರಪರೀಕ್ಷೆಗಾಗಿ ಅಧ್ಯಯನ ಮಾಡುತ್ತಿದ್ದು ಅದರಲ್ಲಿ ಶ್ರವೀಣರಾಗುತ್ತಿರುವರು. ಯುವರಾಜರು ಒಳ್ಳೆಯ ಆಟಗಾರರೂ, ವಾಗ್ಮಿಗಳೂ ಇದ್ದು ಲೆಕ್ಕವಿಲ್ಲದಷ್ಟು ಬಹುಮಾನ ಪಡೆದಿರುವರು.

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

O. S. No. 338/1952

BETWEEN:—

ಹೆಚ್. ವೆಂಕಪ್ಪಶೆಟ್ಟಿ, ತಂದೆ ಭೀಮಪ್ಪ ಶೆಟ್ಟಿ, ವೈಶ್ಯ, ವರ್ತಕ, ಬಳ್ಳಾರಿ. } ವಾದಿ

AND

1) ಜುಂಜುರಾಂ ಪಲ್ಲಿ ತಿಪ್ಪಮ್ಮ.
(ಜುಂಜುರಾಂ ಪಲ್ಲಿ ಮರೆಪ್ಪನ ಹೆಂಡತಿ)
2) ಬಿ. ವೆಂಕಟಮ್ಮ.
(ಬಿ ನಾರಾಯಣಪ್ಪನ ಹೆಂಡತಿ)
3) ಬಿ. ಜಯರಾಮಪ್ಪ.
4) ಬಿ. ನೀಲಕಂಠಪ್ಪ
5) ಬಿ ಜಯಪ್ರಸಾದ್ ಅಲಿಯಾಸ್ ಪ್ರಸಾದ್
6) ಬಿ. ಪ್ರಭಾಕರ. } ಪ್ರತಿವಾದಿಗಳು

[ನಂ. 3 ರಿಂದ 6 ರವರೆಗಿನ ಪ್ರತಿವಾದಿಗಳು ಲೇಟ್ ಬಿ ನಾರಾಯಣಪ್ಪನ ಮಕ್ಕಳಿದ್ದು, ತಾಯಿಯೂ ಮತ್ತು ಗಾರ್ಡಿಯನ್ ಆದ 2 ನೇ ಪ್ರತಿವಾದಿ ಬಿ. ವೆಂಕಮ್ಮನ ಸ್ವಾಧೀನ.]

ಮೊದಲನೆಯ ಪ್ರತಿವಾದಿಗೆ ನೋಟೀಸು

1 ರಿಂದ 6 ರವರೆಗಿನ ಪ್ರತಿವಾದಿಗಳಿಂದ ಮೇಲ್ಕಾಣಿಸಿದ ವಾದಿಯು ರೂ. 2715/– ಗಳನ್ನು ಕೋರ್ಟು ಖರ್ಚು ಮತ್ತು ಮುಂದಾಗುವ ಬಡ್ಡಿಯನ್ನು ವಸೂಲಿ ಮಾಡಲು ಜಿ. ಮರೆಪ್ಪ ಮತ್ತು ಬಿ. ನಾರಾಯಣಪ್ಪ ಎಂಬ ಹೆಸರಿನ ವ್ಯಾಪಾರಿ ಸಂಸ್ಥೆಯ ಆಸ್ತಿಯ ಮೇಲೆಯೂ ಮತ್ತು ಪ್ರತಿವಾದಿಗಳ ಸ್ವಾಧೀನವಲ್ಲಿರುವ ಜಿ ಮರೆಪ್ಪ ಮತ್ತು ಬಿ ನಾರಾಯಣಪ್ಪ ಇವರ ಆಸ್ತಿಗಳ ಮೇಲೆಯೂ ಈ ದಾವೆ ಹೂಡಿದ್ದಾನೆ. ಮೊದಲನೆಯ ಪ್ರತಿವಾದಿಯ ಹಾಜರಿಗಾಗಿ ಈ ದಾವೆಯು 12-3-53 ಕ್ಕೆ ವಾಯ್ದೆ ಹಾಕಲಾಗಿದೆ. ಆ ದಿನ ಸದ್ರಿ ಕೋರ್ಟಿನಲ್ಲಿ 11 ಗಂಟೆಗೆ ಮೊದಲನೆಯ ಪ್ರತಿವಾದಿಯು ಖುದ್ದಾಗಲಿ ವಕೀಲರ ದ್ವಾರವಾಗಲಿ ಹಾಜರಾಗಿ ತನ್ನ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ದಾವೆಯ ಏಕ ಪಕ್ಷ ನಿರ್ಣಯವಾಗುವುದು

ಬಳ್ಳಾರಿ. 17-2-53 } ಡಿ. ಯಲ್. ಚೆಟ್ಟಿ ವಾದಿಯ-ಅಡ್ವೋಕೇಟ್.

ಜನಕಲ್ಯಾಣ ಯೋಜನೆಗಳು ಜನತೆಯು ಪರಿಶ್ರಮವಹಿಸಬೇಕು

ಭಾರತ ರಾಷ್ಟ್ರಪತಿಗಳಾದ ಡಾ. ರಾಜೇಂದ್ರಪ್ರಸಾದರು ತಪ್ಪದೆಕ್ಷಣ ಭಾರತ ಸಂಚಾರದಲ್ಲಿ ಕೋಯಿಮತ್ತೂರಿಗೆ ಆಗಮಿಸಿದಾಗ್ಗೆ ಅಲ್ಲಿಯ ನಗರಸಭೆಯವರು ಅವರಿಗೆ ಮಾನಪತ್ರವನ್ನರ್ಪಿಸಿದರು.

ಅದಕ್ಕೆ ಉತ್ತರ ಕೊಡುತ್ತಾ, ರಾಜೇಂದ್ರಪ್ರಸಾದರು ಹೀಗೆ ಹೇಳಿದರು.

"ಸ್ವಾತಂತ್ರ್ಯವು ಮಹತ್ವದ್ದಾದರೂ ಅದರಿಂದ ಜನತೆಗೆ ಸುಖ ಮೊರೆಯದಿದ್ದರೆ ಅದಕ್ಕೇನೂ ಅರ್ಥವಿಲ್ಲ ಸರಕಾರವು ತುಂಬಾ ಅನೇಕ ಸಮಸ್ಯೆಗಳನ್ನೆದುರಿಸುತ್ತಿದೆ. ಜನತೆಯ ಹಿತಕ್ಕೋಸುಗ ಜೆಣಗುತ್ತಿದೆ."

ರೇಲ್ವೆ ದರಗಳಲ್ಲಿ ಇಳಿತ?

ದಿಲ್ಲಿ — ರೇಲ್ವೆ ಮಂತ್ರಿಗಳಾದ ಶ್ರೀ ಲಾಲಬಹಾದ್ದೂರ ಶಾಸ್ತ್ರಿಗಳು ಪಾರ್ಲಿಮೆಂಟಿನಲ್ಲಿ ರೇಲ್ವೆ ಮುಂಗಡ ಪತ್ರಿಕೆಯನ್ನು ಮಂಡಿಸಿಲಿದ್ದು ಅದು ಉಳಿತಾಯದ್ದಿದೆಯೆಂದು ನಿರೀಕ್ಷಿಸಲಾಗಿದೆ

ಈ ಸಂದರ್ಭದಲ್ಲಿ ಕೆಲವು ಸದಸ್ಯರು ರೇಲ್ವೆ ಪ್ರಯಾಣ ದರಗಳನ್ನು ವಿಶೇಷತಃ ಮೂರನೆ ವರ್ಗದ ದರಗಳನ್ನು ಇಳಿಸಬೇಕೆಂದು ಸೂಚಿಸಬಹುದೆಂದು ತಿಳಿಯುತ್ತದೆ.

ಹೈದರಾಬಾದ್-ಸಾನಲ್ ನಗರದಲ್ಲಿ ಸಮಾವೇಶವಾದ 58ನೆಯ ಇಂಡಿಯನ್ ಸೈನ್ಸ್ ಕಾಂಗ್ರೆಸ್ಸಿಗಾಗಿ ಸ್ವಾಗತ ಸಮಿತಿಯು 6½ ಲಕ್ಷ ರೂ. ಖರ್ಚು ಮಾಡಿರುವುದಾಗಿ ಹೊತ್ತಾಗಿದೆ ದೇಣಿಗೆ-ಗೇಟ ಕಲೆಕ್ಷನ್‌ದಿಂದ ಇದು ಭರ್ತಿಯಾದೀತು. ಇಲ್ಲವೇ 25-ಸಾವಿರ ರೂ ಕಡಿಮೆಬಿದ್ದೀತು

ವಾರ್ತಾ ವ್ಯಕ್ತಿಗಳು

ಚಿಯಾಂಗ್ ಕೈ ಷೇಕ್ ಅಂತರ ರಾಷ್ಟ್ರೀಯ ರಾಜಕೀಯ ರಂಗದ "ಉತ್ತಮಕುಮಾರ" ರೆನಿಸಿರುವ ಚಿಯಾಂಗ್ ಕೈ ಷೇಕ್‌ರವರನ್ನು ಅಧ್ಯಕ್ಷ ಐಸೆನ್‌ಹೋವರ್‌ರವರು ಅಂತರ ರಾಷ್ಟ್ರೀಯ ರಾಜಕೀಯದ ಚದುರಂಗ ಹಾಸಿನಲ್ಲಿ ಮತ್ತೆ ನಡೆಸಿಪ್ಪಾರೆ 240 ಮೈಲಿ ಉದ್ದವ ಫಾರ್ಮೋಸಾ ದ್ವೀಪದಲ್ಲಿನಾಲ್ಕೈದು ವರ್ಷಗಳಿಂದ ಕೂಪಗತ ರಾಗಿರುವ ಚಿಯಾಂಗ್‌ರವರು ತಾವು ಕಾಲಿಡಲಾಗದ ನಾಲ್ಕುಕಾಲುಮಿಲಿಯ್ ವಿಸ್ತೀರ್ಣದ ಚೈನಾರಾಜ್ಯಕ್ಕೆ ಮತ್ತೆ ಅಧ್ಯಕ್ಷರಾಗುವ ಕನಸನ್ನು ಕಾಣುತ್ತಲೆ ಇದ್ದಾರೆ. ಹಾಗೂ, ಚಿಯಾಂಗರು ಚೈನದ ನಾಯಕರೆಂದೇ ಪ್ರಶ್ನೆ ಕೊಟ್ಟು ಅಮೇರಿಕಾವು ಅವರನ್ನು ಇಸ್ಪೀಟು ರಾಜರನ್ನಾಗಿ ಮಾಡಿದೆ

ಚಿಯಾಂಗರು ಸೈನಿಕ ವೃತ್ತಿಯಿಂದ ಸರ್ವೆಸರ್ವಾಧಿಕಾರಿ ವಿಶ್ವಾಸದಿಂದ ರಾಜಕೀಯಕ್ಕಿಳಿದರು ಇಲ್ಲಿ, ತಪ್ಪು ಲೆಕ್ಕ ಹಾಕುವುದರಲ್ಲಿ ನಿಸ್ಸೀಮರೆಂದೆನಿಸಿಕೊಂಡರು 1925 ರಲ್ಲಿ ಚಿಯಾಂಗರು ಚೈನಾದ ಮುಖ್ಯ ಸೇನಾಪತಿಯಾದರು 1928 ರಲ್ಲಿ ಅಧ್ಯಕ್ಷರಾಗಿ ಚುನಾಯಿತರಾದರು. ಅದು ಅವರ ಗೌರವದ ಉನ್ನತ ಕಾಲವಾಗಿತ್ತು. 1930 ರಿಂದಾಚೆ ಅವರಿಗೆ ಕಠಿಣ ಸಮಸ್ಯೆಗಳು ತಲೆದೋರಿದವು. ಮೊದಲಾಗಿ ಉತ್ತರ ಚೈನಾ ಜನರ ಅಂತರ್ಯುದ್ಧ ಜಪಾನ್ ಯುದ್ಧ. ಇವರು ಚೈನಾಜನತೆಯ ವಿಶ್ವಾಸವನ್ನು ಗಳಿಸಲು ಅಸಮರ್ಥರಾದರು, ಎರಡನೆಯ ಮಹಾಯುದ್ಧದಲ್ಲಿ ಜಪಾನು ಒಳಗಾಗಿದ್ದು, ಚಿಯಾಂಗರಿಗೆ ಪಶ್ಚಿಮ ದೇಶದ ಬೀಜ ಜನರ ಸಹಕಾರ ಸಿಗಲು ಅನುಕೂಲವಾಯಿತು. ಹಾಗೆಯೇ ಪ್ರತಿಕೂಲವೂ ಆಯಿತು. ದೇಶವನ್ನು ಬಿಟ್ಟು ಫಾರ್ಮೋಸಾಗೆ ಓಡಿಹೋಗಬೇಕಾಗಿ ಬಂದಿದ್ದರಿಂದ ಹೆಚ್ಚು ಪ್ರತಿಕೂಲವಿನ್ನೇನಾಗಬೇಕು?

ಅಧ್ಯಕ್ಷ ಐಸೆನ್‌ಹೋವರರ ಹೊಸ ನೀತಿ ಕಂಡು ಉತ್ಸಾಹಭರಿತರಾಗಿರುವ ಚಿಯಾಂಗರು ಮಹಾಯುದ್ಧದಲ್ಲಿ ಅಮೇರಿಕಾ ಮಾಡಿದ ಸಹಾಯಗಳನ್ನು ಕೊಂಚನೆನೆಸಿಕೊಳ್ಳಬೇಕು ಚೈನಾ ದೇಶದ ಏನೂರು ಮಿಲಿಯ್ ಜನತೆಗೆ ಬೇಡವಾದ ಚಿಯಾಂಗ್ ಕೈಷೇಕ್‌ರು ಚೈನಾವನ್ನು ಗೆಲ್ಲುವುದು ಹಗಲು ಕನಸು.

[ರಾಯಭಾರಿ]

250

— ಉನ್ನತ ವ್ಯಕ್ತಿತ್ವ ನಿರ್ಮಾಣ —

ಯಾವನು ಸಹಜವಾಗಿ ಹರ್ಷ ಸ್ವಭಾವಿಯಾಗಿರುವನೋ ಯಾವಾತನು ಸದಾ ಆನಂದ ಉಲ್ಲಾಸದ ವಿಚಾರಗಳಲ್ಲಿ ತನ್ಮಯನಾಗಿರುವನೋ ಅತನು ಭಯಂಕರ ಆಪತ್ತು ಕಷ್ಟದಿಂದಲೂ ಹಾಗೂ ಗೆ ದೃಢಧೈರ್ಯದ ಎದೆಗಾರಿಕೆಯಿಂದ ಸುಖಾ ಹಸನ್ಮುಖಿಯಾಗಿರುವನು. ಅಂಥವನು ತಾನು ಸುಖಿಯಾಗಿರುವುದು ಮಾತ್ರವಲ್ಲ, ಸುತ್ತಮುತ್ತಲು ಇತರ ಜನರ ಜೀವನದ ಮೇಲೆಯೂ ತನ್ನ ಉನ್ನತ ಜೀವನದ ಪ್ರಭಾವವನ್ನು ಬೀರುವನು ಭವ್ಯವಾದ ದಿವ್ಯ ಜೀವನದ ಸುಮ್ಮನನ್ನು ಜಗತ್ತಿನಲ್ಲಿ ಪ್ರಚಾರಪಡಿಸಿ ಜನ್ಮಸಫಲಮಾಡಿಕೊಳ್ಳುವನು.

ಮಹಾತ್ಮ ಇಮರ್ಸನ್ ಹೇಳಿದಂತೆ ಅವಂದ ಉಲ್ಲಾಸದ ಸದ್ಭಾವನೆಗಳಿಂದಲೇ ನಮ್ಮ ಮಾನಸಿಕ ಉನ್ನತಿ ಬಲವಾಗಿ ಬೆಳೆಯುವುದು. ಯಾ ಭಯಂಕರ ಸಂಕಷ್ಟಗಳು ನಮ್ಮನ್ನು ಬಲವಾಗಿ ಪೀಡಿಸುತ್ತಿರಲಿಸ್ವಲ್ಪವೂ ಜಿಂಚಲನಾಗದ ಶಾಂತ ಮನಸ್ಕರಾಗಿ ಸರ್ವವನ್ನು ಸಮಾಧಾನದಿಂದ ಸಹಿಸಿದರೆ ದೂರವಾಗುವುದು. ಅಂತರಾತ್ಮನ ಪರನು ದಿವ್ಯ ಗುಣಗಳನ್ನು ವಿಚಾರಿಸುತ್ತಾ ಆನಂದ ಉಲ್ಲಾಸವಲ್ಲಿರುವುದರಿಂದ ನಮ್ಮಲ್ಲಿ ದಿವ್ಯ ಭಾವನೆಗಳು ಉಕ್ಕಿ ಹರಿದು ಬಂದು ಉನ್ನತ ವ್ಯಕ್ತಿತ್ವ ನಿರ್ಮಾಣವಾಗುವುದು. ಇಂಥಹ ವ್ಯಕ್ತಿಗಳು ಲೋಕದಲ್ಲಿ ಬಹಳ ಅಪರೂಪ. ದೇಶ ಸಮಾಜದ ಮೂಲೆ ಮೂಲೆಗಳಲ್ಲಿ ಅಲಸ್ಯ ನಿರಾಶೆಗಳಲ್ಲಿ ಒದ್ದಾಡುವ ಜನರೇ ಬಹಳ. ಇದು ಅತ್ಯಪತನದ ಚಿಹ್ನೆ.

ಯಾವಾತನು ತನ್ನ ಮನಸ್ಸಿನ ಗುಲಾಮನೋ ಅತನೆಂದೂ ಸಮಾಜೋದ್ದೇಶದ ಸ್ವತಂತ್ರವಾಗಿರಲು ಯೋಗ್ಯನಲ್ಲ

ಧರ್ಮಶಾಸ್ತ್ರಗಳ ಸಾರಪೂರ್ಣವಾದ ಮಾತುಗಳ ನಿಷ್ಕರ್ಷೆ ಒಂದೇ ಮಾತಿನಲ್ಲಿ ಹೇಳಬೇಕಾದರೆ ಪರಿಶುದ್ಧ ಮನಸ್ಸಿನವನಾಗಿ ಬಾಳುವುದೇ ಸರ್ವೋತ್ತಮವಾಗಿದೆ ಸ್ವಾರ್ಥ ದ್ವೇಷ ಮಾತ್ಸರ್ಯ ಕರೋರ ಭಾವನೆಗಳಿಂದ ಮನುಷ್ಯನಲ್ಲಿ ರಾಜಸಿಕ ತಾಮಸಿಕ ಭಾವನೆ ಬಲವಾಗಿ ಬೆಳೆಯುವುದು. ಉನ್ನತ ವ್ಯಕ್ತಿತ್ವವನ್ನು ತನ್ನಲ್ಲಿ ನಿರ್ಮಾಣ ಮಾಡಿಕೊಳ್ಳುವದು ಕೂಡಾ ಬಲು ದೊಡ್ಡ ಸಾಹಸದ ಸಾಧನೆಯಾಗಿರುವದು.

ವಿಚಾರ ಪರನಾದವನು ಪ್ರತಿಯೊಂದು ಕಾರ್ಯವನ್ನು ಬಹಳ ವಿಚಾರ ಪೂರ್ವಕವಾಗಿಯೇ ಪ್ರಾರಂಭಿಸಬೇಕು. ಹಟ ಸಾಧನೆಗಳಿಂದ ಅವರ ಹಿಂದೆ ಬಿದ್ದು ಪೂರ್ಣವಾಗುವ ವರೆಗೆ ಸಾಹಸಪಡಬೇಕು.

ಎಂದಾದರೂ ನಮ್ಮ ಮೇಲೆ ಅಲಸ್ಯ ವಿಘ್ನ-ದುಃಖಗಳ ಚಿಂತಾಜನಕ ವಿಚಾರಗಳ ಪ್ರಭಾವವು ಹೃದಯದ ಮೇಲೆ ಕತ್ತಲೆಯಂತೆ ಮುಸುಕಿ ಬಿದ್ದರ ನಾವಿಂದು ನಿರಾಶೆ ಪಡಬೇಕಾಗಿಲ್ಲ ಕೂಡಲೇ ಅಂತರಾತ್ಮ ಪರನು ದಿವ್ಯ ಮಹಾ ಶಕ್ತಿಯ ಕಡೆಗೆ ಏಕಾಗ್ರ ಮನಸ್ಕರಾಗಿ ಧ್ಯಾನದಲ್ಲಿ ತಲ್ಲೀನರಾಗಿ. ಆಗಲೇ ಅಂತರಂಗದ ದಿವ್ಯ ವಿಲಿಪ್ತಿ ಆತ್ಮ ಪ್ರಕಾಶವು ಹೊರಹೊಮ್ಮಿ ನಿರಾಶೆ ಪಡಬೇಡವೆಂಬ ದಿವ್ಯ ಸಂದೇಶ ಪಡೆವರೇ ಜಗತ್ತಿನಲ್ಲಿ ಲೋಕೋದ್ಧಾರಕ ಆಶ್ಚರ್ಯ ಮಹಾಕಾರ್ಯಗಳನ್ನು ಮಾಡಿ ಧನ್ಯರಾಗಿದ್ದಾರೆ. ಲೋಕದ ಇತಿಹಾಸವೇ ಇದಕ್ಕೆ ಪ್ರಬಲ ಸಾಕ್ಷಿ ಜಗತ್ತಿನ ಕೆಚ್ಚೆದೆಯ ಜನ ಸಮುದಾಯ ಆಂತರ್ಯದ ಈ ಪರಮ ದಿವ್ಯ ಶಕ್ತಿಯ ಅರಿವಿಲ್ಲದ ಕಾರಣ ಅಜ್ಞಾನ ವ್ಯಾಮೋಹ ನಿದ್ರೆಯಲ್ಲಿ ಮಲಗಿದ್ದಾರೆ ಜಡ ಜೀವಿಯಾಗಿದ್ದಾರೆ ಪರಿಶುದ್ಧನಾದ ನನಗೆ ಹೊರಗಿನ ಯಾವ ದುಃಖ-ಆತಂಕ-ರೋಗ ಶೋಕ- ದಾರಿದ್ರ್ಯಗಳೂ ಪೀಡಿಸಲಾರವು ಅಂತರಾತ್ಮ ದಿವ್ಯಗುಣಗಳ ವಿಕಾಸನಕ್ಕಾಗಿ ನಮಗೆಬಹುಮಾಲ್ಯವಾದನನ ಜೀವನವು ಪುಣ್ಯದಿಂದ ದೊರಕಿದೆಂಬುದನ್ನು ತಿಳಿದುಕೊಳ್ಳವರು ನಮ್ಮಲ್ಲಿ ಬಹಳ ಅಲ್ಪ ಸಂತ ಸೊಕೆಟೀಸ್, ನೀರ ನೆಪೋಲಿಯನ್, ಗ್ರೆಂಜ್ ಇಬ್ರಾಹಿಮ್ ಲಿಂಕನ್ ಮೊದಲಾದ ನೂರಾರು ವಿದೇಶಿ ಮಹಾನಿಯರು, ನಮ್ಮ ದೇಶದ ಮಹಾತ್ಮರು ನೊತ್ತ ಮೊದಲು ತಮ್ಮ ಮನೋ ವಿಕಾರಗಳನ್ನೆಲ್ಲ ಸರ್ವದಾ ಗೆಲ್ಲಲು ಪ್ರಯತ್ನಿಸುತ್ತಾ ತಮ್ಮಲ್ಲಿ ಉನ್ನತ ವ್ಯಕ್ತಿತ್ವ ನಿರ್ಮಾಣ ಮಾಡಿಕೊಂಡ ಕಾರಣವೇ ಲೋಕವಿಜ್ಞಾತರಾಗಿರುವರು.

ಸಹಜ ಸುಖ ಶಾಂತಿ ಆನಂದ ಉಲ್ಲಾಸದ ಭಾವನೆಗಳಿಂದ ಲೋಕೋಪಕಾರಿ ಪುಣ್ಯ ಕಾರ್ಯಗಳಲ್ಲಿ ತನ್ಮಯವಾಗಿರುವದರಿಂದಲೇ ನಮ್ಮ ಜೀವನವು ಉಜ್ವಲವಾಗುವುದು ತದ್ ವಿರುದ್ಧವಾಗಿ ಸ್ವಾರ್ಥ-ದ್ವೇಷ ಮತ್ಸರ ಹಟಸಾಧನೆಗಳಲ್ಲಿ ತನ್ಮಯರಾಗಿ ಜೀವನದ ಮರುಪಯೋಗ ಮಾಡಿಕೊಳ್ಳುವುದರಿಂದ ಜೀವನವು ಶತ ಸವಾಗುವುದು ಖಂಡಿತ.

[ಮೂ. ವ. ಹೆಗಡೆ-ರಾಯಭಾರಿ]

ಆದವಾನಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

O S 90/1952 E P.129/1952

ಜಿ. ಗುಲ್ಲಿಕಾರ್ಜುನಪ್ಪ, D. H

Vs

ಕೆ. ಬಸಪ್ಪ ಮತ್ತು ಇತರರು. J. Ds

—ನೋಟೀಸು—

ಆದವಾನಿ ಡಿಸ್ಟ್ರಿಕ್ಟ್ ಮುನ್ಸಿಸ್ ಕೋರ್ಟಿನಲ್ಲಿ 27-2-1953ರಂದಿನ ಈ ಕೆಳಗೆ ಕಾಣಿಸಿದ ಆಸ್ತಿಯನ್ನು ವಾದಿಯ ಪಾ. 18-3-47ರ ಕೇ 9 ಬಡ್ಡಿಯ 1500/ ರೂ ಅಸಲಿನ ಆಯಕಕ್ಕೋಸ್ಕರ ಪಟ್ಟು- ಕೋರ್ಟಿನ ಪರವಾಗಿ ಯಾಲಂ ಮೂಲಕ ಮಾರಲಿದ್ದಾರೆ. ಬೇಕಾದವರು ಸದರಿ ಕೋರ್ಟಿನಲ್ಲಿ ಬಂದು ಕೊಳ್ಳಬಹುದೆಂದು ಈ ಮೂಲಕ ತಿಳಿಸಲಾಗಿದೆ.

ಆಸ್ತಿಯ ವಿವರ:-

ಆದವಾನಿ ಮುನಿಸಿಪಾಲಿಟಿಯ 11 ಹನ್ನೊಂದನೆಯ ವಾರ್ಡಿನಲ್ಲಿ 297 ನೆಯ ಡೋರ್ ನಂಬರ್‌ನ ಮನೆ

ಓ. ಪ್ರಹ್ಲಾದರಾವ್
ಡಿಸ್ಟ್ರಿಕೋರ್ಟ್ ಅಡ್ವೋಕೇಟ

ಹೊಸಪೇಟೆ ಡಿಸ್ಟ್ರಿಕ್ಟ್ ಮುನಸಿಫ್ ಕೋರ್ಟಿನಲ್ಲಿ

S. C 412/52

ನವಗಂಟಿ ಹನುಮಂತಪ್ಪ—ವಾದಿ

Vs

ಗಡ್ಡಿ ಹನುಮಂತಪ್ಪ—ಪ್ರತಿವಾದಿ

ತಂದೆ ತಿಮ್ಮಪ್ಪ-ಗೊರ್ಲಿಂಗನ್ಮಸಹಳ್ಳಿ ಸೊಂಡೂರು-ತಾಲೂಕು

ಮೇಲಿನ ನಂಬರಿನಲ್ಲಿ ವಾದಿಯು ಪ್ರತಿವಾದಿಯ ಮೇಲೆ ಸ್ಪೋನೋಟಿನ ಬಾಬ್ತು 58-4-0 ಗೆ ದಾವಾ ದಾಖಲುಮಾಡಿದ್ದು ವಾಯ್ದೆಯು 2-3-1953 ಕ್ಕೆ ಇದೆ ಅದಿನ ಪ್ರತಿವಾದಿಯು ಖುದ್ದಾಗಲಿ-ವಕೀಲರ ಮೂಲಕವಾಗಲಿ ಕೋರ್ಟಿಗೆ ಹಾಜರಾಗಿ ತನ್ನ ತಕರಾರು ಏನಾದರೂ ಇದ್ದಲ್ಲಿ ತಿಳಿಸಬೇಕು. ಇಲ್ಲವಾದರೆ ಏಕಪಕ್ಷನಿರ್ಣಯ ವಾಗುವದೆಂದು ಈ ಮೂಲಕ ತಿಳಿಸಲಾಗಿದೆ

ಕೆ. ಲಿಂಗಮಲ್ಲಾರಶಾಸ್ತ್ರಿ
ವಾದಿ ವಕೀಲು

ಮಹಾತ್ಮಾಗಾಂಧಿಯವರ ಚಲನಚಿತ್ರವನ್ನು ಅಮೆರಿಕಾದಲ್ಲಿ ಶ್ರೀ ಕರುಪ್ಪನ್ ಚೆಟ್ಟಿಯಾರ್ ರವರು ತಯಾರಿಸಿದ್ದು ಅದು ಅಮೆರಿಕಾದಲ್ಲಿ ತೋರಿಸಲಾಗುತ್ತಿದೆ. ದಕ್ಷಿಣಾಫ್ರಿಕಾದಿಂದ ಅಂತ್ಯದವರೆಗೆ

ಕನ್ನಡನಾಡಿನ ಸಂಸ್ಕೃತಿಯಲ್ಲಿ ಹರಿದಾಸರ ಪಾತ್ರ

ಶ್ರೀ ಯಂ. ರಾಮಣ್ಣ, ಸುಭೋಧ

ಕಳ್ಳಿದ ಸಂಚಿಕೆಯಿಂದ ಮುಂದುವರಿದಿದೆ

ಯುಕ್ತ ಕಾಮೋಪಭೋಗವೆಂದರೆ ಮನುಷ್ಯನು ಯುಕ್ತ ವಯಸ್ಸಿನಲ್ಲಿ ಗೃಹಸ್ಥಧರ್ಮವನ್ನು ಸ್ವೀಕರಿಸಿ, ಏಕಪತ್ನೀವ್ರತಸ್ಥನಾಗಿ ಅತಿಥಿ ಸತ್ಕಾರದೀನಾನಾಥರ ಪೋಷಣೆ, ಸಾಧು ಸಜ್ಜನಸೇವೆ ನಿತ್ಯಪಟುರೀತಿಯಲ್ಲಿ ಭಗವದಾರಾಧನೆ. ಇವುಗಳಲ್ಲಿ ನಿರತನಾಗಿರಬೇಕೆಂದು ಶ್ರೀ ಹರಿದಾಸರ ಭೋಧನೆಗಳಲ್ಲಿ ಕಂಡುಬರುತ್ತದೆ

ಎಲ್ಲಕ್ಕೂ ಹೆಚ್ಚಾಗಿ ಶ್ರೀ ಹರಿದಾಸರು ಮನುಷ್ಯನು ಇಂದ್ರಿಯ ತೃಪ್ತಿ ವಿಷಯ ಭೋಗಲಾಲಸೆ ಇವುಗಳಲ್ಲಿ ಚಾಪಲ್ಯವನ್ನು ನೀಗದಿದ್ದರೆ ಉನ್ನತಿಯ ಮಾರ್ಗ ಹಿಡಿಯುವುದು ಅಸಾಧ್ಯವೆಂದು ಮೇಲೆಮೇಲೆ ಭೋಧಿಸಿದ್ದಾರೆ. "ವಿಷಯದ ವಿಚಾರಬಿಡು ವಿಹಿತ ಕರ್ಮವಮಾಡು ವೈರಾಗ್ಯಭಾಗ್ಯ ಜೋಡು" ಎಂಬುದು ಶ್ರೀ ದಾಸರಾಯರ ಸಕಲ ಭೋಧನೆಗಳನ್ನೂ ಒಳಗೊಂಡ ಮೂಲಸೂತ್ರವಾಕ್ಯದಂತಿದೆ. ಈ ಪದವನ್ನೆ ಮುಂದುವರಿಸಿ, ವಪವೆಂದು ಕಾಮ ಕ್ರೋಧಾದಿಗಳನೀಸೀಡ್ಯಾಡಿ ಮಸಣವನವೇ ಮಾಧವನ್ನ ನೀ ಕೊಂಡಾಡು" ಎಂದು ಮನಸ್ಸಿಗೇ ಉಪದೇಶಿಸಿದ್ದಾರೆ.

ಮನಸ್ಸಮುದ್ರದ ಅಡಿಯಲ್ಲಿ ಒಡಗಿರುವತಿನವಮಸ್ಕಾರ ವಾಸನೆಗಳೆಲ್ಲ ಅಳಿದು ಶುದ್ಧವಾಗುವವರೆಗೆ ಮಾಡುವ ಒಳ್ಳೆಯ ಕಾರ್ಯಗಳೆಲ್ಲ ದಾಂಭಿಕತ್ವಾಗಿ ಮಾಡುವವುಗಳಾಗುವವು, ಕೇಳುವ ಧರ್ಮ ಭೋಧೆಗಳೆಲ್ಲ ಶುಷ್ಕವೆನ್ನಿಸಿ ವ್ಯರ್ಥವಾಗುವುವು ವೇದಶಾಸ್ತ್ರಾದಿ ನ್ಯಾಸಂಗಗಳು ಸಹ ದಂಭವರ್ಧನ ವಿದ್ಯಾವಮಾನ ಮುಂತಾದುವೆನ್ನುವ ಹೆಚ್ಚಿಸುವುವು, ಆದುದರಿಂದ ಮನಸ್ಸನ್ನು ಮೊದಲು ಯೋಗ್ಯ ವ್ಯವಸಾಯಕ್ಕೆ ಒಳಪಡಿಸಿ ತಿದ್ದಿಗೊಳಿಸಬೇಕೆಂದು ಶ್ರೀ ದಾಸರಾಯರು ತಮ್ಮ ಒಂದು ಕೃತಿಯಲ್ಲಿ ನುಡಿದಿದ್ದಾರೆ.

ಹೃದಯ ಹೊಲವನ್ನಾಡಿ, ಮನವ ನೇಗಿಲಸೂಡಿ, ಶ್ವಾಸೋಚ್ಛ್ವಾಸ ಎರಡೆತ್ತು ಮಾಡಿ! ಜ್ಞಾನವೆಂಬ ಹಗ್ಗ ಕಣ್ಣಿಯ ಮಾಡಿ, ನಿರ್ಮಮವೆಂಬ ಗಂಟೆಲಿ ಹರವಿರಯ್ಯಾ!!" ಮದಮ್ಸರವೆಂಬ ಮರಗಳನೆ ತರಿದು, ಕಾಮಕ್ರೋಧಗಳೆಂಬ ಕಳೆಯ ಕಿತ್ತೀ! ಪಂಚೇಂದ್ರಿಯವೆಂಬ ಮುಂಚಿಕೆಯನೆ ಹಾಕಿ, ಚಂಚಲವೆಂಬ ಹಕ್ಕಿಯ ಹೊಸೆಯಿರಯ್ಯಾ!!" ಹೀಗೆ ಶುದ್ಧವಾದ ಮನಸ್ಸೆಂಬ ಕ್ಷೇತ್ರದಲ್ಲಿ ಶ್ರೀ ಹರಿನಾಮವೆಂಬ ಅಮೃತಮಯ ಬೀಜವನ್ನು ಬಿತ್ತಿದಲ್ಲಿ, ಅಲ್ಲಿ ಭಗವತ್ಸಾಸ್ತಿಧ್ಯ ಉಂಟಾಗುವುದೆಂದೂ, ಹಾಗೆ ಹೃದಯದಲ್ಲಡಗಿದ್ದ ಕಲಿಯ ಆವೇಶವು ನಿರ್ನಾಮವಾಗಿ ಭಗವತ್ಸಾನ್ನಿಧ್ಯ ಉಂಟಾದೊಡನೆಯೇ ಆ ಸಾನ್ನಿಧ್ಯ ವಿಶೇಷದಿಂದಲೇ ಭಕ್ತಿ, ವಿರಕ್ತಿ, ಸೌಜನ್ಯ, ಸತ್ಯಧರ್ಮಗಳ ಆಚರಣೆ ಈ ಎಲ್ಲವೂ ಉಂಟಾಗುವುವು. ಹಾಗೆ ಮನಸ್ಸೆಂಬ ಕ್ಷೇತ್ರದಲ್ಲಿನ ದುಷ್ಟ ಕಳೆ ನಾಶವಾಗದಿದ್ದರೆ, ಉತ್ತಮವಾದ ಬೆಳೆ ಹುಲುಸಾಗಿ ಬೆಳೆಯಲಾರದು. ಎಂದಿದ್ದಾರೆ.

ನಮ್ಮ ಸಂಸ್ಕೃತಿಯ ಉದ್ಧಾರಕ ಮಾರ್ಗದಲ್ಲಿ ಧರ್ಮಾಚರಣೆಗೆ ನಮ್ಮ ಹಿರಿಯರು ಎಂತಹ ಮಹತ್ವಕೊಟ್ಟು, ಅದರ ನಿತ್ಯಾನುಸಂಧಾನದಲ್ಲಿ ಎಂತಹ ಉನ್ನತ ಮಟ್ಟವನ್ನು ಮುಟ್ಟಿದ್ದರು ಎಂಬುದನ್ನು ಶ್ರೀ ಪುರಂದರದಾಸರು ತಮ್ಮ ಒಂದು ಕೃತಿಯಲ್ಲಿ ನುಡಿದಿದ್ದಾರೆ.

" ಧರ್ಮವೇ ಜಯವೆಂಬ ದಿವ್ಯ ಮಂತ್ರ"—"ವಿಷವಿಕ್ಕಿದವಗೆ ಪಥ್ಯವನನುಣಿಸಲಿಬೇಕು, ದ್ವೇಷಮಾಡುವವನ ಪೋಷಿಸಲೇಕು! ಪುಸಿಮಾತಿಗೆ ಪುಸಿಯನ್ನದೆ ಹರಸಲಿ ಬೇಕು, ಮೋಸಮಾಡುವರು ಮಗನಿಗಿಡಬೇಕು!!"—

ನಮ್ಮಜನಾಂಗವು ಧರ್ಮಾಚರಣೆಗಳಲ್ಲಿ ಸುಧಾರಣೆ ಹೊಂದಿ ಸುಸ್ಥಿತವಾಗುವುದೆನ್ನಿಸಿ, ಸಾಧು ಸಮ್ಮತವಾದ ಪಥದಲ್ಲಿ ನಡೆಯಬೇಕೆಂದು ಇಚ್ಛಿಸಿದ ಹರಿದಾಸರ ಈ ಸಾಹಿತ್ಯವು ಅಮೌಲ್ಯವಾಗಿದೆ. ಇದು ಚಿಕ್ಕಂದಿನಿಂದ ಜನತೆಯಲ್ಲಿ ಅಭ್ಯಾಸವಾಗಬೇಕು. ಬಾಲಕಬಾಲಕಿಯರಿಗೆ ಗುರುಹಿರಿಯರಲ್ಲಿ ನಮ್ರತೆ, ವಿನಯ, ವಿಧೇಯತೆಗಳು, ಭಗವಂತನಲ್ಲಿ ಭಕ್ತಿಶ್ರದ್ಧೆಗಳು, ಜೊತೆಯವರಲ್ಲಿ ನಿಸ್ವಾರ್ಥವ್ಯವಹಾರ ಮುಂತಾದುವು ಅಭ್ಯಾಸವಾಗುವಂತೆ, ಧರ್ಮನೀತಿ ವಾಕ್ಯವು ನೇತ್ರಾಪತ್ರಿಕೆಯಲ್ಲಿ ಸೇರಬೇಕು. ಮಹಾಪುರುಷರ-ಭಗವದ್ಭಕ್ತ [illegible] ಕಾರ್ಯಗಳು ಸರ್ವದ [illegible] ರಿಗೆ ಇಯವಂತೆ ಯೋಜಿಸಿದ್ದವರಿಗೆ ಬೇಕು.—ಇದಕ್ಕೆ ಅವಶ್ಯಕವೆನ್ನಿಸುವ ಸಾಧನಸಾಮಗ್ರಿ ಹರಿದಾಸ ಸಾಹಿತ್ಯವಲ್ಲಿ ಸಿದ್ಧವಾಗಿದೆ.

ಆದವಾನಿ ಡಿಪ್ಟಿ ಮುನ್ಸಿಫ್ ಕೋರ್ಟಿನಲ್ಲಿ

G. P. NO. 2/52

ಪ್ರೋತಿ ತಾರಾಪುರಂ ಕರಣಂ ಭೀಮಪ್ಪಗೆ ಬರಬಾಕಿ ಸಾಲಗಳ ವಿಷಯದಲ್ಲಿ—

ಕೆ. ವಾಸು ದೇವರಾವು ವಗೈರೆ ಅರ್ಜಿದಾರರು.

ಪ್ರತಿವಾದಿ 2 ಕರಣಂ ವೆಂಕೋಬರಾವು —ಎದುರುವಾರ್ಟಿನೋಟೀಸು.

ಮೇಲ್ಕಾಂಡ ತೀರಿಹೋದ ತಾರಾಪುರಂ ಕರಣಂ ಭೀಮಪ್ಪಗೆ ಬಳ್ಳಾರಿ ಹೈಸ್ಕೂಲ್ ಡಿಪಾರ್ಟ್‌ಮೆಂಟು ಇವರ ಕಡೆಯಿಂದ ಬರಬಾಕಿ ಕೆಲವು ಕಂಟ್ರಾಕ್ಟು ಬಿಲ್, ಡಿಪಾಜಿಟ್ ಮೊತ್ತವನ್ನು ವಸೂಲು ಮಾಡಿಕೊಳ್ಳಲು 14—2—53ನೆಯ ತೇದಿಯಲ್ಲಿ ಅರ್ಜಿದಾರರು ಈ ಕೋರ್ಟಿನಲ್ಲಿ ಅರ್ಜಿ ಇಟ್ಟಿರುತ್ತಾರೆ. ವಾಯ್ದೆ 10-3-53ಕ್ಕೆ ಇರುತ್ತದೆ. ಇದಕ್ಕೆ ಯಾರಿಗಾದರೂ ತಕರಾರು ಇದ್ದಲ್ಲಿ ಅವರು ಆ ದಿನ ಕೋರ್ಟಿನಲ್ಲಿ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು.

ಯಸ್. ನರಸಿಂಗರಾವು,
ಅರ್ಜಿದಾರರ-ವಕೀಲರು

ವಿದ್ಯುತ್ ಶಾಖೆಯಲ್ಲಿ ಕಡಿತ

ಆಂಧ್ರಕ್ಕೆ ಮಾತ್ರವೇ ಸಂಬಂಧಿಸಿಲ್ಲ

ಜಣದ ಅಭಾವದಿಂದ ವಿದ್ಯುತ್ಶಾಖೆಯಲ್ಲಿ ನೌಕರರನ್ನು ತೆಗೆದು ಹಾಕಿದ್ದು- ಆಂಧ್ರಕ್ಕೆ ಮಾತ್ರವೇ ಸಂಬಂಧಿಸಿದುದಲ್ಲ. ಇಡೀ ಮದ್ರಾಸ್ ಪ್ರಾಂತಕ್ಕೇ ಇದು ಸಂಬಂಧಿಸಿದೆ ಆಂಧ್ರದಲ್ಲಿ 850 ಜನರನ್ನು ತೆಗೆದು ಹಾಕಿರುವುದಾದರೆ, ಉಳಿದ ಮದ್ರಾಸ್ ಭಾಗದಲ್ಲಿ 3000 ಸಾವಿರ ಜನರು ಹೊರಗೆ ಹೋಗಿರುವರು—ಇದರಿಂದ ಹೊಸದಾಗಿ ಆಗುವ ಕಾರ್ಯಗಳಿಗೆ ತಡೆಯುಂಟಾಗಿದೆಯಾಗಲಿ. ಈಗ ನಡೆಯುತ್ತಿರುವ ಉದ್ಯೋಗಕ್ಕೇನೂ ತೊಂದರೆಯಿಲ್ಲ. " ಎಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರ್ಯರು ಹೇಳಿದರು—ಈ ಕಾರಣ ಆಂಧ್ರದ ಭಾಗದಲ್ಲಿ ವೃತ್ತಪತ್ರಿಕೆಯಿಂದೋಲನ ನಡೆದಿರುವುದು ನ್ಯಾಯವೂ ಸಕಾರಣವೂ ಆದುದಲ್ಲ ಎಂದರು

252

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಸಲ್ಲಿ

S. C. 603/52

ಇಟ್ಟಾವುರದ ಮಜದೇವಮ್ಮ :—ವಾದಿ

Vs

1 ಹನುಮಂತಪ್ಪ s/o ಸಣ್ಣಬಸಪ್ಪ
2 ಬಿಸಪ್ಪ s/o ಹನುಮಂತಪ್ಪ
3 ಬಸ್ಸ s/o ಹನುಮಂತಪ್ಪ ಯಲ್ಲರೂ ಮೇಜರು
ಹಿಂದೂ, ಮುಷ್ಟಗಟ್ಟಿ, ಬಳ್ಳಾರಿ ತಾಲೂಕು.

ನೋಟೀಸು

ನೀವೆಲ್ಲರು 14-9-49 ತೇದಿ ವಾದಿಗೆ ರು. 234/—ಕ್ಕೆ ಬರದು ಕೊಟ್ಟ ಪ್ರಾಂಸರಿ ನೋಟಿನ ಸೊತ್ತ ವಸೂಲಿಗಾಗಿ ದಾವೆ ಮಾಡಿರುತ್ತಾಳೆ. ಸದರಿ ದಾವೆ 27—2—53 ನೇ ತೇದಿ ಇರುತ್ತದೆ. ಸದರಿ ತೇದಿ ನೀವು 11 ಗಂಟೆಗೆ ಮೇಲ್ಕಂಡ ಕೋರ್ಟನಲ್ಲಿ ಹಾಜರಾಗದಿದ್ದರೆ ನಿಮ್ಮನ್ನು ಎಕ್ಸ್ ಪಾರ್ಟಪೂಡಿ ದಾವಾ ಡಿಕ್ರಿ ಮಾಡಲ್ಪಡುತ್ತದೆ.

ಬೆಳಡೋಣ ನರಸಿಂಗರಾವ್
ವಾದಿ ವಕೀಲು.

AT "PRABHAT"

* SAMSON & DELILAH *

IN GORGEOUS-TECHNICOLOR

Fea:— HEDDY LAMARR; VICTOR MATURE;

Wonderful, Thrilling — Paramount's greatest production

3 Shows, 27 & 28th Feb at 3-30 P. M., 6-15 & 9-20 P.M.

2 Shows, rest of the days as usual at 6-15 & 9-20 P. M.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿತೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :- ಶ್ರೀ ಬಿ. ನಾ. ಬೈಜವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ ೨ ರೂಪಾಯಿ.
,, ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ

ಹಣ್ಣಿನ ವ್ಯವಸಾಯ

ದೇಶದ ವಿಭಜನೆಯ ನಂತರ ತಮ್ಮ ದೇಶದಲ್ಲಿ ಎಲ್ಲ ಬಗೆಯ ಹಣ್ಣಿನ ಕ್ಷೇತ್ರ ೩೧.೪ ಲಕ್ಷ ಎಕರೆ ಇದೆಯೆಂದು ಲೆಕ್ಕ ಹಾಕಲಾಗಿದೆ. ಇದು ಒಟ್ಟು ಬೆಳೆಯ ಕ್ಷೇತ್ರದ 2% ರಷ್ಟಾಗುತ್ತದೆ.

* * *

ಕ್ಯಾಲಿಫೋರ್ನಿಯಾನದಲ್ಲಿ ಪ್ರತಿ ಏಳು ಜನರಿಗೆ ಒಂದು ಎಕರೆ ಕಾಯಿಪಲ್ಲೆ ಹಾಗು ಹಣ್ಣಿನ ಕ್ಷೇತ್ರವಿದೆ. ಕ್ಯಾಲಿಫೋರ್ನಿಯಾದಲ್ಲಿ ಪ್ರತಿ ಮೂರು ಜನರಿಗೊಂದು ಎಕರೆ ಇಂಥ ಕ್ಷೇತ್ರ ಬೆಳುತ್ತದೆ. ಭಾರತದಲ್ಲಿ ೭೫ ಜನರಿಗೆ ಒಂದು ಎಕರೆ ಪ್ರಮಾಣ ಇದೆ. ಸ್ವೀಡನ್ ದೇಶದಲ್ಲಿ ಪ್ರತಿವ್ಯಕ್ತಿಗೆ ಒಂದು ಹಣ್ಣಿನ ಗಿಡವಿದೆ.

* * *

ನಮ್ಮ ದೇಶದಲ್ಲಿ ಹಣ್ಣಿನ ವಾರ್ಷಿಕ ಉತ್ಪಾದನೆ ೭೦ ಲಕ್ಷ ಟನ್ನು ಇದೆ. ದಿನಾಲು ತಲಾ ಕನಿಷ್ಠ ೨ ಔಂಸು ಹಣ್ಣು ಬೇಕೆಂದು ಹಿಡಿದರೂ ಇದು ಅಷ್ಟಕ್ಕೂ ಸಾಲುವಂತಿಲ್ಲ.

* * *

ನ್ಯೂಯಾರ್ಕದಲ್ಲಿ ಹಣ್ಣಿನ ತಲಾ ದೈನಂದಿನ ಬಳಕೆ ೧೩ ಔಂಸು ಇದೆ. ಇಂಗ್ಲಂಡು ಕೃಷಿಪ್ರಧಾನ ದೇಶವಲ್ಲ ವಾದರೂ ಅಲ್ಲಿ ದಿನಾಲು ತಲಾ ೪೫ ಔಂಸು ಹಣ್ಣು ಹಂಪಲ ಬಳಸಲ್ಪಡುತ್ತದೆ.

ಬಳ್ಳಾರಿ ಪ್ರಭಾತ್‌ದಲ್ಲಿ
22-2-53 ರಿಂದ
ರತ್ನದೀಪ್
ಅಮೋಘ ಹಿಂದಿ ಚಿತ್ರ

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂಪಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
6 ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sriman

23-2-53

Edited Printed & Published by T. B Keshava Rao, at Nava Bharath Press, Bellary.

ನಾಡಿಗಾರ

ಸೋಮವಾರ
ಪಾರ್ಜ
೨೦-೧೯೫೩

ವರ್ಷ ೧೫
ಸಂಚಿಕೆ ೪೯

ಬಳ್ಳಾರಿಯಿಂ ಉಜ್ವಲ ಧಾಮ್ಯಕೀಯ ನಾಲಪತ್ರಿಕೆ.
ಉತ್ಕೃಷ್ಟತೆ ! ಜಾಗೃತ !! ಪ್ರಾಮ್ಯವಾಸ್ತ್ರ ಬೋಧಕ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವು

— ಶೀತಾರಾಮರೆಡ್ಡಿ ಎಲೆಕ್ಷನ್ ಅಕ್ರಮ —

೧೦೦೦ ರೂಪಾಯಿ ಕೊಡಬೇಕು ಹೊಸ ಎಲೆಕ್ಷನ್ ನಡೆಯಬೇಕು.

ಮದ್ರಾಸ್ ರಾಜ್ಯದ ಹಿಂದಿನ ರೆವೆನ್ಯೂ ಮಂತ್ರಿಗಳೂ, ಬಳ್ಳಾರಿಯ ಅಡ್ವೊಕೇಟ್ ಆಗಿದ್ದ ಶ್ರೀ ಹಾಲಕ್ಕಿ ಶೀತಾರಾಮರೆಡ್ಡಿಯವರು ಕರ್ನೂಲ್ ಭಾಗದ [illegible] ಕರ್ನೂಲು - ಪತ್ತಿಕೊಂಡ - ಆಸವಾಸಲೂರು-ಶಿರುಗುಪ್ಪ ತಾಲೂಕುಗಳನ್ನೊಳಗೊಂಡು] ಸ್ಥಾನಕ್ಕೆ ಸ್ಪರ್ಧಿಸಿ - ಡೆಲ್ಲಿ ಅಸೆಂಬ್ಲಿಮೆಂಟಿನ ಸದಸ್ಯರಾಗಿದ್ದರು ಅವರ ವಿರುದ್ಧ ಸ್ಪರ್ಧಿಗಳಲ್ಲೊಬ್ಬರಾದ ಶ್ರೀ ವೈ. ಗಾದಿಲಿಂಗನಗೌಡರು- ಶ್ರೀ ರೆಡ್ಡಿಯವರ ಎಲೆಕ್ಷನ್ ಅಕ್ರಮವೆಂದು ಎಲೆಕ್ಷನ್ ಕಮಿಷನರ್‌ಗೆ ಅಪೀಲು ಮಾಡಿದ ಕಾರಣ [illegible] ಚುನಾವಣಾಧಿಕಾರಿಗಳು ಮೂವರು [illegible] ಜಡ್ಜರನ್ನೊಳಗೊಂಡ ಒಂದು [illegible] ಮಂಡಲವನ್ನೇ ನೇಮಿಸಿದ್ದರು ಕಳೆದ ತಿಂಗಳುಗಳಲ್ಲಿ ಈ ಮಂಡಲವು ಎರಡುಕಡೆಯಿಂದ [illegible] ದೀರ್ಘ ವಿಚಾರಣೆ ನಡೆಸಿ- 24-2-53 ರಂದು ಮಂಗಳವಾರ ಸಾಯಂಕಾಲ ತಮ್ಮ ತೀರ್ಪನ್ನು ಓದಿದರು- ವಾಹನಗಳನ್ನು ಉಪಯೋಗಿಸಿದ್ದು ಅಧಿಕಾರಿಗಳಸಹಾಯ ಪಡೆದದ್ದು- ಲೆಕ್ಕಪತ್ರಗಳನ್ನು ಒಂದೆಡೆಯಿಂದ ಮತ್ತೊಂದೆಡೆ ವರ್ಗಾಯಿಸಿದ್ದು- ಲಂಚ ಕೊಟ್ಟದ್ದು-ಮತ್ತೆರಡು ವಿಷಯಗಳಲ್ಲಿ (Issues) ಶ್ರೀ ಶೀತಾರಾಮರೆಡ್ಡಿಯವರ ವಿರುದ್ಧ ಏನೂ ರುಜುವಾತಾಗಲಿಲ್ಲ ಆದರೆ ಶ್ರೀ ಕೇಶವರೆಡ್ಡಿಯ ಏಜಂಟರಾಗಿ ಶ್ರೀ ಕೇಶವರೆಡ್ಡಿ ಇನ್ನಿಬ್ಬರು ಎಲೆಕ್ಷನ್ ಏಜಂಟರೊಂದಿಗೆ ವಾ ಭೀಮಪ್ಪ ಪಂಸನಗೌಡ ಆರ್ಜಿದಾರರಾದ ಶ್ರೀ ವೈ. ಗಾದಿಲಿಂಗನಗೌಡರ ನಡತೆಗೂ-ಗೌರವಕ್ಕೂ ಕುಂದು ಬರವಂತಹ ಕರಪತ್ರಗಳನ್ನು ಮುದ್ರಿಸಿ-ಪ್ರಕಟಿಸಿದ್ದು ರೆಪ್ರಸೆಂಟೇಷನ್ ಆಫ್ ಪೀಪಲ್ಸ ಆಕ್ಟ್ ಕಾಯ್ದೆ 123 (5) ರ ಪ್ರಕಾರಕ್ಕೆ ಮುಖ್ಯ ಅಪರಾಧವೆಂದು ಗಣಿಸಿ-ಅವರ ಎಲೆಕ್ಷನ್ ರದ್ದಾಗಬೇಕೆಂದು ಅಭಿಪ್ರಾಯಪಟ್ಟರು. ಶ್ರೀ ಶೀತಾರಾಮರೆಡ್ಡಿಯವರು ಮದ್ರಾಸಿದಲ್ಲಿದ್ದ ಕಾರಣ – ಈ ಅಪರಾಧವನ್ನು ಅವರೇ ಹೇಳಿಮಾಡಿಸಿರಬೇಕೆಂಬ ಅನುಮಾನದಿಂದ ಮುಕ್ತಮಾಡಿದರು. ವಕೀಲರ ಫೀಜಿಯಮ್ ನ್ಯಾಯಾಧೀಶರ ಮಂಡಲವು ಶ್ರೀ ವೈ. ಗಾದಿಲಿಂಗನಗೌಡರಿಗೆ 1000 ರೂ. ಕೊಡತಕ್ಕದ್ದೆಂದು ವಿಧಾಯಿಸಿದರು.

ಆರ್ಜಿದಾರರಾದ ಶ್ರೀ ವೈ. ಗಾದಿಲಿಂಗನಗೌಡರಪರವಾಗಿ ಪುಲಿಕೋಟಿ ಬಾರಿನ ಶ್ರೀ ನಾಗರಾಜಯ್ಯನವರು ಮತ್ತು ಇವರಿಗೆ ಸಹಾಯವಾಗಿ ಬಳ್ಳಾರಿ ಶ್ರೀ ಕೊ. ಚನ್ನಬಸ್ಸಪ್ಪನವರು ವಾದಿಸಿದರು ಶ್ರೀ ಶೀತಾರಾಮರೆಡ್ಡಿಯವರ ಪರವಾಗಿ ಶ್ರೀ ಎನ್ ಎಂ. ಶಾಸ್ತ್ರಿ—ಶ್ರೀ ಜಿ. ವೇಣುಗೋಪಾಲಾಚಾರಿ ವಕೀಲರೂ ವಾದಿಸಿದರು.

ಕರ್ನಾಟಕ ಕ್ರಿಯಾ ಸಮಿತಿ

ಬಳ್ಳಾರಿ ಸದಸ್ಯರು ಜೈಲಿಗೆ

ಬಳ್ಳಾರಿ ಜಿಲ್ಲೆ ಕರ್ನಾಟಕ ಕ್ರಿಯಾಸಮಿತಿ ಸದಸ್ಯರಾದ ಶ್ರೀ ದೊಡ್ಡಿಗುಂಡುರಾವ್ ಬಿ. ಎ ಬಿ. ಎಲ್ ಶ್ರೀ ಜಂತಕಲ್ ಜಂಬಣ್ಣ ಬಿ ಎ. ಬಿ. ಎಲ್. ಯಕ್ಕಲ್. ಅಬ್ದುಲ್ ರೆಜಾಕ್ (ಹಿಂದಿನ ಮುನಿಸಿಪಲ್ ಛೇರ್ಮೆನ್) ಮತ್ತು ಶ್ರೀ ಬಿ. ಯಂ. ರೇವಣಸಿದ್ದಯ್ಯನವರು ಗಡಿಗಿ ಮಲ್ಲಾಪ್ಪನವರು ಈವಾರ ಜೈಲಿಗೆ ಪ್ರಯಾಣ ಬೆಳೆಸಿದರು ಬಳ್ಳಾರಿ ಜೈಲ್ಸೆಯ ಯೂನಿಫಾರಗನ್ನೂ ಅಂಪ್ರಕ್ಕೆ ಸೇರಿಸಬಾರದೆಂದು ಸ್ವಧಾನ ಮಂತ್ರಿ ಮತ್ತು ಗೃಹಮಂತ್ರಿಗಳಲ್ಲಿ ಇವರು ವಿನಂತಿ ಕೊಡಲಿದ್ದಾರೆ.

ವೀರಶೈವ ಕಳಾಶಾಲೆ ಬಳ್ಳಾರಿ

ಕಳಾಶಾಲೆಯ 8 ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ—ಸಾಹಿತ್ಯ ಸಮಿತಿಯ ಪರಿಸಮಾಪ್ತಿ ಭಾಷಣವು 24 ನೆಯ ತಾ. ಸಾಯಂಕಾಲ ಶ್ರೀ ಎನ್. ವೃತ್ಯಕ್ಕ ಜಯಶಾಸ್ತ್ರಿ ಇವರಿಂದ ಕೊಡಲಾಯಿತು. ವಿದ್ಯಾರ್ಥಿಗಳಿಗೆ ಯೋಗ್ಯವಾದ ಉಪದೇಶಾತ್ಮಕ ಭಾಷಣವನ್ನು ಶಾಸ್ತ್ರಿಯವರು ಕೊಟ್ಟರು.

೨೬ ನೆಯ ತಾ ಸಾಯಂಕಾಲ ಸಂಯುಕ್ತರಾಜ್ಯಾವರಾಜಪ್ರಮುಖರಾದ ಶ್ರೀ ಮಂತ್ರಿ ಮುಖ್ಯರಾವ್ ಘೋರ್ಪಡೆ-ಬಿ. ಎ(ಕ್ಯಾಂಟಬ್) ಇವರು ಕಾಲೇಜು ವಾರ್ಷಿಕೋತ್ಸವದ ಪ್ರಸಿದ್ಧ ಅಧ್ಯಕ್ಷರ ಪೀಠವನ್ನಲಂಕರಿಸಿ-ಬಹುಮಾನಗಳನ್ನು ಕೊಟ್ಟರು ಯುವರಾಜರು ಇಂಗ್ಲೆಂಡಿನ ಪ್ರಸಿದ್ಧ ವಿದ್ಯಾಭ್ಯಾಸಕ್ರಮ-ಅಧ್ಯಾಪನಕಲೆ ವಸ್ತುಗಳೇ ಮಾದರಿಯಾಗಿ ವಿಷಯಗಳಲ್ಲಿ ಪಾಶ್ಚಿಮಾತ್ಯ ರೂಢಿಗಳನ್ನು ನಿರ್ದಾಕ್ಷಿಣ್ಯವಾಗಿ ವಿವಿಧ ವೇಷದ ತಮಾಷೆ, ಪರದಿ ವಾಚನ ನಾಟಕ ವಂದನಾರ್ಪಣೆಯೊಂದಿಗೆ ಸಮಾರಂಭವು ಮುಗಿಯಿತು.

ಸಂಸ್ಕೃತ ವಿಶ್ವವಿದ್ಯಾಲಯ

ಭಾರತ ಸಂಸ್ಕೃತಿಯನ್ನು ಒಟ್ಟಿನಲ್ಲಿ ಕಾಯ್ದಿಡಲು ಏಕೈಕ ಸಾಧನವಾದ ಭಾರತದ ರಾಷ್ಟ್ರಭಾಷೆಯಾಗುವ ಯೋಗ್ಯತೆಯುಳ್ಳ ಭಾರತೀಯರ ಚೈತನ್ಯಧಾರೆಯೂ ರಾಷ್ಟ್ರದ ಅಮೂಲ್ಯ ಸಂಪತ್ತು ಆಗಿರುವ ಸಂಸ್ಕೃತ ಭಾಷೆಯನ್ನು ಅಭಿವೃದ್ಧಿಪಡಿಸಲು ಒಂದು ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಬಂಗಾಳ ಸರಕಾರವು ಸ್ತುತ್ಯವಾದ ಉಪಕ್ರಮವನ್ನು ಕೈಗೊಂಡಿದೆ.

ಶ್ರೀ ವೀರಪ್ಪನವರ ಎಲೆಕ್ಷನ್ ಸಕ್ರಮವಾಗಿದೆ.

.... ಶ್ರೀ ಕೊಟ್ರಗೌಡರು ಖರ್ಚು ಕೊಡಬೇಕು. ....

ಹರಪನಹಳ್ಳಿ ಭಾಗದ ಕ್ಷೇತ್ರದಿಂದ ಆಯಲ್ಪಟ್ಟು ಆಯಸ್ಸಿಟರಾದ ಶ್ರೀ. ವೀರಪ್ಪ ಇಜಾರಿಯವರ ಮೇಲೆ ಪ್ರತಿ ಸ್ಪರ್ಧಿಗಳಾಗಿ ಸೋತ ಶ್ರೀ. ಕೊಟ್ರಗೌಡರು ಅರ್ಜಿ ಇಟ್ಟು, ಕೆಲ ಅಸಾಮಿ ಮಾಡಿದ್ದರು. ಚುನಾವಣಾ ಮಂಡಲವು ವಿಚಾರಣೆ ನಡೆಸಿ ಕೊಟ್ರಗೌಡರ ಆಪಾದನೆಗಳೊಂದೂ ರುಜುವಾತಾಗದ ಕಾರಣ ಅಪೀಲು ಹೋದೆಮ ಹಾಕಿ, ಕೊಟ್ರಗೌಡರು ಖರ್ಚು ಕೊಡತಕ್ಕದ್ದೆಂಯ ವಿಧಿಸಿದರು.

★ ಗ್ರಾಮ ಪುನರ್ರಚನೆ ★

ಸ್ವಯಂಪೂರ್ಣತೆಯೇ ಗ್ರಾಮ ಪುನರ್ನಿರ್ಮಾಣದ ಯತ್ನಸಗುರಿ

ಶ್ರೀ ಜಿ. ರಾಮಚಂದ್ರನ್,

ಯೋಜನಾ ಸಮಿತಿಯಿಂದ ಆರಂಭಿಸಿರುವ ರಚನಾತ್ಮಕ ಕಾರ್ಯಕರ್ತನವರೆಗಿನ ಪ್ರತಿಯೊಬ್ಬನೂ ಇಂದು ಗ್ರಾಮ ಪುನರ್ನಿರ್ಮಾಣದ ಬಗೆಗು ಮಾತನಾಡುತ್ತಾನೆ. ಗ್ರಾಮ ಪುನರ್ನಿರ್ಮಾಣದ ದೃಷ್ಟಿಯಿಂದ ಇಂದು ಹಲವು ಪ್ರಯೋಗಗಳೂ ಕಾರ್ಯಕ್ರಮಗಳೂ ನಡೆಯುತ್ತಿವೆ. ಇವೆಲ್ಲವುಗಳ ಉದ್ದೇಶವಾದರೂ ಏನು? ಗ್ರಾಮ ಪುನರ್ನಿರ್ಮಾಣಕ್ಕಾಗಿ ಯಾವ ಕಾರ್ಯಗಳನ್ನು ಮಾಡಬೇಕು? ಇವುಗಳ ಪ್ರತಿಫಲಗಳನ್ನು ನಾವು ಯಾವ ರೀತಿಯಲ್ಲಿ ತಿಳಿಯಬಹುದು? ಈ ಮುಖ್ಯ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ನಾವು ಪಡೆಯಬೇಕಾಗಿದೆ.

ನಮ್ಮ ದೇಶದ 80% ಜನರು ಹಳ್ಳಿಗಳು ನಮ್ಮ ದೇಶಕ್ಕೆ ಸಂಬಂಧಿಸಿದ್ದು ಗ್ರಾಮ ಪುನರ್ನಿರ್ಮಾಣ ಕಾರ್ಯವೆಂದರೆ ಅದು ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯಕ್ರಮವೆಂದೇ ತಿಳಿದುಕೊಳ್ಳಬಹುದು.

ಆದರೆ ಈ ಕಾರ್ಯದಲ್ಲಿ ನಾವು ಎದುರಿಸಬೇಕಾಗಿರುವ ಆರ್ಥಿಕ, ಸಾಮಾಜಿಕ ಸಮಸ್ಯೆಗಳು ಒಂದೆರಡಲ್ಲ. ಸಮಸ್ತ ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯಗಳು ಹಳ್ಳಿಗಳಿಗೆ ಹೆಜ್ಜಾಗಿ ಸಂಬಂಧಿಸಬೇಕೆಂಬುದು ಎಲ್ಲರೂ ಒಪ್ಪುತ್ತಾರೆ. ಆದರೆ ಕಾರ್ಯರೂಪದಲ್ಲಿ ಬರುವಾಗ ನಮ್ಮ ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯಕ್ರಮಗಳ ಲಾಭಗಳಲ್ಲಿ ಜೀವಿಸುತ್ತಿರುವ ಕೆಲವೇ ಜನರಿಗೆ ಮಾತ್ರ ಸಂಬಂಧಿಸಿರುವಂತೆ ತೋರುತ್ತದೆ. ಗ್ರಾಮ ಪುನರ್ನಿರ್ಮಾಣ ಕಾರ್ಯವು ಯಶಸ್ವಿಯಾಗಬೇಕಾದರೆ ರಾಷ್ಟ್ರೀಯ ಪುನರ್ನಿರ್ಮಾಣ ಕಾರ್ಯಗಳಲ್ಲಿ ಅದಕ್ಕೆ ಪ್ರಥಮ ಸ್ಥಾನವನ್ನು ಕೊಡಬೇಕು. ರಾಷ್ಟ್ರೀಯ ಪುನರ್ನಿರ್ಮಾಣ ಇತರ ಕಾರ್ಯಕ್ರಮಗಳು ಗ್ರಾಮ ಪುನರ್ನಿರ್ಮಾಣ ಕಾರ್ಯಗಳ ಅವಶ್ಯಕತೆಗಳನ್ನು ಪೂರೈಸಿಕೊಂಡು ಇರಬೇಕು. ಆದರೆ ಈಗ ನಡೆಯುತ್ತಿರುವುದು ಇದಕ್ಕೆ ತೀರ ವಿರುದ್ಧವಾಗಿದೆ. ರಾಷ್ಟ್ರೀಯ ಪುನರ್ನಿರ್ಮಾಣಕ್ಕೆ ಸಂಬಂಧಿಸಿದ ಇತರ ಕಾರ್ಯಕ್ರಮಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಲ್ಪಡುತ್ತಿದೆ ಯೋಜನಾ ಸಮಿತಿಯಿಂದ ರಚಿಸಲ್ಪಟ್ಟಿರುವ ಪಂಚ ವಾರ್ಷಿಕ ಯೋಜನೆಯಲ್ಲಿಯೂ ಈ ದೋಷವಿದೆ.

ಕೇಂದ್ರ ಸ್ಥಾನ

ಇದುವರೆಗೆ ಸಿದ್ಧವಾದ ಯೋಜನೆಗಳಲ್ಲೆಲ್ಲಾ ಗಾಂಧೀಜಿಯವರಿಂದ ರೂಪಿಸಲ್ಪಟ್ಟಿರುವ ರಚನಾತ್ಮಕ ಕಾರ್ಯಕ್ರಮವು ಗ್ರಾಮ ಪುನರ್ನಿರ್ಮಾಣ ಕಾರ್ಯಗಳಿಗೆ ಅತಿ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟಿದೆ. ಈ ಯೋಜನೆಯಲ್ಲಿ ದೋಷಗಳು ಇರಬಹುದು. ಪರಿಸ್ಥಿತಿಗನುಸಾರವಾಗಿ ಯೋಜನೆಯಲ್ಲಿಯೂ ಮಾರ್ಪಾಟುಗಳು ಆಗಬೇಕಾಗಬಹುದು. ಆದರೆ ಗ್ರಾಮ ಪುನರ್ನಿರ್ಮಾಣ ಕಾರ್ಯವು ಗಾಂಧೀಜಿಯವರ ಯೋಜನೆಯ ಕೇಂದ್ರಸ್ಥಾನವಾಗಬೇಕಾದರಲ್ಲಿ ಸಂದೇಹವಿಲ್ಲ.

ಧ್ಯೇಯಗಳಿಗೂ ಅವುಗಳನ್ನು ಸಾಧಿಸುವ ರೀತಿಗೂ ಅತಿ ಹತ್ತಿರದ ಸಂಬಂಧವಿದೆ. ಮೇಲೆ ಹೇಳಿದ ರೀತಿಯ ಗ್ರಾಮ ಪುನರ್ನಿರ್ಮಾಣದ ಉದ್ದೇಶವನ್ನು ಸಾಧಿಸಬೇಕಾದರೆ ಕೆಲವು ನಿಶ್ಚಿತ ಕ್ರಮಗಳನ್ನು ನಾವು ಅನುಸರಿಸಬೇಕು. ಉದಾಹರಣೆ, ಉದ್ಯೋಗದ ಸಮಸ್ಯೆಯನ್ನು ತೆಗೆದುಕೊಳ್ಳುವ. ಸಾಧ್ಯವಿರುವಷ್ಟು ಜನರಿಗೆ ನಾವು ಉದ್ಯೋಗಗಳನ್ನು ಕಲ್ಪಿಸಿಕೊಡಬೇಕಾಗಿದೆ ಅವಶ್ಯಕತೆಗಿಂತಲೂ ಅತ್ಯಧಿಕ ಸಂಖ್ಯೆಯ ಜನರು ಮಾಡಬೇಕಾದ ಕಾರ್ಯಗಳನ್ನು ವಿಕೇಂದ್ರೀಕರಿಸುವುದರ ಅವಶ್ಯಕತೆಯನ್ನು ಪುನರ್ನಿರ್ಮಾಣ ಯೋಜನೆಯು ಒತ್ತಿ ಹೇಳುತ್ತದೆ. ಗಾಂಧಿ ಕೈಗಾರಿಕೆಗಳಿಗೂ ಗ್ರಾಮೋದ್ಯೋಗಕ್ಕೂ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುವುದರ ಕಾರಣವೂ ಇದೆ. ವಿಕೇಂದ್ರೀಕರಣವೂ ಸ್ವಯಂಪೂರ್ಣತೆಯೂ ಒಂದನ್ನೊಂದು ಬಿಟ್ಟು ಇರಲಾರವು. ಮಾದಿ ಮತ್ತು ಗುಡಿ ಕೈಗಾರಿಕೆಗಳಿಗೆ ಪಂಚ ವಾರ್ಷಿಕ ಯೋಜನೆಯಲ್ಲಿ ಸ್ಥಾನವು ಕೊಡಲ್ಪಟ್ಟಿದೆ. ಆದರೂ ಇವು ಪಂಚ ವಾರ್ಷಿಕ ಯೋಜನೆಯಲ್ಲಿ ಅತಿ ಮುಖ್ಯವಾದುವುಗಳಲ್ಲ. ಗಾಂಧೀಜಿಯ ಸರ್ವೋದಯ ಯೋಜನೆಗೂ ಪಂಚ ವಾರ್ಷಿಕ ಯೋಜನೆಗೂ ಇರುವ ವ್ಯತ್ಯಾಸವನ್ನು ನಾವು ಇಲ್ಲಿ ಕಾಣಬಹುದು.

ಮುಖ್ಯ ವಿಚಾರ

ಗ್ರಾಮ ಪುನರ್ನಿರ್ಮಾಣ ಕಾರ್ಯದಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಕೆಲವು ವಿಚಾರಗಳಿವೆ. ಗ್ರಾಮ ಪುನರ್ನಿರ್ಮಾಣವೆಂದರೆ ಗ್ರಾಮಗಳನ್ನು ಪಟ್ಟಣಗಳಾಗಿ ಪರಿವರ್ತಿಸುವುದಲ್ಲ. ಹೊರಗಿನ ಜನರು ಬಂದು ಗ್ರಾಮಗಳ ಸ್ಥಿತಿಯನ್ನು ಸುಧಾರಿಸುವುದು ಸಾಧ್ಯವಲ್ಲ. ಗ್ರಾಮಗಳಲ್ಲಿರುವ ಜನರೇ ಹೊರಗಿನವರ ಸಹಾಯದಿಂದ ತಮ್ಮ ಬಾಳ್ವೆಯನ್ನು ಸಾಧಿಸಬೇಕು. ಒಂದೆರಡು ದಿನಗಳಲ್ಲಿ ಗ್ರಾಮಗಳ ಪರಿಸ್ಥಿತಿಯು ಉತ್ತಮವಾಗುವಂತಿಲ್ಲ. ಮುಖ್ಯವಾಗಿ ಗ್ರಾಮವಾಸಿಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕು. ಎಲ್ಲರಿಗೂ ಕೆಲಸ ವಿರಬೇಕು ಕೈಗಾರಿಕೆಗಳ ಪುನರುದ್ಧಾರವಾಗಬೇಕು. ಇದು ಸಾಧ್ಯವಿದೆ.

ದೈನಂದಿನ ಅವಶ್ಯಕತೆಗಳಿಗೆ ಪರದೇಶಗಳಲ್ಲಿ ತಯಾರಾದ ವಸ್ತುಗಳ ಮೇಲೆ ಹೊಂದಿಕೊಂಡಿರುವಂತೆ ಮಾಡುವುದರಿಂದ ಗ್ರಾಮ ಪುನರ್ನಿರ್ಮಾಣವು ನಡೆಯುವುದಿಲ್ಲ. ಗ್ರಾಮ ಪುನರ್ನಿರ್ಮಾಣ ಕಾರ್ಯಗಳಿಂದ ಉಂಟಾದ ಪರಿಣಾಮಗಳನ್ನು ನಾವು ಹೇಗೆ ತಿಳಿಯಬಹುದು? ಒಂದು ಗ್ರಾಮವು ಎಷ್ಟರಮಟ್ಟಿಗೆ ಸ್ವಯಂಪೂರ್ಣವಾಗಿದೆ ಎಂಬ ದೃಷ್ಟಿಯಿಂದ ನಾವು ಇದರ ಪ್ರಶ್ನೆಯನ್ನು ತಿಳಿಯಬಹುದು. ತಮ್ಮ ಗ್ರಾಮದಲ್ಲಿಯೇ ಇರುವ, ಸಿದ್ಧವಾಗುತ್ತಿರುವ ವಸ್ತುಗಳ ಮೇಲೆ ಹೆಚ್ಚಾಗಿ ಹೊಂದಿಕೊಂಡಿರಲು ಗ್ರಾಮವಾಸಿಗಳಿಗೆ ಸಾಧ್ಯವಾಗಬೇಕು.

ದಕ್ಷಿಣದಲ್ಲಿ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದ್

ವಿಶಾಖಪಟ್ಟಣ— ಮಧುರೆ— ರಾಮೇಶ್ವರ— ಕಡೈಕುಡಿ ಮುಂತಾದ ಯಾತ್ರಾಸ್ಥಳಗಳನ್ನು ಸಂದರ್ಶಿಸಿ — ಜಾರ್ಜ್‌ಕೋಟೆ ಸಾವರು ಈ ವಾರ ಮದ್ರಾಸಿಗೆ ಬಂದು ಮದ್ರಾಸಿನ ಸಭೆಯಲ್ಲಿ ಮಾತನಾಡುತ್ತ ಆಂಧ್ರ ರಾಷ್ಟ್ರಾಂತರ್ಗತ ನಿರ್ಮಾಣಕ್ಕೆ ಆಂಧ್ರದವರ ಪ್ರಯತ್ನವು ಅಗತ್ಯವೆಂದರು. ಆಂಧ್ರ ರಾಷ್ಟ್ರಾಂತರವನ್ನು ಸಾಧಿಸಲಿಕ್ಕೆ ಮಾತ್ರವಲ್ಲ ನಿರ್ಮಾಣದ ನಂತರವೂ ಇಕವೆ ತೃವ ಇರಬೇಕಾದುದು ಅಗತ್ಯವೆಂದರು.

ಬಿಡುಗಾಳಿ ಪರಿಹಾರನಿಧಿ

ಮದ್ರಾಸು ರಾಜ್ಯಾದ್ಯಂತ ಬಿರುಗಾಳಿ ಪರಿಹಾರ ನಿಧಿಗೆ ಬರುವ ಎಂಟಿಗೆಗಳಷ್ಟು ಆದಾಯ ತೆರಿಗೆ (Income-tax) ಯಿಂದ ವಿನಾಯಿತಿ ಪಡಿಸಲು ಭಾರತ ಸರಕಾರವು ನಿರ್ಧರಿಸಿದೆ

ಅನೇಕ ವ್ಯಕ್ತಿಗಳೆ ಮತ್ತು ವ್ಯಾಪಾರ ಸಂಸ್ಥೆಗಳು ಈ ಸಂದರ್ಭವನ್ನು ಉಪಯೋಗಿಸಿ, ಈ ನಿಧಿಗೆ ಉದಾರ ದಾನಗಳನ್ನು ಮಾಡಿ, ಕಷ್ಟದಲ್ಲಿರುವ ಸಂತ್ರಸ್ತರು ಮಂದಿಗೆ ಸಹಾಯ ಮಾಡುವಂತೆ ಸರಕಾರವು ಆಶಿಸುತ್ತದೆ.

ಆದವಾನಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ

O. S. 134/51 E. P 149/52

ಬಿ ಲಕ್ಷ್ಮೀರೆಡ್ಡಿ ವಗೈರೆ :— ವಾದಿಗಳು
ಚದುವು ಹನುಮಂತ :— ಪ್ರತಿವಾದಿಗಳು,

ಮೇಲ್ಕಂಡ ನಂಬರಿನಲ್ಲಿ ಪ್ರತಿವಾದಿಯ ಪಡ್ಯೂಲು ದಾಖಲೆ ಆಸ್ತಿ 24—4—53 ತೇದಿ ಕೋರ್ಟಿನಲ್ಲಿ ಬಹಿರಂಗವಾಗಿ ಯಾಲಂ ಹಾಕಲ್ಪಡುತ್ತದೆ. ಬೇಕಾದವರು ಇಸ್ತಿ ಹಾರು ಸರತ್ತುಗಳಿಗೆ ಒಳಪಟ್ಟು ಸವಾಲು ಮಾಡಬಹುದು.

— ಷೆಡ್ಯೂಲು —

ಆದವಾನಿ ತಾಲೂಕು ಬೂದೂರು ಗ್ರಾಮದಲ್ಲಿರುವ ಆಸ್ತಿ.

	ಭೂಮಿ ವಿವರ.	ಸರ್ವೇ ನಂ.	ಎ. ಕಂ.	ತರಂ.	
1)	ಪುಂಜಿ ಸರ್ಕಾರು.	23 ರಸ್ತೆಕಿ.	4—54.	4-0-0	ಚಕ್ಕುಬಂದಿ. ಪೂ. ಹಳ್ಳ. ಪ. ಇದೇ ನಂಬರ್ ಪೈಕಿ ನರಸಪ್ಪನ ಹಿಸ್ಸ ಪಟ್ಟ. ಉ ನರಸಪ್ಪನ ಹೊಲ. ದ. ರಸ್ತೆ ಪೊರಂಬೋಕು.
2)	ಪುಂಜ ಸರ್ಕಾರ	166 ಪೈಕಿ	1—44	1-4-0.	ಇದಕ್ಕೆ ಚಕ್ಕುಬಂದಿ ಪೂ. ಆಗಸರ ಮಾರೆಪ್ಪನ ಹೊಲ. ಪ. ಗೋವಿಂದರೆಡ್ಡಿ ಹೊಲ. ಉ. ಯಲ್ಲಾರೆಡ್ಡಿ ಹೊಲ. ದ. ಇದೇ ನಂಬರ್ ಪೈಕಿ ನರಸಪ್ಪನ ಹಿಸ್ಸ ಪಟ್ಟ.
3)	ಸದರಿ ಬೂದೂರು ಗ್ರಾಮದಲ್ಲಿರುವ ಮನೆ. ಇದಕ್ಕೆ ಸೇರಿದ ಗುಡಿಸಲು ಸಹ. ಉ. ಚಿಲಕಲಡೋಣ ಶಂಕರರೆಡ್ಡಿ ಹೊಲ. ದ. ರಸ್ತೆ ಪೂ. ನಾಗಾಲ ಹನುಮಂತನ ಮನೆ. ಪ. ನಡಿಪಿ ಕೆಂಚಗನ ಮನೆ. ಪೂ ಪ 3½ ಗಜ. ಉ ದ.6 ಗ				

ಸರಾ:— ಮೇಲ್ಕಂಡ 1, 2 ಆಯಿಟಂ ಜಮೀನ್ ಚಿಲಕಲಡೋಣ ಶಂಕರರೆಡ್ಡಿಯವರ 300-0-0 ರೂ. 10-5 1944 ತೇದಿಯ ಅಯಿಕಕ್ಕೆ ಒಳಪಟ್ಟು ಯಾಲಂ ಆಗುತ್ತವೆ.

ಆದವಾನಿ.
25-2-53.

ಯಸ್. ನರಸಿಂಗರಾವು
ವಾದಿ ವಕೀಲರು.

ಡಾ|| ಮೋದಿಯವರ ಹೊಸ ಪ್ರಯೋಗ

ಪ್ಲಾಸ್ಟಿಕ ಲೆನ್ಸ ಕೂಡ್ರಿಸಿದರು

ಅಂತರರಾಷ್ಟ್ರೀಯ ಪ್ರಸಿದ್ಧಿಗಳಿಸಿದ ನೇತ್ರತಜ್ಞ ಡಾ. ಎಮ್. ಸಿ ಮೋದಿಯವರು ಬೆಳಗಾವಿಯಲ್ಲಿರುವ ಕರ್ನಾಟಕ ಆಯುರ್ವೇದ ವಿದ್ಯಾಪೀಠ ಆಸ್ಪತ್ರೆಯಲ್ಲಿ ೪-೫ ದಿವಸಗಳಿಂದ ಮೋತಿಬಿಂದು (ಗರೆ ಬಂದ ರೋಗಿಯ ಕಣ್ಣಿನ ನರೆ ತೆಗೆದು ಕಣ್ಣಿನ ಗುಡ್ಡೆಯೊಳಗೆ ಪ್ಲಾಸ್ಟಿಕ ಲೆನ್ಸ ಕೂಡ್ರಿಸುವ ಹೊಸಶಸ್ತ್ರ ಕ್ರಿಯೆಯನ್ನು ಒಳ್ಳೆಯ ಯಶಸ್ವಿಯಾಗಿ ನಡಾಡಿದರ. ಇಂತಹ ಶಸ್ತ್ರಕ್ರಿಯೆಯಿಂದ ಮೋತಿಬಿಂದು ಬಂದ ರೋಗಿಗಳಿಗೆ ಉತ್ತಮ ದೃಷ್ಟಿ ಬರುವುದು.

ಹೆಚ್ಚು ಶಕ್ತಿಯ ಕನ್ನಡಕವನ್ನು ಉಪಯೋಗಿಸದಿದ್ದರೂ ಈ ಲೆನ್ಸಿನಿಂದ ಕಣ್ಣು ಜನ್ನಾಗಿ ಕಾಡುತ್ತಿದೆ. ಈ ಲೆನ್ಸುಗಳನ್ನು ಲಂಡನಿನಿಂದ ತರಿಸುವುದರಲ್ಲಿ ಬಂದಿದೆ. ಡಾ. ಮೋದಿಯವರು ಈ ತಿಂಗಳದ ಕೊನೆಯವರೆಗೂ ಇಲ್ಲಿಯೇ ಇರುವವರಿದ್ದಾರೆ. ರೋಗಿಗಳು ಅವರ ಈ ವಾಸ್ತವ್ಯದ ಯಥೇಚ್ಛ ಲಾಭ ಪಡೆಯಲು ಹಿಂದುಳಿಯದಿರಲಿ.

ವರ್ಜೀನಿಯಾದಲ್ಲಿ ಭಾರತೀಯ ನೃತ್ಯಕಲೆಯ ಅಭ್ಯಾಸ

ಬೊಂಬಾಯಿನ ಶ್ರೀಮತಿ ಸೀತಾಪೂ ವಯ್ಯನವರು ಫಿಬ್ರವರಿ 27ನೇ ತಾರೀಖು ಪ್ರಸಿದ್ಧ ಮಹಿಳಾ ಕಾಲೇಜಿನ ಸ್ವಿಟ್ ಬ್ರೈಯರ್ ಕಾಲೇಜಿನಲ್ಲಿ ನೃತ್ಯದ ನಾನಾ ಭಂಗಿಗಳ ಪ್ರದರ್ಶನ ಮಾಡಿ ವರು.

ಶ್ರೀಮತಿ ಪೂವಯ್ಯನವರು ಅಮೇರಿಕ ದಲ್ಲಿ ಒಂದು ವರ್ಷದ ಕಾಲವಿದ್ದು ಭಾರತೀಯ ನೃತ್ಯ ಕಲೆಯ ವಿವಿಧ ಭಂಗಿಗಳನ್ನು ತೋರಿಸುವರು.

ನೃತ್ಯದ ಬಗ್ಗೆ ಅವರು ಒಂದು ಡಾಕ್ಟರ್ಸ್ ಥೀಸಿಸ್ ಬರೆದಿದ್ದು ಅದನ್ನು ಬೊಂಬಾಯಿ ವಿಶ್ವವಿದ್ಯ ನಿಲಯದವರು ಒಪ್ಪಿಕೊಂಡಿದ್ದಾರೆ.

ನಾಲ್ಕೇ ಪಕ್ಷಗಳು

ಪ್ರಜಾ ಸೋ ಶಿ ಯ ಲಿ ಸ್ಟ್ ಪಾರ್ಟಿ, ಕಮ್ಯುನಿಸ್ಟ್ ಪಾರ್ಟಿ, ಜನ ಸಂಘ, ಕಾಂಗ್ರೆಸ್, ಈ ನಾಲ್ಕು ಮಾತ್ರ ಭಾರತದ ರಾಷ್ಟ್ರೀಯ ಪಕ್ಷಗಳೆಂದೂ, ಹಿಂದೂ ಮಹಾಸಭೆ, ಮುಸ್ಲೀಮ್ ಲೀಗ್, ರಾಮರಾಜ್ಯ ಪರಿಷತ್, ಮುಂತಾದವು ವ್ಯಾಪೇಶಿಕ ಪಕ್ಷಗಳೆಂದೂ ಸಾರಲಾಗಿದೆ.

Matinee at PRABHAT

7 Days Matinee From 6-3-53

20th Century Fox presents

★ **Anna of the Indies** ★

IN GORGEOUS - TECHNICOLOR

Fea:— Jean peters. Louis jourdan. Debra paget

Out of the wrath and fury of the Seven seas. from the buthed treasures of a fabulous era. comes the dashing adventure the real life story of history's boldest PIRATE QUEEN!

Rates as usual for Matinee.

★ ವೀರ ಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :— ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ವಿಶೇಷವಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರಕ್ಕಳದವರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

ಪಾಕಿಸ್ತಾನದ ಟೀಕೆ

'ನೀವು ನಮ್ಮ ಕಾಲುವೆ ನೀರು ಕಟ್ಟು ಮಾಡಿದ್ದೀರಿ" .... ಪಾಕಿಸ್ತಾನ್
"ನಾವು ಕಟ್ಟು ಮಾಡಿಲ್ಲ" ಹಿಂದುಸ್ತಾನ್

"ಕಾಲುವೆ ನೀರು ಕಟ್ಟು ಮಾಡಿದ ಕಾರಣ ಪಶ್ಚಿಮ ಪಂಜಾಬಿನ ಕೆಲಭಾಗಗಳೆಲ್ಲ ಬಂಜರಾಗಿವೆ. ನಾವು ಆಹಾರವಿಷಯದಲ್ಲಿ ಸ್ವಯಂಪೂರ್ಣರಾದ್ದೆವು—ಭಾರತದ ಈ ಕಾರ್ಯದಿಂದ ನಮಗೆ ಈಗ ಆಹಾರದ ಕೊರತೆಯಾಗಿದೆ" — ಎಂದು ಪಾಕಿಸ್ತಾನವು ಅಪಪ್ರಚಾರ ನಡೆಸಿದೆ.

—ಭಾರತದ ಉತ್ತರ—

"ನಾವು ನೀರನ್ನು ಕಟ್ಟುನೂಡಿಲ್ಲ' ಪಾಕಿಸ್ತಾನ ಪಂಜಾಬದ ೧೬ ಕಾಲುವೆಗಳಲ್ಲಿ ೧೨ ಕಾಲುವೆಗಳ ನೀರಿನ ಸರಬರಾಯಿ ಅಲ್ಲಿಇದೆ. ಇನ್ನುಳಿದ ೩ ಕಾಲುವೆಗಳು ನಮ್ಮ ಭಾಗದಲ್ಲಿವೆ. ಸಿಂಧೂನದಿಯ ೬ ಉಪನದಿಗಳಲ್ಲಿನ ನೀರಿನ ಭಾಗದಲ್ಲಿ ಪಾಕಿಸ್ತಾನವು ಶೇಕಡ 40 ಭಾಗ ಉಪಯೋಗಿಸಿಕೊಳ್ಳುತ್ತಿದೆ. ಭಾರತವು ಶೇಕಡ 5 ಭಾಗಮಾತ್ರ ಬಳಸುತ್ತಲಿದೆ. ಇನ್ನುಳಿದ 55 ಭಾಗವು ವ್ಯರ್ಥವಾಗಿ ಸಮುದ್ರಕ್ಕೆ ಸೇರುತ್ತಲಿದೆ.'' ಸತ್ಯಾಂಶ ಹೀಗಿರಲು—ಪಾಕಿಸ್ತಾನವು ಅಪಪ್ರಚಾರ ನಡೆಸಿದೆಯೆಂದು ಭಾರತವು ಉತ್ತರಕೊಟ್ಟಿದೆ.

ಪರಮಾವಧಿ

ಬೆಣ್ಣೆ ಕೊಟ್ಟ ಅಕಳು

ಇತ್ತೀಚೆಗೆ ಇಂಗ್ಲಂಡದ ಫ್ರೀಜಿಯನ್ ಜಾತಿಯ ಆರು ವರ್ಷದ ಆಕಳೊಂದು ಬೆಣ್ಣೆಯ ಉತ್ಪಾದನೆಯಲ್ಲಿ ಜಾಗತಿಕ ವಿಕ್ರಮವನ್ನು ಪ್ರಸ್ಥಾಪಿಸುತ್ತಾ ಅದರ ಹೈನವ ಅವಧಿ ಇನ್ನೂ ಒಂದು ವಿನ ಇರುವಾಗಲೇ ಅದು ಒಟ್ಟು ೧೫೬೬.೭ ಪೌಂಡು ಬೆಣ್ಣೆಯ ಅಂಶವುಳ್ಳ ಹಾಲನ್ನು ಕೊಟ್ಟಿತು. ಈ ವರ್ಷಿನ ಪರಮಾವಧಿಗಿಂತ ಇದು ೪.೭ ಪೌಂಡುಗಳಷ್ಟು ಹೆಚ್ಚಾಗಿ ಹೊಸ ವಿಕ್ರಮ ಸ್ಥಾಪಿಸಲ್ಪಟ್ಟಿತು. "ರ್ಯಾನ್ ಬಿಲವ್ವಲೇ" ಎಂಬ ಹೆಸರಿನ ಈ ಆಕಳು ಇಂಗ್ಲಂಡದ ವಿಲ್ಟಶಾಯರ ಪರಗಣೆಯಲ್ಲಿ ಪೈಸೆ ಎಂಬ ಹಳ್ಳಿಯಲ್ಲಿ ಫಾಯಫೀಲ್ಡ್ ಎಸ್ಟೇಟ್ಸಲಿ. ಅವರ ಹಂಡಿಸಲ್ಲದೆ. ಇದು ಫ್ರಿಜಿಯನ್ ಜಾತಿಯ ಶುದ್ಧ ತಳಿಯ ಆಕಳು.

ಆಹಾರ ಅಧಾವವನ್ನು ಎದಿರಿಸಲು ಗೆಡ್ಡೆ ಗೆಣಸುಗಳನ್ನು ಬೆಳೆಸಿರಿ.

ಬೆಳೆಗಳನ್ನು ಕೊಯ್ಯಲು ವಿಮಾನದ ಸಹಾಯ

ಬೆಳೆಗಳನ್ನು ಕೊಯ್ಯಲು ವಿಮಾನದಿಂದ ಕೀಟನಿರೋಧಕ ದೊರೆತೀತೆಂದು ಆಶ್ಚರ್ಯಚಕಿತರಾಗಬೇಡಿರಿ. ಇನ್ನು ಕೆಲ ದಿನಗಳಲ್ಲಿಯೇ ಬೆಳೆಯ ಕೊಯ್ಲನ್ನು ತ್ವರಿತಗೊಳಿಸುವಲ್ಲಿ ವಿಮಾನ ಬಹು ದೊಡ್ಡ ಸಾಧ್ಯ ವಹಿಸಲಿದೆ. ಟ್ರಾಕ್ಟರಿನಂತೆ ಅದೂ ಒಂದು ಬೇಸಾಯ ಸಾಧನವಾಗಲಿದೆ. ಬ್ರಿಟಿಶ ವಿಜ್ಞಾನಿಗಳು ಈಗಾಗಲೆ ಈ ದಿಶೆಯಲ್ಲಿ ಕಾರ್ಯನಿರತರಾಗಿದ್ದಾರೆ. ಗೊಬ್ಬಿ ಜವೆಗೋಧಿಗಳಂತಹ ಬೀಳಗಳ ಮೇಲೆ ವಿಮಾನದಿಂದ ಒಂದು ಬಗೆಯ ಔಷಧ ಹೊಡೆದು ಅವು ಬೇಗನೆ ಮಾಗಿ ಒಣಗುವಂತೆ ಮಾಡುವ ವಿಧಾನವನ್ನು ಕಂಡು ಹಿಡಿಯುವ ಕಾರ್ಯದಲ್ಲಿ ಅವರು ತೊಡಗಿದ್ದಾರೆ.

"ಒಣಗಿಸುವ ಔಷಧಿ" ಎಂದು ಕರೆಯಲ್ಪಡುವ ಒಂದು ಪ್ರವಾಹಿಯಿಂದ, ಬೆಳೆಯ ಕೊಯ್ಲಾಗುವುದಕ್ಕೆ ೮-೯ ದಿನಗಳಿರುವಾಗಲೇ ತುಷಾರ ಹೊಡೆಯಲಾಗುತ್ತದೆ. ಇದರಿಂದ ಭೂಮಿಯಲ್ಲಿಯ ನೀರು ಬೇರುಗಳ ಮುಖಾಂತರವೇ ಮೇಲಕ್ಕೇರಿ ಕಾಳಿಗೂ, ಎಲೆಗಳಿಗೂ ತಲುಪುವದಕ್ಕೆ ತಡೆಯುಂಟಾಗುತ್ತದೆ. ಆ ಬಳಿಕ ಒಣ ಬೆಳೆಯನ್ನು ಕೊಯ್ದು ಸಂಗ್ರಹಿಸಬಹುದು. ಕೊಳೆಯುವ ಭಯವಿಲ್ಲ. ಕೊಯ್ದು ಬೆಳೆಯನ್ನು ಕೃತ್ರಿಮವಾಗಿ ಒಣಗಿಸಲು ತಗಲುವ ವೆಚ್ಚದ ಅರ್ಧದಷ್ಟೇ ವೆಚ್ಚು ಈ ಉಪಾಯಕ್ಕೆ ತಗಲುವದೆಂದು ಲೆಕ್ಕಹಾಕಲಾಗಿದೆ.

ವಿಮಾನ ತುಷಾರ ಪದ್ಧತಿಯಿಂದ ಬೆಳೆ ಹೆಚ್ಚು ಸಮಾನವಾಗಿ ಮಾಗುವದೆಂದೂ ಹೆಚ್ಚು ಹಂವಾದ ಕಾಳು ಉದುರುವ ಸಂಭವ ಕಡಿಮೆಯೆಂದೂ ಇತೀಚೆಗೆ ಬ್ರಿಟನ್ನಿನಲ್ಲಿ ನಡೆಸಿದ ಪ್ರಯೋಗಗಳಿಂದ ಕಂಡು ಬಂದಿದೆ.

ಒಪ್ಪಂದ ಮುರಿದ ಸಮಸ್ಯೆ ಭೈನಾದ್ದು.

1945 ರಲ್ಲಿ ಸೋವಿಯಟ್ ಯೂನಿಯನ್ ಸಂಘದ ವಿಶ್ವ ಸಂಸ್ಥೆಯು ಮಾಡಿಕೊಂಡ ಒಪ್ಪಂದವನ್ನು 1952 ನೇ ಫೆಬ್ರವರಿ 1 ನೇ ತಾರೀಖು ಮುರಿದದ್ದು ಕೇವಲ ಭೈನಾಕ್ಕೆ ಸಂಬಂಧಪಟ್ಟ ಸಂಗತಿ

ಹೀಗೆಂದು ರಾಜ್ಯ ಇಲಾಖೆಯ ವಾರ್ತಾಧಿಕಾರಿ ಮಿಹೆಲ್ ಜೆ. ಮೈಕ್‌ಡರ್ ಮಾಟರು ತಿಳಿಸಿದ್ದಾರೆ.

ಈ ನಿರ್ಣಯದ ಆಗು ಹೋಗುಗಳೆಲ್ಲಾ ಭೈನಾ ರಾಷ್ಟ್ರೀಯ ಸರ್ಕಾರದ ತೀರ್ಮಾನಕ್ಕೆ ಒಳಪಟ್ಟಿದ್ದು, ಎಂದು ಹೇಳಿದರು.

ಆವವಾನಿ III ಮುನ್ಸೀಫ್ ಕೋರ್ಟ್‌ನಲ್ಲಿ

O. P. NO 2/53

ಪೋತಿ ತಾರಾಪುರಂ ಕರಣಂ ಭೀಮಪ್ಪಗೆ ಬರತಕ್ಕ ಸಾಲಗಳ ವಿಷಯದಲ್ಲಿ—

ಕೆ. ವಾಸುದೇವರಾವು ವಗೈರ ಅರ್ಜಿದಾರರು.

1 ರಾಧಮ್ಮ 2 ಕರಣಂ ವೆಂಕೋಬರಾವು—ಎದುರು ಪಾರ್ಟಿ

ನೋಟೀಸು

ಮೆಲ್ಕಂಡ ತೀರಿಹೋದ ತಾರಾಪುರಂ ಕರಣಂ ಭೀಮಪ್ಪಗೆ ಬಳ್ಳಾರಿ ಹೈವೇಸ್ ಡಿಪಾರ್ಟ್‌ಮೆಂಟು ಇವರ ಕಡೆಯಿಂದ ಬರತಕ್ಕ ಕೆಲವು ಕಂಟ್ರಾಕ್ಟು ಬಿಲ್, ಡಿವಾಜಿಟ್ ಮೊತ್ತವನ್ನು ವಸೂಲು ಮಾಡಿಕೊಳ್ಳಲು 14-2-೫೩ನೆಯ ತೇದಿಯಲ್ಲಿ ಅರ್ಜಿದಾರರು ಈ ಕೋರ್ಟಿನಲ್ಲಿ ಅರ್ಜಿ ಇಟ್ಟಿರುತ್ತಾರೆ. ವಾಯ್ದೆ 10-3-53 ಕ್ಕೆ ಇರುತ್ತದೆ. ಇದಕ್ಕೆ ಯಾರಿಗಾದರೂ ತಕರಾರು ಇದ್ದಲ್ಲಿ ಅವರು ಆ ದಿನ ಕೋರ್ಟಿನಲ್ಲಿ ಹಾಜರಾಗಿ ಮನವಿ ಮಾಡಿಕೊಳ್ಳತಕ್ಕದ್ದು.

ಯಸ್. ನರಸಿಂಗರಾವು.
ಅರ್ಜಿದಾರರ—ವಕೀಲು

ಚಟ್ನಹಳ್ಳಿ

ಗ್ರಾಮ ಪಂಚಾಯತಿ ಚುನಾವಣೆ

ಚಟ್ನಹಳ್ಳಿ ಗ್ರಾಮದಲ್ಲಿ ತಾ|| 20-2-1953 ನೇ ಶುಕ್ರವಾರ, ಹರಪನಹಳ್ಳಿ ಪಂಚಾಯತಿ ಬೋರ್ಡು ಆಫೀಸರರ ಅಧ್ಯಕ್ಷತೆಯಲ್ಲಿ ಗ್ರಾಮಪಂಚಾಯತಿ ಚುನಾವಣೆಯು ನಡೆಯಿತು. ಪ್ರಸಿಡೆಂಟರ ಸ್ಥಾನಕ್ಕೆ ಕಲ್ಲಹಳ್ಳಿ ಶ್ರೀ ಸಾಹುಕಾರ ಬುಳ್ಳಾಪುರದ ಚನ್ನಬಸಪ್ಪನವರು ಮತ್ತು ಚಟ್ನಹಳ್ಳಿ ಶ್ರೀ ಮಾಕಂಟಿ ಸಿದ್ದಣ್ಣನವರು ಸ್ಪರ್ಧಿಸಿದ್ದರು. ಕಲ್ಲಹಳ್ಳಿ ಶ್ರೀ ಸಾಹುಕಾರ ಬುಳ್ಳಾಪುರದ ಚನ್ನಬಸಪ್ಪನವರು 302 ವೋಟುಗಳನ್ನು ಪಡೆದು ಆರಿಸಿ ಬಂದರು. ಶ್ರೀ ಮಾಕಂಟಿ ಸಿದ್ದಣ್ಣನವರು 120 ವೋಟುಗಳನ್ನು ಪಡೆದರು.

ಮೆಂಬರರ ಸ್ಥಾನ ಮೊದಲನೇ ವಾರ್ಡಿನಪರವಾಗಿ ಕುರೀ ಮಾರ್ಗಹಳ್ಳಿ ಶ್ರೀ ಪುಲ್ಲಪ್ಪರ ಸಿದ್ದಣ್ಣನವರು ಮತ್ತು ಚಟ್ನಹಳ್ಳಿ ಶ್ರೀ ಏನೂರ್ ಚೆನ್ನಬಸಪ್ಪನವರು ಎರಡನೇ ವಾರ್ಡಿನ ಪರವಾಗಿ ಕಲ್ಲಹಳ್ಳಿ ಶ್ರೀ ಬುಳ್ಳಾಪುರದ ನಂಜಣ್ಣನವರು ಮತ್ತು ಶ್ರೀ ಗೌಡರ ಸಣ್ಣಕೆಂಚಣ್ಣನವರು ಮತ್ತು ರಿಜರ್ವ್ ಮೆಂಬರ ಸೀಟಿನ ಪರವಾಗಿ ಶ್ರೀ ಪರಸಪ್ಪ ಆರಿಸಿ ಬಂದರು.

★ ಒಣ ಭೂಮಿಯಲ್ಲಿ ಭತ್ತ ★

ರಶಿಯಾದಲ್ಲಿ ನಡೆದ ಸೋಜಿಗದ ಪ್ರಯೋಗ

ಭತ್ತದ ಹುಟ್ಟುವಳಿಯನ್ನು ಎತ್ತರಿಸುವ ಎತ್ತುಗಡೆಯನ್ನು ಇಂದು ಪ್ರತಿಯೊಂದು ದೇಶವೂ ಮಾಡಬೇಕಾಗಿದೆ. ಈ ದಿಕ್ಕೆಯಲ್ಲಿ ರಶಿಯಾದಲ್ಲಿ ಸೋಜಿಗದ ಪ್ರಯೋಗವೊಂದು ನಡೆಯಿತು. ನೀರು ಹಾಯಿಸದೆ ಬತ್ತ ಬೆಳೆಯುವ ಎತ್ತುಗಡೆಯನ್ನು ರಶಿಯಾದ ಒಕ್ಕಲತನ ತಜ್ಞರು ಹಾಗು ಸಸ್ಯ ಶಾಸ್ತ್ರಜ್ಞರು ಮಾಡಿದರು. ಹತ್ತಿ, ಗೋಧಿ ಹಾಗೂ ಹುಲ್ಲು ಮುಂತಾದುವುಗಳಂತೆ ಆಗೀಗ ದೊರೆಯುವ ನೀರಿನಿಂದಲೇ ಜೀತರಿಸಿಕೊಂಡು ಬೆಳೆಯುವಂಥ ಬತ್ತದ ಬಗೆಯೊಂದನ್ನು ಅವರು ಕಂಡು ಹಿಡಿದಿರುವರು.

.... ಲೇ :— ಪೆಟ್ರೋವ್, M S C. ..

ರಶಿಯ ಒಕ್ಕೂಟದಲ್ಲಿ ಕಝಾಕ್ ಸ್ತಾನದಲ್ಲಿರುವ ಮಧ್ಯ ಏಶಿಯ ಭಾಗವಲ್ಲ, ಉತ್ತರ ಕಾಕೇಸಸ್‌ದಲ್ಲಿ, ಕುಬಾನ ನದಿಯ ಮುಖದ ಬಳಿಯ ಭೂಮಿಯಲ್ಲಿ, ದೂರ ಪೂರ್ವದಲ್ಲಿ ಹಾಗು ಇನ್ನೂ ಅನೇಕ ಜಿಲ್ಲೆಗಳಲ್ಲಿ ಬತ್ತ ಬೆಳೆಯಲಾಗುತ್ತದೆ.

ಬತ್ತಕ್ಕೆ ನೀರು ಹಾಯಿಸುವ ಆಗತ್ಯವಿದೆಯೆಂಬುದು ಎಲ್ಲರೂ ಬಲ್ಲ ವಿಷಯ. ಪ್ರಾರಂಭದಿಂದ ಬೆಳೆ ಮಾಗುವವರೆಗೂ ನಾಲ್ಕಾರು ಇಂಚಿನಷ್ಟು ನೀರು ಗದ್ದೆಯಲ್ಲಿ ನಿಂತಿರಲೇಬೇಕು ನೀರಾವರಿಯ ಸೌಕರ್ಯದ ಫಲವಾಗಿ ಗೋದಿಗಿಂತಲೂ ಬತ್ತದಎಕರೆವಾರ ಹುಟ್ಟುವಳಿ ಎಷ್ಟೋ ಹಚ್ಚಿದೆ. ಬತ್ತ ಬೆಳೆಯುವಲ್ಲಿ ಎತ್ತಿನ ಕೈಯವರಾದ ರೈತರು ಇಂದು ಒಂದು ಎಕರೆಗೆ ೨೯೧೯ ಪೌಂಡು ಬತ್ತದ ಹುಟ್ಟುವಳಿ ತೆಗೆಯಲು ಸಮರ್ಥರಾಗಿರುತ್ತಾರೆ.

ರಶಿಯಲ್ಲಿ ೨ ಎಕರೆಗೆ ಒಂದು ಹೆಕ್ಟೇರ ಎನ್ನುತ್ತಾರೆ ಇಥ ಪ್ರತಿಯೊಂದು ಹೆಕ್ಟೇರ ಬತ್ತದ ಗದ್ದೆಗೆ ಹಂಗಾಮಿನಲ್ಲಿ ೧೫,೦೦೦ ದಿಂದ ೩೦,೦೦೦ ಕ್ಯೂಬಿಕ್ ಮಿಟರದಷ್ಟು ನೀರು ಬೇಕಾಗುತ್ತದೆ. ಆದರೆ ಎಲ್ಲ ಜಿಲ್ಲೆಗಳಲ್ಲೂ ಸಾಕಷ್ಟು ನೀರು ದೊರೆಯಲಾರದು. ಇಷ್ಟಲ್ಲದೆ ಒತ್ತಕ್ಕಾಗಿ ನೀರಾವರಿ ಸೌಕರ್ಯ ಒದಗಿಸುವದು ಬಹಳ ವೆಚ್ಚದ್ದಾಗಿದೆ ಆದಕ್ಕೆ ಹೆಚ್ಚು ಸಮಯವೂ ಬೇಕಾಗುವದು. ಹೀಗಾಗಿ ಬತ್ತದ ಹುಟ್ಟುವಳಿ ಹೆಚ್ಚಿಸಲು ಬಹಳ ಅಡೆತಡೆಯುಂಟಾಗುವದು.

ಬತ್ತದ ಬೆಳೆಗೆ ನೀರು ಹಾಯಿಸದೆ, ಬೆಳೆಯಿಸುವ ಕುರಿತು ರಶಿಯಾದ ಒಕ್ಕಲತನ ತಜ್ಞರು ಹಾಗು ಸಸ್ಯ ಶಾಸ್ತ್ರಜ್ಞರು ಬಹುದಿನದಿಂದ ಪ್ರಯೋಗ ನಡೆಯಿಸಿದ್ದರು. ಅವರು ಇತೀಚೆಗೆ ಕಂಡುಹಿಡಿದ ಬತ್ತಕ್ಕೆ ನೀರು ಹಾಯಿಸಬೇಕಾಗಿಲ್ಲವಿಷ್ಟೇ ಅಲ್ಲ, ನೀರು ಹಾಯಿಸುವದರಿಂದ ಧಕ್ಕೆ ತಗುಲುವ ಸಂಭವವೂ ಇದೆ ಹತ್ತಿ, ಗೋಧಿ ಮುಂತಾದವುಗಳಂತೆ ಅದಕ್ಕಾದರೂ ಆಗಾಗ ನೀರು ದೊರೆತರೂ ಸಾಗುವದು. ಪ್ರೊ. ಪಿ ಎ. ವಿಟ್ಟಿ ಎನ್ನುವವರು ಈ ಬತ್ತದ ಮಹತ್ವದ ಸಂಶೋಧನೆಯನ್ನು ಬೆಳಕಿಗಿದ್ದಾರೆ, ಅವರು ಸ್ವತಃ ಒತ್ತ ಬೆಳೆಯುವವರು. ಅವರುವದು ರೊಸ್ಟೊವ್ ಎಂಬ ವಿಭಾಗದಲ್ಲಿ. ತಮ್ಮ ಕೈಕೆಳಗೆ ಕೆಲವು ಸಂಶೋಧಕರನ್ನು ತೆಗೆದುಕೊಂಡು ಅವರು ಸಂಶೋಧನೆಯಲ್ಲಿ ತೊಡಗಿರುವರು. ಇವರಂತೆಯೆ ನವೊಕರಸ್ಕಾದಲ್ಲಿಯ ಹೈಡ್ರೋ ಎಂಜಿನೀಯರಿಂದ ಹಾಗು ಮೆಲಿಯೋರೇಶನ್ ಸಂಶೋಧನ ಸಂಸ್ಥೆಯಲ್ಲೂ ಈ ದಿಶೆಯಲ್ಲಿ ಒಳ್ಳೆ ಪರಿಶ್ರಮ ವಹಿಸಿ ಕಾರ್ಯ ಮಾಡಲಾಗುತ್ತಿದೆ ಪ್ರೊ. ಬಿ. ಎ. ಶುಮಕೇನ್ ಅವರ ನೇತೃತ್ವದಲ್ಲಿ ಅನೇಕ ವರುಷಗಳಿಂದ ಸಂಶೋಧನೆ ನಡೆದಿದೆ ಆಗಾಗ ನೀರು ಹಾಯಿಸಿ ಬೆಳೆಯಿಸುವಂಥ ಬತ್ತ ಕಂಡು ಹಿಡಿಯಲು ಶೋಧನೆ ನಡೆಯಲಾಗಿದೆ. ಅರೀತಿ ಬೆಳೆಯಬಲ್ಲ ಬತ್ತವನ್ನು ಅನೇಕ ಜಿಲ್ಲೆಗಳಲ್ಲಿ ಬಿತ್ತಿ ಬೆಳೆಯುವ ಪ್ರಯೋಗ ಮಾಡಲಾಗುತ್ತಿದೆ. ಇದಲ್ಲದೆ ಆಲ್ಯು ನೀಯನ್ ರಾಯಸ್ ಕೇಂದ್ರ ಮತ್ತು ಆಲ್ಯುನೀಯನ್ ಹಾಗು ಯುಕ್ರೇನೀಯನ್ ಹೈಡ್ರೋ ಎಂಜೀನೀಯರಿಂಗ ಮತ್ತು ಮೆಲಿಯೋರೇಶನ್ ಸಂಸ್ಥೆಗಳೂ ಈ ಕೇಂದ್ರದಲ್ಲಿ ಕಾರ್ಯ ಕೈಕೊಂಡಿವೆ.

ಹೊಸ ಬಗೆಯ ಬತ್ತ

ರಶಿಯಾದ ಶಾಸ್ತ್ರಜ್ಞರು ಕಂಡು ಹಿಡಿದ ಹೊಸಬಗೆಯ ಬತ್ತಕ್ಕೆ ಸೋಧಿಗಿಂತ ಬೆಸು ಹೆಚ್ಚು ಉಷ್ಣತೆ ಹಾಗು ನೀರು ದೊರೆತರೆ ಸಾಕು ಉಳಿದ ಬತ್ತಕ್ಕಿಂತಲೂ ಅದು ೨೫-೩೦ ದಿನ ಮೊದಲು ಕೈಗೆ ಬರುವದಲ್ಲದೆ ಯಾವ ಭೂಮಿಯಲ್ಲಿ ಬೇಕಾದರೂ ಅದನ್ನು ಬೆಳೆಯಬಹುದು. ಭೂಮಿ ಸ್ವಲ್ಪ ಇಳಿಜಾರಿದ್ದರೆ ಒಳ್ಳೆ. ಒಣಭೂಮಿ ಬತ್ತವೆಂದು ಕರೆಯಲ್ಪಡುವ ಈ ಹೊಸ ಬತ್ತದ ವೈಶಿಷ್ಟ್ಯವೆಂದರೆ, ಅವರು ನೀರಾವರಿಯ ಹಾಗು ಪತ್ತಿಗೆಯ ಕೆಲಸ ಸುಲಭವಾಗಿರುವದಾಗಿದೆ ಇದರಿಂದ ಅದನ್ನು ಈಗಿನಕ್ಕಿಂತಲೂ ಹೆಚ್ಚು ಭೂಮಿಯಲ್ಲಿ ಬೆಳೆಯಲು ಅನುಕೂಲವಾಗುವದು ಕುಬಾಕ್, ಪೈರ್ನೊರು ಸರಾಟೋನ್ ಆಫ್ಘ ಏಕೆ ಕುಯಿಬಿನಾಮು ಮುಂತಾದ ಪ್ರದೇಶದಲ್ಲಿಯು ಕೂಡ ಅದನ್ನು ಬೆಳೆಯುವ ಯಶಸ್ವಿ ಪ್ರಯೋಗ ನಡೆದಿದೆ ಹೊಸ ನೀರಾವರಿ ಸೌಕರ್ಯ ಒದಗಿಸಲಾಗಿರುವ ಎಲ್ಲ ಜಿಲ್ಲೆಗಳಲ್ಲಿ ಸಾಧಾರಣವಾಗಿ ಬತ್ತ ಬೆಳೆಯಲಾಗುವದು.

ಈ ಬತ್ತಕ್ಕೆ ಪುನಾಳಗಳಿಂದ ನೀರು ಪೂರೈಸಲಾಗುವದು. ಒಟ್ಟು ಬೆಳೆಯಿಂದ ೧೦ ಸಲಕ್ಕಿಂತ ಹೆಚ್ಚು ಸಲ ನೀರು ಹಾಯಿಸುವದಿಲ್ಲ. ಆದಕ್ಕೆ ನೆಲ ಬಹಳ ಹಸಿಯಾಗಿರಬೇಕಾಗಿಲ್ಲ. ಅವರ ಬೇರುಗಳು ೭೦-೭೦ ಸೆಂಟಿ ಮೀಟರ ಆಳದಲ್ಲಿರುವಷ್ಟು. ಒಂದು ಸಲಕ್ಕೆ ೩ ಎಕರೆಗೆ ೫೦೦ ದಿಂದ ೬೫೦ ಕ್ಯೂಬಿಕ್ ಮೀಟರ ನೀರು ಸಾಕಾಗುವದು. ಇಡೀ ಹಂಗಾಮಿನಲ್ಲಿ ಒಟ್ಟು ೬,೦೦೦ ದಿಂದ ೫,೦೦೦ ಕ್ಯೂಬಿಕ್ ಮೀಟರ ನೀರುಸಿಕ್ಕರೆ ಸಾಕು. ನೆಲದಲ್ಲಿ ಹಸಿಯುಂಟುಮಾಡಲು ದಕ್ಷಿಣ ಭಾಗದಲ್ಲಿ ಒಮ್ಮೆ ನೀರು ಹಾಯಿಸುವರು. ಇದರಿಂದ ಬತ್ತದ ಮೇಲೆ ನೀರು ಹಾಯಿಸುವ ಭಾರ ಕಡಿಮೆಯಾಗುವದು

ಆಗೀಗ ನೀರು ಹಾಯಿಸಿದ ಬತ್ತದ ಎಕರೆವಾರ ಹುಟ್ಟುವಳಿ ಎಷ್ಟೋ ಪಾಲು ಹೆಚ್ಚಿದೆ ಸಾಮಾಹಿಕ ಒಕ್ಕಲತನ ಹಾಗು ಸಂಶೋಧನ ಕೇಂದ್ರಗಳು ನಡೆಯಿಸಿದ ಪ್ರಯೋಗಗಳಿಂದ ಈ ಮಾತು ಸಿದ್ಧವಾಗಿದೆ. ಮೊದಲನೇ ವರುಷದಲ್ಲಿಯೇ ಹೆಚ್ಚು ಹುಟ್ಟುವಳಿ ಕೈಗೆ ಹತ್ತಿದೆ.

ಹತ್ತಿ ಗೋದಿ ಮುಂತಾದೆವುಗಳ ಹುಟ್ಟುವಳಿಯನ್ನು ಹೆಚ್ಚಿಸುವದಲ್ಲದೆ, ೧೦೮ ಕೋಟಿ ಪೌಂಡು ಬತ್ತದ ಹುಟ್ಟುವಳಿಯನ್ನು ಒಂದು ವರುಷದಲ್ಲಿ ಹೆಚ್ಚಿಸುವ ಗುರಿಯನ್ನೂ ವಿಧಾಯಕ ಯೋಜನೆಗಳು ಇಟ್ಟುಕೊಂಡಿವೆ. ಈ ಹುಟ್ಟುವಳಿಯಲ್ಲಿಯ ಬಹುದೊಡ್ಡ ಭಾಗವು ನೀರಾವರಿಯ ವಿಶೇಷ ಆಗತ್ಯವಿರದ ಹಾಗು ಆಗೀಗ ನೀರು ಹಾಯಿಸಲಾದ ಬತ್ತದಿಂದ ದೊರೆಯುವದರಲ್ಲಿ ಸಂಶಯವಿಲ್ಲ. ವೋಲ್ಗಾ-ಡೊನ್ ನದಿಗಳಿಂದ ನೀರಿನ ಸೌಕರ್ಯ ಪಡೆದ ರೊಸ್ಟೋವ್ ಪ್ರದೇಶದಲ್ಲಿ ಈಗಾಗಲೇ ೧೫೦೦ ಎಕರೆಯಲ್ಲಿ ಈ ಬತ್ತ ಬತ್ತಲಾಗಿದೆ.

PUBLIC NOTICE.

Under Section 45 of the Indian Partnership Act

It is hereby notified to all concerned that M/s K. S. Chetty, and K. Ramanatham, both sons of Chengayya Chetty, Contractors, Bellary ceased to be partners in the firm of Rayalaseema Constructions, Adoni, with effect from 31-12-1950, Sri. M. Ringaswamy with effect from 27-9-51 and that Sri. C Venugopal, B. E., Engineer and Contractor, Madras became solely entitled to the said business its good-will and all other rights under the award dated 2nd January 1953 passed by the Sole Arbitrator.

C. VENUGOPAL,
Engineer & Contractor, Madras.

.... ಇಂಡಿಯನ್ ಪಾರ್ಟನರ್‌ಶಿಪ್ ಆಕ್ಟ್ 45 ಕ್ಕೆ ಅನ್ವಯಿಸಿ ....

ಬಹಿರಂಗ ಪ್ರಕಟನೆ

ಶ್ರೀ ಚಂಗಯ್ಯ ಚೆಟ್ಟಿ ಕಂಟ್ರಾಕ್ಟರ್ಸ್ ಬಳ್ಳಾರಿ ಇವರ ಮಕ್ಕಳಾದ ಶ್ರೀ ಕೆ. ಯಸ್ ಚೆಟ್ಟಿ ಮತ್ತು ಕೆ. ರಾಮನಾಥಂ ಇವರು ರಾಯಲಸೀಮ ಕನ್‌ಸ್ಟ್ರಕ್ಷನ್ಸ್ ಆದನಾನಿ ಎಂಬ ಸಂಸ್ಥೆಯಲ್ಲಿ 31-12-1950 ನೆಯ ತೇದಿಯಿಂದ ಭಾಗಸ್ಥರಾಗಿರುವುದು ನಿಂತು ಹೋಯಿತು. ಶ್ರೀ ಎಂ. ರಂಗಸ್ವಾಮಿ ಎಂಬುವರು 27-9-51 ರಿಂದ ಭಾಗಸ್ಥರಲ್ಲ. ಈ ಕಾರಣ ಸೋಲ್ ಆರ್ಬಿಟ್ರೇಟರ್‌ರವರು 2-1-1953 ರಲ್ಲಿ ಕೊಟ್ಟ ನಿರ್ಣಯದ ಪ್ರಕಾರ ಶ್ರೀ ಸಿ. ವೇಣುಗೋಪಾಲ್ ಬಿ. ಇ. ಎಂಜಿನಿಯರ್ ಅಂಡ್ ಕಂಟ್ರಾಕ್ಟರ್ ಮದ್ರಾಸ್ ಇವರೊಬ್ಬರೆ ಆ ಸಂಸ್ಥೆಯ ವ್ಯವಹಾರ ಎಲ್ಲ ಹಕ್ಕುಗಳು, ಅದರ ಒಳ್ಳೆಯ ಹೆಸರಿನ ಲಾಭಕ್ಕೆ ಜವಾಬ್ದಾರರೆಂದು ಸಂಬಂಧಿಸಿದವರಿಗೆಲ್ಲ ಈ ಮೂಲಕ ತಿಳಿಸಲಾಗಿದೆ.

ಸಿ. ವೇಣುಗೋಪಾಲ್
ಎಂಜಿನಿಯರ್ & ಕಂಟ್ರಾಕ್ಟರ್ — ಮದ್ರಾಸ್.

ಬಳ್ಳಾರಿ ಪ್ರಭಾತದಲ್ಲಿ
5-3-53 ರಿಂದ
ಜೈಮಿನಿಯವರ ಅಮೋಘ ಹಿಂದೀ ಚಿತ್ರ
★ ಶ್ರೀ ಸಂಪತ್ ★
* *MR. SAMPAT* * [HINDI]
ತಾರಾಗಣ :— ಮೋತಿಲಾಲ್, ಆಗ, ಬದರಿ ಪ್ರಸಾದ್, ಪದ್ಮಿನಿ, ವನಜ,

ಬಳ್ಳಾರಿ ಡಿಚಿ ಮುಚಿ ಕೋರ್ಟಿನಲ್ಲಿ

S. C. NO. 596/52

ವೆಂಕಟರಮಣಪ್ಪ] ವಾದಿ
ಮಲ್ಲಿಕಾರ್ಜುನಪ್ಪ] ಗಳು
Vs
ಪೊರಸಪ್ಪ :— ಪ್ರತಿವಾದಿ

ಪ್ರತಿವಾದಿಗೆ ನೋಟೀಸು

ಮೇಲ್ಕಂಡ ನಂಬರಿನಲ್ಲಿ ವಾದಿಗಳು ಪ್ರತಿವಾದಿ ಮೇಲೆ ಕಂತಿನ ಪತ್ರದ ಬಾಬತು ರೂ. 50/-ಕ್ಕೆ ದಾವಾ ದಾಖಲು ಮಾಡಿರುತ್ತಾರೆ. ಸದರಿ ನಂಬರ ವಾಯ್ದೆ 13-3-53ಕ್ಕೆ ಇರುತ್ತದೆ. ಆ ದಿನ ನೀವು ಖುದ್ದಾಗಲಿ ವಕೀಲರ ದ್ವಾರವಾಗಲಿ ಕೋರ್ಟಿಗೆ ಹಾಜರಾಗಿ ನಿಮ್ಮದೇನಾದರು ಆಕ್ಷೇಪಣೆಗಳಿದ್ದರೆ ತಿಳಿಪತಕ್ಕದ್ದು— ಇಲ್ಲವಾದರೆ ನಿಮ್ಮ ಪರೋಕ್ಷದಲ್ಲಿ ತೀರ್ಮಾನವಾಗುತ್ತದೆಂದೂ ಈ ಪ್ರಕಟನೆಯ ಮೂಲಕ ತಿಳಿಸೋಣಾಗಿದೆ.

ಆರ್ ಶಾಮರಾವ್
ವಾದಿಗಳ—ಅಡ್ವೋಕೇಟು

ಬಳ್ಳಾರಿ ಪ್ರದರ್ಶನ

ಬಳ್ಳಾರಿ ಗ್ರಾಮೋದ್ಯೋಗ ಮತ್ತು ಕಲಾಪ್ರದರ್ಶನವು ೧೨ ದಿನಗಳವರೆಗೆ ಬಿ. ಡಿ. ಎ. ಮೈದಾನದಲ್ಲಿ ನಡೆದು ೨೬ ನೆಯ ತಾ. ಕೊನೆಗಂಡಿತು. ಕೊನೆಯ ದಿನ ಬಹುಮಾನಗಳ ವಿತರಣೆಯಾಯಿತು ಈ ಸಲದ ವೈಶಿಷ್ಟ್ಯವೆಂದರೆ ಖಾದಿ ಮತ್ತು ಕಾಶ್ಮೀರ ಉಣ್ಣೆ ಬಟ್ಟೆಗಳಂಗಡಿ ವ್ಯವಸಾಯ ಖಾತೆ ವೆಟರ್ನರಿ ಶಾಖೆ ಮತ್ತು ಆರೋಗ್ಯ ಶಾಖೆಗಳವರು ತಮ್ಮ ಪ್ರತ್ಯೇಕಾತ್ಮಕ ಪ್ರದರ್ಶನ ನಡೆಸಿದರು. ವಿವಿಧ ಶಾಲೆಗಳವರು ನಾಟಕ ನರ್ತನಗಳನ್ನೇರ್ಪಡಿಸಿದ್ದರು.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
೬ ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 2-3-53

Sriman _____

_____

_____

Edited Printed & Published by T. B Keshava Rao, at Nava Bharath Press, Bellary.

ನವಭಾರತ

ಸೋಮವಾರ
ಮಾರ್ಚ್
೯--೧೯೫೩

ವರ್ಷ ೧೫ | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ ೧೧ | ಉಠಿ ಸ್ವತಂತ್ರ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಬಿ. ಕೇಶವರಾವ್

ರಷ್ಯಾದ ಹೊಸ ಸರ್ಕಾರ

ಜಾರ್ಜಿ ಮಾಲೆಂಕೊವ್ — ಪ್ರಧಾನಮಂತ್ರಿ
(ಸ್ಟಾಲಿನರ ಬದಲಾಗಿ)
ವಿ. ಮೊಲೊಟೊವ್ — ವಿದೇಶಮಂತ್ರಿ | ಉಪ
ಲಾ. ಬೇರಿಯ — ಪೋಲೀಸ್ ಮುಖ್ಯರು | ಪ್ರಧಾನರು.
ಮಾರ್ಷಲ್ ಕ್ಲಿಮೆಂಟಿ ವರಾಶಿಲಾವ್ .... ಅಧ್ಯಕ್ಷರು.
(ನಿಕೊಲಾಯ್ ಶಿವರ್ನಿಕ್‌ರ ಬದಲು)

ಸ್ಟಾಲಿನ್‌ರ ಮರಣ

೫-೩-೫೩ ನೆಯ ರಾತ್ರಿ ರಷ್ಯಾದ ರಾಜಧಾನಿ ಮಾಸ್ಕೋ ನಗರದಲ್ಲಿ ರಷ್ಯಾ ಪ್ರಧಾನ ಮಂತ್ರಿ ಸ್ಟಾಲಿನರ ಮರಣ ವಾಯ್ತೆಂದು ಸಾರಲಾಯಿತು. ಪ್ರಪಂಚದ ಎಲ್ಲಾ ರಾಷ್ಟ್ರಗಳಿಂದಲೂ ಸಂತಾಪ ಸೂಚಕ ತೀರ್ಮಾನಗಳು ಸೇರುತ್ತಲಿವೆ.

ದೆಲ್ಲಿಯಲ್ಲಿ ಪ್ರಧಾನಿ ನೆಹರೂರವರು ದುಃಖವನ್ನು ವ್ಯಕ್ತಪಡಿಸಿ ಪಾರ್ಲಿಮೆಂಟನ್ನು ಮುಂದುವರಿಸಿದರು.

ಆಂಧ್ರರಿಗೆ

ಮದ್ರಾಸ್ ಮೇಲೆ ಹಕ್ಕಿಲ್ಲ

ಮದ್ರಾಸ್ ಮುಖ್ಯಮಂತ್ರಿಗಳಾದ ಶ್ರೀ. ರಾಜಗೋಪಾಲಾಚಾರಿಯವರು ನುಡುರಾಭಾಗದಲ್ಲಿ ಸಂಚರಿಸುತ್ತ ಒಂದು ಭಾಷಣದಲ್ಲಿ ಹೀಗೆ ಹೇಳಿದರು. "ಆಂಧ್ರರು ಮದ್ರಾಸ್ ನಗರದಲ್ಲಿ ಅತ್ಯಲ್ಪ ಸಂಖ್ಯೆಯಲ್ಲಿರುವ ಕಾರಣ ಅವರಿಗೆ ಮದ್ರಾಸ್ ಮೇಲೆ ಯಾವ ನಿಧವಾದ ಅಧಿಕಾರವೂ ಇಲ್ಲ. ಪರರ ಕಟ್ಟಿಯಲ್ಲೂ ತಮಗೆ ಭಾಗವು ಬೇಕೆಂದು ವಾದಿಸಿದಂತೆ ಅವರ ಹೇಳಿಕೆ."

ರಷ್ಯಾದಲ್ಲಿ ಐಕಮತ್ಯ ಬೇಕು.

"ದೇಶದ ಇಂಥಾ ವಿಪತ್ಕರ ಪರಿಸ್ಥಿತಿಯಲ್ಲಿ ಜನತೆಯಲ್ಲಿ ಐಕಮತ್ಯವು ಅವಶ್ಯಕ ಸರ್ಕಾರದ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ನಾಯಕತ್ವದಿಂದ ಸ್ಟಾಲಿನರು ದೀರ್ಘಕಾಲ ದೂರವಾಗಿರುವ ಪರಿಸ್ಥಿತಿಗೆ ಜನತೆಯು ತಯಾರಾಗಬೇಕು" ಎಂದು ಮಂತ್ರಿವರ್ಗವೂ, ಕಮ್ಯೂನಿಸ್ಟ್ ಪಾರ್ಟಿಯೂ ಜನತೆಗೆ ಅಪೀಲ್ ಮಾಡಿದೆ.

ಆಂಧ್ರ ಪ್ರಾಂತ ನಿರ್ಮಾಣದ ಸಂಬಂಧವಾಗಿ ಶ್ರೀನೆಹರೂರವರೊಡನೆ ಚರ್ಚಿಸಲು ಮದ್ರಾಸ್ ಮುಖ್ಯಮಂತ್ರಿ ರಾಜಾಜಿಯವರು ದೆಲ್ಲಿಗೆ ಹೋಗಿರುತ್ತಾರೆ. ವಾಂಛೂ ರವರದಿಯ ಫಲಿತಾಂಶ--ಭಾರತ ಸರ್ಕಾರ ಸ್ವೀಕೃತ ಅಂಕಗಳು ಈವಾರ ತಿಳಿಯಬಹುದು.

ಮಹಾ ಮಸ್ತಕಾಭಿಷೇಕ

ಶ್ರವಣ ಬೆಳಗೊಳದ ಗೋಮಟೇಶ್ವರನ ಮಹಾ ಮಸ್ತಕಾಭಿಷೇಕವು ೨ ನೆಯ ತಾರೀಖಿನಂದು ರಾಜಪ್ರಮುಖರ ಸಮ್ಮುಖದಲ್ಲಿ ನಡೆಯಿತು. ಅಭಿಷೇಕವು ನೀರು, ಎಳನೀರು, ಹಾಲು, ತುಪ್ಪ, ಜೇನುತುಪ್ಪ ಬೆಲ್ಲಗಳಿಂದಲೂ ಭಂಗಾರ, ಬೆಳ್ಳಿ, ಹೂಗಳೂ, ಮತ್ತು ನವವಿಧ ರತ್ನಗಳಿಂದಲೂ ನಡೆಯಿತು. ಲಕ್ಷಾಂತರ ಜೈನರು ಭಾರತದ ಎಲ್ಲಾ ಕಡೆಗಳಿಂದ ಸಮಾವೇಶವಾಗಿದ್ದರು

— ಬಳ್ಳಾರಿ ಪ್ರಭಾತ್ ದಲ್ಲಿ —

.... ಅನೋಘ ಪ್ರಾರಂಭ ....

12-3-53 ರಿಂದ

ಕೃಷ್ಣಾ ಪಿಚ್ಚರ್ಸ್‌ರವರ

★ ಅಮ್ಮಲಕ್ಕಲು ★ (ತೆಲಗು)

ತಾರಾಗಣ:- ಎನ್. ಟಿ. ರಾಮರಾವ್, ಬಾಲಸರಸ್ವತಿ, ರೇಲಂಗಿ, ಪದ್ಮಿನಿ.

ಕರ್ನಾಟಕ ನಿರ್ಮಾಣಕ್ಕೆ ಸುವರ್ಣ ಸಂಧಿ!

ನಮ್ಮ ನಾಯಕರು ಕಾರ್ಯರಂಗಕ್ಕಿಳಿಯಲಿ.

ಎರಡು ಕೋಟಿ ಕನ್ನಡಿಗರಲ್ಲಿ ಉತ್ಸಾಹ ಗಂಗೆಯು ಹರಿಯಲಿ ವಿಧಾಯಕ ರೀತಿಯಲ್ಲಿ ಸಂಬಂಧಪಟ್ಟ ಕಾಂಗ್ರೆಸ್ ಮುಂದಾಳುಗಳು ಗಡಿ ಸಮಸ್ಯೆಯನ್ನು ಶಾಂತರೀತಿಯಿಂದ ಬಡಿದಾಟವಿಲ್ಲದೆ ಸಂಯುಕ್ತ ಬೇಡಿಕೆಯನ್ನಿಟ್ಟರೆ ಅದನ್ನು ನಿರಾಕರಿಸುವುದು ಯಾರಿಗೂ ಶಕ್ಯವಿಲ್ಲ.

ಹೈದ್ರಾಬಾದಿನ ಕಾಂಗ್ರೆಸ ಮಹಾಧಿವೇಶನದ ತರುವಾಯ ಕೆಲ ಪ್ರಾಂತೀಕರಣವಾದಿಗಳಿಗೆ ಅತ್ಯಂತ ನಿರುತ್ಸಾಹ ಉತ್ಪನ್ನವಾಗಿ ಭಾಷೋದ್ರೇಕರಾಗಿ ಹಿರಿ ಮುಂದಾಳುಗಳನ್ನು ಜರೆಯುವ, ಖಂಡಿಸುವ, ಭಾಷಣಗಳು, ಚರ್ಚೆಗಳು ಸಾಗಿವೆ. ಪಂ ನೆಹರೂರವರು ತಮಗೆ ಇಷ್ಟವಿಲ್ಲದ್ದರಿಂದ ಮುಂದುವರಿಸುತ್ತಿರುವ ರೆಂತಲೂ, ಅವರಧು ಬ್ರಿಟಿಶನೀತಿ ಎಂದೂ ಸರ್ವಾಧಿಕಾರತ್ವವೆಂದೂ ಆರೋಪಿಸಲಾಗುತ್ತಿದೆ

ಪಂ ನೆಹರೂರವರು ವೈಯಕ್ತಿಕವಾಗಿ ವಿಶೇಕರಣಕ್ಕಾಗಿ ವಿರೋಧಿಗಳಾಗಿದ್ದರೂ, ಸಂಬಂಧಿಸಿದ ಜನವೆಲ್ಲರೂ, 'Agreed Demand' ಒಮ್ಮತದ ಬೇಡಿಕೆಯನ್ನು ಸುಸಂಘಟಿತವಾಗಿ ಪರಿಯು ಹಂಜಿಹೋದ ಕನ್ನಡ ನುಡಿಂಡರೆಲ್ಲರೂ ಒಗ್ಗಟ್ಟಾಗಿ, ಒಮ್ಮನಸ್ಸಿನಿಂದ ನೆಹರೂರವರ ಮುಂದಿಟ್ಟರೆ, ಅದಕ್ಕವರು, ನಿರಾಕರಿಸುವದು ಪ್ರಜಾಪ್ರಭುತ್ವ ಯುಗದಲ್ಲಿ ಕರಿಣವೆನಿಸುವದು. ಆ ಖಂಡ ಕನ್ನಡ ಜನತೆಯಲ್ಲಿಯೇ ಪ್ರಾಂತೀಕರಣದ ಬಗ್ಗೆ ಯಾವ ಚಳವಳಿಯೂ ಕಂದುಬರುವದಿಲ್ಲ. ಜನಸಾಮಾನ್ಯರಲ್ಲಿ ಜಾಗ್ರತಿಯಿಲ್ಲ. ಉತ್ತರಕರ್ನಾಟಕದ ಒಂದೆರಡು ಪಟ್ಟಣಗಳಲ್ಲಿ ಅಲ್ಪ ಸ್ವಲ್ಪ ಜಾಗ್ರತೆ ಕಂಡುಬರುತ್ತಿದೆ. ಮೈಸೂರ, ಕೊಡಗು, ಹೈದ್ರಾಬಾದ, ನೀಲಗಿರಿ ಬೆಳಗಾಂವ, ಕಾರವಾರ ಜಿಲ್ಲೆಗಳಲ್ಲಿ ವಿಶೇಕರಣದ ವಿಷಯವಾಗಿ ತಳುಮಳ, ಕಳವಳ ಚಳವಳಿ ಹಾಗು ಅತ್ಪೀಯತೆ ಮುಂತಾದವುಗಳ ಬಗ್ಗೆ ಜನ ಜಾಗ್ರತಿ ಉಂಟೋ?

ಭಾಷವಾರ ಪ್ರಾಂತರಚನೆಯ ತಿಳುವಳಿಕೆಯನ್ನು ವಿಶಾಲಕರ್ನಾಟಕದಲ್ಲಿ ಹರಡಿಲ್ಲ. ಅಲ್ಲಿಯ ಜನರಲ್ಲಿ ಉತ್ಸಾಹ ಹುರುಪು, ಹುಮ್ಮಸ್ಸನ್ನು ತುಂಬಲ್ಲ ನಮ್ಮ ಕಾಂಗ್ರೆಸ ಮುಂದಾಳುಗಳು ತಮ್ಮ ತಮ್ಮ ಅಧಿಕಾರದ ಭದ್ರಸ್ಥಾನಕ್ಕೆ ಅಂಟಿಕೊಂಡು ದೂರವಲ್ಲಿದ್ದ ಕನ್ನಡ ಜನತೆ ಥುನ್ನೇ ಮಾರೆತಂತಾಗಿ ಅವರ್ಗುಬ್ಬೇನಾವು ಬೇರೆ ಎಂದೆನಿಸಹತ್ತಿತು. ಇಷ್ಟೇಕೆ ಬೆಳಗಾವಿಯಲ್ಲಿಯ ಭಾಷಾದ್ವೇಷವು ಎಷ್ಟು ತಾಂಡನ ನೃತ್ಯವಾಡುತ್ತಿದೆ? ಎನ್ನೆನ್ನೆ ಮೊನ್ನೆ ಮಂತ್ರಿಗಳ (ಬೆಳಗಾಂವಿ ಪ್ರಸಿದ್ಧ ಕಾಂಗ್ರೆಸ್ಸಿಗರು) ಸಮಕ್ಷವೇ ಸಭೆಯಲ್ಲಿ ನಡೆದ ದುರ್ಘಟನೆಯನ್ನು ನೆನೆಪಿಗೆ ತಂದರೆ ಮೈ ಝುಮ್ಮೆನ್ನಿಸುವುದೋ ಮಾಂಚಗಳೇಳುತ್ತವೆ! ಈತರದ ದ್ವೇಷಾಗ್ನಿಯನ್ನು ನಂದಿಸುವ ಮುಂದಾಳುಗಳಿಲ್ಲವೇ ಈ ದಿನದ ಮುಖಂಡರ ಅಜಾಗ್ರತೆಯೇ ಇವಕ್ಕೆಲ್ಲ ಕಾರಣವಲ್ಲವೇ ? ಬಳ್ಳಾರಿಯೂ ಇದೇರಿ. ಕುಹಾಪುರ ಬಂದ ಹಾಗೆ, ಕೆಲವಿನ ವಿಶೇಕರಣದ ಕೂಗು ಏರಿ ಮತ್ತೆ ಇಳಿಮುಖವಾಗುತ್ತಿದೆ.

ಮೈಸೂರಿನ ಹಾಗು ಇನ್ನಿತರ ಕನ್ನಡ ಕ್ಷೇತ್ರಗಳು ಹಾಗೂ ಉತ್ತರ ಕರ್ನಾಟಕದ ಕಾಂಗ್ರೆಸ ಹಾಗೂ ಪ್ರತಿಭಾವಂತ ಸಾಹಿತ್ಯಕಾರ ಮುಖಂಡರು ಕನ್ನಡದ ಮೂಲೆ ಮೂಲೆಗಳಲ್ಲಿಯೂ ತಳ್ಳಿನಳ್ಳಿಗಳಲ್ಲಿಯೂ ಉಜ್ವಲವಾದ ಪ್ರಚಂಡ ಪ್ರಚಾರ ಕೈಕೊಂಡು ಉತ್ಸಾಹ ತುಂಬಬೇಕು ವಿಶೇಕರಣದ ರವವ ಎಲ್ಲೆಡೆಯಲ್ಲಿಯೂ ಸ್ಪರ್ಧಿಸಬೇಕು. ಮೈಸೂರಿನ ಪತ್ರಿಕೆಗಳಲ್ಲಿಯೂ ಜನತೆಯಲ್ಲಿಯೂ ವಿಶೇಕರಣದ ವಿಷಯವಾಗಿ ಆಂದೋಲನವಿಲ್ಲ ವಿಶೇಕರಣದ ಆಂದೋಲನದ ಬಗ್ಗೆ ಅವರಲ್ಲಿ ವಿಶೇಷ ಆಸ್ಥೆ ಬೆಳೆಯಬೇಕು. ಒಮ್ಮೆ ಒಪ್ಪುವರು, ಒಮ್ಮೆ ದೂರೀಕರಿಸುವರು, ಈವೃತ್ತಿ ಸಲ್ಲ. ನಮ್ಮೆಲ್ಲರ ಸಮೈವದಿಂದ ಮುಖ್ಯ ಮಂತ್ರಿ ಹನುಮಂತಯ್ಯನವರು ನಾವಲನಗರದಲ್ಲಿ ವಿಶೇಕರಣ ತತ್ವವನ್ನು ಸ್ವಯಂಪ್ರೇರಿತರಾಗಿ ಪ್ರಭಾವಯುತ ಭಾಷಣಮಾಡಿ, ಒಪ್ಪಿಕೊಂಡಿರುವರು. ಮೈಸೂರ ಅಸೆಂಬ್ಲಿಯ ೧೦ ಸದಸ್ಯರ ವಿಶೇಕರಣಕ್ಕನುಕೂಲವಾಗಿ ಮನವಿ ಅರ್ಪಿಸಿದ್ದಾಗಿದೆ. ಹೈದರಾಬಾದ ಪಿಪ್ಪವಿದೆ ಈಗಿನಂಥ ಸುಸಂದಿ ಎಂದೂ ಒದಗಿಲ್ಲ. ಮೈಸೂರಿಗೆ ಸಂಬಂಧಪಟ್ಟ ಅಖಂಡ ಕರ್ನಾಟಕದ ಜಾಗ್ರತಿ, ಐಕ್ಯತೆ ಬೆಳಗಿ, ಶ್ರೀ. ವಾಯಚಳವರು ಬರೆಂತೆ ಎಲ್ಲ ಕರ್ನಾಟಕದ ಕಾಂಗ್ರೆಸ ಕವಿ ಪುಗಳು ಒಂದಾಗಲು, ಪ್ರಯತ್ನಿಸಲಿ.

ಜನಜಾಗ್ರತಿಯಿಲ್ಲದಿದ್ದರೆ ಭೂಮ್ಯಾಂದೋಲನವೂ ಸಾಗದು. ಕೆಲರಂದಂತೆ ಸತ್ಯಾಗ್ರಹ ಕೈಕೊಂಡರೆ ಅಖಂಡಕರ್ನಾಟಕದಲ್ಲಿ ಸಾಗಬೇಕು. ಇಲ್ಲದಿದ್ದರೆ ಸಲ ಅಸಂಘಟಿತ ರೀತಿಯಿಂದ ಆಚರಿಸಿ ಅಯಶಸ್ವಿಯಾಗಿದ್ದುಂಟು. ಸದಸ್ಯರು ರಾಜೀನಾಮೆ ಸಲ್ಲಿಸುವದು ತಿರುಗಿತಕ್ಕೊಳ್ಳುವದು ಹೀಗೆ ಮಾಡುವದರಿಂದ ಜನತೆಗೆ ಮುಖಂಡರ ದೃಢನಿಶ್ಚಯದ ವಿಷಯದಲ್ಲಿ ತಂಕೆಯುಂಟಾಗುತ್ತದೆ.

ಎರಡು ಕೋಟಿ ಕನ್ನಡಿಗರಲ್ಲಿ ಉತ್ಸಾಹ ಗಂಗೆಯನ್ನು ಹರಿಸಲಿ. ವಿಧಾಯಕ ರೀತಿಯಿಂದ ಸಂಬಂಧಿಸಿದ ಕಾಂಗ್ರೆಸ ಮುಖಂಡರು ಗಡಿಗಳ ಸಮಸ್ಯೆಯನ್ನು ಶಾಂತರೀತಿಯಿಂದ ಆನತಿಂಟಿಗಳ್ಳದೆ ಬಗೆಹರಿಸಿಕೊಂಡು ಸಂಯುಕ್ತಬೇಡಿಕೆಯನ್ನಿಟ್ಟರೆ ಹಿರಿಹಿರಿ ಬ್ರಹ್ಮಾದಿಗಳಿಗೂ ವಿಶೇಕರಣ ನಿರಾಕರಿಸುವದು ಶಕ್ಯವಿಲ್ಲ ಆಂಧ್ರ ಮೊಡಸೆಯೇ ಪ್ರಾಂತವಾಗಲು ಸಂಧಿಸಬೇಕು. ಆಂಧ್ರರ ದುರಾಶೆಯಿಂದ ಕನ್ನಡ ನೆಲಗಳಿಗೆ ಗಂಡಾಂತರ ಪ್ರಾಪ್ತವಾಗುವದು ಕೆ. ಪಿ. ಸಿ. ಸಿ. ಯು ವೀಕ್ಷವಾಗಿ ಸಭೆಸೇರಿಸಿ ಜನತೆಯ ಮನದಲ್ಲಿ ವಿಪರಿಸುತ್ತಿರುವ ವಿಶೇಕರಣದ ಬಗ್ಗೆ ಮಾರ್ಗದರ್ಶನಮಾಡಲಿ.

ಜಯ-ಕರ್ನಾಟಕ

ಸಮಾಜ ವಿಕಾಸ ಯೋಜನೆ
ರಾಜ್ಯ ಸರಕಾರಗಳಿಗೆ ಸೂಚನೆ

ಸಮಾಜವಿಕಾಸ ಕ್ಷೇತ್ರವಲ್ಲಿ ಬರುವ ಪ್ರತಿಯೊಂದು ಹಳ್ಳಿಯು ಒಕ್ಕಲತನ ಉತ್ಪಾದನೆಯಲ್ಲಿ ಶೀಘ್ರ ಗುಣಿಯಂಥ ಹೆಚ್ಚಳವಾಗುವಂತೆ ಒಂದು ನಿರ್ದಿಷ್ಟ ಕಾರ್ಯ ಕ್ರಮವನ್ನು ಗೊತ್ತುಪಡಿಸಿ ಕೂಡಲೇ ಕಾರ್ಯಪ್ರವೃತ್ತವಾಗಬೇಕೆಂದು ಭಾರತಯೋಜನಾ ಶಾಖೆಯವರು ರಾಜ್ಯ ಸರಕಾರಗಳಿಗೆ ಬಿನ್ನವಿಸಿರುವರು.

ಒಕ್ಕಲಿಗರಿಗೆ ಬೀಜ ಗೊಬ್ಬರ ಹಾಗು ಸಲಕರಣೆಗಳು ಸಕಾಲದಲ್ಲಿ ದೊರೆವಂತೆ ವ್ಯವಸ್ಥೆಯು ಮಾಡಬೇಕಲ್ಲದೆ ಸ್ಥಳೀಯಗೊಬ್ಬರ ಪ್ರವನಾಣವನ್ನು ಹೆಚ್ಚಿಸಬೇಕು. ಸಮಾಜವಿಕಾಸ ಯೋಜನೆಯು ತಮ್ಮ ಅಭಿವೃದ್ಧಿ ಯೋಜನೆಯು ಅಂಗವೆಂದು ರಾಜ್ಯ ಸರಕಾರಗಳು ತಿಳಿಯಬೇಕೆಂದೂ ಸೂಚಿಸಿದುವರು.

೧೯೫೨ ನೇ ಅಕ್ಟೋಬರ ತಿಂಗಳಲ್ಲಿ ಭಾರತದಲ್ಲಿ ಪ್ರಾರಂಭಿಸಲ್ಪಟ್ಟ ಸಮಾಜವಿಕಾಸ ಕೇಂದ್ರಗಳ ಪ್ರಗತಿಯ ಬಗ್ಗೆ ಸರಕಾರವು ಸಮಾಧಾನವನ್ನು ವ್ಯಕ್ತಪಡಿಸಿದೆ ಸಾಮಾನ್ಯವಾಗಿ ಒಕ್ಕಲತನ, ನೀರಾವರಿ, ದನಗಳ ಸುಧಾರಣೆ, ಶಿಕ್ಷಣ ಹಳ್ಳಿಯಲ್ಲಿ ಗಾರಿಕೆಗಳ ಅಭಿವೃದ್ಧಿ, ರಸ್ತೆ,ಮೊದಲಾದವು ಈ ಕೇಂದ್ರಗಳ ಮುಖ್ಯಜಟುವಟಿಕೆಗ



.... ಸೋಮವಾರ ೯-೩-೫೩ ....

— ಸ್ಟಾಲಿನ್ — ನಿರ್ಯಾಣ —

ರಷ್ಯಾದ ಸರ್ವಾಧಿಕಾರಿಯಾಗಿ ಕಳೆದ 30 ವರ್ಷಗಳಿಂದಲೂ ಅವಿಚ್ಛಿನ್ನವಾಗಿ ರಷ್ಯಾದ ಸರ್ವತೋಮುಖ ಪ್ರಗತಿಗಾಗಿ ಅವಿಶ್ರಾಂತ ಶ್ರಮದಿಂದ ದುಡಿದ ಸ್ಟಾಲಿನ್ ರವರು ತಮ್ಮ 73 ನೆಯ ವರ್ಷದಲ್ಲಿ ದಿವಂಗತರಾದುದು ಪ್ರಪಂಚದ ಇತಿಹಾಸದಲ್ಲಿ ಮಹತ್ವದ ಘಟನೆ. ಹಿಂದುಳಿದ ಜನಾಂಗವನ್ನೂ, ದೇಶವನ್ನೂ ಎಲ್ಲಾ ರೀತಿಯಲ್ಲೂ ಸ್ವಾವಲಂಬಿಯಾಗಿ ಮಾಡಿ, ಬಲಾಢ್ಯನಾದ ಅಮೆರಿಕಾಕ್ಕೆ ಎದುರಾಗಿ ನಿಂತ ಶಕ್ತಿಯು ಜಗತ್ತಿನಲ್ಲಿ ರಷ್ಯಾವನ್ನು ಬಿಟ್ಟರೆ ಬೇರೊಂದು ರಾಷ್ಟ್ರವಿಲ್ಲ.

ದ್ವಿತೀಯ ಮಹಾಯುದ್ಧದಲ್ಲಿ 1939-45 ರಷ್ಯಾ ಪ್ರವೇಶಿಸದಿದ್ದಲ್ಲಿ ಇಡೀ ಯೂರೋಪನ್ನು ಹಿಟ್ಲರನು ಪಾದಾಕ್ರಾಂತ ಮಾಡುತ್ತಿದ್ದನು

ಬಂಡವಾಳದ ಶಕ್ತಿಯಿರುವ ಅನೇಕರಿಗೆ ಒಂದು ಕನಸೆ. ಜನತೆಯ ಪೂರ್ಣ ಬೆಂಬಲವುಳ್ಳ ಶಕ್ತಿಯು ಮತ್ತೊಂದು ಕಡೆ ಹೀಗೆ ಪ್ರಪಂಚದಲ್ಲಿ ಉಳಿದಿರುವ ಶಕ್ತಿಗಳೇ ಎರಡು. ಜನ ಸಾಮಾನ್ಯನ ಜೀವನ ಮಟ್ಟವು ತೀರ ಕೆಳಗಿಳಿದು ಅವನು ಅವಶ್ಯಕತೆಗಳಿಗೆ ಸಮಾಧಾನಕಾಲಕ್ಷೇ ಸಮಾಧಾನಪಡುತ್ತಿರಬೇಕಾದರೆ ಅಜ್ಞಾನ, ನಿರಕ್ಷರ, ದಾರಿದ್ರ್ಯ ರೋಗಗಳಿಂದ ಜನತೆಯು ತೊಳಲುತ್ತಿರಬೇಕಾದರೆ ಸಾಮಂತಕಾರನಿಗಾಗಿ ಜೀವನವೆಲ್ಲ ಪ್ರಪಂಚದ ಪರಿಸ್ಥಿತಿಯಿರಬೇಕಾದರೆ- ರಷ್ಯಾದ ಧ್ಯೇಯ ಸೂತ್ರ-ಕಾರ್ಯ ಪ್ರಣಾಲಿಯು-ಬೆಂಕಿಯ ಜ್ವಾಲೆಯಂತೆ ಪ್ರತಿಯೊಂದು ದೇಶದಲ್ಲಿಯೂ ಹಬ್ಬುತ್ತಲಿದೆ. ನಿರುದ್ಯೋಗ ಸಮಸ್ಯೆಯು ನಿವಾರಣೆಯಾಗಿ-ಜನತೆಗೆ ಅನ್ನ ಬಟ್ಟೆಯು ದೊರಕುವ ಅವಕಾಶವನ್ನು ಯಾವಸೂತ್ರಗಳೇ ವರ್ಗ ದರ್ಶನ ಮಾಡಲಿ-ಅದನ್ನವಲಂಬಿಸುವುದು ಜನತೆಯ ಸ್ವಭಾವ.

ಕಮ್ಯೂನಿಸಂ ಹಬ್ಬುವಿಕೆಯಿಂದ ತನ್ನ ಅಸ್ತಿತ್ವವೇ ನಾಶವಾಗುವುದೆಂದು ಅಮೆರಿಕೆಯು ಅರಿತು-ಪ್ರತಿಯೊಂದು ದೇಶದವರಿಗೂ ಆರ್ಥಿಕ ಭದ್ರತೆಗಾಗಿ ಸಹಾಯವನ್ನೊದಗಿಸುತ್ತಲಿದೆ-ಇದು.

ಅನೆಯ ಹೊಟ್ಟೆಗೆ ಅರೆಕಾಸಿನ ಕೊಂತಿ ಇದ್ದಂತಿದೆ.

ಯಾವಯುದ್ಧವೂ ಇಲ್ಲದೆ ಎಂಥ ರಕ್ತ ಪ್ರವಾಹವೂ ಇಲ್ಲದೆ ಈದಿನ ಜಗತ್ತಿನ 85 ಕೋಟಿ ಜನರು ಕಮ್ಯೂನಿಸಂ ತತ್ವಕ್ಕೆ ಬದ್ಧರಾಗಿರುವ ಎಲ್ಲಾ ದೇಶಗಳಿಗೆಸೊಳಪಟ್ಟಿರುವ ಎಲ್ಲಾ ದೇಶವು ಸ್ವಾಲಿನ್‌ರದೇ ಎಂದು ಘಂಟಾಘೋಷವಾಗಿ ಹೇಳಬಹುದು ಅಹಾರ ಕಲ್ಪಿಸಲು ಎಲ್ಲೆಲ್ಲಾ-ಬಟ್ಟೆ-ರೋಗ ನಿವೀಕರಣ- ರಷ್ಯಾದ್ರಾಗಳಲ್ಲಿ ಕಳೆದ 30 ವರ್ಷಗಳೊಳಗಾಗಿ ರಷ್ಯವು ಸರ್ವ ವಿಧವಾಗಿ ಸ್ವಾವಲಂಬಿಯಾಯಿತು- ಎರಡು ಸದಿಗಳನ್ನ - ಏಷಿಯಾಖಂಡಗಳನ್ನು ಕಲೆಸುವ ಸುಲ್ಲ—ತಾನ್ ಕಾಲುವೆಯು ಪ್ರಪಂಚದಲ್ಲೇ ಅದ್ಭುತವಾದ ನೀರಾವರಿ ಯೋಜನೆ-ಇದು ನೂರಾರು ಮೈಲುಗಳ ಕಾಲುವೆಯಷ್ಟೇ ಅಲ್ಲ- ಇದರಲ್ಲಿ ಸಣ್ಣ ಸಣ್ಣ ಸ್ಟೀಮರುಗಳನ್ನೂ ಓಡಾಡಬಹುದು ವ್ಯವಸಾಯ -ವಿದ್ಯುಚ್ಛಕ್ತಿ-ವಿಜ್ಞಾನ ವಿದ್ಯಾಭ್ಯಾಸ ವಗೈರೆ ಅನೇಕ ಅಂಶಗಳಲ್ಲಿ ರಷ್ಯದಲ್ಲಿ ಆಶ್ಚರ್ಯಕರ ಪ್ರಗತಿಯಾಗಿದೆ ಅಟಾಮಿಕ್ ಬಾಂಬು-ಯೆನಾ ಅಣುಶಕ್ತಿಯು ತನ್ನ ರಹಸ್ಯ ಶಕ್ತಿಯೆಂದು ಅರಿತಿದ್ದ ಅಮೆರಿಕಾಕ್ಕೆ — ಇಂದು ರಷ್ಯದಲೂ ಅಣುಶಕ್ತಿಯಿದೆಯೆಂದು ಜ್ಞಾನೋದಯವಾಯಿತು—

ಯುದ್ಧದಿಂದ ನಾಶವು ಖಂಡಿತ-ಇದಕ್ಕಾಗಿ ಶಾಂತಿ ಇರಬೇಕು ಎಂದು ರಷ್ಯವು ಕಳೆದ 5 ವರ್ಷಗಳಿಂದ ಶಾಂತಿ ಸಮ್ಮೇಳನಗಳಿಗೆ ಪ್ರೋತ್ಸಾಹಕೊಡುತ್ತಲಿದೆ- ಅಮೆರಿಕೆಯು ಯುದ್ಧಕ್ಕಾಗಿ ಕಾಲಹೇರಿದೆ ಎಂತಿದೆ-ಸ್ಟಾಲಿನ್‌ರ ನಿರ್ಯಾಣದ ನಂತರ-ಈ ದರ ಶಾಂತಿ ಪ್ರಯತ್ನಗಳಿಗೆ ಯಾವುದೇರೀತಿಯ ಬದಲಾವಣೆಯಾಗುತ್ತದೆ, ಏತಕ್ಕಿಂದಲೇ-ಯಾವ ಆಳ್ವಿಕೆಯಲ್ಲಿ ಯೋಜನೆಯಾಗಲಿ-ಶಾಂತಿಯೆಲ್ಲವೂ-ಸಾಧ್ಯವಾಗಿದ್ದು ಈಗಿನ ಸೀಡಿತ ಜಗತ್ತಿಗೆ ಕನಿಷ್ಠ 10 ವರ್ಷಗಳ ಶಾಂತಿಯಾದರೂ ಬೇಕು ಅಮೆರಿಕಾನ್ ವ್ಯಕ್ತಿಯ ಆತ್ಮಕ್ಕೆ ಶಾಂತಿಯು ಲಭಿಸಬೇಕೆಂದು ನಾವು ಇಚ್ಛಿಸುವುದಾದಲ್ಲಿ ಯುದ್ಧರಹಿತ ಶಾಂತಿ ವ್ಯವಸ್ಥೆಗಳಿಗೆಲ್ಲ ನಾವು ಬೆಂಬಲಕೊಡಬೇಕು

ಸ್ಟಾಲಿನ್‌ರ ನಿರ್ಯಾಣಕ್ಕಾಗಿ-ಸಾಂತ್ವನ ಮೂರ್ತಿ ನೈದಾಸದಲ್ಲಿ 6-3-53 ನೆಯ ದಿನಾಂಕ-ಶ್ರೀ ಎಂ. ಸತ್ಯವಂತರಾಯರ ಧ್ಯೆಕ್ಷತೆಯಲ್ಲಿ ಮಂತ್ರಿಸೂಚಕ ಸಭೆಯು ಸಮಾವೇಶವಾಗಿದ್ದಿತು.

ಮಾನ್ಯ ಶ್ರೀ ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 14/53

ತೆಗ್ಗಿನಹೇರಿ ಮರದ ಚನ್ನಬಸಯ್ಯ, ತಂದೆ ಕೊಟ್ರಯ್ಯ 50 ವರ್ಷ | ವಾದಿ.
ಲಿಂಗಾಯಿತ, ಜಿರಾಯಿತ, ಚಿಲುಗೋಡು, ತಾಲೂಕು ಹಡಗಲಿ. |

ಪ್ರತಿವಾದಿಗಳು :—

1) ಕೋರಿ ಕರಿಯಪ್ಪ ತಂದೆ ಕರಿ ಬಸಪ್ಪ, ಮೇಜರು, ಕುರುಬ, ಜಿರಾಯಿತ.
2) ಕಾಳಿ ಕರಿಯಪ್ಪ, ತಾಯಿ ಗಂಗಮ್ಮ, ಮೇಜರು ಜಲವಾದಿ ಕುಲ, ಜಿಗಾಯಿತ್ತಿ.
[ಇಬ್ಬರೂ ಸಾ|| ಚಿಲುಗೋಡು, ತಾಲೂಕು ಹಡಗಲಿ]

ತಾ. 2-6-51 ನೆಯ ತಾರೀಖಿನಲ್ಲಿ ವಾದಿ ಹೆಸರ್ಲ ಪ್ರತಿವಾದಿಗಳು ರೂ 550 0-0 ಕ್ಕೆ ಬರೆಸಿಕೊಟ್ಟ ಪ್ರಾಮಿಸರಿ ನೋಟಿನ ಮೇಲೆ ರೂ. 580-0-0 ಕ್ಕೆ ದಾವಾ ಮಾಡಿರುತ್ತಾರೆ. ಈ ಮುಂಜೆ 1 ನೇ ಪ್ರತಿವಾದಿ ಎಕ್ಸ್‌ಪಾರ್ಟಿಯಾಗಿರುತ್ತಾನೆ- ಎರಡನೆಯ ಪ್ರತಿವಾದಿಯು ಹಾಜರಾಗಿ ವಾಯ್ದೆ 20-3-53 ಕ್ಕೆ ಇರುತ್ತದೆ. ಅದಿನ ಎರಡನೆಯ ಪ್ರತಿವಾದಿಗೇನಾದರೂ ತಕರಾರು ಇದ್ದಲ್ಲಿ ಸ್ವತಃ ಆಗಲಿ, ವಕೀಲರ ದ್ವಾರ ವಾಗಲಿ ಹಾಜರಾಗಿ ತನ್ನ ಅಪ್ಲೇಷಣೆ ತಿಳಿಸಬೇ ತಪ್ಪಿದಲ್ಲಿ ಎಕ್ಸ್‌ಪಾರ್ಟಿ ಡಿಸ್ಮಿ ಮಾಡೋಣವಾಗುತ್ತದೆ.

ಹೊಸಪೇಟೆ |
4-3-53 |

ಟಿ. ಹೆಚ್. ಎಂ. ಶ್ರೀಕರಯ್ಯ
ಟಿ. ಹೆಚ್. ಎಂ. ಶಿದ್ದಯ್ಯ
ವಾದಿ ವಕೀಲರು

ಆದವಾನಿ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. S. 9/51 E.P. 128/52.

ನಾರಾಯಣಮ್ಮ ಪೈನರು ನಿಗೇವಾನಿ ತಾಯಿ, ಹನುಮಕ್ಕ ಸಾ॥ ಆದವಾನಿ. — D H. ಡಿಕ್ರಿ ಹೋಲ್ಡರ್.

and

ದೇವರೆಡ್ಡಿ ಸಾ॥ ವಂದಗಲ್ಲು, ಆದೋನಿ ತಾಲೂಕು ||J. D. ತೀರ್ಪಿನ ಸಾಲಗಾರ

.... ಹೆಡ್ಯೂಲು ....

ಬಳ್ಳಾರಿ ಜಿಲ್ಲಾ ಆದವಾನಿ ತಾಲೂಕು 136 ಪಂದಗಲ್ಲು ಗಾನುದಲ್ಲಿರುವ ಆಸ್ತಿಗಳ ವಿವರ

1) **ಹೊಲ** :— ಸರ್ವೇ ನಂಬರು 193 ವಿಸ್ತೀರ್ಣ 4 ಎಕರೆ 70 ಕಂಟು.
ತರಂ :- 5-5-0 ಸರ್ಕಾರು ಇಂಜಿ

2) **ಮನೆ**:— ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ವುರುಕುಂದ ಯಾಟ್ಲಯ್ಯನ ಮನೆ, ಉತ್ತರಕ್ಕೆ ಲಂಕಾ ಸೂಗಯ್ಯ ನರಸಾರೆಡ್ಡಿ ಇವರ ಮನೆಗಳು. ದಕ್ಷಿಣಕ್ಕೆ ಕರಣಂ ಅಳ್ಳಯ್ಯನ ಮನೆ. ಪೂ. ಪ. 12 ಗಜ. ಉ ದ. 5 ಗಜ.

ಈ ಆಸ್ತಿಗಳು 17-4-53 ರ ದಿನ ಬಹಿರಂಗವಾಗಿ ಯಾಲಂ ಹಾಕಲ್ಪಡುತ್ತವೆ. ಕೊಳ್ಳಲಿಚ್ಛಿಸುವವರು ಡಿಕ್ರಿದಾರನ ಸಾಲಕ್ಕೊಳಪಟ್ಟು ಯಾಲಂನಲ್ಲಿ ಭಾಗವಹಿಸಬಹುದು.

ಶಿ.ಶ್ರೀನಿವಾಸರಾವ್
ಅಡ್ವೊಕೇಟ್.

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸೀಫರ ಕೋರ್ಟ್ ನಲ್ಲಿ

S. C. 611/52.

ಕುರಿ ಹನುಮಂತ ತಂದೆ ಭೀಮಪ್ಪ, ವಯಸ್ಸು 35, | ವಾದಿ.
ಗೊಲ್ಲರು ಜರಾಯ್ತಿ, ಕುರುಗೋಡು, (ಬಳ್ಳಾರಿ ಜಿಲ್ಲೆ) |

— Vs —

1 ದೊಡ್ಡ ತಿಪ್ಪಮ್ಮ ವಯಸ್ಸು 25, ರಾಯರುಗಳು. |
2 ಸಣ್ಣ ತಿಪ್ಪಮ್ಮ ವಯಸ್ಸು 24. | ಪ್ರತಿ
3 ದೊಡ್ಡ ಬಸಮ್ಮ ವಯಸ್ಸು 20. | ವಾದಿ
[ಇವರೆಲ್ಲ ಕೂಲಿಕಾರರಿದ್ದು ನಕ್ಕಲ ತಿಮ್ಮಪ್ಪನ ಮಕ್ಕಳು] | ಗಳು.

ಪ್ರತಿವಾದಿಗೆ ನೋಟೀಸು

ಮೇಲ್ಕಾಣಿಸಿದ ದಾವೆಯು ನಿಮ್ಮ ಹಾಜರಿಗಾಗಿ 11-3-53 ಕ್ಕೆ ಪಾಯ್ಸಿ ಹಾಕಲಾಗಿದೆ. ಆ ದಿನ ನೀವು ಕೋರ್ಟಿನಲ್ಲಿ ಖುದ್ದಾಗಲಿ, ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸದಿದ್ದರೆ, ದಾವೆಯ ಏಕಪಕ್ಷ ನಿರ್ಣಯವಾಗುವದು.

ಯು॥. ಗುರುರಾಜರಾವು ಬಿ. ಎ. ಬಿ. ಎಲ್
ವಾದಿಯ – ಅಡ್ವೊಕೇಟ್

ಜಾಫರುಲ್ಲಾರ ವಿರುದ್ಧ ಚಳವಳಿ
೧೨೨ ಜನರ ಬಂಧನ

ಕರಾಚಿ ....ಪಾಕಿಸ್ತಾನ ವಿದೇಶ ಮಂತ್ರಿಯ ವಿರುದ್ಧ ಪಾರಂಭವಾದ ಧರ್ಮಗುರುಗಳ ಮತಪ್ರದರ್ಶನದ ಎರಡನೆಯ ದಿನವಾದ ಇಂದು ಪೋಲೀಸರು ಹಲವು ಮೋಟರ ಲಾರಿಗಳಲ್ಲಿ ತುಂಬಿ ಘೋಷಿಸುತ್ತ ಬಂದ ಅನೇಕ ಮತಪ್ರದರ್ಶಕರನ್ನು ತಡೆದುರಿಸಿದರು.

ನಿನ್ನೆ ೭೫ ಜನರು ಬಂಧನವಾಗಿದ್ದು ಇಂದು ಸಹ ಅನೇಕರು ಕೈದು ಮಾಡಲ್ಪಟ್ಟರುತ್ತಾರೆ.

ಮತಪ್ರದರ್ಶಕರ ಚಿಕ್ಕ ಗುಂಪುಗಳು ಅಲ್ಲಲ್ಲಿ ಜೀದಿಗಳಲ್ಲಿ ಹೊರಟಿದ್ದವು ಪೋಲೀಸರು ಮತ್ತು ಸೈನಿಕರು ಮುಂಜಾಗ್ರತೆಗೆಂದು, ಆಯಕಟ್ಟಿನ ಸ್ಥಳಗಳಲ್ಲೆಲ್ಲ ಕಾವಲು ನಿಂತಿದ್ದರು.

ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಫುಹಮ್ಮದ ಜಾಫರುಲ್ಲಾ ಖಾನರ 'ಧರ್ಮನಿಷ್ಠೆ ಮುಸಲ್ಮಾನೇತರ ಅಲ್ಪ ಸಂಖ್ಯಾತ ಪಂಗಡದವರಿರುವದರಿಂದ ಅವರನ್ನು ಕೆಲಸದಿಂದ ಕಿತ್ತಿ ಹಾಕಬೇಕೆಂದು ಈ ಜನರ ಬೇಡಿಕೆ ಇರುತ್ತದೆ. ಧರ್ಮನಿಷ್ಠ ಮುಸಲ್ಮಾನರಲ್ಲಿ ಅನೇಕರು ಈ ತರವ ಬೇಡಿಕೆ ಪಾಪಂಡಿತ ನವೆಂದು ನಿಷೇಧಿಸಿರುವರು.

ಅಖಿಲ ಮುಸ್ಲಿಂಪಕ್ಷಗಳ ಪರಿಷತ್ತು ನಿನ್ನೆಯಿಂದ ಈ ಚಳವಳಿಯನ್ನು ಪ್ರಾರಂಭಿಸಿರುವದು. ಅದರ ಕೈಯಾ ಸಮಿತಿಯು ಸದಸ್ಯರಾದ ೧೫ ಜನ ಮುಲ್ಲಾರು ಚಳವಳಿ ಪ್ರಾರಂಭವಾಗುವ ಮೊದಲೇ ಬಂಧಿಸಲ್ಪಟ್ಟಿರುವರು.

ಪೊದಲನೆಯ ದಿನ ಗವರ್ನರ ಜನರಲ್ ಹಾಗೂ ಪ್ರಧಾನ ಮಂತ್ರಿಗಳ ಮನೆಯ ಮುಂದೆಯೇ ಮತ ಪ್ರದರ್ಶನ ನಡೆದರೆ ಇಂದು ಅಲ್ಲಿ ಏನೂ ಇದ್ದಿಲ್ಲ. ಆಸ್ಥಳಗಳಲ್ಲಿ ಪೋಲೀಸರ ಕಾವಲು ಬಿಗಿಯಾದ್ದಿತು

ಇಂದು ಮುಂಜಾನೆ ೧೫೫ ಮತಪ್ರದರ್ಶಕರು ಕೈದು ಮಾಡಲ್ಪಟ್ಟಿರುತ್ತಾರೆ ಇವರು ನಗರವಲ್ಲಿ ಇಂದು ಹರತಾಳ ಮಾಡಿಸಲು ಪ್ರಯತ್ನಿಸಿದರು. ಆದರ ಶಕ್ಯವಾಗಲಿಲ್ಲ.

ಈ ಚಳವಳಿಗೆ ಗುರಿಯಾದ ಸರ್ ಮುಹಮ್ಮದ ಜಾಫರುಲ್ಲಾ ಖಾನರು ಇಂದು ರಾತ್ರಿ ಇರಾಕಿಂದ ಇಲ್ಲಿಗೆ ಮರಳಿ ಬರಲಿರುವರು.

ಲಾಹೋರಿದಲ್ಲಿ ಇಂದು ನಮೂನೆಯಲ್ಲಿ ಮಿಮ ಜನ ಪ್ರಮುಖ ಮೌಲ್ವಿಗಳು ಬಂಧಿಸಲ್ಪಟ್ಟಿರುವರು.

ಈ ಧರ್ಮ ಗುರುಗಳ ಬಂಧನದ ನಿಮಿತ್ತ ಇಂದು ಲಾಹೋರದಲ್ಲಿ ಅರ್ಧಮರ್ಧ ಹರತಾಳವಾಗಿರುತ್ತದೆ.

೫೫ ಜನರ ತಂಡವೊಂದು ಸರಕಾರಿ ಭವನದ ಕಡೆಗೆ ಹೋದಾಗ ನಗರದ ವಾತಾವರಣವು ನಾಲ್ಕು ತಾಸು ಗಂಭೀರವಾಗಿದ್ದಿತು. ಅಸೆಂಬ್ಲಿ ಭವನದ ಹತ್ತರ ಸರಪ್ಪ ಪೋಲೀಸರು ಅವರನ್ನು ತಡೆದು ಬಂಧಿಸಿದರು ಪೋಲೀಸರು ಅವರನ್ನು ಕರೆದು ಕೊಂಡು ಹೋದ ನಂತರ ಸುಮಾರು ಒಂದು ಲಕ್ಷ ಜನರು ಬೀದಿ ಗುಂಟೆ ನಡೆದು ಜಾಫರುಲ್ಲಾ ಖಾನರ ವಿರುದ್ಧ ಘೋಷಣೆ ಮಾಡಿದರು. ನಂತ್ರ ಗುಂಪು ನಗರದ ವ್ಯವಹಾರವು ಕಟ್ಟಾಗಿದ್ದಿತು.

ಇಚ್ಛಾ ಪ್ರಕಾರ ರೈಲ್ವೆ ಪ್ರಯಾಣ

ಬರುವ ಏಪ್ರಿಲ್ ತಿಂಗಳಲ್ಲಿ ಭಾರತದ ರೈಲ್ವೇ ಕ್ಷೇತ್ರಗಳನ್ನು ಏಳು ಭಾಗಗಳಾಗಿ ವಿಂಗಡಿಸಿ ಒಂದೊಂದು ಭಾಗದಲ್ಲಿ 14 ದಿನಗಳವರೆಗೆ ಇಚ್ಛಾಪ್ರಕಾರ ಪ್ರಯಾಣ ಮಾಡಲು 30/- ರೂ. ನಿಶ್ಚಯಿಸಿದೆ.

ಏಕೆ? ಹಿಂದಿನ ಕಾಲದ ದನಗಳು ಈಗಿಗಿಂತಲೂ ಒಳ್ಳೆಯವಿದ್ದವು.

ನಮ್ಮ ಪೂರ್ವಜರ ದನಗಳು ಈಗಿನ ನಮ್ಮ ದನಗಳಿಗಿಂತ ಬಹಳ ಒಳ್ಳೆಯವಿದ್ದವು" ಎಂಬ ಮಾತನ್ನು ಅನೇಕ ಜನರ ಬಾಯಿಂದ ಕೇಳುತ್ತೇವೆ. ಅದು ಹೇಗ? ಕೇವಲ ಯೋಗಾಯೋಗವೆ? ದನಕರುಗಳ ತಳಿ, ಆಹಾರ, ಉಪಚಾರ ಇತ್ಯಾದಿ ವಿಷಯಗಳಲ್ಲಿ ಈಗಿರುವ ಶಾಸ್ತ್ರೀಯ ಜ್ಞಾನ ಹಿಂದಿನವರಿಗಿರಲಿಲ್ಲ ಅಂದ ಬಳಿಕ ಪರಿಸ್ಥಿತಿ ತೀರ ಏರುದ್ದ ವಿರಬೇಕಾಗಿತ್ತು: ಆಗ ಸಂಕ್ಯೆಂತ ಈಗ ದನಗಳು ಹೆಚ್ಚು ಒಳ್ಳೆಯ ವಿರಬೇಕಾಗಿತ್ತು ಆದರೂ ನಮ್ಮ ಪೂರ್ವಜನ ದನಕರುಗಳು ಅದೆಂತು ಹೆಚ್ಚು ಗಟ್ಟಿಮುಟ್ಟಾಗಿದ್ದವು? ಶತಮಾನಗಳಿಂದ ಅವರು ತಳಿಯ ಶುದ್ಧತೆಯನ್ನು ಹೇಗೆ ಕಾಪಾಡಿಕೊಂಡು ಬಂದರು?

ಹಿಂದಿನ ಕಾಲದಲ್ಲಿ ಅನುಸರಿಸಲಾಗುತ್ತಿದ್ದ ಪಶುಸಂಗೋಪನ ಪದ್ಧತಿಯನ್ನು ಕುರಿತು ವಿವರಿಸುವದು ಮನೋರಂಜಕವೆನಿಸಬಹುದು. ಮೂಲದಲ್ಲಿ, ದನಸಾಕುವವರು ಒಂದೇ ಸ್ಥಳದಲ್ಲಿ ವಾಸವಾಗಿರುತ್ತಿರಲಿಲ್ಲ. ಅವರು ತಮ್ಮ ದನಗಳ ಹೊಡ್ಡ ಹಿಂಡುಗಳೊಡನೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ನೀರು ಮೇವುಗಳ ಅಸರವನ್ನು ಅರಸುತ್ತ ತರುಗಾಡುತ್ತಿದ್ದರು. ಮಳೆಗಾಲದಲ್ಲಿ ಕೂಡ ತಮ್ಮ ಸಂಚಾರವನ್ನು ಅವರು ಮುಂದುವರಿಸುತ್ತಿದ್ದರು. ತಮ್ಮ ಹಿಂಡಿನ ಶುದ್ಧತೆ ಹಾಗು ಹೋರಿಯ ಶಕ್ತಿಯ ವಿಷಯದಲ್ಲಿ ಅವರು ಬಹಳ ದಕ್ಷತೆ ವಹಿಸುತ್ತಿದ್ದರು ಅವರು ಎಂದು ತಾಣದಿಂದ ಇನ್ನೊಂದೆಡೆಗೆ ತೊಟ್ಟಾಗ ಹಿಂಡಿನಲ್ಲಿಯ ಅಶಕ್ತ ಹಾಗು ಅನಾರೋಗ್ಯವಿದ್ದ ದನಕರುಗಳನ್ನು ಸ್ವಾಭಾವಿಕವಾಗಿಯೇ ಹಿಂದೆಬಿಟ್ಟು ಹೋಗುತ್ತಿದ್ದರು. ಹೀಗಾಗಿ ಅವರಿಗೆ ತಳಿಯಾಳೆಯದೆಯೆ ಕೇವಲ ಸಶಕ್ತ ಹಾಗು ಉತ್ತಮ ದನಗಳನ್ನಷ್ಟೆ ಆರಿಸಿ ಸಾಕುವ ಕಾರ್ಯ ತಂತಾನೇ ನಡೆದು ಹೋಗುತ್ತಿತ್ತು. ಇದಲ್ಲದೆ ಈ ದನಗಳು ಒಂದೇ ಸವನೆ ತಿರುಗುತ್ತಿರುವದರಿಂದ ದಾರಿಯಲ್ಲಿ ಸಿಕ್ಕೆ ಬೇರೆ ಬೇರೆ ಬಗೆಯ ಹುಲ್ಲು ಸೊಪ್ಪು ಮೇವುಗಳು ದೊರೆತು ವಿವಿಧ ಬಗೆಯ ಖನಿಜಮತ್ತೂ ಆಹಾರ ಸುಲಭವಾಗಿ ದೊರೆಯುವಂತಾಗುತ್ತಿತ್ತು. ಈ ಎಲ್ಲ ಕಾರಣಗಳ ಮೂಲಕ ಪಶುಸಂಗೋಪನ ವ್ಯವಸಾಯಿಗಳು ಸಾಕಿದ ದನಗಳು ಸೈತರ ಮನೆಗಳಲ್ಲಿ ಯೋಗ್ಯ ಸಂಗೋಪನ ತಂತ್ರದ ಅರಿವಿಲ್ಲದೆ ಸಾಕಿದ ದನಗಳಿಗಿಂತ ಶ್ರೀಮತ್ತರವಾಗಿ ಎತ್ತಿದ್ದವು.

ಪೂರ್ವಕಾಲದಲ್ಲಿ ಭಾರತದ ಕೆಲ ಭಾಗಗಳಲ್ಲಿ ಊರಿಗೊಂದು ಬ್ರಾಹ್ಮಣಿ ಹೋರಿಯನ್ನಿಡುವ ಪದ್ಧತಿ ರೂಢಿಯಲ್ಲಿತ್ತು, ಇದರಿಂದಲೂ ತಳಿ ಸುಧಾರಣೆಗೆ ಎಷ್ಟೊ ಮಟ್ಟಿಗೆ ಸಹಾಯವಾಗುತ್ತಿತ್ತು. ಊರಲ್ಲಿಯ ಯಾರೊಬ್ಬರ ಹೆಸರಿನಿಂದ ಈ ಹೋರಿಯನ್ನು ಇಡಲಾಗುತ್ತಿತ್ತು. ಅದರೂ ಅದು ಇಡಿ ಹಳ್ಳಿಯ ಸೊತ್ತಾಗಿ ಉಳಿಯುತ್ತಿತ್ತು.

ಭಾರತದಲ್ಲಿ ದನಕರುಗಳ ಈಗಿನ ಅವನತ ದೆಸೆಗೆ ಅನೇಕ ಕಾರಣಗಳವೆ. ಒಂದು ಕಾಲಕ್ಕೆ ಅತ್ಯಂತ ಸಾಮರ್ಥ್ಯಶಾಲಿಯಾದ ಪಂಚಾಯತ ಪದ್ಧತಿಯು ಕಾಲಕ್ರಮದಲ್ಲಿ ಕಣ್ಮರೆಯಾಗತೊಡಗಿತು. ಜನಸಂಖ್ಯೆ ಹೆಚ್ಚುತ್ತ ನಡೆದಂತೆ ಆಹಾರ ಬೆಳೆಗಳಿಗಾಗಿ ಹೆಚ್ಚಚ್ಚು ಭೂಮಿ ಸಾಗಾಗಿಸೊಡಗಿತು. ತತ್ಪರಿಣಾಮವಾಗಿ ಹುಲ್ಲು ಗಾವಲುಗಳು ಕತಿಮೆಯಾಗತೊಡಗಿದವು. ಹುಲ್ಲು ಹಾಗು ಮೇವುಗಳಿಗಿಂತ ದೊಸ್ತರವಾದ ಬೆಳೆಗಳಿಗೆ ಜನರು ಮಹತ್ವ ಕೊಡಲಾರಂಭಿಸಿದರು. ಆಳಿಗಿಂತ ಎಮ್ಮೆಗಳು ಹೆಚ್ಚು ಜನಪ್ರಿಯವಾಗಹತ್ತಿದವು. ಅರಣ್ಯಗಳಲ್ಲಿ ಮೇಯಿಸುವಿಕೆಗೆ ನಿರ್ಬಂಧಗಳು ಬಂದವು. ಬರಗಾಲಗಳು ಮೇಲಿಂದ ಮೇಲೆ ಬೆನ್ನು ಹತ್ತಿದವು. ಪಶುವೈದ್ಯಕೀಯ ನೆರವು ಸುಲಭವಾಗಿ ದೊರೆಯುತ್ತಿರಲಿಲ್ಲ ಇಂಥ ಹಲವಾರು ಕಾರಣಗಳಿಂದ ನಮ್ಮ ದನಕರುಗಳು ಹೀನ ದೆಸೆಗಿಳಿದವು ಹಿಂದಿನ ಕಾಲದ ಸಂಚಾರಿ ಪಶುಸಂಗೋಪಕರು ಮೆಲ್ಲನೆಮೆಲ್ಲನೆ ಮಾಯವಾದರು

ನಮ್ಮ ಪೂರ್ವಜರ ಕಾಲಕ್ಕೂ ನಮ್ಮ ಕಾಲಕ್ಕೂ ಇರುವ ಇಂಥ ಅನೇಕ ಅಂತರಗಳನ್ನು ನಾವು ಮರೆಯುತ್ತೇವೆ. ಇವನ್ನೆಲ್ಲ ನಾವು ಗಮನಿಸಬೇಕು. ನಿಜ ಪರಿಸ್ಥಿತಿಯನ್ನು ಕಣ್ಣಿದೆರೆದು ನೋಡಬೇಕು ತಳಿಯ ಆಯ್ಕೆಯಲ್ಲಿ ದಕ್ಷತೆ ವಹಿಸಿ, ಕುಬ್ಜ ಹೋರಿಗಳನ್ನು ಕಸಿವಾಡಿ ತಳಿಯ ಶುದ್ಧತೆಯನ್ನು ಕಾಯಲು ಪ್ರಯತ್ನಿಸಬೇಕು ಶುದ್ಧ ತಳಿಯ ಬೀಜದ ಹೋರಿಗಳನ್ನು ಸಾಕಬೇಕು. ನಮ್ಮ ಭೂಮಿಯ ಕೆಲವೊಂದು ಭಾಗವನ್ನಾದರೂ ಮೇವಿಗಾಗಿ ಮೀಸಲಿಟ್ಟು ದನಕರುಗಳಿಗೆ ಸರಿಯಾಗಿ ಆಹಾರ ದೊರೆಯುವಂತೆ ನೋಡಿಕೊಳ್ಳಬೇಕು. ಇಲ್ಲವಾದರೆ ನಮ್ಮ ಅಸಂಖ್ಯ ದನಕರುಗಳು ನಮಗೆ ನಿರುಪಯೋಗಿಯಾಗಿಯೂ ಭೂಮಿಗೆ ಭಾರವಾಗಿಯೂ ಉಳಿಯುವದರಲ್ಲಿ ಸಂಶಯವಿಲ್ಲ.

ಶ್ರೀ ಭಾರದ್ವಾಜರ ನಿಧನ

ಸುಪ್ರಸಿದ್ಧ ಕನ್ನಡ ಸಾಹಿತಿಗಳೂ ಆಯುರ್ವೇದ ವಿಕಾರದರೂ ಆದ ಶ್ರೀ. ದತ್ತಾತ್ರೇಯ ಕೃಷ್ಣ ಭಾರದ್ವಾಜರು ಮೊನ್ನೆ ರವಿವಾರ ಶಾ. ೨೨ ರ ಮುಂಜಾನೆ ಬೆಂಗಳೂರಲ್ಲಿ ತೀರಿಕೊಂಡರೆಂದು ತಿಳಿಸಲು ವಿಷಾದವೆನಿಸುತ್ತದೆ.

ಶ್ರೀ ಭಾರದ್ವಾಜರನ್ನರಿಯದ ಕನ್ನಡಿಗರಿಲ್ಲ. ರೋಗ ಚಿಕಿತ್ಸೆ, ಸಮಾಜ ಸೇವೆ, ಸಾಹಿತ್ಯ ಸೇವೆಯೇ ಮೊದಲಾದವುಗಳ ಮೂಲಕ ಅವರು ಕನ್ನಡರ ಹೃದಯವನ್ನೇ ಆಕರ್ಷಿಸಿದ್ದರು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯನ್ನೀಯಲಿ.

ಕಾಂಗ್ರೆಸ್-ಪ್ರಜಾಸೋಶಲಿಸ್ಟ ಐಕ್ಯ

ಕೇಂದ್ರ ಹಾಗೂ ಪ್ರಾಂತಿಯ ಸರಕಾರಗಳೊಡನೆ ಸಹಕರಿಸುವ ಕುರಿತಾಗಿ, ಪ್ರಜಾ-ಸೋಶಲಿಸ್ಟ್ ಪಕ್ಷದ ಕೆಲ ಮಂದಿ ಧುರೀಣರು ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರೂ ಹಾಗೂ ಪ್ರಧಾನ ಮಂತ್ರಿಗಳೂ ಆದ ನೆಹರೂರವರೊಡನೆ ವಿಚಾರ ವಿನಿಮಯ ನಡೆಸಿದರೆಂದು ತಿಳಿದುಬರುತ್ತದೆ. ಆಚಾರ್ಯ ಕೃಪಲಾನಿ, ಜಯಪ್ರಕಾಶ ನಾರಾಯಣ, ಅಶೋಕಮೇಥಾ ಆಚಾರ್ಯ ನರೇಂದ್ರದೇವ್, ಡಾ। ಲೋಹಿಯ ಮೊದಲಾದವರು ದೆಹಲಿಯಲ್ಲಿ ಸಮಾವೇಶವಾಗಿದ್ದರು

ಆಂಧ್ರದ ಧುರೀಣ ಶ್ರೀ. ಟಿ. ಪ್ರಕಾಶಂ ರವರೂ ದಕ್ಷಿಣದ ಕೆಲ ಮಂದಿ ಧುರೀಣರೊಡನೆ ಈ ಕುರಿತು ನಿಜಾರ ವಿನಿಮಯ ನಡೆಸಿದನಂತರ ದೆಲ್ಲಿಯಲ್ಲಿ ಕೃಪಲಾನಿ, ಜಯ ಪ್ರಕಾಶರನ್ನು ಕಂಡುಬಂದರು.

ತಾರಾಸಿಂಗರ ಬಂಧನ

ಪಂಜಾಬಿನ ಅಕಾಲಿ ದಳದ ಮುಂದಾಳು ಶ್ರೀ। ತಾರಾಸಿಂಗರನ್ನು ಶಾ. ೨೪ ರಂದು ಬಂಧಿಸಲಾಯಿತು. ಸಾರ್ವಜನಿಕ ಶಾಂತಿಗೆ ಜರಗದಂತೆ, ಜಾರಿ ಮಾಡಲಾಗಿದ್ದ ಗಲಭೆಯ ನೆಯ ಪ್ರಕರಣವನ್ನು ಮುರಿದುದೇ ಅವರ ಮೇಲಿನ ಆಪಾದನೆ. ತಾರಾಸಿಂಗರ ಜತೆಗೆ ಅಕಾಲಿ ದಳದ ಬೇರೆ ಕೆಲವರನ್ನೂ ಬಂಧಿಸಲಾಗಿದೆ.

ಹ್ಯಾಂತಗಳಿಗೆ ಕೇಂದ್ರದ ಸಾಲ

ಕೃಷಿಕರಿಗೆ ಅಲ್ಪಾವಧಿಯ ಸಾಲಕೊಡುವದಕ್ಕಾಗಿ ಕೇಂದ್ರ ಸರಕಾರವು ರೂ. ಎರಡು ಕೋಟಿಯ ಸಾಲ ಕೊಡಲಿದೆ. ಇದರಲ್ಲಿ ಒಂದು ಕೋಟಿ ರೂಪಾಯಿ

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :— ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ನೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4—8—0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

ಬಳ್ಳಾರಿ ಪ್ರಭಾತದಲ್ಲಿ

5-3-53 ರಿಂದ

ಜೆಮಿನಿಯವರ ಅಮೋಘ ಒಂದೀ ಚಿತ್ರ

★ ಶ್ರೀ ಸಂಪತ್ ★

* *MR. SAMPAT* * [HINDI]

ತಾರಾಗಣ :— ಮೋತಿಲಾಲ್, ಆಗ, ಬದರಿ ಪ್ರಸಾದ್, ಪದ್ಮಿನಿ, ವನಜ,

Matinee at PRABHAT

7 Days Matinee From 6-3-53

20th Century Fox presents

★ **Anna of the Indies** ★

IN GORGEOUS - TECHNICOLOR

Fea:— Jean peters. Louis jourdan. Debra paget.

Out of the wrath and fury of the Seven seas! from the buried treasures of a fabulous era comes the dashing adventure the real life story of history's boldest PIRATE QUEEN!

Rates as usual for Matinee

ಯುವಕನಾಗಿದ್ದ ಮುದುಕಿ

ಮೆಕ್ಸಿಕೋದ ಪತ್ರಿಕೆಗಳಲ್ಲಿ. ಒಬ್ಬ ಹುಡುಗಿ ಹುಡುಗನಾಗಿ ಬಂದಿತು. ಜನರೆಲ್ಲ ಬೆರಗಾಗಿದಂತೆ ಆನಂದಾರವನ್ನು ಮಾತಾಡಿಕೊಳ್ಳ ತೊಡಗಿದರು. ಈಹುಡು ಯ ತಾಯಿ ಮೇರಿಯಾ ಗಂಯೆಲ್ಲ ಅನ್ನು ಜ್ಞ ಆರಿತಿದ್ದಾಗಿ. ಆಕೆಯ ಸುಗ್ಗ ಳನ್ನು ಜನ ಆರಿತಿದ್ದರು ಈಗ ಆ ಹುಡುಗಿಗೆ ೨೨ ವರ್ಷ ತಾಯಿ ಮೇರಿಯಾಳು "ನನ್ನ ಮಗಳು ಗಂಡಸಾಗುತ್ತಿದ್ದಾಳೆ. ಆಕೆಗೆ ಒಂದು ಶಸ್ತ್ರ ಚಿಕಿತ್ಸೆ ಮಾಡಿಸಲಿದ್ದೇನೆ." ಎಂದು ಹೇಳಿದ್ದನ್ನು ಜನ ನಂಬಿದರು. ಆದರೆ ಈಗ ಇವರ ಎಟ್ಟು ಮೊರಬಿದೆ ತನಗೆ ಮಗಳು ಬೇಕೆಂಬ ಆಶೆ ಒಳಪ್ಪೆಗಿ ಇಷ್ಟವಿಂದ ಹುಟ್ಟಿದ್ದ ಮಗನಿಗೆ ತಾನು ಮಗಳ ಉಡುಪು ತೊಡಿಸಿ ಬೆಳೆಸಿದ್ದೆನೆಂದೂ-ಶಸ್ತ್ರ ಚಿಕಿತ್ಸೆಯಮಾಡುವೇಸದ್ದಿಗೂ ಮೇರಿಯಾ ಈಗ ಒಪ್ಪಿ ಕೊಂಡಿದ್ದಾಳೆ.

ಅಮೇರಿಕೆಯಲ್ಲಿ ಹೊಸ ಸೈನ್ಯ

ಅಮೆರಿಕೆಯಲ್ಲಿ ಹೊಸದೊಂದು ಸೈನ್ಯ ರಚಿತವಾಗಿದ್ದು ಅದರಮೂಲಕ ಒಂದು ಚಳವಳಿ ದೇಶಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬತೊಡಗಿದೆ. ಈ ಸೈನ್ಯದ ಹೆಸರು "ಇಫ್ಲಾಟ್ಸ್" ಎಂದಿದೆ. ಈ ಹೆಸರು ಈ ಈ ಸೈನ್ಯದವರ" ಕರಗಳ ಪಿಠವಿದ್ದ ನಾನು ಬೊಬ್ಬಿಡುವೆ ಎಂಬ ಯುದ್ಧ ಘೋಷಣೆಯಿಂದ ಬಂದಿದೆ. ಈ ಸೈನ್ಯದವರು ಕಾಂಗ್ರೆಸ್ ಮತ್ತು ಸ್ಥಳಿಕ ಸಂಸ್ಥೆಗಳ ಕರಗಳನ್ನು ಶುದ್ಧಿಗೊಳಿಸುವಂತೆ ಮಾಡಲು ಚಳವಳಿ ನಡೆಸಿದ್ದಾರೆ ಇವರ ಕಾರ್ಯಕ್ರಮದ ಅಂಗವಾಗಿ ಅಂಗಡಿ-ಕಾರರು ಮತ್ತು ಅಂಗಡಿಗಳ ಎದುರು ಪ್ರತಿ ಒಂದು ವಸ್ತುವಿನ ಮಾರಾಟದ ಬೆಲೆಯಲ್ಲಿ ಕರ ರೂಪದಲ್ಲಿ ಎಷ್ಟು ಸರಕಾರಕ್ಕೆ ಹೋಗುತ್ತದೆ ಎಂಬುದನ್ನು ತೋರಿಸುವ ಸಕಾರಗಳನ್ನು ತೂಗಹಾಕಿದ್ದಾರೆ; ಪ್ರತಿನಿಧಿಗಳು ಸಾರ್ವಜನಿಕ ಭಾಷಣ ಮಾಡುತ್ತಿದ್ದಾರೆ; "ಇಫ್ಲಾಟ್ಸ್" ಸೈನ್ಯಕ್ಕೆ ಜನ ಸಾವಿರಾರು ಸಂಖ್ಯೆಯಲ್ಲಿ ಸೇರಿದೆ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

To 9-3-53

Sri.

ಚಂದಾದರರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

Edited Printed & Published by T. B Keshava Rao, at Nava Bharath Press, Bellary.

ನಂ.ಪ್ರಕಟಣೆ.10

ಸಮಾಜ ಕಲ್ಯಾಣ

1953-54.

ಪ್ರಕಟಣೆ ದಿನಾಂಕ 16-3-53

ಪುಟಗಳು 1 ರಿಂದ 46.

ಬೆಲೆ ರೂ. 1-8-0.

ಮುದ್ರಣ 7.16.17.ಸಾವಿರ

ಪ್ರತಿಗಳು 1 ರಿಂದ 208

ನವಚೈತನ್ಯ

ಸೋಮವಾರ
ಮಾರ್ಚಿ
೧೬--೧೯೫೩

ವರ್ಷ 16 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ 1 | ಉತ್ಥಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!! | ಟಿ.ಬಿ. ಕೇಶವರಾವು

ಬಳ್ಳಾರಿ ಪ್ರಭಾತದಲ್ಲಿ

ಎನ್. ಟಿ. ರಾಮರಾವ್
ಬಾಲನರಸ್ವತಿ
ರೇಲಂಗಿ
ಪದ್ಮಿನಿ
ನಟಿಸಿರುವ ಅಪೂರ್ವ
ಕಲಾಕೃತಿ-

12-3-53 ರಿಂದ

ಶ್ರೀಮತಿ ಪಿಡ್ಡರ್ಲ್ ರವರ

ಅಮ್ಮಲಕ್ಕಲು

(ತೆಲುಗು)

— ಬಳ್ಳಾರಿ ವಿಭಜನೆ ಇಲ್ಲ. —

ದಿಲ್ಲಿಯ — ಸುದ್ದಿ

"ಸಂಯುಕ್ತ ಕರ್ನಾಟಕ" ದ ದೆಲ್ಲಿ ಸುದ್ದಿಗಾರರು ತಮ್ಮ ಪತ್ರಿಕೆಗೆ ಬರೆದಿರುವ ಮುಖ್ಯಾಂಶವಿದು.

"ಇಡೀ ಬಳ್ಳಾರಿ ಜಿಲ್ಲೆಯನ್ನು ಸಧ್ಯಕ್ಕೆ ಮದ್ರಾಸ್‌ದಲ್ಲೇ ಇಡುವಂತೆ ಮಾದಕ್ಕೆ ತಾದ ಆಲೂರು, ಆದವಾನಿ, ರಾಯದುರ್ಗ ತಾಲ್ಲೂಕುಗಳಲ್ಲಿ ತೆಲುಗು ಕನ್ನಡ ಭಾಷೆಗಳನ್ನು ವಿಂಗಡಿಸಲು ಸರಹದ್ ಸಮಿತಿಯು ನಿರ್ಣಾಮಕವಾಗುತ್ತೆ. ಆದು ಯಾವಾಗೆಂಬುದು ಗೊತ್ತಿಲ್ಲ. ಶ್ರೀ. ರಾಜಗೋಪಾಲಾಚಾರ್ಯರು ಬಳ್ಳಾರಿಯನ್ನು ಮದ್ರಾಸ್‌ದಲ್ಲಿ ಡಲು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಬಲವಾಗಿ ವಾದಿಸಿದರು. ರಾಜಾಜಿಯವರ ಅಭಿಪ್ರಾಯಕ್ಕೆ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಂಜೀವರೆಡ್ಡಿಯವರು ಒಪ್ಪಿಕೊಂಡಂತಿದೆ.

ಬಳ್ಳಾರಿಯ ಶ್ರೀ. ಟಿ. ಸುಬ್ರಹ್ಮಣ್ಯಂರು ಶ್ರೀ ರಾಜಾಜಿಯನ್ನು ಕಂಡಿದ್ದರು."

ಇಂಗ್ಲೀಷ್ ಭಾಷೆ ವರಪ್ರಸಾದ!

"ಇಂಗ್ಲೀಷನ್ನು ಪರಭಾಷೆಯೆಂದು ಏ ತಿಳಿಯಬೇಕು? ನಾವು ಇಂಗ್ಲೀಷ್ ಜ ಕೊಟ್ಟ ಕಾನೂನು-ನ್ಯಾಯಾಲಯ ಳನ್ನು ಅವರ ಜತೆ ಇಂಗ್ಲೆಂಡಿಗೆ ಕಳಿಸ್ಲಿ ಅವರು ಕಟ್ಟಿಟ್ಟ ಆಕೆ-ಟ್ಟನ್ನು ಅವರ ಜ ಕಳಿಸಿಲ್ಲ. ಇಂಗ್ಲೀಷ್ ಪ್ರಬುದ್ಧವಾದ ಭಾಷ ಅದನ್ನು ನಮ್ಮದಾಗಿಸೋಣ. ಅದು ನಮ್ಮ ಸರಸ್ವತೀದೇವಿ ಕೊಟ್ಟ ವರಪ್ರಸಾದ!—" ಹೀಗೆಂದು ವಿದ್ಯಾಸಚಿವ ಪ್ರಧಾನ ಮಂತ್ರಿಗಳಿಗೆ ಶ್ರೀ ರಾಜಗೋಪಾಲಾಚಾರ್ಯರು ಹೇಳಿದ್ದಾರೆ.

ಯುಗಾದಿಯು ಎಲ್ಲರಿಗೂ ಸುಖ-ಶಾಂತಿಯನ್ನೀಯಲಿ!

ಭಾರತದ ರೈಲ್ವೆ ಏಷಿಯಾ ಖಂಡದಲ್ಲೇ ದೊಡ್ಡದು.

ಭಾರತದ ರೈಲ್ವೆ ವ್ಯಾಪ್ತಿ ಮತ್ತು ಕೆಲಸದಲ್ಲಿ ಇಡೀ ಏಶಿಯ ಖಂಡದಲ್ಲಿಯೇ ದೊಡ್ಡದಾಗಿದ್ದು ಜಗತ್ತಿನಲ್ಲಿ ನಾಲ್ಕನೆಯ ಸ್ಥಾನದ್ದಾಗಿದೆ. ಭಾರತದ ರೈಲ್ವೆಗಳಲ್ಲಿ ಪ್ರತಿ ನಿತ್ಯ ೩,೫೦೦೦೦ ಜನರು ಪ್ರವಾಸ ಮಾಡುತ್ತಾರೆ. ಭಾರತದಲ್ಲಿರುವ ಎಲ್ಲ ರೇಲ್ವೆ ಡಬ್ಬಿಗಳನ್ನು ಸಾಲಾಗಿ ಜೋಡಿಸಿದರೆ ೧೫೫ ಮೈಲುದ್ದದ ರೇಲ್ವೆ ಗಾಡಿಯಾಗುತ್ತೀತು.

ದಿಲ್ಲಿಯಲ್ಲಿ ಈಗ ತನ್ನ ೧೪ವರ್ಷ ಪ್ರಧಾನಿಯನ್ನು ನೆರವೇರಿಸುತ್ತಿರುವ ಭಾರತೀಯ ರೇಲ್ವೆಗಳ ಇತಿಹಾಸದಲ್ಲಿ ಕೆಲ ಮಹತ್ವದ ವಿಚಾರಗಳಿವೆ.

ಏಶಿಯಾಖಂಡದಲ್ಲೇ ಭಾರತೀಯ ರೇಲ್ವೆ ಅತಿದೊಡ್ಡದಾಗಿದ್ದು ಇದರ ಓಡಾಟ ೧೫೫೫೫ ಮೈಲು ರಸ್ತೆಯಲ್ಲಿ ನಡೆಯುತ್ತಿದೆ. ಇಡೀಜಗತ್ತಿನಲ್ಲಿ ಇದರ ಸ್ಥಾನ ನಾಲ್ಕನೆಯದಿದ್ದು ಸರಕಾರೀ ಒಡೆತನದ ದೊಡ್ಡ ಉದ್ದಿಮೆಗಳಲ್ಲಿ ಇದರ ಸ್ಥಾನ ಎರಡನೆಯದಿದೆ.

ಭಾರತದಲ್ಲಿ ೬೦೫೫ ರೇಲ್ವೆ ಸ್ಟೇಶನಗಳಿವೆ. ಬಿಹಾರದಲ್ಲಿರುವ ಸೋನೆಪುರ ನಿಲ್ದಾಣದ ಪ್ಲಾಟ್‌ಫಾರ್ಮ ೨೪೦೫ ಮೂಳು ಉದ್ದವಿದ್ದು ಜಗತ್ತಿನಲ್ಲಿಯೇ ಇದು ಅತಿ ಉದ್ದವಾದ ಪ್ಲಾಟ್‌ಫಾರ್ಮ ಆಗಿದೆ.

ಭಾರತದ ರೇಲ್ವೆ ಉದ್ದಿಮೆಯು ಪ್ರತಿ ವರ್ಷ ೧೫೫ ಕೋಟಿ ರೂ. ಗಳ ಸಂಬಳದ ಮೇಲೆ ಸುಮಾರು ೧೦ ಲಕ್ಷ ಜನರನ್ನು ಯಜಮಾನಿಕೆ ಮಾಡುತ್ತಿದೆ.

ಜಗತ್ತಿನಲ್ಲಿಯೇ ಭಾರತದ ರೇಲ್ವೆಗಳಲ್ಲಿರುವಷ್ಟು ಶ್ರೇಯಾಣಿಕರ ಗದ್ದಲ ಇನ್ನೆಲ್ಲಿಯೂ ಇರುವದಿಲ್ಲ. ಭಾರತದ ರೇಲ್ವೆಗಳಲ್ಲಿ ಪ್ರತಿ ಮಿನಿಟಿಗೆ ೩೫೦ ಪ್ರಯಾಣಿಕರು ಪ್ರವಾಸ ಮಾಡುತ್ತಾರೆ. ಪ್ರತಿದಿನ ಸರಾಸರಿಯಾಗಿ ೩,೫೦೦೦೦ ಪ್ರವಾಸಿಕರನ್ನು ಹೊತ್ತುಕೊಂಡು ೩೪೫೫ ಗಾಡಿಗಳು ಓಡಾಡುತ್ತವೆ ಭಾರತದಲ್ಲಿರುವ ಎಲ್ಲ ರೇಲ್ವೆ ಡಬ್ಬಿಗಳನ್ನು ಸಾಲಾಗಿ ಜೋಡಿಸಿದರೆ ೧೫೫ ಮೈಲು ಉದ್ದವಾಗಬಹುದು.

೧೯೫೧–೫೨ ರಲ್ಲಿ ಭಾರತದ ರೇಲ್ವೆಗಳಲ್ಲಿ ೬೯೦೦೦೦೦ ಜನರು ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿದರು. ಇವರಿಂದ ೧೬೫೫ಲಕ್ಷ ರೂ. ಗಳು ವಸೂಲ್ಮಾಡಲ್ಪಟ್ಟವು.

ಪ್ರತಿದಿನ ೧೬೬೫ ವ್ಯಾಗೀನುಗಳಲ್ಲಿ ಸರಕುಗಳನ್ನು ತುಂಬಲಾಗುತ್ತದೆ. ೩೬೫೫೫ ಟನ್ ಸರಕು ವಾಗೀನುಗಳಿಂದ ಇಳಿಸಲ್ಪಡುತ್ತಿದೆ.

ಬ್ರಾಡ್‌ಗೇಜ ರಸ್ತೆಯಲ್ಲಿ ಪ್ಯಾಸಂಜರ ಗಾಡಿಯನ್ನು ನಡೆಸಲು ಒಂದು ಮೈಲಿಗೆ ರೂ. ೧೦–೪–೦ ಮತ್ತು ಮೀಟರ ಗೇಜ ರಸ್ತೆಯಲ್ಲಿ ರೂ. ೯–೨–೦ ವೆಚ್ಚ ಬರುತ್ತದೆ. ಮಾಲು ಗಾಡಿಯನ್ನು ನಡೆಸಲು ಈ ವೆಚ್ಚ ಅನುಕ್ರಮವಾಗಿ ರೂ. ೫೦ ಮತ್ತು ರೂ. ೧೪–೩–೦ ಬರುವದು.

ಪ್ರತಿ ವರ್ಷ ಭಾರತದ ರೇಲ್ವೆಗಳಿಗೆ ೧ ಕೋಟಿ ಟನ್ ಕಲ್ಲಿದ್ದಲು ಬೇಕಾಗುತ್ತದೆ. ರೇಲ್ವೆ ಉದ್ದಿಮೆಯಲ್ಲಿ ಸರಕಾರವು ೬೬೦ ಕೋಟಿ ರೂ. ಗಳ ಬಂಡವಳ ತೊಡಗಿಸಿದೆ. ಸುಮಾರು ೪೫೦೦ ರೇಲ್ವೆ ಇಂಜಿನ್‌ಗಳು, ೨೧೦೦೦ ಪ್ರವಾಸಿಕ ಡಬ್ಬಿಗಳು ಮತ್ತು ೬೦೫೦೦ ವ್ಯಾಗೀನುಗಳು ಇವೆ. ತನ್ನ ನೌಕರರಿಗೆ ಶಿಕ್ಷಣ, ಔಷಧೋಪಚಾರ ಮತ್ತು ಆರೋಗ್ಯ ರಕ್ಷಣೆ ಸೌಕರ್ಯ ಒದಗಿಸುವದಕ್ಕಾಗಿ ರೇಲ್ವೆ ಶಾಖೆ ಪ್ರತಿ ವರ್ಷ ಸುಮಾರು ೪ ಕೋಟಿ ರೂ. ಗಳನ್ನು ವೆಚ್ಚ ಮಾಡುತ್ತಿದೆ.

ಶ್ರೀ ಹನುಮಂತಯ್ಯ ಮಂತ್ರಿ ಮಂಡಳದಲ್ಲಿ ಒಬ್ಬರೇ?

ಮೈಸೂರಿನಲ್ಲಿ ಜಾಗ ಸಿಗದೆ ಕೇಂದ್ರದಲ್ಲಿ ಮಂತ್ರಿಗಳಾಗಿರುವ ಶ್ರೀ ಕೆ. ಸಿ ರೆಡ್ಡಿಯವರು ಮೈಸೂರಿನ ಶ್ರೀ ಹನುಮಂತಯ್ಯ ಮಂತ್ರಿಮಂಡಳಿಯ ವಿರುದ್ಧವಾಗಿ ತಂತ್ರ ನಡೆಸುತ್ತಲೆ ಇರುವ ರೀತಿ ಮೂ, ಅದು ಬಹು ಮಟ್ಟಿಗೆ ಫಲಕಾರಿಯಾಗುತ್ತದೆಂದೂ ಜನರು ಅಂದುಕೊಳ್ಳುತ್ತಿ

ದ್ದಾರೆ. ಶ್ರೀ ಹನುಮಂತಯ್ಯನವರ ಸಹಕಾರಿಗಳಾದ ಶ್ರೀ ನಿಜಲಿಂಗಯ್ಯನವರು ಸದ್ಯ ರಾಜೀನಾಮೆ ಕೊಟ್ಟಿದ್ದಾರೆ. ಇವರು ಸರಕಾರದ ೬½ ಲಕ್ಷ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸದೆ ಹೋದರೆಂದು ಪಾರುಂಟು ಮುಂದಿನ ವಿದ್ಯಮಾನ ಕುತೂಹಲಕರವಾಗಿದೆ. ಕಾಂಗ್ರೆಸ್ಸಿನ ರಾಜ್ಯದಲ್ಲಿ ಹಣ ಹೀಗೆ ಪೋಲಾಗುವುದೊಂದು ಹೊಸ ಸಮಾಚಾರವಲ್ಲ.

ಒಂದೇ ಹಾಸಿಗೆಯಲ್ಲಿ

ಒಂದೇ ಹಾಸಿಗೆಯಲ್ಲಿ ಮಲಗುವ ಇಬ್ಬರು ಮಕ್ಕಳ ತೂಕ ಬೇರೆ ಬೇರೆ ಹಾಸಿಗೆಗಳಲ್ಲಿ ಮಲಗುವ ಮಕ್ಕಳಿಗಿಂತ ಕಡಿಮೆಯಾಗಿರುತ್ತದೆ ಎಂದು ಡಾಕ್ಟರರು ಅಭಿಪ್ರಾಯಪಡುತ್ತಿದ್ದಾರೆ. ಸಾವಿರಾರು ಮಕ್ಕಳ ಪರೀಕ್ಷಣೆ ಮಾಡಿದನಂತರ ಅವರು ಈ ಅಭಿಪ್ರಾಯಪಟ್ಟಿದ್ದಾರೆ ಆರು ವರ್ಷದ ಮಗು ಪ್ರತ್ಯೇಕವಾಗಿ ಮಲಗುತ್ತಿದ್ದರೆ ಸಾಮಾನ್ಯವಾಗಿ ಅದರ ತೂಕವು ಇನ್ನೊಬ್ಬರ ಹಾಸಿಗೆಯಲ್ಲಿ ಮಲಗುವ ಅದೇ ವಯಸ್ಸಿನ ಮಗುವಿಗಿಂತ ೩ ಪೌಂಡು ಹೆಚ್ಚಿಗಿರುವದು. ೧೪ ವರ್ಷದ ಮಕ್ಕಳ ತೂಕದಲ್ಲಿ ೧೨ ಪೌಂಡು ವ್ಯತ್ಯಾಸ ಕಂಡುಬರುವದು. ಹುಡುಗರು ಸೇವಿಸುವ ಆಹಾರಾದಿಗಳ ವಿಚಾರಕ್ಕೂ ಈ ತೂಕದ ವ್ಯತ್ಯಾಸಕ್ಕೂ ಏನೂ ಸಂಬಂಧವಿಲ್ಲವೆಂದು ಕಂಡುಬಂದಿದ್ದು ಇದರ ಕಾರಣದ ಶೋಧಕ್ಕಾಗಿ ಪೆಚ್ಚಿನ ಪ್ರಯತ್ನ ನಡೆದಿದೆ.

ಭೂದಾನದ ಚಳವಳಿಕ್ಕೆ ಬೆಂಬಲ

ಭಾರತದ ಭೂಪಮಸ್ಯೆಯನ್ನು ಅತ್ಯಂತ ಶಾಂತಿಯುತದಿಂದಲೂ ಶಾಂತಿಯಿಂದಲೂ ಒಗೆಹರಿಸುವ ಅತ್ಯಪೂರ್ವ ಯೋಜನೆಯನ್ನು ತಯಾರಿಸಿದ ಋಷಿ ವಿನೋಬಾ ಭಾವೆಯವರ ಯೋಜನೆಗೆ ದೇಶದ ಜನ ಸಮುದಾಯವು ಅತ್ಯಂತ ಗೌರವಾರ್ಹವಾದ ಸ್ವಾಗತವಿತ್ತಿದೆ. ಕರ್ನಾಟಕವೂ ಇದಕ್ಕೆ ಹೊರತೆಯಲ್ಲ ಈ ಭಾಗಲ್ಲಿ ಹಿಂದೆ ಬೀಳಬಾರದಾಗಿ ಹಾರೈಸುತ್ತೇವೆ.

ಕಮ್ಯುನಿಸ್ಟರ ಬಲ ಕುಗ್ಗುತ್ತಿದೆ

ಕಳೆದ ಸಾರ್ವತ್ರಿಕ ಚುನಾವಣೆಯ ಸಮಯದಲ್ಲಿ ಜನರ ಆಶ್ರಯದಲ್ಲಿ ಬೆಳೆಕಿಗೆ ಬರಲು ಯತ್ನಿಸಿದ ಕಮ್ಯುನಿಸ್ಟರ ಬಲವು ಗೊಂಬಲವೆಬ್ಬಿಸಿ ದೇಶವನ್ನು ರಕ್ತಮಯವಾಗಿ ಸಾಮ್ರಾಜ್ಯಕ್ಕೆ ತಳ್ಳುವದಲ್ಲದೆ ಇತರ ಯಾವ ಒಳ್ಳೆಯತನವೂ ಸಾಧಿಸಲಾರರು ಎಂಬುದನ್ನು ಇಂದು ಭಾರತೀಯ ಜನತೆ ಚೆನ್ನಾಗಿ ತಿಳಿದುಕೊಂಡಿದೆ, ಇದರಿಂದಲೆ ಅವರಿಗೆ ಅಲ್ಪಸ್ವಲ್ಪ ಬೆಂಬಲವಿದ್ದ ಆಂಧ್ರ–ತಿರುವಾಂಕೂರು ಗಳಲ್ಲಿಯೂ ಇಂದು ಅವರಿಗೆ ಜನರ ಬೆಂಬಲ ಸಂಪೂರ್ಣ ತಪ್ಪುತ್ತಿದೆ. ಇದು ಪ್ರಬುದ್ಧ ಭಾರತದ ಪ್ರಗತಿಯ ಕುರುಹೇ ಸೈ. (ರಾಯಭಾರಿ)

★ ಪಂಚ ವಾರ್ಷಿಕ ಯೋಜನೆ. ★

ನಮ್ಮ ದೇಶದ ಪಂಚ ವಾರ್ಷಿಕ ಯೋಜನೆಯನ್ನು ರಾಷ್ಟ್ರೀಯಾಗಿ ಸಂಪೂರ್ಣಗೊಳಿಸಲು 2,069 ಕೋಟಿ ರೂಪಾಯಿಗಳು ವ್ಯಯವಾಗಲಿದೆಯೆಂದು ಅಂದಾಜು ಮಾಡಲಾಗಿದೆ. ಈ ಖರ್ಚಿನಲ್ಲಿ ಮದ್ರಾಸು ಸರಕಾರವು ಭಾಗವಾಗಿ 140.84 ಕೋಟಿ ರೂಪಾಯಿಗಳು. ಯೋಜನೆಯ ಖರ್ಚಿಗಾಗಿ ಸರಕಾರವು 17 ಕೋಟಿ ರೂಪಾಯಿ ಘಾರ್ವಜನಿಕ ಸಾಲವನ್ನೆತ್ತುವ ಮತ್ತು 20 ಕೋಟಿ ರೂಪಾಯಿ ಹೊಸ ತೆರಿಗೆಯನ್ನು ಹೊರಿಸುವ ನಿರ್ಧಾರವನ್ನು ತಿರುತ್ತದೆ. ಹೊಸ ತೆರಿಗೆಗೆ ಸಂಬಂಧಪಟ್ಟ ನಿಜ ರಾಜ್ಯಾಂಗ ರಕ್ಷಣೆಯೇ ನ್ಯಾಯವಿಧಾನ ಸಭೆಯ ಮುಂದೆ ಇದ್ದಿಟ್ಟಿದೆ ಸರಕಾರವು ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳಿಂದ ಪ್ರಯೋಜನ ಪಡೆದ ಭೂಮಿಯ ಮೇಲೆ ಈ ಹೊಸ ತೆರಿಗೆಯನ್ನು ಹೇರಲಾಗುವುದು.

ಪಂಚವಾರ್ಷಿಕ ಯೋಜನೆಯು ಪಟ್ಟಿನ ಮುಖ್ಯ ಕೃಷಿಗೆ ಸಂಬಂಧಿಸಿದಾಗಿದ್ದು ಸ್ವಾತಂತ್ರ್ಯ ಸಮ್ಮೇಳನದಲ್ಲಿ ಕೃಷಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ 100 ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಲಾಗಿದೆ. ಸಣ್ಣ ನೀರಾವರಿ ಯೋಜನೆಗಳು ಕೃಷಿ ಭೂಮಿಯ ವಿಸ್ತರಣೆ ಮತ್ತು ಉತ್ತಮ ಕೃಷಿ ಸಲಕರಣೆಗಳನ್ನು ಒದಗಿಸಿಕೊಡುವುದು ಯೋಜನೆಯಲ್ಲಿ ಕೇಂದ್ರೀಕರಿಸಲ್ಪಟ್ಟಿರುವುದು. ಈ ಕಾರ್ಯಕ್ರಮಗಳಿಂದಾಗಿ 1955-56 ರಲ್ಲಿ 8-6 ಲಕ್ಷ ಟನ್ನುಗಳಷ್ಟು ಧಾನ್ಯದ ಉತ್ಪತ್ತಿಯನ್ನು ಹೆಚ್ಚಿಸಬಹುದೆಂದು ಲೆಕ್ಕ ಹಾಕಲಾಗಿದೆ. ತುಂಗಭದ್ರಾ, ಕೆಳಭವಾನಿ, ಪುಲಂಪುಳ ಮತ್ತು ಇತರ 11 ಯೋಜನೆಗಳಿಗೆ ಸರಿ 18 ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಲಾಗಿದೆ ವಿದ್ಯುತ್ ಯೋಜನೆಗಳಿಗಾಗಿ ಪ್ರತ್ಯೇಕಿಸಿರುವ 50 24 ಕೋಟಿ ರೂಪಾಯಿಗಳಿಂದ ಹೆಚ್ಚುವರಿಯಾದ 176,000 K.W. ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಾಧ್ಯವಾಗಬಹುದು.

ಪಶು ಸಂಗೋಪನೆ, ಅರಣ್ಯಗಳು, ಮೀನುಗಾರಿಕೆ, ಸಹಕಾರ, ಗ್ರಾಮೋದ್ಧಾರ ಮುಂತಾದುವು ಕೃಷಿಗೆ ಸಂಬಂಧಿಸಿದ ವಿಚಾರಗಳು. ಯೋಜನೆಯಲ್ಲಿ ಪಶು ಸಂಗೋಪನೆಗಾಗಿ 1 ಕೋಟಿ ರೂಪಾಯಿಗಳು, ಅರಣ್ಯಗಳಿಗಾಗಿ 38 8 ಲಕ್ಷ ರೂಪಾಯಿಗಳು, ಮೀನುಗಾರಿಕೆಗಾಗಿ 100 ಲಕ್ಷ ರೂಪಾಯಿಗಳು ಮತ್ತು ಸಹಕಾರ ಅಭಿವೃದ್ಧಿಗಾಗಿ 100 ಲಕ್ಷ ರೂಪಾಯಿಗಳನ್ನು ಪ್ರತ್ಯೇಕಿಸಿಡಲಾಗಿದೆ

ಆರ್ಥಿಕ ಪರಿಸ್ಥಿತಿಯು ಬೇಗನೆ ಉತ್ತಮಗೊಳ್ಳಲು ಸಹಕಾರಿ ಸಂಘಗಳು ಸಹಾಯಕವಾಗುತ್ತವೆಂಬುದನ್ನು ಪಂಚ ವಾರ್ಷಿಕ ಯೋಜನೆಯು ಒತ್ತಿ ಹೇಳುತ್ತಿದೆ. ಅಭಿವೃದ್ಧಿಯ ಪ್ರತಿ ಕ್ಷೇತ್ರದಲ್ಲಿಯೂ ಸಹಕಾರ ಚಳವಳಿಗೆ ಬಹಳ ಪ್ರಾಮುಖ್ಯತೆ ಇದೆ ರಿಸರ್ವ್ ಬ್ಯಾಂಕ್ ಸಹಕಾರಿ ಚಳವಳಿಗೆ ಸಹಾಯವನ್ನು ಕೊಡುತ್ತಿರುವುದರಿಂದ ಸರಕಾರಿ ಚಳವಳಿಯು ಅಭಿವೃದ್ಧಿಗೆಳ್ಳಲು ಹೆಚ್ಚಿನ ಅವಕಾಶವಿರುವುದು. ಸಹಕಾರಿ ಸಂಘಗಳ ಸಹಾಯಕ ಕೃಷಿಯನ್ನು ನಡೆಸುವುದು, ಒಂದು ಭೂಮಿಯನ್ನು ಕೃಷಿಗೆ ಯೋಗ್ಯವಾಗುವಂತೆ ಪರಿವರ್ತಿಸುವುದು, ಒಟ್ಟಾರೆ ಸಹಕಾರ ಸಂಘಗಳನ್ನು ಸ್ವಾವಲಂಬನೆಯ ಮುಂತಾದ ಕಾರ್ಯಕ್ರಮಗಳು ಯೋಜನೆಯಲ್ಲಿ ಸೇರಿಸಲ್ಪಟ್ಟಿವೆ.

ಸಹಕಾರ ಚಳವಳಿಗೆ ಗ್ರಾಮೋದ್ಯೋಗಗಳಿಗೂ ಹತ್ತಿರದ ಸಂಬಂಧವಿದೆ. ಗ್ರಾಮೋದ್ಯೋಗ ಕಾರ್ಯಕ್ರಮಗಳಿಗಾಗಿ ಯೋಜನೆಯಲ್ಲಿ 9 ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಿದಲಾಗಿದೆ. ಕೇಂದ್ರ ಆರ್ಥಿಕ ಸಹಕಾರಿ ಸಂಸ್ಥೆಗಳ ಪ್ರಗತಿಯನ್ನು ಪರಿಶೀಲಿಸಿ ಅವು ಇತರ ಪ್ರದೇಶಗಳಿಗೆ ಆದರ್ಶ ಪ್ರಾಯವಾಗಿರುವಂತೆ ಮಾಡುವುದು ಈ ಕಾರ್ಯಕ್ರಮಗಳ ಉದ್ದೇಶ. ಜನರಲ್ಲಿ ಸಹಕಾರ ಭಾವನೆಯೂ, ಸ್ವಾವಲಂಬನೆಯೂ, ಬೆಳೆದು ಬರಲು ಗ್ರಾಮೋದ್ಧಾರ ಕಾರ್ಯಕ್ರಮಗಳು ಸಹಾಯಕವಾಗಲಿವೆ.

ಸಾಮಿಗೆ ಸೌಕರ್ಯವಾಗಿ ಓಡಾಡಲು ಸರಿಯಾದ ರಸ್ತೆಗಳು, ಸೇತುವೆಗಳು ಮುಂತಾದುವುಗಳಿಗೆ ಸರಕಾರವು ಸಹಾಯವನ್ನು ನೀಡುವುದು.

ಗ್ರಾಮ ಪುನರ್ರಚನಾ ಕಾರ್ಯಕ್ರಮಗಳಲ್ಲಿ ಗುಡಿ ಕೈಗಾರಿಕೆಗಳಿಗೂ ಒತ್ತು ಕೊಡಲಾಗಿದೆ. ಗ್ರಾಮ ನಿವಾಸಿಗಳಿಗೆ ಅಗತ್ಯ ವಿರುವ ವಸ್ತುಗಳನ್ನು ಅಗ್ಗವಾಗಿ ಒದಗಿಸಿಕೊಡುವುದು ಮಾತ್ರವಲ್ಲದೆ ಬಿಡುವಿನ ಸಮಯವನ್ನು ಲಾಭದಾಯಕವಾಗಿ ಉಪಯೋಗಿಸಲು ಗುಡಿ ಕೈಗಾರಿಕೆಗಳು ಸಹಾಯಕವಾಗುತ್ತವೆ. ಆದುದರಿಂದ ಗುಡಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಯಲ್ಲಿ 116.9 ಲಕ್ಷ ರೂಪಾಯಿಗಳನ್ನು ಪ್ರತ್ಯೇಕಿಸಲಾಗಿದೆ.

ದೊಡ್ಡ ಕೈಗಾರಿಕೆಗಳು ಮತ್ತು ಸಾರಿಗೆ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಮದ್ರಾಸು ಸಂಸ್ಥಾನದ ಪಂಚ ವಾರ್ಷಿಕ ಯೋಜನೆಯಲ್ಲಿ ಕ್ರಮವಾಗಿ 8½ ಲಕ್ಷ ರೂಪಾಯಿಗಳನ್ನೂ 5 ಕೋಟಿ ರೂಪಾಯಿಗಳನ್ನೂ ಪ್ರತ್ಯೇಕಿಸಲಾಗಿದೆ.

ವಸತಿಗಳ ಅಭಾವವು ನಮ್ಮ ದೇಶದಲ್ಲಿ ವಿಶೇಷವಾಗಿದೆ. ಅಖಿಲ ಭಾರತ ಯೋಜನೆಯಲ್ಲಿ ಇದಕ್ಕಾಗಿ 48 68 ಕೋಟಿ ರೂಪಾಯಿಗಳು ವಿನಿಯೋಗವಾಗುವುದು. ಮದ್ರಾಸು ಸರಕಾರವು ಸಹಕಾರಿ ಸಂಘಗಳ ಮೂಲಕ ಹೆಚ್ಚು ವಸತಿಗಳನ್ನು ನಿರ್ಮಿಸಲು 5 ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಿರುವುದು.

ಸಮಾಜ ಸೇವೆಗೆ ಹೊಸ ಪಂಚವಾರ್ಷಿಕ ಯೋಜನೆಯು ಪ್ರಾಮುಖ್ಯತೆಯನ್ನು ಕೊಟ್ಟಿರುತ್ತದೆ. ಶಿಕ್ಷಣದ ಪ್ರಗತಿಗಾಗಿ ಮದ್ರಾಸಿನ ಯೋಜನೆಯಲ್ಲಿ 8 ಕೋಟಿ ರೂಪಾಯಿಗಳನ್ನು ಪ್ರತ್ಯೇಕಿಸಲಾಗಿದೆ. ವೈದ್ಯಕೀಯ ವಿದ್ಯಾಭ್ಯಾಸ, ವೈದ್ಯಶಾಲೆಗಳು ಮತ್ತು ಸಾರ್ವಜನಿಕ ಆರೋಗ್ಯ ಅಭಿವೃದ್ಧಿಗಾಗಿ 12 ಕೋಟಿ ರೂಪಾಯಿಗಳನ್ನು ಹಿಂದುಳಿದ ವರ್ಗಗಳ ಸುಧಾರಣೆಗಾಗಿ 4.67 ಕೋಟಿ ರೂಪಾಯಿಗಳನ್ನೂ ಪ್ರತ್ಯೇಕಿಸಲಾಗಿದೆ.

ಜನತೆಯ ಸಹಕಾರ

ಪಂಚ ವಾರ್ಷಿಕ ಯೋಜನೆಯಿಂದ ಪ್ರಕೃತ ಪರಿಸ್ಥಿತಿಯು ಒಡನೆ ಸುಧಾರಿಸಿಬಿಡುವುದಿಲ್ಲ. ಸ್ವಾತಂತ್ರ್ಯದ ನಂತರ ಸರಕಾರವು ಕೈಗೊಂಡ ಕಾರ್ಯಗಳಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದು ಯೋಜನೆಯ ಉದ್ದೇಶವಾಗಿದೆ. ಇದ್ದು ದೊಡ್ಡ ಯೋಜನೆಗೆ ಅಗತ್ಯವಿರುವ ಖರ್ಚಿನ ಪ್ರಶ್ನೆಯು ಅತಿ ದೊಡ್ಡದು. ದೇಶದ ನೈಸರ್ಗಿಕ ಸಂಪತ್ತನ್ನೂ ಜನಬಲವನ್ನೂ ಯುಕ್ತ ರೀತಿಯಲ್ಲಿ ಸಂಪೂರ್ಣ ಪ್ರಯೋಜನಕಾರಿಯಾಗುವಂತೆ ಉಪಯೋಗಿಸಬೇಕು.

ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಪಂಚ ವಾರ್ಷಿಕ ಯೋಜನೆಯು ಯಶಸ್ವಿಯಾಗಲು ನಮ್ಮ ದೇಶದ ಜನಬಲದ ಮೇಲೆ ಹೆಚ್ಚು ಹೊಣೆಗಾರಿಕೆಯಿದೆ. ಗ್ರಾಮ ಉತ್ಪಾದಕ ವ್ಯಕ್ತಿಗಳನ್ನು ಸ್ಥಾ

ಹೊಯ ಪುಟಕ್ಕೆ

★ ಪ್ರಾರ್ಥನೆ ★

★ ಅದರ ವಿಶಿಷ್ಟ ಸ್ಥಾನ ಮತ್ತು ಮಹತ್ವ. ★

ಪ್ರಾರ್ಥನೆಯೆಂಬುದು ಮನುಷ್ಯನಷ್ಟೇ ಪ್ರಾಚೀನವಾದುದು. ಮನುಷ್ಯನು ನಿರಾಶನಾದಾಗ, ನಿರುತ್ಸಾಹನಾದಾಗ ಪ್ರಾರ್ಥನೆಯಿಂದ ಅಪೂರ್ವ ಶಕ್ತಿಯನ್ನು ಪಡೆದು ಮುನ್ನುಗ್ಗಿದ್ದಾನೆ. ಪ್ರಾರ್ಥನೆ ಸಕಾಮ— ಅಂದರೆ ಐಹಿಕ ಲಾಭಗಳನ್ನು ಪಡೆಯುವ ಆಸೆಯಿಂದಾಗಲಿ ಅಥವಾ ನಿಷ್ಕಾಮ— ಆಂದರೆ ಕೇವಲ ಪರಮಾತ್ಮಪ್ರೀತಿಗಾಗಲಿ ಇರಬಹುದು. ಇನ್ನೆಲ್ಲಾ ಬಗೆಯ ಪ್ರಾರ್ಥನೆಗಳ ಅನಿವಾರ್ಯತೆಗೆ, ಅವುಗಳಿಂದ ಪಡೆಯಬಹುದಾದ ಬಲ ಇವನ್ನು ಆಧ್ಯಾತ್ಮಜೀವಿಯೂ ಆದ ಶ್ರೀ ನಿವಾತಕರು ವಿವರಿಸಿದ್ದಾರೆ

ಉಪವಾಸನೆಯಲ್ಲಿ, ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಾರ್ಥನೆ ಒಂದು ವಿಶಿಷ್ಟವಾದ ಸ್ಥಾನವಿದೆ. ಅದುದರಿಂದ ಪ್ರಾರ್ಥನೆಯ ಮಹತ್ವ, ಅದರ ಪೂರ್ಣ ಅರ್ಥ ಅದರ ವಿವಿಧ ರೂಪಗಳು, ಅದರ ಶಕ್ತಿ ಸಾಮರ್ಥ್ಯಗಳು, ಅದರ ಪ್ರಯೋಜನ ಮುಂತಾದುವುಗಳನ್ನು ಸ್ವಲ್ಪ ಮಟ್ಟಿಗೆ ವಿಚಾರಿಸುವದು ಅವಶ್ಯವಿರುವದು.

ಪ್ರಾರ್ಥನೆಯ ಮೂಲ ಅರ್ಥವು ಮೊರೆಯಿಡುವದು, ಬೇಡಿಕೊಳ್ಳುವದು, ದೇವರನ್ನು ಆಹ್ವಾನಿಸುವದು, ಎಂದು ಇರುವದು. ಇಂಗ್ಲೀಷ್ ಭಾಷೆಯಲ್ಲಿ ಕೂಡ 'ಪ್ರೇಯರ್', ಈ ಶಬ್ದಕ್ಕೆ ಇದೇ ಅರ್ಥವಿರುವದು. ನಾಲ್ಕು ಬಗೆಯ ಭಕ್ತರಿರುವರು ಎಂದು ಹೇಳುವ ಗೀತೆಯು 'ಆರ್ತಾರ್ಥಿ, ಎಂಬ ಒಂದು ಬಗೆಯನ್ನು ಹೇಳಿರುವದು. ಅಲ್ಲಿ ಅದರ ಅರ್ಥವು 'ದೇವರಿಂದ ಯಾವುದಾದರೊಂದು ಬಯಕೆಯನ್ನು ಪಡೆಯುವ ಇಚ್ಛೆಯುಳ್ಳ ಭಕ್ತ' ಎಂದು ಇರುವದು.

ಪ್ರಾರ್ಥನೆ ಈ ಶಬ್ದದಲ್ಲಿ ಪ್ರ + ಅರ್ಥ ಈ ಎರಡು ಪದಗಳು ಇರುವವು. ಅರ್ಥ ಅಂದರೆ ಬಯಕೆ, ಇಚ್ಛೆ, ಅಪೇಕ್ಷೆ, 'ಪ್ರ, ಎಂದರೆ ಹೆಚ್ಚಾಗಿ ಅಥವಾ ಹೆಚ್ಚಿನ. 'ಅರ್ಥ, ಅಥವಾ ಬಯಕೆ ಇದ್ದುದೆ ಪ್ರಾರ್ಥನೆ. ಈ ರೀತಿ ಮೂಲದಲ್ಲಿ 'ಪ್ರಾರ್ಥನೆ, ಇದು ಸಕಾಮ ಭಕ್ತಿಯ ಒಂದು ರೀತಿ, ಎಂದು ಹೇಳಬಹುದು. ನನಗಿಂತ ಹೆಚ್ಚಿನ ಶಕ್ತಿಯನ್ನು, ತನ್ನ ಬಯಕೆಯನ್ನು ಪೂರೈಸುವ ಶಕ್ತಿಯುಳ್ಳ ವ್ಯಕ್ತಿಯನ್ನು ದೇವರನ್ನು ಆರಾಧಿಸುವದು, ಆಹ್ವಾನಿಸುವದು, ಬೇಡಿಕೊಳ್ಳುವದು, ಪ್ರಶಂಸಿಸುವದು' 'ಪ್ರಾರ್ಥನೆ' ಎಂದೆನಿಸುವದು. ಇದೊಂದು ಸಗುಣ ಸಕಾಮ ಭಕ್ತಿಯ ರೂಪ. ಕುದ್ಧ ಭಕ್ತಿಯ ದೃಷ್ಟಿಯಿಂದ, ಭಕ್ತಿಯೋಗದ ದೃಷ್ಟಿಯಿಂದ ಇದೊಂದು ಗೌಣರೂಪವೆಂದೇ ಹೇಳಬಹುದು. **ದೇವಾ, ನಮ್ಮ ನಿತ್ಯದ ರೊಟ್ಟಿಯನ್ನು, ನಮಗೆ ದಯಪಾಲಿಸು' ಎಂದು ಒಂದು ಧರ್ಮದವರು ನಿತ್ಯ ಪ್ರಾರ್ಥಿಸುವದುಂಟು. ಇದು ಆ ವರ್ಗಕ್ಕೆಯೆ ಸೇರಿದದು.**

ಮೂಲಾರ್ಥ ಹಾಗೂ ಶಬ್ದಾರ್ಥ ಹೀಗಿದ್ದರೂ ಯೋಗರೂಢಿಯಿಂದ ಲಕ್ಷ್ಯಾರ್ಥವು ವಿಕಸಿತವಾಗುತ್ತ ಬೋಯಿತು. ಯಾವುದೇ ಒಂದು ವೈಯಕ್ತಿಕ ವಿಶಿಷ್ಟವಾದ ಬಯಕೆಯನ್ನು ಕಣ್ಣಿಮುರು ಇಟ್ಟುಕೊಳ್ಳದೆ ಭಕ್ತನು ದೇವರನ್ನು ಆಹ್ವಾನಿಸಿ ಸರ್ವಭೂತ ಹಿತವಾಗಲಿ, ಎಂದು ಬೇಡಿಕೊಂಡರೂ ಅದು ಪ್ರಾರ್ಥನೆಯೆ ಎನಿಸುವದು. ಅದೇ ರೀತಿ ಈಗ ಶಬ್ದ, ಗಾಯನ, ವಾದ್ಯ, ಮುಂತಾದ ಸಹಾಯದಿಂದ ಸಹ ಭಕ್ತನ ಪ್ರಾರ್ಥನೆ ನಡೆಯಿಸಬಲ್ಲನು. ಈ ರೀತಿ ಪ್ರಾರ್ಥನೆಗೆ ಈಗ ಒಂದು ವಿಶಾಲವಾದ ಅರ್ಥವು ಉಂಟಾಗಿದೆ. ಆದರೂ ಪ್ರತಿ ಪ್ರಾರ್ಥನೆಯಲ್ಲಿ, ಭಕ್ತನಿಗೆ ತನ್ನ ಅಲ್ಪಶಕ್ತಿತ್ವದ ಅರಿವು, ತನಗಿಂತ ಶ್ರೇಷ್ಠವಾದ ಸಗುಣ ಶಕ್ತಿಯಲ್ಲಿ ನಂಬಿಗೆ, ಆ ಶಕ್ತಿಯ ಆವಾಹನ ಹಾಗೂ ಆ ಶಕ್ತಿಗೆ ಮೊರೆ ಇಡುವಿಕೆ, ಆ ಮೊರೆ ಕೇಳಿ ಆ ಶಕ್ತಿ ಓಗೊಡಲಿ ಎಂಬ ಪ್ರಬಲವಾದ ಇಚ್ಛೆ: ಇವು ಅಡಕವಾಗಿರುವವು ತನಗೂ ವಿಶ್ವನಲ್ಲಿರುವ ದಿವ್ಯಭವ್ಯ ಶಕ್ತಿಗೂ ಇದ್ದ ಸಂಬಂಧವು ಅನುಭವವಾಗಬೇಕು, ಆ ಅನುಭವದ ಮೂಲಕ ಶಾಂತಿ ನಿಮಿತ್ತ ಪಾತ್ರನಾಗಿ ಬಾಳಿಕೆ ಬಾಳಬೇಕು, ಎಂಬುದೆ ಪ್ರಾರ್ಥನಾ ಶೀಲನಾದ ಭಕ್ತನ ಹಠಕೆ. ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಸಾಧಕನು ಯಾವದೇ ಮಾರ್ಗದಿಂದ ಸಾಗುವುದಾದರೂ ಪ್ರಾರ್ಥನೆಗೆ ಒಂದು ಸ್ಥಾನವಿದೆ, ಗೌಣದ ಸ್ಥಾನವಿದೆ,ಎಂದುಹೇಳಬಹುದು. ಆತ್ಮ ವಿಕಾಸಕ್ಕೆ ಅವಶ್ಯವಿರುವ ಸಾಧನ ಸಂಪತ್ತಿನಲ್ಲಿ ಪ್ರಾರ್ಥನೆಯೂ ಒಂದು ಇದ್ದು ಅದು ಕೇವಲ ಸಕಾಮವಿರಕೂಡದು, ಬರೀ ವೈಯಕ್ತಿಕ ಬಯಕೆಗಳ ಪೂರೈಕೆಗಾಗಿ ಇರಬಾರದು, ಅಂತಿಂಥ ದೈವಗಳನ್ನು ಕುರಿತು ಇರಬಾರದು ಎಂಬುದು ಸ್ಪಷ್ಟವಿರುವದು.

ಪ್ರಾರ್ಥನೆಯು ವೈಯಕ್ತಿಕರವೂ ಇರಬಲ್ಲದು ಸಾಮೂಹಿಕವೂ ಇರಬಲ್ಲದು. ಸಾಮೂಹಿಕನಿರಕೂಡದು ಎಂಬ ಹಟ ಹಿಡಿಯುವದೂ ತಪ್ಪು, ಸಾಮೂಹಿಕವೇ ಇರಬೇಕು ಎನ್ನುವದೂ ಸೂಕ್ತವಲ್ಲ. ಪ್ರತಿಯೊಂದು ಬಗೆಯ ಸಾಧನೆಯು ವೈಯಕ್ತಿಕನಿರುವಂತೆ ಇದ್ದು ಸಾಮೂಹಿಕರೂ ಇರಬಲ್ಲುದು. ಹಾಗೆ ಇದರೆಅದು ಎರಡು ಬಗೆಯಿಂದ ಉಪಕಾರಕವಾಗುವದು. ಅದರಿಂದ ಒಂದು ಅನುಕೂಲ ವಾತಾವರಣವು ನಿರ್ಮಾಣವಾಗುವದು. ಅದೇ ರೀತಿ ಸಮಾಜದಲ್ಲಿ ಸೃಷ್ಟಿಕಾರವಾಗಲು ಬಲಬರುವದು. ಸಮುದಾಯದಲ್ಲಿ ಸೇರಿದವರಲ್ಲಿ. ಹುರುಪು ದಾಂಭಿಕರಿರುವರು. ಮನಸ್ಸು ಏಕಾಗ್ರವಾಗಲು ಕಠಿಣವಾಗುವದು. ಎಂಬ ಮುಂತಾದ ಆಕ್ಷೇಪಗಳನ್ನು ಸಾಮೂಹಿಕ ಪ್ರಾರ್ಥನೆಯ ವಿರುದ್ಧ ಹಲವರು ಎತ್ತಬಹುದು. ಅಂಥ ದೋಷಾದಿಗಳು ಹಾಗೂ ಆಕ್ಷೇಪಗಳು ಪ್ರತಿಯೊಂದು ಬಗೆಯ ಸಾಧನೆಯ ಬಗ್ಗೆಯೂ ಕಂಡುಬರುವವು ಆದರೆ ಅವುಗಳಿಂದ ನಾವು ಎದೆಗುಂದುವ ಕಾರಣವಿಲ್ಲ ಮನುಷ್ಯನು ಸಾಮಾಜಿಕ ಜೀವಿಯಾದುದರಿಂದ ಸಾಮೂಹಿಕ ಪ್ರಾರ್ಥನೆಗೆ ಉತ್ತೇಜನ ಕೊಡುವದು ಸರ್ವಥಾ ಯೋಗ್ಯವು ಎಂದು ಹೇಳಲು ಅಡ್ಡಿಯಿಲ್ಲ.

ಪ್ರಾರ್ಥನೆಯು ಒಂದು ವಿಶಿಷ್ಟ ಬಗೆಯ ಆರಾಧನೆ ಇರುವುದರಿಂದ ಅದರ ಮಹತ್ವ ಬೇರೆ ಹಾಗೂ ಅದರ ಉಪಯೋಗವು ಸಾಧಕನಿಗೆ ಯಾವ ವಿಶೇಷ ಪರಿಸ್ಥಿತಿಯಲ್ಲಿ ಆಗಬಲ್ಲದು ಇದನ್ನು ನೋಡುವದು ಮನೋವೇಧಕವಿರುವದು.

ಪ್ರಾರ್ಥನೆಯು ಭಕ್ತಿಮಾರ್ಗದ ಒಂದು ಅಂಗವಾಗಿರುವದೆಂಬುದು ಸ್ಪಷ್ಟವಷ್ಟೆ. ದೇವರ ಸರ್ವಶಕ್ತಿ ಮತ್ತು ತತ್ವದಲ್ಲಿ ಸಂಪೂರ್ಣ ವಿಶ್ವಾಸ ಹಾಗೂ ನಮ್ರತೆಯಿಂದ ಭಾವ ನಾಪೂರ್ವಕವಾಗಿ ಆಹ್ವಾನಿಸಿದರೆ ದೇವರು ತನಗೆ ಸಹಾಯ ಮಾಡೇನಾಯನನ, ಎಂಬ ನಂಬಿಕೆ ಇವು ಭಕ್ತನಲ್ಲಿ ಇದ್ದರೆ ಮಾತ್ರ ಪ್ರಾರ್ಥನೆ ಎಂಬುದು ಸಂಭವಿಸಲ್ಲದು. ತನ್ನ ಇಚ್ಛೆ, ತನ್ನ ಶಕ್ತಿ, ಇವುಗಳಿಗಿರುವ ಅಸಮರ್ಥತೆ ವಿರುವ ಎಂಬರಿವು ಕೂಡ ಭಕ್ತನಿಗೆ ಪೂರ್ಣವಾಗಿರುವದು ಪ್ರಾರ್ಥನೆಯಿಂದ ಭಕ್ತನು ತನ್ನನ್ನು ಸರ್ವಾತ್ಮನ ಆಧೀನನಾಡಿಬಿಡುವನು. ಹಾಗೂ ಆ ಶಕ್ತಿಯಿಂದ ಬಲಗೊಂಡು ಮುಂದೆ ಸಾಗುವನು. ಆದುದರಿಂದ ನಿರಂತರ ಜೀವನದಾಗ, ಯಾವಮಾತಿನಲ್ಲಿಗೆ ನಿರಂತರವಾಗಿ ಭಕ್ತನಿಗೆ ಪ್ರಾರ್ಥನೆಯು ಹೆಚ್ಚು ಪ್ರಯೋಜನವಾಗಬಲ್ಲದು. ಅದೇರೀತಿ ಯಾವದೊಂದು ಹೊಸಕಾರ್ಯವನ್ನು ಕೈಕೊಳ್ಳುವಾಗ ಕೂಡ ಪ್ರಾರ್ಥನೆ ಹೆಚ್ಚು ಉಪಯುಕ್ತವಾಗಬಲ್ಲದು. ಆರಂಭತ್ ಸ್ವಾರ್ಥಿಸುವಾಗ ಭಕ್ತನ ಸಂಕಲ್ಪವು ಶುದ್ಧವಿರಬೇಕು

೨ ಪುಟಕ್ಕೆ

ಸಮ್ಮಿಶ್ರ ಸರಕಾರ

ಭಾರತದಲ್ಲಿ ಈಗ ಕೇವಲ ಕಾಂಗ್ರೆಸ ಪಕ್ಷವು ರಾಜ್ಯಾಡಳಿತ ನಡೆಸಿದೆ. ಉಳಿದ ಪಕ್ಷಗಳು ಕಾಂಗ್ರೆಸ ಪಕ್ಷದ ದಾರಿಯು ಸರಿಯಲ್ಲವೆಂದೂ ಅದರಿಂದ ನಿಜವಾದ ಜನರ ಹಿತವು ಸಾಧಿಸುವದಿಲ್ಲವೆಂದೂ ಪ್ರಚಾರ ಮಾಡುತ್ತ ಬಂದಿವೆ.

ಆದರೆ ಈ ತರಹದ ಭಿನ್ನಪ್ರಕಾರ ಭಿನ್ನಾಭಿಪ್ರಾಯಗಳು ಎಷ್ಟರವರೆಗೆ ಹೀಗೆ ಸಾಗಬಲ್ಲವು? ಅವಕ್ಕೂ ಮಿತಿಯಿದೆ. ಮತ್ತು ಬೇಸಿಗೆಯೂ ಇದೇ ಮೊನ್ನೆ ಪಂಚವಾರ್ಷಿಕ ಯೋಜನೆಯು ಮುಂದೆ ಬಂದಾಗ ಈ ಪುನರ್ರಚನಾ ಕಾರ್ಯದಲ್ಲಿ ಸಹಕರಿಸುವುದಾಗಿ ಸಮಾಜವಾದಿಗಳು ಹೇಳಿದರು.

ನಿಜವಾಗಿ ನೋಡಿದರೆ ಕಾಂಗ್ರೆಸ ಸಮಾಜವಾದಿಗಳಲ್ಲಿ ಅಂತಹ ವಿರೋಧವು ಇರಲಿಕ್ಕೆ ಏನೂ ಕಾರಣವಿಲ್ಲ. ಅವರ ದೃಷ್ಟಿಕೋನವು ಹೆಚ್ಚು ಕಡಿಮೆ ಒಂದೇ ಆಗಿದೆ.

ಈ ಮೇರೆಗೆ ದೇಶದ ಹಿತದ ದೃಷ್ಟಿಯಿಂದ, ನಾಡಿನ ನಿಜಹಿತ ಚಿಂತಿಸುವ ಪಕ್ಷಗಳು, ತಮ್ಮಲ್ಲಿಯ ಚಿಕ್ಕ ಪುಟ್ಟ ಭೇದಗಳನ್ನು ಮರೆತು ಒಂದುಗೂಡಿ ಮುಂದೆ ನಿಂತಿರುವ ಸಮಸ್ಯೆಗಳನ್ನು ಸಹಕರಿಸುವುದರಲ್ಲಿ ಮಗ್ನವಾಗುವದು ಶ್ರೇಯಸ್ಕರವಾಗಿದೆ. ಪಂ. ನೆಹರೂರವರು ಆ ದಿಸೆಯಲ್ಲಿ ತುಂಬ ಹೃದಯವೈಶಾಲ್ಯತೆಯಿಂದವರಾಗಿದ್ದಾರೆ. ಅಂತೆಯೇ ಅವರು ಹೊರಗುಳಿದ ಪಕ್ಷಗಳನ್ನು ಒಳಗೆ ತೆಗೆದುಕೊಳ್ಳಲು ಯತ್ನಿಸುತ್ತಿದ್ದಾರೆ. ಇವರ ಕಾರ್ಯಕ್ಕೆ ಯಶಸ್ಸುಂಟಾಗಲಿ ಎಂದು ನಾವು ಹಾರೈಸೋಣ.

ವಿನೋಬಾರಿಗೆ ದಿವಾಕರರ ಕಾಣಿಕೆ.

ಬಿಹಾರ್ ರಾಜ್ಯಪಾಲಕರಾದ ಶ್ರೀ. ದಿವಾಕರರು, ಆಚಾರ್ಯ ವಿನೋಬಾ ಭಾವೆಯವರ ಸಂಪತ್ತಿ ದಾನ ಯಜ್ಞಕ್ಕೆ ಪ್ರತಿ ತಿಂಗಳು ಮೂರು ನೂರು ರೂಪಾಯಿ ಕೊಡಲು ನಿಶ್ಚಯಿಸಿದ್ದಾರೆಂದು ತಿಳಿದು ಬಂದಿದೆ.

ಮೊದಲನೆಯ ತಿಂಗಳ ವಂತಿಗೆಯನ್ನು ಈಗಾಗಲೇ ಆಚಾರ್ಯ ವಿನೋಬಾ ಭಾವೆಯವರಿಗೆ ಕಳಿಸಲಾಗಿದ್ದು ಈ ಹಣವನ್ನು ಗಯಾ, ಮತ್ತು ಪಲಾಮೌ ಜಿಲ್ಲೆಗಳ ಹರಿಜನರು ಮತ್ತು ಆದಿವಾಸಿಗಳ ಉದ್ಧಾರಕ್ಕಾಗಿ ಉಪಯೋಗಿಸಲು ಸೂಚಿಸಲಾಗಿದೆ.

— ಸ ವಿ ಗ ನ ಸ —

ಎಲ್ಲಿಂನೆನೆಲ್ಲಿರುನೆ
ನೆಲ್ಲಿರುವೆ ನಾನೀಗ
ಕಲ್ಲಿರುವೆನೆನೋ ಏನು
ಮಣ್ಣಿರುವೆನೋ?
ಓರಿ ಹೋಯಿತು ಓಜ
ಹಾರಿ ಹೋಯಿತು ತೇಜ
ಏರಿಬಿವೆನೋ ನಾನು
ಇಳಿದಿರುವೆನೋ? ॥೧॥

ಮುನ್ನ ನೋಡಿದ ನಾಡು,
ಇನ್ನು ಇದೀಗ ನಾ
ನನ್ನ ಕಣ್ಣುಗಳಿಂದ
ಕಂಡ ಕಡೆಯು
ಕಾಣದಾಯಿತು ದೃಷ್ಟಿ
ಬಾಣವಾಯ್ತೀ ದೃಷ್ಟಿ
ಹೆಣವಾದ ದೇಹದೊಳು
ಬಿದ್ದಿರುವೆನು ॥೨॥

—ಅಂಬಿಕಾತನಯ ದತ್ತ.

ಹೆಪ್ಪು ಕಾಂಗ್ರೆಸ್ಸಿಗೆ ಸಿಗಲಾರದು

ಭಾರತದಲ್ಲಿ ಕಾಂಗ್ರೆಸ್ಸಿನ ಬಲುಮೆಯಿಂದ ತಪ್ಪಿಸಿಕೊಂಡಿರುವ ದೇಶದ್ರೋಹಿಗಳೇ-ಹೆಪ್ಪು! ಕಾಂಗ್ರೆಸ್ಸಿಗರಿಗೆ ಇವರಿಂದ ತುಂಬ ವ್ಯಥೆಯುಂಟು. ಸದ್ಯ ಅಲ್ಲಿಯ ಮುಖ್ಯ ಮಂತ್ರಿಗಳಾದಿಯಾಗಿ ಹಲವರ ಜನ್ಮಾವಧಿ ರದ್ದಾಗಿದೆ ಇವರಿಂದಾದರು. ಮುಂ ಕಾಂಗ್ರೆಸ್ಸೇ ಸರಕಾರವನ್ನು ಹುಟ್ಟಿಸೀತು ಎಂದು ಬಾಯಿಯಲ್ಲಿ ನೀರೂರಿಸಿದ್ದರು ಕೆಲವರು ಕೆಲವರು ಕಾಂಗ್ರೆಸ್ಸಿಗರು. ಆದರೆ ಸಂಯುಕ್ತಪಕ್ಷವು ಇನ್ನೂ ಬಲಾಢ್ಯವಾಗಿದೆ ಈಗ ಪುನಃ ಸರದಾರ್ ಹೋಚಂದಸಿಂಗರೆಂಬ ಕಾಂಗ್ರೆಸ್ಸಿಗರು ಕಾಂಗ್ರೆಸ್ಸಿನಿಂದ ಹೊರ ಬಂದು ಸಂಯುಕ್ತ ಪಕ್ಷವನ್ನು ಸೇರಿದ್ದಾರೆ ಅಲ್ಲಿ ಒಟ್ಟಿಗೆ ಎಂಟು ಜನರ ಚುನಾವಣೆ ರದ್ದಾಗಿದ್ದು ಇನ್ನು ಚುನಾವಣೆ ನಡೆಯಬೇಕು.

ಸಿರಿಗುನ್ನೆಯ ಹಂಚಿಕಾಯಿತಿ ಭೋರ್ಡು ಚುನಾವಣೆ

ಉಂತಗಲ್ಲು ಶ್ರೀ ಸಣ್ಣಮಲ್ಲಪ್ಪನವರು ಬಹುಮತದಿಂದ ಅಧ್ಯಕ್ಷರಾಗಿಯೂ, ಶ್ರೀ. ವಿರುಪಾಪುರಂ ವೀರಣ್ಣನವರು ಉಪಾಧ್ಯಕ್ಷರಾಗಿಯೂ, ಶ್ರೀ. ಬಿ. ಸೀತಾರಾಮಯ್ಯ. ಶ್ರೀ. ಬಿ ಗೋಡಪ್ಪ. ಶ್ರೀ. ಎಸ್. ಆದವಾನಿ ಈರಣ್ಣ ಜನಾಬ್ ಅಬ್ದುಲ್ಲಾ ಶ್ರೀ ದೇಕಣ್ಣ ಶ್ರೀ. ನರಸಿಂಹಯ್ಯ ಮೆಂಬರುಗಳಾಗಿಯೂ ಆರಿಸಿಬಂದಿದ್ದಾರೆ

ಪ್ರಾರ್ಥನೆ

4 ನೇ. ಪುಟದಿಂದ

ಭಕ್ತಿ ವಿಶ್ವಾಸಗಳು ಅಪಾರವಾಗಿರಬೇಕು, ದೇಹದೊಡನೆ ತನ್ಮಯನಾಗಿ ಅವನನ್ನು ಆರಾಧಿಸುವ ಸಿದ್ಧತೆಯಾದರೂ ವಿಫಲವಾಗಬಾರದು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇನ್ನು ಭಕ್ತನು ಭಗವಂತನೊಂದಿಗೆ ಸ್ವಸಂಗದಲ್ಲಿ ಮಾತ್ರ ಇಹದಾ ಯಾವುದೊಂದು ಸಂಕಲ್ಪವನ್ನು ಸಾಧಿಸುವ ಸಂದರ್ಭದಲ್ಲಿ ಪ್ರಾರ್ಥಿಸಬೇಕು ಎಂದು ಯಾರೂ ತಿಳಿಯಕೂಡದು. ಭಕ್ತನು ಪ್ರಾರ್ಥನೆಗೂ ನಿತ್ಯ ಪ್ರಾರ್ಥನೆ ಮಾಡಬಲ್ಲನು. ಪ್ರಾರ್ಥನಾ ಭಾವದಿಂದಲೆ ಜನನು ತನ್ನ ಜೀವನವನ್ನು ನಡೆಸಬಲ್ಲನು. ತಾನು ಅಲ್ಪ ಒಕ್ಕಿ, ಪರಮಾತ್ಮನು ಸರ್ವಶಕ್ತನೆಂತನು, ಎಂಬ ಭಾವನೆಯಿಂದ ಪ್ರಾರಂಭಮಾಡಿ ಪ್ರಾರ್ಥನಾ ಶೀಲನಾದ ಭಕ್ತನು, ದೇವರೇ ಎಲ್ಲವನ್ನು ಮಾಡುವನು, ತಾನು ನಿಮಿತ್ತಮಾತ್ರನು, ಎಂಬ ಸ್ಥಾಯೀಭಾವದ ಪರಿಗೆ ತನ್ನ ವಿಕಾಸನವನ್ನು ಮಾಡಿಕೊಳ್ಳಬಲ್ಲನು. ಈ ರೀತಿ ಆತ್ಯಸಿವೇದನೆಯೆ ಈ ಮಾರ್ಗದಲ್ಲಿ ಪರಮಾವಧಿಯ ಅವಸ್ಥೆ ಅಥವಾ ಪರಮಗತಿ ಎನಿಸುವದು.

ಪ್ರಾರ್ಥನೆ ಎಂಬುದು ವೈದಿಕ-ಕಾಲದಿಂದಲೂ ನಡೆಯುತ್ತ ಬಂದ ಸಾಧನ ವಿಶೇಷವಾಗಿದೆ. ಋಗ್ವೇದದಲ್ಲಿ ಪ್ರಾರ್ಥನಾಸರ ಮಂತ್ರಗಳು ಹೇರಳವಾಗಿವೆ. ಉದಾ:- ವೃಥಮು ಮಂಡಲದಲ್ಲಿಯ (೧.೮೯.೬)' ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ಸ್ವಸ್ತಿನಃ ಪೂಷಾ ವಿಶ್ವವೇದಾಃ ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿ ನೋಬೃಹಸ್ಪತಿರ್ದಧಾತು॥, ಈ ಮಂತ್ರವನ್ನೇ ನೋಡುವ. ಸ್ವಸಿವ್ಯ ಪುರುಷನಾದ ಇಂದ್ರ, ವಿಶ್ವವೇದನಾದ ಪೂಷನ್ ಮಹಾನ್ ಗರುಡ, ಮತ್ತು ಬೃಹಸ್ಪತಿ ಇವರೆಲ್ಲರೂ ಅಕ್ಷಯ ಸುಖವನ್ನು ನಮಗೆ ದಯಪಾಲಿಸಲಿ, ಎಂಬ ಪ್ರಾರ್ಥನೆ ಇಲ್ಲಿ ಇದೆ. ವೇದಗಳಲ್ಲಿ ಕೇವಲ ಐಹಿಕವಾಯ, ಭೌತಿಕ ಸಂಪತ್ತು, ವೈಭವ ಇವುಗಳ ಬಗ್ಗೆಯೆ ಪ್ರಾರ್ಥನಾ ಮಂತ್ರಗಳಿವೆ, ಎಂದು ಹಲವರು ತೀರ್ಮಾನಿಸುವರು, ಆದರೆ, ಅಭ್ಯುದಯ, ನಿಃಶ್ರೇಯಸ, ಈ ಎರಡೂ ಧ್ಯೇಯಗಳನ್ನು ಸಾಧಿಸುವುದೇ ಋಷಿ-ಮುನಿಗಳ ಗುರಿಯಾಗಿತ್ತು, ಎಂಬುದನ್ನು ಬೇರೆ ಹೇಳಬೇಕಾಗಿಲ್ಲ ಲೌಕಿಕ ಅಭ್ಯುದಯ, ಪಾರಮಾರ್ಥಿಕ ನಿಃಶ್ರೇಯಸ ಇವೆರಡನ್ನೂ ಏಕಕಾಲದಲ್ಲಿ ಸಾಧಿಸುವುದ ಕ್ಕಾಗಿಯೆ ಆಗಿನ ಸಾಧಕರು ಹೆಣಗುತ್ತಿದ್ದರು ಆದರಿಂದ ಉಜ್ವಲವಾದ ಹಾಗೂ ಸುದೀರ್ಘವಾದ ಆಯುಷ್ಯವನ್ನು ಕೋರುವಂತೆ ಪುರಾತನರು 'ಸತ್ಯ ಧರ್ಮಪ್ರ ದೃಷ್ಟಿಯೇ ಸತ್ಯ ಧರ್ಮದ ದರ್ಶನಕ್ಕಾಗಿ ಸೂರ್ಯದೇವತೆಯ ಅಥವಾ ಜ್ಞಾನದೇವತೆಯ ಆರಾಧನೆಯನ್ನು ಪರರೂ ತೀವ್ರ ನಿಷ್ಠೆಯಿಂದ ಮಾಡುತ್ತಿದ್ದರು

ನನ್ನ ನವಭಾರತದ ಕನಸು ನನಸಾಗುತ್ತಿದೆ.

ಪ್ರಧಾನ ಮಂತ್ರಿಗಳಿಂದ ರೇಲ್ವೆ ಪ್ರದರ್ಶನದ ಉದ್ಘಾಟನೆ

ಹೊಸದಿಲ್ಲಿ— ಈ ವಿಶಾಲ ರಾಷ್ಟ್ರದಲ್ಲಿ ನಡೆಯುತ್ತಿರುವ ಬೃಹದಾಕಾರದ ನಿರ್ಮಾಣಕಾರ್ಯವನ್ನು ಕಂಡು ನನಗಾಗಿರುವ ಅಪರಿಮಿತ ಉತ್ಸಾಹದಲ್ಲಿ ಭಾಗಿಯಾಗಲು ನಾನು ಎಲ್ಲ ಧಾರಕೀಯರನ್ನು ಆಮಂತ್ರಿಸುತ್ತೇನೆ. ಭಾರತ ಮಾತೆಯು ಇಂದು ಪ್ರಸವ ವೇದನೆಯಲ್ಲಿರುತಾಳೆ ಈ ನಮ್ಮ ವೈದ್ಯ ಮಾತೆಯು ಎಷ್ಟೋ ಸುಹತ್ವ ಶಕ್ತಿಗಳಿಗೆ ಈ ಮೊದಲು ಜನ್ಮ ಕೊಟ್ಟಿರುವಳು. ಇಂದು ಮಹಾಕಾರ್ಯಗಳಿಗೆ ಜನ್ಮ ಕೊಡುತ್ತಿದ್ದು ಇನ್ನೂ ಶ್ರೇಷ್ಠವಾದ ವಸ್ತುಗಳಿಗೆ ತಾಳಿ ಜನ್ಮ ಕೊಡುವಳು,, ಎಂದು ಪ್ರಧಾನಮಂತ್ರಿ ಶ್ರೀ ನೆಹರೂರು ಇಂದು ಹೇಳಿದರು.

ಪ್ರಧಾನ ಮಂತ್ರಿಗಳು ಮತ್ತು ಹೀಗೆಂದರು — "ಈ ರೀತಿಯ ಪ್ರದರ್ಶನಗಳಿಂದ ಭೂತಕಾಲದ ವಿಷಯಗಳಲ್ಲದೆ, ಭವಿಷ್ಯತ್ತಿನಲ್ಲಿ ನಾವೇನು ಮಾಡಬೇಕೆಂಬುದನ್ನು ಸಹಕಲಿಯಬಹುದಾದ್ದರಿಂದ ಇವುಗಳನ್ನು ನೋಡಲು ಆಂದನವಾಗುತ್ತದೆ. ಭಾರತದಾದ್ಯಂತ ಹೊಸ ಕಾರ್ಯಗಳು ಪ್ರಾರಂಭವಾಗಿ, ನನ್ನ ಕನಸಿನ ನವಭಾರತ ಉದಯವಾಗುವುದನ್ನು ಕಾಣಲು ಉತ್ಸಾಹ ಭರಿತನಾಗಿದ್ದೇನೆ. ಕೆಲ ದಿನಗಳ ಮೊದಲು ದಾಮೋದರ ಕೊಳ್ಳದಲ್ಲಿ ತಿಲೈಯಾ ಒದ್ದು ಮತ್ತು ಬೊಖಾರಾ ವಿದ್ಯುದಾಗರ ನೋಡಿದ್ದನ್ನು ಅಲ್ಲಿಯ ಕಾರ್ಯವನ್ನು ಎಂದೂ ಮರೆಯಲಾರೆ ಮಹಾಶ್ಚರ್ಯ ಮಾಡಬೇಕೆಂದು ನಿರ್ಧರಿಸುವುದರಿಂದಲೇ ದೊಡ್ಡವರಾಗುತ್ತೇವೆ. ಆ ಕಾರ್ಯ ಪೂರ್ತಿಯಾಗಿ ಕಣ್ಮುಂದೆ ನಿಂತಾಗ ನನಗೆ ಗರ್ವ ವತ್ತು ಆನಂದವಾಗುತ್ತದೆ.

ಆಧಿಕಾರದ ಸ್ಥಳಗಳಿಂದ ಕಿತ್ತೊಗೆಯಬೇಕೆಂದೂ ಅಹಮ್ಮದೀಯಾ ಜನರು ಮುಸಲ್ಮಾನೇತರರೆಂದು ಸಾರಬೇಕೆಂದೂ ಆ ಮುಲ್ಲಾ ಜನರು ಅನ್ನುತ್ತ ಈ ಗಲಭೆಗಳನ್ನು ಎಬ್ಬಿಸಿದ್ದಾರೆ. ಹೀಗೆಯೇ ನಡೆಯಲು ಬಿಟ್ಟರೆ ಈ ವಿಚಾರಣೆಯು ಎಲ್ಲಿಗೆ ಹೋದೀತು ಎಂಬುದನ್ನು ಪಾಕಿಸ್ತಾನೀ ಕರ್ಣಧಾರರಿಗೇ ವಿಚಾರಿಸಬೇಕು.

ಕುರಾನಿನ ತತ್ವಗಳ ಅನ್ವಯ ಅಲ್ಲಿಯ ರಾಜ್ಯಭಾರವು ನಡೆಯಬೇಕು ಎನ್ನುತ್ತಿದ್ದುದು ಎತ್ತ ಇಂದು ಆ ತತ್ವಗಳ ಉಪದೇಶಕ ಗುರುಗಳಾದ ಮುಲ್ಲಾರನ್ನೇ ಬಂಧಿಸಿಡುವ ಪ್ರಸಂಗ ಬಂದುದು ಎತ್ತ? ಈ ಜಾತ್ಯಂಧತೆಯ ಪಿಡುಗು ಬಹುಭಯಾನಕವಾಗಿದೆ. ಅದು ಹೊರಗಿನವರು ಸಿಗದಿದ್ದರೆ ಮನೆಯಲ್ಲಿಯೇ ತಾರತಮ್ಯ ಮಾಡಹಚ್ಚುತ್ತದೆ. ಅಹಮ್ಮದಿಯಾ ಜನರನ್ನು ಈ ರೀತಿ ನೋಡುವವರು, ಅಲ್ಲಿಯ ಇತರ ಧರ್ಮೀಯರನ್ನು ಯಾವ ದೃಷ್ಟಿಯಿಂದ ಕಾಣುತ್ತಿರಬಹುದು ಎಂಬದನ್ನು ಸಹಜವಾಗಿ ಊಹಿಸಬಹುದಾಗಿದೆ.

ಅದ್ದರಿಂದ ಇವೆಲ್ಲ ಮಾತುಗಳನ್ನು ಗಂಭೀರವಾಗಿ ಆಲೋಚಿಸಿ ಪಾಕಿಸ್ತಾನ ಸರಕಾರವು, ಸರ್ವಜನ ಹಿತಕಾರಿಯಾದ ಧೋರಣದಿಂದ ಸಾಗುತ್ತ, ಈ ಜಾತ್ಯಂಧ ಗುಂಪಿಗೆ ಸಮಿದಾರಿ ತೋರಿಸಲು ಯತ್ನಿಸುವುದು ಆದರ ದೃಷ್ಟಿಯಿಂದಲೇ ಶ್ರೇಯಸ್ಕರವಾಗಿದೆ.

ಪಾಕಿಸ್ತಾನದ ಪರಿಸ್ಥಿತಿ

ಪಾಕಿಸ್ತಾನದಲ್ಲಿ ಅಹಮ್ಮದೀಯ ಪಂಥದ ವಿರೋಧಿಗಳ ಚಟುವಟಿಕೆಗಳು ನಿಮಿಷೀರವೆ. ಅವುಗಳ ಮೂಲಕ ಅಲ್ಲಿ ಭಯಂಕರ ವಾತಾವರಣ ಉಂಟಾಗಿದೆ. ಸರಕಾರೀ ಕಾಯದೆ ಕಾನೂನುಗಳ ಪರಿಯೇ ಇಲ್ಲದೆ ಜನ ವರ್ತಿಸುತ್ತಿದ್ದಾರೆ. ಈ ಆಂದೋಲನದ ಸಂಬಂಧದಲ್ಲಿ ಅನೇಕ ಮುಲ್ಲಾಗಳನ್ನು ಪಾಕಿಸ್ತಾನ ಸರಕಾರವು ಬಂಧಿಸಿದೆ. ಉಳಿದ ಅನೇಕ ಜನರೂ ಸೆರೆ ಕಂಡಿದ್ದಾರೆ. ಇದಲ್ಲದೆ ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗ ಮತ್ತು ಗುಂಡಿನ ಸುರಿಮಳೆಗಳನ್ನು ಕೂಡ ಅಲ್ಲಿಯ ಸರಕಾರವು ನಡೆಸಿತು ಸೈನಿಕರನ್ನು ಮತ್ತು ರಣರಂಗದ ಟ್ಯಾಂಕುಗಳನ್ನು ಪಟ್ಟಣದ ಬೀದಿಗಳಲ್ಲಿ ಓಡಾಡಿಸುತ್ತ ಶಾಂತಿ ಮತ್ತು ಸುವ್ಯವಸ್ಥೆಗಳನ್ನು ಅವರು ಕಾಯಬೇಕಾಗಿದೆ.

ಜಾತೀಯ ನಿಷ್ಠೆಯದರ ಪರಿಣಾಮವು ಎಲ್ಲಿಯವರಿಗೆ ಹೋಗುತ್ತಿದೆ. ಎಂಬುದು ಈಗಲಾದರೂ ಪಾಕಿಸ್ತಾನೀ ರಾಜ್ಯ ಸೂತ್ರಧಾರರಿಗೆ ತಿಳಿದಿರಲುಸಾಕು. ಪಾಕಿಸ್ತಾನವನ್ನು ನಿರ್ಮಿಸಿದ ಜಿನ್ನಾಸಾಹೇಬರ ಈ ದೃಶ್ಯವನ್ನು ನೋಡಲು ಇಂದು ಇಲ್ಲ ಅವರ ಉತ್ತರಾಧಿಕಾರಿಗಳಾದರೂ ಇಂದಿನ ಚಟುವಟಿಕೆಗಳ ಮೂಲಕ ಬುದ್ಧಿಗಲಿತರೆ ಒಳ್ಳೆಯದೇ ಆದೀತು.

ಮುಸಲ್ಮಾನೀ ಧರ್ಮಾದವರಲ್ಲಿ ಅವಾಸ್ತವ ಅಭಿಮಾನ ತುಂಬಿ ಪಾಕಿಸ್ತಾನದ ಬೇಡಿಕೆಯು ನನಸಿಗೆ ಕಲ್ಪಿಸಿ

ಈ ವಿಚಾರದಿಂದ ಉತ್ಸೇಕಿತರಾದ ಮುಲ್ಲಾಕು ಜನರು ಆಲ್ಲಿಯ ರಾಜ್ಯವು ಕೇವಲ ಕುರಾನಿನ ತತ್ವಗಳ ಮೇಲೆ ನಡೆಯಬೇಕೆಂದು ಕೇಳಿದರು ಈಗ ಆ ಮುಸಲ್ಮಾನರಲ್ಲಿಯದೇ ಒಂದು ಪಂಗಡವಾದ ಅಹಮ್ಮದೀಯಾ ಜನರನ್ನು ರಾಜ್ಯ

ಆಗಮನ

ನೀಲಾಕ್ಷನನೇರಿ
ನುನದ ಕ್ಷಿತಿಜಪ ಸಾರಿ
ದಿವ್ಯ ಹಾಸದ ಬೀರಿ
ತಾಯಿ ನೀ ಬರುವಿ!
ನೂರು ಕೊಳಲಿನ ಧ್ವನಿಯು
ಬಾಳ ಚಿಂತಾಮಣಿಯ
ವಿಶ್ವದರಿವಿನ ಕಣಿಯ
ಒಡನೆ ತರುವಿ.
ಆಗಮನಳೆದೆಯುಕ್ಕಿ
ನಿನ್ನೊಳಿಗದ ಹಕ್ಕಿ —
ನಿಮಿಷಗಳ ಪಿಳಲಕ್ಕಿ —
ಒಲಿದು ಹಾಡುವವು
ಬರುವನಳ ಸಂತೈರಿ
ಬಂದೊಡನೆ ಸಂಭ್ರಮಿಸಿ
ತಮ್ಮ ಹಾಡನು ನಿರಿಸಿ
ನಿನ್ನ ನೋಡುವವು!

— ವಿನಾಯಕ

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿನ

O. P. 1/53.

ಕಡಪ ಶಾರದಮ್ಮ — ಅರ್ಜದಾರರು.

ನೋಟೀಸು

ಮೃತಳಾದ ಗುಮ್ಮನೂರು ಸುಂದರಮ್ಮಗೆ ಎಂಪ್ಲೈರ್ ಆಫ್ ಇಂಡಿಯಾ ಲೈಫ್ ಇಂಶೂರೆನ್ಸ್ ಕೊ. ಲಿಮಿಟೆಡ್ ಬಾಂಬೆ ಇವರ ಕಡೆಯಿಂದ ಬರತಕ್ಕ ನೊತ್ತವನ್ನು ಮೇಲ್ಕಂಡ ಅರ್ಜದಾರಳು ಸದರಿ ಸುಂದರಮ್ಮಗೆ ತಾನು ವಾರಸುದಾರಳೆಂದು ಸದರಿ ನೊತ್ತವನ್ನು ವಸೂಲಿ ಮಾಡಿಕೊಳ್ಳಲು ಅಧಿಕಾರ ಕೊಡಬೇಕೆಂದು ಇಟ್ಟ ಅರ್ಜ ವಾಯಿದೆಯು 8—4—53 ಕ್ಕೆ ಇರುವದು ಯಾರಿಗಾದರೂ ಆಕ್ಷೇಪಣೆ ಇದ್ದಪಕ್ಷದಲ್ಲಿ ಆ ದಿನ 11 ಗಂಟೆಗೆ ಕೋರ್ಟಿನಲ್ಲಿ ಹಾಜರಾಗತಕ್ಕದ್ದು.

ಕಂದಿ ಪೂರ್ಣಪ್ರಜ್ಞಾಚಾರ್
ಅರ್ಜದಾರರ-ವಕೀಲರು

ತಾಳೆಯ ಬೆಲ್ಲದ ಕೈಗಾರಿಕೆ.

ತಾಳೆಯ ಬೆಲ್ಲದ ಉತ್ಪತ್ತಿಯನ್ನು ಹೆಚ್ಚಿಸುವುದರಿಂದ ಈಗ ಕಬ್ಬು ಬೆಳೆಯುತ್ತಿರುವ ಫಲವತ್ತಾದ ಭೂಮಿಯಲ್ಲಿ ಗೋಧಿಯನ್ನಾಗಲಿ ಭತ್ತವನ್ನಾಗಲಿ ಬೆಳೆಯಬಹುದು

ಮಧ್ಯನಿರೋಧವು ಜಾರಿಕೆ ಬಂದಂದಿನಿಂದ ನಮ್ಮ ಸಂಸ್ಥಾನದಲ್ಲಿ ತಾಳೆ ಬೆಲ್ಲದ ಕೈಗಾರಿಕೆಯು ಅಭಿವೃದ್ಧಿಗೊಳ್ಳುತ್ತಿದೆ. ಮಾಜಿ ಮೂರ್ತದಾರರಿಗೆ ಉದ್ಯೋಗವನ್ನು ದೊರಕಿಸಿಕೊಡುವ ದೃಷ್ಟಿಯಿಂದ ಈ ಕೈಗಾರಿಕೆಗೆ ಸರಕಾರವು ಪ್ರೋತ್ಸಾಹವನ್ನು ಕೊಟ್ಟಿತ್ತು. ಬಳ್ಳಾರಿ ಮತ್ತು ಕಡಪ ಜಿಲ್ಲೆಗಳನ್ನು ಬಿಟ್ಟು ಇತರ ಎಲ್ಲಾ ಜಿಲ್ಲೆಗಳಲ್ಲೂ ಸಿಹಿ ಮದ್ಯವನ್ನು ತಯಾರಿಸಲು ಸರಕಾರವು ಅನುಮತಿ ಇತ್ತಿತು. ಸರಕಾರದ ನಿಬಂಧನೆಯ ಪ್ರಕಾರ ಸಂಸ್ಥಾನದಲ್ಲಿರುವ 60 ಸಹಕಾರಿ ಸಂಘಗಳ ಸದಸ್ಯರಿಗೆ ಮಾತ್ರವೇ ಸಿಹಿ ಮದ್ಯವನ್ನು ತಯಾರಿಸಲು ಪರ್ಮಿಟ್‌ನ್ನು ಕೊಡಲಾಗುತ್ತದೆ. ಮಾಜಿ ಮೂರ್ತದಾರರು ಸದಸ್ಯರಾಗಿರುವ ಬೆಲ್ಲ ತಯಾರಿ ಸಹಕಾರಿ ಸಂಘಗಳು ಸ್ಥಾಪಿಸಲ್ಪಟ್ಟಿವೆ. 1952 ನೇ ಜೂನ್ ಅಂತ್ಯಪಟ್ಟಿ ಸಂಸ್ಥಾನದಲ್ಲಿ 2,115 ಬೆಲ್ಲ ತಯಾರಿಸುವ ಸಹಕಾರ ಸಂಘಗಳಿದ್ದು ಅವುಗಳಲ್ಲಿ ಒಟ್ಟು 1.3 ಲಕ್ಷ ಜನರು ಸದಸ್ಯರಾಗಿದ್ದರು. 1953 ನೇ ಜೂನ್‌ನಲ್ಲಿ ಅಂತ್ಯವಾಗುವ ಒಂದು ಒಂದು ವರ್ಷದಲ್ಲಿ ಈ ಸಹಕಾರಿ ಸಂಘಗಳು ಒಟ್ಟು 22.53 ಲಕ್ಷ ಮಣ ಬೆಲ್ಲವನ್ನು ತಯಾರಿಸಿದ್ದುವು. ಸದಸ್ಯರು ತಯಾರಿಸಿದ ಬೆಲ್ಲವನ್ನು ಉತ್ತಮ ಬೆಲೆಗೆ ಮಾರಾಟ ಮಾಡುವುದರಲ್ಲೂ ಸಹಕಾರ ಸಂಘಗಳು ಸಹಾಯಕವಾಗುತ್ತವೆ.

ಸರಕಾರದ ಪ್ರೋತ್ಸಾಹ

ತಾಳೆ ಬೆಲ್ಲ ತಯಾರಿಕೆಯ ಕೈಗಾರಿಕೆಯ ಅಭಿವೃದ್ಧಿಗಾಗಿ ಸರಕಾರವು 1949 ಡಿಸೆಂಬರ್‌ದಲ್ಲಿ ಒಂದು ಯೋಜನೆಯನ್ನು ಕಾರ್ಯರೂಪದಲ್ಲಿ ತಂದಿತು. ಈ ಯೋಜನೆಯ ಪ್ರಕಾರ ಕಡಲೂರಿನಲ್ಲಿರುವ ತಾಳೆ ಬೆಲ್ಲ ತಯಾರಿಕೆಯ ಕೇಂದ್ರದಲ್ಲಿ ಕೆಲವು ಜನರಿಗೆ ತರಬೇತಿಯನ್ನು ಕೊಡುವುದು ಮೊದಲನೆಯ ಕಾರ್ಯಕ್ರಮ. ಹೀಗೆ ತರಬೇತಿಪಡೆದ ಜನರನ್ನು ತಾಳೆ ಬೆಲ್ಲ ತಯಾರಿಸುವ ಕೇಂದ್ರಗಳಿಗೆ ಕಳುಹಿಸಿ ಅವರ ಸಹಾಯದಿಂದ ಸಹಕಾರಿ ಸಂಘಗಳ ಸದಸ್ಯರು ಉತ್ತಮ ಜಾತಿಯ ಬೆಲ್ಲವನ್ನು ತಯಾರಿಸಲು ಅರಿಯುವಂತೆ ಮಾಡುವುದು ಯೋಜನೆಯ ಉದ್ದೇಶವಾಗಿತ್ತು.

ಕಬ್ಬಿನೆಯ ಉಪಯೋಗವನ್ನು ಕಡಮೆ ಮಾಡುವ ಹೊಸ ವಿಧದ ಫರ್ನೇಸ್ (safety furnace) ಉಪಯೋಗವನ್ನು ಮಾಡುವ ಹಾಗೆ ಮಾಡಿಕೆಗೆ ಸಲಕರಣೆಯನ್ನು ಹಚ್ಚುವ ವಿಧಾನ, ಮದ್ಯವನ್ನು ಕುದಿಸುವುದರ ಮೊದಲು ಅದರಲ್ಲಿದ್ದ ಸುಣ್ಣವನ್ನು ಸ್ಯೆಕೆಸುವ ಕೆಲವು ವಿಧಾನಗಳು ಮತ್ತು ಸಂಗ್ರಹಿಸಿ ಸಾಧನಗಳ ಉಪಯೋಗ ಮುಂತಾದ ವಿಚಾರಗಳಲ್ಲಿ ಪದಸ್ಥರಿಗೆ ತರಬೇತಿಯನ್ನು ಕೊಡಲಾಗಿದೆ. ಪರಿಷ್ಕೃತ ಬೆಲ್ಲ ತಯಾರಿಕೆಯ ಸಾಧನಗಳು ಹೆಚ್ಚಾಗಿ ಬಳಕೆಯಲ್ಲಿ ಬರುವಂತೆ ಮಾಡಲು ಸರಕಾರವು ಫರ್ನಾರ್ಡ್ ವಾಗಿ ಇಂತಹ ಸಾಧನಗಳನ್ನು ಸಹಕಾರಿ ಸಂಘಗಳಿಗೆ ಒದಗಿಸಿ ಕೊಟ್ಟಿತು. ಇಂತಹ ಸಲಕರಣೆಗಳನ್ನು ತಯಾರಿಸಿ, ಬೆಲ್ಲ ತಯಾರಿಸುವ ಸಹಕಾರಿ ಸಂಘಗಳ ಸದಸ್ಯರಿಗೆ ಒದಗಿಸುವುದಕ್ಕೆ ಸರಕಾರವೇ ಏರ್ಪಾಡು ಮಾಡಿರುವುದು. 1952 ನೇ ಜೂನಿಗೆ ಅಂತ್ಯವಾಗುವ ವರ್ಷದಲ್ಲಿ 4,611 ಜನರಿಗೆ ಸುಧಾರಿತ ಬೆಲ್ಲ ತಯಾರಿಸುವುದರಲ್ಲಿ ತರಬೇತಿಯನ್ನು ಕೊಡಲಾಗಿದೆ ಹೀಗೆ ತರಬೇತಿಯನ್ನು ಪಡೆದ ಜನರು 3,656 ಮಂ ಉತ್ತಮ ಜಾತಿಯ ಬೆಲ್ಲವನ್ನು ತಯಾರಿಸಿರುವರು.

ಸಿಹಿ ಮದ್ಯವು ಒಂದು ಉತ್ತಮ ಪಾನೀಯವಾಗಿದೆ. ಮದ್ಯ ನಿರೋಧವು ಜಾರಿಗೆ ಬರುವ ಮೊದಲು ರಾಮನಾಥಪುರಂ ಮತ್ತು ತಿರುನೆಲ್ವೇಲಿ ಜಿಲ್ಲೆಗಳ ಜನರು ಮಾತ್ರವೇ ಸಿಹಿ ಮದ್ಯವನ್ನು ಪಾನೀಯವಾಗಿ ಉಪಯೋಗಿಸುತ್ತಿದ್ದರು. ಆದುದರಿಂದ ಸಿಹಿ ಮದ್ಯವನ್ನು ತಯಾರಿಸಿ ಜನರಿಗೆ ಒದಗಿಸಿ ಕೊಡುವುದಕ್ಕೆ ಈ ಎರಡು ಜಿಲ್ಲೆಗಳ ಬೆಲ್ಲ ತಯಾರಿಸುವ ಸಹಕಾರಿ ಸಂಘಗಳ ಸದಸ್ಯರಿಗೆ ಸರಕಾರವು ಅನುಮತಿ ಕೊಟ್ಟಿತು. ಈ ಪಾನೀಯವನ್ನು ಸಂಸ್ಥಾನದ ಇತರ ಭಾಗಗಳಲ್ಲೂ ಪ್ರಚಾರಕ್ಕೆ ತರುವ ದೃಷ್ಟಿಯಿಂದ ಮದ್ರಾಸಿನಲ್ಲಿ ಎರಡು ನೀರಾ ಅಂಗಡಿಗಳನ್ನು ತೆರೆಯಲಾಗಿದೆ. ಸ್ಥಳೀಕ ಸಹಕಾರ ಸಂಘದ ಸಹಾಯದಿಂದ ಮಂಗಳೂರಿನಲ್ಲೂ ಒಂದು ಇಂತಹ ನೀರಾ ಅಂಗಡಿಯನ್ನು ತೆರೆಯುವ ಸೂಚನೆಯನ್ನು ಸರಕಾರವು ಈಗ ಪರ್ಯಾಲೋಚಿಸುತ್ತಿದೆ.

ಸಕ್ಕರೆ ತಯಾರಿಸುವ ಪ್ರಯತ್ನ

ಸೆಂಟ್ರಿಫ್ಯೂಗಲ್ ಪಂಪುಗಳನ್ನು ಉಪಯೋಗಿಸಿ ತಾಳೆ ಮರದಿಂದ ಸಿಗುವ ಸಿಹಿ ಹೆಂಡದಿಂದ ಸಕ್ಕರೆ ತಯಾರಿಸುವ ಪ್ರಯೋಗಗಳು ನಡೆಯುತ್ತಿವೆ ಅಲ್ಲದೆ, ತಾಳೆಬೆಲ್ಲದಿಂದ ಮಿಠಾಯಿ, ಟೋಫೀ (Toffee) ಮುಂತಾದ ವಸ್ತುಗಳನ್ನು ತಯಾರಿಸುವ ಪ್ರಯತ್ನಗಳೂ ನಡೆಯುತ್ತಿವೆ

ಸಹಕಾರಿ ಸಂಘಗಳ ಮೂಲಕ ತಾಳೆ ಬೆಲ್ಲವನ್ನು ತಯಾರಿಸುವ ಕೈಗಾರಿಕೆಯಲ್ಲಿ ನಮ್ಮ ಸಂಸ್ಥಾನವು ವಿಶೇಷವಾಗಿ ಮುಂದುವರಿದಿರುವುದು ಆದುದರಿಂದ ನಮ್ಮ ಸಂಸ್ಥಾನದಲ್ಲಿ ಒಂದು ತಾಳೆ ಬೆಲ್ಲ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರಕಾರವು ನಿರ್ಧರಿಸಿರುವುದು.

ನಮ್ಮ ದೇಶದಲ್ಲಿ ಸಾಧಾರಣ ಕೊಬ್ಬರಿ ತಳಿಗಳಿಗಿಂತ ಹೆಚ್ಚು ಇಳುವರಿಯನ್ನು ಕೊಡುವ ತಳಿಗಳಿರುವೆವೆಂದು ಅಂದಾಜು ಮಾಡಲಾಗಿದೆ. ಈ ತಳಿಗಳಿಂದ ಸಿಗುವ ಸಿಹಿ ಮದ್ಯದಿಂದ ಪ್ರತಿ ವರ್ಷವೂ 11 ಲಕ್ಷ ಟನ್ ಬೆಲ್ಲವನ್ನು ತಯಾರಿಸಬಹುದು.

ಆದ್ದರಿಂದ ಈಗ ಕಬ್ಬು ಬೆಳೆಯುತ್ತಿರುವ ಸಾಧಾರಣ 9 ಲಕ್ಷ ಎಕ್ರೆ ಫಲವತ್ತಾದ ಭೂಮಿಯಲ್ಲಿ ಗೋಧಿಯನ್ನಾಗಲಿ, ಭತ್ತವನ್ನಾಗಲಿ ಬೆಳೆಸಿ ನಮ್ಮ ದೇಶದ ಆಹಾರೋತ್ಪತ್ತಿಯನ್ನು ಹೆಚ್ಚಿಸಬಹುದು. ತಾಳೆ ಮರಗಳು ಬೆಳೆಯಲು ಬೇಕಾಗಿರುವ ಫಲವತ್ತಾದ ನೆಲದ ಅಗತ್ಯವಿಲ್ಲ.

ನಿದ್ಯಾರ್ಥಿನಿಯರಿಗೆ ಒಕವಾದ

ವಿದ್ಯಾರ್ಥಿನಿಯರು ಸಂಸ್ಕೃತಿಗೆ ಒಪ್ಪದ ವಿಚಿತ್ರ ವೇಷಭೂಷಣಗಳನ್ನು ಮೆಚ್ಚುವುದು ಉಚಿತವಲ್ಲ. ಕಲಿತವರು ಕುಟುಂಬ ಜೀವನದಲ್ಲಿ ಗೃಹಲಕ್ಷ್ಮಿಯಂತಾಗಿ ಬಾಳಿ ಕುಟುಂಬಕ್ಕೂ ರಾಷ್ಟ್ರಕ್ಕೂ ಕ್ಷೇಮವನ್ನು ಸಾಧಿಸಬೇಕು. ಕಾಲೇಜಿನಲ್ಲಿ ಒಳ್ಳೆಯದನ್ನೇ ಕಲಿಯಬೇಕು. ಹಳೆಯದರಲ್ಲಿರುವ ಒಳ್ಳೆಯದನ್ನು ಇಟ್ಟುಕೊಳ್ಳಬೇಕು. ಕಾಲೇಜಿನ ಹುಡುಗಿಯರು ಪರಂಪರಾಗತ ಉಡುಪನ್ನು ತ್ಯಜಿಸುವುದು ವಿವಾದಕರ! ಈ ವಿಷಮವಾದ ಅಭಿರುಚಿ ಹೀಗೆ ಸಾಗಿದರೆ ಕೇಡುಂಟು"—ಹೀಗೆಂದು ಶ್ರೀ ರಾಜಗೋಪಾಲಾಚಾರ್ಯರು ಮೊದಲಿಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಕರ್ನಾಟಕ ವಿದ್ಯುತ್ಕರಣದ ಸಾಧನೆಗಾಗಿ 5-3-53 ರಿಂದ ಅಮೆರಿಕ ಪ್ರವಾಸ ಕೈಗೊಂಡಿರುವ ಶ್ರೀ. ಎಸ್. ಎ. ವೈ. ಅವರಿಗೆ ಶ್ರೀ. ನಿಜಲಿಂಗಪ್ಪನವರು ಉಪವಾಸ ನಿಲ್ಲಿಸಲು ತಂತಿ ಕೊಟ್ಟಿರುವ

.... ಸೋಮವಾರ ೧೬-೩-೩೮ ....

— ಶುಭಾಶಯಗಳು. —

"ನವಭಾರತ" ದ ೧೬ ನೆಯ ವಾರ್ಷಿಕೋತ್ಸವದ ಶುಭ ಸಮಯದಲ್ಲಿ ನಮ್ಮ ವಾಚಕ ವೃಂದಕ್ಕೂ, ಈ ಪತ್ರಿಕೆಯನ್ನು ಕಳೆದ ೧೫ ವರ್ಷಗಳಿಂದ ಪೋಷಿಸಿದ ಮತ್ತು ಪೋಷಿಸುತ್ತಿರುವ ದಾತೃಗಳಿಗೂ, ಚಂದಾದಾರರಿಗೂ ಕೃತಜ್ಞತೆಯಿಂದ ನಮ್ಮ ಶುಭಾಶಯಗಳನ್ನು ಸಮರ್ಪಿಸುತ್ತೇವೆ

ಭಗವಂತನು ಸರ್ವರಿಗೂ ಸನ್ಮಂಗಳ ಕಾರಿಯಾಗಲಿ!
ದೇಶವು ಶಾಂತಿ ಸಮೃದ್ಧಿಗಳಿಂದ ಬಾಳಲಿ!!
ಇದೇ ಯುಗಾದಿಯ ನಮ್ಮ ಹರಕೆ!!!

ಕಾಂಗ್ರೆಸ್ - ಪ್ರಜಾ ಸೋಷಿಯಾಲಿಸ್ಟ್ ಐಕ್ಯ

ಸೋಷಿಯಾಲಿಸ್ಟ್ ಪಕ್ಷ ನಾಯಕರಾದ ಶ್ರೀ. ಜಯಪ್ರಕಾಶ ನಾರಾಯಣರು ೧೫ ನೆಯ ತಾ. ಸೇವಾಗ್ರಾಮದಲ್ಲಿಂದಿಗೆ ಮತ್ತೆ ಚರ್ಚೆಸಿ ಕಾಂಗ್ರೆಸ್ ಮತ್ತು ಪ್ರಜಾ ಸೋಷಿಯಾಲಿಸ್ಟ್ ಪಕ್ಷಗಳಲ್ಲಿ ಐಕ್ಯಕ್ಕಾಗಿ ಕೆಲವು ಅಂಶಗಳ ನಿರ್ಧಾರಕ್ಕೆ ಬಂದರು.

ಶ್ರೀ ಜಯಪ್ರಕಾಶ್ ಮತ್ತು ಶ್ರೀಮತಿ ಸುಜೇತಾ – ಕೃಪಾಲಿನಿಯವರನ್ನು ಮಂತ್ರಿವರ್ಗದಲ್ಲಿ ತೆಗೆದುಕೊಳ್ಳಲು ನೆಹರೂರವರು ಆಸಕ್ತರಿದ್ದಾರಂತೆ.

ಭಾಷಾವಾರು ಪ್ರಾಂತ ವಿಭಜನೆ ಹಾನಿಕರ

ಈಗಿನ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ವಿಭಜನೆಯಿಂದ ರಾಷ್ಟ್ರಕ್ಕೆ ಹಾನಿಕರ. ಆಡಳಿತದ ಸುವ್ಯವಸ್ಥೆಯಲ್ಲಿ ಸಕಲ ಜಾತಿಗಳಿಗೂ ಭಾಗವಿರಬೇಕು" ಎಂದು ಮದ್ರಾಸ್ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಮದ್ರಾಸಿನ ಭಾಷಣ ಒಂದರಲ್ಲಿ ಹೇಳಿದರು.

ಆಹಾರ ಧಾನ್ಯಗಳ ಪರಿಸ್ಥಿತಿ ಸುಧಾರಿಸುತ್ತಲಿದೆ

ದೇಶದ ಎಲ್ಲಾ ಕಡೆಯಲ್ಲೂ ಆಹಾರ ಧಾನ್ಯಗಳ ಪರಿಸ್ಥಿತಿ ಸುಧಾರಿಸುತ್ತಲಿದ್ದು ಎಲ್ಲ ತರದ ನಿಯಂತ್ರಣಗಳೂ ಹೋಗುತ್ತವೆ. ಜನತೆಯು ಸಹಕಾರವಿದ್ದಲ್ಲಿ ಆಹಾರ ನಿಷೇಧಕ್ಕೆ ಎಂತವನ್ನ ಸ್ವಲ್ಪಂ ಬಿಯನಿಸುವಂಬ ಅಭಿಯಿಪ್ರಾಯವನ್ನು ಕೃಷಿಕ್ಕೆ ರಾಗ ರಾಜೇಂದ್ರ ಪ್ರಸಾದರು ವ್ಯಕ್ತಪಡಿಸಿದರು.

ಮದ್ರಾಸ್ ಸರ್ಕಾರಕ್ಕೆ ಮತ್ತೆ ಸೂಚನೆ

ಮದ್ರಾಸ್ ಆರ್ಥಿಕ ಮಂತ್ರಿಗಳು ಆಯ-ವ್ಯಯ ಪಟ್ಟಿಯನ್ನು ಸಮರ್ಪಿಸಬೇಕಾದರೆ ತಾಲಕ್ಕಾಗಿ ಮದ್ರಾಸ್ ಸರಕಾರವು ಕೈ ಸೀಡುವಿಕಾಗಿಸಿಯೆಂದು ಕೋರ್ಟ್ ಫೀ ಪೆಚ್ಚಿಸಲು ಮತ್ತು ಮತ್ತು ತಂಬಾಕಿನ ಮೇಲೆ ಸೇಲ್ಸ ಟ್ಯಾಕ್ಸ್ ವಿಧಿಸಲಾಗುವುದು. ಬಳ್ಳಾರಿ ಜಿಲ್ಲೆಯನ್ನು ಬಿಟ್ಟು ಆಂಧ್ರದ 11 ಜಿಲ್ಲೆಗಳಲ್ಲಿ 5 ಕೋಟಿ ರೂ. ಕಡಿಮೆ ಬೀಳುತ್ತೆ ಎಂದು ಹೇಳಿದರು.

ರಶಿಯನರು ಬ್ರಿಟಿಶರ ಬಾಂಬರ ವಿಮಾನವನ್ನು ಕೆಡವಿದರು.

ತನ್ನಾಧೀನದಲ್ಲಿರುವ ಪೂರ್ವ ಜರ್ಮನಿಯೊಳಗೆ 75 ಮೈಲು ಹಾರಿ ಒಂದಿಶೆಂಬ ಕಾರಣದಿಂದ ರಷ್ಯನರು ಬ್ರಿಟಿಶ ವಿಮಾನವನ್ನು ಕೆಡವಿದರು. ರಶಿಯಾದ ಸೈಟ್ಸ್ ವಿಮಾನಗಳು ಬಾಂಬರ ಮೇಲೆ ಮಿಶನ್‌ಗನ್ನುಗಳಿಂದ ದಾಳಿ ಮಾಡಿದರೆಂದು ಹೇಳಲಾಗಿದೆ. ಅದರಲ್ಲಿನ ಮೂವರು ವೈಮಾನಿಕರು ಗಾಯಗೊಂಡು ಮಡಿದರು. ಬ್ರಿಟಿಶ ಸರ್ಕಾರವು ಪ್ರತಿಭಟಿಸಿದ್ದಕ್ಕೆ ಪೂರ್ವ ಜರ್ಮನಿಯಲ್ಲಿನ ರಷ್ಯಾ ಸೈನ್ಯಾಧಿಕಾರಿಯು ಸಮಾಧಾನ ಕೊಟ್ಟಿದ್ದಾನೆ "ಅದು ನಮ್ಮ ಪ್ರದೇಶದೊಳಗೆ ಬಂದಿತು. ಅಂತರಾಷ್ಟ್ರೀಯ ನಿಯಮಗಳ ಪ್ರಕಾರಕ್ಕೆ ಕಳಕೆ ಇಳಿಯಲು ಸೂಚಿಸಿದರೂ ಅದು ಇಳಿಯದೆ ಗುಂಡು ಹಾರಿಸಲು ಪ್ರಾರಂಭಿಸಿತ್ತು ಕಾರಣ ಅದನ್ನು ಕೆಳಗಿಳಿಸಬೇಕಾಯಿತು.

ಸಂಡೂರು ಯುವರಾಜರ ವಿವಾಹ

ಸಂಡೂರು ಯುವರಾಜರಾದ ಶ್ರೀಮಂತ ಮುರಾರರಾವ್ ಘೋರ್ಪಡೆಯವರ ವಿವಾಹವು ಬಳ್ಳಾರಿಯ ಜಪುತ್ರಿ ವಸುಂಧರಾದೇವಿ ಗಾಯಕವಾಡರೊಂದಿಗೆ ನಿ-೩-೩೮ ನೆಯ ಭಾನುವಾರ ಬಳ್ಳಾರಿ ಅರಮನೆಯಲ್ಲಿ ಅತಿ ವೈಭವಯುತವಾಗಿ ನಡೆಯಿತು. ಆಗಮನ ನಿರ್ಗಮನಕ್ಕಾಗಿ ಸ್ಪೆಶಲ್ ರೈಲುಗಳು ಏರ್ಪಟ್ಟಿದ್ದವು. ಸಂಡೂರಿನಲ್ಲಿ 7 ನೆಯ ತಾ. ಪಟ್ಟಣದಲ್ಲಿ ಯುವರಾಜ-ಯುವರಾಣಿಯರಿಗೆ ಅದ್ಭುತ ಸ್ವಾಗತ ಕೋರಿದರು. ಸಂಡೂರ ಅರಮನೆಯಲ್ಲಿ ನಡೆವ ಸತ್ಕಾರ ಸಮಾರಂಭಕ್ಕೆ ಸಾವಿರಾರು ಜನರು ಬಂದಿದ್ದರು.

ಗೋಪಾಲ

ಅವ್ಯಕ್ತ ರಸವನು ಬಟ್ಟು ಮನಿಗಳಿಲ್ಲರು ತನ್ನ
ಚಿಣ್ಣ ಕಮಲದ ರಸವ ಹೀರುತಿ ಹರೇಕೋ
ಕವಿಯ ಪರಿಕಿಸೆನೆಂದು ತನ್ನ ಕಾಲಿನ ಹಿರಿಯ
ಬೆರಳ ನೀಟುತಲಿಹನು ಗೋಪಬಾಲ.

೨. ಪ್ರಾಚೀನ ಸಂಸ್ಕೃತಿಯಲ್ಲಿ ಪ್ರಜಾಭಿಪ್ರಾಯದ ಸ್ಥಾನ

(ಮುಂದುವರಿದುದು)

ಇನ್ನು ಪೌರಾಣಿಕ ಕಾಲದಲ್ಲಿದ್ದ ಜನಾಭಿಪ್ರಾಯದ ಸ್ವರೂಪವನ್ನು ವಿಮರ್ಶಿಸೋಣ. ರಾಮಾಯಣದ ಕಾಲದಲ್ಲಿ ಜನಾಭಿಪ್ರಾಯಕ್ಕೆ ಅತುಳ ಪ್ರಾಮುಖ್ಯತೆ ಮತ್ತು ಪುಷ್ಟಿ ಇತ್ತು. ಚುನಾವಣೆಯ ತತ್ವ ಆಚರಣೆಯಲ್ಲಿತ್ತೆಂದೂ ಹೇಳಬಹುದು. ಶ್ರೀರಾಮನಿಗೆ ಯುವರಾಜ್ಯಾಭಿಷೇಕ ಮಾಡುವ ಮುನ್ನ ದಶರಥಮಹಾರಾಜ ತನ್ನ ಜನರ ಅಭಿಪ್ರಾಯ ಪಡೆಯಲು ನಿರ್ಧರಿಸಿದ; ಸಭೆಯನ್ನು ಕೂಡಿಸಿ ಸಭೆಯ ಅಭಿಪ್ರಾಯವನ್ನೂ ಪಡೆದ: "ನಾನಾನಗರವಾಸ್ತವ್ಯಾನ್ ಪೃಥಗ್ಜಾನಪದಾನಪಿ ಸಮಾನಿನಾಯ ಮೇದಿನ್ಯಾಂ..... ....." "ತತಃ ಪರಿಷದಂ ಸರ್ವಾಮಾಮಂತ್ರ್ಯ ವಸುಧಾದಿನಃ ...." ದಶರಥ ದಿವಂಗತನಾದಾಗ ರಾಮ ವನವಾಸದಲ್ಲಿದ್ದ. ರಾಜ್ಯಾಡಳಿತ ನಿರ್ವಹಿಸಬೇಕಾದವರು ಯಾರೆನ್ನುವ ಪ್ರಶ್ನೆ ಸಭೆಯ ಮುಂದೆ ವಿಮರ್ಶೆಗೆ ಬಂತು. ರಾಜಕರ್ತೃಗಳು ದೊರೆಯನ್ನಾರಿಸಲು ಸಭೆಯನ್ನು ಕರೆದಾಗ ಭರತ ಶತ್ರುಘ್ನರೂ ಅಯೋಧ್ಯೆಯಲ್ಲಿರಲಿಲ್ಲ. ಆಗ ಸಭೆ ದೊರೆಯನ್ನಾರಿಸುವ ಅಧಿಕಾರವನ್ನು ಕುಲಪುರೋಹಿತ ವಸಿಷ್ಠನಿಗೆ ವಹಿಸಿತು. ವಸಿಷ್ಠ ಭರತನನ್ನು ಆರಿಸಿ ಅಳ್ಳಿಕೆಯನ್ನು ಅವನು ವಹಿಸಬೇಕೆಂದು ನಿರೂಪಿಸಿದ. ಸಂಸ್ಕೃತರಾದ ಅಯೋಧ್ಯೆಯ ಜನರಿರಲಿ, ವಾನರ ರಾಜ್ಯದಲ್ಲಿ ಕೂಡ ಚುನಾವಣೆಯ ಪದ್ಧತಿಯು ಇತ್ತೆಂದು ತಿಳಿಯುವುದು ಎನ್ನುವ ಸಂತೋಷದ ವಿಷಯ! ವಾಲಿ ಒಂದು ಸಂವತ್ಸರ ಕಾಲ ರಾಜ್ಯ ಬಿಟ್ಟು ಹೋಗಿದ್ದ ಕಾಲದಲ್ಲಿ ವಾನರ ಜನ ಸುಗ್ರೀವನನ್ನು ರಾಜನನ್ನಾಗಿ ಆರಿಸಿಕೊಂಡಿತು. ವಾಲಿ ಹಿಂದಿರುಗಿದ ವೇಳೆಯಲ್ಲಿ ಸುಗ್ರೀವ ಈ ಅಂಶವನ್ನು ಅವನಿಗೆ ನಿವೇದಿಸಿದ್ದಾನೆ. "ಅಭಿಷಿಕ್ತೋಸ್ಮಿ ಕಾಮೇನ" ಶ್ರೀರಾಮ ಸೀತಾದೇವಿಯನ್ನು ಪರಿತ್ಯಜಿಸಿದ್ದೂ ಜನಾಭಿಪ್ರಾಯಕ್ಕೆ-ಕೇವಲ ಒಬ್ಬ ಅಗಸನ ಅಭಿಪ್ರಾಯಕ್ಕೆ-ಮನ್ನಣೆ ಕೊಡಲು.

ಮಹಾಭಾರತದ ಕಾಲದಲ್ಲಿ ಇನ್ನೂ ಸ್ಪಷ್ಟ ಜನಾಭಿಪ್ರಾಯದ ಬೆಲೆ. ವಾನಪ್ರಸ್ಥಕ್ಕೆ ಯುಧಿಷ್ಠಿರನಿಗೆ ರಾಜ್ಯಾಭಿಷೇಕ ನಡೆದಾಗ ಜನರು ಹೇಳಿದ್ದು ಹೀಗೆ: "ತ್ವಯಂವಾಂದವ ಜ್ಯೇಷ್ಠಮಭಿಷಿಂಚಾಮ. (ಪ್ರಜೆಗಳಾವ) ನಾವು ಪಾಂಡವ ಜ್ಯೇಷ್ಠನಾದ ನಿನಗೆ ರಾಜ್ಯಾಭಿಷೇಕ ಮಾಡುತ್ತೆನೆ

ಮಹಾಭಾರತದ ಶಾಂತಿ ಪರ್ವದಲ್ಲಿ ಈ ಉಲ್ಲೇಖನವಿದೆ: "ಜಾನೀತ ಯದಿ ಮೇ ವೃತ್ತಂ ಪ್ರವದಂತಿ ನರಾಮೃಷಾ! ಕಚ್ಚಿದ್ಗೋಚರ್ಜನಪದೇ ಕಚ್ಚಿದ್ ದ್ರಾಷ್ಟ್ರೀ ಭವೇಯಹಂ" ॥—ನನ್ನ ಆಡಳಿತದ ರೀತಿಯನ್ನು ಜನರು ಪ್ರಶಂಸಿಸುತ್ತಿರುವೆಯೇ, ಇಲ್ಲವೇ: ಮತ್ತು ಜನಗಳಿಗೆ ಹಿತಕರವಾದೆಯೇ ಇಲ್ಲವೇ ಎಂಬುದನ್ನು ತಿಳಿಯಿರಿ.

ಬೃಹಸ್ಪತಿ ಸೂತ್ರಧಾತ ಹೀಗೆ ಹೇಳಿದೆ, "ಜನ ಸ್ಯೋಪೇ ಸತಿ ಕ್ಷುಂಭ್ರಂ ಕರ್ಮ ನ ಕುರ್ಯಾತ್" ಜನಾಭಿಪ್ರಾಯಕ್ಕೆ ವಿರುದ್ಧವಾಗಿದ್ದಲ್ಲಿ ಆ ಕಾರ್ಯವನ್ನು ಎಷ್ಟೇ ಆಳ್ವವಾರರಿಂ ಆದನ್ನು ಮಾಡಬಾರದು: ಧರ್ಮಸೂಸಿ ಲೋಕ ವಿಕೃಷ್ಟಂನ ಕುರ್ಯಾತ್." ಅದು ಎಷ್ಟೇ ಒಳ್ಳೆಯ ಕೆಲಸವಾಗಿದ್ದರೂ ಜನಾಭಿಪ್ರಾಯಕ್ಕೆ ವಿರುದ್ಧವಾಗಿದ್ದರೆ ಅದನ್ನೂ ಮಾಡಕೂಡದು.

ಗೀತಾಚಾರ್ಯರಾದ ಶ್ರೀಕೃಷ್ಣಭಗವಾನ್ ಗೀತೆಯಲ್ಲಿ ಹೇಳಿರುವ ಈ ಅಂಶವನ್ನು ಗಮನಿಸಿರಿ: "ಲೋಕ ಸಂಗ್ರಹ ಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ."

ಕೌಟಿಲ್ಯನ ಅರ್ಥಶಾಸ್ತ್ರದ ವಿವರಗಳನ್ನು ಪರಿಶೀಲಿಸಿದರೆ ಜನಾಭಿಪ್ರಾಯ ಕ್ರಿ. ಪೂ. ನಾಲ್ಕನೇ ಶತಮಾನದಷ್ಟು ಹಿಂದೆಯೂ ಹೇಗಿತ್ತೆಂಬುದು ಸ್ಥಿರಪಡುತ್ತದೆ. ಚಂದ್ರಗುಪ್ತ ಮೌರ್ಯನ ಆಸ್ಥಾನದಲ್ಲಿ ಗ್ರೀಕರ ಕಡೆಯ ರಾಯಬಾರಿ ಮೆಗಾಸ್ತನಿಸ್ ಇದ್ದನಷ್ಟೆ. ಅವನ ಬರವಣಿಗೆಯಲ್ಲಿ ಅಂದಿನ ಪಟಲೀ ಪುತ್ರನಲ್ಲಿ ಜನಾಭಿಪ್ರಾಯಕ್ಕೆ ಏಷ್ಟು ಸ್ಥಾನವಿತ್ತೆಂಬುದು ದಕ್ಕೆ ಉಪಯುಕ್ತ ವಿವರಗಳಿವೆ. ವ್ಯಾಕ್ರಿಂಡಲ್‌ನ ಗ್ರಂಥಗಳಿಂದಲೂ ಈ ವಿಷಯ ವ್ಯಕ್ತಪಡುತ್ತದೆ.

ಭೃತ್ಯಹರಿ ನೀತಿಶತಕದಲ್ಲಿ ಹೀಗೆ ಹೇಳಿದ್ದಾನೆ: "ವಿದ್ಯಾಯಾಂ ವ್ಯವಸನಂ ಸ್ವಸ್ಯ ಶೋಚಿತಿ ರಕ್ತಲೋಕಾಪವಾದಾ ದ್ಭಯಂ"—ನಿಂದ್ಯವಲ್ಲಿ ಆಸಕ್ತಿ, ಸ್ವಸ್ತ್ರೀಯಲ್ಲಿ ಮಾತ್ರ ಪ್ರೇಮ ಮತ್ತು ಲೋಕಾಪವಾದದ ಭಯ ಇವು ಮಾನವನಲ್ಲಿರಬೇಕಾದ ಗುಣಗಳೆಂದು. ಕ್ರಿ. ಶ. ಒಂದನೇ ಶತಮಾನದಲ್ಲಿದ್ದ ಭೃತ್ಯಹರಿ ಜನಾಭಿಪ್ರಾಯದ ಘನತೆ ಎಂತಹದೆಂಬುದನ್ನು ಎಷ್ಟು ವಿಜೃಂಭಿಸಿದ್ದಾನೆ.

ಕ್ರಿ. ಶ. ಏಳನೇ ಶತಮಾನದಲ್ಲಿ ಸಿಂಹಾಸನಾರೋಹಣ ಮಾಡಿದ ರಾಜ ಶ್ರೀಹರ್ಷ ತಾನು ಸಿಂಹಾಸನವನ್ನೇರುವ ಮುನ್ನ ಜನಾಭಿಪ್ರಾಯಕ್ಕೆ ತಲೆ ಬಾಗಿದೆ ಕಾಯಿತು.

ಆದಿಶಂಕರರು ಕೂಡಾ ಹೇಳಿದ್ದಾರೆ: "ಯದ್ಯಪಿ ಶುದ್ಧಂ ಲೋಕವಿರುದ್ಧಂ ನಾಚರಣೀಯಂ ನಾಕರಣೀಯಂ" ಎಂದು—ಜನರ ಅಪೇಕ್ಷೆಗಳಿಗೆ ವಿರೋಧ ಪಡಿಸಿಕೊಳ್ಳುವಷ್ಟನ್ನೂ ಮಾಡಕೂಡದು; ಜನಾಭಿಪ್ರಾಯಕ್ಕೆ ಅನುಗುಣವಾದುದನ್ನೂ ಬಿಡಲೂ ಕೂಡದು.

ಕವಿ ಭವಭೂತಿ ಉತ್ತರರಾಮ ಚರಿತ್ರೆಯಲ್ಲಿ ರಾಮನ ಬಾಯಿಂದ ಹೇಳಿಸುವ ಈ ಮಾತುಗಳನ್ನು ಗಮನಿಸಿ: "ಸ್ನೇಹಂ ದಯಾಂ ತಥಾ ಸೌಖ್ಯಂ ಯದಿವಾ ಜಾನಕೀಮಪಿ, ಆರಾಧನಾಯ ಲೋಕಸ್ಯ ಮುಂಚತೋ ನಾಸ್ತಿ ಮೇವ್ಯಥಾ॥" —ಜನರ ತೃಪ್ತಿಗಾಗಿ ನಾನಿರುವುದು. ಪ್ರೇಮ ದಯೆ, ಸೌಖ್ಯ, ಏಕೆ ನನ್ನ ಜೀವನ ಸರ್ವಸ್ವವಾದ ಜಾನಕಿಯನ್ನು ಬೇಕಾದರೂ ತ್ಯಾಗ ಮಾಡಲು ಸಿದ್ಧನಿರುವೆನು ಪ್ರಜೆಗಳ ಸಂತುಷ್ಟಿಗಾಗಿ. ಪ್ರಜೆಗಳು ಸಂತೃಪ್ತರಾಗಿದ್ದರೆ ಸಾಕು ನನಗೆ.

ಪ್ರಾಚೀನ ಭಾರತದಲ್ಲಿ ಜನಾಭಿಪ್ರಾಯಕ್ಕಿದ್ದ ಉತ್ತಮ ಸ್ಥಾನವನ್ನು ಅಧಿಸಂತೆಂಬಹುದೆಂಬುದು ಮೇಲಿನ ನಿದರ್ಶನಗಳಿಂದ ವ್ಯಕ್ತ ಪಡುತ್ತದೆ. ಹಾಗೂ ಗುರುಕುಲಾಶ್ರಮ ಶಿಷ್ಟಸಂಪ್ರದಾಯಗಳನ್ನು ವಂಶ ಪಾರಂಪರ್ಯವಾಗಿ ಬೆಳೆಸಿಕೊಂಡು ಬಂದ ತು. ಗುರುಕುಲ, ಗಣ, ಶ್ರೇಣಿ, ಪೂಗ, ಸಮೂಹ, ನುಂಕಾದ ಸಂಸ್ಥೆಗಳು ಜನಾಭಿಪ್ರಾಯ ಪ್ರಸಾರವಾಹಿನಿಗಳಾಗಿದ್ದುವು. ನಿಜ, ಮುದ್ರಣ ಪದ್ಧತಿ ಆ ಕಾಲದ ಜನರಿಗೆ ತಿಳಿದಿರಲಿಲ್ಲ. ಆದರೆ ಅದರಿಂದ ಜನಾಭಿಪ್ರಾಯ ಪ್ರಸಾರ ನಿಲ್ಲಲಿಲ್ಲ. ಓಲೆಗರಿಯಲ್ಲೂ ತಾಮ್ರವ ತಗಡುಗಳ ಮೇಲೂ ಪ್ರಾಕೃತದಲ್ಲೂ ಸಂಸ್ಕೃತದಲ್ಲೂ ಬರವಣಿಗೆಗಳಾಗುತ್ತಿದ್ದುವು. ಸಾರ್ವಭೌಮರೇ ಕರು ಪ್ರಜೆಗಳ ಅವಗಾಹನೆಗಾಗಿ ಅನೇಕ ಶಿಲಾಶಾಸನಗಳನ್ನು ಕೆತ್ತಿಸಿ ನೆಡಿಸಿದ್ದರು. ಅಶೋಕಚಕ್ರವರ್ತಿಯ ಸಾಂಚಿಯ ಶಾಸನ, ಉತ್ತರಮಲ್ಲೂರು ಶಾಸನ, ಒಂದನೇ ಪರಾಂತಕ ಉತ್ತಮ ಶಾಸನಗಳು — ಇಂತಹವು ಬೇಕಾದಷ್ಟಿವೆ. "ಪಂಜವಾರಿ ವಾರಗೋಡು" ಎಂಬ ಪದಗಳು ಉತ್ತಮ ಶಾಸನದಲ್ಲಿವೆ. ತಂಜಾವೂರಿನ ಶಾಸನ ಒಂದರಲ್ಲಿ ಅಲ್ಲಿನ ರಾಜರ ರಾಜ್ಯವರ್ಧಂಗಳಲ್ಲಿ ಒಂದೊಂದು ತನ್ನದೇ ಆದ ಸಭೆಗಳನ್ನು ಹೊಂದಿತ್ತೆಂದು ಉಲ್ಲೇಖಿಸಿದ್ದಾನೆ ಅಜಂತಾದಲ್ಲಿನ ಹತ್ತನೇ ಗುಹೆಯಲ್ಲಿ ಇಂಥ ಒಂದು ಶಾಸನವಿದೆ. ಹಾಗೂ ಪ್ರಯಾಣಿಕರು ಮತ್ತು ಉಪದೇಶಕರು ತಾವು ಹೋದೆಡೆಯಲ್ಲಿ ತಾವು ಕಂಡು ಕೇಳಿದ ಸಮಾಚಾರಗಳನ್ನು ಹರಡುತ್ತಿದ್ದರು ಇವಕ್ಕೂ ಮಿಗಿಲಾಗಿ, ನಮ್ಮ ಪ್ರಾಚೀನ ಸಂಪ್ರದಾಯಗಳ ಸ್ವರೂಪವೇನು? ಅನಾದಿ ಕಾಲದಿಂದ ನಡೆದುಬಂದ ಜನಾಭಿಪ್ರಾಯದ ಒಂದು ಸ್ವರೂಪವೇ ಅವು.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕಿಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :— ಶ್ರೀ ಬಿ. ನಾ. ಕೃಷ್ಣಪಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

" ಸ್ಥಳೀಯರಿಗೆ 4—8—0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

Matinee at PRABHAT

On 18th & 19th 2 days at 3-30 P. M.

..... the nightmare story of the girl who married In his father's infamous footsteps ..... to new heights to Horror!

The Son of Dr. Jekyll.

'ಅಮ್ಮಲಕ್ಕಿಲು' ಸಿನಿಮೆಯ ಒಂದು ದೃಶ್ಯ

ಪಂಚವಾರ್ಷಿಕ ಯೋಜನೆ.

3 ನೇ ಪುಟದಿಂದ

ಸಿಕ ಅವುಗಳ ಮೂಲಕ ಜನರ ಸಹಾಯವನ್ನು ಪಡೆಯಬಹುದೆಂದು ಯೋಜನಾ ಸಮಿತಿಯೂ ಅಭಿಪ್ರಾಯಪಡುತ್ತದೆ. ತಂತಮ್ಮ ಗ್ರಾಮಗಳಲ್ಲಿರುವ ಸಂಪತ್ತನ್ನು ತಿಳಿದು ಅದರ ಸಂಪೂರ್ಣ ಉಪಯೋಗ ಪಡೆಯಲು ಗ್ರಾಮಸ್ಥರೆಲ್ಲರೂ ಸಹಕರಿಸಿ ಕೆಲಸಮಾಡುವಂತೆ ಪ್ರೇರೇಪಿಸುವುದು ಈ ಮಂಡಲಿಗಳನ್ನು ಸ್ಥಾಪಿಸುವುದರ ಗುರಿ ಈ ರೀತಿಯಲ್ಲಿ ಪ್ರತಿಯೊಂದು ಗ್ರಾಮವು ಅಭಿವೃದ್ಧಿಗೊಳ್ಳುವುದು ಮಾತ್ರವಲ್ಲದೆ ದೇಶದ ಸಂಪತ್ತು ಹೆಚ್ಚುವುದು.

ಹೊಸಪೇಟೆ:—

ಇಲ್ಲಿಯ ಮುನಿಸಿಪಾಲ್ ಕೌನ್ಸಿಲರಾದ ಶ್ರೀ ಮುರಾರಿ ಶ್ರೀರಾಮುಲು ಇವರು ಮದ್ರಾಸ್ ಯೂನಿವರ್ಸಿಟಿ ಸೆನೇಟರಾಗಿ ನೇಮಕ ತಾ. ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬಳ್ಳಾರಿ ಜಿಲ್ಲೆಯ ಮುನಿಸಿಪಲ್ ಕೌನ್ಸಿಲ್ಲರುಗಳಿಗೆ ಒಂದು ಸ್ಥಾನಕ್ಕೆ ಒಳ್ಳಾರಿಯಿಂದ ಶ್ರೀ ಟಿ. ಜಿ. ಸತ್ಯನಾರಾಯಣ ಸೆ ಸೆನೇಟಿಯಿಂದ ಶ್ರೀ ಮುರಾರಿ ಶ್ರೀ. ರಾಮುಲು ಮತ್ತು ಆದವಾನಿಯಿಂದ ಶ್ರೀ ಗೋವಿಂದರಾಜುಲು ಇವರು ನಿಂತಿದ್ದರು ಆದವಾನಿ ಮಹಾಶಯರು ಬಳ್ಳಾರಿಯವರ ಸಹಾಯಕ್ಕೆ ನಿಂತ ಕಾರಣ ಅವರಿಗೇನೂ ಮತಗಳು ಬೀಳಲಿಲ್ಲ ಶ್ರೀ ಟಿ. ಜಿ. ಸತ್ಯನಾರಾಯಣ ಮತ್ತು ಮುರಾರಿ ಶ್ರೀರಾಮುಲು ಇವರಿಗೆ ಸಮವಾಗಿ ೪೫ ವೋಟುಗಳು ಬಿದ್ದಕಾರಣ ಲಾಟ್ಸ್ ತೆಗೆಯಲ್ಪಟ್ಟು ಶ್ರೀರಾಮುಲು ಇವರು ಗೆದ್ದರು.

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
ಕಂತಿಂಗಳಿಗೆ 3—8—0	Six months 3—8—0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ. Subscription will not be accepted for less than 6 months.

To 16-3-53

Sri.

Edited Printed & Published by T. B Keshava Rao, at Nava Bharath Press, Bellary.

ನಿಜಾಭಿಮಾನಿ

ಸೋಮವಾರ
ಮಾರ್ಚ್ ೨೩
೧೯೫೩

ವರ್ಷ 16 | ಸಂಚಿಕೆ ೨೩ | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. ಉತಿ ಪತ್ರ ! ಜಾಗ್ರತ !! ಪ್ರಾಕೃತರಾಗಿ ಬೋಧಕ !!! | ಸಂಪಾದಕ ಮತ್ತು ಪ್ರಕಾಶಕ: ಟಿ. ಬಿ. ಕೇಶವರಾವು

IN THE COURT OF SMALL CAUSE JUDGE BELLARY

S. C. No 11/53

Angidi Saramaah .... Plaintiff.

M. K. R. Brothers Proprietors of Bharath & Swarai Beedi Co COIMBATORE. } Defendant.

.... Notice to the defendant ....

The plaintiff has filed a suit against you in the above court to recover a sum of Rs 218/- and the same is posted to 7-4-53 for hearing. If you have any objection, you may appear in person or through an advocate & file the same failing which the suit will be decreed against you exparte.

P. Venkatasubba Rao,
Advocate for plaintiff.

— ಬಳ್ಳಾರಿ ಡಿಸ್ಟ್ರಿಕ್ಟ್‌ಮುನ್ಸಿಫರ ಕೋರ್ಟಿನಲ್ಲಿ —

I. A. NO. 353/52 in S. C 861/53

Between

ಗಂಜಿಬಸಪ್ಪ — ಅರ್ಜಿದಾರ .... ವಾದಿ

ಮತ್ತು

1 ನರಸಿಂಗಪ್ಪ	ಯೆಮರು	ಪ್ರತಿ
2 ಈರಣ್ಣ	ಅರ್ಜಿದಾರರು	ವಾದಿಗಳು

.... ಪ್ರತಿವಾದಿಗೆ ನೋಟೀಸು ....

ಮೇಲ್ಕಾಣಿಸಿದ ನಂಬರಿನ ದಾವೆಯು ನಿಮ್ಮ ಹಾಜರಾಗಿ 7-4-1953 ಕ್ಕೆ ವಾಯ್ದೆ ಹಾಕಲಾಗಿದೆ. ಅದಕ ಪ್ರ॥ 11 ಗಂಟೆಗೆ ನೀವು ಕೋರ್ಟಿನಲ್ಲಿ ಹಾಜರಾಗಿ ಅರ್ಜಿಯ ಸ್ವೀಕೃತಿಗೆ ನಿಮ್ಮ ವಿರೋಧಿ ಕಾರಣಗಳನ್ನು ಸಾದರು ಪಡಿಪದಿದ್ದಲ್ಲಿ ಏಕಪಕ್ಷೀಯ ಆರ್ಡರ್ ಆಗಲಿರುವದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ
20-3-53

ಕೆ. ಶ್ರೀನಿವಾಸಾಚಾರ್.
ವಾದಿಯ-ಅಡ್ವೊಕೇಟು

ಬಳ್ಳಾರಿ ಪ್ರಭಾತದಲ್ಲಿ

3 ನೆ ವಾರ 3 ನೆ ವಾರ

ಕೃಷ್ಣಾ ಪಿಕ್ಚರ್ಸ್‌ರವರ

★ ಅಮ್ಮಲಕ್ಕಲು ★

(ತೆಲಗು)

ತಾರಾಗಣ :— N. T. ರಾಮರಾವ್, ಲಲಿತ, ಪದ್ಮಿನಿ, ರೇಲಂಗಿ ಬಾಲಸರಸ್ವತಿ, ಮತ್ತು ಇತರರು.

ಆಂಧ್ರಪ್ರಾಂತ ನಿರ್ಣಯ

— ಶ್ರೀ ನೆಹರೂರ ಹೇಳಿಕೆ —

ಬಳ್ಳಾರಿಯು ತುಂಡು ತುಂಡಾಯಿತು

"ಆಲೂರು, ಆದವಾನಿ, ರಾಯದುರ್ಗ ತಾಲೂಕುಗಳು ಪೂರ್ಣ ತೆಲುಗು ತಾಲೂಕುಗಳು ಅವು ಆಂಧ್ರದಲ್ಲಿ ಸೇರಬೇಕು."

"ಹೊಸಪೇಟೆ, ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಹಡಗಲಿ, ಸಿರುಗುಪ್ಪ ಇವು ಪೂರ್ಣ ಕನ್ನಡ ತಾಲೂಕುಗಳು ಮೈಸೂರು ದೇಶದಲ್ಲಿ ಸೇರಬೇಕು"

"ಬಳ್ಳಾರಿ ತಾಲೂಕು ಭವಿಷ್ಯತ್ತು ನಿರ್ಣಯಿಸಲ್ಪಡುವವರೆಗೆ ಅದು ತ್ರಿಶಂಕು ಸ್ವರ್ಗದಲ್ಲಿರಬೇಕು"

"ಭಾರತ ಪ್ರಧಾನಿ ನೆಹರೂರ ಹೇಳಿಕೆಯಂತೆ - ಆಂಧ್ರಪ್ರಾಂತವು ಏನೆಯು ಅಕ್ಟೋಬರ್ ೧೯೫೩ಕ್ಕೆ ಜಾರಿಯಲ್ಲಿ ಬರುತ್ತದೆ. ರಾಜಧಾನಿಯೂ ಹೈಕೋರ್ಟೂ ಆಂಧ್ರಪ್ರಾಂತದಲ್ಲೇ ಇರಬೇಕು. ಹೈಕೋರ್ಟು ಸ್ಥಾಪಿತವಾಗುವವರೆಗೆ ಮದ್ರಾಸ್ ಹೈಕೋರ್ಟಿಗೆ ಆಂಧ್ರದ ಮೇಲೆ ಅಧಿಕಾರವಿರುತ್ತದೆ ಆಂಧ್ರದ ಕೆಲ ಮುಖ್ಯ ಕಛೇರಿಗಳನ್ನು ಮದ್ರಾಸದಲ್ಲಿಡಲು ನಾನು ಸೂಚಿಸುತ್ತೇನೆ"

ಎಮ್ಮಿಗನೂರು (ಬಳ್ಳಾರಿ)

24-3-53 ನೇ ತೇದಿ ಎಮ್ಮಿಗನೂರ ಪಂಚಾಯತಿ ಬೋಡ್ಡು ಅಧ್ಯಕ್ಷರಾಗಿ ಶ್ರೀ. ಬಟ್ಟೂರಿ. ಬಸಪ್ಪನವರು, ಶ್ರೀ. ಬಿ. ಶಿವರೆಡ್ಡಿ, ನ. ವಿರುಪಾಕ್ಷಪ್ಪ ಬಿ. ಹನುಮಂತರೆಡ್ಡಿ ಹೊ. ಬಸಣ್ಣ, ದೇ. ಮಾರೆಪ್ಪ, ಹಿಂ. ನಬೀಸಾಬ್ ಮತ್ತು ಚಲವಾದಿ ಚಂದ್ರಪ್ಪ ಇವರುಗಳೆಲ್ಲಾ ಸದಸ್ಯರಾಗಿ ಅವಿರೋಧವಾಗಿ ಆರಿಸಿ ಬಂದರೆಂಬ ವಿಷಯ ತಿಳಿಸಲು ಮಹಾನಂದವಾಗುತ್ತದೆ.

ಪ್ರಧಾನೋಪಾಧ್ಯಾಯರ ಆದರ್ಶ ಮೂರ್ತಿ ಶ್ರೀ. ಆರ್ಕಾಟ್ ಭೀಮಾಚಾರ್ಯರು.

ಲೇ-: ಜಾ. ಹನುಮಂತ ಶಾಸ್ತ್ರಿ, ಕೂಡ್ಲಿಗಿ

ಬಳ್ಳಾರಿ ಮುನಿಸಿಪಲ್ ಹೈಸ್ಕೂಲಿನ ಉನ್ನತಿಗಾಗಿ ಅಪಾರವಾಗಿ ದುಡಿದವರಲ್ಲಿ ಶ್ರೀಮಾನ್ ಭೀಮಾಚಾರ್ಯರು ಅಗ್ರಗಣ್ಯರು.

ಮೈಸೂರು ಪ್ರಾಂತ್ಯದ ಕೋಲಾರ್ ಜಿಲ್ಲೆಯ ಹಳ್ಳಿಯೊಂದು ಇವರು ಹುಟ್ಟಿದ ಊರು. ಬಳ್ಳಾರಿಯ ನರಸಿಂಹಾಚಾರ್ಯರೆಂಬವರ ದತ್ತು ಪುತ್ರರಾಗಿ ಬಳ್ಳಾರಿಯವರಾದರು. ಸನಾತನರಾದ ಇವರ ಹಿರಿಯರು ಇವರ ಹತ್ತನೇ ವಯಸ್ಸಿನಲ್ಲಿ ಮೂರೇ ವರ್ಷದ ಮಗುವಿನೊಂದಿಗೆ ವಿವಾಹವನ್ನು ಮಾಡಿ ಬಿಟ್ಟರು.

ಕೋಲಾರ್ ಹೈಸ್ಕೂಲಲ್ಲಿ ಶಿಕ್ಷಣದ ತರುವಾಯ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ. ಎ ಪಾಸ್ ಮಾಡಿದರು ಬಡತನವು ಇವರ ಬಿಡದ ಬಂಧುವಾದ್ದರಿಂದ ಮುನಿಸಿಪಲ್ ದೀಪಗಳ ಆಶ್ರಯದಲ್ಲಿಯೇ ಇವರ ಓದು ಸಾಗುತ್ತಿತ್ತು.

ಕೆಲ ಕಾಲ ಗುಮಾಸ್ತರಾಗಿ ಕೆಲಸ ಮಾಡಿ 1901 ರಲ್ಲಿ ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲಿನಲ್ಲಿ ಸಹಾಯಕರಾಗಿ ಸೇರಿದರು. 1906 ರಲ್ಲಿ ಅದೇ ಶಾಲೆಯ ಪ್ರಧಾನೋಪಾಧ್ಯಾಯರಾದರು. ಒಮ್ಮೆ ಯಾರೋ "ಇವರೇನು ಮಹಾ! ಬಿ. ಎ. ಎಲ್. ಟಿ. ಅಷ್ಟೇತಾನೆ!" ಎಂದರಂತೆ. ಆ ಮಾತು ಅಭಿಮಾನಿಗಳಾದ ಆಚಾರ್ಯರ ಮನವನ್ನು ಕುಗ್ಗಿಸಿತು. 1908 ರಲ್ಲಿ ಅವರು ಮದ್ರಾಸ್ ವಿಶ್ವವಿದ್ಯಾನಿಲಯದ ಎಂ. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದರು. ಆಗ ಅವರ ವಯಸ್ಸು 45 ಆಸಮಯದಲ್ಲಿ ಬಳ್ಳಾರಿ ಜಿಲ್ಲೆಯ ವಿದ್ಯಾಧಿಕಾರಿಗಳಾಗಿದ್ದ ರಾನ್ಸ್ ಫರ್ಡ ಎಂಬುವರು ಇವರ ಕಾರ್ಯದಕ್ಷತೆಯನ್ನು ಹೊಗಳುತ್ತಾ 'ಭಟ್ಟಾಚಾರ್ಯರೇ 45 ನೇ ವರ್ಷದಲ್ಲಿ ಹೈಡ್ಮಾಸ್ಟರಾಗಿ ಕೆಲಸ ಸಮಾದುಗ್ಗಿ, ಮದ್ರಾಸ್ ವಿಶ್ವವಿದ್ಯಾನಿಲಯದ ಎಂ. ಎ. ಡಿಗ್ರಿಪಡೆಯುವದು ಅಸಾಮಾನ್ಯವಾದ್ದು ಇಂಗ್ಲೆಂಡಿನಲ್ಲಿ ಕೇವಲ ಒಂದು ಡಿನ್ನರ್‌ನಿಂದ ಡಿಗ್ರಿಪಡೆಯಬಹುದಾಗಿದೆ ಎಂದರಂತೆ.

ಶ್ರೀಯುತರು ಪ್ರಧಾನೋಪಾಧ್ಯಾಯರಿಗೆ ಆದರ್ಶ ಪುರುಷರು. ಶಾಲೆಯ 'ಸೆಕೆಂಡ್ ಬೆಲ್' ಹೊಡೆಯಿತೆಂದರೆ ಹೆಡ್ ಮಾಸ್ಟರ್ ಬಂದರೆಂದರೆ ಎಲ್ಲಿಯವರೆಗೆ. ಯಾವ ತರಗತಿಯಲ್ಲಿ ನೋಡಿದರೂ ಪಾಠಗಳು ಪ್ರಾರಂಭವಾಗಿರುತ್ತವೆ. ಶಾಲೆಯು ಹಿತವೇ ತಮ್ಮ ಹಿತ. ಶಾಲೆಯ ಉತ್ಕರ್ಷವೇ ತಮ್ಮ ಉತ್ಕರ್ಷವೆಂದು ತಿಳಿದವರು. ಅವರ ಆಡಳಿತವು ನಿಷ್ಪಾಕ್ಷಿಕವಾಗಿತ್ತು. ಪುರಸಭೆಯು ಇವರ ಅಧಿಕಾರದಲ್ಲಿ ಕೈ ಹಾಕಲು ಹಿಂಜರಿಯುತ್ತಿತ್ತು. ಅವರ ಪ್ರಸನ್ನವದನ, ತೇಜ, ಪೂರ್ಣವಾದ ನಯನಗಳು. ಆಕರ್ಷಕಗಳಾಗಿದ್ದವು. ಇನ್ನು ಹೃದಯವೋ ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ಶಿಸ್ತು ಭಂಗವನ್ನು ಸಹಿಸಲಾರರು. ಆಗ ಇವರು ರುದ್ರರು. ವಜ್ರ ಹೃದಯರು ಬಡ ಹುಡುಗರನ್ನು ಕಂಡರೆ ಕೋಮಲ ಹೃದಯರು. ಕೈ ತುಂಬಾ ಸಹಾಯ-ನೀಡುವವರು.

ಸಂಸ್ಕೃತವು ಅವರ ಅಭಿಮಾನ ಭಾಷೆ ಮೆಟ್ರಿಕ್ಯುಲೇಷನ್ ಓದುತ್ತಿರುವಾಗಲೇ ಶಿಕ್ಷೋಮಣಿ ಪರಿಕ್ಷಾರ್ಥಿಗಳಿಗೆ ಅವರು ಸಂಸ್ಕೃತ ವಾರವನ್ನು ಹೇಳುತ್ತಿದ್ದರು. ಉತ್ತರಾಧಿ ಮಠಾಧಿಪರಲ್ಲಿ ಸುಧಾದಿ ಗ್ರಂಥಗಳನ್ನು ಅಭ್ಯಾಸಿಸಿ ಅಪಾರ ಪಾಂಡಿತ್ಯವನ್ನು ಗಳಿಸಿದರು. ಅವರಧೀ ಶಕ್ತಿಯು ಅನುಪಮವಾದದ್ದು. ಇಂದಿಗೂ 83 ವರ್ಷ ಕಾಳಿದಾಸ ರಚಿಸಿದ ರಘುವಂತ ಕಾವ್ಯವು ಅವರಿಗೆ ಬಾಯಿಪಾಠ.

ಆಚಾರ್ಯರು ಇಂಗ್ಲೀಷ್ ಪಾಠ ಹೇಳುತ್ತಿದ್ದರೆ ಅದೊಂದು ಸರವಸೋಟ. ಅಭಿನಯ ಪೂರ್ವಕವಾಗಿ ಪಾಠಗಳ ಹೇಳುತ್ತಿರುವಲ್ಲಿ, ವಿದ್ಯಾಧಿಕಾರಿಗಳು ಬೆನ್ನಾಗುತ್ತಿದ್ದರು. ಇಂಗ್ಲೀಷ್ ವಾರಗಳನ್ನು ಪೋಣಿಸುವುದರಲ್ಲಿ ನಭೂತೋನ ಭವಿಷ್ಯತಿ. ಎನಿಸಿಕೊಂಡವರು. ಇಂದಿಗೂ ಅವರನ್ನನುಸರಿಸುತ್ತಾ ಎಷ್ಟೋ ಮಂದಿ ಆದರ್ಶೋಪಾಧ್ಯಾಯರಿಗಿದ್ದಾರೆ. ಅವರು ಕೇವಲ ಹೆಡ್ ಮಾಸ್ಟರಾಗಿಯೇ ಇರಲಿಲ್ಲ.

ಒಮ್ಮೆ ಸೈನ್ಸ್ ಅಧ್ಯಾಪಕರೊಬ್ಬರು ಕಾಲೇಜಿಗೆ ಬರಲಿಲ್ಲ. ಆಕ್ಲಾಸಿಗೆ ಹೆಡ್‌ಮಾಸ್ಟರರೆ ಹೋದರು. ಅಂದು ನಕ್ಷತ್ರದ ಉನ್ನತೋನ್ನತ ಪಗಳನ್ನು ಕುರಿತು ಪಾಠ ನಡೆದಿತ್ತು. ಹಿಂದಿನ ಕ್ಲಾಸಿನಲ್ಲಿಯೂ ಆ ಪಾಠ ನಡೆದಿತ್ತು. ಆದರೆ ಹುಡುಗರಿಗೆ ಈ ಎರಡರ ವ್ಯತ್ಯಾಸವು ಸರಿಯಾಗಿ ತಿಳಿದಿರಲಿಲ್ಲ. ಆಗ ಆಚಾರ್ಯರು ಒಂದು ಉದಾಹರಣೆಯನ್ನಿತ್ತರು. ಹೋಳಿಗೆ ತಿಂದ ಹೊಟ್ಟೆಯಂತೆ (convere less) ಉನ್ನತ ಕೋದರಯವವಿರುತ್ತೆ. ಏಕಾದಶೀ ಜಿವಸನ ಹೊಟ್ಟೆಯಂತೆ. (concorve less) ನತೋದರಯವವಿರುತ್ತೆ. ಎಂದು ತಿಳಿಸಿದರಂತೆ ಅಂದಿನ ಉದಾಹರಣೆ ಇಂದಿಗೂ ಮರೆಯಲಾಗದು.

ಶ್ರೀಯುತರು ಸಂಸ್ಕೃತ ಕನ್ನಡ, ಇಂಗ್ಲೀಷ್ ಮತ್ತು ತೆಲುಗಿನಲ್ಲಿ ಪಾಂಡಿತ್ಯ ವುಳ್ಳವರು. ಬಳ್ಳಾರಿಯ ಕೋಲಾಚಲಂ ಶ್ರೀನಿವಾಸರಾಯರ ನಾಟಕ ಸಂಘದಲ್ಲಿ ಆಚಾರ್ಯರು ದರ್ಶಕತ್ವವನ್ನು ನಿರ್ವಹಿಸುತ್ತಿದ್ದರು. ಶಿವಾಜಿ ನಾಟಕದಲ್ಲಿ ನಾಯಕತ್ವವನ್ನು ಶಿವಾಜಿ ವಹಿಸುತ್ತಿದ್ದರು. ಶ್ರೀನಿವಾಸರಾಯರ ಕಂಪೆನಿಯಲ್ಲಿ ಇವರು ದರ್ಶಕರಾಗಿರುವುದು ಎದುರಾಳಿಗ ಳಾದ ಕೃಷ್ಣಮಾಚಾರ್ಯರಿಗೆ ಗುಂಪಿನ ವರಿಗೆ ಸಹಿಸಲಾಗಲಿಲ್ಲ. ಆಗ ಛೇರ್ಮನ್ನರಾಗಿದ್ದ ಸುಬ್ರಮಣ್ಯಶಿಯ್ಯರರು ಇವರನ್ನು ಜೆವಸಲು ಸರ್ಕಾರಕ್ಕೆ ಅರಿಕೆ ಮಾಡಿಕೊಂಡರು. ಆದರೇ ಆದದ್ದೇನು. ವಿಫಲತೆ. 30 ವರ್ಷಗಳ ಹೆಡ್ಮಾಸ್ಟರರಾಗಿ ದುಡಿದು 1931 ರಲ್ಲಿ ನಿವೃತ್ತರಾದರು

ಇವರ ಕೃಷಿಯು ಬಹು ಮುಖ್ಯವಾದದ್ದು. 1929 ರಿಂದ ಕೆಲವು ವರ್ಷಗಳ ಕಾಲ ಪಾಠ್ಯ ಪುಸ್ತಕ ಕಮಿಟಿಯ ಸದಸ್ಯರಾಗಿದ್ದರು. ಕೆಲವು ವರ್ಷ ಮದ್ರಾಸ್ ವಿಶ್ವವಿದ್ಯಾನಿಲಯದ ಸೆನೆಟಿನ ಸದಸ್ಯರಾಗಿಯು ಆಂಧ್ರವಿಶ್ವವಿದ್ಯಾನಿಲಯದಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯದ ಪರವಾಗಿ ಕನ್ನಡ ಪ್ರತಿನಿಧಿಗಳಾಗಿಯೂ ಇದ್ದರು. ಕೊಯಮತ್ತೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸ್ವಾಗತಾಧ್ಯಕ್ಷರಾಗಿದ್ದರು.

ಆಚಾರ್ಯರು ಅನೇಕ ಬಡ ವಿದ್ಯಾರ್ಥಿಗಳನ್ನಾದರಿಸಿದ ಆಶ್ರಯದಾತರು ಸಿರಿವಂತರೂ ಮಧ್ಯಮಿಗಳು ನಿಷ್ಕಾಮ ಕರ್ಮಿಗಳು. ಸಜ್ಜನರು ಜೀವಿಗಳು ಇವರು ಆಚಾರ್ಯರು ಬಾಳಿ ಬಾಳಿಸಿ ಬೆಳಗಲಿ

-: ಮೇಧಾವಿಗಳ - ಮತಿಭ್ರಮಣೆ :-

ಲೇ-: ಜಾ ಪನುಮಂತ ಶಾಸ್ತ್ರಿ, ಕೂಡ್ಲಿಗಿ

ಪ್ರತಿಭಾಶಾಲಿಗಳು ತಮ್ಮ ಪ್ರತ್ಯೇಕ ಕ್ಷೇತ್ರಗಳಲ್ಲಿ ಮಗ್ನರಾಗಿ ಸಾಮಾನ್ಯ ಕೆಲಸಗಳನ್ನು ಮರೆತುಬಿಡುತ್ತಾರೆ. ಒಮ್ಮೊಮ್ಮೆ ಮೇಧಾವಿಗಳ ಜೀವನದಲ್ಲಿ ಇಂತ ಸಂಘಟನೆಗಳು ಬಹಳ ಆಶ್ಚರ್ಯಕರವಾಗಿ ಕಾಣಬರುತ್ತವೆ. ಇವರು ಸರಧ್ಯಾನದಲ್ಲಿರುವಾಗ ವಿಪರೀತ ಘಟನೆಗಳು ಸಂಭವಿಸಿರುವದು ಸಹಜ.

ಪ್ರಾಚೀನ ವಿಜ್ಞಾನಿಯಾದ ಆರ್ಕಿಮಿಡಿಸನು ಒಮ್ಮೆ ಗಣಿತ ಶಾಸ್ತ್ರದ ಹಲವು ಸಮಸ್ಯೆಗಳಲ್ಲಿ ಮಗ್ನನಾಗಿ ಅನ್ನ ಪಾನಾದಿಗಳನ್ನು ಬಿಟ್ಟು ಹಲವಾರು ದಿನ ಕಳೆಯುತ್ತಿದ್ದನು ಊಟ ಮಾಡುವಾಗಲು ಸ್ನಾನ ಮಾಡುವಾಗಲೂ ಸಹ ಗಣಿತದ ಚಿಂತನೆ. ಅಭ್ಯಂಗನಕ್ಕಾಗಿ ಮೈಗೆ ಎಣ್ಣೆ ಹಚ್ಚಿಕೊಂಡಾಗ ಮೈತುಂಬಾ ರೇಖಾಗಣಿತ ನಮೂನೆಗಳೇ. ಬಲವಂತವಾಗಿ ಸ್ನಾನಕ್ಕೆ ಒಯ್ಯಬೇಕಾಗುತ್ತಿತ್ತು.

ಇಂತಹ ಸರಧ್ಯಾನನೇ ಅವನ ಪರಲೋಕಾಗಮನಕ್ಕೆ ಕಾರಣನಾಯಿತು. ಅವನು ವಾಸಮಾಡುತ್ತಿದ್ದ ಸಿರಾಕ್ಯೂಸ್ ಎಂಬ ಪಟ್ಟಣವು ರೋಮನರ ಹಸ್ತಗತವಾಯಿತು. ಎಲ್ಲೆ ನೋಡಿದರೂ ಕೋಲಾಹಲ. ಆರ್ಕಿಮಿಡಿಸನು ತನ್ನ ಒಲುಮೆಯ ಸಮಸ್ಯೆಯೊಂದನ್ನು ಪರಿಷ್ಕರಿಸುವುದಕ್ಕಾಗಿ ತನೇಕ ಧ್ಯಾನದಲ್ಲಿದ್ದ ತನ್ನ ಸುತ್ತಮುತ್ತಲ ಕೋಲಾಹಲವಾಗಲಿ ಅಥವಾ ತನ್ನ ನಗರವು ಶತ್ರು ಹಸ್ತಗತವಾಗಿದ್ದಾಗ ಆ ವಿಕಾಗ್ರ ಚಿತ್ತನಿಗೆ ಅವಗತವಾಗಲಿಲ್ಲ. ಶತ್ರು ಬಲದ ಸಿಪಾಯಿ ಯೊಬ್ಬನು ತನ್ನ ಸೇನಾಪತಿ ಮಾರ್ಸೆಲ್ಲಸ್‌ನ ಆಜ್ಞೆಯ ಮೇರೆಗೆ ಅವನನ್ನು ಹಿಡಿದೊಯ್ಯಲು ಬಂದನು. ಕುಸಿತನಾದ ರೋಮನ್ ಸೇನಾನಿಯು ತವನು ತನ್ನ ಕಂಡು ಸಿರ್ಲಕ್ಷೆ ಮಾಡುತ್ತಿರುವನೆಂದು ಭಾವಿಸಿ ಆ ವಿಜ್ಞಾನಿಯ ತಲೆಯನ್ನು ಕಡಿದೇ ಹಾಕಿದನು.

ಟಾಲ್‌ಸ್ಟಾಯರನ್ನು ಕುರಿತ ಕಥೆ ಮತ್ತೊಂದಿದೆ. ಒಮ್ಮೆ ಟಾಲ್‌ಸ್ಟಾಯ್ ಮತ್ತು ಸನ್ಯಾಸಿಯಾದ ಸ್ನೇಟೇಶ್ವರಿಬ್ಬರು ಕೋಚ್‌ನಲ್ಲಿ ಹೋಟ್ಟಿದರಂತೆ. ದೇವರು ಧರ್ಮ ಅಧ್ಯಾತ್ಮ ಇವುಗಳಲ್ಲಿ ಅವರೀರ್ವರ ಗಾಢ ಸಾಗುತ್ತಿತ್ತು. ಸುತ್ತಲಿನ ಪ್ರಕೃತಿ ಕೋಳಿಯು ಅವನಿಗೆ ಸೋತರವಾಗಲಿಲ್ಲ ಪುಕ ಪಿಕಗಳ ಕಲರವವು ಕೇಳಲಿಲ್ಲ. ಮಾತು ಬೆಳೆಯುತ್ತಾ ಬೆಳೆಯುತ್ತಾ ಕೊನೆಗೆ ತಮ್ಮ ಕುರುಪೆಯನ್ನು ತಾವು ಕಳಿತ ಕೋಚನ್ನು ಮರತೇಬಿಟ್ಟರು. ಇಪ್ಪರಲ್ಲಿ ಆ ಕೋಚ್‌ಗಾಡಿ ಪಲ್ಟಿ ಹೊಡೆಯಿತು. ಪುಣ್ಯ ವಶದಿಂದ ಪ್ರಾಣಾಪಾಯವು ತಪ್ಪಿತು. ಆದರೂ ಅದೊಂದು ಸರ್ಕಸ್ ಶೀಟಾಯಿತು!

ಕಾಲ್‌ರಿಡ್ಜ್ ಎಂಬ ಆಂಗ್ಲ ಕವಿಯ ಮನಸು ಬಾಲ್ಯದಲ್ಲಿ ಲಂಡನ್ ಬೀದಿಯಲ್ಲಿ ಹೋಗುತ್ತಾ ಹೋಗುತ್ತಾ ತನ್ನ ನೆಚ್ಚಿನ ಈಜುಗಾರನಾದ ಲಿಯಾಂಡರ್‌ನನ್ನು ಅನುಕರಿಸುತ್ತಾ ಹೋಗುತ್ತಿದ್ದನಂತೆ. ತನ್ನ ಊಹಾಲೋಕದಲ್ಲಿ ಈಜುತ್ತಾ ಕೊನೆಗೆ ದಾರಿಯಲ್ಲಿ ಹೋಗುತ್ತಿದ್ದ ಒಬ್ಬನ ಮೇಲೆ ಮಪ್ಪನೆ ಬಿದ್ದನಂತೆ! ಅವನನ್ನು ಕಿಸೆಗಳ್ಳನೆಂದು ಹಿಡಿದರಂತೆ. ಆಪ ಚಾರ್ಲ್ಸ್ ಲಾಂಬ್ ಈ ಹುಡುಗಚೇಷ್ಟೆಗಳನ್ನೆಸಲ್ಲ. ಭಾವಪರಂಗಗಳಲ್ಲಿ ಈಜುತ್ತಾ ಹೊಡೆಯುತ್ತಿದ್ದನೆಂದು ಆ ಈಜಿನ ವೇಗ ಇವನನ್ನು ನೆಲಕ್ಕುರುಳಿಸಿತೆಂದೂ ಕಥೆಯಿ ಸಮಾಧಾನ ಪಡಿಸಿದನಂತೆ.

ನ್ಯೂಟನ್ ಎಂಬ ವಿಜ್ಞಾನಿಯು ಯಾವಾಗಲೂ ಭಾವನಾಚಿಂತನೆಯಲ್ಲಿ ಮಗ್ನನಾಗಿರುತ್ತಿದ್ದ. ಕೋಳಿ ತತ್ತಿ ಕುದಿಯುವುದಕ್ಕೆ ಎಷ್ಟು ಕಾಲ ಹಿಡಿಯುವುದೋ ಎಂದು ಪರೀಕ್ಷಿಸತೊಡಗಿದನಂತೆ. ಕೋಧೆನಾಯಕ ಚಿತ್ತನಾಗಿ ಗಡಿಯಾರವನ್ನು ನೀರಿನೊಳಗೆ ಹಾಕಿ ಕೋಳಿ ತತ್ತಿಯನ್ನು ಕೈಯ್ಯಲ್ಲಿ ಹಿಡಿದು ನೋಡುತ್ತಾ ಕೆಲವು ಗಂಟೆಗಳು ನಿಂತಿದ್ದ ಮಂಗನಂತೆ!

ಸಂಸ್ಕೃತದ ಬೆಳಕಿಗೆ ನನ್ನ ಸಹಾಯವುಂಟು

ಡಾ|| ರಾಜೇಂದ್ರ ಪ್ರಸಾದರವರಿಗೆ ಸಂಸ್ಕೃತಬಾಷೆಯ ಮೇಲೂ; ಭಾರತೀಯ ಧರ್ಮ ಸಂಸ್ಕೃತಿಯ ಮೇಲೂ ನಿರತಿಶಯವಾದ ವಿಶ್ವಾಸ ನಿರುವುದು ರಾಷ್ಟ್ರಕ್ಕೊಂದು ರಕ್ಷಣೆಯಾಗಿದೆ. ಅವರು ಮೊನ್ನೆ ಪಾಟ್ನಾದಲ್ಲಿ ಬಿಹಾರ್ ಸಂಸ್ಕೃತ ಪರಿಷತ್ತಿನಲ್ಲಿ ಭಾಷಣಮಾಡುತ್ತ "ಸಂಸ್ಕೃತವು ಜಗತ್ತಿನ ಶ್ರೇಷ್ಠ ಭಾಷೆಗಳಲ್ಲಿ ಎಲ್ಲ ಕಾರ್ಯಗಳಿಗೂ ನಾವು ಅದರಿಂದಲೇ ಸ್ಫೂರ್ತಿ ಪಡೆಯುತ್ತೇವೆ ಭಾರತದಲ್ಲಿ ಸಂಸ್ಕೃತಕ್ಕೆ ಪ್ರಧಾನವಾದ ಸ್ಥಾನ ಸಿಗಬೇಕು. ಇದಕ್ಕಾಗಿ ಸಾರ್ವಜನಿಕರು ಸಹಾಯನೀಡಲು ನಾನು ಸಿದ್ಧನಿದ್ದೇನೆ" ಎಂದು ಹೇಳಿದರು.

ಆಂಧ್ರ ಪ್ರಾಂತ ನಿರ್ಮಾಣ

.... ಈ ವಾರದ ಸುದ್ದಿಗಳು ....

ಕೇಂದ್ರ ಸರಕಾರದಿಂದ ಅಧಿಕೃತ ಹೇಳಿಕೆಯು ಇನ್ನೂ ಹೊರಬಿದ್ದಿಲ್ಲ. ಪ್ರತಿನಿತ್ಯವೂ ದೆಲ್ಲಿಯಿಂದ ಪಾರಿಕೆಯ ಸುದ್ದಿಗಳು ಬರುತ್ತಲಿವೆ.

ಮದ್ರಾಸ್ ಸರ್ಕಾರವು ಬಳ್ಳಾರಿ ಪೂರ್ಣ ಜಿಲ್ಲೆಯನ್ನು ಮದ್ರಾಸ್ ಭಾಗದಲ್ಲಿಟ್ಟು ಆಂಧ್ರದ 11 ಜಿಲ್ಲೆಗಳಿಗೆ ವಾಶ್ರ ಆಯ ವ್ಯಯ ಪಟ್ಟಿಯನ್ನು ತಯಾರಿಸಿದೆ. ಬಳ್ಳಾರಿ ಜಿಲ್ಲೆಗಾಗಿದೇ ಪ್ರತ್ಯೇಕ ಲೆಕ್ಕವನ್ನು ತೋರಿಸಿದೆ. "ಆಂಧ್ರದಲ್ಲಿ ಸೇರುವವರ ಮತ್ತು ಬಿಡುವವರ ಪ್ರಶ್ನೆಗೆ ಬಾನೆ ಬರದಂತೆ ಹೀಗೆ ಮಾಡಲಾಗಿದೆ" ಎಂದು ಆರ್ಥಿಕ ಮಂತ್ರಿಗಳು ಹೇಳಿದರು. ಬಳ್ಳಾರಿಯನ್ನು ವಿಭಜಿಸದೆ ಅದರ ಐಕ್ಯವನ್ನು ಕಾಪಾಡಿ ಉಳಿದ ಮದ್ರಾಸ್ ಭಾಗದಲ್ಲಿ ಇತುವರೆಂದು ಗಟ್ಟಿಯಾದ ವಾರ್ತೆಯುಂಟು.

ಇನ್ನು ಆಂಧ್ರ ರಾಜಧಾನಿಯ ವಿಷಯ, ಇದನ್ನು 'ನೆಲ್ಲೂರು ಸಮೀಪಸ್ಥಾಪಿಸುವರೆಂಬ ಒಂದು ಸುದ್ದಿ ಇದೆ. ಆಂಧ್ರ ಕೇಸರಿ ಪ್ರಕಾಶಂ ರವರು ಮದ್ರಾಸನ್ನು ಗೆಲ್ಲಲು 'ಸತ್ಯಗ್ರಹ'ಕ್ಕೆ ಆಣಿಮಾಡುತ್ತಲಿರುವಾಗ ಈಗೊಡ್ಡು ಬೆದರಿಕೆಗಳಿಗೆ ರಾಜಾಜಿಯವರು ಸೊಪ್ಪುಹಾಕಲಿಕ್ಕಿಲ್ಲ;

ರಾಮರಾಜ್ಯದ ಮಾದರಿ

ಹೈದರಾಬಾದಿನಿಂದ ಬಂದ ಒಂದು ಸುದ್ದಿಯನ್ನು ಕೇಳುವಾಗ ನಮ್ಮದು ರಾಮರಾಜ್ಯವೋ? ರಾವಣನ ರಾಜ್ಯವೋ? ಎಂದು ಸಂಶಯ ಬರುತ್ತದೆ. ಹೈದರಾಬಾದಿನ ಕೊಪ್ಪಲ ತಾಲೂಕಿನಲ್ಲಿ ಓರ್ವ ಮೈತುಂಬ ಪುಡಿಮಾ ಹೊಟ್ಟಿಗಿಲ್ಲದೆ ಸತ್ತಹೊದನು ಸರಕಾರಿ ನೌಕರ ಇವನಿಗೆ ಇವನ ಮೇಲಾಧಿಕಾರಿಗಳು 6 ತಿಂಗಳಿಂದ ಸಂಬಳವನ್ನು ಮಂಜೂರು ಮಾಡಿಕಲಿಲ್ಲ. ಬೇರೆ ಗತಿಕಾಣದೆ ಆ ನೌಕರನು ರಾಯಚೂರು ಕಲೆಕ್ಟರರಿಗೆ ದೂರು ಕೊಡಲು ಬಂದು ಅವರ ಆಫೀಸಿನ ಮುಂದೆ ಕಾಯುತ್ತಿರುವಾಗಲೇ ಪ್ರಾಣ ಬಿಟ್ಟನು! ಇಂಥಹ ಕರುಣಾಜನಕ ಸನ್ನಿವೇಶಗಳು ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ನಡೆಯುತ್ತಿವೆ. ಬ್ರಿಟಿಶರ ಕಾಲವಲ್ಲಾದರೂ ಈ ಬಗೆಯ ಅಕ್ರಮ ಆಡಳಿತವಿತ್ತೆಂದು ಊಹಿಸುವದು ಕಷ್ಟ. ಹೈದರಾಬಾದಿನ ಓರ್ವ ನೀಚೆಯ ಪುರಾಣದಿಂದ ನಮಗೆ ಕಳವಳವಾಗುತ್ತದೆ. ಆದರೆ ನಿಧಾನವಾಗಿ ಸಾಯಿಸುವ ಇಂಥವೇ ಹಲವು ನಿದರ್ಶನಗಳು ನೇಪಾಳ ಉಪಾಧ್ಯಾಯರುಗಳ ನಡುವೆ ನಡೆದಿದೆ ಇನು ನಮ್ಮ ರಾಮರಾಜ್ಯದ ಮಾದರಿ! (ರಾಯಭಾರಿ)

ಮಿತ ಸಂತಾನಕ್ಕೆ ಪ್ರೋತ್ಸಾಹ ಅವಶ್ಯಕ

ಮಾನವನ ಹುಟ್ಟಿನ ಹಿಂದೆಯೇ ಕ್ಷಾಮುಕ ಕ್ರಿಯೆಗಳ ವಿಚಾರವು ಅವನ ಶ್ರೇಷ್ಠತೆಯನ್ನು ಹಿಂಬಾಲಿಸಿಕೊಂಡು ಬಂದಿದೆ. ಇದ್ದು, ಇಂದು, ಮೊನ್ನಿನ ವಿಚಾರವಲ್ಲ, ಯುಗಾಂತರದಿಂದ ಆರಂಭವಾಗಿ ಇಂದಿನ ವರೆಗೂ ಸಾಗಿಕೊಂಡು ಬಂದಿದೆ. ಅಲ್ಲದೆ ಅದೇ ಅವನ ನಾಶಕ್ಕೆ ಕಾರಣವಾಗಿದೆ. ಸೃಷ್ಟಿಯ ಮೂಲ ಯುಗದಲ್ಲಿ ಜನಸಂಖ್ಯೆಯು ಮಿತಿಯಾಗಿತ್ತು. ಆಗ ಪ್ರಕೃತಿಯೇ ಶಿಕ್ಷಕಳಾಗಿದ್ದಳು, ಎಲ್ಲಾ ಸ್ತ್ರೀ ಪುರುಷರು ಸ್ವತಂತ್ರರಾಗಿದ್ದರು. ತಮ್ಮನ್ನು ತಾವೇ ರಕ್ಷಿಸಿಕೊಳ್ಳುತ್ತಿದ್ದರು, ಅಗಿನ ಜನರಲ್ಲಿ ಅಸೂಯೆಯಾಗಲೀ, ಅಧಿಕಾರ ಲಾಲಸೆಯಾಗಲಿ, ಜಿಪುಣತನವಾಗಲಿ ಇರಲಿಲ್ಲ. ಅದು ನಿಜವಾದ ಸ್ವಾತಂತ್ರ್ಯ ಯುಗವಾಗಿತ್ತು. ಸ್ತ್ರೀ ಪುರುಷರು ಜೊತೆಯಾಗಿ ಧುಡಿದು, ಊಟ ಮಾಡಿ ಪ್ರಕೃತಿಯನ್ನು ಆರಾಧಿಸುತ್ತಿದ್ದರು. ಹಾಗೆಯೇ ಕಾಲವು ಉರುಳಿತು, ಅಂತೆಯೇ ಜನರ ಬೆಳವಣಿಗೆಯು ಬೆಳೆಯಿತು, ಬೆಳೆಯೊಡನೆ ಜನರಲ್ಲಿ ಸ್ವಾರ್ಥ ಮೂಡಿತು. ಇದರ ಫಲವಾಗಿ ಒಬ್ಬರು ಮತ್ತೊಬ್ಬರ ಸ್ವಾತಂತ್ರ್ಯವನ್ನು ಕಸಿದು ಕೊಳ್ಳಲನುವಾದರು. ಯುಕ್ತಿವಂತನು ಬಲಾಢ್ಯನ ಸಹಾಯ ಪಡೆದು ತನಗಾಗಿ ದುಡಿಯುವವರನ್ನು ಆರಿಸಿದನು, ಅದರಲ್ಲೂ ಅಬಲೆಯರ ಪೂರ್ಣ ಸ್ವಾತಂತ್ರ್ಯವನ್ನು ಕಸಿದು ಕೊಂಡನು. ತನ್ನ ಸ್ವಾತಂತ್ರ್ಯವನ್ನು ಕಾಪಾಡಿ ಕೊಳ್ಳಲೆಂದು ಸರ್ವಾಧಿಕಾರಿಯಂತೆ ಧರ್ಮದ ಹೆಸರಲ್ಲಿ ಶಾಸ್ತ್ರಗಳನ್ನು ಬರೆದು ಕಟ್ಟು ಕಟ್ಟಳೆಗಳನ್ನು ಹೊರಡಿಸಿದನು. ಸ್ತ್ರೀಯನ್ನು ಭೋಗದ ವಸ್ತುವೆಂದು ಪರಿಗಣಿಸಿದನು. ಹಿಂದಿನ ಚರಿತ್ರೆಯನ್ನು ಪರಾಂಬರಿಸಿ ನೋಡಿದರೆ ಸ್ತ್ರೀಯರ ವಿಚಾರದಲ್ಲಿ ಪುರುಷನ ಸೀಲವು ಹೇಗಿತ್ತೆಂದು ತಿಳಿಯಬಹುದು. ಗಾಲವ ಋಷಿಯು ತನ್ನ ಮಿತ್ರ ಯಯಾತಿಯ ಮಗಳನ್ನು ಸಾಲವಾಗಿ ಪಡೆದು ಒತ್ತೆ ಇರಿಸಿದ ನಿದರ್ಶನೆ ಇದೆ. ಪಾಂಡವರು ದ್ರೌಪದಿಯನ್ನು ತಮ್ಮೆಲ್ಲರ ಸ್ತ್ರೀಧನವಾಗಿ ಸ್ವೀಕರಿಸಿದ ಉದಾಹರಣೆ ಇದೆ. ಹೀಗೆ ಸ್ತ್ರೀಯನ್ನು ಹೇಗೆ ಬೇಕೋ ಆಗೆ ತಿಯಲ್ಲಿ ಉಪಯೋಗಿಸುವ ಅಧಿಕಾರವು ಗಂಡಿನ ದಾಯಿತು. ಇರಲಿದಲೇ ಅಣ್ಣ ತಮ್ಮಂದಿರಲ್ಲಿ, ಗುರು ಶಿಷ್ಯರಲ್ಲಿ, ಬಂಧು ಮಿತ್ರರಲ್ಲಿ, ಸ್ತ್ರೀ ಪುರುಷರಲ್ಲಿ ಭೇಧಭಾವ ಉಂಟಾಯಿತು. ಆ ನೀತಿಯು ಮೆಳೆಯಿತು, ಶಕ್ತಿ ಮತ್ತು ಪೈಗಳ್ಳ ಜನರ ಬೆಳೆಯಿತು. ಇದೇ ಸಾಂಸ್ಕೃತಿಕ, ವೈಶಿಷ್ಟ್ಯ, ನಾಗರೀಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಕಳೆದುಕೊಂಡ ನಿರ್ವೀರ್ಯ ಜನರ ಬೆಳವಣಿಗೆಗೂ, ನಾಶಕ್ಕೂ ಮೂಲವಾಯಿತು.

" ಕೆಟ್ಟ ವಾಸನೆಯ ಮನುಷ್ಯರು ನೂರಾರು ಕೆಟ್ಟ ಬಯಕೆಗಳಿಂದ ಕೂಡಿದವರಾಗಿ, ಒಟ್ಟು ಕಾಮ, ಮೊದಲಾದುವುಗಳನ್ನು ಆಶ್ರಯಿಸಿ, ಅಧರ್ಮಿಕ ಹುಟ್ಟಿಗೆ ಮೂಲಕಾರಣರಾಗಿ, ಅಧರ್ಮವನ್ನುಗಳನ್ನು ಆಪೇಕ್ಷಿಸುತ್ತಾರೆ [ಭಗವದ್ಗೀತೆ 19 ನೇ ಅಧ್ಯಾಯ 12 ನೇ ಶ್ಲೋಕ]

ಯೋಗ್ಯ ಪ್ರಜೆಯು ತನ್ನ ರಾಷ್ಟ್ರದ ಉನ್ನತಿಗಾಗಿ ದುಡಿಯಲು, ಆರೋಗ್ಯವಂತನೂ, ಶೀಲವಂತನೂ, ಮತ್ತೂ ಮೇಧಾವಿಯೂ ಆದ ಕೆಲವೇ ಶಿಶುವನ್ನು ನಿರ್ಮಿಸುವನು. ಆದರೆ ರಾಷ್ಟ್ರದ್ರೋಹಿಯು ಮಾತ್ರ ತನ್ನ ಮತ್ತು ರಾಷ್ಟ್ರದ ಆರ್ಥಿಕ ಬಿಕ್ಕಟ್ಟನ್ನು ಯೋಚಿಸದೆ ದುರ್ಬಲನೂ ಅವಿವೇಕಿಯೂ ಆದ ಶಿಶುವನ್ನು ನಿರ್ಮಿಸಿ ರಾಷ್ಟ್ರದ ಮಡಿಲಲ್ಲಿ ಎಸೆದು ರಾಷ್ಟ್ರದ ಅವನತಿಗೆ ಮೂಲ ಹೇತುವಾಗಿರುವನು.

ಭಾರತದೇಶದ ಆರ್ಥಿಕ ಬಿಕ್ಕಟ್ಟು ಇನ್ನೂ ಪೂರ್ಣವಾಗಿ ಬಗೆಹರಿಯಿಲಿಲ್ಲ. ಆಹಾರದ ಅಭಾವವು ಇನ್ನೂ ಅದಗಲಿಲ್ಲ ಆದರೆ ಅಮಿತವಾಗಿ ಬೆಳೆಯುತ್ತಿರುವ ಭಾರತದ ಜನರು ರಾಜಕೀಯದಲ್ಲಿ ವೈಮನಸ್ಸುಳ್ಳವರಾಗಿ, ಪೈಗಳ್ಳತನಕ್ಕೆ ಎಡೆಗೊಟ್ಟು, ಆಹಾರದ ಬೆಳೆಯನ್ನು ಹೆಚ್ಚಿಸಿ ಮತ್ತಿತರ ಆರ್ಥಿಕ ಬಿಕ್ಕಟ್ಟುಗಳನ್ನು ಬಗೆಹರಿಸುವ ಬದಲು ತರ್ಕಸಹವ್ರಜ್ಯವನ್ನು ಒಳಕೊಳ್ಳುತ್ತಾ ರಾಷ್ಟ್ರದ ಬಡತನಕ್ಕೆ ಆಹ್ವಾನ ಕೊಡುವ ಜನಸಂಖ್ಯೆಯ ಬೆಳವಣಿಗೆಗೆ ಉತ್ತೇಜನ ಕೊಡುತ್ತಿರುವದು ಶೋಚನೀಯ. ಈ ಶೋಚನೀಯ ಅವಸ್ಥೆಯನ್ನು ಕಂಡೇ ಮಹಾತ್ಮಗಾಂಧಿ ಮತ್ತು ಜವಾಹರಲಾಲರಂಥ ಧುರೀಣರು ಸಂತಾನವನ್ನು ತಡೆಗಟ್ಟುಜೀಕೆಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಉತ್ತಮ ಮಾರ್ಗವು ಇಂದ್ರಿಯನಿಗ್ರಹಣ. ಆದರೆ ಇದು ಮಾತ್ರ ನಮ್ಮಂತಹ ಜನಸಾಮಾನ್ಯರಿಗೆ ಆಗದ ಮಾತು. ನಮ್ಮಲ್ಲಿ ಹೆಚ್ಚಿನವರು ಸ್ವಶಾನ ವೈರಾಗ್ಯದ ನಟನೆಯನ್ನು ನಟಿಸಿ ಕಾಮಕೂಪದಲ್ಲಿ ಆಟವಾಡುತ್ತಿರುವದು. ಈ ಹಾಪದ ಫಲವಾಗಿ ಹುಟ್ಟುವ ನಿಶಕ್ತ ಬಾಲಕರನ್ನು ರಾಷ್ಟ್ರದ ಭವಿಷ್ಯ ಮುಗ್ಗಟ್ಟಿನ ರಣರಂಗದಲ್ಲಿ ತಾಂಡವನೃತ್ಯ ಆಡಲು ದಬ್ಬಿಬಿಡುವರು. ಆವೇರಿ ವಿಧಿಯನ್ನು ವೈಯ್ಯ ತೊಡಗುವರು. ಅನೇಕ ವೇಳೆ ಮದುವೆಯ ದಿನ ಪುರೋಹಿತರು "ಅಷ್ಟ ಪುತ್ರೋಭವ" ಎಂದು ಹರಸುವರು ಆದರೆ ಆ ಎಂಟು ಮಕ್ಕಳನ್ನು ಸಾಕುವ ಸಮಸ್ಯೆ ಎಷ್ಟು ಬಿಗಿತರವಾದುದೆಂದು ಅವರಿಗೇನು ಗೊತ್ತು? ಸಾಧ್ಯ ಭಾರತವು ಬಡದೇಶ ಹೀಗಿರುವಲ್ಲಿ ಹೆಚ್ಚು ಮಕ್ಕಳು ಹುಟ್ಟಿದಲ್ಲಿ ಬಡ ಅಥವಾ ಮಧ್ಯಮ ವರ್ಗದ ಸಂಸಾರಿಗರಿಗೆ ಅಷ್ಟು ಮಕ್ಕಳನ್ನು ಸಾಕುವದು ಒಂದು ಸಮಸ್ಯೆಯಾಗುವದು. ಕಾರ್ಮಣ ಅನೇಕ ವೇಳೆ ತಮ್ಮಿಬ್ಬರಿಗೆ ಬೇಕಾದ ತಿಂಡಿ, ಬಟ್ಟೆಗಳನ್ನು ಒದಗಿಸಲು ಅನುಕೂಲವಾಗದಿರುವಾಗ ತಮ್ಮ ಹಲವು ಮಕ್ಕಳಿಗೆ ಒದಗಿಸಲು ಸಾಧ್ಯವೆ? ಎಷ್ಟೋ ವೇಳೆ ಹೆಬ್ಬು ಮಕ್ಕಳನ್ನು ಹೆತ್ತು ತನ್ನ ಮಕ್ಕಳಿಗಾಗಿ ತಿಂಡಿಯನ್ನೊದಗಿಸಲೆಂದು ತಾನು ತಿನ್ನದೇ ನಿಶಕ್ತಳಾಗಿ ಪುನಃ ಹೆತ್ತರೆ ಹುಟ್ಟಿದ ಶಿಶುವು ನಿಶಕ್ತತೆಗೆ ಬಲಿಯಾಗಿ ಮುಂದೆ ದೇಶಕ್ಕೆ ಒಂದು ಹೊರೆಯಾಗದಿರದೆ? ಕೆಲವರಲ್ಲಿ ಹೆಚ್ಚು ಮಕ್ಕಳನ್ನು ನಿರ್ಮಿಸುವ ದೇಹಧಾರ್ಢ್ಯವಿರಬಹುದು. ಆದರೆ ರಾಷ್ಟ್ರಹಿತದೆಡೆಗೆ ಅವರು ದೃಷ್ಟಿಯನ್ನು ಬೀರಬೇಕು ರಾಷ್ಟ್ರದ ಆರ್ಥಿಕ ಸ್ಥಿತಿ ಹೇಗಿದೆ? ಮತ್ತು ತನ್ನ ಮಕ್ಕಳಿಗೆ ಯೋಗ್ಯ ಆಹಾರ ಉಡುಪು ಮತ್ತು ವಿದ್ಯೆಯನ್ನು ಒದಗಿಸಲು ತಮಗೆ ಶಕ್ತಿ ಇದೆಯೆ? ಎಂದು ತಿಳಿದುಕೊಳ್ಳಬೇಕು. ಇದು ಯೋಗ್ಯರ ಕರ್ತವ್ಯ.

ಎಷ್ಟರ ತನಕ ಭಾರತೀಯರು ಸ್ತ್ರೀಯು ತನ್ನ ಭೋಗದ ಸಲಕರಣೆ ಎಂದು ತಿಳಿದು ಅವಳ ಸ್ವಾತಂತ್ರ್ಯವನ್ನು ಕಸಿದು ಕೊಳ್ಳಲು ಎತ್ನಿಸುವನೊ ಅಷ್ಟರ ತನಕ ಅವನು ಸ್ವತಂತ್ರ ರಾಷ್ಟ್ರದ ಸ್ವತಂತ್ರ ಪ್ರಜೆ ಎಂದೆನಿಸಿಕೊಳ್ಳಲಾರನು. ತಾನು ತನ್ನ ಸ್ತ್ರೀಯನ್ನು ಸರಭಾಗಿನಿ ಎಂದರಿತು ಅವಳ ಕಷ್ಟ, ಸುಖ, ಆರೋಗ್ಯವನ್ನು ಲಕ್ಷಿಸಿ ತನ್ನ ಆರ್ಥಿಕ ಮಟ್ಟವನ್ನು ಪರಾಂಬರಿಸಿ ಆರೋಗ್ಯವೂ, ಮಿತವೂ ಆದ ಸಂತತಿಗೆ ಜನನ ಕೊಟ್ಟಾಗ ಆ ಮಕ್ಕಳು ಧೃಢಕಾಯರಾಗಿ ಯೋಗ್ಯ ವಿದ್ಯೆ ಪಡೆದು ಮಾತಾ ಪಿತರ, ಮತ್ತು ದೇಶದ ಕೀರ್ತಿಯನ್ನು ಬೆಳಿಸುವದರಲ್ಲಿ ಸಂದೇಹವಿಲ್ಲ ಇನ್ನು ಸಂತಾನ ನಿಯಮನ ನ್ನು ಮಿತಿಯನ್ನಾಗಿರಿಸಲು ಯೋಗ್ಯ ವೈದ್ಯರ ಸಲಹೆಯು ಮೇರೆಗೆ ಸಂತಾನ ನಿರೋಧಕ ಸಾಧನವನ್ನು ಕೈಗೊಂಡರೆ ಅನೀತಿಯು ಹೆಚ್ಚುವದಿಲ್ಲವೆ ಎಂಬ

ಹೆಣ್ಣು-ಗಂಡಿನ ಬಗ್ಗೆ ಗಂಡು ಹೆಣ್ಣಿನ ಅಭಿಪ್ರಾಯ

ಹೆಂಗಸರು ಗಂಡಸರ ಬಗ್ಗೆ ಏನು ಅಭಿಪ್ರಾಯವಹುತ್ತಾರೆ? ಗಂಡಸರಾದರೂ ಹೆಂಗಸರ ಬಗ್ಗೆ ಏನು ಅಭಿಪ್ರಾಯ ಹಡುತ್ತಾರೆ? ತಮ್ಮ ಬಗ್ಗೆ ಆಯಾ ಲಿಂಗದವರ ಅಭಿಪ್ರಾಯಗಳೇನು? ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಮನಶಾಸ್ತ್ರಿಗಳ ಸಂಶೋಧನೆಯಿಂದ ಹೊರಪಟ್ಟ ಸಂಗತಿಗಳಿವು.

ವಿವಾಹದಲ್ಲಿ ವಿಕಸಿಸ್ಟೆ (ಪಾತಿವ್ರತ್ಯ) ನೈತಿಕ ಚರಿತ್ರೆ, ಕಲ್ಪನಾಶಕ್ತಿ, ಸಮತೋಲನ ಮುಕ್ಕಳ ಅಗತ್ಯಗಳನ್ನು ತಿಳಿದು ಕೊಂಬ ಶಕ್ತಿ ಇವುಗಳಲ್ಲಿ ಹೆಂಗಸರು ಗಂಡಾರಿಗಿಂತ ಶ್ರೇಷ್ಠರೆಂದು ಉಭಯ ಲಿಂಗದವರೂ ಒಪ್ಪುತ್ತಾರೆ.

ಅದೇ ಪ್ರಕಾರ ಮತ್ಸರ, ಅಸೂಯೆ, ಕ್ರೋಧೋದ್ರೇಕಗಳು ಹೆಂಗಸರಲ್ಲಿ ಹೆಚ್ಚೆಂದು ಇಬ್ಬರೂ ಒಪ್ಪುತ್ತಾರೆ. ನೆರವನ್ನೆಯರಂತೆ ತಾವೂ ಮೆರೆಯಬೇಕೆಂಬ ದುರಾಶೆಯೂ ಅವರಿಗೆ ಹೆಚ್ಚು.

ಗಂಡಸರು ಶೌರ್ಯ, ಧೈರ್ಯಶಾಲಿಗಳು, ಬುದ್ಧಿಶಾಲಿಗಳು, ಸಂಕಟಕಾಲದಲ್ಲಿ ಹೆಚ್ಚು ಧೈರ್ಯವನ್ನು ತೋರಿಸುವವರು, ಸಾಲಮಾಡುವ ಪ್ರವೃತ್ತಿ ಕಡಮೆಯಾಗಿರುವವರು, ಹಾಗೆಯೇ ಹೆಚ್ಚು ವ್ಯಭಿಚಾರಿಗಳು ಎಂಬವಕ್ಕೆ ಗಂಡಸರು ಹೆಂಗಸರಬ್ಬರ ವಿರೋಧಾಭಿಪ್ರಾಯವಿದೆ.

ಈ ಹೆಂಗಿನ ವಿಚಾರಗಳಲ್ಲಿ ಎರಡೂ ಲಿಂಗಗಳ ವೃತ್ತಿ ಒಂದೇ ತರವಾಗಿರುತ್ತದೆ ಎಂದು ಸಾಮಾನ್ಯ ಒಪ್ಪಿಗೆಯಿರುತ್ತದೆ. ನೋವು ತಡೆದುಕೊಳ್ಳುವ ಧೈರ್ಯ, ಪ್ರತಿಭಾಶಕ್ತಿ, ಎಲ್ಲ ಪ್ರಮಾಣಗಳೂ ಪ್ರತಿಕೂಲವಾಗಿದ್ದರೂ ತಮ್ಮದೇ ಸರಿಯೆಂದು ಛಲ ಹಿಡಿಯುವ ಪ್ರವೃತ್ತಿ ಇತ್ಯಾದಿ.

— ಪಾಕೀಸ್ಥಾನದ ಅವ್ಯವಸ್ಥೆ —

ಲಾಹೋರಿನಲ್ಲಿ ತರುಣಿಯರನ್ನು ಕಳವು ಮಾಡುತ್ತಲಿದ್ದಾರು.

ಪಾಕೀಸ್ಥಾನದ ಉರ್ದು ಪತ್ರಿಕೆಗಳಿಂದ :—

"ನವಾಯೆ-ವಕ್ತ್" (ಉರ್ದು ದಿನ ಪತ್ರಿಕೆ, ಲಾಹೋರ್.)

ಸರಹದ್ದ್ ಪ್ರಾಂತದ ಮುಖ್ಯ ಮಂತ್ರಿಗಳಾಗಿದ್ದ ಡಾ. ಖಾನ್ ಸಾಹೇಬರನ್ನು ಬಂಧಿಸಿದುದೂ, ಅವರ ಮೇಲೆ ಬಂಧನಗಳನ್ನು ಹೇರಿರುವುದೂ ಸರಿಯಾದುದಲ್ಲ. ಇತರ ಪಾಕೀಸ್ಥಾನಿಗಳಷ್ಟೇ ಡಾ. ಖಾನ್ ಸಾಹೇಬರಾದರೂ ದೇಶಭಕ್ತರು.

ಲಾಹೋರಿದಲ್ಲ ಪುಂಡಾಟಿಕೆ ವಿಶೇಷವಾಗಿ ನಡೆದಿದೆ. ಹಾಡ ಹಗಲಲ್ಲಿ ನಡು ಬೀದಿಗಳಲ್ಲಿ ಪಟ್ಟಿನ ಪಂಜಿ ಬಿನ ಮುಖ್ಯ ಸಟ್ಟಣದಂಥ ಲಾಹೋರ್ ನಗರದಲ್ಲಿ ತೀರ ತಲೆತಗ್ಗಿಸಬೇಕಾವ ಘಟನೆಗಳಾಗುತ್ತಲಿವೆ. ನಿರಪರಾಧಿ ಬಾಲೆಯರನ್ನು ಎತ್ತಿಕೊಂದು ಹೋಗಿ ಅವರನ್ನು ವಿಚಿತ್ರ ಹಿಂಸೆಗೆ ಗುರಿಮಾಡುತ್ತಿರುವದು ನಿತ್ಯದ ವಾರ್ತೆಯಾಗಿದೆ. ಇದು ಇಸ್ಲಾಂ ತತ್ವಗಳ ಮೇಲೆ ನಡೆಸುವ ರಾಜ್ಯಭಾರವೆ? ನಮ್ಮ ಯುವಕರಿಗೆ ಆತ್ಮ ಸಂಯಮದ ಶಿಕ್ಷಣವೂ ಇಲ್ಲ. ನಾಡಿನ ಚಿತ್ರ ಗೌರವದ ಲಕ್ಷ್ಯವೂ ಇಲ್ಲ. ಜೀವನದ ಸಾರ್ಥಕ್ಯ ನೈತಿಕ ಬೆಲೆಯನ್ನು ಯುವಕರು ನೋಡದೇ ಕಳವಳವನ್ನುಂಟುಮಾಡುವ ಕೆಲಸಗಳಲ್ಲಿ ತಮ್ಮ ಶಕ್ತಿಯನ್ನು ವ್ಯಯಮಾಡುತ್ತಲಿದ್ದಾರೆ. ಪುಂಡಾಟಿಕೆ ನಡೆಸುವವರಿಗೆ ಪ್ರತಿಷ್ಠಿತರು ಆಶ್ರಯ ಕೊಡುತ್ತಲಿದ್ದಾರೆ. ಇಂಥ ಆಶ್ರಯವು ಹೋಗಬೇಕು. ಸರ್ಕಾರಿಯವರಿಗೆ ನೈತಿಕ ಶಿಕ್ಷೆಯನ್ನು ಕೊರೆಯಬೇಕು.

ಮುಸ್ಲಿಂ-ಲೀಗ್ ಸಂಸ್ಥೆಯ ಸದಸ್ಯರಲ್ಲಿ ಐಕ್ಯಮತ್ಯವೆಂಬುದು ಇಲ್ಲ ಪಾರಸ್ಪರಿಕ ಈರ್ಷ್ಯೆ, ದ್ವೇಷವು ಹೆಚ್ಚುತ್ತಲಿದೆ. ಇವರಲ್ಲಿ ಕೆಲ ಕಮ್ಯೂನಿಸ್ಟರೂ ಸೇರಿದ್ದಾರೆ.

ಜಂಗೋಜ್ (ಕರಾಚಿ ಪತ್ರಿಕೆ)

ಪಾಕಿಸ್ತಾನ ಮುಸ್ಲೀಂಲೀಗಿನ ಉಪಾಧ್ಯಕ್ಷರಾದ ಯೂಸೂಫ್ ಹಾರೂನರವರು ಒಂದು ಭಾಷಣದಲ್ಲಿ ಕೇಳಿದ ಪ್ರಕಾರಕ್ಕೆ ಲಂಚವೂ, ಅನೀತಿಯೂ ಪಾಕಿಸ್ತಾನದಲ್ಲಿ ವಿಶೇಷವಾಗಿ ಹಬ್ಬಿದೆ ಒಂದು ಸ್ವಾಗತ ಸಮಾರಂಭದಲ್ಲಿ ಅವರು ಹೀಗೆ ಮೇಳಿದರು. ಇವರು ಆಸ್ಟ್ರೇಲಿಯಾದಲ್ಲಿ ಪಾಕೀಸ್ತಾನದ ಪರವಾಗಿ ರಾಯಭಾರಿಯಾಗಿದ್ದರು. "ಕೆಲವು ರಾಜಾಜ್ಞೆಗಳಿಗೆ ಶಾಸಕವ್ಯಾಪ್ತಿಯ ಬಹಳ ಅಂತರ ಉಂಟಾಗುತ್ತಲಿದೆ. ಎಲ್ಲೆಡೆಯಲ್ಲೂ ಅನಿಯಂತ್ರಿತ ಅವಿಶ್ವಾಸ ಸಂದೇಹದ ವಾತಾವರಣವಿದೆ" ಎಂದು ಅವರು ಹೇಳಿದರು

೧೧೧ ವರ್ಷದ ಸಾಧು

ಬಿಹಾರ ಪ್ರಾಂತದ ಬಾರ ಎಂಬೂರಿನಲ್ಲಿ 111 ವರ್ಷದ ಸಾಧುವಿದ್ದಾನೆ. ಅವನನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸಲು ಇಬ್ಬರು ಹಿಂದು ಇಬ್ಬರು ಮುಸಲ್ಮಾನ ಶಿಷ್ಯರಿದ್ದಾರೆ. ಅರ್ಧ ಸಮಾಧಿಸ್ಥನಾಗಿರುವ ಕಾಲಕ್ಕೆ ಕಾಲುಗಳ ಪೋಷಾಗವನ್ನು ಹುಳಗಳು ತಿಂದಿವೆ.

ಆಂಧ್ರಪ್ರಾಂತ ನಿರ್ಮಾಣ

ಅಲ್ಲಿಯವರಿಗೆ ಜಿಲ್ಲಾ ಬೋರ್ಡುಚುನಾವಣೆಗಳಿಲ್ಲ.

ಆಂಧ್ರಪ್ರಾಂತವು ನಿರ್ಮಾಣವಾಗಿ ಮದ್ರಾಸ್ ಮತ್ತು ಆಂಧ್ರರಾಜ್ಯಗಳು ಬೇರ್ಪಡುವವರೆಗೆ ಜಿಲ್ಲಾ ಬೋರ್ಡು ಚುನಾವಣೆಗಳು ಮುಂದುವರಿಸಬೇಕೆಂಬ ಆರ್ಥವುಳ್ಳ ತೀರ್ಮಾನವನ್ನು ತರಲಿರುವ ದಾಗಿ ಸ್ಥಾನಿಕ ಶಾಖಾ ಮಂತ್ರಿಗಳಾದ ಶ್ರೀ ಎನ್. ಶಂಕರರೆಡ್ಡಿಯವರು ಹೇಳಿದರು.

ಸೈರವರ ಉಪವಾಸ ಮುಕ್ತಾಯ

ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಅಮರಣ ಉಪವಾಸ ಕೈಗೊಂಡ ಸೈರವರು 10 ನೇ ದಿನಾಂಕ ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲಿ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದರು.

ಮಿತ ಸಂತಾನ ಅವಶ್ಯಕ

4 ನೇ ಪುಟದಿಂದ

ವೈಕ್ಷಿ ಹೊಳೆಯಬಹುದು? ಅವೆಲ್ಲ ನಿಶ್ಯಕ್ತರಾದ ಹಲವು ಮಕ್ಕಳನ್ನು ಹೆತ್ತು ಅವುಗಳಿಗೆ ಯೋಗ್ಯ ಆಹಾರ, ಬಟ್ಟೆ ಮುತ್ತು ವಿದ್ಯೆಯನ್ನೊದಗಿಸಲು ಸಾಧ್ಯವಿಲ್ಲದೆ ಕಷ್ಟದಲ್ಲಿ ನೆರಳುವಂತೆ ಮಾಡುವದು ಅನೀತಿಯಲ್ಲವೆ? ಆದ್ದರಿಂದ ಯಾವಳಿಗೆ ಶಿಶುವನ್ನು ಹೆರಲು ಬೇಕಾದ ಯೋಗ್ಯ ಆರೋಗ್ಯವಿಲ್ಲವೊ ಮತ್ತು ಯಾವ ಪಿತನಿಗೆ ಮಕ್ಕಳನ್ನು ಕಾಪಾಡಲು ಶಕ್ತಿಯಿಲ್ಲವೊ ಅಂಥವರು ಯೋಗ್ಯ ವೈದ್ಯರ ಸಲಹೆ ಪಡೆದು ಮಿತ ಸಂತಾನದ ಕ್ರಮವನ್ನು ಅನುಸರಿಸಬೇಕು. ಇದರಿಂದ ದಂಪತಿಗಳಿಗೂ, ಹುಟ್ಟಿದ ಶಿಶುವಿಗೂ ಸಮಷ್ಟಿ ರಾಷ್ಟ್ರಕ್ಕೂ ಉತ್ತಮ ಭವಿಷ್ಯವಿದೆ.

(ಪ್ರಕಾರ)

ಕಡಿಮೆ ಆಯಾಸದಿಂದ ಬಹಳ ಕೆಲಸ

ಕೆಲವು ಉಪಾಯಗಳು

ಕಡಿಮೆ ಶ್ರಮದಿಂದ ಹೆಚ್ಚು ಕೆಲಸ ಮಾಡಬೇಕೆಂದು ನಿಮಗೆ ಅಪೇಕ್ಷೆಯುಂಟೆ? ಹಾಗಾದರೆ ಈ ಕೆಳಗಿನ ಹೇಳಿಕೆಗಳು ಸತ್ಯವೋ ಅಸತ್ಯವೊ ಎಂದು ಅರಿತಿರುವದು ಅಗತ್ಯ. ಅನೇಕ ಶರೀರ ಶಾಸ್ತ್ರಜ್ಞರೂ ಮನಶ್ಶಾಸ್ತ್ರಜ್ಞರೂ ದೀರ್ಘ ಕಾಲದಿಂದ ಮಾಡಿದ ಸಂಶೋಧನೆಗಳ ಫಲವಾಗಿ ಈ ಉತ್ತರಗಳನ್ನು ಸಂಗ್ರಹಿಸಲಾಗಿದೆ.

ಅರ್ಧ ತಾಸು ಹಗಲು ನಿದ್ದೆ (ಚಿಕ್ಕನ ನಿದ್ದೆ!)ಯು ಮೂರು ತಾಸು ರಾತ್ರಿ ನಿದ್ದೆಗೆ ಸಮಾನವಾದುದು.

ನಿಜ. ಮಧ್ಯಾಹ್ನದ ಊಟದ ನಂತರ ಒಂದು "ಚಿಕ್ಕನ ನಿದ್ದೆ" ಮಾಡುವು ದೊಳಿತು. ಕೆಲ ತಜ್ಞರ ಅಭಿಪ್ರಾಯದಲ್ಲಿ ಇದು ಬೆಳಿಗಿನ ಜಾವದ ಮೂರು ತಾಸಿನ ನಿದ್ದೆಗೆ ಸಮಾನವಾದುದು. ತಮಗೆ ರಾತ್ರಿ ನಿದ್ದೆ ತೀರ ಕಡಿಮೆ ಸಾಲುವದೆಂದು ಕೊಚ್ಚಿ ಕೊಳ್ಳುವವರು ಬಹುಶಃ ಇಂಥ ಚಿಕ್ಕನ ನಿದ್ರೆ ತೆಗೆಯುವವರಿರಬಹುದು.

ನೀವು ಪಡೆದ ವಿಶ್ರಾಂತಿ ಸುಖವಾನಾಗಿರಬೇಕು. ಸುಖವಾದ ವಿಶ್ರಾಂತಿ ದೀರ್ಘವಾದ ನಿದ್ರೆಗಿಂತಲೂ ಹೆಚ್ಚು ಅವಶ್ಯ.

ನಿಜ. ಸುಖವಾದ ವಿಶ್ರಾಂತಿಯು ಕಳೆದುಹೋದ ಚೈತನ್ಯವನ್ನು ತಿರುಗಿ ದೊರಕಿಸಿಕೊಡುವುದರಲ್ಲಿ ಪೂರ್ಣ ನಿದ್ರೆಗಿಂತ ಕೆಂಚಿತ್ ಮಾತ್ರಕಡಿಮೆ ಪರಿಣಾಮಕಾರಿಯಾಗಿದೆ. ನಿಪ್ರಯಿಂದ ೧೦೦ ಕ್ಕೆ ೧೦೦ ರಷ್ಟು ಚೈತನ್ಯ ತುಂಬಿ ಬರುತ್ತಿದ್ದರೆ ಸುಖವಾದ ನಿರ್ವಿಕಾರ ವಿಶ್ರಾಂತಿಯಿಂದ ಅದು ೯೦ ರಷ್ಟು ಚೈತನ್ಯ ತುಂಬಿ ಬರುತ್ತದೆ. ನಿದ್ರಾಹೀನತೆಯ ಜಾಡ್ಯವಿದ್ದವರು ಕೆಲ ತಾಸು ಮಾತ್ರ ನಿದ್ರಿಸಿ ಉಳಿದ ರಾತ್ರಿಯಲ್ಲಿ ಸುಖದಪಶ್ರಾಂತಿ ಪಡೆದರೆ ಅವರಿಗೆ ನಿದ್ರಿಸಿದಷ್ಟೇ ಹಾನಿಯೆನಿಸಬಲ್ಲದು. ಆದರೆ ನಿದ್ರಾಹೀನರು ನಿದ್ರೆಯ ಚಿಂತೆಯಿಂದ ತಲೆಕೆಡಿಸಿಕೊಳ್ಳುತ್ತಾರೆ. ಅದರಿಂದ ನಿದ್ರೆ ಮತ್ತಷ್ಟು ಮಾಯ ಹೋಗುತ್ತದೆ.

ಚಿಕ್ಕ ಪುಟ್ಟ ತೊಂದರೆಗಳು ದೊಡ್ಡವುಗಳಿಗಿಂತಲೂ ಹೆಚ್ಚು ಕಷ್ಟದಾಯಕವಾಗಿರುತ್ತವೆ.

ನಿಜ ಯಾಕೆಂದರೆ ಹಲವು ಚಿಕ್ಕ ಪುಟ್ಟ ತೊಂದರೆಗಳ ಮೂಲವನ್ನು ಕಂಡು ಹಿಡಿದು ಅವನ್ನೆದುರಿಸುವುದು ಸುಲಭವಲ್ಲ. ಆದರೆ ಅವು ನಿಮ್ಮ ಮನಸ್ಸನ್ನು ಸಂತತವಾಗಿ ಪೀಡಿಸುತ್ತ ಪೂರ್ತಿ ಆಯಾಸಗೊಳಿಸಿಬಿಡುವವು. ದೊಡ್ಡ ದೊಡ್ಡ ಆಪತ್ತು ಗಳಾದರೆ ನಿಮಗೆ ಸ್ಪಷ್ಟವಾಗಿ ಕಾಣಿಸುವವು. ಸರ್ವಶಕ್ತಿಯನ್ನು ಉಪಯೋಗಿಸಿ ಅವನ್ನೆದುರಿಸುವ ಹುರುಪು ನಿಮಗೆ ಬರುವುದು.

ಗಡಿಬಿಡಿಯಿಂದ ಕೆಲಸ ಮಾಡುವವರೇ ಅತ್ಯಂತ ಕಾರ್ಯಕ್ಷಮರು.

ಸುಳ್ಳು ವಿಕಾರಗೊಳ್ಳದೆ ಸಮಾಧಾನವಾಗಿ ಕೆಲಸ ಮಾಡುವವರೇ ಉತ್ತಮ ಕೆಲಸಗಾರರೆಂದು ಸಿದ್ಧವಾಗಿದೆ. ಅನವಶ್ಯಕ ಗಡಿಬಿಡಿ, ಪ್ರಜ್ಞಂಡ ವೇಗ ಇವುಗಳಿಂದ ಚೇಗನೆ ಶಕ್ತಿಹ್ರಾಸವಾಗಿ ನಿಮ್ಮ ಕ್ಷಮತೆ ಕುಗ್ಗುವುದು. ಸಮಾಧಾನವಾದ ಏಕ ಪ್ರಕಾರವಾದ ಕೆಲಸದಲ್ಲಿ ವ್ಯಯವಾಗುವ ಶಕ್ತಿಯ ಪ್ರಮಾಣ ಕಡಿಮೆ.

ಕಾಲುಗಳನ್ನು ಎತ್ತರಿಸಿ ಇಟ್ಟರೆ ಅವುಗಳಿಗೆ ಚನ್ನಾಗಿ ವಿಶ್ರಾಂತಿ ಸಿಗುತ್ತದೆ.

ನಿಜ. ದಿನಕ್ಕೆ ೧೦ ಮಿನಿಟಾದರು ಕಾಲ ಪಾದಗಳಿಗೆ ಟೊಂಕದ ಪಾತಳಿಯಲ್ಲಿ ವಿಶ್ರಾಂತಿ ಕೊಟ್ಟರೆ ಹುರಪು ಬರುವುದು.

ನಿತ್ಯಬ್ಬವಾದ ಮನೋರಂಜನೆಯು ಶ್ರಮ ಪರಿಹಾರಕ್ಕೆ ಉತ್ತಮ.

ಸಂಶಯಾಸ್ಪದ. ದೀರ್ಘ ಕಾಲದ ವಿಶ್ರಾಂತಿ ಪಡೆಯುತ್ತಿರುವಾಗ ದೇಹ ಬುದ್ಧಿಗಳೆರಡಕ್ಕೂ ಕೆಲಸ ಕೊಡುವ ಮನೋರಂಜನೆಯೇ ನಿಷ್ಕ್ರಿಯ ಮನೋರಂಜನೆಗಿಂತ ಶ್ರೇಷ್ಠವೆಂದು ತಜ್ಞರ ಹೇಳಿಕೆ. ತೋಟಗಾರಿಕೆ, ಆಟ, ಚಿತ್ರಕಲೆ ಮೊದಲಾದ ಉಪಕಸಬುಗಳು ರಜಾಕಾಲದ ಉತ್ತಮ ಮನೋರಂಜನೆಗಳು.

ಸಂಜೆಯಲ್ಲಿ ಸಂಕಲ್ಪ ಮಾಡಬೇಡ.

ನಿಜ. ಬೆಳಗಾವ ಮೇಲೆಯೆ ಸಂಕಲ್ಪಗಳನ್ನು ಮಾಡುವುದು ಹಿತ. ಸಂಜೆಯಲ್ಲ ಆಯಾಸದಿಂದ ಮನಸ್ಸು ವಿಕೃತವಾಗಿರುತ್ತದೆ. ಸಂಜೆಯ ಸಂಕಲ್ಪವು ಬೆಳಿಗಿನ ಹುರುಪಿನ ಹೊತ್ತಿನಲ್ಲಿ ಬದಲಾಗುವ ಸಂಭವವಿದೆ.

ದುಂದುಗಾರಿಕೆಯಿಂದ ದಣಿವಾಗುತ್ತದೆ.

ನಿಜ ನಿಮ್ಮ ಜೇಬಿನ ಶಕ್ತಿಗೆ ಮೀರಿದ್ದನ್ನು ಕೊಂಡುಕೊಂಡಾಗೆಲ್ಲ ಶ್ರಮವು ಬೆಂಬತ್ತಿ ಬರುವುದು. ಆನಿರ್ಧಾರ, ಸಂತಯಗಳಿಂದ ಮನಸ್ಸು ದೇಹಗಳೆರಡೂ ತೀವ್ರ ದೈಹಿಕ ಶ್ರಮದಿಂದಾದಷ್ಟೇ ದಣಿಯುವುವು.

ಬೇಗನೆ ಮಲಗಿ ಬೇಗನೆ ಏಳಿರಿ.

ಇದು ಸದಾಕಾಲ ಸರ್ವರಿಗೂ ಹೊಂದಿಕೆ ಯಾಗುವದಿಲ್ಲ. ಕೆಲವರ ಕಾರ್ಯಕ್ಷಮತೆ ಬೆಳಗ್ಗೆ ಪರಮಾವಧಿಯನ್ನು ಮುಟ್ಟುತ್ತದೆ. ಅವರು ರಾತ್ರಿಯ ಪೂರ್ವಭಾಗದಲ್ಲಿ ಚನ್ನಾಗಿ ನಿದ್ರಿಸುತ್ತಾರೆ. ಮತ್ತೆ ಕೆಲವರ ಕಾರ್ಯಕ್ಷಮತೆ ಅಪರಾಹ್ನದಲ್ಲಿ ಗಾಢನಿದ್ರೆ. ಅಂಥವರಿಗೆ ತಡವಾಗಿ ಮಲಗಿ ತಡವಾಗಿ ಏಳುವುದೇ ಹಿತ.

ನಿಲ್ಲುವುದರಿಂದಾಗುವಷ್ಟು ಶ್ರಮ ನಡೆಯುವುದರಿಂದಾಗುವುದಿಲ್ಲ.

ನಿಜ. ನಡೆಯುವಾಗ ಒಂದೊಂದು ಕಾಲಿಗೆ ಅರ್ಧಾರ್ಧ ಹೊತ್ತು ವಿಶ್ರಾಂತಿಯಿರುತ್ತದೆ. ನಿಂತಾಗ ಎರಡೂ ಕಾಲುಗಳ ಮೇಲೆ ಒಂದೇ ಸವನೆ ಭಾರಬೀಳುತ್ತಿರುತ್ತದೆ. ಸಾಲು ಹಿಡಿದು ಕಾಯುವಾಗಂತೂ ಮಾನಸಿಕ ತಾಪವೂ ಸೇರಿ ಇನ್ನಷ್ಟು ತ್ರಾಸವಾಗುತದೆ.

ಕಷ್ಟತರ ಕಾರ್ಯಗಳನ್ನು ಮೊದಲು ಮಾಡು.

ನಿಜ. ಕಷ್ಟ ಕಾರ್ಯಗಳನ್ನು ನೇರವಾಗಿ ಎದುರಿಸು. ಕಷ್ಟಕಾರ್ಯವೆಂದು ತಪ್ಪಿಸುತ್ತ ಹೋಗಿ ಸುಲಭರಲ್ಲೇ ಮಾನಸಿಕ ಶ್ರಮ ಸಾಕಷ್ಟಾಗುವುದು. "ಅಯ್ಯೋ ಮಾಡಬೇಕಲ್ಲ" ಎಂಬ ವ್ಯಥೆಯೊಂದು, ಮಾಡುವ ಕಷ್ಟವೊಂದು ಕಷ್ಟಕಾರ್ಯವನ್ನೇ ಮೊದಲು ಮಾಡಿದರೆ ಉಳಿದವುಗಳು ಮತ್ತೆ ಲೀಲಾಜಾಲವಾಗಿ ಕಾಣುತ್ತವೆ.

---

೧೭೫ ತೊಲೆ ಬಂಗಾರ ಜಪ್ತಿ
ಇಬ್ಬರು ಗೋವಾನಿಗಳ ಬಂಧನ

ಬೊಂಬಾಯಿ ರಾಜಧಾನಿಯಲ್ಲಿ ಸಂಶಯಾತ್ಮಕವಾಗಿ ಓಡಾಡುತ್ತಿದ್ದ ೪ ಜನ ಗೋವೆಯವರನ್ನು ಬಂಧಿಸಿ ಶೋಧಿಸಲಾಗಿ ಅವರ ಚಡ್ಡಿ ಮತ್ತು ಬೂಟುಗಳಲ್ಲಿ 13 ಸಾವಿರ ರೂಪಾಯಿಗಳ 17೫ ತೊಲ ಬಂಗಾರವು ದೊರಕಿತು. ಆದ್ದರಿಂದ ಬಂಗಾರವನ್ನು ವಶಪಡಿಸಿಕೊಂಡು ಅವರನ್ನು ಬಂಧಿಸಲಾಗಿದೆ.

ಭಾರತದ ಸಂಗೀತ ತಜ್ಞರು

ಜೆಲ್ಲಿಯ ರಾಷ್ಟ್ರಪತಿ ಭವನವಲ್ಲಿ 15 ನೆಯ ತಾ ಅಧ್ಯಕ್ಷರಾದ ಡಾ|| ರಾಜೇಂದ್ರ ಪ್ರಸಾದರು ಈ ಕೆಳಗಿನ ಸಂಗೀತಜ್ಞರನ್ನು ಈ ವರ್ಷದ ಶ್ರೇಷ್ಠರೆಂದು ಮಾನ್ಯವಾಡಿ ನಿಧಿ ಶಾಲು ಮತ್ತು ಪ್ರಶಸ್ತಿ ಪತ್ರಗಳನ್ನು ಪ್ರದಾನ ಮಾಡಿ ಗೌರವಿಸಿದರು.

ವಿದ್ಯಾಶಾಖೆಯಮಂತ್ರಿ ಮೌಲಾನಾ ಅಬ್ದುಲ್ ಕಲಾಂ ಆಜಾದ್ ರವರು ತಮ್ಮ ಮನೆಯಲ್ಲಿ ಸಂಗೀತಜ್ಞರಿಗಾಗಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು.

1) ಶ್ರೀಮತಿ ಕೇಸರೀಬಾಯಿ ಕೇರ್ಕರ್ (ಹಿಂದೂಸ್ಥಾನೀ ಹಾಡಿಕೆ)
2) ಉಸ್ತಾದ್ ಹಾಫಿಜ್ ಅಲಿಖಾನ್ (ಹಿಂದೂಸ್ಥಾನೀ ವಾದ್ಯ)
3) ಚೆಮ್ಮನ್‌ಗುಡಿ ಶ್ರೀನಿವಾಸಯ್ಯರ್ (ಕರ್ನಾಟಕ ಸಂಗೀತ ಹಾಡಿಕೆ)
4) ಶ್ರೀ ದ್ವಾರಂ ವೆಂಕಟಸ್ವಾಮಿನಾಯ್ಡು (ಕರ್ನಾಟಕ ಸಂಗೀತ ವಾದ್ಯ)

ಸನದುಗಳನ್ನು ಹೊಂದಿದ ಮೇಲೆ ಸಂಗೀತಜ್ಞರ ಸಂಗೀತ ಪ್ರದರ್ಶನವಾಯಿತು.

ಶ್ರೀ ವೆಂಕಟಸ್ವಾಮಿನಾಯಿಡುರವರು ಸಾರಮತಿ ರಾಗದಲ್ಲಿ 'ಮೋಕ್ಷಮುಗಲದ' ಎಂಬ ಮತ್ತು ನವರಸ ಕನ್ನಡ ರಾಗದಲ್ಲಿ 'ನಿನುವಿನ' ಎಂಬ ಎರಡು ತ್ಯಾಗರಾಜ ಕೀರ್ತನೆಗಳನ್ನು ಪಿಟೀಲ್ ಮೇಲೆ ಸುಶ್ರಾವ್ಯವಾಗಿ ನುಡಿಸಿದರು.

ಶ್ರೀ ಚೆಮ್ಮನ್‌ಗುಡಿ ಶ್ರೀನಿವಾಸಯ್ಯರು ೩ ಸಂಸ್ಕೃತ ಕೀರ್ತನೆಗಳನ್ನು ಚಿತ್ತರಂಜನಿ ರಾಗ, ಸಣ್ಮುಖಪ್ರಿಯ ರಾಗ, ನಾದನಾಮ ಕ್ರಿಯೆಗಳಲ್ಲಿ ಹಾಡಿದರು.

ಉಸ್ತಾದ ಹಫೀಜ್ ಅಲಿಖಾನ್‌ರು ಅಲಹಗಾಫ ಇವೆರಡನ್ನು ವೇಗವಾಗಿ ಸಿಧ ನವಾಗಿ ತಮ್ಮ ವಾದ್ಯದ ಮೇಲೆ ನುಡಿಸಿದರು.

ಶ್ರೀಮತಿ ಕೇಸರಬಾಯಿಯವರು ಪಲಾಸ್ ರಾಗದಲ್ಲಿ "ಜ್ಯಾಬ್" ಎಂದು ತೋರಿಸಿದರು. ಅವರ ಹಾಡಿಕೆಯಲ್ಲಿ ಕೂಟ ಧಾಣಗಳು ವ್ಯಕ್ತವಾದವು.

ಜೆಲ್ಲಿಯಿಂದ ಬಂದ ಒಂದು ಅನಧಿಕೃತ ಸುದ್ದಿಗನುಸಾರವಾಗಿ ನೆಲ್ಲೂರಿನ ಸಮೀಪದಲ್ಲಿ ಆಂಧ್ರದ ರಾಜಧಾನಿ ನಿರ್ಮಾಣವಾಗುವದಂತೆ.

೩. ಮಧ್ಯಮ ಯುಗದಲ್ಲಿ ಪ್ರಜಾಭಿಪ್ರಾಯ

ಇನ್ನು ಮಧ್ಯಮ ಯುಗದಲ್ಲಿ ಖಾಸಾಸ್ವತ್ತಿನ ಪರಿಸ್ಥಿತಿ ಬೇಗಿತ್ತೆಂಬುದನ್ನು ನೋಡುವ. ಸಣ್ಣ ಸಣ್ಣ ಗುಂಪಿನ, ಮತ್ತು ವ್ಯವಸಾಯವೇ ಪ್ರಧಾನ ಕಸಬಾಗಿಟ್ಟುಕೊಂಡಿದ್ದ ಜನ ಭಿನ್ನ ಮನೋಭಾವದಿಂದ ಹರಡಿ ಹಂಚಲ್ಪಟ್ಟಿದ್ದರೂ ಅನಿಷ್ಕಾರ ಮತ್ತು ಅಲೌಕಿಕತ್ವದಿಂದ ವ್ಯಾಪ್ತಿಗೊಂಡ ಒಂದು ಧಾರ್ಮಿಕ ಅನುಕರಣೀಯತೆ ಮತ್ತು ಸಂಸ್ಕೃತಿ ಅವರೆಲ್ಲರೂ ಒಂದೋ ಎನ್ನುವಂತೆ ತೋರುತ್ತಿತ್ತು. ಈ ಧಾರ್ಮಿಕ ದೃಷ್ಟಿಯನ್ನು ಕಮ ಜನ್ಮಾವ ವಿಧದಲ್ಲೂ ಅಂದಿನ ಯೂರೋಪು ತನ್ನ ಒಗ್ಗಟ್ಟನ್ನು ತೋರಲಿಲ್ಲ. ಅಂದಿನ ಐರೋಪ್ಯ ಜನ ಒಟ್ಟಾಗಿ ಒಂದು ಜನಾಂಗವಾಗಿ ನಿಂತಿದ್ದು ಎರಡು ಸಂದರ್ಭದಲ್ಲಿಮಾತ್ರ ರೋಮ್ ಸಾಮ್ರಾಜ್ಯದ ಅಡಿಪಾಯದಲ್ಲಿ ಮತ್ತು ರೋಮನ್ ಕ್ಯಾಥೋಲಿಕ್ ಧರ್ಮದ ಆಶ್ರಯದಲ್ಲಿ.

ಧರ್ಮಾಧಿಕಾರಿಗಳೆನಿಸಿದವರ ಅಧಿಕಾರಕ್ಕೆ ಎಲ್ಲಾ ಸರ್ಕಾರಗಳೂ ಶರಣು. ಜನಾಭಿಪ್ರಾಯ ಎನ್ನುವುದೇ ಇಲ್ಲ. ಇದ್ದರೂ ಅವನ್ನು ಕೇಳುವವರಾರು? ರಾಷ್ಟ್ರಾಧಿಕಾರಯಾರಲ್ಲಿ ಹ್ತೋ ಅವರ ಬೇಳಿಕೆಯಂತೆ, ಇಂಗಿತವಂತೆ, ನಡೆಯುತ್ತಿತ್ತು. ಜನ. ಜನತೆಯ ಜ್ಞಾನವಟ್ಟವೂ ಒಂದು ಕಡಿಮೆ ಶಕ್ತಿ ಪ್ರಭಾವಯುಕ್ತವಾಗಿದ್ದನ್ನು ಮತ್ತು ವೈಭವಯುತವಾಗಿದ್ದನ್ನು ಪೂಜಿಸುವ ಸ್ವಭಾವ ಜನತೆಯದಾಗಿತ್ತು. ಶಕ್ತಿ ಮತ್ತು ವೈಭವ ಇವು ಅನಿರ್ವಚನೀಯ ಮತ್ತು ಅಮಾನುಷ್ಯ ವೈಭವಶಕ್ತಿ ಎನ್ನುವ ಭಾವನೆ ಜನರಲ್ಲಿ ಮೂಡಿತ್ತು. ಈ ಅಂಧ್ರ ಶ್ರದ್ಧೆಗೆ ಸಂಪ್ರಾದಾಯವೂ ಸರವಾಯಿತು. ವಿಜಾರ ವಿನಿಮಯ ಮಾಡಲು ಸ್ವಾಸಂಸ್ಕೃತಿರಲಿಲ್ಲ, ಪ್ರೋತ್ಸಾಹವಿರಲಿಲ್ಲ, "ಅಧಿಕಾರಸ್ಥಾನದಿಂದ ಏನು ಒರಲಿ ಅವನ್ನೆಂಗೀಕರಿಸುವೆನು, ಅನುಕ್ಕೆ ಬೆಲೆ ಕೊಡುವುದು, ಏನೇ ತಪ್ಪುಗಳಿರಲಿ ಅವುಗಳನ್ನು ಗಮನಿಸದಿರುವುದು, ಇಷ್ಟೇ ಜನತೆಗಿದ್ದದ್ದು. ಇದಕ್ಕೆ ಹೆಚ್ಚಾಗಿ ಜನ ಏನನ್ನೂ ಆಶಿಯಿಸುವುದು. ಸರಿಯಾದ ಹಾದಿ ಯಾವುದೆಂಬುದನ್ನು ಅರಿಯಲು ಶಕ್ತಿಕೂಡಾ ಇಲ್ಲ ಜನಕ್ಕೆ. ಧರ್ಮವು ಮುಸ್ರಿ ಬಿದ್ದಿದ್ದರೆ ಸಾಕು, ಮುಗ್ಧತೆಯಿಂದ ಅದಕ್ಕೆ ಶರಣು ಹೋಗಿಯುವುದು. ಇಂತಿತ್ತು ಜನಾಭಿಪ್ರಾಯ ಮಧ್ಯಮಯುಗದಲ್ಲಿ, ಎಂದು ಲಾರ್ಡ್ ಬ್ರೈಸ್ ಪ್ರತಿವಾದಿಸಿದ್ದಾನೆ.

ಕ್ರಿ.ಶ. ೧೫ನೇ ಶತಮಾನದಿಂದ ಪರಿಸ್ಥಿತಿ ಬದಲಾಯಿಸಲಾರಂಭವಾಯಿತು. ಅಚ್ಚು ಕೂಟ ಅಭಿಪ್ರಾಯ ಪ್ರಸಾರಕ್ಕೂ ತಳವಿನ ಬೆಳವಿಗೂ ಸಹಾಯವಾಯಿತು. ಧರ್ಮಸುಧಾರಣೆಯ ಜಳುಪಳಿ ಪ್ರಜೋಹಿತವರ್ಗದ ಅಧಿಕಾರವನ್ನು ಪ್ರತಿಭಟಿಸಿತು. ವ್ಯಕ್ತಿಗೆ ಪ್ರಾಮುಖ್ಯತೆ ಕೊಟ್ಟಿತು. ಮುಂದೆ ಬೆಳಗಿನ ವಿಜ್ಞಾನ ಅಧಿಕಾರವಾದದ ವ್ಯಾಪ್ತಿಗೆ ಬಲವಾದ ಪೆಟ್ಟು ಕೊಟ್ಟಿತು. ಟೆಲಿಫೋನ್, ಟೆಲಿಗ್ರಾಫ್, ಮುಂತಾದ ವಿಜ್ಞಾನ ಸಿದ್ಧ ವಾರ್ತಾವಾಹಿನಿಗಳು ಸಮಾಜದಲ್ಲಿದ್ದ ಅಂತರವನ್ನು ಕಡಿಮೆ ಮಾಡಿವೆ. ಸಂಚಾರ ಸೌಕರ್ಯಗಳು ಸಿಪುಲಗೊಂಡುದರಿಂದ ಜನತೆಯ ಜೀವನದಲ್ಲಿ ಪರಿಣಾಮಕಾರಕ ಬದಲಾವಣೆಗಳೇರ್ಪಟ್ಟವು. ಕೈಗಾರಿಕಾಕ್ರಾಂತಿಯ ಪರಿಣಾಮವಾಗಿ ದೊಡ್ಡ ದೊಡ್ಡ ಕೈಗಾರಿಕಾ ಕೇಂದ್ರಗಳೂ ಅವುಗಳ ಸಮೀಪದಲ್ಲಿ ಪಟ್ಟಣಗಳೂ ಹುಟ್ಟಿಕೊಂಡವು. ಇವುಗಳ ಫಲವಾಗಿ ಜನಾಭಿಪ್ರಾಯ ಚೈತನ್ಯಗೊಂಡಿತು. ಹರಟೆ, ಊಟ, ಜರ್ಜೆ, ಭಾಷಣ, ಪ್ರಸಾರಪತ್ರ, ಇವುಗಳಿಂದ ಜನಾಭಿಪ್ರಾಯ ಪ್ರಸಾರವಾಗುತ್ತ ಬಂತು. ಜನತೆ ಶ್ರೀಮಂತ ಪಾಳೆಯಗಾರರ ಹಿಡಿತದಿಂದ ಬಿಡಿಸಿಕೊಂಡಿತು; ವ್ಯಕ್ತಿತ್ವಕ್ಕೆ ಬೆಲೆ ಬಂತು. ಮಾನವನ ರಾಜಕೀಯ ಸ್ವಾತಂತ್ರ್ಯ ಪ್ರತಿಪಾದನೆ ಮೊದಲಾಯಿತು. ಇಂಗ್ಲೆಂಡಿನಲ್ಲಿ ಕಂಡುಬಂದ ಚಾರ್ಟಿಸ್ಟರ ಚಳುವಳಿ ಇದಕ್ಕೆ ಒಂದು ನಿದರ್ಶನ.

ಕೈಗಾರಿಕೆಯ ಕ್ರಾಂತಿಯಿಂದ ಉದ್ಭವಿಸಿದ ಸಮಸ್ಯೆಗಳು ಭೀಕರವಾಗುತ್ತಾ ಬಂದವು. ಬಡವರಾಗಾರರ ಮುಷ್ಕಿಯಲ್ಲಿ ಸಿಲುಕಿ ನರಳುತ್ತಿದ್ದ ಕೂಲಿಗಾರರು ತಮ್ಮ ಹಕ್ಕುಬಾಧ್ಯತೆಯನ್ನು ಕಾಪಾಡಲು ತಾವು ದುಡಿಯುತ್ತಿದ್ದ ಕೈಗಾರಿಕೆಯ ಕ್ಷೇತ್ರಗಳಲ್ಲಿ ಕಲೆಯಲು ಆರಂಭಿಸಿದರು. ತತ್ಪರಿಣಾಮವಾಗಿ ಟ್ರೇಡ್ ಯೂನಿಯನ್ ಸಂಸ್ಥೆಗಳು ಹುಟ್ಟಿದುವು. ಜೀವನಕ್ಕೆ ಬೇಕಾದ ಸಾಮಗ್ರಿಗಳ ಬೆಲೆ ಹೆಚ್ಚುತ್ತಿದ್ದುದನ್ನು ತಪ್ಪಿಸಲು, ಮತ್ತು ದಳ್ಳಾಳಿಗಳ ಹಿಡಿತದಿಂದ ಬಿಡಿಸಲು, ಸಹಕಾರ ಪದ್ಧತಿ ತಲೆ ಎತ್ತಿತು. ಇವೆಲ್ಲದರ ಪರಿಣಾಮವಾಗಿ ಜನ ಒಂದು ಗೂಡಲು ಮತ್ತು ಸಾರ್ವಜನಿಕ ವಿಷಯಗಳನ್ನು ವಿಮರ್ಶಿಸಲು ಅವಕಾಶ ಸಿಕ್ಕಿತು.

.... ಬಳ್ಳಾರಿ ಸ್ಮಾಲ್ ಕಾಸ್ ಕೋರ್ಟಿನಲ್ಲಿ ....

S. C. 38/53.

ಜಾಯಿಂಟ್ ಫ್ಯಾಮಿಲಿ ಫರ್ಮ್ of ಹರಗಿನಡೋಣ
ಬಸವನಗೌಡು ಅಂಡ್ ಸನ್ಸ್ by ಪೆಜ್. ಸಣ್ಣ } ವಾದಿ
ಬಸವನಗೌಡು ಬಳ್ಳಾರಿ.

Vs

ಸೊಲ್ಲೇಟಿ ಸೋಮಯ್ಯ, ವೈಶ್ಯ, ವ್ಯಾಪಾರ, ಪ್ರೊಪ್ರಾಯಟರ್ } ಪ್ರತಿ
of ರಾಧಾಕೃಷ್ಣ ಆಂಡ್ ಕೊ, ಬಳ್ಳಾರಿ. } ವಾದಿ

— ಪ್ರತಿವಾದಿಗೆ ನೋಟೀಸು —

ನೀಲ್ಕಾಣಿಸಿದ ನಂಬರ್ ವಾಯ್ದೆ 7-4-1953 ಕ್ಕೆ ಹಾಜರಾಗಿದೆ. ಸದರಿ ವಾಯ್ದೆಗೆ ನೀವು ಖುದ್ದಾಗಲಿ ವಕೀಲರ ದ್ವಾರವಾಗಲಿ ಹಾಜರಾಗಿ, ತಕರಾರು ಏನಾದರೂ ಇದ್ದರೆ ಕೋರ್ಟಿನವರಿಗೆ ತಿಳಿಸಬೇಕು—ಇಲ್ಲವಾದರೆ ನಿಮ್ಮಮೇಲೆ ಮನೆಬಾಡಿಗೆಗಾಗಿ ರೂ. 432-0-0 ಗಳಿಗೆ ಎಕ್ಸಪಾರ್ಟಿಡಿಕ್ರಿ ಆಗಲಿರುವದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಯಂ. ನಿ. ಚೆಟ್ಟಿ. ಬಿ. ಎ. ಬಿ. ಎಲ್.
ವಾದಿ-ಅಡ್ವೊಕೇಟ್ ಬಳ್ಳಾರಿ

Matinee at PRABHAT

REX BEACH .... MASTER OF ADVENTURE!

Don Careless ..... torn between his love for the loveliest lady in the land, and his sworn errand of murderous revenge!

The Avengers

Starring :- John Carroll, Adele Mara, with Mona Maris

On 3rd & 4th at 3 30 p. m. Sunday the 5th at 9-30& 3-30

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :- ಶ್ರೀ ಬಿ. ನಾ. ಜೈವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ನಿರ್ಮಿಸಲ್ಪಟ್ಟಿಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
,, ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ

ಶ್ರೀ ನಾಗೇಶ ಶಾಸ್ತ್ರಿಗಳಿಗೆ ಸನ್ಮಾನ.

ಕರ್ನಾಟಕದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಬಳ್ಳಾರಿಯ ಶ್ರೀಮನ್ ವೈ. ನಾಗೇಶಶಾಸ್ತ್ರಿಗಳಿಗೆ, S. G ಹೈಸ್ಕೂಲ್ ಆವರಣದಲ್ಲಿ ಗವಿಸಿದ್ಧೇಶ್ವರ ದೇವಸ್ಥಾನದ ಧರ್ಮಕರ್ತರಿಂದ ಸಾಹಿತ್ಯಮಂಟಪದವರಿಂದ ಬಳ್ಳಾರಿ ನಾಗರಿಕರಿಂದ ಸನ್ಮಾನ ಪಾಗ 1116 ರೂ ನಿಧಿ ಸಮರ್ಪಣೆಯಾಯಿತು. ಶ್ರೀಗಳಾದ ಮಹಾಬಲೇಶ್ವರಪ್ಪ ಜೂಗಪ್ಪ ನರಸಿಂಹಶಾಸ್ತ್ರಿ ಸಂಜೀವಮೂರ್ತಿರಾವ್ ವಗೈರೆ ಅನೇಕ ಮಹಾಶಯರು ಶ್ರೀಗಳ ಗುಣಗಾನಮಾಡಿದರು ಶ್ರೀಗಳವರ ಶರ್ಮ, ನಾಗಪ್ಪ, ಅಮರನಾಥ ಶಾಸ್ತ್ರಿ, ಸಂಜೀವಮೂರ್ತಿರಾವ್, ಇವರು ತಮ್ಮಿಂದರಚಿತಪದ್ಯಗಳನ್ನೊಪ್ಪಿಸಿದರು.

ಬಳ್ಳಾರಿಯಲ್ಲಿ ಕ್ಷುಬ್ಧ ಪರಿಸ್ಥಿತಿ

ಆಂಧ್ರಪ್ರಾಂತ ನಿರ್ಮಾಣದ ಸಂಬಂಧವಾಗಿ ಬಳ್ಳಾರಿ ನಗರದಲ್ಲಿ ಕ್ಷುಬ್ಧ ಪರಿಸ್ಥಿತಿಯೇರ್ಪಟ್ಟಿದೆ. ಪ್ರಾಂತ್ಯರಾವನ್ನು ವಿರೋಧಿಸಿರುವ ಕೆಲವರೂ ಹೇಳಿಕೆಯಿಂದಾವ ನಿರಾಕರಿಯನ್ನು ಸಭೆ ಪ್ರಭಾತಭೇರಿ ಭೈಲು ನಿಲ್ಲಿಸುವಿಕೆಯಿಂದ ವ್ಯಕ್ತಪಡಿಸುತ್ತಿರುವರು. ಆಂಧ್ರರೂ ಸಹ ಸಭೆ ಪ್ರಭಾತಭೇರಿಗಳನ್ನು ಹೊರಡಿಸುತ್ತಿರುವರು-ಪೋಲೀಸರು ಜಾಗರೂಕರಾಗಿ ವರ್ತಿಸುತ್ತಲಿರುವರು.

ಕರ್ನಾಟಕ ನಾಟಕ ಕಲಾಪರಿಷತ್ತು ಹೊಸಪೇಟೆಯಲ್ಲಿ ಕೂಡಲನಾನುಕೂಲವಾಗಿರುವುದಿನ ವರ್ಷಕ್ಕೆ ಮುಂದಿನ ವರ್ಷಕ್ಕೆ ಮುಂಬರಿಸಲ್ಪಟ್ಟಿದೆಂದು ಆಧ್ಯಕ್ಷರಾದ ಶ್ರೀ ಡೊಣ್ಣನಗೌಡರು ತಿಳಿಸುತ್ತಾರೆ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 30-3-53

Sri.

Edited Printed & Published by T. B Keshava Rao, at Nava Bharath Press, Bellary.

ನವಚೈತನ್ಯ

ಸೋಮವಾರ
ಎಪ್ರಿಲ್
೬-೪-೧೯೫೩

ವರ್ಷ 16 | ಬಳ್ಳಾರಿಯು ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ 4 | ಉತ್ಕ್ರಿಷ್ಟತೆ ! ಜಾಗೃತಿ !! ಪ್ರಾಮಾಣಿಕತೆಗಾಗಿ ಬೋಧಕ !!! | ಟಿ. ಬಿ. ಕೇಶವರಾವು

ಬಳ್ಳಾರಿಯು ವಿಭಜನೆಯಿಂದ ಹಾನಿಕರ

ಕರ್ನಾಟಕಕ್ಕೆ ಅಪಾರ ಹಾನಿ

3-4-53 ನೆಯತಾ ಬಳ್ಳಾರಿ ವಿಧಾನ ಪರಿಷತ್ ಚುನಾವಣೆಯು ಕರ್ನಾಟಕದ ಎಲ್ಲಾ ಕಡೆಗಳಲ್ಲೂ ಅವಿರೋಧವಾಗಿ ಬಳ್ಳಾರಿಯು ಪೂರ್ಣ ಕನ್ನಡ ಜಿಲ್ಲೆಯಿಲ್ಲವು ಆಂಧ್ರಕ್ಕೆ ವಿಭಜಿಸುವುದು ಭಾಷಾವಾರು ಪ್ರಾಂತ್ಯ ಕರ್ನಾಟಕಕ್ಕೆ ಅಪಾರ ಹಾನಿಯೆಂತಲೂ ಸಾರಲಾಯಿತು. ತೀರ್ಮಾನಗಳು ಭಾಷಣದ ಅಧ್ಯಕ್ಷರಿಗೂ- ನಿಹರೂರವರಿಗೂ ಕಳಿಸಲಾದವು.

ಬಳ್ಳಾರಿ ನಗರದ ಸಾಂಬಮೂರ್ತಿ ಮೈದಾನದಲ್ಲಿ ಶ್ರೀ. ಪೈ ಮಹಾಬಲೇಶ್ವರಪ್ಪ ನವರ ಅಧ್ಯಕ್ಷತೆಯಲ್ಲಿ ಪುರಜನರ ಪ್ರಜಾಂಡ ಸಭೆಯು ಸಮಾವೇಶವಾಗಿ ಶ್ರೀಗಳಾದ ಡಿ. ಗುಂಡುರಾವ್ ಬಿ. ವಿ ಸೇಷಗಿರಿರಾವ್, ವಡ್ಡಿ ವೆಂಕೋಬಣ್ಣ, ರಾಜಾ ಕೃಷ್ಣಾಬ್, ಕರೀಂಸಾಹೇಬರು, ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದಲ್ಲಿ ಉಳಿಸಬೇಕೆಂದೂ ಇಡೀ ಜಿಲ್ಲೆಯನ್ನು ಮೈಸೂರಿಗೆ ಸೇರಿಸ ಬೇಕೆಂದೂ ಹೇಳಿದರು.

ಕರ್ನಾಟಕ ಪ್ರಾಯಾಸಮಿತಿಯು ಒಂದೆಡೆಯಿಂದ ಹರತಾಳ ವನ್ನಾಚರಿಸಲು ಪ್ರಯತ್ನಿಸಿದ ನಂತರ ಆಂಧ್ರ ಸಮಿತಿಯು ಹರತಾಳವು ಪೂರ್ಣ ಯಶಸ್ವಿಯಾಗದಂತೆ ವಿರೋಧ ಪ್ರಚಾರವನ್ನು ನಡೆಸಿತು.

ಬಳ್ಳಾರಿ ಜಿಲ್ಲೆಯು ವಿಭಜನೆಯಿಂದ ಬಳ್ಳಾರಿ ನಗರವನ್ನು ಆಂಧ್ರಕ್ಕೆ ಸೇರಿಸಬೇಕೆಂಬ ಒತ್ತಾಯಿಸಿಂದ ಕನ್ನಡಿಗರಲ್ಲಿ ಕ್ಷುಬ್ಧತೆ ಉತ್ಪನ್ನವಾಗಿ..... "ಬಳ್ಳಾರಿ ನಗರವು ಹಾಳಾಗಿ ಬೇಕೆಂಬುದು ಮುಖ್ಯಮಂತ್ರಿಯಿದ್ದರೆಷ್ಟೆ ಅನ್ನಬಿಟ್ಟರಾಗಿ ಎಂದಿಂದ ಜೀವಿಸಲು ಆಶಿಸುತ್ತಿದ್ದಾರೆ ಮೈಸೂರಿಗೆ ಸೇರಿರಿ" ಎಂದು ಆಂಧ್ರರು ಬೆದರಿಸುತ್ತಲಿದ್ದಾರೆ.

ಅಂತು ನೆಹರೂರವರ ಹೇಳಿಕೆಯಿಂದ ಎಲ್ಲವೂ ಗೊಂದಲಮಯ ಪರಿಸ್ಥಿತಿಗೆ ಒಂಬಿದೆ.

ರೈಲು ಮಾರ್ಗಕ್ಕೆ ಧಕ್ಕೆ

ಬಳ್ಳಾರಿ - ಗುಂತಕಲ್ ಮಾರ್ಗದಲ್ಲಿ ವೀರಾಪುರದ ಬಳಿ ಬಳ್ಳಾರಿರಾಯದುರ್ಗ ಮಾರ್ಗವನ್ನಲ್ಲಿ ಸೋಮಾಪುರದ ಬಳಿ ರೈಲು ಮಾರ್ಗಕ್ಕೆ ಹಾನಿಯುಂಟು ಮಾಡಿದ್ದರೆಂದೂ ಈಗ ರಿಪೇರಿಯಾಗಿರುವದೆಂದು ತಿಳಿದು ಬಂದಿದೆ. 4 ನೆಯ ತಾ. ಸಾಯಂಕಾಲದ ಗಾಡಿಗಳು ಈ ಕಾರಣದಿಂದ ತಡವಾಗಿ ಹೊರಟವು.

ಬಳ್ಳಾರಿ ವಿಭಜನೆಯು ಬೇಡ

ಬಳ್ಳಾರಿ ಜಿಲ್ಲೆಯ ಅನೇಕ ಮಾನ್ಯ ವ್ಯಕ್ತಿಗಳು ದೆಲ್ಲಿಗೆ ಹೋಗಿ ಮುಖ್ಯರನ್ನು ಕಂಡು ಬಳ್ಳಾರಿ ಜಿಲ್ಲೆಯನ್ನು ತುಂಡು ಮಾಡದಂತೆ ಇಡಿಯಾಗಿಡಲು ಆಂಕಿ-ಸಂಖ್ಯೆಗಳಿಂದ ಕೇಳುವವರಿದ್ದಾರೆ.

.... ಆಂಧ್ರ ಶಿಷ್ಟ ಮಂಡಲ ....

ಶ್ರೀ Y S. ಕನುಮಂತಾಯರ ಅಧ್ಯಕ್ಷತೆಯಲ್ಲಿ ಹೆಲ್ಲಿಗೆ ತೆರಳಿದ ಶಿಷ್ಟಮಂಡಳವು ಒಂದು ತಿಂಗಳಾಯಿತು. ಹಿಂದಿರುಗಿಲ್ಲ. ಇಡೀ ಬಳ್ಳಾರಿಜಿಲ್ಲೆಯನ್ನು ಸಾಷ್ಟಾಂಗವಾಗಿ ಬಳ್ಳಾರಿಯನ್ನು ಆಂಧ್ರದಲ್ಲಿ ಸೇರಿಸಬೇಕೆಂಬುದೇ ಇವರ ಆಸೆ.

ಭಾಷಾವಾರು ಪ್ರಾಂತ ವಿಭಜನೆಯು ಭಾತುಳವಾದದು

ಮದ್ರಾಸ್ ಹೈಕೋರ್ಟು ಜಡ್ಜರಾದ ಇ ಮ್ಯಾಕ್‌ರವರು "ಈಗಿನ ಪರಿಸ್ಥಿತಿಯಲ್ಲಿ ಭಾಷಾವಾರು ಪ್ರಾಂತ ವಿಭಜನೆಯಿಂದ ಆಡಳಿತದ ಕಷ್ಟಗಳು ಇನ್ನುಮ್ಮಡಿಯಾಗಿ ಅನೇಕ ಪೊಂವರೆಗಳುಪ್ಪವಿಸುತ್ತವೆ. ಹೀಗಾದದ್ದು ನಾಡಿನ ದುರ್ದೈವ" ಎಂದರು.

Public Notice under Section 45 of the Indian Partner-ship Act.

It is hereby notified to all concerned that the under-signed Lalchand severed his connection with the Partner-ship firm of Marwadi Gangabaksh Rambilas in Cowl-Bazaar, with effect from 12-5-1949 and ceased to be one of its partners from that date.

Lalchand Hire'al Udayachand

ಸಾರ್ವಜನಿಕ-ಪ್ರಕಟನೆ

(ಇಂಡಿಯನ್ ಪಾರ್ಟನರ್ ಶಿಪ್ ಆಕ್ಟ್ ಸೆಕ್ಷನ್ 45 ರ ಪ್ರಕಾರವಾಗಿ)

ಈ ಕೆಳಗೆ ದಸ್ಕತ್ತು ಮಾಡಿದ ಲಾಲ್‌ಚಂದ್ ಹೀರಾಚಂದ್ ಎಂಬುವರು ಬಳ್ಳಾರಿ ಕೌಲು ಬಜಾರದ ಗಂಗಾಬಕ್ಷ್ ರಾಮ್ ಬಿಲಾಸ್ ಎಂಬ ಸಂಸ್ಥೆಯಿಂದ 12-5-1949 ರಿಂದ ತಮ್ಮ ಪಾಲನ್ನು ಹಿಂತೆಗೆದುಕೊಂಡು ಸದರಿ ತಾರೀಖಿನಿಂದ ಭಾಗಸ್ಥರಾಗಿರುವುದು ತಟಸ್ಥವಾಗಿದೆಯೆಂದು ಈ ಮೂಲಕ ಸಂಬಂಧಿಸಿದವರೆಗೆಲ್ಲ ತಿಳಿಸಲಾಗಿದೆ.

ಲಾಲಚಂದ್ ಹಿರೇಲಾಲ ಉದಯಚಂದ್

ಧನ್ಯನಟೋಗ್ರಣಿಯ ಕಣ್ಮರೆ

21-3-53 ಮಡಕೆರೆಯಲ್ಲಿ 'ಬ್ಲಾಕ್ ಮಾರ್ಕೆಟ್' ನಾಟಕವನ್ನು ಅಭಿನಯಿಸುತ್ತ ಕೊನೆಯ ದೃಶ್ಯದಲ್ಲಿ ಆಕಸ್ಮಿಕ ಹೃದಯ ಕ್ರಿಯೆನಿಂತು ಶ್ರೀ ಕೆ. ಹಿರಿಯಣ್ಣಯ್ಯನವರು ನಿಧನ ಹೊಂದಿದರೆಂಬ ವಾರ್ತೆಯನ್ನು ನಾಡಿನ ನಾಟ್ಯ ಗೋಪುರದ ಮೇಲೆ ಸಿಡಿಲೆರಗಿದಂತಾಗಿದೆ.

ಸುಖವೆಂಬು ತಣಿಯಲಿಲ್ಲ. ಸನ್ಮಾನ ಹೊಂದಿ ಮೆರೆಯಲಿಲ್ಲ. ಬಾಳಿನುದ್ದಕ್ಕೂ ಎದುರಾದ ನಲ್ವತ್ತಿಂಟು ಶೋಕ ಮುದ್ರಾಂಕಿತ ಮೈಲು ಕಲ್ಲುಗಳನ್ನು ದಾಟಿ ಜನತೆಗೆ ಅಶೋಕ ಮುದ್ರೆಯ ಹಾಸ್ಯಲಹರಿಯನ್ನು ಬೀರಿದ ಹಿರಣ್ಣಯ್ಯನವರು ನಾಟ್ಯಪ್ರಪಂಚದ ಪಣ್ಯ ಬೀದಿಗಳು.

ಹೆಸರು ಮಾತ್ರ ಹಿರಣ್ಮಯ, ಜೀವನವೆ ಮಣ್ಣಾಯ. ಆದರೇನು ಮೃಣ್ಮಯ ಜೀವವನ್ನು ನಾಟ್ಯ ರಂಗಭೂಮಿಯಲ್ಲಿ ಹಿರಣ್ಮಯವಾಗಿ ಮಾಡಿ ಧನ್ಯ ವರುಷ.

ಬಾಲ್ಯವೆಂಬ ಕೂಡಿವಿಡಿದು ಚಿಗುರೊಡೆದು ಗಿಳಿಯು ಒಂದು ಸಹಜ ಹಾಸ್ಯ ಕಲಾಮೃತ ಲತೆಯಿಂದ ಸುತ್ತಿ ಇಡೀ ಕನ್ನಡನಾಡನ್ನು ನಕ್ಕು ನಲಿಸಿದ ರಸೋಪಾಸಕರು. ನಟರಂಗಿಯೂ, ನಾಟಕ ಕಾರರಾಗಿಯೂ, ಕನ್ನಡನಾಡಿನಲ್ಲಿ ಚರವಿದ್ಯಾಲಯವಾದ ನಾಟಕ ಕಂಪನಿಯ ಜಂಜಾಟವನ್ನು ಕಟ್ಟಿಕೊಂಡು ಅನೇಕ ಕಷ್ಟ ನಷ್ಟಗಳಲ್ಲಿ ಸಹಿಸಿ ನಾಡಿನ ಜನತೆಯಾ ಜಂಜಾಟಕ್ಕೂ ಪಣಿಯಿಟ್ಟ ತನ್ನ ಜಂಜಾಟದ ಗಿಂಡಿಯನ್ನೇ ಹಾಸಿ ಹೊದ್ದುಕೊಂಡು ೩೦ ವರ್ಷಗಳು ಬಿಡುವಿಲ್ಲದೆ ಸಂಚರಿಸಿ ರಂಗಭೂಮಿಯ ಸೇವೆಗಾಗಿ ಕೊನೆಯುಸಿರನ್ನು ಅರ್ಪಿಸಿ ನಟರಾಜನೆಡೆಗೆ ನಡೆದ ಹಿರಣ್ಣಯ್ಯನವರ ಸದಾಸ್ಮರಣೆ ನಾಡ್ನಾಟಕರಿಗೆ ಕೈದೀವಿಗೆಯಾಗಲಿ.

ಜೀವನಾಂತ್ಯದವರೆವಿಗೂ ತಮ್ಮ ರಸ ಹಾಸ್ಯದಿಂದ ಜನತೆಯನ್ನು ನಗಿಸಿ ನಗಿಸಿ ಅನಂದಗೊಳಿಸುತ್ತಿದ್ದ ಕಣ್ಣುಗಳನ್ನು ಇಂದು ಕಣ್ಣೀರಾದ್ದರಿಂದ ನಗವಿಲ್ಲದ ಅರಳಿದ ಕಣ್ಣುಗಳು ದುಃಖದಿಂದ ಮುಚ್ಚಾಗಿವೆ.

ವಿಷ್ಣುನಾಟ್ಯಕ್ಕ ರಂಗಭೂಮಿಯ ತೆರೆಮರೆಯಾದ ಹಿರಣ್ಣಯ್ಯನವರ ಹಾಸ್ಯರಸ ಪಾತ್ರವನ್ನು ನಾವಿನ್ನು ನೋಡಿ ನಲಿಯಲಾರೆವು. ಆದರೆ ಅವರ ನಾಟ್ಯಜೀವನದ ವಿಶೇಷಗಳು ನೆನಪಿನ ನಾಟ್ಯರಂಗಭೂಮಿಯಲ್ಲಿಗೂಡಿದಾಗ ನಗದೇ ಇರಲಾರೆವು. ನಮ್ಮನ್ನಗಲಿದ ನಟರಾಜನ ಸ್ಥಿತಿಯಲ್ಲಿ ಸೇರಿದ ಪರಿಯಣ್ಣಯ್ಯನವರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ನಾವೆಲ್ಲರು ಪ್ರಾರ್ಥಿಸುವುದಕ್ಕಿಂತಲು ಹೆಚ್ಚಾಗಿ ನಾವು ಮಾಡಬಹುದಾದ ಸತ್ಕಾರ್ಯಗಳಿಂದ ಶಾಂತಿಯನ್ನು ಕೋರುವ.

ಕೆ. ದೊಡ್ಡನಗೌಡ

ವಧುಗಳ ಶಾಲೆ

ಈಸ್ಟ್ ಸೆಕ್ಷನ್‌ದಲ್ಲಿ ವಧುಗಳು ಮತ್ತು ಶಾಲೆಗೆ ಹೊಗುವಂತಾಗಿದೆ. ಸಂಸಾರ ವೆಚ್ಚವನ್ನು ಬಾಯಿಗೂಡಿಸುವ ರೀತಿ, ಅಡಿಗೆ ಮಾಡುವದು ಇತ್ಯಾದಿಗಳ ಬಗ್ಗೆ ಈ ಶಾಲೆಯಲ್ಲಿ ಶಿಕ್ಷಣ ದೊರೆಯುವದು. ಗೃಹ ಕೃತ್ಯಗಳಲ್ಲಿ ತಜ್ಞರಾದವರಿಂದ ಶಿಕ್ಷಣವೀಯಲ್ಪಡುತ್ತದೆ. ಅಂಗಡಿಯಿಂದ ಸಾಮಾನುಸುಗಳನ್ನು ಕೊಳ್ಳುವ ರೀತಿಯನ್ನು ಕೂಡ ಅಂಗಡಿಕಾರರ ಮುಖಾಂತರ ತಿಳಿಸಲಾಗುವದು. ಈ ಸ್ಕಾಲರ್‌ಶಿಪ್‌ಗಾಗಿ ಅತಿಥಿಗಳು ಒಂದಾಗಿ ಭಕ್ಷ್ಯಗಳನ್ನು ತಯಾರಿಸಿ ಅವರನ್ನು ಸಂತೋಷಪಡಿಸುವ ಕಲೆಯೂ ಕಲಿಸಲ್ಪಡುವದು. ಶಿಕ್ಷಣಕ್ಕೆ ಫೀ ಕೇವಲ ವಿದ್ಯಾರ್ಥಿಗಳ ಉದಯೋಮಾನಕ್ಕನುಗುಣವಾಗಿ ನಾಲ್ಕರಿಂದ ಏಳು ರೂಪಾಯಿ ನಾಲ್ಕಾಣೆ ಇವೆ. ೨೧ ವರ್ಷಕ್ಕೆ ಮೇಲ್ಪಟ್ಟವರಿಗೆ ಶಾಲೆಯಲ್ಲಿ ಪ್ರವೇಶ ದೊರೆಯುವದಿಲ್ಲ.

ರಾಜಾಜಿಗೆ ಸಹಾನುಭೂತಿ ದೋಷವೆ?

ಆರು ತಿಂಗಳ ಹಿಂದೆ "ಅಡಳಿತದ ಸೌಕರ್ಯಕ್ಕಾಗಿ ಆಂಧ್ರಕರ್ನಾಟಕ ಪ್ರಾಂತ್ಯ" ವೆಂದು ಧೂರಂಧರರಾಜಾಜಿ ಈಗ "ಆಂಧ್ರಕರ್ನಾಟಕ ಇದ್ದವಾದ ಅನಾಗರೀಕ" ವೆಂದು ಹೇಳುತ್ತಾರೆ! ಈ ಬದಲಾವಣೆ ಯಾರದೋಷದಿಂದಾಗಬೇಕೆಂಬುದನ್ನು ವಿಮರ್ಶಕರಿಗೆ ಬಿಟ್ಟು ನಾನು ಜಾತಿಯ ಸುರಿತ ಹೇಳುತ್ತಾ ಇಲ್ಲ ಆ ತಿಳುವಳಿಕೆ, ಪಾಂಡಿತ್ಯ, ಅನುಭವಗಳ ಸುಂಟು ಹೇಳುತ್ತೇನೆ. ಸಂಪತ್ತು ಅಧಿಕಾರ ಇವು ಗರ್ವವಾಗಬಾರದು ಬ್ರಾಹ್ಮಣರಜ್ಞಾನ, ಕ್ಷತ್ರಿಯರ ಶೌರ್ಯ ವೈಶ್ಯನ ವ್ಯವಹಾರಕೌಶಲ, ಶೂದ್ರನ ಸೇವಾ ನಿರತೆ ಈ ಗುಣಗಳನ್ನು ಸಂಪಾದಿಸಬೇಕು." ಎಂದು ಹೇಳಿದರು.

ಸರಹದ ಸಮಿತಿ ಬೇಕು

ಬೌಂಡರಿ ಕಮೀಶನ್ ಅಥವಾ ಸರಹದ್ದು ಸಮಿತಿಯು ಬಂದು — ಆದವಾನಿ, ಆಲೂರು, ರಾಯದುರ್ಗ, ಭಾಗಗಳಲ್ಲಿ ಆಂಧ್ರ-ಕನ್ನಡ ಭಾಗಗಳನ್ನು ಸರಿಯಾಗಿ ನಿರ್ಣಯಿಸಲು ಒತ್ತಾಯಪಡಿಸುವುದು ಯೋಗ್ಯವೆಂದು ಅನೇಕರ ಅಭಿಪ್ರಾಯ—

ದಕ್ಷಿಣದಲ್ಲಿ ಬಂಗಾರವೆ?

ಶ್ರೀನಿವಾಸಪುರದಲ್ಲಿ ಹರಿಜನನೊಬ್ಬ ಬಾವಿ ತೋಡುತ್ತಿದ್ದಾಗ ಕಲ್ಲುಮೊರಿಯು ತೆಂದೂ, ಆತ ಅದನ್ನು ಸಿಡಿಸಿದಾಗ ಅಲ್ಲಿ ಚಿನ್ನವು ಅಪಾರ ಇದೆಯೆಂದು ವದಂತಿಯಾಗಿ, ಕಲೆಕ್ಟರರು ಪರೀಕ್ಷೆಗಾಗಿ ಅಲ್ಲಿ ಚಿನ್ನ ಸಿಗುವದೆಂದೂ ತರ್ಕಿಸಲಾಗಿದೆ. ಹೆಚ್ಚಿನ ಪರಿಶೀಲನೆ ನಡೆಯುತ್ತಿದೆ.

ಶಾಂತಿ ಚಳವಳಿಯ ಹೆಸರಿನಲ್ಲಿ ಕಮ್ಯೂನಿಸಮ್ಮಿನ ಪ್ರಚಾರ

ಶಾಂತಿ ಚಳವಳಿಯೆಂಬ ಮನೋಹರವಾದ ಶಬ್ದದ ರಕ್ಷಣೆಯಲ್ಲಿ ಕಮ್ಯೂನಿಸ್ಟರು ತಮ್ಮ ವರ್ಚಸ್ಸನ್ನು ಚೆಲ್ಲಿಕೊಳ್ಳಲು ನೋಡುತ್ತಾರೆ ಶಾಂತಿಪರಿಷತ್ತು ಹೆಸರಿಗೆ ಮಾತ್ರ" ಎಂದು ಕೇಂದ್ರ ಸರಕಾರದ ಗೃಹಖಾತೆಯ ಉಪಮಂತ್ರಿ ಶ್ರೀ ದಾತಾರರು ಹೇಳಿದರು ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ರೇಣುಚಕ್ರವರ್ತಿಯವರು "ಈ ಸಮಸ್ಯೆಗಳು ನಮಗೆ ಕಮ್ಯೂನಿಸ್ಟ್ ಪಕ್ಷ ಇರುವುದರ ನಿಜ" ವೆಂದು ಅನುಮತಿಸಿದ್ದಾರೆ.!

ಬ್ರಾಹ್ಮಣರನ್ನು ಅನುಕರಿಸಿರಿ!

ಭಾರತ ಅಧ್ಯಕ್ಷರಾದ ಡಾಕ್ಟರ್ ರಾಜೇಂದ್ರಪ್ರಸಾದರವರು ಪಾಟ್ನಾ ಯೂನಿವರ್ಸಿಟಿಯಲ್ಲಿ ಮಾತನಾಡುತ್ತ "ವಿದ್ಯಾರ್ಥಿಗಳು ಪ್ರಾಚೀನ ಕಾಲದ ಬ್ರಾಹ್ಮಣರನ್ನು ಅದರ್ಶವಾಗಿಟ್ಟುಕೊಳ್ಳಬೇಕು ನಾವು ಜಾತಿಯ ಸುರಿತ ಹೇಳುತ್ತಾ ಇಲ್ಲ ಆ ತಿಳುವಳಿಕೆ, ಪಾಂಡಿತ್ಯ, ಅನುಭವಗಳ ಸುಂಟು ಹೇಳುತ್ತೇನೆ. ಸಂಪತ್ತು ಅಧಿಕಾರ ಇವು ಗರ್ವವಾಗಬಾರದು ಬ್ರಾಹ್ಮಣರ ಜ್ಞಾನ, ಕ್ಷತ್ರಿಯರ ಶೌರ್ಯ ವೈಶ್ಯನ ವ್ಯವಹಾರಕೌಶಲ, ಶೂದ್ರನ ಸೇವಾನಿರತೆ ಈ ಗುಣಗಳನ್ನು ಸಂಪಾದಿಸಬೇಕು." ಎಂದು ಹೇಳಿದರು.

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟನಲ್ಲಿ

S. O. No. 94/52. E. P. 36/53.

ಸುಂಕಪ್ಪ ತಂದೆ ಪೊಡ್ಡಪ್ಪ ವಾದಿ (ಡಿಕ್ರಿ ಹೋಲ್ಡರ್)

ಮತ್ತು

ಭಾವಿಕಟ್ಟೆ ಕಲ್ಲಪ್ಪ ತಂದೆ ಹನುಮಂತಪ್ಪ ಪ್ರತಿವಾದಿ (ಜಡ್ಜಮೆಂಟ್ ಡೆಬ್ಟರ್)

ನೋಟೀಸು

ಶ್ರೀಸಿನ ಸಾಲಗಾರನಾದ ಪ್ರತಿವಾದಿಗೆ ತಿಳಿಯಪಡಿಸುವದೇನಂದರೆ ಡಿಕ್ರಿ ಹೋಲ್ಡರ್ ಆದ ವಾದಿಯು ಬಳ್ಳಾರಿ ತಾಲೂಕು ಕ್ಯೋತ್ರಿಯಂ ಸೋಮಲಾಪುರ ಗ್ರಾಮದಲ್ಲಿನ ಪ್ರತಿವಾದಿಗೆ ಸೇರಿದ ಆಸ್ತಿಗಳನ್ನು ಮಾರಲು ಅರ್ಜಿ ಇಟ್ಟಿರುತ್ತಾರೆ. ಪ್ರತಿವಾದಿಗೆ ನೋಟೀಸು ಕೊಟ್ಟು ಕರೆಸಲು ದಾಯೆದ್ದಿಯು 22-4-53 ಕ್ಕೆ ಹಾಕಲಾಗಿದೆ. ಆ ದಿವಸ ಪ್ರತಿವಾದಿಯಾದ ನೀನು ಖುದ್ದಾಗಲಿ ವಕೀಲರ ಮೂಲಕ್ಕವಾಗಲಿ ಹಾಜರಾಗಿ ನಿನ್ನ ತಕ್ಷೀಸಣೆ ತಿಳಿಸದಿದ್ದಲ್ಲಿ, ಈ ವಿಷಯವು ಏಕ ಪಕ್ಷವಾಗಿ ನಿರ್ಣಯಿಸಲ್ಪಡುತ್ತದೆ.

1-4-53. ಬಳ್ಳಾರಿ

ಎಸ್. ಕೆ. ರಾಮಚಂದ್ರನ್.
ಜಿ. ನಾಗಭೂಷಣಂ
ಅಡ್ವೊಕೇಟರು

ಬಳ್ಳಾರಿ ಡಿll ಮು ll ಕೋರ್ಟನಲ್ಲಿ

O S. 45/53

ವಾದಿ :-

ರೊಟ್ಟಿಕಲ್ಲು ಕೃಷ್ಣಮೂರ್ತಿ ಶೆಟ್ಟಿ
ಬಳ್ಳಾರಿ

ಪ್ರತಿವಾದಿಗಳು :-

1) ಬೂದೂರು ನರಸಪ್ಪ
2) ತಿಮ್ಮಪ್ಪ

ಮೇಲ್ಕಂಡ ವಾದಿಗೆ ಪ್ರತಿವಾದಿಗಳು ಬರಕೊಟ್ಟ ಪ್ರಾಮಿಸರಿನೋಟಿನ ಬಾಕಿ ಬರಪಾಡಿಕೊಳ್ಳಲಿಕ್ಕೆ ರೂ. 1022-8-0 ಗೆ ದಾವಾ ಮಾಡಿರುತ್ತಾನೆ. ಸದರಿ ದಾವಾ 10-4-53 ಕ್ಕೆ ವಾಯಿದೆ ಬಿದ್ದಿರುತ್ತದೆ. ಇದಕ್ಕೆ ಪ್ರತಿವಾದಿಗಳಿಗೆ ತಕರಾರು ಇದ್ದಲ್ಲಿ ಮೇಲಿಗ ತೇದಿ ಹಗಲು 11 ಗಂಟೆಗೆ ಖುದ್ದಾಗಲಿ ವಕೀಲರ ದ್ವಾರವಾಗಲಿ ಹಾಜರಾಗತಕ್ಕದ್ದು ಇಲ್ಲವಾದರೆ ಎಕ್ಸ್ ಪಾರ್ಟ ಡಿಕ್ರಿಯಾಗುವದು.

ಪಿ. ವೆಂಕೋಬಾಚಾರ್
ವಕೀಲ

ಸಾಮಾಜ ವಿಕಾಸ ಯೋಜನೆ

ಈ ತಾತ್ಪೈರ್ಯ ಮುಂಗಡ ಪತ್ರವನ್ನು ಮುಂಡರಿಸುವಾಗ, ವಿವಿಧ ಆರ್ಥಿಕ ವೃದ್ಧಿ ಯೋಜನೆಗಳ ಕಾರ್ಯ ಪ್ರಗತಿಯನ್ನು ನಾನು ವಿಮರ್ಶಿಸಲಿಚ್ಛಿಸುವುದಿಲ್ಲ ಆದರೂ ಸಮಾಜ ವಿಕಾಸ ಯೋಜನೆಗಳ ಕುರಿತು ನಾನು ಸಂಕ್ಷಿಪ್ತವಾಗಿ ಸೂಚಿಸಬೇಕು. ಇದಕ್ಕೋಸ್ಕರ ಈ ವರ್ಷದ ಮುಂಗಡ ಪತ್ರದಲ್ಲಿ ಹೆಸರಿಗೆ ಮಾತ್ರವೇ ಅವಕಾಶ ಕಲ್ಪಿಸಲಾಗಿದೆ. ಕಳೆದ ಅಕ್ಟೋಬರ ತಿಂಗಳಲ್ಲಿ ಅರು ಕೇಂದ್ರಗಳಲ್ಲಿ ಯೋಜನೆಗಳು ಜಾರಿಗೆ ಬಂದಿವೆ. ಈ ವರ್ಷದ ಪರಿಷ್ಕೃತ ಅಂದಾಜಿನಲ್ಲಿ ರೂ 71 ಲಕ್ಷದಷ್ಟು, ಬರುವ ವರ್ಷದ ಮುಂಗಡ ಪತ್ರದಲ್ಲಿ ರೂ. 111 ಲಕ್ಷದಷ್ಟು ಪ್ರತ್ಯೇಕಿಸಿಡಲಾಗಿದೆ. ಈ ಯೋಜನೆಗೆ ಬೇಕಾದ ಧನ ಸಹಾಯ ಕೊಡಲು ಹಿಂದುಸ್ಥಾನ ಸರಕಾರವು ಒಪ್ಪಿದೆ. ಚಾಲ್ತಿ ವರ್ಷದಲ್ಲಿ ರೂ. 29 ಲಕ್ಷದಷ್ಟು ಬರುವ ವರ್ಷದಲ್ಲಿ ರೂ. 56 ಲಕ್ಷದಷ್ಟು ಧನ ಸಹಾಯ ಎಣಿಸಿಕೊಳ್ಳಲಾಗಿದೆ ಎಂದು ಅರ್ಥಿಕ ಮಂತ್ರಿಗಳು ಹೇಳಿದರು.

ರಷಿಯ - ಚೈನಾಗಳಿಂದ ಹೆಚ್ಚಿನ ಪ್ರಗತಿಯನ್ನು ಭಾರತ ಸಾಧಿಸಿದೆ

ರಷಿಯಾ ಭೂಸ್ವರ್ಗವಾಗಿದೆ- ಚೀನಾ ದೇವಲೋಕವಾಗಿದೆ ಎಂದು ಕಮ್ಯೂನಿಸ್ಟರು ಕಣ್ಣುಚ್ಚಿ ಗದ್ದಲವೆಬ್ಬಿಸುವುದನ್ನು ಕೇಳಿ ಜನತೆವುಡಾಗಿರಬಹುದು. ಆವರಾವರೂ ಬಿಡಿಸಿ ಹೇಳುತ್ತಾ- ಅಲ್ಲಿ ಸಮ್ಮಿನಿಸ್ಟರಿಜ್ಯವೆಂಬ ಕಾರಣದಿಂದ ಅಂಥ ಅಭಿಪ್ರಾಯವಂತೆ — ಹೇಳುತ್ತಾರೆ. ಈ ಪ್ರಚಾರಕ್ಕೆ ಉತ್ತೇಜನವಾಗಿಯೇ ಎಂಬಂತೆ ಅಮೇರಿಕಾ ರಾಯಭಾರಿಗಳಾಗಿದ್ದ ಶ್ರೀ ಜಸ್ಪರ್ ಬೌಲ್ಸರು 'ರಷಿಯಾ-ಚೀನಾಗಳಿಗಿಂತ ಭಾರತವು ಎಷ್ಟೊ ಪ್ರಗತಿಯನ್ನು ಸಾಧಿಸಿದೆ. ರಷಿಯಾದಲ್ಲಿ ಪಂಚ ವಾರ್ಷಿಕ ಯೋಜನೆಯನ್ನು ತಯಾರಿಸಿ ಹತ್ತು ವರ್ಷಗಳ ಅನಂತರ ಅ ದಿಕ್ಕಿನಲ್ಲಿ ಕೂಡಾ ಮುಂದುವರಿದಿದ್ದಾರೆ' ಎಂದಿದ್ದಾರೆ. ಎಷ್ಟೂ ಪ್ರಚಾರವೆನ್ನಿ ಆದರೆ ಆನರಪರೆಗೆ ಆವಮಾನಗಳ ದೇಶದ ಮೇಲೆ ಅಭಿಮಾನವಿರಬೇಕಾದ್ದು ಸಹಜವಾಗಿದೆ ಆರೆ ಕಮ್ಯೂನಿಸ್ಟರು ಆ ಕೃತಕ ಸ್ವಭಾವದ ಸರ್ವಾಧಿಕಾರ ರಾಷ್ಟ್ರಗಳಿಂದ ಪ್ರಚಾರಕಾರಾಯಕರಾಗಿ ವರ್ತಿಸುತ್ತಾರೆ. ಅವರ ಆಧಾರ ಸ್ವದೇಶದಲ್ಲಿಯೆ ಇಲ್ಲದಿರಲಿ-?

ವಿನಾಶಾತ್ಮಕ ಕಾರ್ಯ ಬೇಡ

ಶ್ರೀ ನಿಜಲಿಂಗಪ್ಪನವರ ಹೇಳಿಕೆ

ಕರ್ನಾಟಕ ಪ್ರದೇಶ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಒಂದು ಹೇಳಿಕೆಯನ್ನು ಕೊಟ್ಟು ಕೈಕು ಹಳಿತಪ್ಪಿಗೆಯುವ ನಿರ್ಬಲರಲ್ಲಿನಿವ ವಿನಾಶಾತ್ಮಕ ಚಟುವಟಿಕೆಗಳಲ್ಲಿ ಜನತೆಯು ಭಾಗವಹಿಸಬಾರದೆಂದೂ ಕೋರಿದ್ದಾರೆ- "ಬಳ್ಳಾರಿಯ ಕನ್ನಡ ಭಾಗಗಳನ್ನು ಆದರ್ಶೊ ಬಳ್ಳಾರಿ ತಾಲೂಕನ್ನು ಆಂಧ್ರದಲ್ಲಿ ಸೇರಿಸುವ ಪ್ರಯತ್ನಗಳಿಂದಾಗಿ ಬಳ್ಳಾರಿಗನ್ನಡಿಗರು ಉದ್ವಿಗ್ನರಾಗಿರುವುದು ಸಹಜವಾಗಿದೆ.

ಇದನ್ನು ಪಾರ್ಲಮೆಂಟಿನ ಸನ್ನತ ಸದಸ್ಯರೂ' ಕೇಂದ್ರ ಸರ್ಕಾರವು ಕೂಲಂಕಷವಾಗಿ ವಿಚಾರಿಸುತ್ತಿಲಿವೆ. ಕನ್ನಡಿಗರಿಗೆ ಏನು ಹಾನಿಯಾಗದಂತೆ ನಾವಡಲು ನಾನು ಕೆಂಧ್ರ ಮೊಹನೆ ಶಕ್ತಿ ವ್ಯಯಹಾರ ನಡೆಸುತ್ತಿರುವೆನು. ಸರಹದ ಸಮಿತಿಯು ನಿಯಮಾನುಕವಾಗಿ ಜಲ್ಲ ವಿಷಯಗಳೂ ತೃಪ್ತಿಕರವಾಗಿ ಬಗೆ ಹರಿಸಲ್ಪಡುವವೆಂಬ ಆಶಿಸುತ್ತೇನೆ.

ಬಳ್ಳಾರಿಯಲ್ಲಿ ಆಂಧ್ರ ಸಮಿತಿ ಸಭೆ

ಸಾಂಬಮೂರ್ತಿ ಮೈದಾನದಲ್ಲಿ ಹಿಂದಿನ ರೈಲ್ವೆ ಮಂತ್ರಿ ಶ್ರೀ. ಜೆಜ್. ಪೀತಾರಾಮಪಡ್ಡಿಯವರ ಅಧ್ಯಕ್ಷತೆಯಲ್ಲಿ ನೆನ್ನೆ ಶಾ. ಸಾಯಂಕಾಲ ಸಭೆಯು ನಡೆದು ಬಳ್ಳಾರಿತಾಲೂಕು ಆಂಧ್ರಕ್ಕೆ ಸೇರಬೇಕೆಂಬ ನಿರ್ಣಯವಾಯಿತು ಶ್ರೀ. ಎನ್ ಎಂ. ಶಾಸ್ತ್ರಿ ಡಿ. ವೇಣುಗೋಪಾಲಾಚಾರಿ, ರಾಜಗೋಪಾಲಚಟ್ಟಿ, ರಿಯಾಜುದ್ದೀನ್ ನಗೈರೇಯಿಯವರು ಮಾತಾಡಿ, ಬಳ್ಳಾರಿಯು ಹೇಗಾಗದಂತೆ ನೋಡಿಕೊಳ್ಳುವ ಒಂದೇ ಮಾರ್ಗವೆಂದರೆ ಆಂಧ್ರಕ್ಕೆ ಸೇರತಕ್ಕದ್ದೆಂಬ ವಾದವನ್ನು ಸಮರ್ಥಿಸಿದರು.

Matinee at PRABHAT

3 DAY'S 4 SHOWS
On 10th, 11th, 12th, APRIL 1953.
The Pulitzer Prize Winning Novel
Becomes A Vital,
Very Great Motion Picture
COLUMBIA PRESENT

"ALL THE KINK'S MAN"

ಬಳ್ಳಾರಿ ಪ್ರಭಾತದಲ್ಲಿ
ತಾ. **6-4-53** ರಿಂದ
ಅಜಿತ್ ರವರ
"ವೀರ ಅರ್ಜುನ (ಹಿಂದಿ)
ತಾರಾಗಣ :— ನಿರುಪರಾಯ್, ಶ್ರೀಲೇಕಪೂರ್

★ ವೀರ ಮಾತೆ ★
ಕನ್ನಡ ಮಾಸಪತ್ರಿಕೆ ಧಾರವಾಡ
ಇಂದೇ ಚಂದಾದಾರರಾಗಿರಿ.
ಮುಖ್ಯ ಸಂಪಾದಿಕೆಯರು :— ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.
ಪ್ರಕಾಶಕರು :— ಶ್ರೀ ಬಿ. ನಾ. ಜೈಚಮಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ.
ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.
ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
,, ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ

ಬಳ್ಳಾರಿಯ ಬಗ್ಗೆ ಬೆಂಗಳೂರಿನಲ್ಲಿ ಚರ್ಚೆ

ಮೈಸೂರು ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರೊಡನೆ ಮದ್ರಾಸಿನ ವ್ಯವಸಾಯ ಮಂತ್ರಿಗಳಾದ ಶ್ರೀ ಆರ್. ನಾಗನಗೌಡರು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ನಿಜಲಿಂಗಪ್ಪನವರು ಬಳ್ಳಾರಿಯ ಆರು ತಾಲ್ಲೂಕುಗಳನ್ನು ಮೈಸೂರು ಪ್ರಾಂತಕ್ಕೆ ಸೇರಿಸುವುದರ ಬಗ್ಗೆ ಅಂಕೆ'ಸಂಖೆ ಮತ್ತು ಇತರ ವಿವರಗಳನ್ನು ಕೂಲಂಕಷವಾಗಿ ಚರ್ಚಿಸಿದರು. ಈ ಸಂಬಂಧವ ಎಲ್ಲ ವಿವರಗಳನ್ನು ಪಡೆಯಲು ಮೈಸೂರು ಸರಕಾರದಿಂದ ನಿಯಮಿಸಲ್ಪಟ್ಟಿರುವ ಸ್ಪೆಶಲಾಫೀಸರರಾದ ಶ್ರೀ. ಕೆ. ಶೇಷಗಿರಿರಾಯರೂ ಹಾಜರಿದ್ದರು.

ಶ್ರೀ ನಾಗನಗೌಡರು ಎಲ್ಲ ವಿವರಗಳನ್ನು ಕೊಟ್ಟು ತುಂಗಭದ್ರಾ ಯೋಜನೆಯ ವಿದ್ಯುಚ್ಛಕ್ತಿಯನ್ನು ಅಭಿವೃದ್ಧಿ ಮಾಡಿದಾಗ ಬಳ್ಳಾರಿಯು ಕೊರತೆಯದಾಗಲಾರದೆಂದೂ, ಸಂಪದಭಿವೃಧ್ಧಿಗೆ ಸಾಧಕ ಸಾಧಕವಾದ ಎಸ್ಟೇ ಕಾರ್ಖಾನೆಗಳನ್ನು ಪ್ರಾರಂಭಿಸಬಹುದೆಂದೂ ಆಶ್ವಾಸನವಿತ್ತರು ಬಳ್ಳಾರಿಯ ತಾಲೂಕೂ ಸೇರಿದರೆ ಒಳ್ಳೆಯದೆಂಬ ಅಭಿಪ್ರಾಯವು ಹೊರಪಟ್ಟದ್ದರು. 6 ತಾಲೂಕುಗಳಿಗೆ ಜಿಲ್ಲಾ ಕೇಂದ್ರವನ್ನು ಸೂಚಿಸದೆ ಆಡಳಿತ ನಡೆಸುವುದು ಅಸಾಧ್ಯವೆಂದು ಕೇಂದ್ರ ಕಳಿಸುವುದಾಗಿ ಮೈಸೂರು ಮಂತ್ರಿಗಳು ಸೂಚಿಸಿದರು.

NAVABHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)
ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 6-4-53

Sri. _____

_____

_____

Edited Printed & Published by T. B Keshava Rao,-at Nava Bharath Press, Bellary.

ನವಚೈತನ್ಯ

ಸೋಮವಾರ
ಏಪ್ರಿಲ್
೧೩-೪-೧೯೫೩

ವರ್ಷ 16 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ ೬ | ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!! | ಟಿ. ಬಿ. ಕೇಶವರಾವ್

ಬಳ್ಳಾರಿಯು ವಿಭಜನೆಯಿಂದ ಹಾನಿಕರ

ಬಳ್ಳಾರಿ ಜಿಲ್ಲೆಯನ್ನು ಒಡೆಯಬೇಡಿರಿ!

— ಕ್ರಿಯಾ ಸಮಿತಿ ವಿನ್ನಹ —

ಬಳ್ಳಾರಿ ಜಿಲ್ಲಾ ಕರ್ನಾಟಕ ಕ್ರಿಯಾ ಸಮಿತಿ, ಮತ್ತು ಕನ್ನಡ ಸಮಿತಿಯ ಪರವಾಗಿ ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ವೈ. ಮಹಾಬಲೇಶ್ವರಪ್ಪ, ರೈತ ಪತ್ರಿಕೆಯ ಸಂಪಾದಕರಾದ ಶ್ರೀ ಕೊ. ಚನ್ನಬಸಪ್ಪ, ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ. ಹೆಚ್. ವೆಂಕೋಬರಾವ್ ಮತ್ತು ಇತರರು ಭಾರತದ ಪ್ರಧಾನಿ ನೆಹರೂರವರನ್ನು ಕಂಡು ಒಂದು ವಿನ್ನವತ್ತಿಕೆಯನ್ನರ್ಪಿಸಿ "ಬಳ್ಳಾರಿ ತಾಲೂಕು ಪೂರ್ಣವಾಗಿ ಕನ್ನಡದ್ದಿದೆ. ಆದುವಾನಿ, ಆಲೂರು, ರಾಯದುರ್ಗ ತಾಲೂಕುಗಳು ಕನ್ನಡಕ್ಕೆ ಸೇರಬೇಕು. ಸಾಂಸ್ಕೃತಿಕ ಜಿಲ್ಲೆಯ ಹಿತದೃಷ್ಟಿಯಿದ ಈ ಮೂರು ತಾಲೂಕುಗಳನ್ನು ಜಿಲ್ಲೆಯಿಂದ ಪ್ರತ್ಯೇಕಿಸ ಬಾರದು."

:- ಬಳ್ಳಾರಿ — ಭವಿತವ್ಯ :-

ಮದ್ರಾಸಿನ ಎರಡೂ ಶಾಸನ ಸಭೆಗಳ 69 ಸದಸ್ಯರು (ಇವರಲ್ಲಿ ಮೂವರು ಮಂತ್ರಿಗಳಿದ್ದಾರೆ) ಭಾರತದ ಪ್ರಧಾನಿ ನೆಹರೂರವರಿಗೆ ಒಂದು ವಿಜ್ಞಾಪನಾ ಪತ್ರವನ್ನು ಕಳುಹಿಸಿ, ಬಳ್ಳಾರಿ ನಗರವನ್ನು ಮತ್ತು ಬಳ್ಳಾರಿ ತಾಲೂಕನ್ನು ಆಂಧ್ರದಲ್ಲೇ ಇರಿಸಲು ಕೋರಿದ್ದಾರೆ. ಆನರ ಹೇಳಿಕೆಯ ಸಾರಾಂಶವೇನೆಂದರೆ "ಭಾರತ ಸರ್ಕಾರದ ಹೇಳಿಕೆಯ ಪ್ರಕಾರ ಕ್ಕೆ ಬಳ್ಳಾರಿಯ 6 ತಾಲೂಕುಗಳನ್ನು ಮೈಸೂರಿಗೂ, 3 ತಾಲೂಕುಗಳನ್ನು ಆಂಧ್ರ ದಲ್ಲಿಯೂ ಬಳ್ಳಾರಿ ತಾಲೂಕಿನ ಪ್ರಶ್ನೆಯನ್ನು ಶೀರ್ಘನಿರ್ಣಯಕ್ಕೂ ಇರಿಸಲಾಗಿತ್ತು. ಬಳ್ಳಾರಿ ತಾಲೂಕು ಮಿಶ್ರ ಜನರಿಂದ ಕೂಡಿದ್ದು ತಾಲೂಕಿನಲ್ಲಿ ಆಂಧ್ರರು ಹೆಚ್ಚಿಗಿದುವರೆಂಬುದಕ್ಕೆ ಸಂಶಯವಿಲ್ಲ ಆದಳಿತ ರೀತ್ಯ ಬಳ್ಳಾರಿ ನಗರ ಮತ್ತು ತಾಲೂಕನ್ನು ರಾಯಲಸೀಮೆಯಿಂದ ಪ್ರತ್ಯೇಕಿಸಲು ಸಾಧ್ಯವೇಯಿಲ್ಲ. ನಿಸ್ಪಕ್ಷಪಾತವಾದ ವಿಚಾರಣೆ ಯಾವುದೇ ಇದ್ದರೂ ಬಳ್ಳಾರಿ ತಾಲೂಕನ್ನು ಆಂಧ್ರದಲ್ಲಿ ಸೇರಿಸದೆ ವಿಧಿಯಿಲ್ಲ.

ಭಾಷಾವೈತ್ಯ ನೋಡಿದರೂ ಬಳ್ಳಾರಿ ತಾಲೂಕನ್ನು ಆಂಧ್ರದಲ್ಲೇ ಸೇರಿಸಬೆಕಾಗುತ್ತೆ."

ಬಳ್ಳಾರಿ ಜಿಲ್ಲಾ ಮುನ್ಸಿಫ್ ಕೋರ್ಟ್‌ನಲ್ಲಿ

O. S. 27/53

S. ನರಸಿಂಗರಾವ್ :— ವಾದಿ

ಮತ್ತು

ಪ್ರತಿವಾದಿ :—

H. ಗೋಪಾಲರಾವ್ ತಂದೆ. ತಿರುಮಲರಾವ್, ಸಿರುಗುಪ್ಪೆ.

ಪ್ರತಿವಾದಿಗೆ ನೋಟೀಸು

ನಿಮಗೆ ಎದುರಲ ಪಕ್ಷದವರು ಕಳುಹಿಸಿದಾಗ್ಯೂ ನೀವು ಹಾಜರಾಗಲಿಲ್ಲ. ಆದ ಕಾರಣ ಈಗ ಮೂರನೆಯ ಸಲ 16-4-53 ಕ್ಕೆ ವಾಯ್ದೆ ಹಾಕಿ ಪಕ್ಷವನ್ನು ಕರೆಯಿಸಲಾಗಿದೆ. ಆದಿನ ಪ್ರಾತಃಕಾಲ 11 ಗಂಟೆಗೆ ನೀವು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸದಿದ್ದಲ್ಲಿ ಸದರಿ ನಂಬರಿನ ದಾವೆಯು ನಿಮ್ಮ ಪರೋಕ್ಷದಲ್ಲಿ ನಿರ್ಣಯಿಸಲ್ಪಡುವುದೆಂದು ಈ ನೋಟೀಸು ಮೂಲಕ ನಿಮಗೆ ತಿಳಿಸಲಾಗಿದೆ.

ಬಿ. ವಿ. ರಾಮಕೃಷ್ಣರಾವ್
ವಾದಿ-ಅಡ್ವೊಕೇಟ್

★ Youth Festival ★

Malla Sajjana Vyayama Shala
BELLARY.

From 1st to 5th May 53.

GENERAL KARIYAPPA OPENING.

—: ಯುವಕರ - ಹಬ್ಬ :—

ಮ.ಲ್ಲಸಜ್ಜನ ವ್ಯಾಯಾಮಶಾಲೆ, ಬಳ್ಳಾರಿ.

ಭಾರತದ ಸೇನಾಪತಿಯಾಗಿದ್ದ ಜನರಲ್ ಕರಿಯಪ್ಪನವರು ಪ್ರಾರಂಭೋತ್ಸವ ನೆರವೇರಿಸಲಿರುವರು

★ ಬರ್ಮಾದ ಕಳವಳ ★

ತನ್ನ ಗಡಿಗೆ ಪೂರ್ವದಲ್ಲಿ ಶಾಂತಿಸಮುದ್ರದಲ್ಲಿ ಫೊರ್ಮೋಸಾ ನಡುಗಡ್ಡೆಯು, ಅತಿ ಸನ್ನಿಹಿತದಲ್ಲಿರುವುದರಿಂದ ಅದರ ಉಪಟಳವನ್ನು ಬರ್ಮಾ ಈಗ ಸಹಿಸಬೇಕಾಗಿದೆ ಇರುವರೆಗೆ ಫೊರ್ಮೋಸಾ ಬೂದಿ ಮುಚ್ಚಿದ ಕೆಂಡದಂತಿತ್ತು. ಅಮೆರಿಕೆಯ ಹೊಸ ಅಧ್ಯಕ್ಷರಾದ ಐಸನ್‌ಹಾವರರು ರಶಿಯಾದ ಪಕ್ಷವನ್ನು ಹಣ್ಣಿಗೆ ತರಲು ನಿಶ್ಚಯಿಸಿದ್ದರಿಂದ ಫಾರ್ಮೋಸಾದಲ್ಲಿಯೂ ಚಟುವಟಿಕೆಗಳಿಗೆ ಬೇರೆ ಸ್ವರೂಪವು ಬಂದಿದೆ. ಈಗ ಆ ಸಾವಿರ ಸೈನಿಕರನ್ನು ಕಾಮಿಂಟಾಂಗ ಸರಕಾರವು ಬರ್ಮಾದಲ್ಲಿ ಇಳಿಸಿದೆಯಂತೆ. ಇದರಿಂದ ಗಾಬರಿಗೊಂಡ ಬರ್ಮಾ ಸರ್ಕಾರವು ಸಂಯುಕ್ತ ರಾಷ್ಟ್ರ ಸಭೆಗೆ ಮೊರೆಯೋಗಿದೆ. ತನಗೆ ಈ ವಿಷಯದಲ್ಲಿ ಸಹಾಯ ಮಾಡಲು ತನ್ನ ಎಡ ಬಲದ ರಾಷ್ಟ್ರಗಳಿಗೆ ಬೇಡಿಕೊಂಡಿದೆ.

ಪಂ. ಜವಾಹರಲಾಲ್ ನೆಹರೂರವರು ಬರ್ಮಾಗಡಿಯಲ್ಲಿ ಬರ್ಮಾ ಮುಖ್ಯ ಮಂತ್ರಿಗಳೊಡನೆ ಸಂಚಾರ ನಡೆಸಿದ್ದಾರೆ ಅವರು ತಮ್ಮ ಭಾಷಣದಲ್ಲಿ ಅಕ್ರಮ ಕಾರ್ಯವನ್ನು ಭಾರತವು ಸಹಿಸದು ಎಂದು ಹೇಳಿದ್ದಾರೆ.

ರಾಷ್ಟ್ರೀಯ ಚೀನಾದ ಇಪ್ಪೊಂದು ಸೈನಿಕರು ಅಲ್ಲಿ ಇದ್ದರೂ ಕೇವಲ ಅವರ ವಶದಲ್ಲಿಯೇ ಆ ಭಾಗವಿದೆಯೆಂದು ಹೇಳಲಾಗುವುದಿಲ್ಲ. ಏಕೆಂದರೆ ಬರ್ಮಾ ಸರಕಾರವನ್ನು ಉರುಳಿಸಲು ಅಲ್ಲಿ ಪ್ರಯತ್ನಗಳು ಬಹಳ ನಿಕಟವಾಗಿ ಮತ್ತು ವಿವಿಧರೀತಿಯಿಂದ ನಡೆಯುತ್ತ ಬಂದಿದೆ ಆ ಚಟುವಟಿಕೆಗಳು. ಅಲ್ಲಿ ಮೊನ್ನೆ ಮೊನ್ನೆ ಕಾಮಿಂಟಾಂಗ ಸೈನಿಕರು ಬರುವ ಮೊದಲೇ ಪ್ರಾರಂಭವಾದಂಥವಿವೆ. ಅಂದಮೇಲೆ ಆ ಕಮ್ಯೂನಿಸ್ಟರು ಚೀನದ ಅಭಿಮಾನಿಗಳೆಂದು ಹೇಳಿದರೆ ಏನೂ ತಪ್ಪಾಗಲಾರದು. ಸೈನಿಕರು ಅಲ್ಲಿ ಬಂದಿದ್ದಾರೆಂದು ಹೇಳಿದರೆ ಅವರು ಕೇಳಿದರೆ ಅವರು ಕೂಡಲೆ ಯುದ್ಧವನ್ನೇ ಮಾಡುವರೆಂದು ಹೇಳುವಂತಿಲ್ಲ.

ಐಸನ್‌ಹಾವರರು ಎಷ್ಟೇ ಕಾಲು ಕೆದರಿಲಿ, ಅವರು ದಾಡುಕುವಹಾಗೆ ತೋರುವುದಿಲ್ಲ. ಅತ್ತ ಅದೇ ಸಂದರ್ಭದಲ್ಲಿ ರಶಿಯದ ಅಧಾರ ಸ್ಥಂಭವಾದ ಸ್ಟಾಲಿನ್ನರು ಹೆಣವಾದ್ದರಿಂದ ಆ ದೇಶದ ವಿದೇಶೀ ಧೋರಣೆಯಲ್ಲಿ ಬಹಳ ವ್ಯತ್ಯಾಸ ಉಂಟಾಗಿದೆ. ಜಾಗತಿಕ ಶಾಂತಿಯನ್ನು ಸ್ಥಾಪಿಸಲು ರಶಿಯಾ ಬಹಳ ಆತುರವಿದೆಯೆಂಬುದು ಕಂಡುಬರುತ್ತಿದೆ. ಕೋರಿಯಾ ಯುದ್ಧ ಕೈದಿಗಳನ್ನು ಅವರ ಇಚ್ಛೆಯ ಮೇರೆಗೆ ಬೇಕಾದಲ್ಲಿ ಕಳಿಸಬೇಕೆಂಬ ಅಮೇರಿಕಾ ಪಕ್ಷವನ್ನೂ ತಿಗೆ ರಶಿಯಾ ಹಿಂದಕ್ಕೆ ತನ್ನ ಮತ ಭೇಧ ವ್ಯಕ್ತಮಾಡಿತ್ತು. ಆದರೆ ಈಗ ಆ ಮತಭೇದವನ್ನು ಬಿಟ್ಟು ಮುಂದೆಬರಲು ಸಿದ್ಧವಾಗಿದೆ. ಹೀಗಿರುವಾಗ ಐಸನ್‌ಹಾವರರು ಬರ್ಮಾದಲ್ಲಿಯ ಸೈನಿಕರಿಗೆ ಸ್ಪಷ್ಟ ಕಾರ್ಯಕ್ರಮವನ್ನು ಹಾಕಿಕೊಡಲುಸಾಕು. ಸೈನಿಕರು ಅಲ್ಲಿ ಮುನಬಂದಂತೆ ಕುಣಿದ ಅಮೇರಿಕ ಪಕ್ಷದಲ್ಲಿಯೇ ವಿತುಷ್ಣಿಯುಂಟಾದೀತು.

ಪಂ. ಜವಾಹರಲಾಲ ಇವರು ಅಂದು ಆ ಗಡಿಗೆ ಹೋಗಿ ಅಲ್ಲಿಯ ಪರಿಸ್ಥಿತಿಯನ್ನು ನೋಡಿ, ತಮ್ಮ ದೃಷ್ಟಿಯನ್ನಿ ಅಲ್ಲಿಯ ಎಲ್ಲ ಚಟುವಟಿಕೆಗಳ ಕಡೆಗೆ ತಿರುಗಿಸುವುದಕ್ಕೆ ಮನಮಾಡಿದಾಗ ಅಮೇರಿಕೆಯು ಆ ಬಗ್ಗೆ ಎಚ್ಚರಿಕೆ ವಹಿಸದೆ ಇರಲಾರದು.

ಆದರೆ ಇವೆಲ್ಲ ಚದುರಂಗದಾಟಗಳು ಜಗತ್ತಿನಲ್ಲಿ ಶಾಂತಿಯು ನಿಜವಾಗಿ ಸ್ಥಾಪಿಸಲ್ಪಡುವವರೆಗೆ ನಡೆಯಲೇಬೇಕು. ಅದರಿಂದ ಯಾರೂ ಅವಾಸ್ತವ ಗಾಬರಿಯಾಗುವ ಕಾರಣವಿಲ್ಲ.

.... ಪ್ರಕಟನೆಗಳ ಪ್ರಚಾರ ....

ಪ್ರಕಟನೆಗಳನ್ನು ಹಾಕದೆ ಮಹಾತ್ಮಾ ಗಾಂಧಿಯವರು 'ಯಂಗ ಇಂಡಿಯಾ', 'ಹರಿಜನ' ಮೊದಲಾದ ಪತ್ರಿಕೆಗಳನ್ನು ನಡೆಸಿದರು. ಅಂಥವರಿಗೇ ಈ ಮಾತು ಸಾಧ್ಯವೇ ಹೊರತು, ಉಳಿದವರಿಗೆ ಹಾಗೆ ಮಾಡಹೋದರೆ ಮುಕ್ಕರಿಸಬೇಕಾಗುತ್ತದೆ. ಅಷ್ಟೇ ಏಕೆ? ಮಹಾತ್ಮಾಜಿಯವರ ತರುವಾಯ ಆ ಪತ್ರಿಕೆಗಳು ಕೂಡ ಇಳಿತಕ್ಕೆ ಬಂದಿವೆ.

ಪ್ರಕಟನೆಗಳ ಮೇಲೆ ವರ್ತಮಾನ ಪತ್ರಿಕೆಗಳು ಬಹಳವಾಗಿ ಅವಲಂಬಿಸಬೇಕಾಗುವುದರಿಂದ ಅವುಗಳನ್ನು ಬಿಡುವಂತಿಲ್ಲ. ಆದರೆ ಆ ಕ್ಷೇತ್ರದಲ್ಲಿ ಇಂದು ಆದ ಅವನತಿಯನ್ನು ದೇವರೇ ಬಲ್ಲ.. ಕಂಪನಿಗಳು, ಔದ್ಯೋಗಿಕ ಜನರು, ಸರಕಾರವು ಕೂಡ ಪ್ರಕಟನೆಗಳನ್ನು ಕೊಡುತ್ತವೆ. ಅವುಗಳಲ್ಲಿ ಅನೇಕ ಕಂಪನಿಗಳು ಜನರಿಗೆ ನಿಜವಾದ ಸೇವೆಯನ್ನು ಸಲ್ಲಿಸುತ್ತಿವೆಯೆಂದು ಧಾರಾಳವಾಗಿ ಹೇಳಬಹುದು. ಇನ್ನು ಕೆಲವು ಕಂಪನಿಗಳು, ಉದ್ಯೋಗಿಗಳು ಜನರನ್ನು ಸದಾ ಮೋಸಪಡಿಸುವನ್ನೇ ಬಂಡವಾಳ ಮಾಡಿಕೊಂಡಿದ್ದು ಬೇಕಾದಷ್ಟು ಕಾಣುವುದು. ಇಂದಿನ ಕಂಪೆನಿಯು ನಾಳೆ ಇರುವುದಿಲ್ಲ ಕೆಲವು ಪ್ರಕಟನೆಗಳನ್ನು ಕೊಟ್ಟು ಪುಕ್ಕಟೆ ಅನೇಕ ವಸ್ತುಗಳನ್ನು ಕೊಡುವುದಾಗಿ ಹೇಳುತ್ತಾರೆ. ಹಾಗೆ ಪುಕ್ಕಟೆ ಕೊಟ್ಟು ತಲೆಗೆ ಬೂದಿ ಹಚ್ಚಿ ಕೊಳ್ಳುವುದಕ್ಕೆ ಅವರು ಏಕೆ ಈ ರೀತಿ ಬದುತ್ತಿರಬಹುದೆಂಬುದನ್ನು ಜನರು ವಿಚಾರಮಾಡುವುದಿಲ್ಲ. ಅನೇಕರು ಮೋಸ ಹೋಗಿ ಚಡಪಡಿಸುತ್ತಿದ್ದಾರೆ. ಅಂತಹ ಹಲವು ಉದಾಹರಣೆಗಳನ್ನೇ ನಮ್ಮ ಒಬ್ಬ ಓದುಗರು ನಮ್ಮ ಲಕ್ಷ್ಯಕ್ಕೆ ತಂದಿದ್ದಾರೆ.

ಪತ್ರಿಕೆಗಳೂ ಈ ಕಂಪನಿಗಳ ಮೋಸಕ್ಕೆ ಗುರಿಯಾಗುವುದುಂಟು. ಅವರಿಂದ ಆ ಮೋಸ ತಪ್ಪಿಸುವುದಕ್ಕೇ ಬರುವುದಿಲ್ಲ. ಆದ್ದರಿಂದ ಇತ್ತೀಚೆಗೆ ಪತ್ರಿಕೆಗಳು ಜಾಗ್ರತೆಯಾಗಿ ಅವರಿಂದ ಮುಂಗಡ ಹಣ ತೆಗೆದುಕೊಂಡು ಪ್ರಕಟನೆಗಳನ್ನು ಹಾಕುತ್ತಿವೆ.

ಇಂಥ ಪ್ರಕಟನೆಗಳನ್ನು ಹಾಕಲೇ ಕೂಡದು ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಹೀಗೆ ಮಾಡಲು ಅನೇಕ ವರ್ತಮಾನಪತ್ರಿಕೆಗಳು ಸಮರ್ಥವಾಗಲಿಲ್ಲ. ಜನರು ಜಾಗ್ರತರಾಗುವುದೊಂದೇ ಈ ಸಮಸ್ಯೆಯನ್ನು ಬಿಡಿಸುವ ನಿಜವಾದ ವಿಧಾನವಾಗಿದೆ.

ಹಲಕೆಲವು ಔಷಧಿಗಳ ಬಗ್ಗೆ ಬಹು ಭರವಸೆ ಕೊಡುವ ಪ್ರಕಟನೆಗಳು ಬರುತ್ತವೆ. ಅವುಗಳಲ್ಲಿ ಶ್ರೇಷ್ಠ ಮತ್ತು ಉಪಯುಕ್ತವಾದವುಗಳೂ ಉಂಟು, ಆದರೆ ಅದರಲ್ಲಿ ಕೂಡ ಮೋಸವೇ ಬಹಳ. ಉದಾಹರಣೆಗಾಗಿ "ಮಿಮ್ಮನ ಮೇಲೆ ರಾಮಬಾಣ ಔಷಧ" ಎಂದು ಹೇಳುತ್ತಿದ್ದರೆ. ನಮ್ಮ ರಾಷ್ಟ್ರಪತಿಗಳಿಗೆ ಆ ಬೇನೆಯಿದೆ. ಅವನ್ನು ಗುಣಪಡಿಸಲು ಯಾರೂ ಸಮರ್ಥರಾಗಿಲ್ಲ. ಇಂದ ಮೇಲೆ ಈ ಪ್ರಕಟನೆಗಾರನು ಅವರ ಬೇನೆಗೆ ಔಷಧ ಕೊಟ್ಟು ಯಶಸ್ವಿಯಾದರೆ ಆ ಔಷಧ ಸಿದ್ಧಮಾಡಿದವರು ದೈವನೇ ತೆರೆದು ಹೋಗುವುದು. ಸಾರುಹುಣ್ಣು ಸಂಹಾರಿ ಎಂಬ ಪ್ರಕಟನೆಯು ಬರುತ್ತದೆ. ಪ್ರಕಟನೆಯೇಕೆ? ಆ ಬೇನೆಯಿಂದ ಸಾವಿರಾರು ಜನರು ಒಂದೇ ಊರಲ್ಲಿ ಬಳಲಿದ ಉದಾಹರಣೆಯಿದೆ. ಅಂತಲ್ಲಿ ಹೋಗಿ ಆ ಜನರನ್ನು ಅದರ ಹಿಡಿತದಿಂದ ಮುಕ್ತಮಾಡಿದರೆ ಆ ವೈದ್ಯನನ್ನು ತಲೆಯ ಮೇಲೆ ಹೊತ್ತುಕೊಂಡು ಕುಣಿಯುವರು. ಆವರ ಮೇಲೆ ಸುವರ್ಣ ವೃಷ್ಟಿ ಮಾಡುವರು, ಮತ್ತು ಆ ವೈದ್ಯರ ಕಂಚಿನ ಪುತ್ಥಳಿಯನ್ನೇ ಅಲ್ಲಿ ನಿಲ್ಲಿಸುವರು. [ಜಯಹಿಂದ್]

ಏಕಪತ್ನೀವ್ರತ ಮತ್ತು ವಿವಾಹ ವಿಚ್ಛೇದನ

ಸಾರ್ವಜನಿಕಾಭಿಪ್ರಾಯ

ತಾನು ಲಗ್ನವಾಗುವ ಗಂಡಿಗೆ ಇನ್ನೊಬ್ಬ ಹೆಂಡತಿಯಿದ್ದರೆ ಇರಲೊಲ್ಲಳೆಕೆ ಎಂಬುದು ಧಾರವಾಡದ ಅಧುನಿಕ ಹುಡುಗಿಯರ ಅಭಿಪ್ರಾಯ ಎಂದರೆ ಆಶ್ಚರ್ಯವಾಗುಬಹುದು.

ಇಂಡಿಯನ್ ಸ್ಯೂಸೈಪರ್ ಫೀಚ್ಚ್ ಸಿಂಡಿಕೇಟಿನವರು "ಹಿಂದು ವಿವಾಹ ಮತ್ತು ವಿಚ್ಛೇದನ" ಮಸೂದೆಯ ಬಗ್ಗೆ ದೇಶಾದ್ಯಂತದ ಜನರ ಅಭಿಪ್ರಾಯ ಸಂಗ್ರಹಿಸಿದರು "ಎಂಥ ಪರಿಸ್ಥಿತಿಯಲ್ಲಿಯೂ ಗಂಡಸಿಗೆ ಏಕ ಕಾಲಕ್ಕೆ ಒಬ್ಬಳಿಗಿಂತ ಹೆಚ್ಚು ಹೆಂಡಿರಿರಕೂಡದು ಎಂದು ವಿಧಿಸುವ ಸರಕಾರೀ ಮಸೂದೆಯನ್ನು ನೀವು ಒಪ್ಪುತ್ತೀರಾ' ಎಂಬ ಪ್ರಶ್ನೆಯನ್ನು ಅವರು ಕೇಳಿದ್ದರು. ಉತ್ತರದಿತ್ತ ವಿವಾಹಿತ ಸ್ತ್ರೀಯರಲ್ಲಿ ನೂರಕ್ಕೆ ೯೪.೭ ರಷ್ಟು ಸ್ತ್ರೀಯರು "ಹೌದು" ಎಂದಿದ್ದರು. ಕುಮಾರಿಯರಲ್ಲಿ ನೂರಕ್ಕೆ ೯೯.೬ ರಷ್ಟು ಜನ ಮಾತ್ರ "ಹೌದು ಎಂದಿದ್ದರು. ನೂರಕ್ಕೆ ಒಬ್ಬರಷ್ಟು ಕುಮಾರಿಯರು. ನಿಶ್ಚಿತ ಉತ್ತರ ಕೊಡಲು ಅಸಮರ್ಥರಾಗಿದ್ದರು.

ಗಂಡಸರಲ್ಲಿ ವಿವಾಹಿತರಲ್ಲಿ ನೂರಕ್ಕೆ ೬೭ ರಷ್ಟು ಮಂದಿ "ಒಬ್ಬ ಗಂಡ, ಒಬ್ಬ ಹೆಂಡತಿ" ಎಂಬ ತತ್ವದಲ್ಲಿ ನಂಬಿಗೆಯುಳ್ಳವರಾಗಿದ್ದರು. ಅವಿವಾಹಿತರಲ್ಲಿ ನೂರಕ್ಕೆ ೯೯.೪ ರಷ್ಟು ಮಂದಿ ಏಕ ಪತ್ನೀವ್ರತವನ್ನು ಪುರಸ್ಕರಿಸಿದರು. ಗಂಡು ಮಗ ಇಲ್ಲದಾಗ ಎರಡನೆ ಮದುವೆ ಮಾಡಿಕೊಳ್ಳಲು ಅವಕಾಶವಿರಬೇಕು ಎಂಬುದು ಗಂಡಸರ ಅಭಿಪ್ರಾಯವಾಗಿತ್ತು.

ವಿವಾಹವಿಚ್ಛೇದನ ವಿಚಾರಕ್ಕೆ ವಿವಾಹಿತೆಯರಿಗಿಂತಲೂ ಹೆಚ್ಚಾಗಿ ಕುಮಾರಿಯರೇ ಅನುಕೂಲ ಅಭಿಪ್ರಾಯ ವ್ಯಕ್ತಪಡಿಸಿದರು. ವಿವಾಹ ವಿಚ್ಛೇದನವಿರಲಿ ಎಂದು ವಿವಾಹಿತ ಸ್ತ್ರೀಯರಲ್ಲಿ ನೂರಕ್ಕೆ ೫೦.೬ ರಷ್ಟು ಜನ ಹೇಳಿದರೆ ಕುಮಾರಿಯರಲ್ಲಿ ನೂರಕ್ಕೆ ೭೮.೪ರಷ್ಟು ಇರಲಿ ಎಂದರು. ವಿವಾಹಿತೆಯರಲ್ಲಿ, ವಿಶೇಷತಃ ಮಕ್ಕಳಿಲ್ಲದವರು ವಿವಾಹವಿಚ್ಛೇದನವಾದಲ್ಲಿ ಮುಂದೆ ತಮಗೆ ಗಂಡ ಸಿಗಲಾರ ನೆಂದು ಹೆದರಿದ್ದರು. ವಿವಾಹ ವಿಚ್ಛೇದನ ವಿಚಾರದಲ್ಲಿ ಗಂಡಸರಲ್ಲಿ ನೂರಕ್ಕೆ ೬೫.೫ ರಷ್ಟು ವಿವಾಹಿತರೂ ನೂರಕ್ಕೆ ೭೦.೬ ರಷ್ಟು ಅವಿವಾಹಿತರೂ ಅನುಕೂಲ ಅಭಿಪ್ರಾಯವಿತ್ತರು.

ಒಟ್ಟಿನಲ್ಲಿ ಹೇಳುವದಾದರೆ, ಅವಿವಾಹಿತರಲ್ಲಿ ಏಕಪತ್ನಿ ವ್ರತಕ್ಕೆ ಹುಡುಗಿಯರಿಗಿಂತ ಹೆಚ್ಚಾಗಿ ಹುಡುಗರೂ ವಿವಾಹ ವಿಚ್ಛೇದನಕ್ಕೆ ಹುಡುಗರಿಗಿಂತ ಹೆಚ್ಚಾಗಿ ಹುಡುಗಿಯರೂ ಅನುಕೂಲ ಅಭಿಪ್ರಾಯವಿತ್ತರು. ವಿವಾಹಿತರಲ್ಲಿ ಗಂಡಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಹೆಂಗಸರು ಏಕಪತ್ನಿವ್ರತಕ್ಕೆ, ಹೆಂಗಸರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗಂಡಸರು ವಿವಾಹ ವಿಚ್ಛೇದನಕ್ಕೆ ಅನುಕೂಲ ಅಭಿಪ್ರಾಯವಿತ್ತರು.

ಹಿಂದು ಸಮಾಜದಲ್ಲಿ ಇಚ್ಛಿತ ಸುಧಾರಣೆ ಮಾಡಲು ಕಾಯದೆ ಅಗತ್ಯವೆಂದು ನೂರಕ್ಕೆ ೬೦ ಮಂದಿ ಹೇಳಿದರು. ಪ್ರಜಾರಾದಿಗಳಿಂದ ಸುಧಾರಣೆ ಬರಲಿ ಎಂದು ನೂರಕ್ಕೆ ೧೩.೪ ರಷ್ಟು ಜನ ಹೇಳಿದರು. ಉಳಿದವರು ಅಭಿಪ್ರಾಯವೀಯಲು ಅಸಮರ್ಥರಾದರು.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕಿಯರು :— ಶ್ರೀಮತಿ ಸರೋಜಿನಿ ಮಹಿಷಿ. ಎಂ. ಎ.

ಪ್ರಕಾಶಕರು :— ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರವನಿತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರದೇಶದವರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

ಹೊಸಹೇಟಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

S. C. 538/53

ವಾದಿ:—

ಪೂಜಾರಿ ಹನುಮಂತಪ್ಪ ತಂದೆ ತುಂಬಪ್ಪ, ಮೇಜರ್, ಹಿಂದು ಮತ ಜೀವಾಯಿತು, ಸಾ. ಗುಂಡಗತ್ತಿ ತಾ|| ಹರಪನಹಳ್ಳಿ

V/s

ಪ್ರತಿವಾದಿಗಳ ಪೈಕಿ :—

3) ಬೇಗಾರು ಗೋಣೆಪ್ಪ ತಂದೆ ಬಸಪ್ಪ ಮೇಜರು, ಬೇಗಾರ ಮತ. ಜೀವಾಯ್ತು ಸಾ ಜೀವಿನಹಳ್ಳಿ (ಮಜಿರಾ ಇಟ್ಟಗುಡಿ) ತಾ|| ಹರಪನಹಳ್ಳಿ.

ಆರ್ಡರ್ ರೂಲ್ I C P C ಪ್ರಕಾರ ಮೂರನೆ ಪ್ರತಿವಾದಿಗೆ ಈ ಸಮನು ಮೂಲಕ ತಿಳಿಯಪಡಿಸುವದೇನಂದರೆ:—

ವಾದಿಯು ನಿನ್ನಮೇಲೆ ಪ್ರಾಮಸರಿ ನೋಟಿನ ಬಾಬತು ಪೊತ್ತ ರೂ. 157-0-0 ಗಳು ಮತ್ತು ಕೋರ್ಟು ಖರ್ಚುಗಳು ಸಹಿತ ಬರವಾಡಿಕೊಳ್ಳಲು ದಾವಾಮಾಡಿರುತ್ತಾನೆ. ಕಾರಣ ಸದರಿ ದಾವಾಕ್ಕೆ ನಿನ್ನ ಆಕ್ಷೇಪಣೆಯಿದ್ದಲ್ಲಿ ತಾ 25-4-53 ಕ್ಕೆ ವಾಯಿದೆಗೆ ಸರಿಯಾಗಿ ಕೋರ್ಟಿಗೆ ಹಾಜರಾಗತಕ್ಕದ್ದು ತಪ್ಪದಲ್ಲಿ ನಿನ್ನನ್ನು ಎಕ್ಸ್‌ಪಾರ್ಟಿಮಾಡಿ ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸಿರುತ್ತದೆ.

ಎ. ಕೃಷ್ಣಭಟ್

ವಾದಿಯ-ಅಡ್ವೊಕೇಟ್

ಎರಡನೆ ಮದುವೆ ಮಾಡಿಕೊಂಡವರಿಗೆ ೬ ತಿಂಗಳ ಶಿಕ್ಷೆ

ಪಲಂಚ ರಾಮಸ್ವಾಮಿಶೆಟ್ಟಿ ಎಂಬಾತ ಅಂಡಾಲಮ್ಮ ಎಂಬ ಮೊದಲನೆ ಹೆಂಡತಿ ಇದ್ದಾ ಕೂಡ ಶಾರದಮ್ಮ ಎಂಬಾಕೆಯನ್ನು ಶಾಸ್ತ್ರವಿಧಿಯಾಗಿ ಮಾಡಿಕೊಂಡನು. ಮೊದಲನೇ ಹೆಂಡತಿಯು ಫಸ್ಟ್‌ಕ್ಲಾಸ್ ಕೋರ್ಟನಲ್ಲಿ ಬೈಗಾಮಿ ಆಕ್ಟ್ (BIGAMY ACT) ಕೆಳಗೆ ಕಂಪ್ಲೇಂಟು ಮಾಡಿದಳು ವಿಚಾರಣೆ ನಡೆದು ರಾಮಸ್ವಾಮಿ ಶೆಟ್ಟಿಗೆ ೬ ತಿಂಗಳ ಸಾದಾ ಶಿಕ್ಷೆಯಾಯಿತು. ಎರಡನೆ ಹೆಂಡತಿ ಶಾರದೆಯನ್ನು ಶಿಕ್ಷಿಸಲ್ಲವೆಂದು ಬಿಡುಗಡೆ ಮಾಡಿದರು. ಶಾರದೆಯ ತಂದೆ ಮತ್ತು ತಾಯಿ ಕಿವಿಗೆ ಶಿಕ್ಷೆ ಮತ್ತು ಶಿಕ್ಷೆಯ ಜವಾಬ್ದಾರಿಗೆ ತಲಾ 100 ರೂ, ಜುಲ್ಮಾನೆ ಯಾಯಿತು. ಜುಲ್ಮಾನೆ ಕೊಡದಿದ್ದಲ್ಲಿ ಒಂದು ತಿಂಗಳ ಶಿಕ್ಷೆ ಅನುಭವಿಸತಕ್ಕದ್ದೆಂದು ತೀರ್ಮಾನಹೇಳಲಾಯಿತು.

ಈ ಎರಡನೆ ಮದುವೆಯು ಕಳೆದವರ್ಷ ಮೇ 29ರ ದಿನ ಆದವಾನಾಪ್ಪೇಶ್ವರ ದೇವಾಲಯದಲ್ಲಿ ಆಯಿತು. ಸೆಕೆಂಡ್ ಅಡಿಷನಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಶ್ರೀ ಆರ್ ಯಸ್. ವೆಂಕಟೇಶನ್ ರವರು 8-4-53 ಮೇಲ್ಕಾಣಿಸಿದ ತೀರ್ಪನ್ನು ಕೊಟ್ಟರು.

LEGAL NOTICE

To

B. H. Krishna Bhat Proprietor Durga Bhavan Coffee Club Bellary.

Take notice O. S. 298 of 1952 filed in Dt. Munsiff Court Bellary against you by N S. Khajamohidin Sab Merchant Bellary for recovery of Rs. 578 due under the pronote dated 25-10 49 stands posted to 27—4—53 at 11 P. M. when it will be decreed exparte on your non appearance

Bellary
Dated 8—4—53

K. Purnapragna Rao,
Pleader for Plaintiff.

.... ನೋಟೀಸು ....

ಬಳ್ಳಾರಿ ನಗರ ದುರ್ಗಾಭವನ ಕಾಫಿಕ್ಲಬ್ ಪ್ರೊಪ್ರಯಿಟರ್
ಶ್ರೀ. ಹೆಚ್. ಕೃಷ್ಣಭಟ್ಟರಿಗೆ

ನೀವು 25-10-1949 ರಲ್ಲಿ ಬಳ್ಳಾರಿ ನಿವಾಸಿಯಾದ N S. ಖಾಜಾ ಮೊಹಿದೀನ್ ಸಾಹೇಬರಿಗೆ ಬರೆದುಕೊಟ್ಟ ಪ್ರೋ ನೋಟಿನ ಪ್ರಕಾರಕ್ಕೆ ನಿಮ್ಮಿಂದ ರೂ. 578 ವಸೂಲು ಮಾಡಲು ಸದರಿ ಖಾಜಾ ಮೊಹಿದೀನ್ ಸಾಹೇಬರು ಬಳ್ಳಾರಿಯ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟಿನಲ್ಲಿ O.S. 298/52ರ ಪ್ರಕಾರಕ್ಕೆ ದಾವಾ ದಾಖಲು ಮಾಡಿದ್ದು ಆದರ ವಾಯ್ದೆಯು 27—4—53ಕ್ಕೆ ಇದೆ. ಆ ದಿವಸ 11 ಗಂಟೆಗೆ ನೀವೇ ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಅಕ್ಷೇಪಣೆ ತಿಳಿಸದಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಏಕಪಕ್ಷದ ನಿರ್ಣಯವಾಗುತ್ತದೆಂದು ಈ ಮೂಲಕ ತಿಳಿಸಲಾಗಿದೆ

ಬಳ್ಳಾರಿ
8-4-53

ಕಂದಿ ಪೂರ್ಣಪ್ರಜ್ಞರಾವ್,
ವಾದಿಯ ವಕೀಲರು.

Matinee at PRABHAT

3 DAYS 4 SHOWS
ON 17th, & 18th, at 3-30 p. m.
Sunday the 19th at 9-30 A. M. & 3.30 p. m.
Paramount's Picture

"A PLACE IN THE SUN"

Feg:— Montgomery Clift, Elizabeth Taylor

ಬಳ್ಳಾರಿ ಪ್ರಭಾತದಲ್ಲಿ

12-4-1953 ರಿಂದ

ಜಾಲೋಪರಿ (ಹಿಂದಿ ಚಿತ್ರ)

ತಾರಾಗಣ. ಅಶೋಕ್ ಕುಮಾರ್, ನಳಿನಿಜಯಂತ್, ಗೀತಾಬಾಲಿ,

ಬಳ್ಳಾರಿ ಜಿಲ್ಲಾ ಮುನ್ಸಿಫ್ ಕೋರ್ಟಿನಲ್ಲಿ

O. S. 89/51—E. P. 73/53

ಜೆ. ಲಕ್ಷ್ಮೀದೇವಮ್ಮ — ಡಿಕ್ರಿಹೋಲ್ಡರ್
ತೀರ್ಪಿನಸಾಲಗಾರರು:—

ಕೋರಿ ಗುರುವಾದಪ್ಪ ಮೊದಲಾದವರು
ತೆಕ್ಕಲಕೋಟಿ

ನೋಟೀಸು

ಡಿಕ್ರಿಹೋಲ್ಡರರು ತಮ್ಮ ಹಣವನ್ನು ಪಡೆಯಲು ಮೊದಲನೆಯ ಸಾಲಗಾರ ಕೋರಿ ಗುರುವಾದಪ್ಪನನ್ನು ಸಿವಿಲ್ ಜೈಲುನಲ್ಲಿ ಅರೆಸ್ಟು ಮಾಡಿಡಲು ಕೋರಿದ್ದು ಆದರ ವಾಯ್ದೆಯು 20-4-53 ಕ್ಕೆ ಇದೆ. ಆ ದಿನ ಸದರಿ ಮೊದಲನೆಯ ಸಾಲಗಾರನು ಖುದ್ದಾಗಲಿ ವಕೀಲರ ಮೂಲಕವಾಗಲಿ ಕೋರ್ಟಿನಲ್ಲಿ 11ಗಂಟೆಗೆ ಏಕೈಕೆ ಅರೆಸ್ಟು ಮಾಡಬಾರದೆಂಬುದಕ್ಕೆ ಕಾರಣ ತೋರಿಸಬೇಕು. ಇಲ್ಲವಾದರೆ ಕೋ. ಗುರುವಾದಪ್ಪನ ಗೈರ ಹಾಜರಿಯಲ್ಲಿ ಶಾಸನರೀತ್ಯಾ ಇತ್ಯರ್ಥವಾಗುವುದು.

ಬಳ್ಳಾರಿ
6-4-53

D. L. ಗಂಗಾಧರಕಟ್ಟಿ
ಅಡ್ವೋಕೇಟ್, ಬಳ್ಳಾರಿ

NAVABHARAT. BELLARY. (Regd.M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ರ್ಷಕ್ಕೆ	6—0—0	One Year	6—0—0
ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri.

13-4-53

Edited Printed & Published by T. B Keshava Rao at Nava Bharath Press, Bellary.

ನವಿಚಾವಡಿ

ಸೋಮವಾರ
ಎಪ್ರಿಲ್
೨೦-೪-೧೯೫೩

ವರ್ಷ 16
ಸಂಚಿಕೆ 6

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವು

—: ಬಳ್ಳಾರಿ — ಪ್ರಭಾತ್ ದಲ್ಲಿ :—

24-4-53 ರಿಂದ

ನಾಗೂರ್ ಪ್ರೊಡಕ್ಷನ್ ರವರ

★ ಅಮರ ಕವಿ ★

ಆಮೋಘ ತೆಲುಗು ಚಿತ್ರ

ತಾರಾಗಣ :— M. K. ತ್ಯಾಗರಾಜ ಭಾಗವತರ್, T. R. ರಾಜಕುಮಾರಿ, B. S. ಸರೋಜ, P. K. ಸರಸ್ವತಿ, ಲಲಿತ, ಪದ್ಮಿನಿ, N. S ಕೃಷ್ಣ ಮಧುರಂ

★ Youth Festival ★

Malla Sajjana Vyayama Shala
BELLARY.

From 1st to 5th May 53.

GENERAL KARIYAPPA OPENING

—: ಯುವಕರ - ಹಬ್ಬ :—

ಮಲ್ಲಸಜ್ಜನ ವ್ಯಾಯಾಮಶಾಲೆ, ಬಳ್ಳಾರಿ.

ಭಾರತದ ಸೇನಾಪತಿಯಾಗಿದ್ದ ಜನರಲ್ ಕರಿಯಪ್ಪನವರು ಪ್ರಾರಂಭೋತ್ಸವ ನೆರವೇರಿಸಲಿರುವರು

ಶ್ರೀ. ಶಂಕರಗೌಡರ ಅಮರಣ ಉಪವಾಸ

ಆದರಗುಂಚಿ ಶಂಕರಗೌಡರು ಆಮರಣ ಉಪವಾಸ ಕೈಕೊಂಡಿಂದಿನಿಂತ ಇಂದಿಗೆ ೭೨ ದಿನಗಳಾತ್ತುಬಂದವು ಕೈಕೊಂಡ ಉಪವಾಸವನ್ನು ಮುಕ್ತಾಯ ಮಾಡಬೇಕೆಂದು ಶ್ರೀಗಳನ್ನು ಇದೇ ಕರ್ನಾಟಕದ ಮೂಲೆ ಮೂಲೆಯಿಂದ ಜೇಡಿಕೆಯು ಮತ್ತು ವ್ಯಸನವನ್ನು ವ್ಯಕ್ತಪಡಿಸುವರತ್ಯಗಳು ಅವರ ಕೈಸೇರುತ್ತಲೇ ಇವೆ. ಅವರ ಪ್ರಾಣವನ್ನು ಉಳಿಸುವಂತೆ ಅನೇಕಜನರು ಪಂ. ನೆಹರೂರವರಿಗೆ ತಂತಿಗಳನ್ನು ಕಳುಹಿಸುತ್ತಾ ಇದ್ದಾರೆ.

MATINEE AT PRABHAT TALKIES ON 24th 25th and 26th April 1953.

20th CENTURY FOX PRESENTS.

★ FIVE FINGERS ★

Feg:- James Mason, Danielle Darrieux, and Micheel Rennie.
The story of the Highest paid Spy in History! Five Fingers ---Lust.

ದೇಶದಲ್ಲಿನ ಕೃಷಿ ಬರಡುದನದಂತಿದೆ! ಅಭಿವೃದ್ಧಿ ಹೇಗಾಗಬೇಕು?

ದೇಶದಲ್ಲಿ ಆಹಾರ ಸಮಸ್ಯೆ ತಲೆದೋರಿದುದರಿಂದ ಉಂಟಾದ ಒಂದು ಸ್ಪಷ್ಟ ಜನ ವೆಂದರೆ ಕೃಷಿ ಮತ್ತು ಬೇಸಾಯದ ಮಹತ್ವದ ಕಡೆ ಜನತೆಯ ದೃಷ್ಟಿ ಹೊರಳುವಂತಾದುದು ಮಿಲಿಯಂತರ ಜನರನ್ನು ಪೋಷಿಸಬೇಕಾದ ಈ ದೇಶದಲ್ಲಿ ಕೈಗಾರಿಕೆಯಷ್ಟೇ ಕೃಷಿಯು ಪ್ರಾಮುಖ್ಯವಾದುದು ಎಂಬ ಅರಿವುಂಟಾಗಲು ಕಾರಣವಾಯಿತು. ಹಿಂದೂ ದೇಶದ ಕೃಷಿ ಎಂದರೆ ಕರೆಯುವ ವನರ್ಜಂತ್ತಿನ್ನ ಬಹುದು. ದನ ಹಾಲು ಕೊಡುವ ತನಕ ಜನರು ಆರೋಗ್ಯ ಅಥವಾ ಆಗು ಹೋಗುಗಳನ್ನು ನಾವು ಗಮನಿಸುವುದಿಲ್ಲ. ಹಾಲು ಬತ್ತಿದ ಬಳಿಕವೇ ಆಕಡೆ ನಮ್ಮ ಗಮನ ಹರಿಯುವುದು. ಆಗ ದನದ ಪಾಲನ್ನು ಹೆಚ್ಚಿಸುವ ಪ್ರಶ್ನೆ ಮಾತ್ರವಲ್ಲ; ದನವನ್ನೆ ಬದುಕಿಸುವ ಪ್ರಯತ್ನವಾಗಬೇಕಾಗಿರುವುದು. ಇಂತೆಯೇ ಆಹಾರ ಸಮಸ್ಯೆ ತಲೆದೋರುವ ತನಕ ಇಲ್ಲಿಯ ಬೇಸಾಯ ಪರಿಸ್ಥಿತಿ ಅವನತಿ ಹೊಂದುತ್ತಿದ್ದುದನ್ನು ನಾವು ಗಮನಿಸಲಿಲ್ಲ ಇದರಿಂದಾಗಿಯೂ ಪರಿಸ್ಥಿತಿಯಂತೆ ಉತ್ಪಾದನೆಯನ್ನು ಹೆಚ್ಚಿಸುವುದು ಮಾತ್ರವಲ್ಲದೆ, ಬೇಸಾಯ ವೃತ್ತಿಯನ್ನು ಸುಧಾರಿತ ಕ್ರಮದಿಂದ ಬದುಕಿಸುವ ಅವಶ್ಯಕತೆಯೂ ಬಂದಿರುವುದು.

ಆಹಾರದ ಕೊರತೆಯೊಂದಿಗೆ ಅಕ್ಕಿಯ ಕ್ರಯ ನಿಯಂತ್ರಣ ಒಂದೂ ಬೇಸಾಯದ ಖರ್ಚು ಏರುತ್ತಲೇ ಇದ್ದುದರಿಂದ ಬೇಸಾಯ ಯಾರಿಗೂ ಬೇಡವಾಗುವಂತಾಯಿತು. ಅದರಿಂದ ನಷ್ಟವಲ್ಲದೆ ಲಾಭವಾಗುತ್ತಿರಲಿಲ್ಲ. ವೀಲಾಗಿ ನಿಯಂತ್ರಣ ಕಾನೂನು. ಕಟ್ಟಳೆಗಳು ನಾನಾರೀತಿಯಲ್ಲಿ ಬೇಸಾಯಕಾರನನ್ನು ತೊಂದರೆ ಗೀಡುಮಾಡುತ್ತಿದ್ದುವು. ಗದ್ದೆಯಲ್ಲಿ ಓಡಾಡುವುದಕ್ಕಿಂತ ರೇಷನ್ ಕಾರ್ಡು ಹಿಡಿದು ಲಿಂಗಡಿ ಕಾಯುವುದೇ ಸುಖವೆಂಬಂತೆ ಕಂಡಿತು. ಅಂತಾ ಕೋಟ್ಯಾಂತರ ರೂ ಪಾಯಿಗಳ ಆಹಾರ ಧಾನ್ಯಗಳನ್ನು ಪರದೇಶಗಳಿಂದ ತರಿಸುವಂತಾಯಿತು ಆನಂತರ ಈಗ ನಿಯಂತ್ರಣದಿಂದ ಬೇಸಾಯಗಾರರಿಗೆ ಮಾಡಲು ಅಥವಾ ಉತ್ಪಾದನೆಯನ್ನು ಹೆಚ್ಚಿಸಲು ನಿಜವಾದ ಪ್ರೋತ್ಸಾಹ ದೊರೆತಿರುವುದು. ಹೆಚ್ಚು ಬೆಳೆಸಲು ಹಾಗೂ ಕೃಷಿಯ ಕ್ರಮವಲ್ಲಿ ಸುಧಾರಣೆಯನ್ನು ಕೈಗೊಳ್ಳಲು ಈಗೀಗ ಸ್ವಲ್ಪ ಉತ್ಸಾಹವು ಕಂಡುಬರುತ್ತಿರುವುದು. ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಮತ್ತು ಕೃಷಿಗಾಗಿ ಕೊಟ್ಟ ಸ್ಥಾನಮಾನ, ಜಪಾನಿನ ಬೇಸಾಯ ಕ್ರಮವನ್ನು ತಿಳಿದುಕೊಳ್ಳಲು ಜನರು ತೋರಿಸುತ್ತಿರುವ ಆಸಕ್ತಿ – ಇವೆಲ್ಲ. ಆಹಾರ ಉತ್ಪಾದನೆ ಮತ್ತು ಬೇಸಾಯದಲ್ಲಿ ಸುಧಾರಣೆ ಪ್ರಾಮುಖ್ಯವಾದುದು, ಎಂಬುದನ್ನು ಸರಕಾರ ಮತ್ತು ಜನತೆ ಮನಗಂಡಿರುವರೆಂದು ತೋರಿಸುವುದು.

ಆದರೆ ಸರಕಾರದ ಧ್ಯೇಯ ಅಥವಾ ಜನತೆಯ ತಿಳುವಳಿಕೆ ನಿಜವಾದ ಫಲ ಕೊಡಬೇಕಾದರೆ ಮುಖ್ಯವಾಗಿ ಅಕ್ಕಿಯ ಧಾರಣೆ ಹೆಚ್ಚಿದ ಕಾರಣದಿಂದ ದೊರೆತ ಹೆಚ್ಚಿನ ಹಣವನ್ನು ಭೂಮಾಲಕರು ಭೂಮಿಯ ಅಭಿವೃದ್ಧಿಗಾಗಿ ವ್ಯಯಿಸಲು ಸಿದ್ಧರಿರಬೇಕು. ಅದು ಭೂಮಾಲಕರ ಕೈಯಲ್ಲೆ ಉಳಿಯುವಂತಾದರೆ ಅವರ ಭೂಮಿ ಅಲಕ್ಷಿಸಲ್ಪಟ್ಟಿ ಕರೆಯುವ ದನದಂತಾಗಬಹುದು. ಸುವ್ಯವಸ್ಥೆಯತ, ಆಧುನಿಕ ಶಾಸ್ತ್ರೀಯ ರೀತಿಯಲ್ಲೆ ಬೇಸಾಯವಾಗಿ ಜನತೆಗೆ ಪ್ರಯೋಜನ ದೊರಕಿಸಬೇಕೆಂಬ ಕಡ್ಡಾಯ ತಂದು ಹಾಗೆ ಮಾಡದ್ದರಿಂದ ಭೂಮಿಯನ್ನು ನಿವೃತ್ತಿಗೊಳಿಸಿ ಇತರ ಉಮೇದ್ವಾರರಿಗೆ ಕೊಡಿಸುವಂತಹ, ಇಂಗ್ಲಾಂಡಿನ ಬೇಸಾಯದ ಕಾನೂನಿನಂತಹ ಕಾನೂನನ್ನು ಇಲ್ಲಿಯೂ ಹೊಂದಿಸಿಕೊಳ್ಳುವುದರಿಂದ ಭೂಮಾಲಕರು ತಮ್ಮ ಹೊಣೆಗಾರಿಕೆಯನ್ನು ಇಲ್ಲಿ ತಿಳಿಯುವಂತಾಗಬಹುದು. ಅದೇ ರೀತಿ ಗೇಯುವ ಒಕ್ಕಲಿಗನು ತಾನು ಹೊಲದಲ್ಲಿ ಏನೆ ಕೊಟ್ಟು ಕೆಲಸ ಮಾಡಿ ಉತ್ಪಾದನೆಯನ್ನು ಹೆಚ್ಚಿಸಿದರೆ ಅಥವಾ ಭೂಮಿಯನ್ನು ಅಭಿವೃದ್ಧಿಗೊಳಿಸಿದರೆ ಗೇಣಿ ಹೆಚ್ಚೀತು, ಇಲ್ಲವೆ ಮಾಡಿದ ಕಷ್ಟದ ಪ್ರಯೋಜನ ತನಗೆ ದೊರೆಯದಂತೆ ತನ್ನ ಒಕ್ಕಲೆಬ್ಬಿಸಿ ಯಾರು ಎಂಬ ಅನಿಶ್ಚಿತತೆ ಬರಕೂಡದು. ದಕ್ಷಿಣ ಕನ್ನಡದ ಎಂ. ಎಲ್. ಎ. ಗಳು ತಯಾರಿಸಿದ ಮಾದರಿಯ ಒಕ್ಕಲುಹಿತ ನುಸೂದೆಯಿಂದ ಈ ಅನಿಶ್ಚಿತತೆ ತೊಲಗಬಹುದು

ಭೂಮಾಲಕ ಒಕ್ಕಲುಗಳೊಳಗೆ ಪರಸ್ಪರ ಘರ್ಷಣೆಯುಂಟಾದರೆ ಸಮಾಜ ಅದನ್ನು ಅಸಡ್ಡೆಯಿಂದ ನೋಡುವಂತಿಲ್ಲ. ಆಹಾರ ಹೆಚ್ಚು ಬೆಳೆಯಬೇಕು, ಅಗ್ಗವಾಗಬೇಕೆಂಬುದೆ ಸಮಾಜದ ಬಯಕೆ. ಇದಕ್ಕನುಗುಣವಾದ ಭೂಸುಧಾರಣೆ ಮತ್ತು ಒಕ್ಕಲುಹಿತ ಕಾನೂನುಗಳನ್ನು ಸರಕಾರ ಜ್ಯಾರಿಗೆ ತರಬೇಕಾದುದು ಅಗತ್ಯ.

ನಿಶಾನಿಯೆ ಮೊದಲಾದ ಯೋಜನೆಗಳನ್ನು ಕೈಗೊಳ್ಳುವಾಗಲೂ ಸರಕಾರ ಗಮನಿಸಬೇಕಾದ ಇನ್ನೊಂದು ಮುಖ್ಯಾಂಶವಿದೆ. ಆಹಾರದ ಕೊರತೆಯನ್ನು ನೀಗಿಸಲು ಕೋಟ್ಯಾಂತರ ರೂಪಾಯಿಗಳು ತಗಲಬಹುದಾದ ಕೆಲಸವೇ ಯೋಜನೆಗಳನ್ನು ಮಾಡಿ ಮುಗಿಸಿದರೆ ನಮ್ಮ ಕೆಲಸವಾಯಿತೆಂದು ಯಾರೂ ತಿಳಿಯಕೂಡದು. ಪ್ರಾಯಶಃ ನಮ್ಮ ಧುರೀಣರು ಈ ತಪ್ಪನ್ನು ಮಾಡುತ್ತಿರುವರು. ರಾಷ್ಟ್ರದ ಸಂಪತ್ತನ್ನು ಕೆಲವೇ ಕಡೆಗಳೆಲ್ಲಿ ಈ ಬಗ್ಗೆ ವ್ಯಯಿಸಲು ನಿರ್ಧರಿಸಿ, ಉಳಿದ ಹೆಚ್ಚಿನ ಭಾಗಗಳಲ್ಲಿ ಅಭಿವೃದ್ಧಿಯ ಕುರುಹವನ್ನೂ ಕಾಣದಂತಾಗುವ ಪ್ರಸಂಗ ಇದರಿಂದ ಬರಬಹುದು. ಸ್ವಾತಂತ್ರ್ಯ ಸಿಕ್ಕಿ ನ ಈ ಐದಾರು ವರುಷಗಳಲ್ಲಿ ನಾವು ಸಾಧಿಸಿವ ಪ್ರಗತಿ ನಿಜವಾಗಿಯ ಪ್ರಶಂಸನೀಯವಾದುದು ಎಂಬುದು ನಿರ್ವಿವಾದ ರಷ್ಯದಲ್ಲಿ ನೀಸರ್ ಆಣೆಕಟ್ಟು ಹೆಸರಾಂತವಾದುದಾದರೆ, ಅಂತಹ ಅನೇಕ ಅಸಾಧಾರಣ ಕಾರ್ಯಕ್ರಮಗಳನ್ನು ಇಲ್ಲೂ ನಾವು ಕೈಗೊಂಡಿರುವೆವು, ಅಥವಾ ಮಾಡಿ ಮುಗಿಸಿರುವೆವೆ. ಭಕರಾ ನಂಗರ್ ಹಿರಾಕುಡ್ ಮೊದಲಾದ ಯೋಜನೆಗಳನ್ನು ಸಂದರ್ಶಿಸುವ ಯಾವನೇ ವಿದೇಶಿ ಅಗಂತುಕನಿಗೆ ನಮ್ಮ ಮುನ್ನಡೆ ಅಸಾಮಾನ್ಯವಾದುದೆಂದು ಖಚಿತವಾಗದಿರದು. ಇಂತಹ ಮಹತ್ವದ ಕೆಲಸಗಳನ್ನು ಮಾಡಿಯೂ ಸರ್ವಸಾಮಾನ್ಯವಾಗಿ ಜನರ ಮೆಚ್ಚಿಗೆಯನ್ನು ಪಡೆಯಲಿಲ್ಲವೆಂದು ನಮ್ಮ ಸರಕಾರಕ್ಕೊ ಕೆಲವೊಮ್ಮೆ ಜಿಗುಪ್ಸೆ ಹುಟ್ಟಬಹುದು. ಆದರೆ ಇಂತಹ ಮಹತ್ವದ ಯೋಜನೆಗಳನ್ನು ದೂರದೂರದ ಹಳ್ಳಿಯ ಜನಸಾಮಾನ್ಯರು ನೋಡುವುದಿಲ್ಲ. ನೋಡಿದರು ಅದರಿಂದುಂಟಾಗುವ ಅಮಿತ ಪ್ರಯೋಜನಗಳನ್ನು ತಕ್ಕ ರೀತಿಯಲ್ಲಿ

4 ಪುಟಕ್ಕೆ

-: ಗಾಂಧಿ ವಾಣಿ :-

ಯಾರು ಸರ್ವದಾ ಜಾಗೃತರಿರುವರೋ, ಯಾರಿಗೆ ಆಲಸ್ಯವೆಂಬುದು ಲೇಶಾಂಶವೂ ಇಲ್ಲವೋ, ಯಾರು ಎಲ್ಲವನ್ನು ಸೂಕ್ಷ್ಮ ಗ್ರಾಹಿಯಾಗಿ ಸ್ಪಷ್ಟವಾಗಿ ನೋಡುವರೋ, ಅಂಥವರಿಗೆ ನನ್ನ ಪ್ರಾರ್ಥನೆಯೇನೆಂಬುದು ಚೆನ್ನಾಗಿ ಗೊತ್ತಾಗುತ್ತದೆ.

THE NAVA BHARAT
ನವಭಾರತ
ಸಂಪಾದಕ-ಟಿ. ಕೇಶವರಾವ್

ಕೋಮು ವಾರ - ೨೦-೪-೫೩

ಬಳ್ಳಾರಿ ವಿಷಯದ ನಿರ್ಣಯಕ್ಕೆ ಹೈಕೋರ್ಟಿನ ಜಡ್ಜರ ಆಗಮನ

ಸಮಗ್ರ ಕರ್ನಾಟಕದ ಅವಿಶ್ರಾಂತ ಆಂದೋಳನದ ಫಲ ಸ್ವರೂಪವಾಗಿ ಭಾರತದ ಪ್ರಧಾನ ನೆಹರೂರವರು, ಕನ್ನಡಿಗರ ನ್ಯಾಯವಾದ ಹಕ್ಕುಗಳಿಗೆ ಧಕ್ಕೆ ಬರದಂತೆ ಒಬ್ಬ ಹೈಕೋರ್ಟಿನಲ್ಲಿ ಜಡ್ಜರನ್ನು ನಿಯಮಿಸಿ ಬಳ್ಳಾರಿ ಭಾಗದಲ್ಲಿ ಆಂಧ್ರವ್ಯಾಂತದ ಸರಹದ್ದಿಗೆ ಸೆರೆ ಹಾಕಲು ಏರ್ಪಾಡಿಸುವರೆಂಬ ಸುಭವಾರ್ತೆಯು ದಿಲ್ಲಿಯಿಂದ ಬಂದಿದೆ. ಇದಕ್ಕೆ ಸಂಭಂಧಿಸಿದ ಕನ್ನಡಿಗರೆಲ್ಲರನ್ನೂ, ನೆಹರೂರವರನ್ನು ಕಂಡು ತಮ್ಮ ವಾದ ಸಮರ್ಥನ ಮಾಡಿದ ಕನ್ನಡ ಶಿಷ್ಟಮಂಡಲಗಳನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಇಡೀ ಬಳ್ಳಾರಿ ಜಿಲ್ಲೆಯನ್ನು ನೈಜೂರಿಗೆ ಸೇರಿಸಲಾಗಿದೆ. ಎಂದು ಅದನ್ನು ಒಡೆಯಲು ಸಾಧ್ಯವಿಲ್ಲವೆಂದೂ, ನೆಹರೂರವರು 'ಮೊದಲೇ ಘೋಷಣೆ ಮಾಡಿದ್ದರೆ, ಇಷ್ಟೊಂದು ವಾಮವೂ ಚಿಂತಾಜನಕ ಪರಿಸ್ಥಿತಿಯೂ ಉತ್ಪನ್ನವಾಗುತ್ತಿರಲಿಲ್ಲ. ಕೇಳ್ವರ ಅವಾರ್ಡಿನಂತೆ ೫ ತಾಲೂಕುಗಳು ಆಂಧ್ರಕ್ಕೆ ಹೋದರೂ, ಶುದ್ಧ ಕನ್ನಡ ತಾಲೂಕದ ಬಳ್ಳಾರಿಯನ್ನು ಕೂಡ ನುಂಗಲೆಳಸಿದುದು ಅನ್ಯಾಯದ ಪರಮಾವಧಿ, ಆಕ್ರಮಣಕಾರಿ ಪ್ರವೃತ್ತಿಯ ಪರಾಕಾಷ್ಠೆ.

ನೆಹರೂರವರಿಗೆ ತಪ್ಪು ಅಂಕೆಸಂಖೆಗಳನ್ನು ಕೊಟ್ಟು-ಅವರನ್ನು ಅಸಂದಿಗ್ಧ ನಷ್ಠೆಯಲ್ಲಿಡುವ ಸಾಹಸವು ದುಷ್ಕಾರ್ಯವೇ ಸರಿ ಬಳ್ಳಾರಿ ಆಂಧ್ರ ಸಮಿತಿಯವರು ವಾಂಛೂರವರಿಗೆ ಒಪ್ಪಿಸಿದವರೆಗೆಯಲ್ಲಿ ಕೂಡ, ಬಳ್ಳಾರಿ ತಾಲೂಕು ಅಂಕೆ, ಸಂಖ್ಯೆಗಳಲ್ಲಿ ಇದೇ ಕಪ್ಪು ಗಡಿ, ಹೆಚ್ಚು ಸಂಖ್ಯೆ ತೋರಿಸುತ್ತಿತ್ತೆ ಇದು 1951 ನೆಯ ಜನಗಣನೆ ಲೆಕ್ಕಗಳಿಗೆ ವಿರುದ್ಧವಾದದ್ದು.

ಇಲ್ಲಿಗೆ ಬರಲಿರುವ ಹೈಕೋರ್ಟು ಜಡ್ಜರು, ಬಳ್ಳಾರಿಯ ಆದವಾಸಿ, ಅಲೂರು, ರಾಯದುರ್ಗ, ಬಳ್ಳಾರಿ ತಾಲೂಕುಗಳ ನಿಜ ಪರಿಸ್ಥಿತಿಯನ್ನರಿಯಲು ಅಧಿಕಾರ ಹೊಂದಿರುತ್ತಾರೆ ಇವರಿಗೆ ಯಾವ ಪರಿಧಿಯಲ್ಲಿ (Terms of Reference) ಕೆಲಸ ಮಾಡಲು ಅವಕಾಶವಿರುವುದೋ ಅದನ್ನು ಕನ್ನಡಿಗರು ಸೂಕ್ಷ್ಮವಾಗಿ ಗ್ರಹಿಸಬೇಕು. ಇದನ್ನು ಜನಾಭಿಪ್ರಾಯವೆಂಬತ್ತಕ್ಕೆ ಬಿಡಬಾರದು. ಹಳ್ಳಿಹಳ್ಳಿಯು ಭಾಷೆಯಾವುದೆಂಬ ಪೂರ್ಣ ವಿವರವಳಿಕೆಯ ನಿಷ್ಪಕ್ಷಪಾತ ವಿಚಾರಣೆಯಾಗಲಿ ಆಗ ಸತ್ಯವು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾಗುವುದು.

ಕನ್ನಡಿಗರು ಉದ್ರೇಕಗೊಳ್ಳದೆ, ಶಾಂತರಾಗಿ, ಐಕ್ಯವಾದ ಮತ್ತು ಸಂಗಟಿತವಾದ ಅಂದೋಳನ ನಡೆಸಿ, ಕನ್ನಡ ಭಾಗದ ಒಂದು ಅಂಗುಲವು ಕೋಗದಂತೆ ನೋಡಿಕೊಳ್ಳಬೇಕೆಂದೂ, ಈ ಕಾರ್ಯಕ್ಕಾಗಿ ಇನ್ನಿಂದಲೇ ಪೂರ್ವ ಸಿದ್ಧತೆ ನಡೆಯಬೇಕೆಂದೂ ಆಶಿಸುತ್ತೇವೆ.

ಸ್ಥಾನ ಬದ್ಧರ ಸಂಖೆ

ಲೋಕಸಭೆಯಲ್ಲಿ ಕೊಡಲ್ಪಟ್ಟ ಹೇಳಿಕೆಯೊಂದರಿಂದ ಇಂದು-೨-೩೫ ರಂದು ಭಾರತದಲ್ಲಿ ೩೫೬ ಸ್ಥಾನಬದ್ಧರಿದ್ದರೆಂದು ತಿಳಿಯುತ್ತದೆ.

ಬಳ್ಳಾರಿ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

S. C. 304/1952 I A 53/53

ಹಡಗಲಿ ರುದ್ರಪ್ಪ -- ವಾದಿ
ಆಮಿದ್ಯಾಲು ಗೌರಿಂಕರ್ | ಪ್ರತಿ
ಕಕ್ಕಬೇವಿನಹಳ್ಳಿ ಬಳ್ಳಾರಿ | ದಾವಿ

.... ಪ್ರತಿವಾದಿಗೆ ನೋಟೀಸು ....

ಮೇಲಿನ ಸಂಬರಿಂದ ನಿಮಗೆ ಈ ಕೋರ್ಟಿನ ಮುಂದೆ ಹಾಜರುಮಾತಲು ಈ ಆಲಸ್ಯವನ್ನು ನಿಮಿತ್ತ ಡಿಕ್ರಿಯವಳಗೆ ವಾದಿಯು ಖರ್ಚುಗಳು ಸೇರಿಬೇಕೆಂದು ವಾದಿಯು ಅರ್ಜಿ ಕೊಟ್ಟಿದ್ದು ೨೫-೪-೧೯೫೩ಕ್ಕೆ ವಾಯಿದೆಯಿದೆ ಸದರಿ ದಿನ ನೀವು ಖುದ್ದಾಗಿ, ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸಬೇಕು ಇಲ್ಲವಾದರೆ ಸದರಿ ವಿಷಯದಲ್ಲಿ ಏಕಪಕ್ಷ ತೀರ್ಮಾನವಾಗುತ್ತದೆ.

ಎನ್. ರಂಗನಾಥ್
ವಾದಿಯ-ಅಡ್ವೋಕೇಟ್

ಹೊಳಗುಂದಿ (ಅಲೂರು)

14-4-೫೩ ನೆಯ ದಿನಾಂಕ ಸಂಜಾಯ್ತಿ ಜೋಡಿಯ ಜುನಾವಣೆಯಾಗಿ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಗಾಳಿವೀರನಗೌಡರು, ಶ್ರೀ ಕೆ. ರಾಘವೇಂದ್ರಾಚಾರ್ಯರನ್ನು ಸೋಲಿಸಿ ಆರಿಸಿಬಂದು ಈ ಎಂಟು ಜನ ಸದಸ್ಯರು ಆರಿಸಿಬಂದಿರುತ್ತಾರೆ. 1) ಪೋ. ವೀರಭದ್ರಪ್ಪ 2) ಹಿ. ರುದ್ರಪ್ಪ 3) ದೊಡ್ಡ ಹನುಮಂತಪ್ಪ 4) ಕಂಬಾರ ರುದ್ರಪ್ಪ 5) ಕು. ಪೆಂಕೋಬಣ್ಣ 6) ಪೆಂಜಾರು ಕಲ್ಲಿಸಾಹೆಬ್ 7) ಶಬುಲ್ ಅಜೀದ್ 8) ಹುಲುಗಪ್ಪ ಹುಜಸರ

ಕಾಶ್ಮೀರ ಪ್ರಶ್ನೆ

ಚರ್ಚಿಸಲು ನೆಹರು ಒಪ್ಪಿದ್ದಾರೆ

ಕರಾಚಿ – ಭಾರತದ ಪ್ರಧಾನ ಮಂತ್ರಿ ಪಂ. ಜವಾಹರಲಾಲ ನೆಹರುರವರು ನಾಜೀಮುದ್ದೀನರೊಡನೆ ಕಾಶ್ಮೀರ ಹಾಗೂ ಕಾಲುವೆ ನೀರಿನ ಸಮಸ್ಯೆ ಚರ್ಚಿಸಲು ನೀರಾಕರಿಸಿದ್ದಾರೆಂದು ಈವನಿಂಗ ಸ್ಟಾರ ಪತ್ರಿಕೆಯು ಪ್ರಕಟಿಸಿದ ಸುದ್ದಿಯನ್ನು ಇಲ್ಲಿಯ ಹಿಂದೀ ಕೈಕಮೀಶನರ ಕಚೇರಿಯವರು ಅಲ್ಲಗಳೆದಿರುತ್ತಾರೆ. ಈ ಎರಡೂ ವಿಷಯಗಳನ್ನು ಚರ್ಚಿಸಲು ಪಂ. ನೆಹರು ಒಪ್ಪಿದ್ದಾರೆಂದು ಕಚೇರಿಯ ವಕ್ತಾರರು ತಿಳಿಸಿದರು.

ದೇಶದಲ್ಲಿನ ಕೃಷಿ ಬರಡು ದನದಂತಿದೆ! ಅಭಿವೃದ್ಧಿ ಹೇಗಾಗಬೇಕು?

೨ ಪುಟದಿಂದ

ಅವರು ಅಳೆದುತೂಕಮಾಡಿಕೊಳ್ಳುವಂತಿಲ್ಲ. ಅವರಿಗೆ ತಮ್ಮ ತಮ್ಮ ಗದ್ದೆಯಲ್ಲಿ ಹರಿಯುಬಹುದಾದ ನೀರೇ ಮುಖ್ಯವಾಗುವುದಲ್ಲವೆ? ದೇಶದ ಇನ್ನೊಂದು ಕಡೆ ಕಟ್ಟಲ್ಪಟ್ಟ ಭೂತಾಕಾರದ ಅಣೆಕಟ್ಟು, ನೆರವಿಗೆಬಂದ ಅವಾರ ನೀರು ಮನಸ್ಸಿಗೆ ಹತ್ತುವುದಿಲ್ಲ ಹಳ್ಳಿ ಹಳ್ಳಿಗಳಲ್ಲಿ ಚಿಕ್ಕಪುಟ್ಟ ಯೋಜನೆಗಳಿಂದ ಜನರಿಗೆ ಅವರ ನಿತ್ಯದ ಕೆಲಸದಲ್ಲಿ ಪ್ರಯೋಜನ ಕಂಡುಬಂದರೆ, ಸರಕಾರ ತಮ್ಮನ್ನು ಮರೆತಿಲ್ಲ ಸರಕಾರವು ಉಪಯುಕ್ತ ಕೆಲಸಗಳನ್ನು ಸಾಧಿಸುತ್ತಿದೆ ಎಂದು ಅವರು ತಿಳಿಯಬಲ್ಲರು. ಈ ತಿಳುವಳಿಕೆಯಿಂದು ಸರಕಾರದೊಂದಿಗೆ ತಾವೂ ಕೂಡಿದಷ್ಟು ಕೆಲಸ ಮಾಡಬೇಕೆಂಬ ಉತ್ಸಾಹ ಅವರಲ್ಲಿ ತಾನಾಗಿಯೇ ಹುಟ್ಟುವುದು. ಇದು ಮನೋಶಾಸ್ತ್ರಕ್ಕನುಗುಣವಾಗಿರುವುದು. ಯೋಜನೆಯ ಹಳ್ಳಿಗರಿಗೆ ಕಣ್ಣಿಗೆ ಕಾಣುವ ಇಂತಹ ಕಾಮಗಾರಿಕೆಗಳಿಂದ ಹುಟ್ಟುವ ಉಪೇಕ್ಷೆ ಇಡೀ ಆಹಾರ ಸಮಸ್ಯೆಯನ್ನು ಕೆಲವೆ ಸಮಯದಲ್ಲಿ ಬಗೆಹರಿಸಬಹುದು. ಬಾಯ ಅಡಬರ ಅಥವಾ ಕಾಗದದ ಮೇಲೆ ಬರೆದಿಟ್ಟ ಯೋಜನೆಗಳ ಬದಲಿಗೆ ಹೀಗೆ ಹಳ್ಳಿಹಳ್ಳಿಗಳಲ್ಲಿ ಮಾನಸಿಕ ಪರಿವರ್ತನೆಯಿಂದ ಕಾರ್ಯಕಲ್ಪ, ಕಾರ್ಯದಕ್ಷತೆ ಹುಟ್ಟಿತೆಂದರೆ ಇದೇ ಶಾಶ್ವತವಾದ ಪ್ರಯೋಜನ ಕೊಡುವ ನಿಜವಾದ ಕೆಲಸ. ಇವರಿಂದಲೇ ದೇಶ ಮುಂದೆ ಸಾಗಬೇಕು ಒಬ್ಬಿಬ್ಬರ ಅಗಾಧ ದೇಶಭಕ್ತಿಯಿಂದ ಸ್ವತಂತ್ರ ಸಂಪಾದನೆಯಾಗಲಿಲ್ಲ. ಮಿಲಿಯಗಂತರ ಜನರ ಹುರುಪು, ಕೆಲಸ ಆಕಾಂಕ್ಷೆಗಳಿಂದ ಮಾತ್ರ ಇದು ಸಾಧ್ಯವಾಯಿತು. ಹಾಗೆಯೇ ಕೆಲವೇ ಮಹಾಮಹಾಯೋಜನೆಗಳಿಂದ ನಮ್ಮ ಅಭ್ಯುದಯವಾಗುವಂತಿಲ್ಲ. ಜನತೆಯ ಸರ್ವೋತ್ಸ ಸರಕಾರ ಸಾಹಸಗಳು ಇದಕ್ಕೆ ಬೇಕು. ಹಾಗೆ ಜೀವಕಾದರೆ ಹಳ್ಳಿಹಳ್ಳಿಗಳಲ್ಲಿ ಚಿಕ್ಕಪುಟ್ಟ ಯೋಜನೆಗಳನ್ನು ತೊಡಗಬೇಕಾಗುವುದು ಮುಖ್ಯವಾದುದು. 'ಕೃಷಿತೊ ನಾಸ್ತಿ ದುರ್ಭಿಕ್ಷಂ' ಎಂಬ ಮಾತನ್ನು ಕಾರ್ಯರೂಪಕ್ಕೆ ತೋರಿಸಲು ಸಾಧ್ಯವಾಗುವುದು.

(ಪ್ರಕಾಶ)

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರದೇಶಿಯವರಿಗೆ ೫ ರೂಪಾಯಿ.

,, ಸ್ವದೇಶೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

ಪ್ರೇಮದಿಂದ ದೇವನರಿವು

—ತಾಜ—

(ಗಾಂಧೀಜಿಯವರಿಂದ)

ದೇವರು ಮೋಜಗಳಲ್ಲಿ ವಾಸಿಸುವ ವಸ್ತುವಲ್ಲ. ನನ್ನಲ್ಲಿಯೇ ವಾಸಿಸುವ ಮತ್ತು ಉಗುರುಗಳಿಗಿಂತಲೂ ನಾಂಕಕ್ಕೆ ಸಮೀಪಗತವಾದ ಶಕ್ತಿ ದೇವರು. ನನ್ನಲ್ಲಿ ಗುಪ್ತವಾಗಿರುವ ಅನೇಕ ಶಕ್ತಿಗಳಿವೆ. ಮತ್ತು ನಾನವನ್ನು ಸಂತತ ಹೋರಾಟದಿಂದ ಕಂಡುಕೊಳ್ಳುತ್ತೇವೆ ಆದರಂತೆ ದೇವರನ್ನು ಕಾಣುವ ವಿಚಾರದಿಂದ ನಾವು ಈ ನರಿಷ್ಯ ಶಕ್ತಿಯನ್ನು ಕಾಣಬಹುದು ಇಂಥ ಕಾರ್ಯಗಳಲ್ಲಿ ಅಹಿಂಸೆ ಒಂದಾಗಿದೆ ದೇವರು ನನ್ನಲ್ಲಿ ಸತ್ಯೋರ್ನಲ್ಲಿಯೂ ಇರುವುದರಿಂದ ಯಾವ ಆಪವಾದವಿಲ್ಲದೆ ನಾವು ಪ್ರತಿಯೋರ್ವ ವ್ಯಾನವನೊಂದಿಗೆ ಹೊಂದಿಕೊಳ್ಳಬೇಕಾಗುವುದು. ಶಾಸ್ತ್ರೀಯ ಭಾಷೆಯಲ್ಲಿ ಇದಕ್ಕೆ ಆಕರ್ಷಣೆ ಎನ್ನುವರು. ಜನ ಸಾಮಾನ್ಯ ಭಾಷೆಯಲ್ಲಿ ಇದಕ್ಕೆ ಪ್ರೇಮವೆನ್ನುವರು. ಪ್ರೇಮವು ನನ್ನನ್ನು ಪರಸ್ಪರ ತಾನು ಜೀವನೊಡನೆ ಬಂಧಿಸುವುದು. ಅಹಿಂಸೆ ಮತ್ತು ಪ್ರೇಮ ಎರಡೂ ಒಂದೇ.

---

೬೧ ಸಾವಿರ ರೂ. ಬೆಲೆಯ ಗಡಿಯಾರ

ಇಡೀ ವರ್ಷದಲ್ಲಿ ಒಂದು ಸೆಕೆಂಡು ಕೂಡ ತಪ್ಪದಂತೆ ಸಮಯ ತೋರಿಸುವ ಗಡಿಯಾರವು ಜರ್ಮನಿಯಲ್ಲಿ ತಯಾರಾಗಿದೆ. ಈ ಗಡಿಯಾರವನ್ನು ೬೧ ಸಾವಿರ ರೂಪಾಯಿಗಳಿಗೆ ಕೊಂಡು ಬನಾರಸಿನ ವೇಧಶಾಲೆಯಲ್ಲಿ ನಕ್ಷತ್ರಗಳ ಚಲನವಲನವನ್ನು ನೋಡಲು ಇಟ್ಟಿರುವರು.

NAVABHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
೬ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To 20-4-53

Sri.

Edited Printed & Published by T. B. Keshava Rao, at Nava Bharath Press, Bellary.

ಸಂಚಿಕೆ

ಸೋಮವಾರ
ಮೇ
೪,೧೧-೧೯೫೩

ವರ್ಷ 16
ಸಂಚಿಕೆ 8,9

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವು

★ ಕರ್ನಾಟಕ ಪ್ರಾಂತ ರಚನೆ ★

" ನನ್ನ ವಿರೋಧವಿಲ್ಲ, ಉಪವಾಸ - ಹರತಾಳ ಹುಡುಗಾಟಿಕೆಯ ರಾಜನೀತಿ "

.... ಬೆಳಗಾವಿ ಸಾರ್ವಜನಿಕ ಸಭೆಯಲ್ಲಿ ಪ್ರಧಾನ ನೆಹರೂರ ಭಾಷಣ ....

ಮೈಸೂರಿನವರ ಮೇಲೆ ಒತ್ತಾಯ ಮಾಡಿ ಸಂಯುಕ್ತ ಕರ್ನಾಟಕ ರಾಜ್ಯ ನಿರ್ಮಾಣವದು ಕಠಿಣ. ಇತ್ತೀಚೆಗೆ ಮೈಸೂರಿನವರು ಈ ವಿಷಯದಲ್ಲಿ ಅನುಕೂಲ ಅಭಿಪ್ರಾಯ ತಳೆದದ್ದು ಕಂಡು ಬರುತ್ತಿದೆ. ಪರಸ್ಪರರಲ್ಲಿ ಒಂದು ತಿಳಿವಳಿಕೆಗೆ ಬಂದು ಯಾವ ತೊಂದರೆ ಇಲ್ಲದೆ ಪ್ರಾಂತ ರಚನೆ ಮಾಡುವದು ಸಾಧ್ಯವಾದರೆ ಅದು ಒಳ್ಳೆಯದು ಎಂದು ಅವನು ಹೇಳಿದರು.

ಪ್ರಾಂತ ರಚನೆಗಾಗಿ ಉಪವಾಸ ಹರತಾಳ ಮೊದಲಾದ ರೀತಿಯ ಒತ್ತಾಯ ಮಾಡುವದು ಸರಿಯಲ್ಲ. ಆಂಧ್ರಪ್ರಾಂತ ರಚನೆಯನ್ನು ಸಮ್ಮ ಬಂಧು ಪಾದ ಶ್ರೀರಾಮಲುರವರು ತನ್ನ ಸತ್ಯಾಗ್ರಹದಿಂದ ಮತ್ತು ಆತ್ಮಾಹುತಿ ಮಾಡಿದ್ದರಿಂದ ಮಾಡಲಾಯಿತೆಂಬ ಭಾವನೆ ಸರಿಯಲ್ಲ. ಶ್ರೀರಾಮಲುರವರ ತನ್ನ ಸತ್ಯಾಗ್ರಹದಿಂದ ಅವಕ್ಕೆ ಕೆಲಮಟ್ಟಿಗೆ ತಡೆಯುಂಟಾಯಿತು ಉಪವಾಸ ಹರತಾಳಗಳು ಹುಡುಗಾಟಿಕೆಯ ರಾಜ ನೀತಿ ಎನಿಸಬಾರದು. ಜಗತ್ತಿನಲ್ಲಿ ಭಾರತದ ರಾಜ ನೀತಿಯು ಪ್ರಬುದ್ಧವಾದ ರಾಜನೀತಿ ಎಂದು ಪ್ರಖ್ಯಾತಿ ಪೆತ್ತಿದೆ. ತನ್ನ ಸತ್ಯಾಗ್ರಹವು ಪ್ರಜಾ ಪ್ರಭುತ್ವ ತತ್ವಕ್ಕೆ ಅಸಂಗತವಾದುದು. ಇಂಥ ಸತ್ಯಾಗ್ರಹಕ್ಕೆ ಬೆಲೆ ಕೊಡುತ್ತಾ ಸಾಗುವದಾದರೆ ದೇಶದಲ್ಲಿ ಯಾವದೇ ಸರಕಾರವು ಆಡಳಿತ ನಾಗಿಸಲಾರದು.

ಒಬ್ಬನು ತನ್ನ ಸತ್ಯಾಗ್ರಹ ಮಾಡಿದನೆಂದು ಯಾವದೇ ನಿರ್ಣಯ ಸ್ವೀಕರಿಸುವದು ಸರಿಯಾಗದು. ತನ್ನ ಸತ್ಯಾಗ್ರಹ ಮಾಡುವವರ ಉದ್ದೇಶವು ಉದಾತ್ತನಾಗಿರಬಹುದು. ಆದರೆ ಉದ್ದೇಶ ಉಚ್ಚವಾಗಿದ್ದರೆ ತೀರದು. ಉದ್ದೇಶ ಸಾಧನೆಯು ಸಾಧನಗಳೂ ಅಷ್ಟೇ ಉಚ್ಚ ಹಾಗೂ ಸಮಂಜಸವಾದವುಗಳಾಗಿರಬೇಕು.

ಭಾಷೆಯೊಂದೇ ತಳಹದಿಯಲ್ಲ

ಭಾಷಾನ್ವಯ ಪ್ರಾಂತ ರಚನೆಯು ತತ್ವಕ್ಕೆ ಸನ್ನ ಆಕ್ಷೇಪಣೇನೂ ಇಲ್ಲ. ಆದರೆ ಭಾಷೆಯೊಂದರ ಆಧಾರವೆ ಮೇಲೆ ಪ್ರಾಂತ ರಚನೆ ಮಾಡ ಹೊರಟರೆ ತೊಂದರೆಗಳು ತಲೆದೋರುವವು.

ಅವರು ಮುಂದುವರಿದು ಪ್ರತ್ಯೇಕ ರಾಜ್ಯಗಳಾಗುವುದರಿಂದ ಪರಸ್ಪರರಲ್ಲಿಯ ಸಂಬಂಧ ಕಡಿಮೆಯಾಗುವುದು. ಇದರಿಂದ ಪ್ರತ್ಯೇಕತೆಯ ಭಾವನೆಯು ಬೆಳೆಯಲು ಅವಕಾಶ ಉಂಟಾಗುವದು.

ಕಮ್ಯೂನಿಷ್ಟರು ನುಗ್ಗುತ್ತಿದ್ದಾರೆ

ಇಂಡೊ ಚೀನಾ ಪ್ರದೇಶದಲ್ಲಿ ಕಮ್ಯೂನಿಸ್ಟ್ ಸೈನ್ಯಗಳು ಮುನ್ನುಗ್ಗುತ್ತಿವೆ ಲಾವ್ಸ ಪ್ರಾಂತದ ರಾಜಧಾನಿಯು ಕೈಬಿಡಬಹುದೆಂದು ಫ್ರೆಂಚ್ ಸೈನಿಕ ವರ್ಗಗಳು ಹೇಳುತ್ತಿವೆ.

ಮಿಶ್ರರ ಪ್ರಯಾಣ

ಬಳ್ಳಾರಿ ತಾಲೂಕು ಭವಿಷ್ಯದ ಬಗ್ಗೆ ಸಮೀಕ್ಷಣೆಗಾಗಿ ಬಂದಿದ್ದ ಶ್ರೀ ಲಕ್ಷ್ಮೀಶಂಕರ ಮಿಶ್ರರವರು ಬಳ್ಳಾರಿಯಿಂದ ೫-೫-೫೩ ನೆಯ ಸಾಯಂಕಾಲ ಗುಂತಕಲ್ಲಿಗೆ ಕಾರಿನಲ್ಲಿ ಪ್ರಯಾಣ ಬೆಳೆಸಿ ಅಲ್ಲಿಂದ ಬೆಂಗಳೂರಿಗೆ ಹೊರಟರು.

ಬಳ್ಳಾರಿಗೆ ಶ್ರೀ ಕೆ. ಶೇಷಗಿರಿ ರಾಯರ ಸಂದರ್ಶನ

ಮೈಸೂರು ಸರ್ಕಾರದಿಂದ ನಿಯುಕ್ತರಾದ ಶ್ರೀ ಕೆ. ಶೇಷಗಿರಿರಾಯರು ಬಳ್ಳಾರಿ ಜಿಲ್ಲೆಯಿಂದ ಮೈಸೂರಿಗೆ ಸೇರಬೇಕಾದ ಕನ್ನಡ ತಾಲೂಕುಗಳ ಅಂಕೆ-ಸಂಖ್ಯೆ ವಿವರಗಳನ್ನು ತಿಳಿದು ಈ ವಾರ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

—: ಬಳ್ಳಾರಿ ಪ್ರಭಾತ್ ದಲ್ಲಿ :—

7-5-53 ರಿಂದ
ಬುಧವಾರ
* ತಂದ್ರಿ ಕ್ಷ ತಂದೆ *
(ತೆಲುಗು)
ಕಾರ್ಯಾಗಿರ :—ಜಿ. ಎಸ್. ಸರೋಜ, ಬಳ್ಳಾರಿ, ಸ್ವೀಮನೇಜರ್

MATINEE AT "PRABHAT"
3 DAYS 4 SHOWS
On 15th 16th At 3 - 30 p.m.
Sunday the 17 th at 9-30 A.M. & 3-30 P. M.
Paramounts 'presents
-: Detective Story :-
Fea :- Kirk Douglas, Eleanor Parket.
Rates as usual for matinees.

ಬ್ರಹ್ಮ — ಚಿಯಾಂಗ್ ಸೈನ್ಯಗಳಲ್ಲಿ ನಿಕರದ ಕದನ
ಉ. ಕೋರಿಯಾದ ಮೇಲೆ ಉಗ್ರಕ್ರಮ ಕೈಕೊಂಡ ಅಮೆರಿಕ
ಈಗೇಕೆ ಸುಮ್ಮನಿದೆ?

ಈ ಚರ್ಚೆ ಇನ್ನೂ ನಡೆದಿರುವಾಗಲೇ ಚಿಯಾಂಗರ ಸೇನಾಪತಿಯಾದ ಲಿಮಿ ಎಂಬುವನು ಬ್ರಹ್ಮದೇಶ ಮತ್ತು ಥಾಯಿಲ್ಯಾಂಡ್‌ಗಳ ಗಡಿಪ್ರದೇಶದಲ್ಲಿ ಮಕೊಂದು ಯುದ್ಧಮುಖ ನಿರ್ಮಿಸಿದ್ದಾನೆ. ಲಿಮಿಯ ದಳಗಳಿಗೆ ಬ್ರಹ್ಮ ಸರಕಾರದ ವಿರುದ್ಧ ಬಂಡು ಹೂಡಿರುವ ಕ್ಯಾರೆನ್ ಕೂಟ ಯೋಧರೂ ಕೂಡಿಕೊಂಡಿದ್ದಾರೆ. ಈಗ ಲಿಮಿ ಮತ್ತು ಬರ್ಮಾ ಸೈನ್ಯಗಳ ನಡುವೆ ನಿಕರದ ಹೋರಾಟ ಸಾಗಿದೆ. ಕೆಂಟಂಗದಲ್ಲಿ ಈಗ 12000 ಚಿಯಾಂಗರ ಕಂಟ ಸೈನಿಕರಿದ್ದು ಜನಸಂಖ್ಯೆಯನ್ನು ಹೊರಗಟ್ಟುವದಕ್ಕಾಗಿ ಬ್ರಹ್ಮ ಸೇನೆಯು ಅವರ ಬೆನ್ನಟ್ಟಿತ್ತು. ಆಸ್ಪತ್ರೆಯ ಮೇಲಿನ ಒತ್ತಡವನ್ನು ತಪ್ಪಿಸುವದಕ್ಕಾಗಿ ಲಿಮಿಯು ಈ ಹೊಸ ಯುಕ್ತಿ ಕೂಡಿದಂತೆ ತೋರುತ್ತದೆ.

ಈ ಘಟನೆಯಲ್ಲಿ ಒಂದು ಸೂಕ್ಷ್ಮತರ ಅಂಶ ಅಡಕವಾಗಿದೆ. ಕೋರಿಯಾದಲ್ಲಿ ದ್ವಿತೀಯ ಮಹಾಯುದ್ಧದ ಪರಿಣಾಮದಿಂದ ಕೃತ್ರಿಮವಾಗಿ ಉತ್ತರ ಕೋರಿಯಾ ದಕ್ಷಿಣ ಕೋರಿಯಾ ಎಂದು ವಿಭಜನೆ ಮಾಡಲಾಯಿತು. ಉತ್ತರ ಕೋರಿಯಾದ ಸಂರಕ್ಷಣೆ ರಷಿಯಾನ ಪಾಲಿಗೆ ಬಂತು. ದಕ್ಷಿಣ ಕೋರಿಯಾದು ಅಮೆರಿಕೆಯ ಪಾಲಿಗೆ ಬಂತು. ಉತ್ತರ ಕೋರಿಯಾದ ಸೈನ್ಯವು ದಕ್ಷಿಣ ಕೋರಿಯಾವ ಮೇಲೆ ದಾಳಿ ಆರಂಭಿಸಿದ ಕೂಡಲೇ ಇಡೀ ಸ್ವಸಂಚವೇ ತಲ್ಲಣಗೊಳ್ಳುವಂತೆ ಅರ್ಭಟಮಾಡಿ ಅಮೆರಿಕೆಯು ತತ್ ಕ್ಷಣ ತನ್ನ ಸೈನ್ಯವನ್ನು ದಕ್ಷಿಣ ಕೋರಿಯಾವ ನೆರವಿಗೆ ಕಳುಹಿಸಿ ಹಿಂದಿನಿಂದ ತಾನು ಸ್ಥಿರಕೊಂಡ ಉಗ್ರಕ್ರಮಕ್ಕೆ ವಿಶ್ವಸಂಸ್ಥೆಯ ಅನುಮತಿ ಪಡೆಯಿತು.

ಆದರೆ ಈಗ ಒಂದು ಸರಕೀಯರಾಷ್ಟ್ರದ ಸೈನ್ಯವು ಮತ್ತೊಂದು ರಾಷ್ಟ್ರದ ಗಡಿಯಲ್ಲಿ ಅನುಮತಿಯಿಲ್ಲದೆ ಒಳನುಗ್ಗಿದಾಗ ಅದೇ ಅಮೆರಿಕೆಯೂ ವಿಶ್ವಸಂಸ್ಥೆಯೂ ಇನ್ನೂ ಚರ್ಚೆಯಲ್ಲಿ ಕಾಲಹರಣ ಮಾಡುತ್ತಿವೆ! ಚಿಯಾಂಗರು ಚೀನವು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರ. ಅದರಂತೆ ಬ್ರಹ್ಮದೇಶವೂ ಇದೆ. ಹೀಗಿದ್ದು ವಿಶ್ವಸಂಸ್ಥೆಯ ಒಂದು ಸದಸ್ಯ ರಾಷ್ಟ್ರದ ಸೈನ್ಯವು ಇನ್ನೊಂದು ಸದಸ್ಯ ರಾಷ್ಟ್ರದ ಅನುಮತಿ ಪಡೆಯದೆ ಒಳನುಗ್ಗಿದರೆ ಆ ಅತಿಕ್ರಮಣ ಮಾಡುವ ರಾಷ್ಟ್ರದ ಮೇಲೆ, ಉತ್ತರ ಕೋರಿಯಾದ ಮೇಲೆ ಕೈಕೊಂಡಂತೆ ಉಗ್ರಕ್ರಮವನ್ನು ಅಮೆರಿಕೆಯು ಏಕೆ ತಕ್ಕೊಳ್ಳುತ್ತಿಲ್ಲ? ಇದರಿಂದಲೇ ಅಮೆರಿಕೆ, ಬ್ರಿಟನ್, ಫ್ರಾನ್ಸ್, ಇವುಗಳ ಉದ್ದೇಶವು ಸ್ಪಷ್ಟವಾಗುತ್ತಿದೆ. ಚಿಯಾಂಗ ಕೈಶೇಕನಿಗೆ ಸ್ವತಂತ್ರ ಅಸ್ತಿತ್ವವಿಲ್ಲದಿದ್ದರೂ ಮೂಲ ಚೀನಾದ ಪ್ರಜಾರಾಜ್ಯವು ಘಟನಾಬದ್ಧವಾದ ರಾಷ್ಟ್ರವಾಗಿದ್ದರೂ ಚೀನೀ ಪ್ರಜಾರಾಜ್ಯಕ್ಕೆ ವಿಶ್ವಸಂಸ್ಥೆಯಲ್ಲಿ ಸ್ಥಾನ ಕೊಡದೆ ಈ ಮಹಾರಾಷ್ಟ್ರಗಳು ತಮ್ಮ ಕೈಗೊಂಬೆಯಂತಿರುವ ಚಿಯಾಂಗರ ಸರಕಾರಕ್ಕೆ ಮನ್ನಣೆ ಕೊಟ್ಟಿರುವ ಉದ್ದೇಶವೆಂದರೆ ಚೀನಾ ಪ್ರಜಾರಾಜ್ಯದಲ್ಲಿರುವ ಕಮ್ಯೂನಿಷ್ಟ್ ಸತ್ತೆಯನ್ನು ನಿರ್ಮೂಲಮಾಡಿ ಅಲ್ಲಿ ಚಿಯಾಂರನ್ನು ಸಟ್ಟಗಟ್ಟುವದು ಅಮೆರಿಕೆಯ ಉದ್ದೇಶವಾಗಿದೆ. ಹೀಗಿರುವಾಗ ಅದೇ ಚಿಯಾಂಗರಿಂದ ಎಂತಹ ಅಕ್ರಮಕೃತಿಗಳಾದರೂ ಅಮೇರಿಕ ಅವರ ಮೇಲೆ ಕ್ರಮ ಹೇಗೆ ಕೈಕೊಂಡೀತು? ಅಂತೆಯೇ ಈಗ ಈ ಬ್ರಹ್ಮ ಸರಕಾರದ ದೂರನ್ನು ಬಗ್ಗೆ ಕಾಷ್ಮೀರ ವ್ಯಾಜ್ಯದಂತೆ ಬರಿ ಚರ್ಚೆ ನಡೆಯುತ್ತದೆ ಎಂದು ಹೇಳಿದರೆ ತಪ್ಪೇನು ವಿಶ್ವಸಂಸ್ಥೆಯಲ್ಲಿ ಇದೇ ರೀತಿಯಾಗಿ ಪ್ರಾಚ್ಯರಾಷ್ಟ್ರಗಳ ಬಗ್ಗೆ ಅನಾಸಕ್ತಿ ದುರ್ಲಕ್ಷ್ಯ. ಪಕ್ಷಪಾತಗಳು ನಡೆದರೆ ಹಿಂದಿನ ರಾಷ್ಟ್ರಸಂಘದ ಹಣೇ ಬರಹದಂತೆ ಈ ವಿಶ್ವಸಂಸ್ಥೆಯ ಭವಿತವ್ಯವೂ ಆಗುವ ಸಂಭವ ಬಹಳಷ್ಟಿದೆ. [ಜಯ ಹಿಂದಾ]

★ ದೀರ್ಘಾಯುಷ್ಯದ ಮರ್ಮ ★

ಕಲಕತ್ತೆಯ ಪ್ರಸಿದ್ಧ ಡಾಕ್ಟರರಲ್ಲೊಬ್ಬರಾದ ಡಾ ಸುನಿಲ ಬೋಸ್ ಇವರು ತಾ 21-4-53ನೆ ನೇ ದಿವಸ ಅಲ್ಲಿಯ ರೋಟರಿ ಕ್ಲಬ್ಬಿನ ಸಭೆಯಲ್ಲಿ ವಿವರಿಸುತ್ತಾ 'ಮನುಷ್ಯನು ದೀರ್ಘಾಯುಷಿಯಾಗಲು ಸೌಮ್ಯ ಮತ್ತು ನಿಯಮಿತ ಜೀವನವು ಅವಶ್ಯವಾಗಿದೆ ಇತ್ತ ಕಡೆಗೆ ಈ ರೀತಿ ಇರುವುದಕ್ಕೆ ಸಾಧ್ಯವಾಗುವಂತಹ ಪರಿಸ್ಥಿತಿ ಹುಟ್ಟಿದೆ.

ನಮ್ಮ ಜೀವನ ಆಹಾರ ವಿಹಾರಗಳು ನಮ್ಮ ಆಯುಷ್ಯನ್ನು ಸಂಕುಚಿತಗೊಳಿಸುತ್ತಿವೆ ವೇಗ, ಆಶೆ, ಮತ್ತು ಡಾಯಬಿಟಿಸ್ (ಮಧು ಮೇಹ) ಮಂತಹ ರೋಗಗಳು ನಮ್ಮನ್ನು ದೀರ್ಘಾಯುಷ್ಯಕ್ಕೆ ಅಡ್ಡಿ ಬರುತ್ತವೆ.

ನಮ್ಮ ವ್ಯವಸನಗಳು ಪುನಃ ನಮ್ಮನ್ನು ಅಲ್ಪಾಯುಷಿಯನ್ನಾಗಿ ಮಾಡುತ್ತಿವೆ. ಬೀಡಿ, ಸಿಗರೇಟು ಸೇದವರು ಮಹಾ ಘಾತಕ ಚಟವಾಗಿದೆ. ಕರಿ ಕುಡಿಯುವದಕ್ಕಿಂತಲೂ ಈ ವ್ಯಸನವು ಹೆಚ್ಚು ಘಾತಕವಾದದ್ದೆಂಬುದು ಕಂಡು ಬಂದಿದೆ ಅಮೆರಿಕೆಯಲ್ಲಿ ಸ್ತ್ರೀಯರು ಇತ್ತ ಕಡೆಗೆ ಸಿಗರೇಟು ಸೇದಲು ಪ್ರಾರಂಭಿಸಿದ್ದಾರೆ. ಆ ಮೂಲಕ ಅವರಲ್ಲಿಯೂ ಗಂಡಸರಲ್ಲಿ ಕಂಡು ಬರುವ ಎದೆ ಜೇನೆಯೇ ಮೊದಲಾದವು ಪ್ರಾರಂಭವಾಗಿವೆ.

ಇತ್ತ ಕಡೆಗೆ ತಮ್ಮ ಆರ್ಥಿಕ, ಸಾಮಾಜಿಕ ಮೊದಲಾದ ಪರಿಸ್ಥಿತಿಯ ಮೂಲಕ ಮನುಷ್ಯನ ಮನಸ್ಸು ದುರ್ಬಲವಾಗಿ ಅವರ ಭಾವನಾ ಪ್ರಧಾನವಾಗುವಂತೆ ಮಾಡಿವೆ. ಈ ಭಾವನಾ ಉದ್ದೇಶವು ಮನುಷ್ಯನ ದೀರ್ಘಾಯುಷ್ಯಕ್ಕೆ ಭಂಗವನ್ನುಂಟುಮಾಡುತ್ತದೆ. ಎಂಬುದೇ ನೊದಲಾಗಿ ಹೇಳಿದರು.

ಹೊಸ ರೂಪದ ದಾಸ್ಯ

"ದಕ್ಷಿಣ ಆಫ್ರಿಕೆಯಲ್ಲಿ ಮಾಲನ್ ಸರಕಾರವು ವಹಿಸಿದ ವರ್ಣಭೇದ ನೀತಿಯು ಹೊಸ ರೂಪದ ದಾಸ್ಯವೇ ಆಗಿದೆ. ಬಿಳಿಯರು ಕರಿ ಜನರನ್ನು ಬೇರೆ ಬೇರೆ ಇಟ್ಟು ಅವರಿಗಾಗಿ ಎರಡು ಪ್ರತ್ಯೇಕ ಆಡಳಿತವೇ ನಡೆಯುವುದಾದರೆ ಆದಕ್ಕೊಂದು ಅರ್ಥವಿದೆ. ಕರಿ ಜನರನ್ನು ದುಡಿಸಿಕೊಳ್ಳುತ್ತ ಅವರಿಗೆ ಮೂಲಭೂತ ಅಧಿಕಾರಗಳನ್ನು ಕೊಡದಿರುವುದು ಕೊನೆಗೆ ದುರಂತದಲ್ಲಿ ಪರಿಣಮಿಸದೆ ಇರಲಾರದು" ಎಂದು ಕ್ಯಾಂಟರ್ಬರಿಯ ಆರ್ಚಬಿಶಪ್‌ರು ಹೇಳಿದ್ದಾರೆ.

—: ಬಳ್ಳಾರಿ ತಾಲೂಕು :—

ನ್ಯಾಯಾಧೀಶ ಮಿಶ್ರರ ವಿಚಾರಣೆ

ಬಳ್ಳಾರಿ ತಾಲೂಕಿನ ಭವಿಷ್ಯವನ್ನು ನಿರ್ಣಯಿಸಲು ಭಾರತ ಸರ್ಕಾರದವರು ಹೈದರಾಬಾದಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀಶಂಕರ ಮಿಶ್ರರವರನ್ನು ನಿಯುಕ್ತ ಮಾಡಿದ್ದರು. ಶ್ರೀ ಮಿಶ್ರರು ಬಳ್ಳಾರಿಗೆ 30-4-53 ಸಾಯಂಕಾಲ ಆಗಮಿಸಿ 6-5-53 ರವರೆಗೆ ಸಂಘ ಸಂಸ್ಥೆಗಳಿಂದ ಬಿನ್ನವತ್ತಳೆಗಳನ್ನು ಸ್ವೀಕರಿಸಿ 8-5-53 ರವರೆಗೆ ಸಂಭಾಷಣೆ – ಚರ್ಚೆಗಳಿಗವಕಾಶಕೊಟ್ಟು ಬಳ್ಳಾರಿಯಿಂದ ತೆರಳಿದರು.

20-5-53 ರೊಳಗಾಗಿ ಶ್ರೀ ಮಿಶ್ರರವರು ಬಳ್ಳಾರಿ ತಾಲೂಕಿನ ಬಗ್ಗೆ ತಮ್ಮ ವರದಿಯನ್ನು ಅರ್ಪಿಸಬೇಕು. ಇದನ್ನು ಭಾರತ ಸರ್ಕಾರದವರು ಪರಿಶೀಲಿಸಿ ತಮ್ಮ ನಿರ್ಣಯವನ್ನು ಕೊಡಬೇಕು. ಬಹುಶಃ ಪಂಡಿತ ನೆಹರೂರವರು ಲಂಡನ್ನಿಗೆ ಹೋಗುವ ಮುಂಚೆ ಭಾರತ ಸರ್ಕಾರದ ನಿರ್ಣಯವು (ಮೇ ತಿಂಗಳ ಅಂತ್ಯದೊಳಗಾಗಿ) ಹೊರಬೀಳಬಹುದು.

ಸುಮಾರು 300 ಸಂಘ ಸಂಸ್ಥೆಗಳು ಅನೇಕ ವ್ಯಕ್ತಿಗಳೂ ಶ್ರೀ ಮಿಶ್ರರವರಿಗೆ ಆಂಧ್ರ ಕರ್ನಾಟಕದ ಪರವಾಗಿ ತಮ್ಮ ವಾದಗಳನ್ನು ಹೇಳಿಕೆಯ ಮುಖಾಂತರ ಕೊಟ್ಟರು ಆಂಧ್ರ ಕನ್ನಡಿಗರಲ್ಲಿ ಸ್ಪರ್ಧೆ ಇದ್ದಂತೆ ಭಾಸವಾಗುತ್ತಿತ್ತು. ಅಲ್ಲಲ್ಲಿ ದೌರ್ಜನ್ಯ, ಕೃತ್ಯಗಳಾದವು. ಬೆಂಗಳೂರು ರೋಡಿನಲ್ಲಿ ಲಾಠಿ ಛಾರ್ಜಾಯಿತು. ಕೊಳಗಲ್ಲು, ಮೋಕಗಳಲ್ಲಿ ಕನ್ನಡಿಗರ ಮೇಲೆ ದಾಳಿಯಾಯಿತು. ಆಂಧ್ರ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಶ್ರೀ ಮಿಶ್ರರವರಲ್ಲಿ ದೀರ್ಘಕಾಲ ಚರ್ಚೆ ನಡೆಸಿ ತಮ್ಮ ತಮ್ಮ ಸಮರ್ಥನೆ ಮಾಡಿಕೊಂಡರು. ಜಿಲ್ಲಾ ಜೋಡೂ ಅಧ್ಯಕ್ಷರಾದ ಶ್ರೀ ವೈ. ಮಹಾಬಲೇಶ್ವರಪ್ಪ, ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಟಿ. ಸುಬ್ರಹ್ಮಣ್ಯಂ, ಆಂಧ್ರ ಪ್ರಾಂತೀಯ ಕಾಂಗ್ರೆಸ್ ಮುಖ್ಯರಾದ ಶ್ರೀ ಸಂಜೀವರೆಡ್ಡಿ, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಪ್ರಜಾ-ಸೋಶಿಯಾಲಿಸ್ಟ್ ಮುಖಂಡರಾದ ಶ್ರೀ ಟಿ. ಪ್ರಕಾಶಂರವರ ಪ್ರತ್ಯೇಕವಾಗಿ ಶ್ರೀ ಮಿಶ್ರರನ್ನು ಕಂಡು ತಮ್ಮ ವಾದ ಸರಣಿಯ ಪುಷ್ಟೀಮಾಡಿಕೊಂಡರು

ಯಾರೂ ಈ ಕೆಳಗಿನಂಶಗಳನ್ನು ಅಲ್ಲಗಳೆಯಲು ಸಮರ್ಥರಾಗಲಿಲ್ಲ.

1) ಬಳ್ಳಾರಿ ತಾಲೂಕಿನಲ್ಲಿ ಕನ್ನಡಿಗರು ಅಧಿಕ ಸಂಖ್ಯಾಕರಿದ್ದಾರೆ. ಜನಗಣನೆ ಪ್ರಕಾರಕ್ಕೆ ಕನ್ನಡಿಗರು ಶೇಕಡಾ 54 ಇದ್ದಾರೆ.

2) ಬಳ್ಳಾರಿ ತಾಲೂಕಿನಲ್ಲಿ ಆಂಧ್ರರು ಶೇಕಡ 26 ರಷ್ಟು ಇದ್ದಾರೆ.

3) ಬಳ್ಳಾರಿ ತಾಲೂಕು ಹಳ್ಳಿಗಳಲ್ಲಿ ಶೇಕಡ 90 ರಷ್ಟು ಕನ್ನಡಿಗರಿದ್ದಾರೆ.

4) ಬಳ್ಳಾರಿ ನಗರದ ಅಧಿಕಾರಿ ವರ್ಗ ಪೋಲೀಸ್ ಪಡೆ, ಜೂನಿಯರ್ ಸರ್ವೆ ಶಾಲೆ, ಬಾಲ್ಸ್ ಟಿಲ್ ಶಾಲೆ, ತೆಲುಗು ಟ್ರೈನಿಂಗ್ ಶಾಲೆ ವಗೈರೆಗಳಲ್ಲಿರುವ ಸಾವಿರಾರು ಆಂಧ್ರರು ಜನಗಣನೆಯಲ್ಲಿ ಸೇರಿದ್ದಾರೆ.

5) ಬಳ್ಳಾರಿಯ ಮುನಿಸಿಪಾಲಿಟಿಯಲ್ಲಿ ಎರಡೂ ಕಡೆಗಳಿಗೆ ಪುಷ್ಟಿ ಕೊಡುವವರಿದ್ದಾರೆ.

ಭಾರತ ಸರ್ಕಾರದವರು ಈ ಅಂಶಗಳನ್ನೆಲ್ಲಾ ಗುರ್ತಿಸಬೇಕು. ಬಳ್ಳಾರಿ ತಾಲೂಕನ್ನು ವಿಚಾರಣೆಗೆ ಗುರಿಪಡಿಸಿದುದು ಧನ್ಯತನ. ಈಗಲಾದರೂ ತಪ್ಪು ತಿದ್ದಿಕೊಂಡು ಬಹುಸಂಖ್ಯಾಕ ಕನ್ನಡಿಗರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕೆಂದು ಆಶಿಸುತ್ತೇವೆ.

ಕನ್ನಡ ಗ್ರಂಥಗಳಿಗೆ ಬಹುಮಾನ

ಉತ್ತಮವೆಂದು ನಿರ್ಣಯಿಸಲ್ಪಟ್ಟ ಪ್ರತಿ ಗ್ರಂಥಕ್ಕೆ ರೂ. 500 ರ ಬಹುಮಾನ.

ಮದ್ರಾಸು ಸರಕಾರವು ಕನ್ನಡದಲ್ಲಿ ಉತ್ತಮ ಗ್ರಂಥಗಳಿಗೆ 1953 ರಲ್ಲಿ ಕೊಡುವ ಬಹುಮಾನದ ಬಗ್ಗೆ ಗ್ರಂಥಗಳನ್ನು ಕಳುಹಿಸುವವರು 31-7-53 ರ ಒಳಗೆ ಅವುಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ. ಪುಸ್ತಕಗಳು 1913 ರಲ್ಲಿ ಅಥವಾ ಆ ಮೇಲೆ ಪ್ರಕಟವಾದುವುಗಳಾಗಬೇಕು. ಕೈ ಬರಹದ ವೃತಿಗಳನ್ನು ಕಳುಹಿಸಬಹುದು.

ವಿಷಯಗಳು :–

1) ಯಕ್ಷಗಾನ 2) ಪದ್ಯ 3) ವಿಮರ್ಶೆ

ನಿಯಮಗಳು :–

1) ಮದ್ರಾಸು ಸಂಸ್ಥಾನದಲ್ಲಿರುವ ಗ್ರಂಥಕರ್ತರು ಮಾತ್ರ ಪುಸ್ತಕಗಳನ್ನು ಕಳುಹಿಸತಕ್ಕದ್ದು 2) ಅಚ್ಚಾದ ಪುಸ್ತಕಗಳಾದರೆ ನಾಲ್ಕು ಪ್ರತಿಗಳನ್ನು ಕಳುಹಿಸಬೇಕು. ಕೈ ಬರಹದ ಪುಸ್ತಕವಾದರೆ ಒಂದೇ ಪ್ರತಿ ಕಳುಹಿಸಿದರೆ ಸಾಕು. ಆದರೆ ಸ್ಪರ್ಧೆಗಾಗಿ ಕಳುಹಿಸಿದ ಪುಸ್ತಕಗಳನ್ನು ಹಿಂದೆ ಕಳುಹಿಸಲಾಗುವುದಿಲ್ಲ.

ಪುಸ್ತಕಗಳನ್ನು ಕಳುಹಿಸಬೇಕಾದ ವಿಳಾಸ :–

ಕಾರ್ಯದರ್ಶಿ
ಕರ್ನಾಟಕ ಸಂಘ
16, ವೀರಾಸ್ವಾಮಿ ಪಿಳ್ಳೈ ಬೀದಿ
ಎಗ್ಮೋರ್, ಮದ್ರಾಸ್ 8.

NOTICE

THE GENERAL ASSURANCE SOCIETY LTD.
AJMER.

Notice having been given of the loss of policy No 139216 on the life of Mr. *P Venkatesulu S/o P. Venkata Swamy* Circle Inspector's writer 686 Bellary a duplicate copy of the said policy will be issued if no objection is received by us within one month from this date.

Ajmer
Date 10-5-53

P. M. DALAL
General Manager.

ಕನ್ನಡಿಗರ ರಾಗಿ ಮುದ್ದೆಯು ಪ್ರಭಾವಕ್ಕೆ ಬಂಗವೆ?

ಕಾಲ ಚಕ್ರದ ದವಡೆಯಲ್ಲಿ ಕನ್ನಡಿಗರು ದಿನ ಕಳೆದಂತೆ ಸಣ್ಣಾಗುತ್ತಿರುವರಲ್ಲದೆ ಮೇಲಿಂದ ಮೇಲೆ ಬರುತ್ತಿರುವ ಕಷ್ಟಗಳ ಕಡಲುಗಳಿಂದ ಯಾವ ಬಗೆಯಾಗಿ ಪಾರಾಗಬೇಕೆಂಬ ಚಿಂತೆ, ಪ್ರತಿ ಕನ್ನಡಿಗನ ಮನಸ್ಸನ್ನು ಸೆಳೆಯಿರುತ್ತದೆ. ಮೊಗಲರ ಆಡಳಿಕೆಯಿಂದ ಕನ್ನಡನಾಡಿನ ತಲೆಯು ಸಂಪೂರ್ಣ ಹಾಳಾಗಿದ್ದಲ್ಲದೆ ಬ್ರಿಟಿಷರ ಆಡಳಿಕೆಯಿಂದ ೭೨ ರಾಜ್ಯಾಧಿಪತಿಗಳ ಕೈಯ್ಯಲ್ಲಿ ಸಿಕ್ಕು ಬಿಂಡಾಗಿ ಕಡೆಗೆ **ಮಹಾತ್ಮ ಗಾಂಧೀಜಿಯವರ** ನೇತೃತ್ವದಿಂದ ಸ್ವರಾಜ್ಯ ದೊರೆತು, ಪಟ್ಟಿ ಶಿಷ್ಯರಾದ **ವೀರ ವಲ್ಲಭ ಭಾಯಿಪಟೇಲರವರ ಚಾಣಾಕ್ಷ ನೀತಿಯಿಂದ,** ೫ ರಾಜ್ಯಾಧಿಪತಿಗಳ ಕೈಯ್ಯಲ್ಲಿರುವಂತೆ ಮಾಡಿದ್ದಾಗ್ಯೂ ಗತ್ತಿನ ಪರಂಗಿಯವರು ಕಲಿಸಿ ಹೋದ ವೈಷಮ್ಯ ಮತ್ತು ಸಾತ್ಸರ್ಯ ಭಾವನೆಗಳು ಮಾಜದೆ, ಮಾತೃಭಾಷಾಭಿಮಾನವನ್ನು ಮರೆಯಿಸಿ, ಪರಭಾಷೆಗೆ ಶರಣು ಹೊಡೆಯುವ ನೀಚ ಸಂಕಲ್ಪ ಭಾವನೆ ಕನ್ನಡಿಗರಲ್ಲಿ ಮೂಡಿಸುತ್ತಿದ್ದಾರೆ. ತೆಲಗರವರು ಸಂಪೂರ್ಣ ಸ್ವಾರ್ಥ ಸಾಧಕರಾಗಿರುವರು. ಇದನ್ನು ವಿಶಾಲ ದೃಷ್ಟಿಯಿಂದ ವಿಚಾರ ಮಾಡಿದರೆ ಕನ್ನಡಿಗರ ವೈಭವ, ಕಲಾ, ಶಿಲ್ಪ, ಮತ್ತು ಸಾಹಿತ್ಯ ಮೊದಲಾದುವುಗಳಲ್ಲಿ ಹಿಂದುಳಿದವರಲ್ಲೆಂದು ಇತಿಹಾಸವೇ ಸಾಕ್ಷಿಯಾಗಿರುತ್ತದೆ.

ರಾಗಿ ಮುದ್ದೆಯ ನಾಡಿನವನು

ಪ್ರಪಂಚದ ನ್ಯಾಯಾಸ್ಥಾನ ಕಛೇರಿಯಲ್ಲಿ ನಡೆವ ತೀರ್ಪನ್ನು ಕೊಡುವ ಮುಖ್ಯ ನ್ಯಾಯಾಧೀಶರಾದ ಶ್ರೀ ಬೆಣಗಲ್ಲು ನರಸಿಂಗರಾವ್, ಯಂತ್ರಗಳ ಸರಿಪಡಿಸುವುದರಲ್ಲಿ ಶ್ರೇಷ್ಠರೆಂದು ಅನೇಕ ರಾಷ್ಟ್ರಗಳಿಂದ ಪ್ರಸಿದ್ಧಿ ಪಡೆದ ಸರ್ ವಿಶ್ವೇಶ್ವರಯ್ಯನವರು, ಸ್ವತಂತ್ರ ಭಾರತದ ಮೊದಲನೇ ಸೇನಾಧಿಪತಿಗಳಾಗಿದ್ದ ಜೇಜಂ ಕರಿಯಪ್ಪನವರು, ನಾಣ್ಯ ಖಾತೆಯ ಗೌವರ್ನರ್ ಆಗಿರುವ ಶ್ರೀ ಬೆಳಗಲ್ಲು ರಾಮರಾವ್, ಮಧ್ಯವರ್ತಿ ಸರಕಾರದಲ್ಲಿ ೫ ವರ್ಷಗಳಿಂದ ಮಂತ್ರಿ ಪದವಿ ವಹಿಸಿ, ಬಿಹಾರ ಪ್ರಾಂತದ ಗೌರ್ನರರಾಗಿರುವ ಶ್ರೀ ರಂಗನಾಥ ದಿವಾಕರರು ಮತ್ತು ಪ್ರಪಂಚದ ಎಲ್ಲಾ ಮಂತ್ರಿ ಮಂಡಳಗಳಲ್ಲಿ ಅತಿ ಚಿಕ್ಕವಯಸ್ಸಿನ (26 ವರ್ಷದ) ಶ್ರೀ ಶಂಕರದೇವ ಸಾಮಾಜಿಕ ಸುಧಾರಣಾ ಖಾತೆ ಹೈದರಾಬಾದ್ ಸರಕಾರ) ಮೊದಲಾದ ಕನ್ನಡಿಗರು ರಾಗಿ ಮುದ್ದೆಯ ನಾಡಿನವರಲ್ಲವೆ?

ಅಕ್ಕಿ ಅನ್ನದ ಗಾಂಪ!

ಕನ್ನಡ ಕಲಾ ಕೌಶಲ್ಯವಲ್ಲದೆ ಮಹಾರಣರಾದ **ಶ್ಯಾಮಿ ವಿದ್ಯಾರಣ್ಯ, ಬಸವೇಶ್ವರ, ಕುಮಾರವ್ಯಾಸ, ರನ್ನ, ಪಂಪ, ಮತ್ತು ಸರ್ವಜ್ಞ** ಮೊದಲಾದ ಕೀರ್ತಿಪುರುಷರು ಹುಟ್ಟಿ ಬಾಳಿದ ಕನ್ನಡನಾಡಿನ ಒಂದಂಗುಲ ಸಹ ಆಂಧ್ರರ ಉಡಿಯಲ್ಲಿ ಕುಂಬಲು ಸಾಧ್ಯವಿಲ್ಲೆಂಬುವನ್ನು ಬಳ್ಳಾರಿ ಭವಣೆಯನ್ನು ಬರೆಯುಲು ಬಂದ ಶ್ರೀ ಮಿಶ್ರರಾಜೇಬದಗೇ ತಿಳಿಸಿದ್ದಾರೆ.

ಮಿತಿಮೀರಿದ ಅನ್ಯಾಯ?

ಆದವಾನಿ, ಆಲೂರು, ಮತ್ತು ರಾಯದುರ್ಗ ತಾಲ್ಲೂಕುಗಳು ಸಂಶಯಾಸ್ಪದವಾದ ಪುನರ್ವಿಭಾಜನೆಯ ಪ್ರದೇಶವೆಂದು ಬಳ್ಳಾರಿ ತಾಲೂಕಿನ ಬಗ್ಗೆ ಮುಂದೆ ವಿಚಾರ ಮಾಡಲಾಗುವುದೆಂದು, ಮುಖ್ಯ ಪ್ರಧಾನ ನೆಹರೂರವರ ಹೇಳಿಕೆಯಿಂದ ಕನ್ನಡ ಕುಲಕ್ಕೆ ಅಮೋಘವಾದ ಪೆಟ್ಟು ಪಾಕೆ ಕನ್ನಡನಾಡಿನಲ್ಲಿ "ಅಶಾಂತ ವಾತಾವರಣ" ಉದ್ಭವಿಸಲುಸುಕೂಲವಾಗಿರುತ್ತದೆ. ಅಲ್ಲದೆ ಮತ್ತೊಮ್ಮೆ ರೊಚ್ಚಿಗೇಳುವಂತೆ ಬಳ್ಳಾರಿ ತಾಲೂಕಿನ ಭವಿತವ್ಯ ಮಾತ್ರ ಕಂಡು ಹಿಡಿಯಲು ಹೈದ್ರಾಬಾದ ಸಂಸ್ಥಾನದ ಮುಖ್ಯ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀಶಂಕರ ಮಿಶ್ರರವರನ್ನು ಈ ತಿಂಗಳಲ್ಲಿ ವಿವರಗಳನ್ನು ಪಡೆಯಲಿಕ್ಕಾಗಿ ಕಳುಹಿಸಿರುವರು.

ಮಿಶ್ರರ ಯಾತ್ರೆ

ನ್ಯಾಯಾಧೀಶ ಮಿಶ್ರರವರ ಸಂಚಾರ ಯಾತ್ರೆಯಲ್ಲಿ, ಕನ್ನಡ ಕುಲ ಕೀರ್ತಿಗೆ ಪಾತ್ರರಾದ ಬಳ್ಳಾರಿಯ ಕನ್ನಡಿಗರು ಎಲ್ಲಾ ಗ್ರಾಮಗಳಲ್ಲಿ ತಮ್ಮ ನಿಜ ಪತಾಕೆಯನ್ನು ಶಾಂತ ಚಿತ್ತದಿಂದ ಹಾರಿಸಿ ಬಂದ ಅತಿಥಿಗಳನ್ನು ಸನ್ಮಾನದಿಂದ ಯುಕ್ತ ಹೇಳಿಕೆಗಳಿಂದ ಆಹ್ವಾನಿಸಿ ಮಿಶ್ರರವರು ಗೋಧಿಯ ರುಚಿಯನ್ನೇ ಹೆಚ್ಚಾಗಿ ಅರಿತವರಾಗಿರಲು **ರಾಗಿಮುದ್ದೆಯ ಬಲವನ್ನು ಮತ್ತು ಅಕ್ಕಿಯ ಅನ್ನದ ನಿಸ್ತ್ವವನ್ನು,** ತಾವು ತಂದ ಭೂತಕನ್ನಡಿಯಿಂದ ಶೋಧಿಸಿ ಸತ್ಯದ ತಿರುಳು ಹೊರಗೆಡವಿ, ಮರಾಠೆಯ ಜನರ ತಮ್ಮ ಜೊಲ್ಲನ್ನು ತಾವೇ ತಿರುತಿರುಗಿ ರುಚಿನೋಡುವಂತೆ ಮಾಡಿ ಬಳ್ಳಾರಿ ಯಾತ್ರೆಯ ಶ್ರೀಗಾರ ಸೊಬಗನ್ನು ಯಾತ್ರೆಯಲ್ಲಾದ ಖರ್ಚನ್ನು ಮೇ 26 ರ ದಿನಾಂಕದ ವರ್ತಮಾನ ಪತ್ರಗಳಲ್ಲಿ ಜಾಹೀರ ಪಡಿಸಿ ಕನ್ನಡ ಆಬಾಲ ವಯೋವೃದ್ಧರ ಆತ್ಮಕ್ಕೆ ತೃಪ್ತಿ ಪಡಿಸಲೆಂದು ನಿರೀಕ್ಷಿಸುವೆ.

ಶ್ಯಾಮಸುಂದರ ಚೇಳ್ಳಗುರ್ಕಿ.

ಜಮ್ಮು ಜನರ ಬೇಡಿಕೆ ಸರಕಾರ ಲಕ್ಷಿಸಬೇಕು

ಡಾ. ಶಾಮಪ್ರಸಾದರ ಹೇಳಿಕೆ

ರಾಷ್ಟ್ರೀಯ ಐಕ್ಯ ಕಾಪಾಡಿಕೊಳ್ಳುವಂತಹ ಮಹತ್ವದ ಪ್ರಶ್ನೆಯ ವಿಷಯವಲ್ಲಿ ನಮ್ಮ ಸರಕಾರದೊಂದಿಗೆ ಹೋರಾಡಬೇಕಾಗಿ ಬಂದಿದು ದುರ್ದೈವದ ಸಂಗತಿಯೆಂದು ಜನಸಂಘದ ಧುರೀಣರಾದ ಡಾ ಶ್ಯಾಮಪ್ರಸಾದ ಮುಕರ್ಜಿಯವರು ಇಂದಿಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಹೇಳಿದರು.

ಜಮ್ಮು ಜನರ ಬೇಡಿಕೆಯನ್ನು ಭಾರತ ಸರಕಾರವು ಲಕ್ಷಿಸಬೇಕು ಅದು ರಾಷ್ಟ್ರೀಯ ಐಕ್ಯಕ್ಕೆ ಸಂಬಂಧಿಸಿರುವದೆಂದೂ ಅವರು ಹೇಳಿದರು.

TUNGABHADRA DAM A 'PROHIBITED AREA"

ತುಂಗಭದ್ರಾ ಯೋಜನೆಯ ಪ್ರದೇಶಕ್ಕೆ ಯಾರೂ ಹೋಗುವಂತಿಲ್ಲ

ಬಳ್ಳಾರಿ ಜಿಲ್ಲಾ ಹೊಸಪೇಟೆ ತಾಲೂಕದಲ್ಲಿನ ತುಂಗಭದ್ರಾ ಯೋಜನೆಯ ಕೆಲಿಯ ಪ್ರದೇಶ – ವರ್ಕ್‌ಷಾಪ್‌ಗಳ ಬಳಿಯಾರು ಸುಳಿಯದಿರತಕ್ಕದ್ದಲ್ಲೆಂದೂ ಅವು ನಿಷೇಧ ಪ್ರದೇಶಗಳೆಂದೂ, ಇಂಡಿಯಾ ಸರ್ಕಾರದ ಸೂಚನೆಯಂತೆ ಭಾರತ ಸರ್ಕಾರವು ಒಂದು ಸ್ಪಷ್ಟಟಣೆಯನ್ನು ಹೊರಡಿಸಿದೆ. ಬಳ್ಳಾರಿ ಜಿಲ್ಲಾ ಕಲೆಕ್ಟರವರಿಂದ ಪರ್ಮಿಟ್ ಪಡೆದು ಸರ್ಕಾರದವರು ವಿಧಿಸುವ ನಿರ್ಬಂಧಗಳಿಗೊಳಗಾಗಿ ಅದನ್ನು ಸಂದರ್ಶಿಸಲಿಚ್ಛಿಸುವವರು ಅಲ್ಲಿ ಹೋಗಬಹುದು.

ಅಲ್ಲಿ ಕೆಲಸನಾಡುವ ಕೂಲಿಕಾರರಿಗೂ ಅಧಿಕಾರಿಗಳಿಗೂ ಪೋಲೀಸ್, ಮಿಲಿಟರಿ ಮತ್ತು ಮ್ಯಾಜಿಸ್ಟ್ರೇಟರಿಗೂ ಇದು ಅನ್ವಯಿಸುವುದಿಲ್ಲ.

ಯುದ್ಧ ಮುಗಿಸುವುದು ರಶಿಯಾದ ಮಾತಿನಲ್ಲಿದೆ

ಸಂಯುಕ್ತ ರಾಷ್ಟ್ರಸಭೆಯ ಸಾಧಾರಣ ಸಭೆಯು ಮುಂದೆ ವಹಿಸಿಕೊಂಡು ತ್ಯಾಗ, ಆ ಸಭೆಗೆ ಅಮೇರಿಕೆಯ ಪ್ರತಿನಿಧಿಯಾದ ಶ್ರೀ. ಹೆನ್ರೀ ಕೆಬೊಟ್‌ಲಾಜ ಇವರು "ರಶಿಯಾ ದೇಶವು ಕೋರಿಯಾದಲ್ಲಿಯ ಉತ್ತರಭಾಗದ ಯೋಧರಿಗೆ ಪ್ರತ್ಯಕ್ಷ ಸಹಾಯ ಮಾಡುತ್ತಿಟ್ಟೆ ಇಂದು ರಶಿಯಾದಲ್ಲಿ ಅಡಳಿತದ ಸೂತ್ರಗಳನ್ನು ವಹಿಸಿದವರು ನುಸಿಸ್ಸು ವಹಿಸಿದರೆ ಕೋರಿಯಾ ಯುದ್ಧವನ್ನು ಅವರು ಬೇಕಾದಾಗ ಮುಗಿಸಬಹುದು." ಎಂದು ಹೇಳಿದರಲ್ಲವೆ ಕೆಲವು ದಿನ ಹಿಂದೆ ಸಂಗತಿಗಳನ್ನು ಹೇಳುತ್ತ ಅಮೇರಿಕೆಯು ರಶಿಯಾದ ಬಗ್ಗೆ ಮುಂದೆ ಮಾಡುತ್ತಿರುವ ಆಕ್ಷೇಪಣೆಗಳನ್ನು ವಿವರೀಕರಿಸಿದರು.

೧) ಉತ್ತರ ಕೋರಿಯಾದವರು ಸ್ವಾರಂಭದಲ್ಲಿ ರಶಿಯಾ, ಚೀನಾ ಬಹುವಾಗಿ ಉತ್ತೇಜನ ಕೊಟ್ಟಿತು. ಇವರ ಸೈನ್ಯಕ್ಕೆ ಶಿಕ್ಷಣ ಕೊಟ್ಟಿತು. ವಿತ್ತ ಅವರಿಗೆ ಮುನ್ನ ಸಾಮಗ್ರಿಯನ್ನು ಪೂರೈಸಿತು. ವಿಮಾನದ ಸೈನಿಕರು, ಟಿಳಿಲು ಟ್ಯಾಂಕುಗಳು ಮತ್ತು ಇತರ ರಸ್ತ್ರಗಳನ್ನು ಪೂರೈಸಿತು.

೨) ಆಗಾಗಲೆಲ್ಲಿ ಉತ್ತರ ಕೋರಿಯಾದ ಸೈನಿಕರು ಹತಾಶರಾಗಿ ಯುದ್ಧಮಾಡುತ್ತಿರುವುದು ಗುಂಟ ಓಡುತ್ತ, ಅವೇ ಆಗಾಗ ರಶಿಯಾ ಪ್ರವೇಶಿಸುತ್ತಿದ್ದ ಚೀನೀ ಕಮ್ಯೂನಿಸ್ಟ್ ಸೈನಿಕರ ಹಿಂದೆ ಅಡಗಿಕೊಂಡರು. ಮಂಚಿನ ಚಳಿಗಾಲದಲ್ಲಿ ಅವರು ಪುನಃ ರಣರಂಗಕ್ಕೆ ಬಂದರು. ಆಗ ಅವರು ಪುನಃ ಸುಸಜ್ಜಿತರಾಗಿದ್ದರು. ಜನ ಬಲಿಕೊಂಡಿದ್ದರು ಮತ್ತು ರಶಿಯಾ ದಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿದ್ದರು.

೩) ರಶಿಯಾ ಈ ರೀತಿ ಸಹಾಯವನ್ನು ಕೋರಿಯಾ ಯುದ್ಧಕ್ಕೆ ಒಂದೇ ಸವನೆ ಮಾಡುತ್ತಿದೆ ಮತ್ತು ಅಮೆರಿಕದ ಆಯುಷ್ಯವನ್ನೂ ಮತ್ತು ಪ್ರಾಣಾಮವನ್ನೂ ಬೆಳೆಸುತ್ತಿದೆ.

೪) ಚೀನೀ ಕಮ್ಯುನಿಸ್ಟ್ ಸೈನಿಕರು ಮೊದಲು ಕೋರಿಯಾ ಯುದ್ಧರಂಗಕ್ಕೆ ಸರ್ವಸಾಧಾರಣ ಶಸ್ತ್ರಸ್ತ್ರಗಳೊಡನೆ ಬಂದಿದ್ದರು. ಈಗ ಅವರು ಒಳ್ಳೇ ಸುಸಜ್ಜಿತರಾಗಿದ್ದಾರೆ. ಹೀಗಾದುದು ರಶಿಯಾದ ಸಹಾಯದಿಂದ.

೫) ಕೋರಿಯಾ ಸಮುದ್ರದಿಂದ ಹೊರತೆಗೆಯಲ್ಪಟ್ಟ ಮತ್ತು ಸಮುದ್ರದಿಂದ ದಂಡೆಗೆ ತಂದು ಒಗೆಯಲ್ಪಟ್ಟ ಎಲ್ಲ ನಮುದ್ರ ಸುರಂಗ (ಮೈನ್ಸ್) ಗಳು ರಶಿಯಾದಲ್ಲಿ ರಚಿಸಿದಂಥವೇ ಇವೆ.

೬) ಅಮೇರಿಕೆಯ ಸೈನ್ಯವನ್ನು ಕೋರಿಯಾದಲ್ಲಿ ಎದುರಿಸುತ್ತಿರುವ ವಿಮಾನಗಳು ಎಮ್. ಐ. ಜಿ. ೧೫ ಎಸ್ ಎಂಬ ಹೆಸರುಳ್ಳವಾಗಿವೆ ಇವೆಲ್ಲವೂ ರಶಿಯಾದಲ್ಲಿ ರಚಿತವಾದಂಥವೇ ಇವೆ.

೭) ಇತ್ತಲಾಗಿ ಒಂದು ಹೊಸ ತರಹದ ವಿಮಾನವು ಕೋರಿಯಾದಲ್ಲಿ ಅಮೇರಿಕೆಯ ಸೈನ್ಯದ ಎದುರಿಸಿದೆ. ಅದರ ಹೆಸರು ಮಿಗ್-೧೫ ಎಂಬ ಹೆಸರುಳ್ಳದ್ದಾಗಿದೆ. ಅದೂ ರಶಿಯಾದ್ದೇ.

೮) ಚೀನೀ ಕಮ್ಯುನಿಸ್ಟ್ ಸೈನಿಕರಿಗೆ ಕೋರಿಯಾ ಯುದ್ಧದಲ್ಲಿ ಅಪಾರ ಹಾನಿಯಾಯಿತು. ಆದರೆ ಅವರು ಇಂದಿಗೂ ಸಬಲರಾಗಿಯೇ ಇದ್ದಾರೆ. ಅವರಲ್ಲಿ ಇಂದು ಐದಾರು ವಿಮಾನಗಳಿವೆ. ಅವುಗಳಲ್ಲಿ ಆರ್ಡರ್ ಜೆಟ್ ವಿಮಾನಗಳಿವೆ. ಇವೆಲ್ಲವೂ ರಶಿಯಾದಲ್ಲಿ ರಚಿತವಾದಂಥವೂ ಮತ್ತು ಕೋರಿಯಾಕ್ಕೆ ಆ ದೇಶದಿಂದ ಪೂರೈಸಲ್ಪಟ್ಟಂಥವೂ ಆಗಿವೆ.

೯) ಯುದ್ಧದಲ್ಲಿ ಹಾಳಾದ ವಿಮಾನದ ಸಲಕರಣಿಗಳಿಗಾಗಿ ರಶಿಯಾ ಸುಮ್ಮಾಂಯ ಕೊಡುತ್ತಿದೆ. ಇದುವರೆಗೆ, ಕೋರಿಯಾ ಯುದ್ಧದಲ್ಲಿ ಅಮೇರಿಕೆಯೊಡನೆ ಹೋರಾಡಲು ರಶಿಯಾ ದೇಶವು ಒಟ್ಟು ಳಳಂದಿ ವಿಮಾನಗಳನ್ನು ಕೊಟ್ಟಿದೆಯೆಂದೂ ಯುದ್ಧ ತಜ್ಞರು ಲೆಕ್ಕಹಾಕಿದ್ದಾರೆ.

೧೦) ಉತ್ತರ ಕೋರಿಯನವರಲ್ಲಿ ಇನ್ನೂ ವಿಮಾನ ವಿರೋಧೀ ತೋಪುಗಳು, ವಿಶೇಷ ಕಡಿಮೆ ಸಿಯಂತ್ರಿತ ಸಾಂಥವ, ರಶಿಯಾನವೇ ಆಗಿವೆ.

ಈ ಸಂಗತಿಗಳನ್ನು ಹೇಳಿ ಶ್ರೀ. ಲಾಜ್ ರವರು ಮುಂದೆ ಹೇಳಿದ್ದೇನೆಂದರೆ, "ಈ ಸಂಗತಿಗಳನ್ನು ಸುಳ್ಳು ಗೊಳಿಸಲು ನಾವೆಂದೆ ಒಬ್ಬರು ನಾವು ರಶಿಯಾಕ್ಕೆ ಆಹ್ವಾನವನ್ನೀಯುತ್ತೇವೆ. ಕೋರಿಯಾ ಯುದ್ಧವನ್ನು ಗಾಂಭೀರ್ಯದಿಂದ ನಿಷ್ಪಕ್ಷಪಾತದಿಂದ ಪರಿಶೀಲಿಸಲು ರಶಿಯಾ ದೇಶವು ಹೇಗೆ ಯತ್ನಿಸುತ್ತಿದೆ ಎಂಬುದು ಈ ಸಂಗತಿಗಳಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ನಾವೆಲ್ಲಿ ಸ್ಥಾನಿಕ ಸೈನಿಯನ್ನು ಎದುರಿಸುತ್ತಿಲ್ಲ. ಚೀನೀ ಕಮ್ಯುನಿಸ್ಟ್ ಸೈನಿಕರನ್ನು ಅವರಿಗೆ ರಶಿಯಾದಿಂದ ಸಿಗುತ್ತಿರುವ ಶಸ್ತ್ರಾಸ್ತ್ರಗಳನ್ನೂ ಎದುರಿಸ ಬೇಕಾಗಿದೆ.

ಇವೆಲ್ಲ ಸಂಗತಿಗಳನ್ನು ಇಡೀ ಜಗತ್ತು ಬಲ್ಲದು. ಚೀನವು ಆ ಯುದ್ಧಕ್ಕೆ ತನ್ನ ಸೈನಿಕರನ್ನು ಕಳಿಸದಿದ್ದರೆ ಮತ್ತು ರಶಿಯ ದೇಶವು ಆ ಸೈನಿಕರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸದಿದ್ದರೆ ಆ ಯುದ್ಧವು ಎಂದೋ ಮುಗಿದು ಹೋಗುತ್ತಿತ್ತು. ಆದರಿಂದ ಈ ಯುದ್ಧವನ್ನು ಮುಗಿಸಲು ರಶಿಯಾ ಇಚ್ಛಿಸಿದರೆ ಬೇಕಾದಷ್ಟಕ್ಷಣ ಅದು ಹಾಗೆ ಮಾಡಬಲ್ಲದು.

ವೀರ ಕನ್ನಡನಾಡು

(ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು. ಎಂಬಂತೆ)

ವಿಜಯಿಯಾಗಲಿ ನಮ್ಮ
ವೀರ ಕನ್ನಡನಾಡು
ವೀರ ಗಂಗೆ ಕದಂಬ
ರುದಿಸಿದೀ ವರನಾಡು.
ನರ ವಿದ್ಯಾರಣ್ಯರಿಗೆ.
ಪ್ರೊಲಿದ ಮಾತೆಯು ಬೀಡು.
ವಿಜಯ ನಗರದ ವೀರ,
ವರ ಜನನಿಯನಾಡು. ||೧||

ಪೌರುಷದ ಪುಲಿಕೇಶಿ.
ಶ್ರೀಕ್ಷನುದಿಸಿದ ನಾಡು
ರಾಷ್ಟ್ರದಿಂ ರಂಜಿಸಿದ,
ರಾಷ್ಟ್ರ ಕೂಟರ ಬೀಡು.
ಹೊಯ್ಸಳೋದಯ ಎನಿಪಂತೆ,
ಹೊಯ್ಸಳರಾಳಿದ ನಾಡು. ||೨||

ಬಲದಿಂವಲಾಳಿದಾ,
ಬಲ್ಲಾಳರ ಬೀಡು.
ಒಲ ಭೀಮನೆಂದಿಸಿಗೀ,
ಬುನನೇನ್ಸರಿಯನಾಡು.
ಕಲ್ಲಲ್ಲಿ ಕಲೆಯಾಗಿಧ
ಕನ್ನಡಾಂಬೆಯ ಬೀಡು ||೩||

ಮಾನವರ ಮನಕೆಳೆವ,
ಮಾಧವನ ನೆಲೆವೀಡು.
ಮದದಿಂದ ಮೆರೆಯುತಿಪ
ಪೈಸೂರ ಮುದವೀಡು.
ಕಾವೆ ಬಳ್ಳಾರಿ ಲಕ್ಷ್ಮೀ –
ನಾರಾಯಣನ ನಾಡು ||೪||

– ನ. ಮು. ದೇಶಾಯಿ.

.... ವಿಮಾನ ಅಪಘಾತ ....

ಬ್ರಿಟನ್ನಿನಲ್ಲಿ ಜೊಪದಾಗಿ ಕಂಡು ಹಿಡಿವ ಕಾವೆಟ್ ಜೆಟ್ ಪ್ಲೇನ್ ಕಳ್ಳ ತ್ಯಾ ಬಳಿ ಅಪಘಾತಕ್ಕೆ ಕಳೆದ ಗುರುವಾರ ಗುರಿಯಾಗಿ 43 ಜನರು ಮರಣ ಹೊಂದಿದರು.

ಬಳ್ಳಾರಿಯಲ್ಲಿ
ಯುವಕರ ಆಟಗಳು
ಮಲ್ಲಸಜ್ಜನ ವ್ಯಾಯಾಮ ಶಾಲೆಯ ಆಶ್ರಯದಲ್ಲಿ

ಬಳ್ಳಾರಿ ಮಲ್ಲಸಜ್ಜನ ವ್ಯಾಯಾಮ ಶಾಲೆಯ ಆಶ್ರಯದಲ್ಲಿ ನಡೆದ ಯುವಕರ ಮಹೋತ್ಸವಕ್ಕೆ ಅಖಿಲ ಭಾರತ ಸ್ವರೂಪವಿಲ್ಲದಿದ್ದರೂ ಪ್ರಾಂತ ಸ್ವರೂಪವಿದ್ದಿತು. ಈ ಯುವಕ ಮಹೋತ್ಸವಕ್ಕೆ ಆಂಧ್ರ ಕರ್ನಾಟಕದ ವಿಪ ವಾತಾವರಣ ಪ್ರಭಾವಿದ್ದಿಲ್ಲ. ಇದಕ್ಕೆ ಸಾಕ್ಷಿಯೆಂಬಂತೆ ಜನರಲ್ ಕರಿಯಪ್ಪನವರಿಗೆ ಸಾವಿರಾರು ಆಂಧ್ರ ಕರ್ನಾಟಕ ಯುವಕರೂ ಇತರ ಜನರೂ ಸೇರಿ ಸನ್ಮಾನ ಮಾಡಿದುದು.

1-5-53 ರಿಂದ 5-5-53 ರವರೆಗೆ ಅತಿ ಯಶಸ್ವಿಯಾಗಿ ನಡೆದ ಈ ಮಹೋತ್ಸವದ ಪ್ರಾರಂಭೋತ್ಸವವನ್ನು ನೆರವೇರಿಸಿದ ಜನರಲ್ ಕರಿಯಪ್ಪನವರು ಸಂಸ್ಥಾಪಕರಾದ 'ಬಿಂದು' ರವರನ್ನು ಕರೆದು "It is a great day in your life," (ನಿಮ್ಮ ಜೀವನದಲ್ಲಿ ಇದು ಶ್ರೇಷ್ಠದಿನ) ಉದ್ಗಾರ ತೆಗೆದರು

ಯುವಕರ ಶಿಸ್ತು, ಸೌಜನ್ಯ, ನ್ಯಾಯಸ್ಥೆಯ ಪರಿಪೂರ್ಣತೆ, ನಿತ್ಯದ ಆಟಪಾಠಗಳ ಕ್ರಮ, ವೈಖರಿ, ಬಂದ ನೂರಾರು ಜನರ ಆತಿಥ್ಯ ಇವುಗಳಿಂದ ಎಲ್ಲರೂ ಮುಗ್ಧರಾದರು.

"ಪ್ರಾಂತೀಯತೆಯ ವಿಷವ್ಯಾಪ್ತಿಗೊಳಗಾಗಿ ಭಾರತದ ಮೂಲ ಸಮಸ್ಯೆಗಳನ್ನೇ ನಾವು ಮರೆಯಬಾರದು ರಾಜಕೀಯ ಸ್ವಾತಂತ್ರ್ಯದ ನಂತರ ಭಾರತದ ಆರ್ಥಿಕ ಪುನರ್ನಿರ್ಮಾಣಕ್ಕಾಗಿ ಹೆಣಗಬೇಕು. ಮಾನಸಿಕ ಮತ್ತು ದೈಹಿಕ ವಿಕಾಸಗಳನ್ನೊಳಗೊಂಡ ವ್ಯಾಯಾಮ ಕ್ರಮವನ್ನು ನೋಡಿ ನನಗೆ ಸಂತೋಷವಾಯಿತು. ನಿಮ್ಮ ಕಾರ್ಯವು ಯಶಸ್ವಿಯಾಗಲಿ" ಎಂದು ಜನರಲ್ ಕರಿಯಪ್ಪನವರು ಹರಸಿದರು.

ಬಾಸ್ಕೆಟ್ ಬಾಲ್, ಜೆ. ಪಿ. ಖಾಲಿ ರಿಜರ್ವ್ ಪೋಲೀಸು, ಚಿತ್ರದುರ್ಗ, ಜೊಂಗ ಊರು, ಸಂಡೂರು, ಮುನಿರಾಬಾದ್ ಹೊಸಪೇಟೆ. ಕೊಟ್ಟೂರು ಮತ್ತೆರೆ ಸ್ಥಳೀಯ ಸಂಸ್ಥೆಗಳ ಜೊಚಿನ ನಂದನೆಯನ್ನು ಸ್ಪರ್ಧಿಸಿ ಹಂಪೆಯಿಂದ ಬಂದ ಅಗ್ನಿಯು ಪಂಜಿನಿಂದ ಪೀಠಿಯ ಬಳಿ ಪ್ರಕಾಶದೀಪವನ್ನು ಬೆಳಕಿಸಿ ಜನರಲ್ ಕರಿಯಪ್ಪನವರು ವ್ಯಾಯಾಮ ಶಾಲೆಯ ಅಂಗಳದಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಮರ್ಪಿಸಿದರು.

ಬ್ಯಾಸ್ಕೆಟ್ ಬಾಲ್, ಜೆಡುಗುಡು, ಬ್ಯಾಡ್‌ಮಿಂಟನ್, ವಾಲಿಬಾಲ್, ಒಂದು ಮೈಲಿನರಗೂ ಓಟ, 10 ಮೈಲಿಗಳ ಬೇಗದ ಸೈಕಲ್ ಪ್ರಯಾಣ, ಥ್ರೈ ಜಂಪ್, ಲಾಂಗ್ ಜಂಪ್, ಕುಸ್ತಿ ಮತ್ತೆರೆ ಆಟಗಳ ಸ್ಪರ್ಧೆಗಳಲ್ಲಿ ಎಲ್ಲರೂ ಭಾಗವಹಿಸಿದ್ದರು. ಗೆದ್ದವರಿಗೆ ಬಹುಮಾನ ಹಂಚಲಾಯಿತು.

ಪತ್ರ ವ್ಯವಹಾರ :-

ಕರ್ನಾಟಕಕ್ಕೆ ಸೇರುವುದರಿಂದ ಬಳ್ಳಾರಿ ನಗರವು ಹಾಳಾಗುವುದಿಲ್ಲ.

ಕರ್ನಾಟಕದಲ್ಲಿ ಬಳ್ಳಾರಿ ನಗರವನ್ನು ಸೇರಿಸುವುದರಿಂದ ಅದು ಹಾಳಾಗುವದೆಂದು ಆಂಧ್ರದ ಪ್ರಚಾರ ಮಾಡಿದ್ದುಂಟು ಈಗಲೂ ಅಪರ ಸಂಜೀವಿಕೆಯು ಹಾಗಿದೆ. ನವನಾಗರೀಕತೆಯ ಈ ಕಾಲದಲ್ಲಿ ಯಾವ ಊರಿನಲ್ಲಿ ಹೆಚ್ಚಿನ ಅನುಕೂಲ ವಿರುತ್ತೋ ಅಲ್ಲಿ ಜನರು ನೆಲೆಸುವುದು ಸ್ವಾಭಾವಿಕವಾಗಿದೆ. ಈ ಕಾರಣ ಯಾವ ಕಟ್ಟಡವೂ ಖಾಲಿಯಾಗುವುದಿಲ್ಲ.

ಮೈಸೂರು ಸರ್ಕಾರವು ಇಲ್ಲಿ ತನ್ನ ಕೆಲ ಕಛೇರಿಗಳನ್ನಿಡುವುದರಲ್ಲಿ ಸಂದೇಹವೇ ಇಲ್ಲ. ಜಲ್ಲದೆ ಈಗ ಆಂಧ್ರ ಪ್ರದೇಶದಲ್ಲಿ ನೆಲಸಿರುವ ಅನೇಕ ಕನ್ನಡ ಶ್ರೀಮಂತರು ಬಳ್ಳಿರಿಯಲ್ಲಿ ತಮ್ಮ ವಾಸ ಸ್ಥಾನ ಮಾಡಿಕೊಳ್ಳಲು ಹವಣಿಸುತ್ತಿರುವರು ಹಾಲಕರ್ವಿ, ಹರ್ದಿಗೆರೆ, ಮೊಲಗ ವೇಲಿರೆಡ್ಡಿಗಳು ಬಳ್ಳಾರಿ ನಗರದಲ್ಲಿ ಅನೇಕ ಕಟ್ಟಡಗಳನ್ನು ಕೊಳ್ಳಲಿಲ್ಲವೆ? ಅದೇ ರೀತಿಯಲ್ಲಿಯೇ ಕನ್ನಡಿಗರಾದರೂ ಏಕೆ ಕೊಳ್ಳಬಾರದು? ಮಾರುವವರೂ ಕೊಳ್ಳುವವರೂ ಸದಾ ಕಾಲಕ್ಕೆ ಇದ್ದೇ ಇರುತ್ತಾರೆ ಇನ್ನೂ ವ್ಯಾಪಾರ ಸಂಬಂಧಗಳಿಗೆ ಜಾತಿ ಕುಲ ಭೇದಗಳಲ್ಲ. ಒಂದು ಪ್ರಾಂತದವರು ಇನ್ನೊಂದು ಪ್ರಾಂತದವರೊಡನೆ ವ್ಯಾಪಾರ ಮಾಡುವ ಪದ್ಧತಿಯು ಆರ್ಥಿಕದ ಮೇಲೆ ಅವಲಂಬಿಸಿದೆ. ಸಾಲ ಪಡೆದವರ ಒಳ್ಳೆಯ ಮೂಲ ನ್ಯಾಯವ್ಯವಹಾರವಿದ್ದರೆ ವ್ಯಾಪಾರವು ಅಭಿವೃದ್ಧಿಯಾಗಲೇಬೇಕು. ಇದು ಇತಿಹಾದಿಂದ ಚನ್ನಾಗಿ ವ್ಯಕ್ತವಾಗುತ್ತಲಿದೆ.

ಈ ಕಾರಣ, ಕಟ್ಟಡಗಳೂ ಖಾಲಿಯಾಗುವುದಿಲ್ಲ. ವ್ಯಾಪಾರವೂ ಪತನವಾಗುವುದಿಲ್ಲೆಂದು ನನ್ನ ನಂಬಿಕೆಯುಂಟು.

— ಬಳ್ಳಾರಿ ಕನ್ನಡಿಗ.

ಬಳ್ಳಾರಿ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

O. S. 44/53

ವಾದಿ :-

ಕೆ. ವೀರಭದ್ರಪ್ಪ ಅಂಡ್ ಸನ್ಸ್ ಜಾಯಿಂಟ್ ಫ್ಯಾಮಿಲಿ (ಮ್ಯಾನೇಜರ್ — ಕೆ. ವೀರಭದ್ರಪ್ಪ)

ಎರಡನೆ ಪ್ರತಿವಾದಿ :-

ಕಟ್ಟಿ ಶ್ರೀನಿವಾಸಶೆಟ್ಟಿ ತಂದೆ, ಕಟ್ಟಿ ರಂಗಯ್ಯಶೆಟ್ಟಿ ವಾಸಸ್ಥಾನ ಬಳ್ಳಾರಿ

ಪ್ರತಿವಾದಿಗಳು ವಾದಿಗೆ ಬರಿದು ಕೊಟ್ಟ ಪ್ರೊನೋಟಿನ ಸಂಬಂಧ 677-0-0 ರೂಪಾಯಿಗಳನ್ನು ಬಡ್ಡಿ ಖರ್ಚುಗಳ ಸಮೇತ ವಾಗಿ ವಸೂಲಿ ಮಾಡಿಕೊಳ್ಳಲು ಡಾವೆಯು ಹೂಡಲಾಗಿದ್ದು ಮೇಲ್ಕಾಣಿಸಿದ ಎರಡನೆಯ ಪ್ರತಿವಾದಿಯ ಹಾಜರಿಗಾಗಿ 15-6-53 ನೋಟ್ಸೆಯು ಹಾಕಲಾಗಿದೆ. ಆ ದಿನ ಸದರಿ ಎರಡನೆಯ ಪ್ರತಿವಾದಿಯು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ತನ್ನ ಆಕ್ಷೇಪಣೆ ತಿಳಿಸದಿದ್ದಲ್ಲಿ ಏಕಪಕ್ಷ ನಿರ್ಣಯವಾಗುವುದು.

ಜಿ. ಕಲ್ಲೂರಾವ್
ವಾದಿಯ-ಅಡ್ವೊಕೇಟ್

ಬಳ್ಳಾರಿಯಲ್ಲಿ ನೀರಿನ ಅಭಾವ

ಬಳ್ಳಾರಿ ನಗರದಲ್ಲಿ ಉಪ್ಪು ನೀರಿನ ಭಾವಿಗಳು ಬತ್ತುತ್ತಿವೆ. ಸಾಕಷ್ಟು ನೀರು ಹೊರೆಯುವದು ಅಸಾಧ್ಯವಾಗಿದೆ. ಕುಡಿಯುವ ನೀರಂತೂ ಬಹಳ ದುಸ್ತರ ಇಂಥ ಪರಿಸ್ಥಿತಿಯು ಕಳೆದ 50 ವರ್ಷಗಳಿಂದಲೂ ಇದ್ದಿಲ್ಲವೆಂದು ವೃದ್ಧರು ಹೇಳುತ್ತಿದ್ದಾರೆ

ಪ್ರಜಾಭಿಪ್ರಾಯ
ಳ. ಇಂದಿನ ಯುಗ

ಪ್ರಜಾಭಿಪ್ರಾಯ ಹೀಗೆ ಬೆಳೆಯುತ್ತಾ ಬಂದ ಹಾಗೆಲ್ಲ ವ್ಯಕ್ತಿಯು ಅಭಿಪ್ರಾಯ ಮತ್ತು ನಿರ್ಧಾರಗಳಿಗೂ ಬೆಲೆ ಬಂತು. ಹಿಂದಿನ ಕಾಲದಲ್ಲಿದ್ದ ಸಂಪ್ರದಾಯ ಶರಣತೆ ಅಳಿಯತು. ಇಂದಿನ ಜನ ಹಿಂದಿನ ಕಟ್ಟಳೆಲ್ಲವೂ ಶ್ರೇಷ್ಠವೆಂದು ಒಪ್ಪುವುದೇನು? ಎಂದಿಗೂ ಇಲ್ಲ. ಒಂದೊಂದರ ಯುಕ್ತಾಯುಕ್ತತೆಯನ್ನೂ ವಿಮರ್ಶಿಸುವುದು ಇಂದಿನ ರೀತಿಯ ತತ್ವ. ಅಂದರೆ ಇಂದು ವ್ಯಕ್ತಿಗೆ ಒಂದು ಸ್ವತಂತ್ರ ವಿನಿಮಯ ಮತ್ತು ವ್ಯಕ್ತಿತ್ವಕ್ಕೆ ಒಂದು ಬೆಲೆ ಇದೆ ಎಂದಂತಾಯಿತು ನಮ್ಮ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಂಬಂಧಗಳ ಎಲ್ಲೆ ವಿಸ್ತೃತವಾದುವು. ನಾವು ಇಂದು ಅಂತರ ರಾಷ್ಟ್ರೀಯ ಅಂಗಗಳ ಕಡೆ ಹೆಜ್ಜಾದ ನೋಟ ಬೀರಬೇಕಾಗಿದೆ. ಅಂತೆಯೇ ನೋಡುತ್ತಲೂ ಇದ್ದೇವೆ. ಎಲ್ಲಾ ಅಂಶಗಳನ್ನೂ ಸೇರಿಸಿ ನೋಡಲು ಮತ್ತು ಅರಿಯಲು ನಮಗೆ ಸಾಧ್ಯ ವಿಲ್ಲದಿರಬಹುದು. ಆದರೂ ವೃತ್ತಪತ್ರಿಕೆ, ಚಿತ್ರಪಟ, ರೇಡಿಯೋ ಮುಂತಾದವೇ ವಿಚಾರ ಪ್ರಸಾರ ಸಾಧನೆಗಳ ವಿಸ್ತರಣೆ ನಮ್ಮ ಮೇಲೆ ಬಲವಾದ ಪ್ರಭಾವ ಬೀರಿದೆ. ಇಂದು ಜನಾಭಿಪ್ರಾಯ ಪ್ರಭಾವಯುತ ಮತ್ತು ವಿಚಾರಪೂರ್ಣ ಎನಿಸಿದೆ.

ಜನಜೀವನ ಸಮಸ್ಯೆಗಳು ರಾಜಕೀಯದಿಂದ ಬಾಹ್ಯ ಎಂಬ ಅಭಿಪ್ರಾಯ ಇಪ್ಪತ್ತನೆಯ ಶತಮಾನದ ಆದಿಯಲ್ಲಾ ಜನರಲ್ಲಿ ಹರಡಿತ್ತು. ಸರ್ಕಾರದ ಕರ್ತವ್ಯವೆಂದರೆ ರಾಷ್ಟ್ರದ ವ್ಯವಹಾರ, ಶ್ರೀಮಂತ ಜನಸಂತತಿಗಳಲ್ಲಿ ರಾಜಕತ್ವಕ್ಕಾಗಿದ್ದ ಪ್ರತಿಸ್ಪರ್ಧೆಗಳನ್ನು ಸರಿಹೊಂದಿಸುವುದು. ಯಜ್ಞ ಧಾರ್ಮಿಕ ಭಿನ್ನಾಭಿಪ್ರಾಯಗಳಲ್ಲಿ ಸ್ವದೇಶ, ಇವು ವೈಯಕ್ತಿಕವಾಗಿತ್ತು. ಬಡತನ ನಿರುದ್ಯೋಗ, ಮುಪ್ಪಿನ ಕಷ್ಟ, ರೋಗ, ವಸತಿ, ಈ ಕಷ್ಟಗಳಿಗೂ ರಾಜಕೀಯಕ್ಕೂ ಏನು ಸಂಬಂಧ? ಎನ್ನುವ ಭಾವನೆ ಇತ್ತು.

ಕಾಲಕ್ರಮದಲ್ಲಿ ಈ ಭಾವನೆ ಬದಲಾಗಿ ಹೋಯಿತ್ತು. ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಜರ್ಮನಿಯ ಏಕೀಕರಣಕ್ಕೆ ಕಾರಣನಾದ ಬಿಸ್ಮಾರ್ಕ್ ಹೇಳಿದ "ಸಾಮಾಜಿಕ ಕಾಂತಿಯ ಕೋಟೆಲೆಯಿಂದ ನಾವಾಗಿ ರಾಜ್ಯ ಉಳಿಯಬೇಕಾದರೆ ಸಾಮಾಜಿಕ ಸೌಖ್ಯ ಗೆಲೆಗೊಳಿಸುವುದಂದ ಮಾತ್ರವೇ ಸಾಧ್ಯ ಎಂದು. ಸಾಮಾಜಿಕ ಸೌಖ್ಯ ಸ್ಥಾಪನೆಯೆ ರಾಷ್ಟ್ರದ ಪರಮ ಕರ್ತವ್ಯವೆಂದು ಇಂದು ಎಲ್ಲರೂ ಅಂಗೀಕರಿಸಿದ್ದಾರೆ. ವ್ಯಕ್ತಿಸ್ವಾತಂತ್ರ್ಯದ ಲಂಬಿಸಿರುವ ಅಪೇಕ್ಷಿತವ ಸಂಯುಕ್ತ ಸಂಸ್ಥಾಪನೆ ಈ ಕರ್ತವ್ಯವನ್ನೊಪ್ಪಿದೆ ಎಂಬ ಮೇಲೆ ಈ ವಿಷಯದಲ್ಲಿ ಹೆಚ್ಚು ಜಿಜ್ಞಾಸೆ ಏಕೆ? ಐರೋಪ್ಯ ರಾಷ್ಟ್ರಗಳೂ ಈ ನಡೆಯಲ್ಲಿ ನಡೆಯಲು ತೊಡಗಿವೆ. ಇದಕ್ಕೆ ಕಾರಣವೇನು? ಜನಾಭಿಪ್ರಾಯ, ಅದರ ಒತ್ತಾಯ.

ಜನಾಭಿಪ್ರಾಯ ಪುಷ್ಟಿಗೊಳ್ಳಲು ಸ್ವತಂತ್ರ ಪತ್ರಿಕೆಗಳ ಸಹಾಯ ಬಹುವಾಗಿ ಆಗಿದೆ. ಕ್ರಿ. ಶ. ೧೮೫೦ ನೇ ಶತಮಾನದಲ್ಲೇ ಅಮೆರಿಕಾದಲ್ಲಿ ಮುದ್ರಣಾಲಯಗಳು ಮತ್ತು ಕೊಂಡ ರೂಪ್ರಿ. ಶ ೧೮೫೦ ನೇ ಶತಮಾನದಿಂದಲೂ ವೃತ್ತಪತ್ರಿಕೆಗಳು ಕ್ರಮವಾಗಿ ಹೊರಟವು. ಕಾಲಕ್ರಮೇಣ ಇತ್ತ ಜನಾಭಿಪ್ರಾಯವು ಕೈಗನ್ನಡಿಯಾಗುತ್ತಾ ಬಂದುವು.

ಶಾಂತತೆಯನ್ನು — ಕಾಪಾಡಿರಿ

ಬಳ್ಳಾರಿ ಜಿಲ್ಲಾ ಕಲೆಕ್ಟರ್ ಸುಂದರಂ, ಮತ್ತು ಡಿ ಯಸ್. ಪಿ. ಸ್ವಾಮಿಯವರು ಆಂಧ್ರ-ಕರ್ನಾಟಕ ಮುಖಂಡರ ಸಭೆಗಳನ್ನು ಕರೆದು ಶಾಂತತೆಯನ್ನು ಕಾಪಾಡಿಕೊಂಡು ಬರಲು ಬೇಡಿದರು. ಅಧಿಕಾರಿಗಳು ತಟಸ್ಥ ಸ್ಥಿತಿಯನ್ನು ಪಾಲಿಸಿಕೊಂಡು ಸಲಹೆ ಸಭೆಯಲ್ಲಿ ಹೇಳಲಾಯಿತು.

ನೋಟುಗಳ ಮುಳ್ಳೆ

ಕಲಕತ್ತೆಯ ಹತ್ತರಿನ ಲಿಪ್ಸೀನುವರ ಎಂಬಲ್ಲಿ ಕ್ರಿ. ಗಿ-೪-೫೩ ರ ದಿನದಂದು ರೂ. ೫ ರೂ. ೧೦ ರೂ. ಗಳ ನೋಟುಗಳು ಒಂದು ಕೆತೆಗೆ ಮಾರಾಡಹತ್ತಿದವು. ಜನರು ಕಂಡು ಜನರು ಅವುಗಳನ್ನು ಪಡೆಯಹತ್ತಿ ಹಿಡಿಮ ಕೊಳ್ಳಹತ್ತಿದರು.

ಆ ಹಿಡಾಟವು ಮುಗಿದ ನಂತರ ಅವು ಎಲ್ಲಿಂದ ಬಂದಿರಬಹುದೆಂಬ ಬಗ್ಗೆ ಜನರಲ್ಲಿ ವಿಚಾರ ನಡೆಯಿತು ಕೊನೆಗೆ ಒಂದು ಕಾರಣವು ಇವುಗಳನ್ನು ಹಾರಬಿಟ್ಟುದು ಕಂಡುಬಂತು ಎಲ್ಲಿಂದಲೋ ನೋಟಿನ ಒಂದು ಕಟ್ಟನ್ನು ಅವು ತಂದಿತ್ತು. ಮುಂದೆ ಅದರ ಮಹತ್ವವು ಆದಕ್ಕೆ ತಿಳಿಯದ ಕಾರಣ ಆ ನೋಟುಗಳನ್ನು ಇಲ್ಲಿ ಬಿಟ್ಟಿತು.

ವೈದಿಕ ಧರ್ಮಕೀರ್ತಿಜಯ ಹೋ

ಮನುಷ್ಯನಲ್ಲಿ ಎಲ್ಲ ಆಸುರೀಭಾವನೆಗಳು ನಿರಾಕಾರವಾಗಿ ಆತನ ಹೃದಯದಲ್ಲಿ ದೇವಭಾವನೆಗಳು ಸುಳಿದಾಗ ಆತನೂ ರಾಷ್ಟ್ರವೂ ಕೂಡಿ ಉದ್ಧಾರವಾಗುತ್ತದೆ. ಈ ರೀತಿಯ ಸಾಧನೆಗೆ—ಸಿದ್ಧಿಗೆ—ಲೋಕದಲ್ಲಿ ಸರಲವಾದ ಮಾರ್ಗ ಶುದ್ಧವಾದ ಮಾರ್ಗವಿರುವುದು ಭಾರತೀಯ ವೇದ ಧರ್ಮದಲ್ಲಿ ಮಾತ್ರವೆಂದು ಹೇಳಬಹುದು. ಕಾಲದೋಷದಿಂದಲೋ ವಿದೇಶೀಯ ವಿದ್ಯಾದೋಷದಿಂದಲೋ ಪೂರ್ಣಾವಾದವನ್ನು ಮೆಚ್ಚಿ ದೇಶ ತನ್ನ ಅನುರಸಂಪತ್ತಾದ ಆತ್ಮವಿದ್ಯೆಯನ್ನು ಕಡೆಗಣಿಸುವುದು ಶೋಚನೀಯವಾಗಿದೆ. ಆದರೂ ನಮ್ಮ ಆತ್ಯಂತಿಕ ಕಲ್ಯಾಣಕ್ಕೆ ಏಕೈಕಮಾರ್ಗವಾದ ವೈದಿಕ ಧರ್ಮದ ಪ್ರಚಾರವನ್ನು ಮಾಡುವುದು ಪ್ರತ್ಯಕರ್ತವ್ಯವೆಂದು ಬಗೆದು ಕೆಲವು ವಿನೇಕಿಗಳು ತಕ್ಕ ಕಾರ್ಯಕ್ರಮಗಳಿಂದ ಧರ್ಮರಕ್ಷಣೆಯನ್ನು ಮಾಡುತ್ತಿರುವುದು ದೇಶದ ಪುಣ್ಯ. ಉಡುಪಿಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಈ ವರ್ಷದ ಆದಿಯಲ್ಲಿ ಅಖಿಲಭಾರತ ವೈದಿಕ ಸಮ್ಮೇಳನವನ್ನು ಜರುಗಿಸಿದ್ದೂ ವೈದಿಕ ಮುಖಮಂಡಲವನ್ನು ಸ್ಥಾಪಿಸಿದ್ದೂ ಇಂಥ ಒಂದು ಪುಣ್ಯತರವಾದ ಕಾರ್ಯವೆ. ಈಗ ಶೃಂಗೇರಿಯಲ್ಲಿಯೂ ಇಂಥದೆ ಒಂದು ಮಹಾಸಮಾರಂಭ ನಡೆಯಿತು. ಇಲ್ಲಿ ಲೋಕ ಕಲ್ಯಾಣಾರ್ಥವಾಗಿ ಅತಿರುದ್ರ, ಸಹಸ್ರ ಚಂಡಿಕಾಹೋಮಗಳು. ಅಶ್ಚರ್ಯಕರವೈಭವದಿಂದ ನೆರವೇರಿದುವು ೪೦-೫೦ ಸಾವಿರ ಜನರು ಈ ಅಪೂರ್ವದರ್ಶನದಿಂದ ಕೃತಾರ್ಥರಾದರು. ಅಭೂತಪೂರ್ವವಾದ ಇಂಥ ಸಮಾರಂಭವು ಈ ಚಿಗೆ ೧೫೦ ವರ್ಷಗಳಿಂದ ನಡೆದಿಲ್ಲವೆಂದು ತಿಳಿಯಬರುತ್ತದೆ. ಶೃಂಗೇರಿ ಮಠದ ಶ್ರೀಗಳವರ ದಿವ್ಯ ಸನ್ನಿಧಾನದಿಂದ ಸಮಾರಂಭ ಅತ್ಯಂತ ಯಶಸ್ವಿಯಾಗಿದೆ ಇಂಥ ಕಾರ್ಯಗಳಿಂದ ಜನತೆಯಲ್ಲಿ ವೈದಿಕ ಧರ್ಮದಲ್ಲಿ ಅಭಿನಿವೇಶವು ಅಭಿಮಾನವು ಉಂಟಾಗುವುದು.

ವಸಂತ ಸಾಹಿತ್ಯೋತ್ಸವ
ಮಾನ್ಯ ಡಾ ನಾಗನಗೌಡರು ಉದ್ಘಾಟಿಸುವರು

ಬೆಂಗಳೂರು ಶಾ. ಇಂ ಮೇ ೧೦ ರಂದು ಮೇ ೧೭ ನೇ ತಾರೀಖಿನ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಪರವಾಗಿ ಇಲ್ಲಿ ನಡೆಯಲಿರುವ ವಸಂತ ಸಾಹಿತ್ಯೋತ್ಸವದ ವಿಸ್ತಾರಗಳು ಭರದಿಂದ ನಡೆದಿವೆ ಮದ್ರಾಸಿನ ವ್ಯವಸಾಯ ಮುಂಧ್ರಿಗಳಾದ ಮಾನ್ಯ ಡಾ. ಆರ್. ನಾಗನ ಗೌಡರು ಉತ್ಸವವನ್ನು ಉದ್ಘಾಟಿಸುವರು.

ಬಳ್ಳಾರಿ ಪ್ರಭಾತ್ ದಲ್ಲಿ

ಶೀಘ್ರದಲ್ಲೇ ಬರಲಿರುವ ಚಿತ್ರಗಳು ಕೇದಿ ನಿರೀಕ್ಷಿಸಿರಿ.

ಶಾಂತಾರಾಂರವರ

-: ಶೀನ್ ಬತ್ತಿ ಚಾರ್ ರಸ್ತಾ :- (ಹಿಂದಿ)

ತಾರಾಗಣ :- ಸಂಧ್ಯ, ಕರಣ್ ದಿವಾನ್, ನಿರುಪರಾಯ್, ಮೀನಾಕ್ಷಿ

ಡುಪೀಟರ್‌ರವರ -: ಇನ್ಸ್‌ಪೆಕ್ಟರ್ :- (ತೆಲುಗು)

ಅಂಜಲೀದೇವಿ ನಟಿಸಿದ ಅದ್ಭುತ ಚಿತ್ರ.

ಎಲ್ಲೆಡೆಯಲ್ಲಿಯೂ ಯಶಸ್ವಿಯಾಗಿ ಪ್ರದರ್ಶಿಸಿದ
ನಿಮ್ಮ ನೆಚ್ಚಿನ "ಮೋಸಗಾರು, ಡಿಂಗರಿ" ಪುನಃ ದರ್ಶನ
ಕೊಡಲಿದ್ದಾರೆ! ತಾರೀಖನ್ನು ನಿರೀಕ್ಷಿಸಿರಿ :-

ವಿಜಯರವರ

—: ಪಾತಾಳ ಭೈರವಿ :— (ತೆಲುಗು)

ತಾರಾಗಣ :- N. T. ರಾಮರಾವ್, S. V. ರಂಗರಾವ್, ಮಾಲತಿ, ಲೀಲಾವತಿ, ಗಿರಿಜ.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
,, ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ

ಸ್ಟಾಲಿನ್ನನ ಸ್ನೇಹಿತನ ಪಲಾಯನ!!

ಗುಪ್ತ ಕಾಗದಗಳೊಂದಿಗೆ

ಲಂಡನ – ಸ್ಟಾಲಿನ್ನನ ನಿಕಟ ಸ್ನೇಹಿತನೊಬ್ಬನು ಕೈಮುಲಿನವ ಗುಪ್ತ ಕಾಗದಪತ್ರಗಳೊಂದಿಗೆ ಓಡಿ ಹೋಗಿರುವದರಿಂದ ಅವನ ಪೋಧಕ್ಕಾಗಿ ರಶಿಯ ಮತ್ತು ಮಾಂಡಲಿಕ ರಾಷ್ಟ್ರದಲ್ಲಿ ಭಗೀರಥ ಪ್ರಯತ್ನ ನಡೆದಿರುವದು.

ಐವತ್ತೆರಡು ವರುಷದ ಜನರಲ್ ಅಲೆಕ್ಸಾಂಡರ ಪೊಕ್ರೆಬಿಶೇವ ಎಂಬ ಸ್ಟಾಲಿನ್ನನ ಈ ಸ್ನೇಹಿತನು 30 ವರುಷಗಳವರೆಗೆ ಅವರ ಪ್ರಚಾರ ಸಲಹೆಗಾರನಾಗಿದ್ದನು ಹದಿನೈದು ದಿನಗಳ ಹಿಂದೆ ಇವನು ಅನೇಕ ಗುಪ್ತ ಕಾಗದಗಳೊಂದಿಗೆ ಮಾಯವಾಗಿರುತ್ತಾನೆ. ಸೋವಿಯೆಟ್ ಮುಂದಾಳುಗಳ ವಿಷಯಕ್ಕೆ ಈ ಕಾಗದಪತ್ರಗಳಿದ್ದು ಎಲ್ಲರೂ ವಿವಂಚಿತರಾಗಿರುವರು ಸ್ಟಾಲಿನ್ನರ ಮೂರು ಮೃತ್ಯುಪತ್ರಗಳಲ್ಲಿ ಒಂದು ಪ್ರತಿಯು ಆ ಕಟ್ಟಿನಲ್ಲಿದ್ದಿತ್ತೆಂ. ಈಗ ಅವನು ಮಿಲಿಟರಿ ಮತ್ತು ಇತರ ಹಕ್ಕುಗಳನ್ನೆಲ್ಲ ಕಸಿದುಕೊಂಡಿದ್ದು ಶಿಕ್ಷರೆ ವಿಚಾರಣೆಗೆ ಗುರಿಪಡಿಸಲಾಗುವದು

ಸೋವಿಯೇಟ ಮತ್ತು ಮಾಂಡಲಿಕ ರಾಷ್ಟ್ರಗಳ ಪೋಲೀಸರು ಎಲ್ಲ ಬಂದರ ಮತ್ತು ನಿಲ್ದಾಣಗಳಲ್ಲಿ ಅವನಿಗಾಗಿ ಕಾಯುತ್ತಿರುವರು ಹಿಂದಕ್ಕೆ ಅವನು ಸ್ಟಾಲಿನ್ನರ ಕೃತ್ಯಗಳ ಬಗ್ಗೆ ವರದಿ ಸಿದ್ಧಪಡಿಸಿರುತ್ತಾನೆ. ಸ್ಟಾಲಿನ್ನರ ಮೇದಿನದ ಭಾಷಣೆಗಳನ್ನೆಲ್ಲ ಇವನೇ ಬರೆಯುತ್ತಿದ್ದನು.

NAVABHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದಾರರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 11-5-53

Sri.

Edited Printed & Published by T. B. Keshava Rao, at Nava Bharath Press, Bellary.

ನವಚೈತನ್ಯ

ಸೋಮವಾರ
ಮೇ
೩೫-೧೯೫೫

ವರ್ಷ 16 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮುದ್ರಣ ಪ್ರಕಾಶಕ
ಸಂಚಿಕೆ 10,11 | ಉತ್ಕೃಷ್ಟತೆ ! ಜಾಗೃತ !! ಭಾಷ್ಯವಾಣಿ, ಬೋಧನೆ !!! | ಟಿ. ಬಿ. ಕೇಶವರಾವ್

ಬಳ್ಳಾರಿ ತಾಲೂಕು ಪೂರ ಮೈಸೂರಿಗೆ

ಕೇಂದ್ರ ಸರಕಾರವು ಶ್ರೀ ಮಿಶ್ರರ ಸೂಚನೆಯು ಅಂಗೀಕಾರ ಮಾಡಿತು

ಹೊಸದಿಲ್ಲಿ :- ಬಳ್ಳಾರಿ ತಾಲೂಕನ್ನು ಪೂರ್ಣವಾಗಿ ಮೈಸೂರು ರಾಜ್ಯಕ್ಕೆ ಸೇರಿಸಬೇಕೆಂಬ ನ್ಯಾ. ಮೂ. ಲಕ್ಷ್ಮೀ ಶಂಕರ ಮಿಶ್ರಾರವರ ವರದಿಯಲ್ಲಿಯ ಸೂಚನೆಯನ್ನು ಭಾರತ ಸರಕಾರವು ಅಂಗೀಕರಿಸಿತೆಂದು ಮೇ ೨೨ ರ ಸಂಜೆ ಅಧಿಕೃತವಾಗಿ ಸಾರಲಾಯಿತು.

ಆದರೆ ಆಂಧ್ರ ರಾಜ್ಯದ ಸ್ಥಾಪನೆಯ ನಂತರ ಕೆಲವೊಂದು ಯೋಗ್ಯ ಅವಧಿಯ ವರೆಗೆ ಆ ಸರಕಾರವು ಪರಿವರ್ತಕವಾಗಿ ಕೆಲಸ ಮಾಡುವವರೆಗೆ ಸೌಕರ್ಯಗಳನ್ನು ಕಲ್ಪಿಸಬೇಕೆಂದು ನ್ಯಾ. ಮೂ. ಮಿಶ್ರರು ಸೂಚಿಸಿದ್ದು ಇದನ್ನು ಭಾರತ ಸರಕಾರವು ಅಂಗೀಕರಿಸಿರುವುದೆ.

ಬಳ್ಳಾರಿ ತಾಲೂಕಿನ ಬಗ್ಗೆ ಕೇಂದ್ರ ಸರಕಾರವು ಕೊನೆಯ ನಿರ್ಣಯಕ್ಕೆ ಬರುವ ಮುನ್ನ ಈ ನಿರ್ಣಯವನ್ನು ಯಾವ ಯಾವ ಅಂಶಗಳ ಆಧಾರದ ಮೇಲೆ ಸ್ವೀಕರಿಸಬೇಕೆಂಬ ಬಗ್ಗೆ ಶ್ರೇಷ್ಠ ನ್ಯಾಯಾಧೀಶರೊಬ್ಬರು ಪ್ರತ್ಯೇಕವಾಗಿ ಆಕ್ಷೇಪಕ್ಕೆ ಬೆಟ್ಟುಕೊಟ್ಟು ವಿಚಾರಣೆ ನಡೆಸಬೇಕೆಂದು 1954 ರ ಎಪ್ರೇಲ್ 21 ರಲ್ಲಿ ಹೊರಟ ಪ್ರಕಟಣೆಯಲ್ಲಿ ಸಾರಲಾಗಿತ್ತು. ಅವರಂತೆ ವಿಚಾರಣೆ ನಡೆಸುವ ಕೆಲಸಕ್ಕೆ ಹೈದರಾಬಾದ್ ಹೈಕೋರ್ಟು ಮುಖ್ಯ ನ್ಯಾಯಾಧೀಶರಾದ ಶ್ರೀ ಲಕ್ಷ್ಮೀ ಶಂಕರ ಮಿಶ್ರರನ್ನು ಸರಕಾರವು ನೇಮಿಸಿತು. ನ್ಯಾ. ಮೂ. ಮಿಶ್ರರು ವರದಿಯನ್ನು ಸರಕಾರಕ್ಕೆ ಒಪ್ಪಿಸಿದರು. ನ್ಯಾ. ಮೂ. ಮಿಶ್ರರು ಬಳ್ಳಾರಿಗೆ ಬಂದು ಅನೇಕ ಜನಪ್ರಿಗಳನ್ನು ಸ್ವೀಕರಿಸಿದರು. ಅವರು ಪೂರ್ಣ ವಿಚಾರಣೆಯನ್ನು ನಡೆಸಿ ಕನ್ನಡಿಗರು ಹಾಗೂ ಆಂಧ್ರರು ಮಂಡಿಸಿದ ವಾದಗಳು, ಭಾಷೆಗಳ ಪ್ರಶ್ನೆ ಆಡಳಿತೆಯ ಅನುಕೂಲತೆ, ಗಣಕಾಸಿನ ಸಮಸ್ಯೆ, ಆರ್ಥಿಕ ಭವ್ಯತೆ ಸಾಂಸ್ಕೃತಿಕ ಸಂಬಂಧ, ಮತ್ತು ಐತಿಹಾಸಿಕ ಹಿನ್ನೆಲೆ ಈ ರೀತಿಯಾಗಿ ಪ್ರಶ್ನೆಯ ಬೇರೆ ಬೇರೆ ಮುಖಗಳನ್ನು ಪರೀಕ್ಷಿಸಿದರು

ನಾ. ಮೂ ಮಿಶ್ರರು ದಕ್ಷತೆಯಿಂದ ತ್ವರಿತವಾಗಿ ವಿಚಾರಣೆ ನಡೆಸಿ ಸಂಪೂರ್ಣ ವ್ಯವಸ್ಥಿತವಾದ ವರದಿಯನ್ನು ಒಪ್ಪಿಸಿರುವುದನ್ನು ಸರಕಾರವು ಬಹಳವಾಗಿ ಸ್ವಾಗತಿಸುತ್ತದೆ. ಎಂದು ಈ ಅಧಿಕೃತ ಪ್ರಕಟಣೆಯಲ್ಲಿದೆ.

ಮೈಸೂರು ಶಾಸನ ಸಭಾ ಸದಸ್ಯರಾದ ಶ್ರೀ ಯು. ಎಂ. ಮಾದಪ್ಪನವರು ಸಮ್ಮೇಳನದ ಉದ್ಘಾಟನ ಭಾಷಣವನ್ನು ಮಾಡುತ್ತಾ "ಕೊಯಮತ್ತೂರು ಜಿಲ್ಲಾ ಕನ್ನಡಿಗರು ಮಾತ್ರವಲ್ಲದೆ, ಇಂಗ್ಲೀಷರ ಆಳ್ವಿಕೆಯಿಂದ ಹರಿದು ಹಂಚಿಹೋಗಿರುವ ಎಲ್ಲಾ ಕನ್ನಡಿಗರನ್ನೂ, ಯಾವ ಪ್ರಾಂತದಲ್ಲಿ ಇದ್ದಾಗ್ಲೂ ಪ್ರೀತಿ ವಿಶ್ವಾಸದಿಂದ ಮೈಸೂರು ಪ್ರಾಂತಕ್ಕೆ ಸೇರಿಸಿಕೊಂಡು ನಮ್ಮ ಸಹೋದರರಂತೆ ಕಾಣುತ್ತೇವೆ. ನಮ್ಮ ಸಹೋದರರು ಬೇರೆ ಬೇರೆ ಸರ್ಕಾರದವಳ ಆಡಳಿತಕ್ಕೆ ಸಿಕ್ಕಿ ತೊಂದರೆ ಪಡುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆ ಬಂಧನಗಳಿಂದ ವಿಮೋಚನೆಯಾಗ ಬೇಕಾದರೆ ಭಾಷಾವಾರು ಪ್ರಾಂತರಚನೆಯೊಂದೇ ಸಿದ್ಧೌಷಧ. ಈ ಭಾಷಾವಾರು ಪ್ರಾಂತ ರಚನೆ ಅಡ್ಡಿ ಆತಂಕಗಳು ಆಲೆಯೋಪಾದಿಯಲ್ಲಿ ಬರುತ್ತಲಿವೆ. ಕೆಚ್ಚೆದೆಯ ವೀರರಾದ ಕನ್ನಡಿಗರು ಇವುಗಳಿಗೆ ಎದೆಗೊಟ್ಟು ನಿಂತು ಅಖಂಡ ಕರ್ನಾಟಕದ ನಿರ್ಮಾಣದಲ್ಲಿ ಭಾಗಿಗಳಾಗಬೇಕು" ಎಂಬುದಾಗಿ ಹೇಳಿದರು.

ಅಖಂಡ ಕರ್ನಾಟಕದ ನಿರ್ಮಾಣಕ್ಕೆ ಬಳ್ಳಾರಿ ಜಿಲ್ಲೆಯ 7 ತಾಲ್ಲೂಕುಗಳು ಮೈಸೂರಿಗೆ ಸೇರಲಿರುವುದು ಪ್ರಪ್ರಥಮ ಸೋಪಾನದಂತಿದೆಯೆಂದೂ, ಇದೇ ರೀತಿ ಕೊಯಮತ್ತೂರು ಜಿಲ್ಲೆಯ ಕನ್ನಡಿಗರು ಸಹ ಮೈಸೂರಿಗೆ ಸೇರಲಿಚ್ಛಿಸಿರುವುದು ಸಂತೋಷದ ವಿಷಯ. ಈ ಕಾರ್ಯದಲ್ಲಿ ಯಶಸ್ವಿ ಪಡೆಯಲಿಂದೂ ಅವರು ನುಡಿದರು.

ಕೊಳ್ಳೇಗಾಲದಿಂದ ಆಗಮಿಸಿದ ತಾಲ್ಲೂಕು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೃಷ್ಣಶೆಟ್ಟರು ಕಾರ್ಯದರ್ಶಿಗಳಾದ ಶ್ರೀ ರಾಮಕೃಷ್ಣಶೆಟ್ಟರೂ ಭಾಷಣ ಮಾಡುತ್ತಾ ಈ ಜಿಲ್ಲೆಯ ಕನ್ನಡಿಗರೆಲ್ಲಾ ಮೈಸೂರಿಗೆ ಸೇರಬೇಕೆಂದು ತಿಳಿಸಿದರು.

ಕಡೆಯದಾಗಿ ಅಧ್ಯಕ್ಷ ಪೀಠದಿಂದ ಶ್ರೀ ಗುದ್ಲೆಪ್ಪ ಹಳ್ಳಿಕೇರಿಯವರು ಮಾತನಾಡುತ್ತಾ 'ಕರ್ನಾಟಕ ಏಕೀಕರಣವಾಗಬೇಕಾದ್ದು ಕನ್ನಡಿಗರ ಪರಂಪರೆಯಾದ ಆಸೆ ಎಂತಲೂ, ಇದನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಅದರಿಂದ ಪ್ರಜಾ ಸರ್ಕಾರದವರು ಇದನ್ನು ಕೂಡಲೇ ಕಾರ್ಯಗತ ಮಾಡುತ್ತಾರೆಂದು ನಂಬಿದ್ದೇನೆ' ಎಂದು ತಿಳಿಸಿದರು

ನಿರ್ಣಯ

ಬಳ್ಳಾರಿ ಜಿಲ್ಲೆಯ ತಾಲ್ಲೂಕುಗಳು ಮೈಸೂರು ರಾಜ್ಯಕ್ಕೆ ಸೇರುವ ಸಂದರ್ಭದಲ್ಲೇ ಕೊಯಮತ್ತೂರು ಜಿಲ್ಲಾ ಗೋಪಿಚೆಟ್ಟಿ ಪಾಳ್ಯದ ತಾಲ್ಲೂಕು ತಾಳವಾಡಿ ಪಿರ್ಕಾ ಕನ್ನಡ ಪ್ರದೇಶವೂ, ಭವಾನಿ ತಾಲ್ಲೂಕು ಬರಗೂರು ಅರಣ್ಯ ಪ್ರದೇಶವೂ, ಕೊಳ್ಳೇಗಾಲ ತಾಲ್ಲೂಕು ಸೇರಿಸಲ್ಪಡಬೇಕೆಂದು ಕೇಂದ್ರ ಸರ್ಕಾರವನ್ನು ಸಭೆಯು ಒತ್ತಾಯ ಮಾಡುವ ನಿರ್ಣಯ ಮಾಡಿತು.

ಎಕರೆಗೆ ೭೬೫೦ ಪೌಂಡು ಭತ್ತ ಬೆಳೆದಿದ್ದಾರೆ

ಹೊಸಪೇಟೆಯ ಶ್ರೀ ಅಗಡಿ ನಾರಾಯಣಪ್ಪನವರು

ಎಕರೆಗೆ 7650 ಪೌಂಡು ಭತ್ತವನ್ನು ಕಳೆದ ವರ್ಷ ಬೆಳೆದು ಇಡೀ ಬಳ್ಳಾರಿಜಿಲ್ಲೆಗೇ ಪ್ರಥಮರಾಗಿ ಬಂದಿರುವ ಹೊಸಪೇಟೆಯ ಶ್ರೀ ಅಗಡಿ ನಾರಾಯಣಪ್ಪನವರಿಗೆ ಪ್ರಥಮ ಬಹುಮಾನ ಕೊಡತಕ್ಕದ್ದೆಂದು ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ವ್ಯವಸಾಯ ಇಲಾಖೆ ನೌಕರರುಗಳ ಸಭೆ ಅ. ಳರಲ್ಲಿ ಸೇರಿ ನಿರ್ಧರಿಸಿತು. ಜಿಲ್ಲಾ ವ್ಯವಸಾಯ ಆಫೀಸರಾದ ಶ್ರೀ ಹೆಚ್. ಸುಬ್ಬರಾಯರು ಅಧ್ಯಕ್ಷತೆ ವಹಿಸಿದ್ದರು.

ಜಿಲ್ಲೆಯು ಆಂಧ್ರ ಮತ್ತು ಮೈಸೂರು ಸಂಸ್ಥಾನಗಳಿಗೆ ಹೆಂಜಿಕೆಯಾಗುವುದನ್ನು ಈಗಿನ ವ್ಯವಸ್ಥೆಯಲ್ಲಿ ಇದೇ ಇಲಾಖೆಯವರ ಕೊನೆಯ ಸಭೆಯಾಗಿದ್ದು ಸಮಯೋಚಿತ ಭಾಷಣಗಳಾದವು. ಹೊಸಪೇಟೆಯ ವ್ಯವಸಾಯ ಡೆಮೊನ್‌ಸ್ಟ್ರೇಟರಾದ ಶ್ರೀ ಹೆಚ್. ನರಸಿಂಹಮೂರ್ತಿಯವರು ಸೊಕ್ತ ಭಾಷಣ ಮಾಡಿದರು. ಶ್ರೀ ಸುಬ್ಬರಾಯರ ಗುಣಗಾನವನ್ನೂ ಮಾಡಲಾಯಿತು.

—: ಬಳ್ಳಾರಿ ಪ್ರಭಾತ್‌ದಲ್ಲಿ :—

15-8-53 ರಿಂದ

ನ್ಯಾಷನಲ್ ಆರ್ಟ್ಸ್‌ರವರ

★ ಪಿಚ್ಚಿ ಪುಲ್ಲಯ್ಯ ★ (ತೆಲುಗು)

ತಾರಾಗಣ;— N. T. ರಾಮರಾವು, ಕೃಷ್ಣವೇಣಿ, ಜಾನಕಿ

ಶೀಘ್ರದಲ್ಲಿಯೇ ಬರಲಿದೆ

ಬಳ್ಳಾರಿ ಪ್ರಭಾತದಲ್ಲಿ

ಅಂಜಲಿಯ ಮೊದಲನೇ ಹಿಂದಿ ಚಿತ್ರ

★ ಶುಕ್ರಂಬ ★

ಲೋಕ ಸಭೆಯಲ್ಲಿ ಆಂಧ್ರಪ್ರಾಂತ ಮಸೂದೆ ಮಂಡನೆ

ಹೊಸಪ್ರಾಂತಕ್ಕೆ ಶುಭಕೋರಿ ಹೋಂ ಮಂತ್ರಿಗಳ ಭಾಷಣ

ಆಂಧ್ರಕ್ಕಾಗಿ ೧೯೧೭ ರಿಂದಲೂ ನಡೆದ ಚಳವಳಿಯ ಉಲ್ಲೇಖ

ಲೋಕ ಸಭೆಯಲ್ಲಿ ಹೋಂ ಮಂತ್ರಿ ಡಾ|| ಕೆ.ಯನ್. ಕಟ್ಜು ರವರು ಆಂಧ್ರ ಪ್ರಾಂತ ಮಸೂದೆಯನ್ನು ಪರಿಶೀಲನೆಗೆ ಮಂಡಿಸಿ, ಹೊಸದಾಗಿ ರಚಿತನಾಗಲಿರುವ ಪ್ರಾಂತವು ಅತ್ಯಂತ ಜಯಪ್ರದವಾಗಿ ಬೆಳೆಯಲೆಂದು ತಾವು ಹಾರೈಸುವುದಾಗಿ ತಿಳಿಸಿದರು.

ಮದ್ರಾಸ್ ರಾಜ್ಯದ ವಿಭಜನೆ ಬಗ್ಗೆ ಡಾ|| ಕಟ್ಜು ವೈಯಕ್ತಿಕವಾಗಿ ವಿಷಾದಿಸಿದರು. ಎರಡು ಪ್ರಾಂತಗಳಿಗೂ ಉಭಯ ಸಾಮಾನ್ಯವಾದ ವಿಷಯಗಳ ವಿಭಜನೆಯಾದ ನಂತರ ಉಳಿದ ಮದ್ರಾಸ್ ಪ್ರಾಂತ ಮತ್ತು ಆಂಧ್ರ ಪ್ರಾಂತ ಪರಸ್ಪರ ಸಹಕರಿಸುತ್ತಲೇ ಇರುವುದೆಂದು ನಂಬಿರುವುದಾಗಿ ತಿಳಿಸಿದರು.

"ಪ್ರತ್ಯೇಕ ಪ್ರಾಂತಕ್ಕಾಗಿ ಆಂಧ್ರರು 1917 ರಿಂದಲೂ ಒತ್ತಾಯ ಮಾಡುತ್ತಿದ್ದರು. ಆಗಿನಿಂದಲೂ ಈ ವಿಷಯ ಪರಿಶೀಲನೆ, ಚರ್ಚೆಗಳಲ್ಲೇ ಇತ್ತು. ಅನೇಕ ಅಧಿಕೃತ ಮತ್ತು ಅನಧಿಕೃತ ಸಮಿತಿಗಳು ಈ ಪ್ರಶ್ನೆಯನ್ನು ಪರಿಶೀಲಿಸಿವೆ. ಕಳೆದ ಡಿಸೆಂಬರಿನಲ್ಲಿ ಪ್ರಧಾನ ಮಂತ್ರಿಗಳು ಪಾರ್ಲಿಮೆಂಟನಲ್ಲಿ ಒಂದು ಹೇಳಿಕೆಯನ್ನಿತ್ತಿದ್ದರು, ಮತ್ತು ಸರ್ಕಾರವು ಈ ವಿಷಯದಲ್ಲಿ ತನಿಖೆ ನಡೆಸಲು ಜಸ್ಟಿಸ್ ವಾಂಛೂರಿಗೆ ಸೂಚಿಸಿತು. ಜ. ವಾಂಛೂರವರ ವರದಿಯು ಫೆಬ್ರವರಿ 7 ರಂದು ಒಪ್ಪಿಸಲ್ಪಟ್ಟಿತ್ತು. ಮಾರ್ಚ್ 25 ರಂದು ಸರ್ಕಾರವು :ಈ ವರದಿಯ ಆಧಾರದ ಮೇಲೆ ತನ್ನ ನಿರ್ಧಾರಗಳನ್ನು ಪ್ರಕಟಪಡಿಸಿತು. ಆ ಮೇಲೆ ಜ. ನಿಶ್ಚಾರವರಿಗೆ ಬಳ್ಳಾರಿ ತಾಲ್ಲೂಕಿನ ಪ್ರಶ್ನೆ ಬಗ್ಗೆ ಪರಿಶೀಲಿಸಲು ಸೂಚಿಸಲಾಯಿತು, ಅವರ ಶಿಫಾರಸುಗಳ ಬಗ್ಗೆ ಸರ್ಕಾರ ಕೈಗೊಂಡ ನಿರ್ಧಾರಗಳನ್ನೂ ಪ್ರಕಟಿಸಲಾಗಿದೆ" ಎಂದು ಡಾ|| ಕಟ್ಜು ಹೇಳಿದೆ.

ಬಹು ಎಚ್ಚರಿಕೆಯಿಂದ ಪರಿಶೀಲಿಸಲಾಗಿದೆ

"ರಾಜ್ಯಾಂಗದಲ್ಲಿ ನಿಯಮಿತನಾಗಿರುವಂತೆ, ಕರಡು ಮಸೂದೆಯನ್ನು ಮದರಾಸ್ ಮತ್ತು ಮೈಸೂರು ಶಾಸನ ಸಭೆಗಳಿಗೆ ಆಭಿಪ್ರಾಯಕ್ಕಾಗಿ ಕಳಿಸಲಾಯಿತು. ಎಲ್ಲಾ ವಿಷಯಗಳನ್ನೂ ತೀವ್ರ ಎಚ್ಚರಿಕೆಯಿಂದ ಪರಿಶೀಲಿಸಿ ಪ್ರಕೃತ ಮಸೂದೆಯನ್ನು ಸಿದ್ಧಗೊಳಿಸಲಾಗಿದೆ" ಎಂದೂ ಹೋಂ ಮಂತ್ರಿಗಳು ತಿಳಿಸಿದರು

"ಕೆಲವು ಸಂದರ್ಭಗಳಲ್ಲಿ ನಮಗೆ ಬಂದ ಸಲಹೆಗಳನುಸಾರವಾಗಿ ಮಸೂದೆಯನ್ನು ಬದಲಾಯಿಸಲಾಗಿದೆ, ಇತರ ಕೆಲವು ವಿಷಯಗಳ ಬಗ್ಗೆ ಬಂದ ಸಲಹೆಗಳನ್ನು ಒಪ್ಪಲಾಗಲಿಲ್ಲ," ಎಂದೂ ಸಚಿವರು ತಿಳಿಸಿದರು.

ಸದ್ಯಕ್ಕೆ ಆಂಧ್ರ ಪ್ರಾಂತವನ್ನು ಜ|| ವಾಂಛೂರವರ ಶಿಫಾರಸಿಗನುಗುಣವಾಗಿ ನಿರ್ಮಿಸಿದ ಪ್ರದೇಶಗಳಾದ 11 ಜಿಲ್ಲೆಗಳು ಮತ್ತು ಬಳ್ಳಾರಿ ಜಿಲ್ಲೆಯ ಮೂರು ತಾಲ್ಲೂಕುಗಳನ್ನು ಸೇರಿಸಿ ರಚಿಸಲು ಯೋಚಿಸಲಾಗಿದೆಯೆಂದೂ ಡಾ|| ಕಟ್ಜು ತಿಳಿಸಿದರು.

ಮುದ್ರಾಸು ಶಾಸನ ಸಭೆ ಸಲಹೆ

ಒಂದು ಬೌಂಡರಿ ಕಮಿಷನ್ನನ್ನು ನೇಮಿಸಲು ಮದ್ರಾಸು ಶಾಸನ ಸಭೆ ಸೂಚಿಸಿದೆಯೆಂದೂ, ಈ ಸಲಹೆ ಮಾಡಲಾಗಿರುವ ವಿಧಾನ 'ದಾರುಣ ಸ್ಥಿತಿ ಗತಿಗಳಿಗೆ' ಕಾರಣವಾಗುವಂತಹುದು ಮತ್ತು ಅನೇಕ ಪ್ರಾಂತಗಳು ಉದ್ರಿಕ್ತಗೊಳ್ಳಲು ಕಾರಣವಾಗುವಂತಹುದು ಎಂದೂ ಡಾ||ಕಟ್ಜು ನುಡಿದರು. ಆಂಧ್ರ ಮತ್ತು ಮದ್ರಾಸ್ ವೈಸೂರು, ಒರಿಸ್ಸಾ, ಹೈದರಾಬಾದ ಮತ್ತು ಮಧ್ಯ ಪ್ರದೇಶಗಳ ಬಗ್ಗೆ ತನಿಖೆ ನಡೆಸಬೇಕೆಂದು ಮದ್ರಾಸ್ ಅಸೆಂಬ್ಲಿ ಸೂಚಿಸಿದೆಯೆಂದೂ, ಅಂಥಾ ಕಮಿಷನ್ನು ಈ ಮಸೂದೆಯ ವ್ಯಾಪ್ತಿಗೆ ಹೊರತಾದುದೆಂದೂ ಅವರು ಹೇಳಿದರು.

ಬೌಂಡರಿ ಕಮಿಷನ್ ನೇಮಕ

"ಬಹು ಮಿತವಾದ ಉದ್ದೇಶಕ್ಕಾಗಿ" ಬೌಂಡರಿ ಕಮಿಷನ್ನೊಂದನ್ನು ರಾಷ್ಟ್ರಪತಿಯವರು ಆಜ್ಞೆ ಹೊರಡಿಸಿ ನೇಮಿಸುವರೆಂದು ಡಾ|| ಕಟ್ಜು ಸ್ಪಷ್ಟಪಡಿಸಿದರು. ಸಂಬಂಧ ಪಟ್ಟ ಪ್ರಾಂತಗಳ ಸಹಕಾರ ಒಪ್ಪಿಗೆಗೊಡ್ಡೂಯೇ ಇಂಥ ಕಮಿಷನ್ನನ್ನು ನೇಮಿಸಲಾಗುವುದೆಂದರು. ಈ ಕಮಿಷನ್ ಸಣ್ಣಪುಟ್ಟ ವಿಷಯಗಳ ನಿರ್ಧಾರಕ್ಕಾಗಿ ಪರಿಶೀಲನೆ ನಡೆಸುವುದೆಂದೂ, ಆದರ ಕೇವಲ ಒಂದು ಹಳ್ಳಿಯನ್ನಾಗಲಿ, ಈ ಕಡೆಯಿಂದ ಆ ಕಡೆ ವರ್ಗಾಯಿಸುವಂತಹ ಕಾರ್ಯ ರಾಜ್ಯಾಂಗದ ರೀತಿ ಪಾರ್ಲಮೆಂಟರಿ ಶಾಸನದಿಂದಲೇ ಆಗಬೇಕೆಂದು ಅವರು ಹೇಳಿದರು.

ಡಾ|| ಲಂಕಾಸುಂದರಂ ಭಾಷಣ

ಡಾ|| ಕಟ್ಜುರವರು ಭಾಷಣಮಾಡಿದನಂತರ ಡಾ|| ಲಂಕಾ ಸುಂದರಂರವರು (ಸ್ವತಂತ್ರರು - ಮದ್ರಾಸ್) ಮಸೂದೆಯನ್ನು ಸೆಲೆಕ್ಟ್ ಸಮಿತಿಗೆ ವಹಿಸಲು ಸೂಚನೆ ಮಂಡಿಸಿದರು. ಸೆಲೆಕ್ಟ್ ಸಮಿತಿ ಆಗಸ್ಟ್ 22 ರೊಳಗೆ ವರದಿ ಮಾಡಬೇಕೆಂದೂ, ಮಸೂದೆ ಕಾಲಹರಣ ಮಾಡುವಂತಹದಲ್ಲವೆಂದೂ ಅವರು ಹೇಳಿದರು.

'ಲೇಣಿ ದೇಣಿಗಳು ಮುಂತಾದ ಕೆಲವು ಪ್ರಶ್ನೆಗಳು ಕ್ಲಿಷ್ಟವಾದವು. ಅವನ್ನು ಸೆಲೆಕ್ಟ್ ಸಮಿತಿಯು ವಿವರವಾಗಿ ಪರಿಶೀಲಿಸಬಹುದು. ಮೂರುವರೆ ಕೋಟಿ ಮಂದಿ ಆಂಧ್ರರು ಒಂದು ಗೂಡಲು ನಲವತ್ತು ವರ್ಷಗಳಕಾಲ ಹೋರಾಡಿ, ಇದುವರೆಗೆ ಆಂಧ್ರರಿಗಾದ ಕಷ್ಟನಷ್ಟಗಳಿಗೆ ಪರಿಹಾರವೊದಗಿಸುವರಲ್ಲಿ ಈ ಮಸೂದೆ ಪ್ರಪ್ರಥಮ ಕ್ರಮವಾಗುವುದು" ಎಂದೂ ಡಾ|| ಲಂಕಾಸುಂದರಂ ಹೇಳಿದರು.

ಆಂಧ್ರ ಪ್ರಾಂತ ರಚನೆಗಾಗಿ ಪ್ರಾಣತ್ಯಾಗ ಮಾಡಿದ ಹುತಾತ್ಮರಾದ ಪೊಟ್ಟಿ ಶ್ರೀರಾಮುಲುರವರಿಗೆ ತಾವೀ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನರ್ಪಿಸುವುದಾಗಿಯು ಅವರು ಹೇಳಿದರು.

ಲಾಠೀ ಚಾರ್ಜಿನಿಂದ ಮೂವರಿಗೆ ಗಾಯ

ಹೈದರಾಬಾದಿನಲ್ಲಿ

ಸಭೆ ಮೆರವಣಿಗೆಗಳು ನಡೆಯಕೂಡದೆಂದು ಜಾರಿಮಾಡಿರುವ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಇಲ್ಲಿನ ಟ್ರಾನ್ಸ್‌ಪೋರ್ಟ್ ನೌಕರ ಮುಷ್ಕರ ಕಾರರು ನಡೆಸಿದ ಮೆರವಣಿಗೆ ಚದುರಿಸಲು ಪೋಲೀಸರು ಲಾಠಿಚಾರ್ಜ್ ಮಾಡಿದಾಗ ಮೂರು ಮಂದಿ ಗಾಯಗೊಂಡರು.

ಕರ್ನಾಟಕ ಪ್ರಾಂತ ರಚನೆ ದೂರವಿಲ್ಲ

ಆಂಧ್ರ ಪ್ರಾಂತರಚನೆಯ ಮಸೂದೆ ಮದ್ರಾಸ್‌ನಲ್ಲಿ ಚರ್ಚೆಗೆ ಬಂದು. ತೀವ್ರವೆ ಆ ಮಸೂದೆ ಶಾಸನ ಸಭೆಯಲ್ಲಿ ಪಾಸಾಗಿ ಹೋಗಿ ಆಗಸ್ಟ್‌ನಲ್ಲಿ ಕೇಂದ್ರ ವಿಧಾನ ಸಭೆಯಲ್ಲಿಯೂ ಪಾಸಾಗಿ ಅಕ್ಟೋಬರ ೧ ರಿಂದ ಆಂಧ್ರಪ್ರಾಂತ ನಿರ್ಮಾಣವಾಗಲಿದೆ. ಮದ್ರಾಸಿನಲ್ಲಿ ಚರ್ಚೆಯಾಗುತ್ತಿರುವಾಗ ಉಡಿಪಿಯ ಎಮ್ಮೆಲೆಗಳು ಬಲ್ಲಾರಿ ಮೈಸೂರಿಗೆ ಸ್ಥೀರಿದ್ದು ಸ್ವಾಗತಾರ್ಹವಾಗಿದೆಯೆಂದೂ ಆಂಧ್ರ ಪ್ರಾಂತವಾದೊಡನೆಯೆ ಕರ್ನಾಟಕ ಪ್ರಾಂತವೂ ರಚಿತವಾಗಲೆಂದೂ ಆಶಿಸಿದರು. ಮೈಸೂರು ಎಸೆಂಬ್ಲಿಯಲ್ಲಿಯೂ ಪ್ರಧಾನಿ ಹನುಮಂತಯ್ಯನವರು ಮಂಗಳೂರು - ಮಡಿಕೇರಿಗಳಲ್ಲಿ ವ್ಯಕ್ತೀಕರಿಸಿದ ಅಭಿಪ್ರಾಯಗಳ ಕುರಿತು ಕೇಳಲಾದ ಪ್ರಶ್ನೆಗಳಿಗೆ ಉತ್ತರಿಸುವಾಗ "ನಾನು ವೈಯಕ್ತಿಕವಾಗಿ ಅಭಿಪ್ರಾಯ ಪ್ರಕಟಿಸಿದ್ದೇನೆ ಮೈಸೂರಲ್ಲಿ ಏಕೀಕರಣದ ಕುರಿತು ತೀವ್ರ ಚಳವಳಿ ನಡೆಯುವುದು ಸರಕಾರಕ್ಕೆ ಗೊತ್ತಿದೆ." ಎಂದು ಹೇಳಿರುವುದು ಗಮನಾರ್ಹವಾಗಿದೆ. ಮೈಸೂರು ಮುಖ್ಯ ಮಂತ್ರಿಗಳ ಅಪ್ಪಣೆಯಂತೆ ಹಿರಿಯೂರು ಎ. ಐ. ಸಿ. ಸಿ. ಯ. ಸದಸ್ಯರೂ, ಆದ ಶ್ರೀ ಹಾರ್ನಹಳ್ಳಿ ರಾಮಸ್ವಾಮಿಯವರು ಆಗ್ರದ ಕಾಂಗ್ರೆಸ್ ಅಧಿವೇಶನದಲ್ಲಿ ತಾವು ತಂದಿದ್ದ ಏಕೀಕರಣದ ಕುರಿತಾದ ಠರಾವಿಗೆ ಪ್ರವೇಶ ದೊರೆಯದೆ ಇದ್ದರೂ 'ಏಕೀಕರಣದ ವಿಷಯದಲ್ಲಿ ಮೈಸೂರು ಸುಮುಖವಾಗುವುದು ಕೇಂದ್ರದ ಗಮನಕ್ಕೆ ಬಂದಿದೆಯೆಂದೂ, ಶೀಘ್ರದಲ್ಲಿಯೆ ಕರ್ನಾಟಕ ಪ್ರಾಂತ ರಚನೆಯ ಕುರಿತು ತಕ್ಕ ಕ್ರಮಗಳನ್ನು ಕೈಗೊಳ್ಳಬಹುದೆಂದೂ, ಭರವಸೆ ಸೂಚಿಸಿದ್ದನ್ನು ಗಮನಿಸಬೇಕಾಗಿದೆ. ತೀವ್ರವಾಗಿ ಬೆಳೆಯುತ್ತಿರುವ ಪ್ರಜಾಭಿಪ್ರಾಯವನ್ನು ಗೌರವಿಸದೆ ಉಳಿಗಾಲವಿಲ್ಲವೆಂಬ ಭಾವನೆ ಕಾಂಗ್ರೆಸ್ ವರಿಷ್ಠರಿಗೂ ಸರಕಾರದವರಿಗೂ ಉಂಟಾದ ಲಕ್ಷಣ ಕಂಡು ಬರುತ್ತಿದೆ.

ವಿಮಾನದಲ್ಲಿ ಗಾಂಜಾ ಸಾಗಾಣಿಕೆ?

ಬೆಂಗಳೂರಿಂದ ಬಂದ ಒಬ್ಬರ ದಸ್ತಗಿರಿ

ಐದು ಸಾವಿರ ರೂಪಾಯಿ ಬೆಲೆ ಬಾಳುವ ಇಪ್ಪತ್ತು ಪೌಂಡುಗಳಷ್ಟು ಗಾಂಜಾವನ್ನು ಬೆಂಗಳೂರಿನಿಂದ ವಿಮಾನದಲ್ಲಿ ಅಕ್ರಮವಾಗಿ ಸಾಗಿಸಿಕೊಂಡು ಬಂದಿದ್ದಾರೆಂದು ಶ್ರೀ ಟಿ. ಕೆ. ಶ್ರೀನಿವಾಸ ಎಂಬ 40 ವರ್ಷ ವಯಸ್ಸಿನವರೊಬ್ಬರನ್ನು ಮದ್ರಾಸಿನ ಪೋಲೀಸರು ಅಂಬ ಸಡರ್ ಹೋಟಲಿನಲ್ಲಿ ಭಿಕ್ಷೆ ರಾತ್ರಿ ದಸ್ತಗಿರಿ ಮಾಡಿದ್ದಾರೆ.

ಬೆಂಗಳೂರಿನಿಂದ ಬಂದ ಗುಪ್ತವರಿಯ ಮೇಲೆ ಇವರನ್ನು ಹಿಂಬಾಲಿಸಿ ಹಿಡಿಯಲಾಯಿತು. ಎಂದು ಗೊತ್ತಾಗಿದೆ. ಚಲಚ್ಚಿತ್ರ ನಿರ್ಮಾಪಕರೆಂದು ಹೇಳಲಾದ ರಂಗಧಾಮ ನಾಯ್ಡು ಎಂಬ ಒಬ್ಬರನ್ನೂ ಕೋಡುಬಾಕಂನಲ್ಲಿ ದಸ್ತಗಿರಿ ಮಾಡಿದೆ.

ಕರ್ನಾಟಕ ಪ್ರಾಂತ ಬೇಗ ಆಗಬೇಕು

ಪ್ರಧಾನಿ ನೆಹರೂರೊಡನೆ ಭೇಟಿ ಮತ್ತು ಮನವಿ

ಪಾರ್ಲಿಮೆಂಟಿನ ಸದಸ್ಯರು ಶ್ರೀಮಾನ ಶ್ರೀ ಎಂ. ಎಸ್. ಗುರುಪಾದಸ್ವಾಮಿ ಮತ್ತು ಶ್ರೀ ಶಿವಮೂರ್ತಿಸ್ವಾಮಿ ಇವರುಗಳು ಪ್ರಧಾನಿ ನೆಹರೂರನ್ನು ಭೇಟಿಮಾಡಿ ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತಿನ ಪರವಾಗಿ, ಕರ್ನಾಟಕ ಪ್ರಾಂತ ರಚನೆ ಬೇಗನೆ ಮಾಡಬೇಕೆಂದು ಮನವಿ ಮಾಡಿಕೊಂಡರು. ಕರ್ನಾಟಕ ಪ್ರಾಂತರಚನೆ ವಿಳಂಬವಾದರೆ ಕನ್ನಡ ಜನತೆ ಉದ್ರೇಕಗೊಳ್ಳುವುದೆಂದೂ ಸತ್ಯಾಗ್ರಹ ನಡೆಯಲಿದೆಯೆಂದು ತಿಳಿಸಿದರು. ಪ್ರಧಾನಿ ನೆಹರು ಮನವಿಗೆ ಉತ್ತರ ಕೊಡುತ್ತಾ, ಸತ್ಯಾಗ್ರಹವು ಅಕ್ರಮ ಮಾರ್ಗ ಕರ್ನಾಟಕ ಪ್ರಾಂತ ರಚನೆ ಕೇಂದ್ರ ಸರಕಾರದ ಗಮನದಲ್ಲಿದೆ ಮೈಸೂರಿನಲ್ಲಿಯೂ ಇದಕ್ಕೆ ಸಹಾನುಭೂತಿ ಬೆಂಬಲಗಳಿವೆ. ಪಾರ್ಲಿಮೆಂಟಿನಲ್ಲಿ ಈಬಗ್ಗೆ ಹೇಳಿಕೆ ಕೊಡುವೆನು. ಹೈಸವರ್ ಕಮಿಷನ್ನಿನವರು ಕರ್ನಾಟಕ ಪ್ರಾಂತರಚನೆ ವಿಷಯವನ್ನು ಮೊದಲು ತೆಗೆದುಕೊಳ್ಳುವರು ಎಂದರು.

ಕೊಳ್ಳೆಗಾಳವನ್ನು ಮೈಸೂರಿಗೆ ಸೇರಿಸಬೇಕೆಂದು ಪ್ರಧಾನಿಯವರಿಗೆ ತಿಳಿಸಲಾಗಿ ಬೌಂಡರಿ ಕಮಿಷನು ಈ ವಿಚಾರ ಪರೀಶೀಲಿಸುವುದು ಎಂದರು.

ಸ್ವೀಕಾರ-ವಿಮರ್ಶೆ:-

ಬಳ್ಳಾರಿ ಸಮಸ್ಯೆ ಮತ್ತು ಕರ್ನಾಟಕ ಪ್ರಾಂತ್ಯ

ಬೆಲೆ ೦-೮-೦

ಲೇ:- ಆ. ನ. ಕೃಷ್ಣರಾಯ

ಪ್ರಕಾಶಕರು:- ಅರುಣೋದಯ ಲೈಬ್ರರಿ ಬೆಂಗಳೂರು.

ಕರ್ನಾಟಕಕ್ಕೆ ಸುಪರಿಚಿತರಾಗಿರುವ ಶ್ರೀ ಆ. ನ. ಕೃಷ್ಣರಾಯರವರು ಈ ಪುಸ್ತಿಕೆಯ ಲೇಖಕರೆಂದ ಮೇಲೆ ಇದರ ವಿಮರ್ಶೆಯೇ ಅನಾವಶ್ಯಕವೆನಿಸುತ್ತದೆ. ಕರ್ನಾಟಕ ರಾಜ್ಯನಿರ್ಮಾಣದಲ್ಲಿ ಬಳ್ಳಾರಿಯ ಸ್ಥಾನ ಮಾನಗಳನ್ನು ಎಳ್ಳಾಷ್ಟಾಗಳಂದ ಜನ್ನಾಗಿ ವಿವೇಚಿಸಿದ್ದಾರೆ. ಇದನ್ನು ಕನ್ನಡಿಗರೆಲ್ಲರೂ, ಅದರಲ್ಲೂ ಬಳ್ಳಾರಿಯವರು ಓದಿ ಸಂಗ್ರಹಿಸಿಡಬೇಕಾದುದಗತ್ಯ.

—: ಕಲೆಗಾಗಿ :—

ನನ್ನ ಬಾಳನು ದೇವಿ,
ನಿನಗೊಂದು ನುಡಿಪಿಡುವೆ
ನನ್ನ ಮನದಂಗಳವ
ನಿನಗಾಗಿ ತೆರೆದಿಡುವೆ;
ಎನ್ನೊಳಗೆ ನೀ ಜೀರವು ನಲಿದಾಡ ಬಾರ

ನನ್ನೆಲ್ಲ ಸಿರಿಯನ್ನು
ನಿನ್ನಡಿಯ ಮುಂದಿಡುವೆ;
ನೀನದನು ಮುಡಿವುದನು
ನಾ ನೋಡಿ ಮನದಣಿವೆ,
ನಿನ್ನಾಟದಾನಂದದಿಂದೆನಗೆ ತೋರ!

ನನ್ನಿರವಿನಾನೆಯನು
ನಿನಗೆಂದು ಗುಂಪಿಸುವೆ;
ನನ್ನಂತರಾಳವನು
ಎಡೆಬಿಡದೆ ತೊಳೆದಿಡುವೆ;
ನಿನ್ನೊಲವ ನನ್ನೆದೆಗೆ ಸಿಂಪಡಿಸು ಬಾರ!

ಅಂಡಲೆಯು ತೀವಿರಲಿ;
ಅಳಲಿರಲಿ, ಅಳವಿರಲಿ,
ನಿನಗಾಗಿ ನಾ ನಲಿದು
ನೀನೊಲಿಯುವಾಸೆಯಲಿ
ಕಾದಿಹೆನು ಓ ದೇವಿ, ಮುಂಬೆಳಗ ಬೀರ!

— ಎಸ್. ಎಸ್. ವೀರಪ್ಪ

ಕಾಶ್ಮೀರದ ಕ್ರಾಂತಿ

ಶೇಕ್ ಅಬ್ದುಲ್ಲಾರ ಸ್ವಭಾವ ಪರಿವರ್ತನೆ

ಕಾಶ್ಮೀರ ದೇಶವನ್ನು ಕಬಳಿಸಲು ಪಾಕಿಸ್ತಾನವು ಪ್ರಯತ್ನ ಪಟ್ಟದ್ದೂ ಅಲ್ಲಿಯ ರಾಜರ ಇಷ್ಟ ಪ್ರಕಾರಕ್ಕೆ ಭಾರತದ ಸೈನ್ಯವು ಅಲ್ಲಿಗೆ ಧಾವಿಸಿ, ದಾಳಿಗಾರರಿಂದ ಆದೆನ್ನು ಬಿಡುಗಡೆ ಮಾಡಿದ್ದೂ, ಎಲ್ಲ ರಿಗೂ ತಿಳಿದ ವಿಷಯ. ಜನರ ಸ್ವಾತಂತ್ರ್ಯ ಕಾಂಕ್ಷೆಗಳನ್ನು ಗುರ್ತಿಸಿ ರಾಜರು ಪ್ರಜೆಗಳಿಗೆ ಅಧಿಕಾರ ಸೂತ್ರಗಳನ್ನು ವಹಿಸಿದ ಮೇಲೆ "ಶೇಖ ಅಬ್ದುಲ್ಲಾರು ಮುಖ್ಯಮಂತ್ರಿಗಳಾಗಿ ಕಳೆದ 6 ವರ್ಷಗಳಿಂದ ರಾಜ್ಯದ ಸೂತ್ರಗಳನ್ನು ನಡೆಸುತ್ತಿದ್ದರು. ಶೇಖ ಅಬ್ದುಲ್ಲಾರು ಕಳೆದ 20 ವರ್ಷಗಳಿಂದ ರಾಷ್ಟ್ರೀಯಾಂದೋಳನದಲ್ಲಿ ಭಾಗವಹಿಸಿ ಅನೇಕ ಸಲ ಸೆರೆಮನೆ ವಾಸಮಾಡಿ ರಾಷ್ಟ್ರ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಈ ಪರಿಷತ್ತಿನಲ್ಲಿ ಹಿಂದುಗಳೂ-ಮುಸಲ್ಮಾನರೂ ಸದಸ್ಯರಿರುತ್ತಾರೆ.

ಜಮ್ಮು - ಕಾಶ್ಮೀರವು ಸೇರಿ ಒಂದು ಸಂಯುಕ್ತ ದೇಶ. ಜಮ್ಮುವಿನಲ್ಲಿ ಹಿಂದುಗಳು ಅಧಿಕವಾಗಿಯೂ, ಕಾಶ್ಮೀರ ಕಣಿವೆಯಲ್ಲಿ ಮುಸಲ್ಮಾನರು ಅಧಿಕವಾಗಿಯೂ ಇದ್ದಾರೆ. ಒಟ್ಟಿನಲ್ಲಿ ಶೇಕಡ 90 ಜನ ಮುಸಲ್ಮಾನರಿದ್ದಾರೆ. ಭಾರತ - ಪಾಕಿಸ್ತಾನಗಳು ಧರ್ಮದ ದೃಷ್ಟಿಯಿಂದ ವಿಭಜಿಸಲ್ಪಟ್ಟ ನಂತರ ಕಾಶ್ಮೀರವನ್ನು ಭಾರತ - ಪಾಕಿಸ್ತಾನಗಳು ಹಂಚಿಕೊಳ್ಳುವುದು ತರವಲ್ಲವೆಂದೂ ಇದನ್ನು ಜನರ ನಿರ್ಣಯಕ್ಕೇ ಬಿಡಬೇಕೆಂದೂ ಭಾರತ - ಪಾಕಿಸ್ತಾನಗಳ ಯುದ್ಧ ನಿಲ್ಲಬೇಕೆಂದೂ ನಿಶ್ಚಿತವಾಯಿತು. ಅಂತರಾಷ್ಟ್ರೀಯ ಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆಯು ಹಾಗೆಯೇ ಉಳಿದಿದೆ.

ಭಾರತವು ಕಾಶ್ಮೀರದ ರಕ್ಷಣೆಗಾಗಿ ಆರ್ಥಿಕ ಭದ್ರತೆಗಾಗಿ ಇಲ್ಲಿಯವರೆವಿಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡಿದೆ ಸಾರಿನ್‌ಕೋಟೆವರೆಗೆ ರಸ್ತೆಗಾಗಿ 2-½ ಕೋಟಿ ರೂ. ವ್ಯಯ ಮಾಡಬೇಕಾಯಿತು. ಶೇಕ ಅಬ್ದುಲ್ಲಾರವರಾದರೂ ಕಾಶ್ಮೀರ ಘೋರಣೆ ರೀತಿ ನೀತಿಗಳನ್ನು ಜಾತೀಯ ದೃಷ್ಟಿಯಿಂದ ದೂರವಿಟ್ಟು ಪ್ರತಿಯೊಂದು ಮುಖ್ಯ ಸಮಸ್ಯಾ ಪರಿಹಾರಕ್ಕೆ ಭಾರತ ಪ್ರಧಾನಿಗಳೊಡನೆ ಸಮಾಲೋಚನೆಗಾಗಿ ಬರುತ್ತಿದ್ದರು.

ಆದರೆ ಇತ್ತೀಚೆಗೆ ಮಂತ್ರಿ ಮಂಡಲದಲ್ಲಿ ಒಡುಕು ಹೆಚ್ಚಿ, ಶೇಖ ಅಬ್ದುಲ್ಲಾರ ಧ್ವನಿಯೇ ಬದಲಾಗಿ ಬಂದಿತು. ಅವರು ಭಾರತ ವಿರೋಧಿ ಭಾಷಣಗಳನ್ನು ಕೊಡುತ್ತ ಬಂದರು: ಭಾರತದಲ್ಲಿ ಜಾತೀಯತೆಯ ತಾಂಡವ ನೃತ್ಯವಾಗುತ್ತಿರುವ ದೆಂದು ಹೇಳಿಕೆಕೊಟ್ಟರು.

ಕಾಶ್ಮೀರವು ಭಾರತದ ಸಂಬಂಧವನ್ನು ಕಡಿದುಕೊಂಡು ಸ್ವತಂತ್ರವಾಗಿರಬಯಸಿದರೆ ಅದಕ್ಕೆ ಭಾರತವೇ ಕಾರಣವಾಗುತ್ತದೆಂದು ಹೇಳಿದರು.

ಸ್ವತಂತ್ರ ಕಾಶ್ಮೀರದ ಅಭಿಪ್ರಾಯಗಳನ್ನು ಎಲ್ಲೆಂದರಲ್ಲಿ ಹಾಡುತ್ತ ಬಂದರು. ಈ ಹೇಳಿಕೆಗಳಿಂದ ಭಾರತ ಪಕ್ಷಪಾತಿ ಜನರಲ್ಲಿ ದ್ವೇಷಕ್ಕೆ ಕಾರಣವಾಯಿತು. ತಮಗೆ ಬೇಕಿಲ್ಲದವರನ್ನು ರಾಜೀನಾಮೆ ಕೊಡಲು ಶೇಖ ಅಬ್ದುಲ್ಲಾರು ಒತ್ತಾಯ ಪಡಿಸಿದರು. ಶ್ಯಾಮಲಾಲರೆಂಬ ಆರೋಗ್ಯ ಮಂತ್ರಿಗಳು ರಾಜೀನಾಮೆ ಕೊಡಲಿಲ್ಲ ಇದೂ ಅಲ್ಲದೆ ಪರರಾಷ್ಟ್ರದವರು ಕಾಶ್ಮೀರದ ರಾಜಕೀಯದಲ್ಲಿ ಕೈಹಾಕುತ್ತಿರುವುದು ತಿಳಿದು ಬಂದಿತು

ಈ ಕಾರಣ ಕಾಶ್ಮೀರದ ಘಟನೆಯ ಪ್ರಕಾರಕ್ಕೆ ರಾಜ್ಯದ ಅಧ್ಯಕ್ಷರಾದ ಶ್ರೀ ಕರಣಸಿಂಗರವರು ಶೇಖ ಅಬ್ದುಲ್ಲಾರನ್ನು ನಿವೃತ್ತಗೊಳಿಸಿ ಗುಲಾಂ ಮಹಮ್ಮದ್‌ರ ಮಂತ್ರಿ ಮಂಡಲ ಸ್ಥಾಪನೆಗೆ ಅವಕಾಶ ಕೊಟ್ಟದ್ದು ಯೋಗ್ಯವೂ - ಉಚಿತವೂ - ಸಕಾಲವೂ ಆಗಿದೆಯೆಂಬುದನ್ನು ಬೇರೆ ಹೇಳಬೇಕಿಲ್ಲ. ಕಾಶ್ಮೀರವನ್ನು ಎಲ್ಲ ದೃಷ್ಟಿಗಳಿಂದಲೂ ಅಪಾಯ ಪರಿಸ್ಥಿತಿಯಿಂದ ಕಾಪಾಡಲು ಶೇಖ ಅಬ್ದುಲ್ಲಾರನ್ನು ಬಂಧನದಲ್ಲಿಡಲಾಗಿದೆ. ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ ಒಂದೆರಡು ದಿನ ಪ್ರದರ್ಶನಗಳು ನಡೆದು ಈಗ ಶಾಂತವಾಗಿದೆ. ಗುಲಾಂ ಮಹಮ್ಮದ್‌ರ ರಾಜ್ಯಭಾರದಿಂದ 'ಭಾರತ - ಕಾಶ್ಮೀರಗಳಲ್ಲಿ ಶಾಂತಿ ಸೌಹಾರ್ದಗಳು ನೆಲೆಸಿ ಕಾಶ್ಮೀರವು ಭಾರತದೊಂದು ಅಂಗವಾಗಿ ಏರ್ಪಡುವುದೆಂಬ ಆಶಿಸೋಣ.

ಆಗಷ್ಟು ೨೪ ರಿಂದ ರಾಜ್ಯ ಪರಿಷತ್ತಿನ ಅಧಿವೇಶನ

ರಾಜ್ಯ ಪರಿಷತ್ತಿನ ಅಧಿವೇಶನವು ಆ ೨೪ ರಿಂದ ೧೫ ದಿನಗಳ ಕಾಲ ಸೆಪ್ಟೆಂಬರ್ ೧೧ ರವರೆಗೆ ನಡೆಯುವುದೆಂದು ತಿಳಿಸಲಾಗಿದೆ. ೩ ದಿನಗಳನ್ನು ಸದಸ್ಯರ ಪ್ರಾಸಂಗಿ ನಿರ್ಣಯಗಳಿಗೆ ವಿನಿಯೋಗಿಸಲಾಗಿದೆ.

ನಿಮಗೆ ಬರತಕ್ಕ ನೆಗಡಿ, ಕೆಮ್ಮು, ದಮ್ಮು, ಉಬ್ಬಸ, ಶೀತಭೇದಿ, ಶೀತಜ್ವರ, ಮಲೇರಿಯಾ ಮತ್ತು ಎಲ್ಲಾ ನೋವುಗಳಿಗೂ ದಿವ್ಯಾಮೃತವಾದಂಥಾ



★ಕಾಶ್ಮೀರು ಅರಕು★

(ಆಗಲೇ ನೆಗಡಿ! ಜೆಡ್ಡು ಪ್ರಾರಂಭವಾಯಿತು) (ಮನೆಯ ವೈದ್ಯ)

ಇದನ್ನು ಉಪಯೋಗಿಸಿ ನಿವಾರಣೆ ಮಾಡಿಕೊಳ್ಳಿ

ಎಲ್ಲಾ ಷಾಪುಗಳಲ್ಲಿ ದೊರೆಯುತ್ತೆ.

ತಾನಾಗಿ ತಂದು ಕೊಂಡ ಬಡತನ

ಯಾವುದೊಂದು ಜನಾಂಗದ ಆಹಾರವು ಬಡತನವನ್ನು ತರುವಂಥ ದುಸ್ಥವರ್ಗವನ್ನು ಹಿಡಿದರೆ, ಅದರಿಂದಾಗುವ ಕೇಡು ಅತ್ಯಂತ ಬಲಾಢ್ಯ ಪರಚಕ್ರದಾಳಿಯಿಂದುಟಾಗುವ ದುಷ್ಪರಿಣಾಮವನ್ನು ಮೀರುತ್ತದೆ. ಇಂಥ ದುರ್ದೈವನೇ ಇದೀಗ ನಮ್ಮ ಪ್ರಾಂತಕ್ಕೆ ಬಂದಿದೆ ಅಕ್ಕಿ ನಮ್ಮ ಮುಖ್ಯ ಮತ್ತು ಒಳ್ಳೇ ಆಹಾರ. ವಂಶಪರಂಪರ್ಯವಾಗಿ ಅದನ್ನು ಉಪಯೋಗಿಸುತ್ತಾ ಬಂದಿರುವೆವು. ನಮ್ಮ ಆರೋಗ್ಯ, ಶಕ್ತಿ, ಉತ್ಸಾಹ ಮತ್ತು ಬುದ್ಧಿ ಇವುಗಳ ಸ್ವಲ್ಪ ಭಾಗವನ್ನಾದರೂ ಅದು ಕೊಟ್ಟಿದೆ. ಆದರೆ ಆಶ್ಚರ್ಯವೇನೆಂದರೆ, ಮೇಲ್ವರ್ಗದ ಜನರಲ್ಲಿ ಅವರ ಮೂರ್ಖತನದಿಂದ ಅಕ್ಕಿಯಲ್ಲಿರುವ ಅಮೌಲ್ಯವಾದ ಪೋಷಕ ಗುಣವನ್ನು ತೊರೆದು ಹಾಕುವ ಮಾರ್ಗವೊಂದು ನೆಲೆಸಿದೆ. ಅದೇನಂದರೆ, ಅಕ್ಕಿ ಗಿರಣಿ. ಈ ಗಿರಣಿಗಳು ಪ್ರಾಂತದ ತುಂಬಾ ಚಳಿಜ್ವರ ಮತ್ತು ಅಪಾಯಕಾರಕ ವ್ಯಾಧಿಗಳ ಮಿತ್ರನಂತೆ ಹಬ್ಬಿ, ಇಡೀ ಜನಾಂಗದ ಒಳ್ಳೇ ಆಹಾರದ ಸಾರವನ್ನೇ ಸುಂಗಿ, ಅದರ ಸತ್ವವನ್ನೇ ಹಾಳುಮಾಡಿ ಬಿಟ್ಟಿವೆ. ಅನ್ನವನ್ನು ತಯಾರಿಸುವಾಗ್ಯೆ ನಾವೇ ಅದರ ಪೋಷಕ ದ್ರವ್ಯದ ಕೆಲವಂಶವನ್ನು ಕುದಿಸಿ ಹಾರಿ ಹೋಗುವ ಹಾಗೆ ಮಾಡುತ್ತೇವೆ. ಉಳಿದಸ್ಟು ಭತ್ತ ಒಯ್ದು ಅಕ್ಕಿಯನ್ನು ಮಾಡುವಾಗ್ಗೆ ಯಂತ್ರಗಳನ್ನು ಉಪಯೋಗಿಸುವುದರಿಂದ ನಾಶವಾಗುತ್ತದೆ. ಅಂತೂ ಮನುಷ್ಯನಿಗೆ ಬೇಕಾದ ಉತ್ತಮ ಆಹಾರದ ಅಂಶವು ಇಲ್ಲದಂತಾಗುವುದು. ಇದಲ್ಲವೇ ನಾವು ಬರಮಾಡಿಕೊಂಡ ಬಡತನ! ಅದೂ ಕೂಡಾ ಹಾಲು ತುಪ್ಪಗಳು ಕೊಂಚ ಸಿಗುವ ಕಾಲದಲ್ಲಿ ಈ ಕಾರಣದಿಂದಲೇ ನಮ್ಮಲ್ಲಿ ಎಷ್ಟೋ ವ್ಯಾಧಿಗಳು ಮನೆ ಮಾಡಿವೆ. ಆದರೂ ನಮ್ಮ ಜನರು ಇದರಿಂದೇನೂ ಪಾಠ ಕಲಿತಂತೆ ಕಾಣದಿರುವುದು ನಮ್ಮ ದುರ್ದೈವವಲ್ಲದೇ ಮತ್ತೇನು?

– ರವೀಂದ್ರನಾಥ ಠಾಕೂರ್

ಸೇತುವೆ ಮೇಲೆ ನೀರು ಹರಿಯುತ್ತಿತ್ತು

ಹೊಸಪೇಟೆಗೆ ಬರುತಿದ್ದ ಒಬ್ಬರು ಕೊಚ್ಚಿಹೋದರು

ಮುನಿರಾಬಾದ್ ಪ್ರಾಜೆಕ್ಟಿನಿಂದ ಹೊಸಪೇಟೆಗೆ ಆ 4 ರಂದು ಸೈಕಲ್ ಮೇಲೆ ಬರುತ್ತಿದ್ದ ಧನರಾಜ್ ಎಂಬುವರು ಸೇತುವೆ ಮೇಲೆ ಉಕ್ಕಿ ಹರಿಯುತ್ತಿದ್ದ ನೀರಿನ ಸೆಳೆತಕ್ಕೆ ಸಿಕ್ಕಿ ಕೊಚ್ಚಿ ಹೋದಪ್ರಸಂಗ ವರದಿಯಾಗಿದೆ. ಇವರು ಹೊಸಪೇಟೆಯ ಬಾಂಬೆ ಸ್ಟ್ಯಾನ್ಸಿ ಸ್ಟೋರ್ಸ್‌ನಲ್ಲಿ ಗುಮಾಸ್ತರಾಗಿದ್ದರೆಂದೂ, ತಮಗೆ ಬರಬೇಕಾಗಿದ್ದ ಬಾಕಿ ಹಣವನ್ನು ವಸೂಲು ಮಾಡಿಕೊಂಡು ಬರುತ್ತಿದ್ದರೆಂದೂ ನುಡಿಯಲಾಗಿದೆ. ಈವರೆಗೂ ಸೈಕಲ್ಲಾಗಲೀ ಶವವಾಗಲೀ ಪತ್ತೆಯಾಗಿಲ್ಲ.

ಫ್ರೆಂಚ್ ಭಾರತದ ಕೈದಿಗಳಿಗೆ ರಿಯಾಯಿತಿ

ಫ್ರೆಂಚ್ ಭಾರತದಲ್ಲಿ ಫ್ರೆಂಚ್ ರಾಷ್ಟ್ರೀಯ ದಿನಾಚರಣೆಯನ್ನು ಜುಲೈ ೧೪ ರಲ್ಲಿ ನಡೆಸಲಾಯಿತು. ಆದರ ಸಲುವಾಗಿ ಫ್ರೆಂಚ್ ಭಾರತದಲ್ಲಿರುವ ಕೈದಿಗಳಿಗೆ ಅವರ ಶಿಕ್ಷೆಯ ಅವಧಿಯಲ್ಲಿ ಹತ್ತನೆ ಒಂದು ಭಾಗವನ್ನು ವಜಾ ಮಾಡಿ ರಿಯಾಯಿತಿ ತೋರಿಸಲಾಗಿದೆ.

ಬಳ್ಳಾರಿ ಸಬಾರ್ಡಿನೇಟ್ ಜಡ್ಜ್ ಕೋರ್ಟಿನಲ್ಲಿ

O. S. 18/53.

ವಾದಿ:-

K. ಜಯರಾಂ ಶೆಟ್ಟಿ S/o ವೆಂಕಟಗಿರಿಯಪ್ಪ ವ್ಯಾಪಾರಿ, ಹೊಸಪೇಟೆ.

ಪ್ರತಿವಾದಿ:-

ವಡ್ರ ಪಿಚ್ಚಯ್ಯ S/o ವಡ್ರ ಚಲ್ಲಾರಂಗಯ್ಯ, ಕಂಟ್ರಾಕ್ಟರು, ತುಂಗಭದ್ರಾ ಕೆನಾಲ್ ವರ್ಕ್ಸ್, ಕಲ್ಲುಭಾವಿ-ಆದವಾನಿ

ನೋಟೀಸು

ತಾ. 11-7-1952 ನೇ ದಿನ ಪ್ರತಿವಾದಿಯು ವಾದಿಗೆ ರೂ. 600/- ಕ್ಕೆ ಪ್ರೋನೋಟು ಬರೆದು ಕೊಟ್ಟಿರುತ್ತಾನೆ. ಇದಲ್ಲದೆ ತಾ 31-10-52 ರಲ್ಲಿ ಪ್ರತಿವಾದಿಯು ಹೆಸರಿನ ಮೇಲೆ ಬರೆದು ಕೊಟ್ಟ ಅಗ್ರಿಮೆಂಟು ಪ್ರಕಾರ ರೂ. 7000-0-0 ಬಾಕಿಯಾಗಿರುತ್ತಾನೆ. ಬಡ್ಡಿ ಸಹಿತ ಪ್ರೋನೋಟು ಮತ್ತು ಅಗ್ರಿಮೆಂಟ್ ಬಾಬತು ಸೇರಿ ವಾದಿಯು ಪ್ರತಿವಾದಿಯ ಮೇಲೆ 7660-0-0 ರೂ.ಗಳಿಗೆ ದಾವಾ ಮಾಡಿರುತ್ತಾನೆ. ಪ್ರತಿವಾದಿಗೆ ತಕರಾರಿದ್ದರೆ ತಾ. 29 8-53 ಕ್ಕೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯು ಪ್ರತಿವಾದಿಯ ಪರೋಕ್ಷದಲ್ಲಿ ತೀರ್ಮಾನಿಸಲ್ಪಡುತ್ತದೆ.

ಕೆ. ಪಿ. ಮರಿಸ್ವಾಮಿ
ವಾದಿಯ ಅಡ್ವೊಕೇಟ್.

ಬಳ್ಳಾರಿಯಲ್ಲಿನ ಸೆಂಟ್ರಲ್ ಎಕ್ಸೈಸ್ ಆಫೀಸು ಅನಂತಪುರಕ್ಕೂ, ಅದರ ಉಪಶಾಖೆಯು ದಾವಣಗೆರೆಗೂ ಸ್ಥಳಾಂತರಿಸಲ್ಪಟ್ಟಿದೆ. ಸಾಮಾನು ಸರಂಜಾಮುಗಳ ಸಾಗಾಣಿಕೆ ನಡೆದಿದೆ.

ನಿಜವಾದ ವಾಚ್ - ಪೆನ್ ಐದೇ ರೂಪಾಯಿಗೆ

ಅಮೆರಿಕಾ ತಯಾರಿಯ "ಮಾರ್ವಲ್" ಫೌಂಟನ್ ಪೆನ್ ಮತ್ತು ನಿಜವಾದ 10 ವರ್ಷ ಗ್ಯಾರಂಟಿಯುಳ್ಳ ಸ್ವಿಸ್‌ವಾಚ್ ಇವೆರಡನ್ನು ನಮ್ಮ ಉದ್ಯೋಗಾಭಿವೃದ್ಧಿಗಾಗಿ 5/- ಐದೇ ರೂ, ಗಳಲ್ಲಿ ಕೊಡುತ್ತೇವೆ. ಇದಕ್ಕೆ 1-2-0 ಪಾರ್ಸಲ್ ಖರ್ಚು – ನಾವು ಹೇಳಿದ್ದಕ್ಕೆ ವಿರೋಧವಿದ್ದಲ್ಲಿ ಹಣ ಹಿಂದಕ್ಕೆ ಕೊಡಲಾಗುತ್ತದೆ.

LONDON TRADING AGENCY.
(N. B. B) JULLUNDER CITY.

The Purest Gingelly Oil

For Cooling effect, for the taste and can be used for pickles to keep it for long duration Guaranteed against all adulteration.
SEE THE SEAL & PURCHASE

ಶುದ್ಧವಾದ ಮತ್ತು ಸ್ವಚ್ಛ ಎಳ್ಳೆಣ್ಣೆ

ಮೆದುಳಿನ ತಂಪಿಗಾಗಿ, ಅಭ್ಯಂಗನದಲ್ಲಿ, ರುಚಿಯಾಗಿ ಆಹಾರದಲ್ಲಿ ಕೆಡದಿರಲು ಉಪ್ಪಿನಕಾಯಿಗಾಗಿ – ಉಪಯೋಗಿಸಿರಿ. ಗ್ಯಾರಂಟಿ ಕೊಡುತ್ತೇವೆ. ನಮ್ಮ ಸೀಲು A. S. BRAND ನೋಡಿ ಕೊಳ್ಳಿರಿ. ಚಿಲ್ಲರೆಯಾಗಿಯೂ, ಬಾಟಲುಗಳಲ್ಲಿಯೂ, ಮಾರಲ್ಪಡುತ್ತದೆ.

Ambati Subbanna & Co, Samalakot.

ಅಂಬಾಟಿ ಸುಬ್ಬಣ್ಣ ಅಂಡ್ ಕೊ ಶಾಮಲಕೋಟ್

ನಮ್ಮ ಬಳ್ಳಾರಿ ಏಜೆಂಟರು

೧) ಮೆಸರ್ಸ ಎಂ. ಡುಸೇಂಜೆರಾವ್, ಎಂ. ವೆಂಕೋಜೆರಾವ್ ೨) ದಿ ಪಾಪುಲರ್ ಗಿರಿ ಸ್ಟೋರ್ಸ್
೩) ಏ. ಎಂ. ಗಿರಿ ಅಂಡ್ ಸನ್ಸ್ ೪) ದಿ ಪ್ಯಾಯನೀರ್ ಕೊ-ಆಪರೇಟಿವ್ ಸ್ಟೋರ್ಸ

ಸುಪ್ರಶಿದ್ಧ
ಮೈಸೂರು - ಸುಗಂಧ ದ್ರವ್ಯಗಳು
ಶ್ರೇಷ್ಠವಾದ ಅಗರಬತ್ತಿ
-: 24 ತೊಲೆಗಳ 1 ಸೇರಿನ ಬೆಲೆ :-

ಮಹರಾಜಾ ಬತ್ತಿ	20 ರೂ.	ಕಸ್ತೂರಿ ಜವಾಜಿ	10 ರೂ.
ದರ್ಬಾರ್ ಬತ್ತಿ	15 ರೂ.	ಡೋಸ್ ಬತ್ತಿ	6 ರೂ.
ಆನಂದ ಬತ್ತಿ	12 ರೂ.	ಜಸ್ಮಿನ್	5 ರೂ.
ಮನಮೋಹನ್ ಬತ್ತಿ	10 ರೂ.	ಪುನುಗು	4 ರೂ.
ಮೈಸೂರು ಅಂಬರ್ ಬತ್ತಿ	8 ರೂ.	ಹೀನ	3 ರೂ.

12 ವಿಧದ 300 ಬತ್ತಿಗಳನ್ನೊಳಗೊಂಡ ಡಬ್ಬಿಯ ಬೆಲೆ 6 ರೂ.
ಪ್ಯಾಕಿಂಗ್ ಪೋಸ್ಟೇಜ್ ಬೇರೆ

ದಿ ಸ್ಟೇಟ್ ಪರ್ಫ್ಯೂಮರಿ ಮಾರ್ಟ್ ಮೈಸೂರು
The State Perfumery Mart Mysore.

ಬಳ್ಳಾರಿ ಡಿ॥ಮು॥ ಕೋರ್ಟಿನಲ್ಲಿ
S. C. 176/53
ನಬೀಸಾಹೇಬ್ .... ವಾದಿ
ಮಾಳಪ್ಪ ಮತ್ತು ಇನ್ನೊಬ್ಬರು .... ಪ್ರತಿವಾದಿಗಳು

ಬಲಕುಂದಿ ಗ್ರಾಮದ ಹಿರೆಲಿಂಗಡು ನನಗೆ ಮಾಳಪ್ಪನಿಗೆ ನೋಟೀಸು.

ನಿಮ್ಮ ಮೇಲೆ ಮಾಡಿದ ದಾವೆಯು ನಿಮ್ಮ ಹಾಜರಿಗಾಗಿ 23-8-53 ಕ್ಕೆ ವಾಯ್ದೆ ಹಾಕಲಾಗಿದೆ. ಆ ದಿನ ನೀವು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸದಿದ್ದರೆ ದಾವೆಯ ಏಕಪಕ್ಷ ನಿರ್ಣಯವಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಟಿ. ಹನುಮಂತರಾವು
ವಾದಿಯ-ವಕೀಲರು

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾವ್ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 15-8-53

Sri. _____

_____

_____

Edited Printed & Published by T. B Keshava Rao, at Nava Bharath Press, Bellary.

ನಾಡಿಹಾದರ

ಸೋಮವಾರ
ಆಗಷ್ಟ
೨೪, ೧೯೫೩

ವರ್ಷ 14
ಸಂಚಿಕೆ 22

ಬಳ್ಳಾರಿಯ ಉಪ್ಪಾಲ ರಾಷ್ಟ್ರೀಯ ವಾರಪತ್ರಿಕೆ
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವು

ಬಳ್ಳಾರಿಯಲ್ಲಿ ಸ್ವಾತಂತ್ರ್ಯ ದಿನೋತ್ಸವ

ಬಳ್ಳಾರಿ ನಗರದಲ್ಲಿ 15ನೇ ತಾರೀಖು ಎಲ್ಲ ಕಛೇರಿಗಳು ಮತ್ತು ಶಾಲೆಗಳವರೂ ರಾಷ್ಟ್ರಧ್ವಜಾರೋಹಣ ನಡೆಸಿದರು ಪೋಲೀಸ್ ಮೈದಾನದಲ್ಲಿ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಶ್ರೀ ಸುಂದರಂರವರು ಪೋಲೀಸ್ ಪಡೆಯ ಸೆಲ್ಯೂಟನ್ನು ಸ್ವೀಕರಿಸಿದರು. ಹೀಗೆ ಸೂಗಮ್ಮನವರ ಬೇಸಿಕ್ ಶಾಲೆಯಲ್ಲಿ ಶ್ರೀ ಗೊ. ಕೃಷ್ಣಾಜಾಯರೂ ಎಸ್.ಜಿ. ಹೈಸ್ಕೂಲಿನಲ್ಲಿ ಶ್ರೀ ಡಿ ಎಸ್. ಹನುಮಂತರಾಯರೂ ಧ್ವಜಾರೋಹಣ ಮಾಡಿದರು. ಸರ್ಕಲ್ ಕಾಂಗ್ರೆಸ್ ಕಮಿಟಿಯವರು ಸಾಂಬಮೂರ್ತಿ ಮೈದಾನದಲ್ಲಿ ಪ್ರಾತಃಕಾಲ ಧ್ವಜಾರೋಹಣ ಮಾಡಿ ಸಾಯಂಕಾಲ ಸಭೆ ಕರೆದಿದ್ದರು. ರಾಯಲಸೀಮ ಪಾಲಿಟೆಕ್ನಿಕ್‌ನಲ್ಲಿ ಆಕರ್ಷಕ ಕಾಯಕ್ರಮವಿದ್ದಿತು. ಹಿಂದಿ ಕನ್ನಡ ತೆಲುಗು ಇಂಗ್ಲೀಷ್‌ಗಳಲ್ಲಿ ಏಕಾಂಕ ನಾಟಕಗಳ ಪ್ರದರ್ಶನವಾಯಿತು.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :– ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.
ಪ್ರಕಾಶಕರು :– ಶ್ರೀ ಬಿ. ನಾ. ಬೈಚವಾಲ ಬಿ. ಎ.
"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ನಿಃಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರದೇಶದವರಿಗೆ ೫ ರೂಪಾಯಿ.
,, ಸ್ವದೇಶೀಯರಿಗೆ 4-8-0 ರೂಪಾಯಿ
ಬಿಡಿ ಸಂಚಿಕೆ 6 ಆಣೆ

ಸಹಾಯಕ ಪ್ರಾದೇಶಿಕ ಸೈನ್ಯ

ದೇಶದ ಎಲ್ಲ ನಾಗರಿಕರಲ್ಲಿಯೂ ದೇಶಾಭಿಮಾನಗಳು ಅಭಿವೃದ್ಧವಾಗಲೆಂದು ಕೂಲವಾಗಿ ಎಂಟೆ ವರ್ಷಗಳಿಂದ ವರುಷಗಳ ನರಗಿನ ಜನರಿಗೆ ಸೈನಿಕ ತರಬೇತಿಯನ್ನು ಕೊಟ್ಟು, ಪ್ರಾದೇಶಿಕ ಸಹಾಯಕ ಸೈನ್ಯವನ್ನು ಸಂಘಟಿಸಲು ಭಾರತ ಸರಕಾರ ನಿರ್ಧರಿಸಿದೆ. ಇವರಿಗೆ ಕವಾಯಿತು ಪ್ರಾಥಮಿಕ ಫೀಲ್ಡ್ ಎಂಜಿನಿಯರಿಂಗ್, ದೈಹಿಕ ಶಿಕ್ಷಣ, ಗುಂಡು ಹಾರಿಸುವುದು, ಯುದ್ಧತಂತ್ರದ ಶಿಕ್ಷಣ ಕೊಡಲಾಗುವುದು

ಜನರಲ್ ಅಸೆಂಬ್ಲಿಯಲ್ಲಿ ನಿರ್ಣಯಬರಲಿದೆ

ರಷ್ಯಾಕ್ಕೂ ಸ್ಥಾನ ಕೊಡಲು ಶಿಫಾರಸು

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ರಷ್ಯಾ ಮತ್ತು ಭಾರತಗಳು ಭಾಗವಹಿಸಬೇಕೆಂದು ಸೂಚಿಸುವ ನಿರ್ಣಯಗಳು ಇಲ್ಲಿ ಆರಂಭವಾಗಲಿರುವ ಪ್ರಪಂಚ ಸಂಸ್ಥೆ ಜನರಲ್ ಅಸೆಂಬ್ಲಿ ಅಧಿವೇಶನದ ಮುಂದೆ ಬರಲಿವೆ

ಕೊರಿಯದ ಯುದ್ಧಕ್ಕೆ ಸೈನ್ಯಗಳನ್ನು ಕಳಿಸಿದ್ದ ಹದಿನಾರು ಪ್ರಪಂಚ ಸಂಸ್ಥೆ ಸದಸ್ಯ ರಾಷ್ಟ್ರಗಳ ಸಭೆ ಈ ದಿನವೂ ನಡೆದ ನಂತರ, ಮೇಲೆ ಕಂಡ ವಿಷಯವನ್ನು ವ್ಯಕ್ತಪಡಿಸಲಾಯಿತು.

ಕಮ್ಯೂನಿಷ್ಟರು ಬಯಸಿದರೆ ರಷ್ಯಾ ಕೊರಿಯಾವ ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸಬೇಕೆಂದು ಸಲಹೆ ಮಾಡುವ ನಿರ್ಣಯವನ್ನು ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ಗಳು ಸೂಚಿಸಿವೆ.

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾರತ ಭಾಗವಹಿಸಬೇಕೆಂದು ಸಲಹೆ ಮಾಡುವ ನಿರ್ಣಯವನ್ನು ಬ್ರಿಟನ್, ನ್ಯೂಜಿಲೆಂಡ್, ಕೆನಡ ಮತ್ತು ಆಸ್ಟ್ರೇಲಿಯಗಳು ಸೂಚಿಸಿವೆ

ಹೊಸಪೇಟೆ ಡಿ. ಮು. ಕೋರ್ಟಿನಲ್ಲಿ

S C. 30/50 E. P. 126/53

ಬಿ. ಶಂಕರನಾಯಕ .... ವಾದಿ-ಅರ್ಜಿದಾರ
ಮತ್ತು
ಜೆ. ಎಂ. ಲೋಕ್ಯಾನಾಯಕ .... ಪ್ರತಿವಾದಿ–ಎದುರು ಅರ್ಜಿದಾರ
ವರುಫ್ ಜೋಗಿಹಳ್ಳಿ ಮೂಡಿ

ಆರ್ಡರು 21, ರೂಲು 22, ಮತ್ತು ರೂಲು 37 ಕೆಳಗೆ ಪ್ರತಿವಾದಿಗೆ ನೋಟೀಸು.

ಮೇಲಿನ ನಂಬರಿನಲ್ಲಿ ಡಿಕ್ರಿ ಅಮಲುಗಾಗಿಯೂ, ಮತ್ತು ನಿಮ್ಮನ್ನು ಬಂಧಿಖಾನೆಯಲ್ಲಿ ಇಡಿಸುವುದಕ್ಕಾಗಿಯೂ, ಅರ್ಜಿ ಹಾಕ್ಕಿಕೊಂಡಿರುತ್ತಾರೆ. ಕಾರಣ ನಿಮ್ಮನ್ನು ಆಕ್ಷೇಪಣೆಗಳಿಗಾಗಿ ಸದರಿ ಅರ್ಜಿಗಳ ವಾಯಿದೆಯು ತಾ. 28-8 1953 ಕ್ಕೆ ಇರುತ್ತದೆ. ಆವು ಕೋರ್ಟಿನಲ್ಲಿ ಹಾಜರಾಗಿ ಸದರಿ ವಾಯಿದಾಕ್ಕೆ ನಿಮ್ಮ ಆಕ್ಷೇಪಣೆಗಳು ತಿಳಿಸದಿದ್ದರೆ, ತಪ್ಪಿ ಪರೋಕ್ಷವಲ್ಲಿ ಕೋರ್ಟಿನವರು ವುತ್ತರ ಮಾಡುವರೆಂದು ಈ ನೋಟೀಸು ಮೂಲಕ ಪ್ರತಿವಾದಿಗೆ ತಿಳಿಸೋಣವಾಗಿರುತ್ತದೆ.

ಯಂ. ನಟೇಶ ಮೊದಲಿಯಾರ್
ವಾದಿ ಅರ್ಜಿದಾರರ – ವಕೀಲರು.

ಭಾರತ-ಪಾಕಿಸ್ಥಾನಗಳ ವಿವಾದ ಶಾಂತಿ ಮಾರ್ಗದಲ್ಲೇ ಪರಿಹಾರ

ಲೋಕ ಸಭೆಯಲ್ಲಿ ನೆಹ್ರೂ ಘೋಷಣೆ
ಪಾಕಿಸ್ತಾನ ಪ್ರಧಾನ ಮಂತ್ರಿಯೂ ಹಾಜರಿದ್ದರು

ಭಾರತ ಪಾಕೀಸ್ತಾನಗಳೆರಡರ ಸಂಬಂಧವನ್ನು ದುರದೃಷ್ಟವಶಾತ್ ಕುಗ್ಗಿಸಿರುವ ಪ್ರತಿಯೊಂದು ಸಮಸ್ಯೆಯನ್ನೂ ಶಾಂತಿಯುತವಾಗಿ ಪರಿಹರಿಸಲು ಭಾರತವು ಉತ್ಸುಕವಾಗಿದೆ, ಎಂಬುದಾಗಿ ಪ್ರಧಾನ ಮಂತ್ರಿ ಪಂ॥ ನೆಹರೂರವರು ಪಾಕೀಸ್ತಾನ ಪ್ರಧಾನ ಮಂತ್ರಿ ಮಿ॥ ಮಹಮದಾಲಿಯವರಿಗಿಂಯ ಆಶ್ವಾಸನೆ ಕೊಟ್ಟರು.

ಲೋಕ ಸಭೆಯಲ್ಲಿ ನೆಹರೂರವರು ಕೊಟ್ಟ ಈ ಹೇಳಿಕೆಯನ್ನು ರಾಷ್ಟ್ರಪತಿಯವರ ಗ್ವಾಲಿಯರ್‌ನಲ್ಲಿ ಕುಳಿತು ಮಿ॥ ಮಹಮದಾಲಿಯವರು, ಬೇಗಂ ಅಲಿಯವರೂ, ಪಾಕೀಸ್ತಾನ ವಿದೇಶಾಂಗ ಮಂತ್ರಿ ಸರ್ ಮಹಮದ್ ಜಫ್ರುಲ್ಲಾ ಖಾನ್‌ರವರೂ ಕೇಳಿದರು.

"ನಾವು ಸೌಹಾರ್ದ ಮತ್ತು ಸ್ನೇಹಿತಿಯ ಹಾದಿಯನ್ನೇ ತುಳಿಯಲು ನಿರ್ಧರಿಸಿದ್ದೇವೆ ಈ ಹಾದಿಯನ್ನೆ ಶ್ರದ್ಧೆಯಿಂದ ಅನುಸರಿಸಲು ಮತ್ತು ಕೆಲವರು ತಾತ್ಕಾಲಿಕವಾಗಿ ಉದ್ರೇಕ ಮತ್ತು ವಿರಸ ಭಾವನೆಗಳಿಗೆ ಒಳಗಾದರೂ ಸಹಾ ಇದರಿಂದ ಚಲಿಸದೆ ಇರಲು ನಾವು ಪೃಥ್ವಿಯ ನಿಶ್ಚಯ ಮಾಡಿದ್ದೇವೆ" ಎಂದು ನೆಹರೂ ಘೋಷಿಸಿದರು.

ನಾನು ಕರಾಚಿಗೆ ಭೇಟಿ ಕೊಟ್ಟಿದ್ದಾಗ ಪಾಕೀಸ್ತಾನದ ಪ್ರಧಾನ ಮಂತ್ರಿಯೊಡನೆ ಸುದೀರ್ಘವಾಗಿ ಮತ್ತು ಲಾಭದಾಯಕವಾದ ಮಾತುಕತೆಗಳನ್ನು ನಡೆಸಿದೆ. ಆ ಮಾತುಕತೆಗಳ ಕೊನೆಯಲ್ಲಿ ನಾವಿಬ್ಬರೂ ಸಂಯುಕ್ತ ಹೇಳಿಕೆಯೊಂದನ್ನು ಹೊರಡಿಸಿದೆವು. ಇದರಲ್ಲಿ ಎರಡು ರಾಷ್ಟ್ರಗಳೂ ಪರಸ್ಪರ ಸ್ವಾತಂತ್ರ್ಯ ಮತ್ತು ಸಾಮಾನ್ಯ ಕತೆಗಳನ್ನು ಗೌರವಿಸಬೇಕೆಂದೂ, ಪ್ರತಿಯೊಂದು ರಾಷ್ಟ್ರಕ್ಕೂ ಆಂತರಿಕ ವಿಚಾರದಲ್ಲಿ ಮತ್ತು ಆಂತರಾಷ್ಟ್ರೀಯ ವಿಷಯಗಳಲ್ಲಿ ಕ್ರಮತನಕ್ಕೆ ಸರಿಯಾದಂತಹ ನೀತಿಯನ್ನನುಸರಿಸುವ ಸ್ವಾತಂತ್ರ್ಯವಿದೆಯೆಂದು ಘೋಷಿಸಿದೆವು. ಹೀಗಿದ್ದರೂ, ಎರಡೂ ರಾಷ್ಟ್ರಗಳೂ ಪರಸ್ಪರ ಸಹಕಾರದಿಂದ ವರ್ತಿಸಬೇಕಾದ ಅಗತ್ಯವಿದೆಯೆಂದೂ, ಆದರಿಂದ ಈಗಿನ ಭಾರತ – ಪಾಕೀಸ್ತಾನಗಳ ವಿವಾದಗಳನ್ನು ನಿವಾರಿಸಬೇಕಷ್ಟೇ ಜರ್ಜರಿ, ಎರಡೂ ರಾಷ್ಟ್ರಗಳ ನಡುವೆ ಸೌಹಾರ್ದ ಸಂಬಂಧಗಳನ್ನು ವೃದ್ಧಿಗೊಳಿಸಬೇಕೆಂದೂ, ಸಹಾಯಿಸಲಾಯಿತು. ಎರಡೂ ರಾಷ್ಟ್ರಗಳ ಪ್ರಗತಿಗೆ ಮತ್ತು ಜನಸಾಮಾನ್ಯರ ಸುಖೋಪಭೋಗಕ್ಕೆ ಅತ್ಯಂತ ಅಗತ್ಯವೆಂದೂ ನಾವಿಬ್ಬರೂ ಭಾವಿಸಿದೆವು. ಈ ಹೇಳಿಕೆಯನ್ನು ಪಾಲಿಸಲು ನಮ್ಮ ಸರಕಾರದವರು ಕೃತನಿರ್ಧಾರವಾಗಿದ್ದಾರೆ ನಮ್ಮ ಜನತೆಯೂ ದೃಢವಾಗಿ ನಿಂತಿದ್ದಾರೆಂದು ನನ್ನ ನಂಬಿಕೆ ಎಂದೂ ನೆಹ್ರೂ ಹೇಳಿದರು.

"ಪಾಕೀಸ್ತಾನದ ಮತ್ತು ಭಾರತದ ಜನತೆಯಲ್ಲಿ ಕೆಲವು ಸಂಸ್ಥಗಳ ಸದಸ್ಯರು ಈ ಮೂಲಭೂತ ನೀತಿಗೇ ಭಂಗತರಲು ಆಗಿಂದಾಗ್ಗೆ ಪ್ರಯತ್ನಿಸುತ್ತಿರುವದು ಶೋಚನೀಯ ಭೂಗೋಳ, ಇತಿಹಾಸ ಮತ್ತು ಉಭಯ ಸಾಮಾನ್ಯ ಗತಕಾಲದಿಂದ ಅನಿವಾರ್ಯವಾಗಿ ಒಟ್ಟಿಗೆ ಇರಬೇಕಾಗಿರುವ ಈ ಎರಡೂ ರಾಷ್ಟ್ರಗಳ ನಡುವೆ ಯುದ್ಧದ ಮಾತನಾಡುವವರನ್ನು ಇಂದಿನ ಜಗತ್ತಿನ ಮತ್ತು ನಮ್ಮ ಈ ಎರಡು ರಾಷ್ಟ್ರಗಳ ಬಗ್ಗೆ ಸಾಕಷ್ಟು ತಿಳಿವಳಿಕೆಯಿಲ್ಲದವರು ಅಥವಾ ವಿವೇಕ ದೃಷ್ಟಿಯೇ ಇಲ್ಲದವರು ಎಂದು ಹೇಳಬೇಕಷ್ಟೆ," ಎಂದು ನೆಹ್ರೂ ಹೇಳಿದರು.

—ಯೂನಿವರ್ಸಲ್—

ಹೊಸಪೇಟೆ ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S 264/53

ಕೆ. ವಿಠೋಬಣ್ಣ — ವಾದಿ

ಚಿಲ್ಲ ಪಿಚ್ಚಯ್ಯ .... ಪ್ರತಿವಾದಿ

.... ಪ್ರತಿವಾದಿಗೆ ನೋಟೀಸು ....

ಮೇಲ್ಕಾಣಿಸಿದ ಸಂಬರಿನ ದಾವೆಯು ಪ್ರತಿವಾದಿಯ ಹಾಜರಿಗಾಗಿ ತಾ 29-8-1953 ಕ್ಕೆ ವಾಯ್ದೆ ಹಾಕಲಾಗಿದೆ. ಈ ಕಾರಣ ನೀವು ಆ ದಿವಸ ಬ್ಯಾಡಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ನಿಮ್ಮ ಅಕ್ಷೇಪಣೆಯನ್ನು ತಿಳಿಸಬೇಕಾದದ್ದಿದ್ದಲ್ಲಿ, ನಿಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ದಾವೆಯ ಕ್ರಮವು ಮುಂದೆ ಸಾಗುವದು

ಎಂ. ರಂಗನಾಥಾಚಾರ್
ವಾದಿಯ—ವಕೀಲರು



ಅಮೆರಿಕಾದಲ್ಲಿ ಮಲೇರಿಯಾ ತಡೆಗಟ್ಟುವ ಕ್ರಮ

ಪ್ರತಿಯೊಬ್ಬರೂ ತನ್ನ ಕರ್ತವ್ಯ ಮಾಡಲಿ
ಸ್ವಾತಂತ್ರ್ಯ ಜವಾಬ್ದಾರಿ ಕುರಿತು ಸಚಿವರ ಭಾಷಣ

ಕೋಲಾರದಲ್ಲಿ ಸ್ವತಂತ್ರ್ಯದಿನೋತ್ಸವವು ಬಹು ವೈಭವದಿಂದ ಆಗಸ್ಟ್ 15ರಂದು ನಡೆಯಿತು. ಈ ಸಮಾರಂಭದಲ್ಲಿ ಆರೋಗ್ಯ ಮತ್ತು ಸ್ಥಳೀಯ ಶಾಖಾ ಮಂತ್ರಿ ಶ್ರೀ. ಚನ್ನಯ್ಯನವರು ಭಾಷಣ ಮಾಡುತ್ತಾ ಈ ರೀತಿ ನುಡಿದರು.

"ನಾವು ಸ್ವಾತಂತ್ರ್ಯ ಗಳಿಸಿದ ಆರನೆಯ ವರ್ಷದ ಉತ್ಸವವನ್ನು ಈ ದಿನ ಆಚರಿಸುತ್ತಿದ್ದೇವೆ. ನಮ್ಮನ್ನು ಬಂಧಿಸಿದ್ದವಿದೇಶಿಯ ಸಂಕೋಲೆಗಳನ್ನು ಕಿತ್ತು ಬಿಸಾಟೆ ನಾವು ಸ್ವತಂತ್ರರಾಗಿ ಇಂದಿಗೆ ಆರು ವರ್ಷಗಳಾದುವು. ಜನತೆಯ ಪ್ರತಿನಿಧಿಗಳು ರಾಷ್ಟ್ರವ ಆಡಳಿತ ಮಂಡಿಸಿಕೊಂಡು ಇಂದಿಗೆ ಆರು ವರ್ಷಗಳಾದವು. ಈ ಅವಧಿಯಲ್ಲಿ ನಮ ರಾಷ್ಟ್ರ ಎಂತಹ ಕಷ್ಟನಷ್ಟ ತೊಂದರೆಯನ್ನು ಅನುಭವಿಸಬೇಕಾಯಿತೆಂಬುದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುವುದು ಅಗತ್ಯ. ದೇಶದ ವಿಭಜನೆ, ಅದರಿಂದ ಉಂಟ್ಟಾಗಿಸಿದ ನಿರ್ವಾಸಿತರು ಮತ್ತು ನಿರಾಶ್ರಿತರ ಸಮಸ್ಯೆ, ದೇಶದ ಶಾಂತಿ ಮತ್ತು ರಕ್ಷಣೆಯ ವಿಚಾರದಲ್ಲಿ ಉಂಟಾದ ಪೆಟ್ಟಿನ ಜವಾಬ್ದಾರಿ ಹೊರಿಗಿನವರ ಆಕ್ರಮಣವನ್ನು ತಡೆಗಟ್ಟಿಬಲು ತೆಗೆದುಕೊಳ್ಳಬೇಕಾಗಿ ಬಂದ ಮುಂಜಾಗ್ರತೆ ಕ್ರಮಗಳು-ಇವು ಆ ತೊಂದರೆಗಳಲ್ಲಿ ಕೆಲವು ಹೊಸದಾಗಿ ಸ್ವಾತಂತ್ರ್ಯಗಳಿಸಿದ ಯಾವ ದೇಶವೂ ಇಷ್ಟೊಂದು ಪೂರ್ಣ ಪ್ರಮಾಣದ ಕಷ್ಟ ಪರಂಪರೆಗಳನ್ನು ಎದುರಿಸಬೇಕಾಗಿಲ್ಲ ಎಂಬುದನ್ನು ನಾವು ಇತಿಹಾಸದಿಂದ ತಿಳಿಯಬಹುದು ಈ ಅಗ್ನಿ ಪರೀಕ್ಷೆಯಲ್ಲಿ ಭಾರತಕ್ಕೆ ಅಲ್ಲಲ್ಲಿ ಸ್ವಲ ವೈಫಲ್ಯವಾದರೂ ಒಟ್ಟಿನಲ್ಲಿ ಸಮಯೋಚಿತವಾದ ದಕ್ಷತೆ ಸಾಮರ್ಥ್ಯಗಳಿಂದ ಕಾರ್ಯ ನಡೆಸಿ ಯಶಸ್ವಿಯಾಗಿ ತೇರ್ಗಡೆಯಾಗಿ ಬಂದುದು ನಮಗೆ ಅಭಿಮಾನಸ್ಪದವಾಗಿರುತ್ತದೆ ರಾಷ್ಟ್ರದ ರಾಜಕೀಯ ಮತ್ತು ಆರ್ಥಿಕ ಜೌಕಟ್ಟ್ರಿನ ಮೇಲೆ ಈ ಘಟನೆಗಳಿಂದ ಉಂಟಾದ ಪರಿಣಾಮದ ಫಲವಾಗಿ ದೇಶದ ಉತ್ಸಾಹ, ಸಂಪತ್ತು ಮತ್ತು ಉತ್ಪನ್ನ ಚಮರಿ ಹೋಗಿ ದೇಶದ ಆರ್ಥಿಕ ಸ್ವತಂತ್ರ್ಯತನ್ನು ಸಾಧಿಸಲು ಎಷ್ಟು ಕಾರ್ಯ ಮಾಡಬೇಕಾಗಿತ್ತೋ, ಅಷ್ಟು ಕೆಲಸವನ್ನು ಮಾಡಿ ಮುಗಿಸಲು ನಾವು ಶಕ್ತರಾಗಿಲ್ಲ ರಾಷ್ಟ್ರದ ಬಂಧವಿಮೋಚನೆಯಿಂದ ನಮಗೆ ಏನೇನು ಅನುಕೂಲಗಳು, ಆಗುವುದೆಂದು ನಾವು ನಿರೀಕ್ಷಿಸಿದ್ದೆವೋ ಆ ಅನುಕೂಲಗಳೆಲ್ಲವೂ ಆಗಿರುವುದಿಲ್ಲ. ದೇಶದ ಆರ್ಥಿಕ ಭದ್ರತೆ ವ್ಯವಸಾಯ ಮತ್ತು ವಾಣಿಜ್ಯಾಭಿವೃದ್ಧಿ, ವಿದ್ಯಾಪ್ರಸಾರ, ಸಾಮಾನ್ಯಜನರ ಜೀವನಮಟ್ಟವನ್ನು ಹೆಚ್ಚಿಸುವುದು ಈ ವಿಚಾರಗಳಲ್ಲಿ ನಾವು ಮಾಡಬೇಕಾದ ಅನೇಕ ಕೆಲಸಗಳು ಹಾಗೆಯೇ ಉಳಿದಿದೆಯೆಂಬುದನ್ನು ನಾವು ಒಪ್ಪಿಕೊಳ್ಳಬೇಕು. ಆದರೆ ಕೆಲವರು ಹೇಳುತ್ತಿರುವಂತೆ ಈ ಕಾರ್ಯಕಲಾಪಗಳ ಸಂಬಂಧವಾದ ಎಲ್ಲ ಜವಾಬ್ದಾರಿಯನ್ನೂ ಸರ್ಕಾರದ ಮೇಲೆ ಹೇರಿಸುವುದು ಉಚಿತವಲ್ಲ.

ಪ್ರಜಾಪ್ರಭುತ್ವ ರಾಷ್ಟ್ರವಲ್ಲಿ ಪ್ರಭುತ್ವದಂತೆ ಪ್ರಜೆಗಳಿಗೂ ಹೆಚ್ಚಿನ ಜವಾಬ್ದಾರಿಯಿರುತ್ತದೆ. ಪ್ರಜೆಗಳ ಸಹಕಾರವಿಲ್ಲದೆ ಪ್ರಭುತ್ವದ ಕಾರ್ಯಕ್ರಮ ಹೆಚ್ಚು ಫಲಕಾರಿಯಾಗುವುದಿಲ್ಲ. ಪ್ರಭುತ್ವದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸವಭಾರ ದೇಶದಪ್ರತಿಯೊಬ್ಬ ಪ್ರಜೆಯನ್ನೂ ಇರುತ್ತದೆ. ಈ ಜವಾಬ್ದಾರಿಯ ಸ್ವರೂಪವೇನು? ಅದನ್ನು ನಿರ್ವಹಿಸುವುದು ಹೇಗೆ? ಎಂಬ ವಿಚಾರವಾಗಿ ನೀವು ಇದುವರೆಗೆ ನೀವಾದರೂ ಯೋಚನೆ ಮಾಡಿದ್ದೀರಾ? ಭಾರತವು ಸ್ವಾತಂತ್ರ್ಯ ಗಳಿಸಿದ ಈ ಆರು ವರ್ಷಗಳ ಅವಧಿಯಲ್ಲಿ ನೀವು ಒಂದು ಸಾರಿಯಾದರು ಸ್ವಾರ್ಥವನ್ನು ತ್ಯಜಿಸಿ ದೇಶದ ಹಿತವನ್ನೇ ಗುರಿಯಾಗಿಟ್ಟುಕೊಂಡು ನೀವು ಕೆಲಸ ಮಾಡಿದ್ದೀರಾ? ಈ ಸಭೆಯಲ್ಲಿ ಸೇರಿರುವ ಕಾರ್ಯಕರು, ಉಪಾಧ್ಯಾಯರು, ವಿದ್ಯಾರ್ಥಿಗಳು ಕಾರ್ಮಿಕರು, ವೈದ್ಯರು ವಕೀಲರು, ಮುಂತಾದವರನ್ನು ನಾನು ಪ್ರಶ್ನಿಸುತ್ತೇನೆ. ನೀವು ಈ ಕಾಳಗಕ್ಕೆ ಸಿದ್ಧರಾಗದೆ ದೇಶದ ಅಭಿವೃದ್ಧಿ ಹೇಗೆ ಸಾಧ್ಯ? ನಿಮ್ಮ ಪಾಲಿನ ಜವಾಬ್ದಾರಿಯನ್ನು ನಿರ್ವಹಿಸಲು ಅಶಕ್ತರಾದ ನೀವು ಇತರರನ್ನು ಅವು ಸಾರ್ವಜನಿಕ ಸಂಸ್ಥೆಗಳೇ ಆಗಲಿ, ಸರ್ಕಾರವೇ ಆಗಲಿ, ಟೀಕಿಸುವುದು ಅಸಂಗತವಲ್ಲವೇ? ನಾವು ಬೇರೆಯವರನ್ನು ಅಪೇಕ್ಷಿಸುವ ಮೊದಲು ನಮ್ಮ ಪಾಲಿನ ಕೆಲಸವನ್ನು ಮಾಡಿರುವೆನೇ ಎಂಬುದನ್ನು ಯೋಚಿಸುವುದು ಕರ್ತವ್ಯ.

ಧನಲಕ್ಷ್ಮಿಯ ಪರೀಕ್ಷೆ

ಅನ್ನಾಹಾರಗಳಿಲ್ಲದೆ ವರುಷಗಟ್ಟಿಲೆ ಬದುಕುತ್ತಿರುವ ಕೊಡಗಿನ ಗೌರವರ ಧನಲಕ್ಷ್ಮಿಯ ದೇಶರಜನೆಯ ಕೌತುಕವನ್ನು ವೈದ್ಯವಿಜ್ಞಾನದಂತೆ ಪರೀಕ್ಷಿಸಲು ಕೇಂದ್ರ ಸರಕಾರದ ಸಲಹೆಯಂತೆ ಆ ಹುಡುಗಿಯನ್ನು ಆಕೆಯ ತಂದೆಯೊಡನೆ ಬೆಂಗಳೂರಿಗೆ ಕಳಿಸಲಾಗುವುದು.

ಹೊಸಪೇಟೆ ಡಿ. ಮು. ಕೋರ್ಟಿನಲ್ಲಿ

O. S. 235/53

ಪಾದಿ-

ದೇವಲೆ ಬಲವಂತಪ್ಪ

Vs.

ಪ್ರತಿವಾದಿ-

ಗೊಲ್ಲರ ಈರಮ್ಮ ವಗೈರಾ

ನೋಟೀಸು

To

1) ಗೊಲ್ಲರ ಈರಮ್ಮ (ಗಂಡ ಚಂಗಲರಾವು) | ಕೆರೆಕಟ್ಟಿ

2) ಗೊಲ್ಲರ ಪುರುಷೋತ್ತಮಪ್ಪ (ತಂದೆ ಚಂಗಲರಾವು) | ಬಳ್ಳಾರಿ

ನೀವು ವಾದಿಯ ಹತ್ತಿರ ಲೇವಾದೇವಿ ಮಾಡಿ ಬಾಕಿ ಆದ ಬಾಬ್ತು ಅಸಲು - ಬಡ್ಡಿ ಕಲೆತು ರೂ 333-8-0 ಮೊತ್ತಕ್ಕೆ ವಾದಿಯು ನಿಮ್ಮ ಮೇಲೆ ದಾವಾ ಮಾಡಿರುತ್ತಾನೆ. ಆದರೆ ವಾಯ್ದೆಯು 26-8-1953 ಕ್ಕೆ ಇರುತ್ತದೆ. ನಿಮ್ಮದೇನಾದರೂ ತಕರಾರು ಇದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ಖುದ್ದಾಗಲಿ – ವಕೀಲರ ಮೂಲಕವಾಗಲಿ ಹಾಜರಾಗಬೇಕು ತಪ್ಪಿದಲ್ಲಿ ನಿಮ್ಮನ್ನು ಎಕ್ಸ್ ಪಾರ್ಟಿ ಮಾಡಿ ತೀರ್ಪು ಕೊಡಲಾಗುವುದು

ರಾಷ್ಟ್ರಿ ಶ್ರೀಪಾದಾಚಾರ್ಯ
ವಾದಿಯ-ಅಡ್ವೊಕೇಟು

ಕಾಶ್ಮೀರದ ಬಗ್ಗೆ ನೆಹರು– ಮಹಮ್ಮದಾಲಿ

ಪಾಕಿಸ್ತಾನ್ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಪಂಡಿತ ನೆಹ್ರೂರವರೊಡನೆ ಈಗಿನ ಕಾಶ್ಮೀರದ ಸಮಸ್ಯೆಬಗ್ಗೆ 80 ನಿಮಿಷಗಳ ಮಾತುಕತೆ ನಡೆಸಿದರು.

ಈ ಮಾತುಕತೆಗಳು ಪಲಿ ನೆಹ್ರೂರ ನಿವಾಸದಲ್ಲಿ ನಡೆಯಿತು, ಇಬ್ಬರು ಪ್ರಧಾನಿಗಳು ಮಾತ್ರವೇ ಇದ್ದರು.

ಇಂದಿನಡೆದ ಚರ್ಚೆಗಳ ಸ್ವರೂಪದ ಬಗ್ಗೆ ಅಧಿಕೃತ ಅಭಿಪ್ರಾಯವೇನು ಗೊತ್ತಾಗಿಲ್ಲವಾದರೂ, ಮಾತುಕತೆ ಈಗ ಸೂಕ್ಷ್ಮ ಅಂತ್ಯವನ್ನು ಮುಟ್ಟಿದೆಯೆಂದು ಊಹಿಸಲಾಗಿದೆ.

ಕಾಶ್ಮೀರದ ಬಗ್ಗೆ ಅಲ್ಲಿನ ಜನರ ಇಚ್ಛೆಯ ಅಥವಾ ಪ್ಲೆಬಿಸೈಟಿನ ಆಧಾರದ ಮೇಲೆ ಶಾಂತಯುತ ಪರಿಹಾರವೊಂದು ಆಗತ್ಯವೆಂದು ಈ ಬಾರಿ ಪ್ರಧಾನಿಗಳೂ ಮೂಲಭೂತವಾಗಿ ಒಪ್ಪಿದ್ದಾರೆ. ಈಗ ಈ ಬಗ್ಗೆ ನಿವರಗಳನ್ನು ಪರಿಶೀಲಿಸುತ್ತಿದ್ದಾರೆಂದು ಹೇಳಲಾಗಿದೆ.

—: ಬಳ್ಳಾರಿ ಪ್ರಭಾತದಲ್ಲಿ :—

ಯಶಸ್ವಿಯ 2 ನೆ ವಾರ

ನ್ಯಾಷನಲ್ ಆರ್ಟ್ಸ್‌ರವರ

ಪಿಚ್ಚಿ ಪುಲ್ಲಯ್ಯ

ತಾರಾಗಣ - ಎನ್. ಟಿ. ರಾಮರಾವು, ಕೃಷ್ಣಕುಮಾರಿ.
ಜಾನಕಿ, ರಮಣಾರೆಡ್ಡಿ

ಶೀಘ್ರದಲ್ಲಿಯೇ ಬರಲಿರುವ
ತಾರೀಖನ್ನು ನಿರೀಕ್ಷಿಸಿರಿ!
ಅಂಜಲಿದೇವಿ ನಟಿಸಿದ ಅದ್ಭುತ ಹಿಂದೀ ಚಿತ್ರ

★ ಶುಕರಂಭ ★

ಸುಪ್ರಶಿದ್ಧ
ಮೈಸೂರು - ಸುಗಂಧದ್ರವ್ಯಗಳು
ಶ್ರೇಷ್ಠವಾದ ಅಗರಬತ್ತಿ
-: 24 ತೊಲೆಗಳ 1 ಸೇರಿನ ಬೆಲೆ :-

ಮಹರಾಜಾ ಬತ್ತಿ	20 ರೂ.	ಕಸ್ತೂರಿ ಜವಾಜಿ	10 ರೂ.
ದರ್ಬಾರ್ ಬತ್ತಿ	15 ರೂ.	ರೋಸ್ ಬತ್ತಿ	6 ರೂ.
ಆನಂದ ಬತ್ತಿ	12 ರೂ.	ಜಸ್ಮಿನ್	5 ರೂ.
ಮನಮೋಹನ್ ಬತ್ತಿ	10 ರೂ.	ಪುನುಗು	4 ರೂ.
ಮೈಸೂರು ಅಂಬರ್ ಬತ್ತಿ	8 ರೂ.	ಹೀನ	3 ರೂ.

12 ವಿಧದ 300 ಬತ್ತಿಗಳನ್ನೊಳಗೊಂಡ ಡಬ್ಬಿಯ ಬೆಲೆ 6 ರೂ.
ಪ್ಯಾಕಿಂಗ್ ಪೋಸ್ಟೇಜ್ ಬೇರೆ

ದಿ ಸ್ಟೇಟ್ ಪರ್‌ಫ್ಯೂಮರಿ ಮಾರ್ಟ್ ಮೈಸೂರು
The State Perfumery Mart Mysore.

ಜಾ॥ ಜಹೇದಿಯವರಿಂದ ನೀತಿ ಘೋಷಣೆ

ಜನರ ಜೀವನ ಮಟ್ಟ ಹೆಚ್ಚಿಸಲು ಸಂಕಲ್ಪ

ಇರಾನಿನ ನೂತನ ಪ್ರಧಾನ ಮಂತ್ರಿ ಜಾ॥ ಫಜ್ಲುಲ್ಲಾ ಜಹೇದಿಯವರಿಂದು ತಮ್ಮ ಸರ್ಕಾರದ ನೀತಿ ಘೋಷಣೆಯ ಹೇಳಿಕೆಯನ್ನು ಹೊರಡಿಸಿದ್ದಾರೆ.

ಕಾನೂನಿನ ಆಳ್ವಿಕೆಯನ್ನು ಸುಭದ್ರ ಸ್ಥಾಪನೆ ಮಾಡುವುದು, ಸಾರ್ವಜನಿಕ ಸುರಕ್ಷತೆ ಏರ್ಪಡಿಸುವುದು, ಜನರ ಜೀವನ ಮಟ್ಟ ಹೆಚ್ಚಿಸುವುದು, ವ್ಯವಸಾಯ ಯಾಂತ್ರೀಕರಣ ಮಾಡುವುದು ಮತ್ತು ಜೀವನ ವೆಚ್ಚವನ್ನು ಇಳಿಸುವುದು—ಇವೇ ತಮ್ಮ ಸರ್ಕಾರದ ಸಂಕಲ್ಪವೆಂದೂ ಅವರು ಹೇಳಿದ್ದಾರೆ.

ಹೊಸಪೇಟೆ ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S. 186/53

ಬೇವೂರು ಮಠದ ವೀರಯ್ಯ — ವಾದಿ
ಬಣಕಾರ ವೀರಪ್ಪ — ಪ್ರತಿವಾದಿ

ಮೇಲ್ಕಾಣಿಸಿದ ದಾವೆಯು ಪ್ರತಿವಾದಿಯ ಹಾಜರಿಗಾಗಿ 29-8-1953ಕ್ಕೆ ವಾಯ್ದೆ ಹಾಕಲಾಗಿದೆ. ಆ ದಿನ ಪ್ರತಿವಾದಿಯು ಕೋರ್ಟಿನಲ್ಲಿ ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿ ತನ್ನ ಆಕ್ಷೇಪಣೆ ತಿಳಿಸದಿದ್ದರೆ ಆತನನ್ನು ಎಕ್ಸ್‌ಪಾರ್ಟಿಯನ್ನಾಗಿ ಮಾಡಿ ಕೇಸಿನ ವಿಚಾರಣೆಯು ಮುಂದೆ ಸಾಗುವುದು.

ಎಂ. ರಂಗನಾಥಾಚಾರ್
ವಾದಿಯ - ವಕೀಲರು.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು.	Subscription Rates.
ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To 24-8-53

Sri.

Edited Printed & Published by T. B. Keshava Rao, at Nava Bharat printing Press Bellary

ವೀರಮಾತೆ

ಸೋಮವಾರ
ಆಗಸ್ಟ್
೩೧, ೧೯೮೩

ವರ್ಷ 16
ಸಂಚಿಕೆ 23

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
ಉತ್ಸಾಹದ ! ಜಾಗೃತ !! ಹಾಸ್ಯಭರಿತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್

ಹಿಂದೆಂದೂ ಒದಗದ ಭಾರಿ ಹಾನಿ

ಗೋದಾವರಿ ಪ್ರವಾಹದಿಂದ ಲಕ್ಷ ಹಳ್ಳಿಗಳು ನೀರಿನಲ್ಲಿ
ತೊಂದರೆಗೀಡಾದ ಸ್ಥಳಗಳಲ್ಲಿ
ಮದರಾಸು ಮಂತ್ರಿಗಳ ಪ್ರವಾಸ

ಆಂಧ್ರದಲ್ಲಿ ಗೋದಾವರಿ ನದಿಯ ಪ್ರವಾಹದಿಂದ ಉಂಟಾಗಿರುವ ಪರಿಸ್ಥಿತಿ 'ಮಾನವ ಕ್ಲೇಶದ ಘೋರ ಕತೆಯಾಗಿದೆ. ಎಂದು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವಿಸ್ತಾರವಾದ ಪ್ರವಾಸ ಮಾಡಿ ಬಂದ ಮದ್ರಾಸ್ ಗೃಹಮಂತ್ರಿ ಯೋಗಕ್ಷೇಮ ಮಂತ್ರಿಗಳು ತಿಳಿಸಿದರು

ಈಗಿನ ಪ್ರವಾಹದಿಂದ ಆಗಿರುವಷ್ಟು ಹಾನಿ ಆಂಧ್ರದ ಇತಿಹಾಸದಲ್ಲೇ ಹಿಂದೆಂದೂ ಸಂಭವಿಸಿರಲಿಲ್ಲವೆಂದು ಅವರು ಭೇಟಿಯೊಂದರಲ್ಲಿ ತಿಳಿಸಿದರು.

"ಜನರು ಧೈರ್ಯಸಾಹಸಗಳಿಂದ ಪ್ರವಾಹದ ಉಗ್ರತೆಯನ್ನು ಎದುರಿಸಿದ್ದಾರೆ," ಎಂದು ಅವರು ತಿಳಿಸಿದರು.

ಪ್ರವಾಹದ ಪರಿಣಾಮವಾಗಿ ಸತ್ತವರು ಇಪ್ಪತ್ತಕ್ಕಿಂತ ಹೆಚ್ಚು ಜನ ಇರಲಾರರೆಂದು ತಾವು ನಿರೀಕ್ಷಿಸುವುದಾಗಿಯೂ, ಜನರು ಮುಂಜಾಗ್ರತೆ ಮತ್ತು ಧೈರ್ಯಗಳಿಲ್ಲದಿದ್ದರೆ ಆ ಸಾವು ಸಂಖ್ಯೆ ಅಸಂಖ್ಯವಾಗುತ್ತಿತ್ತೆಂದು ಶ್ರೀ ಪಟ್ಟಾಭಿ ರಾಮರಾಯರು ನುಡಿದರು ದೇಶಾದ್ಯಂತ ಸಂಸ್ಥೆಗಳೂ, ಕೇಂದ್ರ ಮತ್ತು ರಾಷ್ಟ್ರಾಂತ ಸರ್ಕಾರಗಳೂ ಪ್ರವಾಹದಿಂದ ಸೊಂಪಾದ ದುರದೃಷ್ಟ ಶಾಲಿಗಳು ಮತ್ತೆ ಮಾಮೂಲಾಗಿ ಜೀವನ ನಡೆಸಲು ಸಹಾಯ ಮಾಡುವಂತೆ ಸಂಬೋಧಿಸುವುದಾಗಿ ಅವರು ತಿಳಿಸಿದರು

ಅವರು ಈ ದಿನ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರನ್ನು ಕಂಡು ಪ್ರವಾಹಗ್ರಸ್ತ ಪ್ರದೇಶಗಳ ಸ್ಥಿತಿ ಬಗ್ಗೆ ವಿವರಣೆಯಿತ್ತರು.

ಪರಿಹಾರ ಕಾರ್ಯಗಳು

ಆ ಪ್ರದೇಶಗಳಲ್ಲಿ ಕೈಕೊಂಡಿರುವ ಪರಿಹಾರ ಕಾರ್ಯಕ್ರಮಗಳನ್ನು ಶ್ರೀ ಪಟ್ಟಾಭಿ ರಾಮರಾಯರು ವಿವರಿಸಿದರು.

ಅಮಲಾಪುರಂ ಮತ್ತು ಕೊತ್ತ ವೇಟ ಪ್ರದೇಶಗಳು ಪೂರ್ಣವಾಗಿ ನೀರಲ್ಲಿ ಮುಳುಗಿವೆಯೆಂದು ಸಚಿವರು ಹೇಳಿದರು.

ಜನರಿಗೆ ಆಹಾರವನ್ನೂ ದಕ್ಕಿಸಲು ವ್ಯವಸ್ಥೆ ಮಾಡಲಾಗಿದೆಯೆಂದೂ, ಉಚಿತವಾಗಿ ಅಕ್ಕಿ ಹಂಚಲಾಗುತ್ತಿದೆಯೆಂದೂ ಅವರು ತಿಳಿಸಿದರು. ವಿಮಾನಗಳು ಮತ್ತು ಹೆಲಿಕಾಪ್ಟರ್ ಸಹಾಯದಿಂದ ಧಾನ್ಯಗಳನ್ನು ಹಂಚಲಾಗುತ್ತಿದೆ.

ಕೆಲವು ಪ್ರದೇಶಗಳಲ್ಲಿ ಬೆಳೆಗಳು ಪೂರ್ಣವಾಗಿ ನಾಶಗೊಳ್ಳುವ ಸಂಭವ ಇದೆಯೆಂದು ಸಚಿವರು ಹೇಳಿದರು.

ಧವಳೇಶ್ವರಂ ಅಣೆಕಟ್ಟು ಸುಭದ್ರವಾಗಿದೆಯೆಂದು ಅವರು ಸ್ಪಷ್ಟವಾಗಿ ತಿಳಿಸಿದರು. ಅಣೆಕಟ್ಟಿನ ಕೆಳಭಾಗದಲ್ಲಿ ಮಾತ್ರ ನೀರಲ್ಲಿ ಮುಳುಗಿತ್ತೆಂದೂ ಆದರೆ ಸಿಮೆಂಟ್ ಭಾಗಗಳಾವುದಕ್ಕೂ ಏನೂ ಹಾನಿಯಾಗಿಲ್ಲವೆಂದೂ ಅವರು ಹೇಳಿದರು:-

೫೦ ಮಂದಿ ನೀರುಪಾಲು

ಘಾರ್ಸೋಸಾದಲ್ಲಿ ಚಂಡಮಾರುತ

ಘಾರ್ಸೋಸಾದಲ್ಲಿ ಕಳೆದ ಭಾನುವಾರ ಗಂಟೆಗೆ ೬೦ ಮೈಲಿ ವೇಗದಲ್ಲಿ ಬೀಸಿದ ಚಂಡಮಾರುತದ ಹೊಡೆತಕ್ಕೆ ೫೦ ಮಂದಿ ನೀರಲ್ಲಿ ಮುಳುಗಿ ಹೋದರೆಂದು ವರದಿಯಾಗಿದೆ.

ಈ ಚಂಡಮಾರುತದ ಪರಿಣಾಮವಾಗಿ ದ್ವೀಪದ ಮುಖ್ಯ ಭಾಗವನ್ನಿನ ಮೂರು ಹಳ್ಳಿಗಳು ನೀರಲ್ಲಿ ನುಳುಗಿದ್ದವೆಂದೂ ಇಲ್ಲಿಗೆ ಸುದ್ದಿ ಬಂದಿದೆ.

ಸಂರಕ್ಷಣಾ ಕಾರ್ಯಕರ್ತರು ೫ ದಿನಗಳಿಂದ ಪ್ರವಾಹಕ್ಕೆ ಸಿಕ್ಕಿಕೊಂಡಿದ್ದ ಸುಮಾರು ನಾಲ್ಕು ಸಾವಿರ ಜನರನ್ನು ರಕ್ಷಿಸಿದ್ದಾರೆಂದು ಹೇಳಲಾಗಿದೆ.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುದ್ರಣ ಪ್ರಕಾಶಕರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.
" ಸ್ಥಳೀಯರಿಗೆ 4-8-0 ರೂಪಾಯಿ.
ಬಿಡಿ ಸಂಚಿಕೆ 6 ಆಣೆ

ಗ್ರಾಮ ಸೇವಕರ ತರಬೇತಿ

ಭಾರತದ ಸಾರ್ವಾಂಗಿಕ ಅಭಿವೃದ್ಧಿಯಾಗುವಂತೆ ನೋಡಿಕೊಳ್ಳಲು ಭಾರತ ಸರಕಾರವು ಯೋಜನಾ ಆಯೋಗವನ್ನು ಮತ್ತು ಗಾಂಧಿ ಸ್ಮಾರಕ ನಿಧಿ ಮೊದಲಾದ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ನೂರೈವತ್ತು ವರ್ಷಗಳ ಪರಕೀಯ ಆಡಳಿತೆಯಿಂದ ಸರ್ವ ವಿಧವಾಗಿಯೂ ಹಿಂದೆ ಬಿದ್ದ ಭಾರತವನ್ನು ಅಭಿವೃದ್ಧಿ ಪಡಿಸಬೇಕಾದರೆ ಈ ಬಗೆಯ ಸಾರ್ವತ್ರಿಕ ಪ್ರಯತ್ನಗಳು ನಡೆಯಬೇಕಾದುದು ಅವಶ್ಯ. ಯೋಜನಾ ಆಯೋಗದವರು ಈಗ ಗ್ರಾಮಸೇವಕ ಇಲ್ಲವೆ ಆ ಬಗೆಯ ಕಾರ್ಯಕರ್ತರ ತರಬೇತಿಯ ಕಾರ್ಯಕ್ರಮಕ್ಕೆ ಮನ್ನಣೆ ಕೊಟ್ಟಿದ್ದಾರೆ. ಈ ಯೋಜನೆಗನುಸಾರವಾಗಿ ಮುಂದಿನ ಮೂರು ವರ್ಷಗಳಲ್ಲಿ ರಾಷ್ಟ್ರೀಯ ವಿಸ್ತರಣ ಸೇವೆಗಾಗಿ 13 ಸಾವಿರ ಮಂದಿ ತರಬೇತಿ ಹೊಂದಿದ ಕಾರ್ಯಕರ್ತರು ದೊರೆಯುವರೆಂದು ತಿಳಿಯುತ್ತದೆ. ಈ ಗ್ರಾಮ ಸೇವಕ ತರಬೇತಿಯ ಅವಧಿಯು ಈಗ 18 ತಿಂಗಳು ಇದ್ದು ಅದು ಮುಗಿದ ಕೂಡಲೆ ವಿಸ್ತರಣ ಸೇವೆಯ ನೋಕರಿಗಳಲ್ಲಿ ಅವರನ್ನು ಸೇರಿಸಿಕೊಳ್ಳಬಹುದು. ಸಮಾಜ ವಿಕಾಸ ಯೋಜನೆಗಳನ್ನು ಪ್ರಾರಂಭಿಸಿದಾಗ ಕಾರ್ಯಕರ್ತರ ಕೊರತೆಯಿದ್ದಿತು. ಇದೀಗ ಸಾವಿರಕ್ಕು ಕಾರ್ಯಕರ್ತರು ತರಬೇತಿ ಹೊಂದಿರುವರೆಂದು ತಿಳಿಯುತ್ತದೆ. ಕಾರ್ಯಕರ್ತರ ಹೆಚ್ಚಳದಿಂದ ಮಾತ್ರವೇ ಧ್ಯೇಯವು ಸಾಧ್ಯವಾಗಲಾರದು. ಈ ಕಾರ್ಯಕರ್ತರು ಮನಮುಟ್ಟಿ ಕೆಲಸ ಮಾಡುವದು ಹಳ್ಳಿಗಳ ಜನರು ಇವರಲ್ಲಿ ವಿಶ್ವಾಸವಿಟ್ಟು ಇವರ ಕಾರ್ಯ ಕೆಲಸಗಳಲ್ಲಿ ಸಹಕರಿಸುವದು ಮಹತ್ವದ್ದಾಗಿದೆ. ಯೋಜನೆಯೇನೋ ಸ್ತುತ್ಯವಾಗಿದೆಂಬಲ್ಲಿ ಸಂದೇಹವಿಲ್ಲ. ಆಯ್ದ ಕೆಲ ಕೇಂದ್ರಗಳಲ್ಲಿ ಗಾಂಧೀ ಸ್ಮಾರಕ ನಿಧಿಯವರು ಗಾಂಧೀ ತತ್ವದಂತೆ ಸಂಪೂರ್ಣವಾಗಿ ಹಳ್ಳಿಯನ್ನು ಸಿದ್ಧಪಡಿಸುವ ಯೋಜನೆಯನ್ನಿಟ್ಟುಕೊಂಡಿದ್ದು ಪ್ರಶಂಸಾರ್ಹವಾಗಿದೆ. ಹಳ್ಳಿಗಳೇ ಬಹು ಸಂಖ್ಯವಾಗಿರುವ ಭಾರತದಲ್ಲಿ ಹಳ್ಳಿಗಳು ಸುಧಾರಿಸುತ್ತ ಸಡೆದಂತೆ ಇಡೀ ರಾಷ್ಟ್ರವು ಸುಧಾರಿಸುವದೆಂಬುದರಲ್ಲಿ ಸಂದೇಹವಿಲ್ಲ.

ಮದನಪಲ್ಲಿ ಬಳಿ ರೈಲ್ವೆ ಅಪಘಾತ

ಇದುವರೆಗೆ ೩೯೦೦೦ ರೂ. ಪರಿಹಾರ ಕೊಟ್ಟಿದೆ

ಮದನಪಲ್ಲಿ ಬಳಿ ಈಚೆಗೆ ನಡೆದ ಅಪಘಾತದ ಸಂಬಂಧವಾಗಿ ಬಂದಿರುವ ಪರಿಹಾರದ ಬೇಡಿಕೆಗಳನ್ನು ಪರಿಶೀಲಿಸುತ್ತಿರುವ ಕ್ಲೈಮ್ಸ್ ಕಮಿಷನರ್ ಶ್ರೀ ಎಸ್. ನಟರಾಜ ನಾಡಾರ್‌ರವರು ಕಳೆದ ಗುರುವಾರದ ವೇಳೆಗೆ ೩೬೦೦೦ ರೂ.ಗಳ ಪರಿಹಾರದ ಬೇಡಿಕೆಗಳನ್ನು ಏರ್ಪಡಿಸಿದ್ದರು.

ಅಪಘಾತದಲ್ಲಿ ತಂದೆ ತಾಯಿಗಳನ್ನೂ ಸೋದರನನ್ನೂ ಕಳೆದುಕೊಂಡ ಶ್ರೀಮತಿ ವಿ. ಕೃಷ್ಣಮ್ಮ ಎಂಬಾಕೆಗೆ ೩೦೦೦ ರೂಗಳ ಪರಿಹಾರವನ್ನು ಕೊಡಲಾಯಿತು. ಗಂಡಂದಿರನ್ನು ಕಳೆದುಕೊಂಡ ಇನ್ನಿಬ್ಬರ ಹೆಂಗಸರಿಗೆ ತಲಾ ೨೫೦೦ ಮತ್ತು ೨೯೦೦ ರೂ.ಗಳನ್ನು ಪರಿಹಾರವಾಗಿ ಕೊಡಲಾಯಿತು. ಇನ್ನಿಬ್ಬರಿಗೆ ೩೦೦೦ ರೂ.ಗಳನ್ನು ಕೊಡಲಾಯಿತು.

ಲೋಕ ಸಭೆಯಲ್ಲಿ ಆಂಧ್ರ ಮಸೂದೆ ಚರ್ಚೆ

೨೫ ಕಲಮುಗಳು ಅಂಗೀಕರಿಸಲ್ಪಟ್ಟವು

ಲೋಕಸಭೆ ಈ ದಿನ ಆಂಧ್ರ ಮಸೂದೆಯ ಪರಿಶೀಲನೆಯನ್ನು ಮುಂದುವರಿಸಿ,೨೬ ಕಲಮುಗಳನ್ನು ಅಂಗೀಕರಿಸಿತು. ಅಧಿಕ ವಿಚಾರಗಳಿಗೆ ಸಂಬಂಧಿಸಿದ ಆರು ಕಲಮುಗಳ ಬಗ್ಗೆ ಪರಿಶೀಲನೆಯನ್ನು ಮುಂದಕ್ಕೆ ಹಾಕಲಾಗಿದೆ.

ಆಂಧ್ರಕ್ಕೆ ಹೈಕೋರ್ಟ್ ಸ್ಥಾಪನೆಗೆ ಸಂಬಂಧಿಸಿದ ಕಲಮನ್ನು ಒಳಾಡಳಿತ ಉಪಮಂತ್ರಿ ಶ್ರೀ ಬಿ. ಎನ್. ದಾತಾರ್‌ರವರು ಸೂಚಿಸಿದ ತಿದ್ದುಪಡಿಯೊಡನೆ ಅಂಗೀಕರಿಸಲಾಯಿತು.

ಈ ಮಸೂದೆಯ ಪ್ರಕಾರ1954ನೆ ಜನವರಿ ೧ರಿಂದ ಆಂಧ್ರದ ಹೈಕೋರ್ಟನ್ನು ಸ್ಥಾಪಿಸಲಾಗುವುದು ಅಥವಾ ಅದಕ್ಕೆ ಮೊದಲೇ ಸ್ಥಾಪಿಸಬೇಕೆಂದು ಆಂಧ್ರ ಪ್ರಾಂತದ ಅಸೆಂಬ್ಲಿ ಬಯಸಿದರೆ, ಆಗ ರಾಷ್ಟ್ರಪತಿಯವರು ಗೊತ್ತು ಮಾಡುವ ಒಂದು ದಿನದಿಂದ ಹೈಕೋರ್ಟ್ ಆರಂಭವಾಗುವುದು.

ಹೈಕೋರ್ಟಿನ ಮುಖ್ಯ ಕೇಂದ್ರವನ್ನು ಗವರ್ನರರು ನಿಶ್ಚಯಿಸುವರೆಂದೂ, ಆಂಧ್ರದ ಅಸೆಂಬ್ಲಿ ನಿರ್ಣಯದ ಮೂಲಕ ಯಾವುದಾದರೊಂದು ಸ್ಥಳವನ್ನು ನಿಗದಿ ಮಾಡಿದರೆ, ಗವರ್ನರರು ಅದನ್ನೇ ಹೈಕೋರ್ಟಿನ ಮುಖ್ಯ ಕೇಂದ್ರವನ್ನಾಗಿ ನಿರ್ಧರಿಸುವರೆಂದೂ ಶ್ರೀ ದಾತಾರ್‌ರವರ ತಿದ್ದುಪಡಿ ತಿಳಿಸುತ್ತದೆ

ಇವಕ್ಕೆ ಮೊದಲು ಒಳಾಡಳಿತ ಮಂತ್ರಿಗಳು ಮಾತನಾಡಿ, 1954 ನೇ ಜನವರಿ ಮೊದಲನೆ ತಾರೀಕಿನ ಮೊದಲೇ ಹೈಕೋರ್ಟ್ ಸ್ಥಾಪನೆಯಾಗಬೇಕೆಂದು ಆಂಧ್ರ ಅಸೆಂಬ್ಲಿ ನಿರ್ಧರಿಸಿದರೆ, ಆಗ ರಾಷ್ಟ್ರಪತಿ ಅಗತ್ಯವಾದ ಆಜ್ಞೆ ಹೊರಡಿಸಿ, ಹೈಕೋರ್ಟನ್ನು ಸ್ಥಾಪಿಸುವರೆಂದು ಭರವಸೆ ಕೊಟ್ಟರು

ಸಾಲ ಶೂಲಗಳ ಮತ್ತು ಆಸ್ತಿಗಳ ವಿಭಾಗಕ್ಕೆ ಸಂಬಂಧಿಸಿದ ಕಲಂಗಳ ಪರಿಶೀಲನೆಯನ್ನು ಸೋಮವಾರಕ್ಕೆ ಮುಂದಕ್ಕೆ ಹಾಕಲಾಯಿತು.

ಹೊಸಹೇಟೆ ಡಿಗ್ರಿ ಮುನ್ಸೀಫ್ ಕೋರ್ಟಿನಲ್ಲಿ

O. S. 283/53

ವಾದಿ:—

ಬಂಡ್ರಿ ಲಿಂಗಪ್ಪ, ಸಾ. ಚಂದ್ರಶೇಖರಪುರ.

Vs

ಪ್ರತಿವಾದಿ:—

ಮ್ಯಾಸನಾಯ್ಕರ ಬೊಮ್ಮಯ್ಯ, ತಂದೆ ಶಿವಪ ಲಿಂಗಯ್ಯ, ಸಾ. ನಲ್ಲಬಂಡೆತಾಂಡ ಸೊಂಡೂರು.

ನೀನು ತಾ. 12-5-50 ರಲ್ಲಿ ವಾದಿ ಹೆಸರಿನಲ್ಲಿ ಬರೆದು ಕೊಟ್ಟ ಪ್ರಾಮಸರಿ ನೋಟಿನ ಮೇಲೆ ಬರತಕ್ಕ ಅಸಲು ಬಡ್ಡಿ ಬಾಕಿ ರೂ. 1064-0-0 ಗಳನ್ನು ಕೋರ್ಟು ಖರ್ಚು ಸಹಿತ ಬರಮಾಡಿಕೊಳ್ಳಲು ನಿನ್ನ ಮೇಲೆ ದಾವಾ ಮಾಡಿದ್ದು ಸದರಿ ದಾವಾ ವಾಯ್ದೆಯು 8-9-53 ಕ್ಕೆ ಇರುತ್ತದೆ ಕಾರಣ ನಿನ್ನ ತಕರಾರೇನಾದರೂ ಇದ್ದಲ್ಲಿ ಸದರಿ ದಿನ ಹಗಲು 10½ ಗಂಟೆಗೆ ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದು. ತಪ್ಪಿದಲ್ಲಿ ಏಕ ತರ್ಫೀಯಾಗಿ ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸಲಾಗಿದೆ.

ಎಂ. ತಿರುಮಲಾಚಾರ್
ವಾದಿ-ವಕೀಲರು.

ಬಳ್ಳಾರಿ ಪ್ರಶ್ನೆ ಎತ್ತಲಾಗದು

ಲೋಕಸಭೆಯಲ್ಲಿ ಗೃಹ ಮಂತ್ರಿಗಳಾದ ಡಾ. ಕಟಜುರವರ ಹೇಳಿಕೆ

ಲೋಕಸಭೆಯಲ್ಲಿ ಆಂಧ್ರ ವಿಷೇಯಕದ ಚರ್ಚೆ ನಡೆದು ಅದರ ಪ್ರಥಮ ವಾಚನವು ಸ್ವೀಕೃತವಾಗಿ ಕಲಮುವಾರು ಚರ್ಚೆ ಪ್ರಾರಂಭವಾಗಿದೆ. ಪ್ರಥಮ ವಾಚನದ ಚರ್ಚೆಗೆ ಉತ್ತರ ಕೊಡುತ್ತ ಗೃಹಮಂತ್ರಿಗಳಾದ ಡಾ. ಕಟಜು ಇವರು ಕೆಲ ಮಹತ್ವದ ಅಂಶಗಳನ್ನು ಹೇಳಿ ಶತಕಾನು ಶತಕಗಳಿಂದ ಬೆಳೆದು ಬಂದ ಸಂಬಂಧವನ್ನು ಒಂದು ದಿನದಲ್ಲಿ ಹರಿದೊಗೆಯುವುದು ಶಕ್ಯವಿಲ್ಲೆಂಬುದನ್ನು ಭಾಷಾನ್ವಯ ರಾಜ್ಯ ರಚನೆಯ ಪುರಸ್ಕರ್ತರು ನೆನಪಿನಲ್ಲಿ ಇಡಬೇಕೆಂದು ಕೇಳಿಕೊಂಡರು. ಆಡಳಿತೆಯ ಸೌಕರ್ಯ ಆಯಾ ಭಾಗಗಳ ಅಭಿವೃದ್ಧಿಯ ದೃಷ್ಟಿಯಿಂದ ಭಾಷಾನ್ವಯ ಪ್ರಾಂತಗಳು ರಚಿಸಲ್ಪಟ್ಟರೂ ನೆರೆ ಪ್ರಾಂತಗಳು ಯಾವದೇ ಬಗೆಯ ತಿಕ್ಕಾಟಕ್ಕವಕಾಶ ಕೊಡದೆ ಪರಸ್ಪರ ಕೊಡತಕ್ಕೊಳ್ಳುವ ಮತ್ತು ಸ್ನೇಹ ಮಯ ಸಂಬಂಧವನ್ನಿಟ್ಟುಕೊಳ್ಳಬೇಕಾದುದು ಅವಶ್ಯವಾಗಿದೆ. ಬೇಗನೆ ನೇಮಿಸಲ್ಪಡುವ ವರಿಷಾಧಿಕಾರ ಆಯೋಗಕ್ಕೆ ವ್ಯಾಪಕ ಅಧಿಕಾರವನ್ನು ಕೊಡಲಾಗುವುದಲ್ಲದೆ, ಅದರ ಕಾರ್ಯಕ್ಷೇಯೂ ವಿಶಾಲವಾಗುವದೆಂದು ಗೃಹಮಂತ್ರಿಗಳು ಹೇಳಿದರು. ಆದರೆ ಅಯಾ ಪಕ್ಷಗಳು ಈ ಆಯೋಗದ ಮುಂದೆ ತಮ್ಮ ಸಕ್ಷಗಳನ್ನು ಮಂಡಿಸುವಾಗ ಯಾವದೇ ಬಗೆಯ ವಿಕಾರಕ್ಕೊಳಗಾಗಬಾರದು. ಅನ್ನ ಸತ್ಯಾಗ್ರಹ, ಆಮರಣ ಉಪವಾಸ ಹಾಗು ಕಾಯದೇ ಭಂಗಗಳಿಗೆ ಪ್ರಚೋದನೆ ಕೊಡುವಂತಹ ರೀತಿಯಲ್ಲಿ ವರ್ತಿಸಬಾರದೆಂದು ಅವರು ಹೇಳಿದ್ದು ಯಥೋಚಿತ. ಅದೇ ರೀತಿ ಆಂಧ್ರ ಪ್ರಾಂತ ರಚನೆಯ ಬಗ್ಗೆ ನೇಮಿಸಲ್ಪಡುವ ಗಡಿ ಸಮಿತಿಗೆ ಆಂಧ್ರ ಮತ್ತು ತೀಪ ಮದರಾಸ ಹಾಗು ಆಂಧ್ರ ಮತ್ತು ಮೈಸೂರುಗಳಲ್ಲಿಯ ಗಡಿ ರೇಜಿಯನ್ನು ಸರಿಗೊಳಿಸುವ ಅಧಿಕಾರವನ್ನು ಮಾತ್ರ ಕೊಡಲಾಗುವದು. ಬಳ್ಳಾರಿಯ ಭವಿತವ್ಯದ ಬಗ್ಗೆ ಮಿಶ್ರರು ಕೊಟ್ಟ ತೀರ್ಪಿನಂತೆ ಸರಕಾರವು ಕೈಕೊಂಡ ನಿರ್ಣಯವಿದ್ದರೆ ಸುಸರ್ವಮುಖ ಮಾಡಲು ಸರಕಾರವು ಸಿದ್ಧವಿಲ್ಲ ಮೈಸೂರಿಗೆ ಸೇರಿಸಲು ಬಳ್ಳಾರಿ ತಾಲೂಕಿನ ಕನ್ನಡಿಗರ ಬಹುಸಂಖ್ಯೆಯ ಸಾಕಷ್ಟು ಪ್ರಮಾಣ ದಲ್ಲಿದೆಯೋ ಇಲ್ಲವೋ ಎಂಬ ಪ್ರಶ್ನೆ ಬೇಡ.ಅಲ್ಲಿ ಅವರು ಬಹುಸಂಖ್ಯೆ ದಲ್ಲಿರುವರೆಂಬುದು ಮಾತ್ರ ಖಂಡಿತವೆಂದು ಗೃಹಮಂತ್ರಿಗಳು ಸ್ಪಷ್ಟವಾಗಿ ಹೇಳಿದರು. ಗೃಹಮಂತ್ರಿಗಳು ಈ ರೀತಿ ಬಳ್ಳಾರಿ ತಾಲೂಕಿನ ಬಗ್ಗೆ ಸುಸ್ಪಷ್ಟ ನಿರ್ಣಯವನ್ನು ಹೇಳಿ ಆ ಪ್ರಶ್ನೆಯನ್ನು ಮುಗಿಸಿಬಿಟ್ಟರುವರು. ಇನ್ನು ಮೇಲಾದರೂ ಆಂಧ್ರರು ನಿರರ್ಥಕವಾಗಿ ಬಳ್ಳಾರಿಯ ಬಗ್ಗೆ ಗೊಂದಲ ಹಾಕದೆ ತಮಗೆ ನ್ಯಾಯವಾಗಿ ದೊರೆತ ಭಾಗವನ್ನು ಕೈಗೆದುಕೊಂಡು ಸಮಾಧಾನ ಹೊಂದಬೇಕೆಂದು ಬಿನ್ನವಿಸುತ್ತೇವೆ.

ಭಾರತ ಮತ್ತು ಚೀನ

ಚೀನದ ಇಂದಿನ ಪ್ರಗತಿಯ ಬಗ್ಗೆ ಓರ್ವನು ಆಚಾರ್ಯ ವಿನೋಬಾ ಭಾವೆಯವರಿಗೆ ಒಂದು ಪ್ರಶ್ನೆ ಕೇಳಿದ್ದಾಗ್ಗೆ ಅವರು ಈ ಕೆಳಗಿನಂತೆ ಉತ್ತರ ಕೊಟ್ಟಿದ್ದಾರೆಃ-

ಪ್ರಶ್ನೆಃ-ಕಳೆದ ಮೂರು ವರ್ಷಗಳಲ್ಲಿ ಚೀನದೇಶವು ಅದ್ಭುತ ಪ್ರಗತಿಯನ್ನು ಸಾಧಿಸಿದೆ. ಅದನ್ನು ಕಂಡ ಪರದೇಶೀಯರು ಆಶ್ಚರ್ಯ ಚಕಿತರಾಗುತ್ತಿದ್ದಾರೆ. ಅದೇ ದಾರಿಯಲ್ಲಿ ಏಕಾ ಭಾರತವು ಏಕೆ ತನ್ನ ಜನತೆಗೆ ಸುಖ ಸಮಾಧಾನಗಳನ್ನು ಉಂಟುಮಾಡಬಾರದು ?

ಉತ್ತರಃ- ಜನರು ಚೀನವನ್ನು ಶ್ಲಾಘಿಸುವುದು ನಿಜ. ಆದರೆ ಚೀನದ ಸ್ಥಿತ್ಯಂತರವು, ರಾಜಕೀಯ ಕ್ರಾಂತಿಯ ಮುಖಾಂತರ ಆದಂಥದಾಗಿದೆ. ರಾಜಕೀಯ ಕ್ರಾಂತಿಯ ದಾರಿಯು ವಿಶಿಷ್ಟ ಸ್ವರೂಪದ್ದಾಗಿದೆ. ಚೀನದ ಕ್ರಾಂತಿಗೆ, 20 ವರ್ಷಗಳ ಅಂತಃಕಲಹದ ಪಿನ್ನೆಲೆಯಿದೆಯೆಂಬುದನ್ನು ನಾವು ಮರೆಯಕೂಡದು ಅದರ ಕಡೆಗೆ ನೋಡುವವರು ಆ ಹಿನ್ನೆಲೆಯ ಕಡೆಗೆ ಲಕ್ಷ್ಯಗೊಡದೆ, ಕ್ರಾಂತಿಯ ನಂತರದ ಮೂರು ವರ್ಷಗಳ ಕಾರ್ಯವನ್ನು ಮಾತ್ರ ಲಕ್ಷಿಸುತ್ತಾರೆ' ಕ್ರಾಂತಿಯ ನಂತರ ಅಸ್ತಿತ್ವದಲ್ಲಿ ಬರುವ ಸರಕಾರಕ್ಕೆ ಸರ್ವಾಧಿಕಾರವಿರುತ್ತದೆ. ಆದರೆ ಭಾರತದ ಇಂದಿನ ಸರಕಾರದ ಕೈಯಲ್ಲಿ ಆ ಅಧಿಕಾರವಿಲ್ಲ. ಈಗಾಗಲೇ ಭಾರತವು ತನ್ನ ಉತ್ಪನ್ನದ ನೂರಕ್ಕೆ 60 ರಷ್ಟು ಧಾನವನ್ನು ಸೈನ್ಯದಮೇಲೆ ವೆಚ್ಚ ಮಾಡುತ್ತಿದೆ. ಆ ವೆಚ್ಚವನ್ನು ಇನ್ನೂ ಬೆಳೆಸುವುದು ಸಾಧ್ಯನೇ ಇಲ್ಲ.

ಆದ್ದರಿಂದ ಚೀನದ ಉದಾಹರಣೆಯು ನಮ್ಮ ದೇಶಕ್ಕೆ ಅನ್ವಯಿಸಲಾರದು. ಆದರೆ ನಮ್ಮ ಸರಕಾರವೂ ತನ್ನ ಪ್ರಗತಿಯ ವೇಗವನ್ನು ಬೆಳೆಸಬೇಕೆಂದು ಮಾತ್ರನಾವು ಅನ್ನಬಲ್ಲೆವು.

ನಾಚಿಕೆ ಬಿಟ್ಟು ಹಿಂದಿ ಮಾತನಾಡಬೇಕು.

ಶ್ರೀ ಮುರಾರ್ಜಿ ದೇಸಾಯಿಯವರ ಸೂಚನೆ

ಹಿಂದೀ ಕಲಿಯುವವರು ನಾಚಿಕೆ ಬಿಟ್ಟು ಹಿಂದೀ ಮಾತನಾಡಬೇಕು. ತಪ್ಪು ಮಾಡುವುದು ಎಲ್ಲರಿಗೂ ಸ್ವಾಭಾವಿಕ ನಾಚಿಕೆ ಬಿಟ್ಟು ಮಾತನಾಡುತ್ತಿದ್ದರೆ, ಕ್ರಮ ಕ್ರಮವಾಗಿ ಚೆನ್ನಾಗಿ ಮಾತನಾಡಲು ಅಭ್ಯಾಸವಾಗುತ್ತದೆ, ಎಂಬುದಾಗಿ ಶ್ರೀ ಮುರಾರ್ಜಿ ದೇಸಾಯಿಯವರು ತಿಳಿಸಿದರು.

ರಾಜಾಜಿಯವರು ಬರೆದ "ರಾಮ ಕೃಷ್ಣ ಉಪನಿಷತ್"ಗೆ ಬಹುಮಾನ

ರಾಜಾಜಿಯವರು ಬರೆದ "ರಾಮ ಕೃಷ್ಣ ಉಪನಿಷತ್"ಗೆ ಸರ್ಕಾರದ ಬಹುಮಾನ ದೊರೆತಿದೆ. ವರ್ಷದ ಒಳ್ಳೆ ಗ್ರಂಥವೆಂದು ಅವರಿಗೆ 500 ರೂಪಾಯಿ ಬಹುಮಾನ ಕೊಡಲಾಗುವುದು.

92

—: ಬಳ್ಳಾರಿ ಪ್ರಭಾತದಲ್ಲಿ :—

ಯಶಸ್ವಿಯ 3 ನೆ ವಾರ

ನ್ಯಾಷನಲ್ ಆರ್ಟ್ಸ್‌ರವರ

ಪಿಚ್ಚಿ ಪುಲ್ಲಯ್ಯ

ತಾರಾಗಣ - ಎನ್. ಟಿ. ರಾಮರಾವು, ಕೃಷ್ಣಕುಮಾರಿ.
ಜಾನಕಿ, ರಮಣಾರೆಡ್ಡಿ

ಶೀಘ್ರದಲ್ಲಿಯೇ ಬರಲಿರುವ
ತಾರೀಖಿನ್ನು ನಿರೀಕ್ಷಿಸಿರಿ!

ಅಂಜಲಿದೇವಿ ನಟಿಸಿದ ಅದ್ಭುತ ಹಿಂದೀ ಚಿತ್ರ

★ ಶುಕರಂಭ ★

ಸುಪ್ರಸಿದ್ಧ
ಮೈಸೂರು - ಸುಗಂಧದ್ರವ್ಯಗಳು
ಶ್ರೇಷ್ಠವಾದ ಅಗರಬತ್ತಿ
-: 24 ತೊಟ್ಟಿಗಳ 1 ಪೇರಿನ ಬೆಲೆ :-

ಮಹರಾಜಾ ಬತ್ತಿ	20 ರೂ.	ಕಸ್ತೂರಿ ಜಾಜಿ	10 ರೂ.
ದರ್ಬಾರ್ ಬತ್ತಿ	15 ರೂ.	ರೋಸ್ ಬತ್ತಿ	6 ರೂ.
ಆನಂದ ಬತ್ತಿ	12 ರೂ.	ಜಸ್ಮಿನ್	5 ರೂ
ಮನಮೋಹನ್ ಬತ್ತಿ	10 ರೂ.	ಪುನುಗು	4 ರೂ.
ಮಲ್ಲಿಹೀನ, ಅಂಬರ್ ಬತ್ತಿ	8 ರೂ.	ಹೀನ	3 ರೂ.

12 ವಿಧದ 300 ಬತ್ತಿಗಳನ್ನೊಳಗೊಂಡ ಹಬ್ಬಯ ಬೆಲೆ 6 ರೂ.
ಪ್ಯಾಕಿಂಗ್ ಫೋಸ್ಟೇಜ್ ಫ್ರೀ

ದಿ ಸ್ಟೇಟ್ ಪರಫ್ಯೂಮರಿ ಮಾರ್ಟ್ ಮೈಸೂರು
The State Perfumery Mart Mysore.

ಸ್ಟಾಲಿನ್‌ರ ಗ್ರಂಥಕ್ಕೆ ಚೀನ ಅನುವಾದ

ಲಕ್ಷಾಂತರ ಪ್ರತಿಗಳ ಪ್ರಕಟಣೆ ಯೋಜನೆ

ಸ್ಟಾಲಿನರ ನಿಧನದನಂತರ ರಷ್ಯದಲ್ಲಿ ಅನೇಕ ಬದಲಾವಣೆಗಳಾಗಿವೆಯಾದರೂ ಚೀನಾದ ಕಮ್ಯೂನಿಷ್ಟರು ಸ್ಟಾಲಿನ್‌ರ ವಿಚಾರದಲ್ಲಿ ಮೊದಲಿನಷ್ಟೇ ಗೌರವವನ್ನು ಇಟ್ಟುಕೊಂಡಿದ್ದಾರೆ.

ಸ್ಟಾಲಿನ್‌ರ ಎಲ್ಲಾ ಗ್ರಂಥಗಳ ಭಾಷಾಂತರವನ್ನೂ ಚೀನೀ ಭಾಷೆಯಲ್ಲಿ ಪ್ರಕಟಿಸುವ ಯೋಜನೆಯನ್ನು ಚೀನಾ ಅಧಿಕಾರಿಗಳು ಕ್ರಮಕ್ರಮವಾಗಿ ಕಾರ್ಯಗತ ಮಾಡುತ್ತಿದ್ದಾರೆ.

ಭಾಷಾಂತರಗಳ ಲಕ್ಷಾಂತರ ಪ್ರತಿಗಳನ್ನು ಪ್ರಕಟಿಸಿ ಮಾರಾಟ ಮಾಡಲಾಗುವುದು.

ಇರಾನಿನಲ್ಲಿ - ಕ್ರಾಂತಿ

ಪರ್ಶಿಯಾ (ಇರಾನ್) ದ 'ಶಾ, ರು ತನ್ನು ದೇಶ ಬಿಟ್ಟು ಹೋಗಿದ್ದರು ಈಗ ರಾಜ ಪಕ್ಷದವರು ಮುಸಾದೇಕರ ಮಂತ್ರಿಮಂಡಲವನ್ನು ರಚಿಸಿ ಮತ್ತೆ 'ಶಾ, ರನ್ನು ಆಮಂತ್ರಿಸಿದ್ದಾರೆ ಮುಸಾದೀಕರಿಗೆ ಕಮ್ಯೂನಿಸ್ಟ್ ಪಾರ್ಟಿಯ ಸಂಬಂಧ ವಿದ್ದಿತೆಂದೂ, ಹೇಳಲಾಗಿದೆ ಪದರಿಟ್ಯೂಡೇಕ (ಕಮ್ಯೂನಿಷ್ಟ) ಪಾರ್ಟಿಯ ಸಂಬಂಧವಿದವರನ್ನೆಲ್ಲಾ ಈಗ ಬಂಧಿಸಲಾಗಿದೆ. ಇನ್ನೂ ಕೆಲದಿನಗಳವರೆಗೆ ಪಾರ್ಟಿಗಳ ಬಲಾಬಲ ತಿಳಿಯುವುದು ಕಷ್ಟ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
೬ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾವನ್ನೀಕರಿಸುವುದಿಲ್ಲ.		Subscription will not be accepted for less than 6 months	

To 31-8-53

Sri.

Edited Printed & Published by T. B. Keshava Rao, at Nava Bharat printing Press Bellary

ಸಂಯುಕ್ತ ಕರ್ನಾಟಕ

ಸೋಮವಾರ
ಸೆಪ್ಟೆಂಬರ್
೭, ೧೯೫೩

ವರ್ಷ 16 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ. | ಸಂಪಾದಕ ಮತ್ತು ಪ್ರಕಾಶಕ:
ಸಂಚಿಕೆ 24 | ಉತ್ಕೃಷ್ಟಕ ! ಜಾಗೃತ !! ಪ್ರಾಪ್ತವರಾನ್ನಿ ಬೋಧಕ !!! | ಟಿ. ಜಿ. ಕೇಶವರಾವು

ಮೈಸೂರು ಸಂಸ್ಥಾನಕ್ಕೆ

ಬಳ್ಳಾರಿಯ ಸೇರ್ಪಡೆಯ ಸಮಾರಂಭ

ಶ್ರೀ ಮಹಾರಾಜರನ್ನೂ, ಮಂತ್ರಿಗಳನ್ನೂ ಆಹ್ವಾನಿಸಲು ನಿಯೋಗ ಹೋಗಿದೆ.

ಮೈಸೂರು ಸಂಸ್ಥಾನಕ್ಕೆ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳು ಸೇರುವ ಸಮಾರಂಭವನ್ನು ಆಕ್ಟೋಬರ್ ೧ನೇ ತಾರೀಖು ವಿಜೃಂಭಣೆಯಿಂದ ನಡೆಸಲು ಸಿದ್ಧತೆಗಳಾಗುತ್ತಿವೆ. ಈ ಸಮಾರಂಭಕ್ಕೆ ಶ್ರೀಮನ್ಮಹಾರಾಜರವರು ಆಗಮಿಸಬೇಕೆಂದು ಪ್ರಾರ್ಥಿಸುವ ಸಲುವಾಗಿ ಕರ್ನಾಟಕ ಕ್ರಿಯಾ ಸಮಿತಿಯ ಏದು ಜನರ ನಿಯೋಗವೊಂದು ಬೆಂಗಳೂರಿಗೆ ಹೋದರು.

ನಿಯೋಗವು ಮುಖ್ಯ ಮಂತ್ರಿಗಳನ್ನೂ ಇತರ ಮಂತ್ರಿಗಳನ್ನೂ ಭೇಟಿಮಾಡಿ ಅವರೆಲ್ಲರೂ ಈ ಸಮಾರಂಭದಲ್ಲಿ ಹಾಜರಿರುವಂತೆ ಮನವಿ ಮಾಡಿಕೊಳ್ಳಲಿದೆ

ಮೈಸೂರು ಸಂಸ್ಥಾನಕ್ಕೆ ಸೇರುವ ಬಗ್ಗೆ ಬಳ್ಳಾರಿಯ ಜನ ತುಂಬಾ ಉತ್ಸಾಹವನ್ನು ಪ್ರದರ್ಶಿಸುತ್ತಿದ್ದಾರೆ.

ನಮ್ಮ ಸತ್ಯಾಗ್ರಹ ಹಿಂಸಾತ್ಮಕವಲ್ಲ

ಶ್ರೀ ಹೊಸಮನಿಯವರ ಹೇಳಿಕೆ

ಅಖಿಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತು ನಡೆಸಿತೆಂದು ಆಪಾದಿಸಲಾಗಿರುವ ವಿನಾಶಕರ ಚಟುವಟಿಕೆಗೂ ಪರಿಷತ್ತಿಗೂ ಏನೇನೂ ಸಂಬಂಧವಿಲ್ಲವೆಂದು ಕರ್ನಾಟಕ ಏಕೀಕರಣ ಪಕ್ಷದ ಅಧ್ಯಕ್ಷರೂ, ಅಖಿಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿ ಸದಸ್ಯರೂ ಆದ ಶ್ರೀ ಎಸ್. ಬಿ. ಹೊಸಮನಿಯವರು ಇಂದು ಹೇಳಿಕೆಯೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ.

ಪರಿಷತ್ತಿನ ಸತ್ಯಾಗ್ರಹ ಯೋಜನೆಯು ಎಂದೂ ಹಿಂಸಾತ್ಮಕ ಅಥವಾ ವಿನಾಶಕಾರಕ ಸ್ವಭಾವದ್ದಾಗಿರಲಿಲ್ಲ ವೆಂದೂ ಅವರು ನುಡಿದಿದ್ದಾರೆ.

"ಇತ್ತೀಚಿನ ರೈಲುಗಳು ಕಂಬಿ ತಪ್ಪಿದ ಪ್ರಕರಣಗಳು ಮತ್ತು ಕೆಲವೆಡೆಗಳಲ್ಲಿ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದ ಪ್ರಕರಣಗಳು ಕೆಲಸದಿಂದ ತೆಗೆದು ಹಾಕಲ್ಪಟ್ಟ ಅಥವಾ ತೆಗೆಯಹಾಕಲ್ಪಡಲಿರುವ ರೈಲ್ವೆ ಗ್ಯಾಂಗ್‌ಮನ್‌ಗಳ ಮತ್ತು ಇತರ ನೌಕರರ ಕೃತ್ಯಗಳೆಂದು ನನಗೆ ಹಲವು ವೈಯಕ್ತಿಕ ಪತ್ರಗಳಿಂದ ಬಂದ ಸುದ್ದಿಗಳಿಂದ ವ್ಯಕ್ತಪಟ್ಟಿದೆ," ಎಂದೂ ಅವರು ಹೇಳಿದ್ದಾರೆ.

COMING AT
PRABHAT
Warner Bros Astounding Feature in natural vision.
3 Dimension
House of wax
COLOR BY WARNER COLOR

ಹೊಸಪೇಟೆ ಡಿ॥ ಮುನ್ಸಿಫ್ ಕೋರ್ಟಿನಲ್ಲಿ
O. S 154/52 E. P. 98/53
ಆರ್ಜಿದಾರ.

ಕೊಳಗದ ವೆಂಕಣ್ಣ
ಎದುರು.

ಲಿಂಗಾಯ್ತರ ವೀರಭದ್ರಪ್ಪ ಮತ್ತು ಇತರರು.

ಮೇಲ್ಕಾಣಿಸಿದ ಇ. ಪಿ ಯು 9-9-53 ಕ್ಕೆ ವಾಯ್ದೆ ಹಾಕಲಾಗಿದ್ದು ಅಂದು ಸೇರಿಸಲಾದ ಆಸ್ತಿಯ ವಿಕ್ರಯ ಮೊತ್ತವು ನಿಶ್ಚಯಿಸಲಾಗುತ್ತೆ, 1 ರಿಂದ 4 ರ ವರೆಗಿನ ಎದುರು ಆರ್ಜಿದಾರರೂ ಆ ದಿವಸ ಹಾಜರಾಗದಿದ್ದರೆ ಇ. ಪಿ ಯು ಮುಂದಿನ ಕ್ರಮವು ನಿಮ್ಮನ್ನು ಎಕ್ಸ್ ಪಾರ್ಟ್ ಮಾಡಿ - ನಡೆಸಲಾಗುವುದು.

ಎಂ. ರಂಗನಾಥಾಚಾರ್
ಡಿಕ್ರಿ ಹೋಲ್ಡರ್–ವಕೀಲರು

ಕಾಶ್ಮೀರದಲ್ಲಿ ವಿದೇಶಿ ಪ್ರಭಾವ ಕೊನೆಗೊಳ್ಳಲಿ

ಕಾಶ್ಮೀರ ದಿನಚರಣೆ ಸಭೆಯಲ್ಲಿ ಒತ್ತಾಯ

ಕಾಶ್ಮೀರದಲ್ಲಿ ವಿದೇಶೀ ಜನರ ಪ್ರಭಾವ ಕೊನೆಗಾಣಿಸಬೇಕೆಂಬುದಾಗಿ ಕಮ್ಯೂನಿಸ್ಟ್ ಪಕ್ಷದ ಆತ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಒತ್ತಾಯ ಮಾಡಲಾಯಿತು. ಕಮ್ಯೂನಿಸ್ಟರಿಂದು ರಾಷ್ಟ್ರವ್ಯಾಪ್ತಿಯಂತೆ ಕಾಶ್ಮೀರ ದಿನಾಚರಣೆಯನ್ನು ನಡೆಸಿದರು.

ಕಾಶ್ಮೀರ ವಿವಾದವನ್ನು ಭಾರತ ಪಾಕಿಸ್ತಾನಗಳವರು ನೇರವಾಗಿ ಸಂಧಾನಗಳಿಂದಲೇ ಬಗೆಹರಿಸಿಕೊಳ್ಳಬೇಕೆಂದು ಒತ್ತಾಯ ಮಾಡುವ ಬಾವಣಗಳಾದವು.

94

ಪ್ರಪಂಚದಲ್ಲಿ ಹಲ್ಲಿನ ರೋಗಗಳು ಹೆಚ್ಚುತ್ತಿವೆ

ಅವುಗಳ ನಿವಾರಣೆಯೂ ಸಾಧ್ಯವಾಗಿದೆ

ಪ್ರಪಂಚದ ಆದ್ಯಂತ ಕೋಟ್ಯಾಂತರ ಜನರ ಹಲ್ಲುಗಳು ಈಚೆಗೆ ಸವೆದು ಹೋಗುತ್ತಿರುವುದಾಗಿ ಅಂಕಿ ಅಂಶಗಳಿಂದ ವ್ಯಕ್ತಪಟ್ಟಿದೆ.

ಕೈಗಾರಿಕಾ ಪ್ರದೇಶಗಳ ಯುವಕರಲ್ಲಿ ಹೆಚ್ಚು ಕಡಮೆ ನೂರಕ್ಕೆ ನೂರು ಮಂದಿಯಂತೆ ಹಲ್ಲುಗಳು ನಶಿಸಿಹೋಗುವ ರೋಗಕ್ಕೀಡಾಗಿರುವುದಾಗಿ ಪ್ರಸಂಚ ಆರೋಗ್ಯ ಸಂಸ್ಥೆಯ ದಂತ ವೈದ್ಯ ಸಲಹೆಗಾರರಾದ ಪ್ರೊಫೆಸರ್ ಗಬ್ಬಾರ್ಸ್ ಟೋಪ್‌ರುಡ್ ರವರು ತಿಳಿಸಿದ್ದಾರೆ. ಅಲ್ಲದೇ ಪ್ರದೇಶಗಳಲ್ಲಿರುವ ವಯಸ್ಸಾದವರಲ್ಲಿ ಹಲ್ಲುಗಳು ನಶಿಸುವುದರ ಜೊತೆಗೆ ವಸಡುಗಳ ರೋಗವೂ ಇತರ ರೋಗಗಳೂ ಕಂಡು ಬಂದಿವೆ.

ಆದರೆ, ಬಾಯಿ ಮೂಲಕ ಹರಡಿ, ಹಲ್ಲುಗಳ ನಾಶಕ್ಕೆ ಕಾರಣವಾಗುವ ಅನೇಕ ರೋಗಗಳನ್ನು ಈಗ ಅಂಟಿಬಯೊಟಿಕ್ ಔಷಧಗಳಿಂದ ನಿವಾರಿಸಿಕೊಳ್ಳಬಹುದೆಂದೂ ವ್ಯಕ್ತಪಟ್ಟಿದೆ. ಸಯೋರಯಾವನ್ನು ಟಿರ್ರಮೈಸಿನ್‌ನಿಂದ ಗುಣಪಡಿಸಿಕೊಳ್ಳುವುದು ಸಾಧ್ಯವೆಂದು ಕಂಡು ಬಂದಿದೆ.

ಹೊಸಪೇಟೆ ಡಿ॥ ಮುಂ॥ ಕೋರ್ಟಿನಲ್ಲಿ

O. S. 214/53

ವಾದಿ:—

ನೆಲ್ಲೂರು ಕೋದಂಡ ರಾಮಸೆಡ್ಡಿ S/o ಸುಬ್ರಾಮರೆಡ್ಡಿ

ಮತ್ತು

—ಪ್ರತಿವಾದಿ:—

ಹರಿಜನ ಚಲವಾದಿ ಬಸಪ್ಪ S/o ಕೆಂಚಪ್ಪ ಕಡ್ಲಿಬಾಳು, ಹಡಗಲಿ ತಾ॥

ವಾದಿಯು ಪ್ರತಿವಾದಿಯ ಮೇಲೆ ಪ್ರಾಮಿಸರಿ ನೋಟಿನ ಬಾಬತು ಬಾಕಿ ಬಡ್ಡಿ ಸಹಿತ ರೂ. 1629-0-0 ಕ್ಕೆ ಸೇಲ್ಸ್‌ಮಂಡ ದಾವಾ ಮಾಡಿರುತ್ತಾನೆ. ಪ್ರತಿವಾದಿಗೆ ತಕರಾರಿದ್ದರೆ ತಾ. 8-9-53 ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಬೇಕು ಇಲ್ಲದಿದ್ದರೆ ಪ್ರತಿವಾದಿಯ ಪರೋಕ್ಷದಲ್ಲಿ ಡಿಸ್ಮಿಸ್ ಆಗುವುದೆಂದು ಈ ಮೂಲಕ ತಿಳಿಸೋಣವಾಗಿದೆ.

ಕೆ. ವಿ. ಮರಿಸ್ವಾಮಿ
ವಾದಿ ಅಡ್ವೊಕೇಟ್

ಬಳ್ಳಾರಿ ತಾಲ್ಲೂಕಿನಲ್ಲಿ ಪರಿಶೀಲನೆ

ಶ್ರೀ ಕೆ. ಶೇಷಗಿರಿಅಯ್ಯರ ವಿವರಣೆ

ಬಳ್ಳಾರಿಯ ಏಳು ತಾಲ್ಲೂಕುಗಳ ಆಡಳಿತ ವರ್ಗಾವಣೆಯು ಬಳ್ಳಾರಿ ಜನಕ್ಕೆ ಏನೂ ಶೋಂದರೆಯಾಗದಂತೆ ಸುಸೂತ್ರವಾಗಿ ಆಗಬೇಕೆಂದು ಮೈಸೂರು ಸರ್ಕಾರ ಬಯಸಿರುವುದಾಗಿ ಮೈಸೂರಿನ ವಿಶೇಷಾಧಿಕಾರಿ ಶ್ರೀ ಕೆ ಶೇಷಗಿರಿಅಯ್ಯರು ಇಲ್ಲಿ ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು.

ಅವರು ಮೈಸೂರಿಗೆ ಅಕ್ಟೋಬರ್ 1ರಿಂದ ಸೇರುವ ಬಳ್ಳಾರಿಯ ಕೆಲವು ಕನ್ನಡತಾಲ್ಲೂಕುಗಳಲ್ಲಿ ಪ್ರವಾಸ ಮಾಡಿ ಇಲ್ಲಿಗೆ ಆಗಮಿಸಿದರು.

ಆಡಳಿತದ ಸ್ವಭಾವವನ್ನರಿಯಲು ಮೈಸೂರಿನ ಅನೇಕ ಮಂದಿ ಅಧಿಕಾರಿಗಳು ಸೆಪ್ಟೆಂಬರಿನಲ್ಲಿ ಬಳ್ಳಾರಿಗೆಭೇಟಿ ಕೊಡಲಿರುವುದೂ ಶ್ರೀ ಕೆ. ಶೇಷಗಿರಿಅಯ್ಯರು ನುಡಿದರು

ಅಕ್ಟೋಬರ್ 1ರನಂತರ ಮೈಸೂರು ಸಂಸ್ಥಾನದಲ್ಲಿರುವ ಪ್ರಾದೇಶಿಕ ಕಚೇರಿಗಳನ್ನು ಬಳ್ಳಾರಿಗೆ ವರ್ಗಾಯಿಸಲು ಮೈಸೂರು ಸರ್ಕಾರ ಆಲೋಚಿಸಿದೆ.

ಬಳ್ಳಾರಿ ಮೈಸೂರಿಗೆ ಸೇರುವ ಸಮಾರಂಭ

ಸಮಾರಂಭದ ಉತ್ಸವ ನಡೆಸಲು ನಿರ್ಧಾರ

ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರುವುದನ್ನು ಒಂದು ಉತ್ಸವ ಸಮಾರಂಭವಾಗಿ ಆಚರಿಸಬೇಕೆಂದು ಬಳ್ಳಾರಿ ಜಿಲ್ಲಾ ಕರ್ನಾಟಕ ಕ್ರಿಯಾ ಸಮಿತಿಯು ನಿರ್ಧರಿಸಿದೆ. ಆ ದಿನ ಬಡಹರಿಗೆ ಅನ್ನದಾನ ಮಾಡಲು ಇಬ್ಬರು ಪ್ರಮುಖ ವರ್ತಕರು ಒಂದು ಸಾವಿರ ರೂಪಾಯಿ ಉದಾರದಾನ ಮಾಡಿದ್ದಾರೆ.

ಮದರಾಸಿನ ಹೊಸ ಪ್ರಾಥಮಿಕ ಶಿಕ್ಷಣ ಯೋಜನೆ

ಮುಂದಿನ ಸಾಲಿನಿಂದ ನಗರ ಪ್ರದೇಶಗಳಲ್ಲೂ ಜಾರಿ

ಈಗ ಮದರಾಸ್ ಪ್ರಾಂತದ ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿಗೆ ಬಂದಿರುವ ಸುಧಾರಿತ ಪ್ರಾಥಮಿಕಶಿಕ್ಷಣ ಯೋಜನೆಯು ಮುಂದಿನ ಸಾಲಿನಿಂದ ನಗರ ಪ್ರದೇಶಗಳಲ್ಲೂ ಜಾರಿಗೆ ಬರುವ ಸಂಭವವಿದೆ—ಎಂಬುದಾಗಿ ಮದ್ರಾಸಿನ ಆರ್ಥಿಕ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ತಿಳಿಸಿದರು.

ದೀರ್ಘಾಯುಷ್ಯ

ನೀವು ಆರೋಗ್ಯವಂತರಾಗಿದ್ದು ದೀರ್ಘ ಕಾಲ ಬದುಕಬೇಕೆನ್ನುವಿರಲ್ಲವೆ? ಹಾಗಾಗಾ, ದರೆ ಆ ವಿಷಯವಾಗಿ ನ್ಯೂಯಿಯೊಡದ ಡಾ. ಎನ್. ಜೆ. ಟ್ರಾಟರ್, ಎಂ. ಬಿ. ಇ. ಅವರು ಹೇಳುವದನ್ನು ಕೇಳಿ. ಇವರು ವೃದ್ಧರಾಯರಾಗಿದ್ದು ಇವರಿಗೀಗ 82 ವರ್ಷಗಳಾಗಿವೆ. ತಾನು 100 ವರ್ಷವಾದರೂ ಬದುಕುತ್ತೇನೆ ಎನ್ನುತ್ತಾರೆ ಇವರು:—

ಅವರು ಹೇಳುವ ಆರೋಗ್ಯ ಸೂತ್ರ ಇದು:—

ಯಾವಾಗಲೂ ನಿಮ್ಮ ತಲೆಯನ್ನೂ ಪಾದವನ್ನೂ ಬೆಚ್ಚಗೆ ನಿಲ್ಲಿಸಿಕೊಳ್ಳಿ. ಅವು ಬೆಳೆಯಿರಬಾರದು. ಅವು ಬೆಚ್ಚಗಿದ್ದರೆ ನಿಮ್ಮ ಮನಸ್ಸು ಮತ್ತು ಹೃದಯಗಳು ಚನ್ನಾಗಿ ಕೆಲಸ ಮಾಡಲು ತುಂಬಾ ಸಹಾಯವಾಗುತ್ತದೆ. ಅತ್ಯಂತ ಉತ್ತಮ ವ್ಯಾಯಾಮ ಎಂದರೆ ಈಸುವದು. ಸಾಧ್ಯವಾದಾಗಲೆಲ್ಲ ಈಸುವ ಅಭ್ಯಾಸವಿರಲಿ.

ನಿಮಗೆ ಸಾಧ್ಯವಿದ್ದಷ್ಟು ಹೆಚ್ಚಿಗೆ ಸಡಿಯಿರಿ. ಅದರಿಂದ ನಿಮಗೆ ಸೂರ್ಯನ ಬಿಸಿಲು ಹೆಚ್ಚಿಚ್ಚಾಗಿ ತಗಲುವಂತಾಗುವದು. ಮತ್ತು ನಿಮ್ಮ ಪುಪ್ಪುಸಗಳಿಗೆ ಬೇಕಷ್ಟಾಗಾಳಿ ಸಿಗುವದು.

ಸೂರ್ಯಕಿರಣಗಳಲ್ಲಿ ತುಂಬಾ ಶಕ್ತಿದಾಯಕ ಗುಣವಿದೆ. ಸೂರ್ಯನ ಬಿಸಿಲು ಸಾಧ್ಯವಿದ್ದಷ್ಟು ಹೆಚ್ಚಿನ ಪ್ರಮಾಣದಲ್ಲಿ ನಿಮ್ಮ ಮೈಗೆ ಬೀಳಲಿ.

ಇತರರೊಂದಿಗೆ ಸ್ನೇಹದಿಂದಿರಿ. ಇತರರಿಗೆ ಸಹಾಯವನ್ನಾಡಿ. ಇದರಿಂದ ನಿಮ್ಮಲ್ಲಿಯ ಸ್ವಾರ್ಥವಳಿದು ಮನಸ್ಸು ಪ್ರಸನ್ನವಾಗಿರುವದು.

ಬಳ್ಳಾರಿ ಪಟ್ಟಣದಲ್ಲಿ ಕಳ್ಳರ ಹಾವಳಿ

ಪೋಲೀಸರ ಪತ್ತೆಗೂ ಅಸಾಧ್ಯವಾಗಿ ಹೆಚ್ಚಿದ್ದಾರೆ

ಬಳ್ಳಾರಿ ನಗರದ ಕೌಲು ಬಜಾರ್ ಬ್ರೂಸ್‌ಪೇಟೆ ಗಾಂಧಿನಗರ, ಸತ್ಯನಾರಾಯಣಪೇಟೆ ಮತ್ತು ಪಟೇಲ್. ನಗರಗಳಲ್ಲಿ ಆಗಾಗ್ಗೆ ಸಣ್ಣ ಪುಟ್ಟ ಕಳ್ಳತನಗಳಾಗುತ್ತಲೇ ಇವೆ. ಇವುಗಳ ಪತ್ತೆಯಾಗುವುದು ಪೋಲೀಸರಿಗೆ ದುಸ್ತರವೆಂಬುದು ಜನರಲ್ಲಿ ಜಿಗುಪ್ಸೆಯನ್ನು ಹುಟ್ಟಿಸುತ್ತಲಿದೆ. ಈ ಹಿಂದೆ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಶ್ರೀ ರಾಮರೆಡ್ಡಿಯವರ ಬಂಗಲೆಯಲ್ಲಿ ೪, ೫ ಸಾವಿರ ಬೆಲೆಯ ಆಭರಣ ಕದ್ದು ಟ್ರಂಕನ್ನು ಹೊಲದಲ್ಲಿ ಬಿಸುಟು ಹೋಗಿದ್ದರು. ಆದು ಪತ್ತೆಯಾಗಲಿಲ್ಲ:-

ಪಟೇಲ್ ನಗರದಲ್ಲಿ ಮುನಿಸಿಪಲ್ ಹೆಲ್ತ್‌ಆಫೀಸರ ಬಂಗಲೆಯಲ್ಲಿ ಇತ್ತೀಚೆಗೆ ಕಳುವಾದ ಸುದ್ದಿ ಬಂದಿದೆ. ಈ ಚತುರ ಕಳ್ಳರ ತಂಡವು ಪೋಲೀಸರ ದೃಷ್ಟಿಯಿಂದ ಅದೃಶ್ಯವಿರುವುದನ್ನು ಸಾರ್ವಜನಿಕರು ಶಂಕೆ, ವಿಸ್ಮಯ, ವಿಸ್ಮಯಗಳಿಂದ ನೋಡುತ್ತಿದ್ದಾರೆ.

ಎಲ್ಲ ತರದ ಸಾವಿರಾರು ಭಿಕ್ಷುಕರು ಆಂಗ್ಲ-ತಮಿಳು ಪ್ರದೇಶಗಳಿಂದ ನಗರದಲ್ಲಿ ಜಮಾಯಿಸುತ್ತಿದ್ದಾರೆ. ಹೋದಲೆಡೆಯಲ್ಲೆಲ್ಲಾ ಜನರ ಬೆನ್ನನ್ನು ಹತ್ತುತ್ತಿರುವದೆಂದೂ. ಈ ಭಿಕ್ಷುಕರಲ್ಲಿ ಅಧಿಕ ಸಂಖ್ಯಾಕರು ರಾತ್ರಿ ಕಾಲದಲ್ಲಿ ದುಷ್ಟ ಯಪ್ರಚಾರಗಳಲ್ಲಿ ಮಗ್ನರಾಗಿರುವದೆಂದೂ ಕೆಲವರು ಹೇಳುತ್ತಾರೆ.

ಕಾಂಗ್ರೆಸ್ಸಿಗರು ದೊಡ್ಡವರೋ? ಇವರು ದೊಡ್ಡವರೋ ?

ಮೈಸೂರಿನಲ್ಲಿ ಕಾಂಗ್ರೆಸ್ಸಿನಲ್ಲಿ ಇಬ್ಬಣವಾಗಿದೆಯೆಂದೂ ಕೆ. ಸಿ. ರೆಡ್ಡಿ ಗುಂಪು ಹನುಮಂತಯ್ಯನವರನ್ನು ಉರುಳಿಸಲು ಸಂಚುಪಡೆಯುತ್ತಿದೆಯೆಂದೂ ತಿಳಿದುಬರುತ್ತಿದೆ. ಏಕೀಕರಣದ ವಿಷಯದಲ್ಲಿ ಸಾಹಿತ್ಯ ಸಂಸ್ಥೆಗಳ ಉತ್ಪಾದನೆಯ ವಿಷಯದಲ್ಲಿ, ಇತರ ಅನೇಕ ಆಡಳಿತ ಸಮಸ್ಯೆಗಳಲ್ಲಿ ನೇರವಾದ ಘೋರಣದಿಂದ ಧೈರ್ಯದಿಂದ ಕಾರ್ಯಮಾಡುವ ಹನುಮಂತಯ್ಯನವರು ಜನರ ಅನುರಾಗಕ್ಕೆ ಪಾತ್ರರಾಗಿದ್ದಾರೆ. ಆದರೆ ಕಾಂಗ್ರೆಸ್ಸಿನ ಕೆಲವರು ಮಾತ್ರ ಹೇಗಾದರೂ ಮಾಡಿ ಉರುಳಿಸಬೇಕೆಂದು ಪಣತೊಟ್ಟು "ಹನುಮಂತಯ್ಯನವರು ರಾಜರನ್ನು ನಿರ್ಗಮಿಸುವಂತೆ ಮಾಡಲು ಹೊರಟಿದ್ದಾರೆ" ಎಂದೂ ಇತರ ನಾನಾ ಮುಖಗಳಿಂದ ಪ್ರಚಾರ ವೈಖರಿಗಳನ್ನು ನಡೆಯಿಸಿಯೂ ಯತ್ನಿಸುತ್ತಿದ್ದಾರೆ. ಈ ಕುರಿತು ದೆಹಲಿಗೆ ದೂರು ಹೋಗಿಬಂಗಿದೆ. ಅದಕ್ಕೆ ಶ್ರೀ ಹನುಮಂತಯ್ಯನವರು "ಯಾರು ಏನೇ ಮಾಡಲಿ —ದೇವರ ದಯೆ ಇರುವಷ್ಟಕಾಲ ಅಧಿಕಾರತ್ಯಾಗಮಾಡಲಾರೆ" ಎನ್ನುತ್ತಾರೆ?

ಹೊಸಪೇಟೆ ಡಿ|| ಮುನ್ಸೀಫ್ ಕೋರ್ಟಿನಲ್ಲಿ

S. C. 220/ 53

ವಾದಿ:

ಸಂಗನಹಳ್ಳಿ ದೊಡ್ಡಬಸಪ್ಪ
ಸಾ| ನಂದ್ಯಾಲ(ಹರಪನಹಳ್ಳಿ)

ಮತ್ತು

ಪ್ರತಿವಾದಿ-

1 ಹಡಪದ ಹಾಲಪ್ಪ ತಂದಿ ಪಕೀರಪ್ಪ
2. do ಚನ್ನಬಸಪ್ಪ ತಂದಿ ಹಾಲಪ್ಪ
ಸಾ. ಕಡ್ಡಿ ಹರಪನಹಳ್ಳಿ

ಈ ಮೇಲ್ಕಾಂಡ ನಂಬರಿನಲ್ಲಿ ತಾ. 14-4-50 ರಲ್ಲಿ ವಾದಿಯ ಬಳಿಯಲ್ಲಿ ಪ್ರತಿವಾದಿಗಳು ತಮ್ಮ ಸ್ವಂತ ಕೃತ್ಯದ ಸಲುವಾಗಿ ರೂ. 88-0 0 ರೂ. ಸಾಲ ತೆಗದುಕೊಂಡಿರುತ್ತಾರೆ. ಸದ್ರಿ ದಾವಾದಲ್ಲಿ ಪ್ರತಿವಾದಿಗಳು ತಾ. 8-9-53 ರಲ್ಲಿ ನೇಲ್ಕಾಂಡ ಕೋರ್ಟಿನಲ್ಲಿ 10½ ಘಂಟೆಗೆ ಹಾಜರಾಗಿ ತಮ್ಮಗೇನಾದರು ಶಕರಾರು ಇದ್ದಪಕ್ಷದಲ್ಲಿ ತಿಳ್ಸಿತಕ್ಕದ್ದು ತಪ್ಪಿದಲ್ಲಿ ಏಕಪಕ್ಷ ತೀರ್ಮಾನಿಸಲ್ಪಡುತ್ತದೆ.

ಯಂ. ರಘುಪತಿ
ವಾದಿ-ಅಡ್ವೊಕೇಟ್

ಏಷ್ಯದ ೬ ದೇಶಗಳಲ್ಲಿ ಸಾಕಷ್ಟು ಆಹಾರವಿದೆ

ಕಾಶ್ಮೀರವೂ ಅವುಗಳಲ್ಲೊಂದು

ಪ್ರಪಂಚದ ಆಹಾರ ಉತ್ಪನ್ನ ಪ್ರಪಂಚ ಜನರೆಲ್ಲರಿಗೂ ಸಾಕಾಗುವಂತೆ ತೋರಿಬಂದ ೨೯ ಮೂರನೆಯ ಎರಡು ಭಾಗದಷ್ಟು ಜನ ಹಸಿವಿಗೊಳಗಾಗುತ್ತಿದ್ದಾರೆ ಆಹಾರದ ಹಂಚಿಕೆಯಲ್ಲಿ ಕೊರತೆಯಿರುವುದೇ ಇದಕ್ಕೆ ಕಾರಣ.

ವಿಶ್ವದಲ್ಲಿ ಆರು ರಾಷ್ಟ್ರಗಳು ಮಾತ್ರ ಸಾಕಾದಷ್ಟು ಆಹಾರ ಹೊಂದಿವೆ. ಅವುಗಳಲ್ಲಿ ಕಾಶ್ಮೀರವೂ ಒಂದು.

ಅಮೆರಿಕಾದ ಜಿಯೊಗ್ರಾಫಿಕಲ್ ಸೊಸೈಟಿಯ ಮೆಡಿಕಲ್ ಜಿಯೊಗ್ರಾಫಿ ವಿಭಾಗದವರು ನಡೆಸಿದ ತನಿಖೆಯಿಂದ ಮೇಲೆ ಕಂಡ ಅಂಶಿ ಅಂಶಗಳು ವ್ಯಕ್ತ ಪಟ್ಟಿವೆ. ಯೂರೋಪಿನಲ್ಲಿ—ರಷ್ಯವೂ ಸೇರಿ—ಸ್ವೀನ್, ಇಟಲಿ, ಪೋರ್ಚುಗಲ್ ಮತ್ತು ಪೂರ್ವ ಜರ್ಮನಿಗಳು ಮಾತ್ರ ಆಹಾರ ಅಭಾವಕ್ಕೀಡಾಗಿವೆ ವಿಶ್ವದಲ್ಲಾದರೋ ಕಾಶ್ಮೀರ, ಟಿಬೆಟ್, ನೇಪಾಳ, ಸಯಾಂ. ಫಾರ್ಮೋಸಾ ಮತ್ತು ಕಾಬೋಡಿಯಾಗಳು ಮಾತ್ರ ಸಕಷ್ಟು ಆಹಾರ ಹೊಂದಿವೆ,

—: ಬಳ್ಳಾರಿ ಪ್ರಭಾತದಲ್ಲಿ :—

5-9-53 ರಿಂದ

ಅಂಜಲಿದೇವಿ ನಟಿಸಿದ ಅದ್ಭುತ ಹಿಂದೀ ಚಿತ್ರ

★ ಶುಕರಂಭ ★

ನಿಜವಾದ ವಾಚ್ - ಪೆನ್ ಐದೇ ರೂಪಾಯಿಗೆ

ಅಮೆರಿಕಾ ತಯಾರಿಯ "ಮಾರ್ವಲ್" ಫೌಂಟನ್ ಪೆನ್ ಮತ್ತು ನಿಜವಾದ 10 ವರ್ಷ ಗ್ಯಾರಂಟಿಯುಳ್ಳ ಸ್ವಿಸ್‌ವಾಚ್ ಇವೆರಡನ್ನು ನಮ್ಮ ಉದ್ಯೋಗಾಭಿವೃದ್ಧಿಗಾಗಿ 5/- ಐದೇ ರೂ. ಗಳಲ್ಲಿ ಕೊಡುತ್ತೇವೆ. ಇದಕ್ಕೆ 1-2-0 ಪಾರ್ಸಲ್ ಖರ್ಚು – ನಾವು ಹೇಳಿದ್ದಕ್ಕೆ ವಿರೋಧ ವಿದ್ದಲ್ಲಿ ಹಣ ಹಿಂತಿರುಗಿಸಲಾಗುತ್ತದೆ.

LONDON TRADING AGENCY.
(N. B. B) JULLUNDER CITY.

ಸುಪ್ರಸಿದ್ಧ
ಮೈಸೂರು - ಸುಗಂಧ ದ್ರವ್ಯಗಳು
ಶ್ರೀಫಲವಾದ ಅಗರಬತ್ತಿ
-: 24 ತೊಲೆಗಳ 1 ಸೇರಿನ ಬೆಲೆ :-

ಮಹರಾಜಾ ಬತ್ತಿ	20 ರೂ.	ಕಸ್ತೂರಿ ಜವಾಜಿ	10 ರೂ.
ದರ್ಬಾರ್ ಬತ್ತಿ	15 ರೂ.	ರೋಸ್ ಬತ್ತಿ	6 ರೂ.
ಆನಂದ ಬತ್ತಿ	12 ರೂ.	ಜಸ್ಮಿನ್	5 ರೂ.
ಮನಮೋಹನ್ ಬತ್ತಿ	10 ರೂ.	ಪುನುಗು	4 ರೂ.
ಮೈಹೀನ, ಅಂಬರ್ ಬತ್ತಿ	8 ರೂ.	ಹೀನ	3 ರೂ.

12 ವಿಧದ 300 ಬತ್ತಿಗಳನ್ನೊಳಗೊಂಡ ಡಬ್ಬಿಯ ಬೆಲೆ 6 ರೂ.
ಪ್ಯಾಕಿಂಗ್ ಪೋಸ್ಟೇಜ್ ಫ್ರೀ

ದಿ ಸ್ಟೇಟ್ ಪರ್ಫ್ಯೂಮರಿ ಮಾರ್ಟ್ ಮೈಸೂರು
The State Perfumery Mart Mysore.

ನಿರಾಡಂಬರವಾದ ದಸರ ಹಬ್ಬ

ಜಂಬೂ ಸವಾರಿಯಿಲ್ಲ

ಮುಂದಿನ ಅಕ್ಟೋಬರ್ ಅನೇ ತಾರೀಖಿನಿಂದ ಆರಂಭವಾಗುವ ದಸರಾ ಹಬ್ಬವನ್ನು ಭಕ್ತಳ ನಿರಾಡಂಬರವಾಗಿ ಅರಮನೆಯಲ್ಲಿ ಆಚರಿಸಲಾಗುವುದೆಂದೂ, ಕೇವಲ ಶಾಸ್ತ್ರೋಕ್ತವಾದ ಕೆಲವು ಭಾಗಗಳನ್ನು ಮಾತ್ರ ನಡೆಸಲಾಗುವುದೆಂದೂ ಹೇಳಲಾಗುತ್ತಿದೆ

ಕಳೆದ ವರ್ಷದಂತೆ ಈ ಸಲ "ರಾಜಸಭೆ" ನಡೆಯದಿರಬಹುದೆಂದೂ, ಹಿಂದಿನ ಕಾಲಗಳಂತೆ "ದರ್ಬಾರ್" ಇರುವದಿಲ್ಲವೆಂದೂ, ಅಲ್ಲದೆ ವಿಜಯದಶಮಿಯ ದಿನ "ಜಂಬೂ ಸವಾರಿ" ಆಗುವದಿಲ್ಲವೆಂದೂ ವದಂತಿಯಿದೆ.

ಇನ್ನೂ ಅಧಿಕೃತವಾಗಿ ಏನೂ ಹೊರಟಿದಿಲ್ಲ.

ಬಳ್ಳಾರಿಗೆ ಮುಖ್ಯ ಮಂತ್ರಿಗಳು ಈ ತಿಂಗಳ ಕೊನೆಯ ಭಾಗದಲ್ಲಿ ಭೇಟಿ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ತಿಂಗಳ ಕೊನೆಯ ಭಾಗದಲ್ಲಿ ಬಳ್ಳಾರಿಗೆ ಹೋಗಿ ಪೂರ್ವಭಾವಿ ಪರಿಶೀಲನೆಗಳನ್ನು ಮಾಡಿಸಿಕೊಂಡು ಬರುವ ಸಂಭವವಿದೆ.

ಅಲ್ಲದೆ ಸಂಸ್ಥಾನದ ನಾನಾ ಇಲಾಖೆಗಳ ಮುಖ್ಯಾಧಿಕಾರಿಗಳೂ ಈ ತಿಂಗಳಿನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಬಳ್ಳಾರಿಗೆ ಹೋಗಿ ತಮ್ಮ ತಮ್ಮ ಇಲಾಖೆಗಳಿಗೆ ಸಂಬಂಧಿಸಿದಂತೆ ಅಲ್ಲಿನ ವಿಷಯಗಳನ್ನು ಅಧ್ಯಯನ ಮಾಡಿಕೊಂಡು ಬರುವರೆಂದೂ ತಿಳಿದುಬಂದಿದೆ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.

7-9-53

Edited Printed & Published by T. B. Keshava Rao, at Nava Bharat Press, Bellary.

ನಾಡಿಪತ್ರಿಕೆ

ಸೋಮವಾರ
ಸೆಪ್ಟಂಬರ್
೧೪, ೧೯೫೩

ವರ್ಷ 16
ಸಂಚಿಕೆ 25

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ಕೃಷ್ಟತೆ ! ಜಾಗ್ರತ !! ಪ್ರಾಮ್ಹವರಾನ್ಸಿ ಬೋದತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಈಶವರಾವು

ಕೇಂದ್ರದ ವೆಚ್ಚ ಹೆಚ್ಚುವುದಾದರೆ ಹೊಸ ಪ್ರಾಂತಗಳು ಬೇಡ

ಹೊಸ ಭಾಷಾವಾರು ಪ್ರಾಂತಗಳ ರಚನೆಯಿಂದ ಕೇಂದ್ರ ಸರಕಾರವ ವೆಚ್ಚ ಹೆಚ್ಚುವುದಾದರೆ, ಹೊಸ ಪ್ರಾಂತ ರಚನೆಯನ್ನು ನಿರಾಕರಿಸಲು ಅದೇ ಸಾಕಾದಷ್ಟು ಕಾರಣವಾಗುತ್ತದೆ, ಎಂಬುದಾಗಿ ರಾಜ್ಯ ಪರಿಷತ್ತಿನಲ್ಲಿ ಡಾ. ಕಟ್ಜುರವರು ಹೇಳಿದರು.

ಆಂಧ್ರ ಪ್ರಾಂತ ಮಸೂದೆಯ ಮೇಲೆ ರಾಜ್ಯ ಪರಿಷತ್ತಿನಲ್ಲಿ ನಡೆದ ಚರ್ಚೆಗೆ ಉತ್ತರ ಕೊಟ್ಟಾಗಲೇ ಡಾ. ಕಟ್ಜು ಮೇಲೆ ಕಂಡಂತೆ ತಿಳಿಸಿದರು.

ಹೊಸ ಪ್ರಾಂತಗಳನ್ನು ರಚಿಸುವುದಕ್ಕೆ ಮೊದಲು ಅವುಗಳಿಂದ ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿಯ ಮೇಲೆ ಉಂಟಾಗುವ ಪರಿಣಾಮಗಳನ್ನು ವಿವರವಾಗಿ ಪರಿಶೀಲಿಸ ಬೇಕೆಂಬ ಡಾ॥ಕುಂಜ್ರು ರವರ ವಾದವನ್ನು ಡಾ॥ಕಟ್ಜು ಸಮರ್ಥಿಸಿದರು.

ಭಾಷೆಯ ಜೊತೆಗೆ ಇತರ ಪ್ರಶ್ನೆಗಳೂ ಇವೆ

ಪ್ರಾಂತಗಳನ್ನು ಭಾಷಾವಾರಾಗಿ ಪುನರ್ವ್ಯವಸ್ಥೆ ಗೊಳಿಸುವಾಗ ಭಾಷೆಯ ಜೊತೆಗೆ ಆಯಾ ಪ್ರದೇಶಗಳ ಐತಿಹ್ಯಗಳನ್ನೂ, ಇತಿಹಾಸಿಕ ಹಿನ್ನೆಲೆಗಳನ್ನೂ ಆರ್ಥಿಕ ಮತ್ತು ಹಣಕಾಸಿನ ವಿಚಾರಗಳನ್ನೂ ಪರಿಶೀಲಿಸಬೇಕಾಗಿದೆಯೆಂದು ಡಾ॥ ಕಟ್ಜು ತಿಳಿಸಿದರು.

ಸದಸ್ಯರು ಈ ವಿಚಾರದಲ್ಲಿ ಸಮಗ್ರ ದೃಷ್ಟಿಯಿಂದ ಪ್ರಶ್ನೆಯನ್ನು ಪರಿಶೀಲಿಸ ಬೇಕೆಂದೂ, ಒಂದೊಂದೇ ಭಾಗವನ್ನೇ ಬೇರೆ ಬೇರೆಯಾಗಿ ಪರಿಶೀಲಿಸಬಾರದೆಂದೂ ತಾವು ಮನವಿ ಮಾಡಿಕೊಳ್ಳುವುದಾಗಿ ಡಾ॥ ಕಟ್ಜು ತಿಳಿಸಿದರು.

ಗಡಿ ಕಮಿಷನ್ ನೇಮಕ

ಭಾಷಾಪ್ರಾಂತ ರಚನೆಯ ಸಂಬಂಧವಾದ ಎಲ್ಲಾ ಪ್ರಶ್ನೆಗಳನ್ನೂ ಪರಿಶೀಲಿಸಲು ಸದ್ಯದಲ್ಲೇ ವಿಶೇಷಾಧಿಕಾರವುಳ್ಳ ಗಡಿ ಕಮಿಷನ್ ನೇಮಕವಾಗುವುದೆಂದೂ ವಿವಿಧ ಭಾಷಾ ಪ್ರಾಂತಗಳಾಗಬೇಕೆಂದು ವಾದಿಸುತ್ತಿರುವವರು ತಮ್ಮತಮ್ಮ ನ್ಯಾಯವಾದ ಉಂಟಾಗಿರುವ ಭಿನ್ನತೆಗಳನ್ನು ಪರಿಹರಿಸಿಕೊಳ್ಳಬೇಕೆಂದೂ ಡಾ॥ಕಟ್ಜು ತಿಳಿಸಿದರು

ಅಂಬೇಡ್ಕರರ ಸಲಹೆ ಬಗ್ಗೆ ಪ್ರಸ್ತಾಪ

ಅಲ್ಪ ಸಂಖ್ಯಾತರ ಹಿತರಕ್ಷಣೆಗಾಗಿ ಗವರ್ನರುಗಳಿಗೆ ವಿಶೇಷಾಧಿಕಾರ ಕೊಡಬೇಕೆನ್ನುವ ಡಾ॥ ಅಂಬೇಡ್ಕರರ ಸಲಹೆಯನ್ನು ಡಾ॥ ಕಟ್ಜು ಪ್ರಸ್ತಾಪಿಸಿ, ಈ ಸಲಹೆಯನ್ನು ಒಪ್ಪಿಕೊಂಡರೆ, ಪ್ರತಿಯೊಂದು ಪ್ರಾಂತದಲ್ಲೂ ಅಲ್ಪಸಂಖ್ಯಾತ ಪಂಗಡವೊಂದನ್ನು ರಕ್ಷಿಸಲು ಗವರ್ನರರು ಕ್ರಮ ಕೈಗೊಳ್ಳಬೇಕಾದೀತು, ಆದರು

(ಕೊನೆಯ ಪುಟಕ್ಕೆ)

Bellary District Board

Jeep-Public Auction

The District Board Jeep Car BYZ 1810 will be sold in public auction on 25-9-53 at 11 A. M., in the premises of the District Board Office Bellary. Intending bidders should deposit Rs 500/- before sale is conducted. The deposit of unsuccessful bidders will be refunded after the sale. Further particulars can be had by enclosing a stamped and addressed envelope.

Dt Board Office Bellary | C. SURYA RAO
Date- 8-9-53. | Special Officer

ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡ್
-: ಜೀಪ್‌ನ ಬಹಿರಂಗ ಯಾಲಂ :-

ಬಳ್ಳಾರಿ ಜಿಲ್ಲಾ ಬೋರ್ಡು ಕಛೇರಿಯ ಆವರಣದಲ್ಲಿ 25-9-53 ವ್ಯಾ. 11 ಗಂಟೆಗೆ BYZ 1810 ನಂಬರಿನ ಜಿಲ್ಲಾ ಬೋರ್ಡು ಜೀಪ್ ಕಾರ್ ಯಾಲಂ ಹಾಕಲ್ಪಡುವುದು. ಟೆಂಡರ್‌ಯಲ್ಲಿ ಭಾಗವಹಿಸಲು ಇಚ್ಛಿಸುವವರು ವಿಕ್ರಯದ ಪೂರ್ವ 500/- ರೂ ಡಿಪಾಜಿಟ್ ಕಟ್ಟಬೇಕು. ಕೊಳ್ಳದಿರುವ ಸ್ಪರ್ಧೆಗಾರರ ಡಿಪಾಜಿಟ್ ಹಣವು ವಿಕ್ರಯವಾದನಂತರ ವಾಪಸು ಕೊಡಲ್ಪಡುವುದು. ಸ್ಥಳವು ಹಚ್ಚಿ ವಿಳಾಸ ಬರೆದ ಕವರು ಕಳುಹಿಸಿದಲ್ಲಿ ಇತರ ವಿವರಗಳನ್ನು ತಿಳಿಸಲಾಗುವುದು.

ಜಿಲ್ಲಾ ಬೋರ್ಡು ಆಫೀಸು ಬಳ್ಳಾರಿ | ಶಿ. ಸೂರ್ಯರಾವ್.
8-9-1953 | ಸ್ಪೆಷಲ್ ಆಫೀಸರ್

ಪಾಕಿಸ್ತಾನದ ನೀತಿ ಆತ್ಮಘಾತಕವಾದುದು

ಕೊರಿಯಾದ ರಾಜಕೀಯ ಸಮ್ಮೇಳನದಲ್ಲಿ ಭಾರತವು ಭಾಗವಹಿಸದಂತೆ ಪಾಕಿಸ್ತಾನವು ವಿರುದ್ಧವಾಗಿ ಓಟು ಮಾಡಿದುದು ಆತ್ಮಘಾತಕವೆಂದೂ, ವಿಶ್ವರಾಷ್ಟ್ರವೊಂದಕ್ಕೆ ತಕ್ಕದಲ್ಲವೆಂದೂ ಪ್ರಪಂಚ ಸಂಸ್ಥೆಯಲ್ಲಿ ತಜ್ಞ ನಿರೀಕ್ಷಕರುಗಳು ಅಭಿಪ್ರಾಯಪಡುತ್ತಿದ್ದಾರೆಂದು ಸುದ್ದಿ ಬಂದಿದೆ.

ಈ ವರದಿಯನ್ನು 'ಪಾಕೀಸ್ತಾನ್ ಟೈಮ್ಸ್', ಪತ್ರಿಕೆಯ ಪ್ರಪಂಚ ಸಂಸ್ಥೆಯಲ್ಲಿನ ಬಾತ್ಮೀದಾರರು ಕಳಿಸಿಕೊಟ್ಟಿದ್ದಾರೆ. ಭಾರತದ ಪ್ರಭಾವವು ಅಂತರ ರಾಷ್ಟ್ರೀಯ ಕ್ಷೇತ್ರದಲ್ಲೂ, ವಿಷಯದಲ್ಲೂ ವೃದ್ಧಿಯಾಗುತ್ತಿರುವುದನ್ನು ಸಹಿಸದೆ ಪಾಕಿಸ್ತಾನವು ಈ ರೀತಿ ಮಾಡಿತೆಂದು ನಿರೀಕ್ಷಕರು ಅಭಿಪ್ರಾಯಪಡುತ್ತಿದ್ದಾರೆಂದೂ ಅವರು ಹೇಳಿದ್ದಾರೆ.

ಭಾರತ-ಪಾಕಿಸ್ತಾನಗಳ ನಡುವೆ ಎಷ್ಟೇ ಭೇದಭಾವಗಳಿರಲಿ, ಕೊರಿಯಾದಂತಹ ಮಹಾ ಅಂತರರಾಷ್ಟ್ರೀಯ ವ್ಯಾಪ್ತಿಯ ಸಮಸ್ಯೆಯ ಬಗ್ಗೆ ಓಟು ಕೊಡುವಾಗ ಅವುಗಳನ್ನು ಯೋಚಿಸಬಾರದು-ಎಂದೂ ನಿರೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. ವಿಶ್ವರಾಷ್ಟ್ರವೊಂದು ಮಾಡಬೇಕಾದ ಕರ್ತವ್ಯವೇ ನೆಂಬುದನ್ನೇ ಗ್ರಹಿಸದೆ ಪಾಕಿಸ್ತಾನ ಹೀಗೆ ಮಾಡಿತೆಂದೂ ಅವರು ಹೇಳುತ್ತಿದ್ದಾರೆ.

ಭಕ್ತವತ್ಸಲಂರಿಗೆ ಮಂತ್ರಿಪದವಿ?

ಅಧಿಕಾರ ದಾಹದಿಂದ ತನ್ನ ವೈಯಕ್ತಿಕ ಜೀವನಕ್ಕೆ ಕಳಂಕ ಹಚ್ಚಿಕೊಂಡು ಜನತೆಯಿಂದ ಪರಾಭೂತರಾದರೂ ಕಾಂಗ್ರೆಸ್ಸಿಗರಿಗೆ ತಲೆವರಿಗೆ ಅಧಿಕಾರ ವ್ಯಾಮೋಹವನ್ನು ಬಿಟ್ಟಿಲ್ಲ. ತಮಿಳುನಾಡಿನಲ್ಲಿ ರಾಜಾಜಿಯವರು ಮುಖ್ಯ ಮಂತ್ರಿಗಳಾಗಿರುವುದನ್ನು ಅನೇಕರು ಒಳಗಿಂದೊಳಗೇ ದ್ವೇಷಿಸುತ್ತಾರೆ! ಒಳಗೊಳಗೇ ಅವರನ್ನು ತಳ್ಳಲು ತಂತ್ರ ನಡೆಯಿಸುತ್ತಾರೆಂದೂ ಕೇಳಬರುತ್ತಿದೆ. ಮುಖ್ಯ ಮಂತ್ರಿಯ ಗಾದಿಯ ಕನಸು ಕಾಣುತ್ತಿರುವವರಲ್ಲಿ ಶ್ರೀ ಭಕ್ತವತ್ಸಲಂರೂ ಒಬ್ಬರಂತೆ! ಈ ಸಮಯಕ್ಕೆ ಸರಿಯಾಗಿ ಆಂಧ್ರದೇಶ ಬೇಕೆಂದು ನಾಲ್ವತ್ತಾರುಜನ ಮಂತ್ರಿಗಳು ಆಂಧ್ರಕ್ಕೆ ಹೋಗುತ್ತಾರೆ. ಕನ್ನಡದ ಶ್ರೀ ನಾಗನ ಗೌಡರು ಮೈಸೂರಿಗೆ ಬರುತ್ತಾರೆ. ಹರಿಜನ ಮಂತ್ರಿಗಳೂ ಆಂಧ್ರಕ್ಕೆ ಹೋಗುತ್ತಾರೆ. ಆಗ ರಾಜಾಜಿಯವರಿಗೆ ತನ್ನ ಮಂತ್ರಿಸಂಪುಟವನ್ನು ಪುನರ್ಘಟಿಸಬೇಕಾಗುತ್ತದೆ. ನವೀನ ವಿದ್ಯಾಯೋಜನೆಯನ್ನು ದೇಶದಲ್ಲಿ ಸ್ಥಿರವಾಗಿ ನೆಲೆಸಬೇಕೆಂಬ ಶಾಶ್ವತನಿರ್ಧಾರಕ್ಕೆ ಬಂದ ರಾಜಾಜಿಯವರು ನಿವೃತ್ತರಾಗದೆ ಮದ್ರಾಸಿನ ಆಧಿಪತ್ಯವನ್ನು ಇನ್ನೂ ಕೆಲಕಾಲ ನಡೆಸುವರೆಂದು ತಿಳಿದುಬಂದಿದೆ. ಆದುದರಿಂದ ಆಂಧ್ರಪ್ರಾಂತವಾದಮೇಲೆ ಮಂತ್ರಿಮಂಡಳವನ್ನು ಪುನರ್ಘಟಿಸುವಾಗ ಒಬ್ಬ ಹರಿಜನರನ್ನೂ ಮತ್ತು ಭಕ್ತವತ್ಸಲಂರನ್ನು ಮಂತ್ರಿಗಳಾಗಿ ಸೇರಿಸಲಿರುವರೆಂದು ಮದ್ರಾಸಿನಲ್ಲಿ ವಾರ್ತೆಹಬ್ಬಿದೆ. ಮಂತ್ರಿನಾಗಣ್ಣಗೌಡರಿಗೆ ಮೈಸೂರು ಮಂತ್ರಿಸಂಪುಟದಲ್ಲಿ ಒಂದು ಸ್ಥಾನಕೊಡಬಹುದೆಂದೂ ಕೇಳಿಬರುತ್ತಿದೆ!

ಕರ್ನಾಟಕ ಪ್ರಾಂತ ರಚನೆ ಬಗ್ಗೆ ಕೇಂದ್ರದ ನಿಧಾನ ನೀತಿ

ಚಿಕ್ಕಮಗಳೂರು ಪ್ರಜಾ -ಸೋಷಲಿಸ್ಟರ ಖಂಡನೆ

ಇಲ್ಲಿಯ ಪ್ರಜಾ ಸೋಷಲಿಸ್ಟ್ ಕಛೇರಿಯಲ್ಲಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯ ಆದೇಶದಂತೆ ಆಗಸ್ಟ್ 22ರಂದು ಕರ್ನಾಟಕ ಏಕೀಕರಣ ಸಪ್ತಾಹವನ್ನು ಆಚರಿಸಲಾಯಿತು.

ಕಾರ್ಯದರ್ಶಿ ಶ್ರೀ ಎ ವಿ ಗುರುಬಸಪ್ಪ ಶೆಟ್ಟರು ಮಾತನಾಡಿ 'ಭಾಷಾವಾರು ಪ್ರಾಂತ್ಯಗಳನ್ನು ರಚಿಸುವುದರಲ್ಲಿ ಕೇಂದ್ರ ಸರ್ಕಾರ ತಾಳಿರುವ ಪಕ್ಷಪಾತ ಧೋರಣೆಯನ್ನು ಖಂಡಿಸಿದರು. ಆಂಧ್ರ ಪ್ರಾಂತ್ಯರಚನೆಗೆ ಒಪ್ಪಿಗೆ ಇತ್ತಂತೆ ಅಖಂಡ ಕರ್ನಾಟಕ ರಾಜ್ಯ ಸ್ಥಾಪನೆಗೆ ಕೇಂದ್ರ ಸರ್ಕಾರ ಕೂಡಲೇ ಘೋಷಣೆ ಹೊರಡಿಸುವುದು ಸಾಧುವೂ ಸಮಯೋಚಿತವೂ ಆಗಿದೆ ಎಂದು ಅವರು ತಿಳಿಸಿದರು.

ಆಗಸ್ಟ್ ಒಂಭತ್ತರಿಂದ ಉತ್ತರ ಕರ್ನಾಟಕದ ಹುಬ್ಬಳ್ಳಿ, ಧಾರವಾಡ ಬಾಗಲಕೋಟೆ ಮುಂತಾದ ಸ್ಥಳಗಳಲ್ಲಿ ಕನ್ನಡಿಗರು ಹೂಡಿರುವ ಸಪ್ತಾಹಕ್ಕೆ ಪೂರ್ಣ ಬೆಂಬಲ ನೀಡುವ ಮತ್ತು ಈ ಸಪ್ತಾಹಗಳಲ್ಲಿ ಭಾಗವಹಿಸಿ ದಸ್ತಗಿರಿಯಾಗಿ ಬಿಡುಗಡೆ ಹೊಂದಿರುವ ವಿದ್ಯಾರ್ಥಿ ಸೋದರರನ್ನು ಅಭಿನಂದಿಸುವ ನಿರ್ಣಯಗಳನ್ನು ಮಾಡಲಾಯಿತು. ಕರ್ನಾಟಕ ಏಕೀಕರಣ ಸ್ಥಾಪನೆಗೆ ಕಾರ್ಯೋನ್ಮುಖರಾಗಲು ಪ್ರತಿಭಾಶಾಲಿಗಳ ಒಂದು ಸಮಿತಿಯನ್ನು ಸಹ ರಚಿಸಲಾಗಿದೆ. ಈ ಸಮಿತಿಯು ಅಖಿಲ ಕರ್ನಾಟಕ ರಾಜ್ಯ ನಿರ್ಮಾಣದ ಪರಿಷತ್ತಿನ ಕ್ರಿಯಾ ಸಮಿತಿಯ ಆದೇಶದಂತೆ ತನ್ನ ಕಾರ್ಯಕ್ರಮಗಳನ್ನು ಆಳವಡಿಸಿಕೊಂಡು ಕರ್ನಾಟಕ ರಾಷ್ಟ್ರ ಸ್ಥಾಪನೆಗೆ ದುಡಿಯಲು ಪ್ರಮಾಣ ವಚನ ಕೈಗೊಂಡಿತು.

ಉತ್ತರ ಪ್ರದೇಶದಲ್ಲಿ ಪ್ರವಾಹ

ಉತ್ತರ ಪ್ರದೇಶದಲ್ಲಿ ಐದುಸಾವಿರಕ್ಕೂ ಹೆಚ್ಚು ಹಳ್ಳಿಗಳೂ, ಸುಮಾರು ಹತ್ತುಲಕ್ಷ ಎಕರೆ ಜಮೀನೂ ಈಚೆಗೆ ಸಂಭವಿಸಿದ ಪ್ರವಾಹದ ಹಾವಳಿಗೀಡಾಗಿವೆಯೆಂದು ಈಚಿನ ವರದಿಗಳಿಂದ ವ್ಯಕ್ತವಾಗಿದೆ.

ಪ್ರವಾಹ ಪೀಡಿತರಿಗೆ ಪರಿಹಾರ ಒದಗಿಸುವುದು, ಈ ಪ್ರವಾಹದಿಂದ ಆಗಿರುವ ನಷ್ಟವನ್ನು ಸರಿಪಡಿಸುವುದು, ಇತ್ಯಾದಿ ಮೊದಲಾದ ಕಾರ್ಯಗಳಿಗಾಗಿ ಪ್ರಾಂತ ಸರ್ಕಾರ ಒಟ್ಟು ಒಂದುಕೋಟಿ ಮೂವತ್ತೈದುಲಕ್ಷ ರೂಪಾಯಿಗಳಿಗೂ ಹೆಚ್ಚು ಹಣವನ್ನು ಖರ್ಚುಮಾಡಬೇಕಾಗುವುದೆಂದು ಅಂದಾಜು ಮಾಡಲಾಗಿದೆ.

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ವೈಜಪಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

ಬ್ರೆಡ್ಡಿನಿಂದ ಇತರ ಉಪ ಆಹಾರಗಳು

ನಾಗರಿಕತೆಯ ದೃಷ್ಟಿಯಿಂದ ಉಳಿದು ಸಂಶೋಧನೆಗಳಗಿಂತ ಹೊಸ ಆಹಾರ ಪ್ರಕಾರದ ಜ್ಞಾನವು ಹೆಚ್ಚು ಮಹತ್ವ ದ್ದಾಗಿದೆ.

ಬೇರೆಬೇರೆ ಕ್ಷೇತ್ರಗಳಲ್ಲಿ ಆಯಾ ವಿಷಯದ ತಜ್ಞರು ಸಂಶೋಧನಾ ಕಾರ್ಯವನ್ನು ಮುಂದರಿಸುತ್ತ ಬಂದಿದ್ದಾರೆ. ರೇಡಿಯವರ್ ಸಂಶೋಧನೆ ಮಾಡಿ ಪೀರೇ ಮತ್ತು ಮೇರೀ ಕ್ಯೂರೀ ಇವರು ಕಾನ್ಸರ ರೋಗದಿಂದ ಬಳಲುವವರಿಗೆ ಮಹದುಪಕಾರ ಮಾಡಿದರು. ಲುಯಿ ಪಾಶ್ಚರ ಇವನು ಮತ್ತು ಅವನ ಸಂಗಡಿಗರು ಪೆನ್ಸಿಲಿಯನ್ ಶೋಧ ಮಾಡಿ ಮಾನವ ವರ್ಗಕ್ಕೆ ಕಲ್ಯಾಣ ಸ್ಥೆದಿದ್ದಾರೆ.

ಆದರೆ ಆಹಾರದ ವಿಷಯದಲ್ಲಿ ಮಹಾರಾಷ್ಟ್ರೀಯ ತರುಣ ಶೇ. ಬಾಬೂರಾವ ತಾಮ್ಹಣಕರ ಇವರು ಮಾಡಿದ ಸಂಶೋಧನೆಗಳು ಕೂಡ ಮಹತ್ವದವಲ್ಲವೆನ್ನಲು ಬರಲಾರದು. ತಾಮ್ಹಣಕರರು ಬಡ ಕುಟುಂಬದಲ್ಲಿ ಜನಿಸಿದರು. ಉದ್ಯೋಗ ನಿಲ್ಲದೆ ತಿರುಗುತ್ತಿದ್ದರು. ಆ ಮೂಲಕ ಎಲ್ಲ ತರಹದ ಅನಾನುಕೂಲತೆಗಳನ್ನು ಅವರು ಸಹಿಸಿದ್ದಾರೆ.

ಅವರ ಬುದ್ಧಿಯು ಸಂಶೋಧಕ ವೃತ್ತಿಯವೂ ಸಾಹಸೀ ಗುಣಯುಕ್ತ ವಾದದ್ದೂ ಆಗಿರುತ್ತದೆ. ಆದರ ಸಹಾಯದಿಂದ ಅವರು ಗೋದಿ ಹಿಟ್ಟಿನ ಬ್ರೆಡ್ಡಿನಿಂದ ಇತರ 29 ತರಹದ ಉಪಹಾರಗಳನ್ನು ಸಿದ್ಧಮಾಡುವ ಉಪಾಯವನ್ನು ಕಂಡು ಹಿಡಿದಿದ್ದಾರೆ.

ನಾರಾಟದ ವಸ್ತುಗಳನ್ನು ರಚಿಸುವುದರಲ್ಲಿ ಮಹಾರಾಷ್ಟ್ರೀಯರು ತುಂಬ ಒಲವು ಉಳ್ಳವರಾಗಿದ್ದಾರೆ. ಮತ್ತು ಅವರು ಯಾವುದೆಂದು ಕಾರ್ಯ ಮಾಡುವುದಕ್ಕೆ ಬಹಳ ವಿಚಾರಿಸಿ ಮುಂದರಿಯುವವರಾಗಿದ್ದಾರೆ. ಅವರೊಳಗಿನವರೇ ಒಬ್ಬರಾದ ಶ್ರೀ. ತಾಮ್ಹಣಕರರು ಗೋದಿ ಹಿಟ್ಟಿನ ಬ್ರೆಡ್ಡನ್ನು ಬೆಣ್ಣೆ, ಹಾಲು, ಚಹಾ ಮೊದಲಾದವುಗಳ ಸಹಾಯವಿಲ್ಲದೆ ಏಕೆ ತಿನ್ನಬಾರದು? ಎಂದು ವಿಚಾರಿಸುತ್ತ ಅನೇಕ ಪ್ರಯೋಗಗಳನಂತರ ತಮ್ಮದೇ ಆದ ಇತರ ಸಾಮಗ್ರಿಗಳನ್ನು, ಅವರಲ್ಲಿ ಉಪಯೋಗದಲ್ಲಿ ಕಂಡು ಹಿಡಿದಿದ್ದಾರೆ.

ಹೀಗೆ ಸಿದ್ಧಮಾಡಿದ ಬ್ರೆಡ್ಡಿನ ಇತರ ರೂಪಗಳನ್ನು ಅವರು ಮಾಡಿ ತಮ್ಮ ಹೊಟ್ಟೆಕುಂಬಿಕೊಳ್ಳುತ್ತಿದ್ದಾರೆ. ಮತ್ತು ಈ ದಾರಿಯಿಂದ ನಿರುದ್ಯೋಗಿಗಳು ದುಡಿದು ಹೊಟ್ಟೆ ತುಂಬಿಕೊಳ್ಳಬಹುದೆಂದು ಅವರು ಪ್ರಚಾರ ಮಾಡುತ್ತಿದ್ದಾರೆ ಹೊಸ ಹೊಸ ಮೇಲಾಟಗಳನ್ನು ಸ್ಪರ್ಧೆಬಿಸಿ, ಗೃಹಿಣಿಯವರಿಗೆ ಅಲ್ಲಿ ತಮ್ಮ ಪಾಕಶಕ್ತಿಯ ಪ್ರದರ್ಶನ ಮಾಡಲು ಅವಕಾಶ ಮಾಡಿಕೊಡುತ್ತಾರೆ. ಮತ್ತು ಆದರಲ್ಲಿ ಯಶಸ್ವಿಯಾದವರಿಗೆ ಅವರು ಪಾರಿತೋಷಕಗಳನ್ನು ಕೊಡುತ್ತಾರೆ.

ಮೊನ್ನೆ ಪುಣೆಯಲ್ಲಿ ಕೂಡಿದ ಅಖಿಲ ಭಾರತ ಮಹಿಳಾಮಂಡಲದ ಪರಿಷತ್ತಿನಲ್ಲಿ ಶ್ರೀ ತಾಮ್ಹಣಕರರು ತಮ್ಮ ಪ್ರಯೋಗಗಳ ಪ್ರದರ್ಶನ ಮಾಡಿದರು 'ಬಿನಾವಿ, ಎಂಬ ಒಂದನ್ನು ವಾಸಿಕ ಪುಸ್ತಕವನ್ನು ಕೂಡ ಅವರು ಪ್ರಸಿದ್ಧ ಮಾಡುವ ವರಿದ್ದಾರೆ ಮತ್ತು ಇದೇ ಜುಲೈ ತಿಂಗಳಲ್ಲಿ ಅವರು ಮತ್ತೊಂದು ಮೇಲಾಟಕ್ಕೆ ಯಾವಳೀ ಪಟ್ಟಿಯು ಸೇರಬಹುದಾಗಿದೆ:-

ಬರಿ ಬ್ರೆಡ್ಡನ್ನು ನವಗೆ ತಿನ್ನಲಾಗುವುದಿಲ್ಲ. ಆದರ ಸಹಾಯದಿಂದ ಸಿದ್ಧ ಮಾಡಲ್ಪಟ್ಟ ಉಂಡಿ' ಅವಲಕ್ಕಿ ಮೊದಲಾದವುಗಳನ್ನು ರುಚಿಯಿಂದ ತಿಂದು ಆನಂದ ಪಡಬಹುದು. ಈ ವ್ಯವಸಾಯದಿಂದ ನಿರುದ್ಯೋಗತನವನ್ನು ನಿವಾರಿಸಿಕೊಳ್ಳಬಹುದಾಗಿದೆ. ಅಲೀಬಾಗದಲ್ಲಿ ಶ್ರೀ. ತಾಮ್ಹಣಕರರು ಈ ಉದ್ಯೋಗವನ್ನು ಪ್ರಾರಂಭಿಸಿದರು ಮತ್ತು ಎಂಟು ನಿರುದ್ಯೋಗಿಗಳನ್ನು ಹಿಡಿದು ತಮ್ಮ ವಸ್ತುಗಳನ್ನು ಮಾರಹಚ್ಚಿಸರು. ಆ ಜನರು ದಿವಸಕ್ಕೆ 2 ರೂ. ಗಳಿಸಿದರು. ಉದ್ಯೋಗ ಹುಡುಕಿಕೊಡುವ ಕಚೇರಿಗೆ ಹೋಗಿ ಕೆಲಸಕ್ಕೆ ಅರ್ಜಿ ಹಾಕುವುದಕ್ಕಿಂತ ಈ ರೀತಿ ಬುದ್ಧಿ ಓಡಿಸಿ ಕೆಲಸವನ್ನು ತಾವೆ ಹುಡಿಕಿ ಕೊಳ್ಳುವುದು ಹೆಚ್ಚು ಶ್ರೇಯಸ್ಕರವಾಗಿದೆ.

ಶ್ರೀ. ತಾಮ್ಹಣಕರರನ್ನು ಕಂಡಿದ್ದಾರೆ ಮತ್ತು ದಿನದಿನಕ್ಕೆ ಬೆಳೆಯುತ್ತಿರುವ ನಿರುದ್ಯೋಗಿಗಳು ಕೆಲಸ ದೊರಕಿಸಿಕೊಳ್ಳುವದಕ್ಕೆ ಇದರ ಹೊರತು ಬೇರೆ ಮಾರ್ಗವೇ ಇಲ್ಲ ವೆಂದು ಅವರು ಅಭಿಪ್ರಾಯ ಪಡುತ್ತಾರೆ.

ಆ ಭಾಗದ ನಿರುದ್ಯೋಗಿಗಳು ಶ್ರೀ. ತಾಮ್ಹಣಕರರನ್ನು ನಿರುದ್ಯೋಗಿಗಳ ಮಾರ್ಗದರ್ಶಕರೆಂದು ಕರೆಯುತ್ತಿದ್ದಾರೆ. ಅಸಹಾಯ ಸ್ಥಿತಿಯಲ್ಲಿರವ ಜನರಿಗೆ ಮತ್ತು ಗೃಹಿಣಿಯರಿಗೆ ಈ ದಾರಿಯಿಂದ ಸ್ಫೂರ್ತಿ ಬರುತ್ತಿದೆ. ಆದರಿಂದ ಶ್ರೀ. ತಾಮ್ಹಣಕರರಿಗೆ ಈ ವಿಷಯದಲ್ಲಿ ಸರ್ವ ಶಕ್ತಿ, ಸಹಾಯಗಳು ದೊರೆತು ಅವರಿಂದ ನಿರುದ್ಯೋಗಿಗಳಿಗೆ ಇನ್ನೂ ಹೆಚ್ಚು ಮಾರ್ಗದರ್ಶನ ದೊರೆಯುವಂತಾಗಲಿ ಎಂದು ಹಾರೈಸೋಣ.

ಬಲದಿಂದ ಶಾಂತಿ

ರಷ್ಯಾ ಜೊತೆ ಸಂಧಾನ ನಡೆಸುವ ಬಗ್ಗೆ ಟ್ರೂಮನ್

ಪಶ್ಚಿಮ ರಾಷ್ಟ್ರಗಳು ರಷ್ಯಾದೊಡನೆ ಶಾಂತಿಯುತ ಒಪ್ಪಂದಕ್ಕೆ ಬರಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಆದರೆ ಅವು ಮೊದಲು ತಮ್ಮ ಬಲವನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಿಕೊಂಡು ಅನಂತರ ಈ ರೀತಿ ಸಂಧಾನ ನಡೆಸಬೇಕೆಂದೂ, ರಷ್ಯದ ಜೊತೆಯಲ್ಲಿ ವರ್ತಿಸುವುದರಲ್ಲಿ ಅದೇ ಸರಿಯಾದ ಮಾರ್ಗವೆಂದೂ ಅಮೆರಿಕಾದ ಮಾಜಿ ಅಧ್ಯಕ್ಷರಾದ ಮಿ|| ಹ್ಯಾರಿ ಎಸ್. ಟ್ರೂಮನ್ ಈ ದಿನ ಇಲ್ಲಿ ತಿಳಿಸಿದರು.

ಕೌನ್ಸಿಲ್ ಆಫ್ ಸ್ಟೇಟ್ ಸಭಾಧಿವೇಶನ

ಸೆ. 18ರಿಂದಪಾಚಿಗೆ ಸಭೆ ವಿಸ್ತರಿಸಲ್ಪಡಬಹುದು

ಕೌನ್ಸಿಲ್ ಆಫ್ ಸ್ಟೇಟ್ ಸಭೆಯು ಸೆ. 18ರ ನಂತರ ಸಹ ಸೇರಬೇಕಾಗಿ ಬರಬಹುದೆಂಬ' ಆದರೆ ಎಷ್ಟುದಿನ ಸಭೆ ನಡೆಯುವದೆಂಬುದನ್ನು ಈಗಲೇ ಹೇಳಲು ಸಾಧ್ಯವಿಲ್ಲವೆಂದೂ ಸಭಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರವರು ಇಂದು ತಿಳಿಸಿದರು

ವಿದೇಶಾಂಗ ವ್ಯವಹಾರ ಮತ್ತು ಕಾಶ್ಮೀರದ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲು ಒಂದು ದಿನವನ್ನು ಗೊತ್ತು ಮಾಡಬೇಕೆಂದು ತಾವು ಮಹಾಪ್ರಧಾನಿ ಪಂ|| ನೆಹ್ರೂರವರಿಗೆ ತಿಳಿಸಿರುವುದಾಗಿ ಸಹ ಅವರು ಹೇಳಿದರು

—: ಬಳ್ಳಾರಿ ಪ್ರಭಾತದಲ್ಲಿ :—

12-9-53 ರಿಂದ

ಅದ್ಭುತ ಹಿಂದೀ ಚಿತ್ರ

ಪ್ರಭಾ ಕರ ಪಾ ರಿ

-: ಛತ್ರಪತಿ ಶಿವಾಜಿ :-

ತಾರಾಗಣ :- ಪೃಥ್ವಿರಾಜ್, ಜಿಂಪ್ಸಕಾಂತ, ಲಲಿತಾಪವರ್, ಜಾಗೀರ್‌ದಾರ್ ಲೀಲ, ಬಾಬೂರಾವ್ ಪೆಂಡಾರ್ಕರ್.

ನಿಜವಾದ ವಾಚ್ - ಪೆನ್
ಐದೇ ರೂಪಾಯಿಗೆ

ಅಮೆರಿಕಾ ತಯಾರಿಯ "ಮಾರ್ವಲ್" ಫೌಂಟನ್ ಪೆನ್ ಮತ್ತು ನಿಜವಾದ 10 ವರ್ಷ ಗ್ಯಾರಂಟಿಯುಳ್ಳ ಸ್ವಿಸ್‌ವಾಚ್ ಇವೆರಡನ್ನು ನಮ್ಮ ಉದ್ಯೋಗಾಭಿವೃದ್ಧಿಗಾಗಿ 5/- ಐದೇ ರೂ, ಗಳಲ್ಲಿ ಕೊಡುತ್ತೇವೆ ಇದಕ್ಕೆ 1-2-0 ಪಾರ್ಸಲ್ ಖರ್ಚು – ನಾವು ಹೇಳಿದ್ದಕ್ಕೆ ವಿರೋಧವಿದ್ದಲ್ಲಿ ಹಣ ಹಿಂದಕ್ಕೆ ಕೊಡಲಾಗುತ್ತದೆ.

LONDON TRADING AGENCY.
(N B·B) JULLUNDER CITY

Coming at "PRABHAT"
Watch for the Date
Warner Bros Astounding Feature in natural vision.
3 Dimension
★ HOUSE OF WAX ★
COLOR BY WARNER COLOR

(೧ ನೇ ಪುಟದಿಂದ)

ರಾಷ್ಟ್ರಪತಿಯೊಡನೆ ಸಮಾಲೋಚನೆ ನಡೆಸಿ ಅವರ ನಿರ್ಧಾರಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕಾಗುವುದೆಂದೂ ತತ್ಫಲವಾಗಿ ಕೇಂದ್ರಸರ್ಕಾರ ಆಗಿಂದಾಗ್ಗೆ ಪ್ರಾಂತವ್ಯವಹಾರದಲ್ಲಿ ಕೈಹಾಕಬೇಕಾಗುವುದೆಂದು, ಗವರ್ನರರು ಈ ರೀತಿ ಮಧ್ಯೆ ಪ್ರವೇಶಿಸಬೇಕಾದರೆ ಮಂತ್ರಿ ಮಂಡಲದ ಮೂಲಕ ಆಡಳಿತನಡೆಸಲು ಅವರಿಗೆ ಅಸಾಧ್ಯವಾಗುವುದೆಂದೂ ತಿಳಿಸಿದರು.

ಜಸ್ಟಿಸ್ ವಿಶ್ವಾಸರವರ ವರದಿಯ ಆಧಾರದ ಮೇಲೆ ಬಳ್ಳಾರಿಯ ವಿಚಾರವಾಗಿ ಕೇಂದ್ರ ಸರ್ಕಾರ ನಿರ್ಧಾರಕ್ಕೆ ಬಂದಿತೆಂದೂ ಅವರು ತಿಳಿಸಿದರು.

ತುಂಗಭದ್ರಾ ಯೋಜನೆಯ ಕಾರ್ಯ ಶಕ್ತಿಯಾಗಿ ನಿರ್ವಹಿಸಲ್ಪಡುವಂತೆ ಕೇಂದ್ರ ಸರ್ಕಾರ ನೋಡಿಕೊಳ್ಳುವುದಾಗಿ ಅವರು ತಿಳಿಸಿದರು.

ಆಂಧ್ರ ಪ್ರಾಂತದಲ್ಲಿ ಶುಭದ್ರವಾದ ಸರ್ಕಾರ ವಿರ್ಪಡಲೆಂದೂ ಅದು ಆದರ್ಶ ಪ್ರಾಂತವಾಗಲೆಂದೂ ತನ್ಮೂಲಕ ಭಾಷಾ ಪ್ರಾಂತಗಳ ರಚನೆಗಾಗಿ ನಡೆಯುತ್ತಿರುವ ಚಳವಳಿಗೆ ಬೆಂಬಲ ದೊರಕಲೆಂದೂ ಡಾ|| ಕಟ್ಜು ಹಾರೈಸಿದರು.

ಕಲೆಕ್ಟರಿಗೆ ಹೊಸ ಪುಷ್ಪ

ಈ ವರೆಗೆ ಬಳ್ಳಾರಿ ಜಿಲ್ಲಾ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದ ಶ್ರೀ. ಡಿ. ಆರ್ ಸುಂದರಂರವರಿಗೆ ಆಂಧ್ರಪ್ರಾಂತ ಗವರ್ನರ ಅಸಿಸ್ಟೆಂಟ್ ರಾಗಿ ಕೆಲಸ ಮಾಡಲು ನೇಮಕವಾಗಿದೆ. ಅವರು ಇಲ್ಲಿಯ ತಮ್ಮ ಕೆಲಸ ಕಾರ್ಯಗಳನ್ನು ತಮ ಪರ್ಸನಲ್ ಅಸಿಸ್ಟೆಂಟ್ ರವರಿಗೆ ವಹಿಸಿ ಸೆ. ೨ರಂದು ಮದ್ರಾಸಿಗೆ ತೆರಳಿದರು.

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ
(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
6 ತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.	Subscription will not be accepted for less than 6 months

To 14-9-53

Sri. _____

Edited Printed & Published by T. B. Keshava Rao, at Nava Bharat Press, Bellary.

Edited Printed & Published by T. B. Keshava Rao, at Nava Bharat Press, Bellary.

ನಾಗರಿಕ

ಸೋಮವಾರ
ಸೆಪ್ಟೆಂಬರ್
೨೯, ೧೯೫೩

ವರ್ಷ 16 ಸಂಚಿಕೆ 24

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕರು:
ಟಿ. ಬಿ. ಕೇಶವರಾವು

ಬಳ್ಳಾರಿ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

O. P 42/53

ಅರ್ಜಿದಾರ :–

ದೇವನೂರು ಸದಾಶಿವರೆಡ್ಡಿ, ತಂದೆ ದೇವನೂರು ಗಿರೆಪ್ಪ ರೆಡ್ಡಿಯವರ ರಾಮಿರೆಡ್ಡಿ.

Public - Notice

ಅರ್ಜಿದಾರನಾದ ದೇವನೂರು ಸದಾಶಿವರೆಡ್ಡಿಯು ತನ್ನ ಅವಿಭಕ್ತ ತಂದೆ ದೇವನೂರು ಗಿರೆಪ್ಪರೆಡ್ಡಿಯವರ ರಾಮಿರೆಡ್ಡಿಯು 2-9-1952 ರಲ್ಲಿ ತೀರಿ ಕೊಂಡ ಕಾರಣ, ಅವರ ನಂತರ ಅವರ ಕುಟುಂಬದ ಯಜಮಾನನಾಗಿ ವ್ಯವಹರಿಸುತ್ತಿರುವದರಿಂದ ಸದರಿ ಲೇಟ್ ಗಿರೆಪ್ಪರೆಡ್ಡಿಯವರ ರಾಮಿರೆಡ್ಡಿಗೆ ಬರಬೇಕಾದ ಈ ಕೆಳಗೆ ಕಂಡ ಬಾಕಿ ಹಣವನ್ನು ವಸೂಲಿ ಮಾಡಿಕೆ ಳ್ಳಲು – ಮೇಲ್ಕಾಣಿಸಿದ ಸದಾಶಿವರೆಡ್ಡಿಯು ತನಗೆ ವಾರಸು ಸರ್ಟಿಫಿಕೇಟನ್ನು ದಯಪಾಲಿಸ ಬೇಕೆಂದು ಮೇಲ್ಕಂಡ ಅರ್ಜಿ ದಾಖಲು ಮಾಡಿದ್ದಾನೆ ತಕರಾರಿದ್ದವರ್ಯಾರೇ ಆಗಲಿ 10-10-1953 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಲಿ, ವಕೀಲರ ಮೂಲಕ ವಾಗಿಯಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ತಿಳಿಸತಕ್ಕದ್ದೆಂದು ಈ ಪ್ರಕಟಣೆಯ ಮೂಲಕ ಸಕಲರಿಗೂ ತಿಳಿಸಲಾಗಿದೆ.

ಎ ಅ ಸ ಮಿ :–

MANAGER
Imperial Chemical Industries Ltd, [India]
Post Box No 130, Spring Haven Road
(South) Harbour, MADRAS.

ಮ್ಯಾನೇಜರ್-ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಲಿಮಿಟೆಡ್
ಪೋಸ್ಟ್ ಬಾಕ್ಸ್ 130 (ಇಂಡಿಯಾ)
ಸ್ಪ್ರಿಂಗ್ ಹೆವೆ ರೋಡು ದಕ್ಷಿಣ ಹಾರ್ಬರ್ ಮದ್ರಾಸ್

ಬರಬೇಕಾದ ಸಾಲ

Principal Amount ಅಸಲು ಮೊತ್ತ	—	3125-10-0
Interest from 13-3-52 to 13-8-52 ಬಡ್ಡಿ 13 3-52 ರಿಂದ 13-8-52 ರವರಿಗೆ ಶೇಕಡ 6-8-0 ಯಂತೆ		74-6-0
Total		3200-0-0

ಬಿ. ಕಲ್ಲೂರಾವ್
ಅರ್ಜಿದಾರರ-ಅಡ್ವೊಕೇಟ್

ಸರ್ಕಾರಕ್ಕೆ ಬೇಕಾಗಿರುವುದು ಹಣ! ಭವನಗಳಲ್ಲ!

ಎಸ್ಟೇಟ್ ಡ್ಯೂಟಿ ಬಿಲ್ಲಿನಂತೆ ವಿಧಿಸ ಬಹುದಾದ ತೆರಿಗೆಯನ್ನು ಹಣವರೂಪಕ್ಕೆ ಬದಲಾಗಿ ಆಸ್ತಿ ಇಲ್ಲವೇ ಕಂಪನಿಗಳ ಷೇರಿನ ಮೂಲಕ ಸಲ್ಲಿಸಬಹುದೆಂಬ ತಿದ್ದುಪಡಿಯನ್ನು ಲೋಕಸಭೆಯು ತಿರಸ್ಕರಿಸಿತು.

ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಮಾಡಲು ನನಗೆ ಬೇಕಾದುದು ಹಣವೆಂದೂ, ಭವನ ಇಲ್ಲವೆ ಸೌಕರ್ಯಗಳ ಅವಶ್ಯಕತೆ, ಸರಕಾರಕ್ಕೆ ಬೇಕಿಲ್ಲವೆಂದೂ ಕೇಂದ್ರ ಆರ್ಥಿಕ ಮಂತ್ರಿ ಶ್ರೀದೇಶ್‌ಮುಖ್‌ರು ತಿದ್ದುಪಡಿಯನ್ನು ವಿರೋಧಿಸುತ್ತಾ ಮಾತನಾಡಿದರು.

ಪಶ್ಚಿಮ ಬಂಗಾಳ ವ್ಯವಸಾಯ ಕಾಲೇಜಿಗೆ ವ್ಯವಸಾಯ ಶಿಕ್ಷಣಕ್ಕೆ ಮಹಿಳೆಯರೂ ಸೇರಿದ್ದಾರೆ

ಪಶ್ಚಿಮ ಬಂಗಾಳದಲ್ಲಿರುವ ಸರಕಾರದ ವ್ಯವಸಾಯದ ಕಾಲೇಜಿಗೆ ಇಂಟರ್ ಮೀಡಿಯೇಟ್ ಸೈನ್ಸ್ ಪಾಸುಮಾಡಿದ ಕೆಲವು ವಿದ್ಯಾರ್ಥಿನಿಯರನ್ನು ಈ ವರ್ಷ ಸೇರಿಸಿಕೊಳ್ಳಲಾಗಿದೆ 1951ರಲ್ಲಿ ಈ ಕಾಲೇಜು ಸ್ಥಾಪನೆ ಆದ ನಂತರ ಮಹಿಳೆಯರನ್ನು ಈ ಕಾಲೇಜಿಗೆ ಸೇರಿಸಿಕೊಳ್ಳುವುದು ಇದೇ ಮೊದಲು. ಈ ವರ್ಷ ಈ ಕಾಲೇಜಿಗೆ 600 ಮಂದಿ ಯುವಕರು ಶಿಕ್ಷಣಕ್ಕಾಗಿ ಪ್ರವೇಶ ಕೋರಿದರು 40 ಜನ ವಿದ್ಯಾರ್ಥಿಗಳಿಗೆ ಮಾತ್ರ ಸೀಟುಗಳು ದೊರೆತವು. ಸೆಕೆಂಡರಿ ಮತ್ತು ಸ್ಥಾಪಿತ ಕೃಷಿ ಸ್ಕೂಲುಗಳ ಉಪಾಧ್ಯಾಯರುಗಳು ಸಹಾ ವ್ಯವಸಾಯ ಶಿಕ್ಷಣಕ್ಕೆ ಆತುರರಾಗಿದ್ದಾರೆ.

ಆರೋಗ್ಯದ ಮೂಲ

"ಮನುಷ್ಯನು ಆರೋಗ್ಯವಂತನಾಗಲು ಏನು ಮಾಡಬೇಕು? ಎಂಬ ಬಗ್ಗೆ ಇದುವರೆಗೆ ಅನೇಕರು ಅನೇಕ ರೀತಿಯಿಂದ ಶೋಧಮಾಡಿ ವಿವಿಧ ಉಪಾಯಗಳನ್ನು ಸೂಚಿಸಿದ್ದಾರೆ. ಈಗ ನಾವು ಆರೋಗ್ಯ ತಜ್ಞರನ್ನು ಕೇಳಿದರೆ, ಚಲೋ ಆಹಾರ ತೆಗೆದುಕೊಳ್ಳಬೇಕು, ಸುಂಕು ರೋಗಗಳಿಂದ ದೂರ ಇರಬೇಕು. ಅಪಾಯಕಾರಕ ವ್ಯಸನಗಳಿಗೆ ಬಲಿ ಬೀಳಬಾರದು ಇದೇ ಮುಂತಾಗಿ ಹೇಳುತ್ತಾರೆ.

ಆದರೆ ನಮ್ಮ ಪೂರ್ವಜರು ಈ ವಿಷಯವಲ್ಲಿ ಮಾಡಿದ ವಿಚಾರವೇ ಬೇರೆಯಾಗಿದೆ. ಅವರು ಇವೆಲ್ಲ ಬಾಹ್ಯವಿಚಾರಗಳಿಗೆ ಮಹತ್ವವನ್ನೇ ಕೊಟ್ಟಿಲ್ಲ. ಮನಸ್ಸೆ ಎಲ್ಲ ಆಗುಹೋಗುಗಳಿಗೆ ಮುಖ್ಯ ಕಾರಣವೆಂಬುದನ್ನು ಕಂಡುಹಿಡಿದು "ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋ:" ಎಂದು ಹೇಳಿದರು ಈ ಮಾತಿನ ಮರ್ಮವನ್ನು ಅವರು ಬಹು ಜೋಕೆಸ್ಪದವಾಗಿ ತಿಳಿಸಿದ್ದಾರೆ. ಮನುಷ್ಯನು ಸಿಟ್ಟುಗೆದ್ದರೆ ಅವನ ರಕ್ತವು ಕುದಿಯು ಹತ್ತುವುದು. ಆದರಿಂದ ಅದರಲ್ಲಿ ವಿಷ ಉತ್ಪನ್ನವಾಗುವುದು. ದ್ವೇಷ ಅಸೂಯೆ ಮತ್ತು ಆಪೆಗಳು ಅವನ ಆರೋಗ್ಯದ ಮೇಲೆ ಪರಿಣಾಮ ಮಾಡುವವು.

ಯಾವುದೊಂದು ಮಃಖದಾಯಕವಾದ ವಾರ್ತೆಯನ್ನು ಕೇಳಿದರೆ ಇಲ್ಲವೆ ಅಂತಹ ದೃಶ್ಯವನ್ನು ನೋಡಿದರೆ ನಮ್ಮ ಮೋರೆಯು ಬೆಳ್ಳಗಾಗುತ್ತದೆ. ಆಗ ಆ ಪರಿಣಾಮದಿಂದ ನಮ್ಮ ರಕ್ತದೊಳಗಿನ ಕೆಂಪು ಅಣುಗಳು ದೊಡ್ಡ ಸಂಖ್ಯೆಯಲ್ಲಿ ನಾಶ ಹೊಂದುವುದರಿಂದ ಆ ಬಣ್ಣ ಬರುವುದು ತೀರ ಅಸ್ವಸ್ಥತೆ ಉಂಟಾದಾಗ ಕೂಡ ಮನುಷ್ಯನಿಗೆ ಆನಂದದಾಯಕ ಸುದ್ದಿ ತಿಳಿದರೆ ಅವನು ಒಳ್ಳೇ ಹುರುಪಿನಿಂದ ಕುಣಿಯ ಹತ್ತುವನು.

ಇದರಿಂದ ಸ್ವಸ್ಥತೆ ಅಸ್ವಸ್ಥತೆಗಳು ಮನಸ್ಸಿನ ಸ್ಥಿತಿಯ ಮೇಲೆ ಅವಲಂಬಿಸಿವೆ ಎಂಬುದು ಸಿದ್ಧವಾಗುವುದು. ಮನಸ್ಸು ಸ್ವಸ್ಥವಿದ್ದರೆ ನಮ್ಮ ಪ್ರಕೃತಿಯು ಸಪ್ಪಡವಿರುವುದು. ಇಲ್ಲದಿದ್ದರೆ ಅದು ಕೆಡಹತ್ತುವುದು ದುರ್ಬಲ ಮನಸ್ಸಿನ ಮೂಲಕ ಉಂಟಾಗುವ ಪರಿಸ್ಥಿತಿಯಲ್ಲಿಯೇ ಹೊರಗಿನ ರೋಗ ಜಂತುಗಳು ನಮ್ಮ ಮೇಲೆ ಪರಿಣಾಮ ಮಾಡುವವು. ಸುಬೃಡ ಶರೀರದಲ್ಲಿ ಅವು ಬದುಕುವುದು ಕೂಡ ಸಾಧ್ಯವಿಲ್ಲ.

ನಮ್ಮ ಪೂರ್ವಜರು ಈ ಕಾರಣಕ್ಕಾಗಿಯೇ ಮನಸ್ಸಿನ ಸುಸ್ಥಿತಿಯ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟರು. ದೇವರ ಪೂಜೆ ಭಜನೆ, ಕೀರ್ತನೆ, ಮಂತ್ರಪಠನ ಮೊದಲಾದ ಸಾಧನಗಳಿಂದ ಮನುಷ್ಯನು ಆನಂದವಲ್ಲಿರಬೇಕೆಂದು ಅವರು ಯತ್ನಿಸಿದರು ಮಡಿ ಮೈಲಿಗೆಗಳ ಕಲ್ಪನೆ ಕೊಟ್ಟು ಶುದ್ಧ ಆಹಾರ, ವಿಚಾರ, ಬಟ್ಟೆಗಳು ಮನುಷ್ಯನಿಗೆ ದೊರಕಬೇಕೆಂದು ದುಡಿದರು ಅಷ್ಟೇ ಏಕೆ? ಸಂತತಿಯು ಒಳ್ಳೆಯದು ಹುಟ್ಟಬೇಕೆಂಬ ಬಗ್ಗೆ ಕೂಡ ಅವರ ದೃಷ್ಟಿಯಿತ್ತು. ಒಳ್ಳೇ ಮನಸ್ಸಿನ ತಂದೆ ತಾಯಿಗಳಿಂದ ಮಾತ್ರ ಒಳ್ಳೆಯಕ್ಕಳು ಹುಟ್ಟುವುದು ಸಾಧ್ಯ ಎಂಬುದನ್ನು. ಅವರು ಕಂಡು ಹಿಡಿದರು ಅದರಿಂದ ಮನುಷ್ಯನ ಮನಸ್ಸನ್ನು ತಿದ್ದಲು ಅವರು ಯಾವಾಗಲೂ ಯತ್ನಿಸಿದರು.

ಔಷಧಗಳ ಅವಶ್ಯಕತೆ ಮತ್ತು ಪರಿಣಾಮವೂ ಅವರಿಗೆ ಗೊತ್ತಿತ್ತು. ಆದರೆ ಅದಕ್ಕೆ ಅವರು ಎರಡನೆ ಸ್ಥಾನವನ್ನು ಕೊಟ್ಟಿದ್ದರು. ಔಷಧಗಳ ಪರಿಣಾಮವು ತಾತ್ಪೂರ್ತಿಕವಾಗುವುದೆಂದೂ ನಿಜವಾದ ಆರೋಗ್ಯವು ದೊರೆಯಲು ಮನಸ್ಸು ಆರೋಗ್ಯವಂತವಾಗಿರದಿದ್ದರೆ ಔಷಧಗಳ ಪ್ರಯೋಜನವು ದೊರೆಯಲಾರದೆಂದೂ ಅವರು ದೃಢವಾಗಿ ನಂಬಿದ್ದರು.

ಸಿಲೋನ್ ಪ್ರಧಾನಿಗೆ ಪಂ॥ ನೆಹ್ರೂ ಆಹ್ವಾನ

ಇಂಡಿಯಾ ಪ್ರಧಾನರಾದ ಪಂಡಿತ್ ನೆಹ್ರೂರವರು, ಸಿಲೋನಿನ ಪ್ರಧಾನಂತಾದ ಶ್ರೀ ಸೇನಾನಾಯಕೆ ಅವರಿಗೆ ಉಭಯ ರಾಷ್ಟ್ರಗಳ ಬಗ್ಗೆ ಮಾತುಕತೆ ನಡೆಸಲು ಬಹಳ ಜಾಗ್ರತೆಯಾಗಿ ದೆಹಲಿಗೆ ಬರುವಂತೆ ಕರೆ ಇತ್ತಿರುವುದಾಗಿ ಕೊಲಂಬೊ ಅಧಿಕಾರ ವಲಯಗಳಿಂದ ತಿಳಿದಬಂದಿದೆ.

ಈ ವರ್ಷ ಲಂಡನ್ನಿನಲ್ಲಿ ನಡೆಸಿದ ಚರ್ಚೆಯಲ್ಲಿ ನಿಶ್ಚಯವಿಷಯಗಳನ್ನು ಮುಂದಿನ ಚರ್ಚೆಯಲ್ಲಿ ಮುಂದುವರಿಸಲಾಗುವುದೆಂದು ತಿಳಿದುಬಂದಿದೆ.

ಸಿಲೋನಿನ ಪ್ರಧಾನರು, ನೆಹರೂರವರನ್ನು ಭೇಟಿಮಾಡಲು ತಯಾರಿದ್ದುದಾಗಿ, ಪತ್ರಿಕೆಗಳು ಪದೇಪದೇ ಒತ್ತಾಯ ಪಡಿಸಿದ್ದುದರಿಂದ, ನೆಹರೂರವರು ಆಹ್ವಾನಿಸಲು ಕಾರಣವಾಯಿತು

ಸಿಲೋನಿನ ಪ್ರಧಾನರೇ ತಮಗೆ ಅನುಕೂಲವಾದಾಗ ಭೇಟಿಯ ಕಾರ್ಯವನ್ನು ನಿರ್ಧರಿಸಬಹುದೆಂದು ನೆಹರೂರವರು ತಮ್ಮ ಪತ್ರದಲ್ಲಿ ಸೂಚಿಸಿರುವುದಾಗಿ ತಿಳಿದುಬಂದಿದೆ.

ರಾಷ್ಟ್ರಪತಿ ಭಿಕ್ಷೆಗೆ
ಆಂಧ್ರರಾಜ್ಯ ನಿರ್ಮಾಣ ಮಸೂದೆಗೆ

ಆಂಧ್ರರಾಜ್ಯ ನಿರ್ಮಾಣ ಮಸೂದೆಗೆ ರಾಷ್ಟ್ರಪತಿ ರಾಜೇಂದ್ರಪ್ರಸಾದರು ತಮ್ಮ ಒಪ್ಪಿಗೆ ಕೊಟ್ಟಿದ್ದಾರೆ.

ಬಳ್ಳಾರಿ ಜಿಲ್ಲಾ-ಮುನ್ಸಿಫರ ಕೋರ್ಟಿನಲ್ಲಿ

S. C. 38/53, E. P. 224/53

ಹರೆಗಣಡೋಣ ಬಸವನಗೌಡ್ ಅಂಡ್ ಸನ್ಸ್ BY H. ಸಣ್ಣ ಬಸವನಗೌಡ್, ಮುಜೀಂಟ್, ಬಳ್ಳಾರಿ. .... ವಾದಿ

ಸೊಲ್ಲೇಟಿ ಸೋಮಯ್ಯ, ಸೋಲ್ ಪ್ರೊಪ್ರಾಯಿಟರ್ ಆನ್ ರಾಧಾ ಕೃಷ್ಣ ಅಂಡ್ ಕಂಪನಿ ಬಳ್ಳಾರಿ. ಪ್ರತಿವಾದಿ

.... ಚರಾಸ್ತಿ ಜಪ್ತಿ ನೋಟೀಸ್ ....

ಈ ಮೂಲಕ ಪ್ರತಿವಾದಿಗೆ ತಿಳಿಸುವುದೇನಂದರೆ :- ಸೇಲ್ಯಾಗೆ ಸಿದ ನಂಬರ್ ವಾಯ್ದೆ 25-9-53 ಕ್ಕೆ ಮುಕಲುಗಿವೆ. ನಿಮಗೇನಾದರೂ ತಕರಾರು ಇದ್ದರೆ ಅಂದು ಖುದ್ದಾಗಲಿ ವಕೀಲರ ಮೂಲಕವಾಗಲಿ ಸದರಿ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸತಕ್ಕದ್ದು. ಇಲ್ಲದಿದ್ದರೆ ಎಕ್ಸ್ ಪಾರ್ಟೆ ಕ್ರಮವು ಮುಂದೆ ನಡೆಯುವುದು.

ಎಂ. ವಿ. ಚಿಟ್ಟಿ
ವಾದಿ – ಅಡ್ವೊಕೇಟ್

ಸಾಮಾಜಿಕ ಶಿಕ್ಷಣ ಅಭ್ಯಾಸ

ಸ್ವಾತಂತ್ರ್ಯದನಂತರ ಶಾಲಾ ಕಾಲೇಜುಗಳ ಮೇಲೆ ಹೊಸ ಜವಾಬ್ದಾರಿ ಬಿದ್ದಿದೆ. ವಿದ್ಯಾರ್ಥಿ ವೃಂದದಲ್ಲಿ ಹೊಸ ಮನೋಭಾವ ಮತ್ತು ಜ್ಞಾನದ ಅವಶ್ಯಕತೆ ಇಂದು ಹೆಚ್ಚಾಗಿದೆ ನವಭಾರತದ ಆದರ್ಶ ಪ್ರಜೆಗಳಾಗಲು ಇಂದು ನಮ್ಮ ಮಕ್ಕಳನ್ನು ಹೊಸ ರೀತಿಯಲ್ಲಿ ತರಬೇತು ಮಾಡಬೇಕಾಗಿದೆ ಇಂದಿನ ವಿದ್ಯಾಭ್ಯಾಸ ವಿದ್ಯಾರ್ಥಿಯ ಮನಸ್ಸನ್ನು ತನ್ನ ಮನೆ, ಸಮಾಜ ಮತ್ತು ದೇಶದ ಸಮಸ್ಯೆಗಳ ಕಡೆಗೆ ಮನವೆಳೆಯುವಂತೆ ಮಾಡಲು ಅಸಮರ್ಥವಾಗಿದೆ. ಹಾಗಿದ್ದ ಪಕ್ಷದಲ್ಲಿ ಶಿಕ್ಷಕರುಗಳು ಈ ನೂನತೆಗಳನ್ನು ಸರಿಪಡಿಸಿ, ಯಾವ ರೀತಿ ವಿದ್ಯಾರ್ಥಿಗಳನ್ನು ಒಳ್ಳೆಯ ಪ್ರಜೆಗಳನ್ನಾಗಿ ತಯಾರು ಮಾಡಬಹುದು ಎಂಬುದನ್ನು ಯೋಚಿಸೋಣ.

ಮನೆಗೊಸ್ಕರ ವಿದ್ಯಾಭ್ಯಾಸ

ಇಂದಿನ ಅಪ್ರಾಸಂಗಿಕ ಆಧುನಿಕ ವಿದ್ಯಾಭ್ಯಾಸವನ್ನು ಸರಿಪಡಿಸಬೇಕಾದರೆ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ತಂದೆ, ತಾಯಿ, ಸಹೋದರ, ಸಹೋದರಿಯರ ಕಡೆ ತನ್ನ ಕರ್ತವ್ಯ ಮತ್ತು ಜವಾಬ್ದಾರಿ ಎಷ್ಟಿದೆ ಎಂಬುದನ್ನು ತಿಳಿಯುವಂತೆ ಮಾಡಬೇಕು ಸಮಾಜದ ಮೊದಲನೆ ಅಂಗವಾದ ತನ್ನ ಮನೆಯೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಸಂಬಂಧ ಪಡೆಸ್ಕೊಳ್ಳಬೇಕಾಗಿದೆ. ಮನೆಯಲ್ಲಿರುವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಶಾಲೆಯಲ್ಲಿ ಕಲಿಯದಿದ್ದರೆ ತನ್ನ ಮನೆಯ ಒಬ್ಬ ಉತ್ತಮ ಸದಸ್ಯನಾಗಲು ಶಾಲಾ ಶಿಕ್ಷಣ ಸಹಾಯವಾಗಿದ್ದರೆ ಸ್ವಲ್ಪ ಮನೆಯ ತನ್ನ ವಿದ್ಯಾಭ್ಯಾಸಕ್ಕೆ ಮತ್ತು ಹಿತಚಿಂತನೆಗೆ ಅತ್ಯಂತ ಸಾಧಕವಾದುದು ಎಂಬುದನ್ನು ಅರಿಯಲು ಒಬ್ಬ ವಿದ್ಯಾರ್ಥಿಯು ಅಸಮರ್ಥನಾದರೆ ಅಂತಹ ವಿದ್ಯಾಭ್ಯಾಸದಿಂದ ಏನು ತಾನೆ ಪ್ರಯೋಜನ?

ಪ್ರತಿಯೊಬ್ಬರೂ ಜೀವಿತದ ಬಹುಕಾಲವನ್ನು ತಮ್ಮ ಮನೆಯಲ್ಲೇ ಕಳೆಯುವುದರಿಂದ ವಿದ್ಯಾರ್ಥಿ ದೆಸೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಮನೆಯ ಕಡೆ ತನ್ನ ಕರ್ತವ್ಯ ಜವಾಬ್ದಾರಿಯನ್ನು ಅರಿಯಬೇಕು.

ವಿದ್ಯಾರ್ಥಿನಿಯರ ಶಿಕ್ಷಣ

ಪ್ರತಿಯೊಬ್ಬ ವಿದ್ಯಾರ್ಥಿನಿಯು ವಿದ್ಯಾಭ್ಯಾಸದಲ್ಲಿ ಗೃಹ ವಿಜ್ಞಾನ ಮತ್ತು ಗೃಹ ಶಿಕ್ಷಣ ಕಡೆ ಹೆಚ್ಚಾಗಿ ಗಮನ ಕೊಡುವಂತಿರಬೇಕು ಇಂತಹ ಶಿಕ್ಷಣದಿಂದ ವಿದ್ಯಾರ್ಥಿನಿಗೆ ಒಳ್ಳೆಯ ಮನೆಯಲ್ಲಿರುವ ಇತರರಿಗೂ ಬಹಳ ಪ್ರಯೋಜನವಿದೆ. ಬಹಳ ಮುಂದಿ ವಿದ್ಯಾರ್ಥಿನಿಯರಿಗೆ ಮನೆಯ ಕೆಲಸ ತಮ್ಮ ಜೀವನದ ಒಂದು ಉದ್ಯೋಗವಾಗಿದೆ ಆದುದರಿಂದ ಪ್ರೌಢ ಶಾಲೆಯ ಶಿಕ್ಷಣ ವಿದ್ಯಾರ್ಥಿನಿಯರನ್ನು ಒಳ್ಳೆಯ ಗೃಹಿಣಿಯರನ್ನಾಗಿ ಮಾಡಲು ಸಹಕಾರಿಯಾಗಿದೆ.

ಈ ಕಾರಣದಲ್ಲೇ ತಮ್ಮ ಜೀವನದ ಧ್ಯೇಯ ಜವಾಬ್ದಾರಿ ಮತ್ತು ಕರ್ತವ್ಯವನ್ನು ಅರಿಯಲು ವಿದ್ಯಾರ್ಥಿನಿಯರು ಸರ್ವಥಾ ಅರ್ಹರಾಗುತ್ತಾರೆ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಒಂದೇ ರೀತಿಯ ವಿಷಯ ಭ್ಯಾಸವನ್ನು ಕೊಡಲು ಸಾಧ್ಯವಿಲ್ಲವಾದರೂ, ವಿದ್ಯಾರ್ಥಿನಿಯರು ಜೀವನದಲ್ಲಿ ತಮ್ಮ ಸ್ಥಾನವನ್ನು ಅರಿಯುವಂತೆ ಮಾಡುವ ಶಿಕ್ಷಣವನ್ನು ಕೊಡಬೇಕಾದುದು ಅತ್ಯವಶ್ಯಕ

ವಿದ್ಯಾರ್ಥಿಗಳಿಗೂ ಸಹ ತಮ್ಮ ಮನೆಗಾಗಿ ಸೃಷ್ಟಿಯಿಂದ ಪಡೆಯುವಂತೆ ಮಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕು. ಒಳ್ಳೆಯ ಆಹಾರದ ಅವಶ್ಯಕತೆ, ಆರೋಗ್ಯ ಮತ್ತು ನೈರ್ಮಲ್ಯ, ಮನೆಯ ಆದಾಯ, ವೆಚ್ಚದ ಸಿಗದಿ ಮತ್ತು ಒಳ್ಳೆಯ ನಡತೆ ಈ ವಿಷಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೂ ಶಾಲೆ ಬಿಡುವ ಮುನ್ನ ಶಿಕ್ಷಣ ಕೊಡಬೇಕು. ಇಪ್ಪರಿಂದ ಶಾಲೆಯ ಮಹತ್ವ ಪ್ರತಿಯೊಬ್ಬ ತಂದೆ ತಾಯಿಗೂ ತಿಳಿಯುವುದರಲ್ಲಿ ಸಂದೇಹವಿಲ್ಲ ವಿದ್ಯಾಭ್ಯಾಸವು ಮನೆಯಿಂದ ಪ್ರಾರಂಭವಾಗಿ, ಮನೆಯಲ್ಲೇ ಮುಗಿಯುವುದು. ಏಕೆಂದರೆ ಮನೆಯ ನಂಬೆರ ಪ್ರತಿಯೊಬ್ಬ ವಿದ್ಯಾರ್ಥಿಯೂ, ತನ್ನ ತಳ್ಳಿ ಜನತೆ ಮತ್ತು ಪಟ್ಟಣಗಳ ಕಡೆ ತನ್ನ ದೃಷ್ಟಿ ಬೀರಬೇಕು.

ಪ್ರಜಾಧರ್ಮದ ಶಿಕ್ಷಣ

ಆರೋಗ್ಯ ಶಿಕ್ಷಣವೆಂದರೆ ಶಾರೀರಕ ಶಿಕ್ಷಣಕ್ಕಿಂತ ಯಾವ ರೀತಿ ಹೆಚ್ಚಾದುದೋ ಅದೇ ರೀತಿ ಪೌಢಶಿಕ್ಷಣದಲ್ಲಿ ಪ್ರಜಾಧರ್ಮ ಎಂದರೆ ಕೇವಲ ಪೌರನೀತಿಯಷ್ಟೇ ಅಲ್ಲ ಪಾಶ್ಚಾತ್ಯ ರಾಷ್ಟ್ರಗಳ ಶಾಲೆಗಳಂತೆ ನಮ್ಮ ದೇಶದ ಶಾಲೆಗಳು ವಿದ್ಯಾರ್ಥಿಗಳನ್ನು

Bellary District Board

Jeep-Public Auction

The District Board Jeep Car BYZ 1810 will be sold in public auction on 25-9-53 at 11 A. M, in the premises of the District Board Office Bellary. Intending bidders should deposit Rs 500/- before sale is conducted The deposit of unsuccessful bidders will be refunded after the sale. Further particulars can be had by enclosing a stamped and addressed envelope.

Dt Board Office Bellary | C. SURYA RAO
Date. 8 9 53. | Special Officer

ಬಳ್ಳಾರಿ ಡಿಸ್ಟ್ರಿಕ್ಟ್ ಬೋರ್ಡ್
-: ಜೀಪ್‌ನ ಬಹಿರಂಗ ಯಾಲಂ :-

ಬಳ್ಳಾರಿ ಜಿಲ್ಲಾ ಬೋರ್ಡು ಕಛೇರಿಯ ಆವರಣದಲ್ಲಿ 25-9-53 ಫ್ರಾ. 11 ಗಂಟೆಗೆ BYZ 1810 ನಂಬರಿನ ಜಿಲ್ಲಾ ಬೋರ್ಡು ಜೀಪ್ ಕಾರ್ ಯಾಲಂ ಹಾಕಲ್ಪಡುವುದು. ಫರ್ದೆಯಲ್ಲಿ ಭಾಗವಹಿಸಲು ಇಚ್ಛಿಸುವವರು ವಿಕ್ರಯದ ಪೂರ್ವ 500/- ರೂ ಡಿಪಾಜಿಟ್ ಕಟ್ಟಬೇಕು. ಕೊಳ್ಳದಿರುವ ಫರ್ದೆದಾರರ ಡಿಪಾಜಿಟ್ ಹಣವು ವಿಕ್ರಯಾನಂತರ ವಾಪಸು ಕೊಡಲ್ಪಡುವುದು. ಸ್ವಾಂಪು ಹಚ್ಚಿ ಮಿಕಾಸ ಬರೆದ ಕವರು ಕಳುಹಿಸಿದಲ್ಲಿ ಇತರ ವಿವರಗಳನ್ನು ತಿಳಿಸಲಾಗುವುದು.

ಜಿಲ್ಲಾ ಬೋರ್ಡು ಆಫೀಸು ಬಳ್ಳಾರಿ — ಶಿ. ಸೂರ್ಯರಾವ್.
8-9-1953 — ಸ್ಪೆಶಲ್ ಆಫೀಸರ್

—: ಬಳ್ಳಾರಿ ಪ್ರಭಾತದಲ್ಲಿ :—

19-9-53 ರಿಂದ

ಗೀತಾಬಾಲಿ, ಶೇಖರ ನಟಿಸಿದ ಅದ್ಭುತ ಹಿಂದೀ ಚಿತ್ರ

-: ನಯಾ ಘರ್ :-

Matinee PRABHAT

21st, 22nd & 23rd 3 days 3 Shows at 3-30 p. m.

Metros Present **The Big Store**

NEXT Matinee 20th Centure Foxes

LYDIA BAILEY



ನಿಜವಾದ ವಾಚ್ - ಪೆನ್ ಇದೇ ರೂಪಾಯಿಗೆ

ಅಮೆರಿಕಾ ತಯಾರಿಯ "ಮಾರ್ಷಲ್" ಫೌಂಟನ್ ಪೆನ್ ಮತ್ತು ನಿಜವಾದ 10 ವರ್ಷ ಗ್ಯಾರಂಟಿಯುಳ್ಳ ಸ್ವಿಸ್ ವಾಚ್ ಇವೆರಡನ್ನು ನಮ್ಮ ಉದ್ಯೋಗಾಭಿವೃದ್ಧಿಗಾಗಿ 5/- ಏಜೆಂಟರಿಗೆ ಕಾಡ್ರೆಟ್ಟಿವೆ. ಇದಕ್ಕೆ 1-2-0 ಪಾರ್ಸಲ್ ಖರ್ಚು – ನಾವು ಹೇಳಿದ್ದಕ್ಕೆ ವಿರೋಧವಿದ್ದಲ್ಲಿ ಹಣ ಹಿಂದಕ್ಕೆ ಕೊಡಲಾಗುತ್ತದೆ.

LONDON TRADING AGENCY.
(N. B. 8) JULLUNDER CITY

Coming at "PRABHAT"

Watch for the Date

Warner Bros Astounding Feature in natural vision.

3 Dimension

★ **HOUSE OF WAX** ★

COLOR BY WARNER COLOR

(ತಿನೆ ಪುಟದಿಂದ)

ನಿಷ್ಟೆ ಮತ್ತು ಬುದ್ಧಿವಂತ ಪ್ರಜೆಗಳನ್ನಾಗಿ ಮಾಡಲು ಶಿಕ್ಷಣಕ್ಕೆ ಆಸಕ್ತಿಯನ್ನು ಪಡಿಸುತ್ತಿಲ್ಲ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯಾದರು ಶಾಲೆಯು ವಿದ್ಯಾರ್ಥಿಗಳನ್ನು ಒಳ್ಳೆಯ ಪ್ರಜೆಗಳನ್ನಾಗಿ ತರಬೇಕು ಮಾಡುವ ಕೇಂದ್ರವಾಗಿದೆ ಅಷ್ಟೇ ಅಲ್ಲದೆ ದೇಶದ ಮತ್ತು ಕಾಲದ ಅವಶ್ಯಕತೆಯನ್ನು ತಿಳಿಯುವ ಒಂದು ಸಾಧನವಾಗಿದೆ. ಆದರೆ ಭಾರತ ದೇಶದಲ್ಲಿ ಇಂದಿನ ಶಿಕ್ಷಣದ ಒಂದೇ ಒಂದು ಒಡು ಮುಖ್ಯ ದೃಷ್ಟಿ ಯೆಂದರೆ ವಿದ್ಯಾರ್ಥಿಗಳನ್ನು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ತಯಾರುಮಾಡುವದಾಗಿದೆ.

ಇಂತಹ ವಿದ್ಯಾಭ್ಯಾಸ ಕುಮರೆಯ ಮೊಗವಾಡದಂತಿದೆ. ದೇಶ ಸ್ವಾತಂತ್ರ್ಯ ಪಡೆದ ನಂತರ ವಯಸ್ಕರ ಮತದಾನ ಪದ್ಧತಿ ಜಾರಿಗೆ ಬಂದಿರುವಾಗ ಪ್ರಜಾ ಪ್ರಭುತ್ವ ಫಲಿಸಬೇಕಾದರೆ ಮುಂದಿನ ಪ್ರಜೆಗಳಾಗುವ ಇಂದಿನ ವಿದ್ಯಾರ್ಥಿಗಳು ಶಾಲೆಗಳಲ್ಲಿ ಕೇವಲ ಪಾಠದ ವಿಷಯ ಗಳ ಪಟ್ಟಿಗಳನಷ್ಟೇ ಅಲ್ಲದೆ ದೇಶದ ಸಮಸ್ಯೆಗಳ ಬಗ್ಗೆಯೂ ತರಬೇಕು ಪಡೆಯ ಬೇಕಾದುದು ಅವಶ್ಯಕವಾಗಿದೆ. ಪೌರ ಶಿಕ್ಷಣವು ಪ್ರತಿಯೊಬ್ಬನನ್ನೂ ತನ್ನ ಜನಾಂಗದ ಮತ್ತು ಸಮಾಜದ ಸದಸ್ಯ ನೆಂದು ತಿಳಿಯುವಂತೆ ಮಾಡಬೇಕು. ಇದರಿಂದ ನೆರೆಹೊರೆಯವರ ಸುಖದುಃಖ ಗಳಲ್ಲಿ ಆಸಕ್ತಿ ವಹಿಸುವ ಪುನೋಭಾವನೆ ತಾನಾಗಿ ಬೆಳೆಯುತ್ತದೆ ಮತ್ತು ಸಮಾಜ ಕೆಲಸ ಕಾರ್ಯಗಳಲ್ಲಿ ಉನ್ನತವಾದ ಧ್ಯೇಯ, ಪ್ರಾಮಾಣಿಕ ಜ್ಞಾನ ಮತ್ತು ಸಹಕಾರ ಮನೋಭಾವನೆ ಬೆಳೆಯಲು ಅವಕಾಶವಿದೆ ಕೇಂದ್ರ ಮತ್ತು ಇತರ ರಾಜ್ಯ ಸರ್ಕಾರಗಳು ಶಿಕ್ಷಣ ಸುಧಾರಣೆಗಳನ್ನು ಜಾರಿಗೆತರಬೇಕೆಂದು ಉತ್ಸಾಹದಿಂದ ಇರುವಾಗ ಆಲೋಚನಾ ಪೂರ್ವಕವಾದ ಮತ್ತು ನಿಶ್ಚಿತವಾದ ಯೋಜನೆ ಅವಶ್ಯಕವಾಗಿದೆ.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
6 ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾವ್ಯೀಕರಿಸುವುದಿಲ್ಲ.		Subscription will not be accepted for less than 6 months	

To 21-9-53

Sri.

Edited Printed & Published by T. B. Keshava Rao, at Nava Bharat Press, Bellary.

ನಡಿಪಾಡಿ

ಸೋಮವಾರ
ನವಂಬರ್
೨, ೧೯೫೩

ವರ್ಷ 16
ಸಂಚಿಕೆ 28

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
ಉತ್ತಿಷ್ಠತ ! ಜಾಗೃತ !! ಪ್ರಾಪ್ಯವರಾನ್ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವು

ಶಾಂತಿ ಮಾರ್ಗದಿಂದಲೇ ಏಕೀಕರಣ ಸಾಧನೆಯಾಗಬೇಕು

"ಉಪವಾಸ ಸತ್ಯಾಗ್ರಹ ಮೊದಲಾದ ತೀವ್ರ ವಿಧಾನಗಳ ಮೂಲಕ ಕರ್ನಾಟಕ ಪ್ರಾಂತಕ್ಕಾಗಿ ಪ್ರಯತ್ನಿಸಬೇಕಾಗಿಲ್ಲ. ಶಾಂತಿಯುತ ಶೌಹಾರ್ದ ಮಾರ್ಗಗಳಿಂದ ಏಕೀಕರಣವನ್ನು ಸಾಧಿಸೋಣ-ಎಂಬುದಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ದಿನ ಹರಪನಹಳ್ಳಿಯಲ್ಲಿ ಭಾಷಣ ಮಾಡಿ ತಿಳಿಸಿದರು

ಭಾಷಾ ಪ್ರಾಂತಗಳ ರಚನೆ ಪುನರ್ವಿಮರ್ಶೆಗಾಗಿ ನಿಯೋಜಿಸಲ್ಪಟ್ಟಿರುವ ಫಜಲ್ ಅಲಿ ಕಮಿಷನ್ನಿನ ಮುಂದೆ ಕನ್ನಡಿಗರು ಒಮ್ಮತದ ಅಭಿಪ್ರಾಯವನ್ನು ಮಂಡಿಸಬೇಕೆಂದೂ ಶ್ರೀ ಹನುಮಂತಯ್ಯನವರು ಒತ್ತಿ ಹೇಳಿದರು.

ಹೊಸಪೇಟೆಯಲ್ಲಿಯೂ ಏಕೀಕರಣದ ಸ್ಫೂರ್ತಿಯನ್ನು ಪ್ರಜ್ವಲಿಸಿ ಮೇಲಿಂತೆಯೇ ಹೇಳಿದರು

ಕರ್ನಾಟಕದ ಶಾಸನ ಸಭಾ ಸದಸ್ಯರೂ ಪಾರ್ಲಿಮೆಂಟ್ ಸದಸ್ಯರೂ ಒಟ್ಟಿಗೆ ವಿಚಾರ ವಿನಿಮಯ ಮಾಡಿ ಅನಂತರ ಹೈಪವರ್ ಕಮಿಷನ್ನಿನ ಮುಂದೆ ಒಮ್ಮತದ ಅಭಿಪ್ರಾಯವನ್ನು ಇಡಬೇಕೆಂದು ಅವರು ತಿಳಿಸಿದರು.

ಹೊಸಪೇಟೆ ತಾಲ್ಲೂಕು ಗ್ರಾಮೋದ್ಯೋಗಿಗಳ ಸಂಘ

ಹೊಸಪೇಟೆತಾಲ್ಲೂಕು ಗ್ರಾಮೋದ್ಯೋಗಿಗಳ ಸಂಘದ ಸ್ಥಾಪನೆ ಮಹೋತ್ಸವನನ್ನು ಅಕ್ಟೋಬರ್ ೯ರಂದು ಗುರುವಾರ ಮಧ್ಯಾಹ್ನ ಮೂರು ಗಂಟೆಗೆ ಹೊಸಪೇಟೆ ತಾಲ್ಲೂಕು ಅನಂತಶಯನ ಗುಡಿ ಗ್ರಾಮದಲ್ಲಿ ಶ್ರೀ ಇಜಾರಿ ಸಿರಪಪ್ಪ ನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಕರ್ನಾಟಕ ಪ್ರಾಂತ ರಚನೆಗೆ ಒತ್ತಾಯ

ಭಾರತ ಸರ್ಕಾರದ ನೀತಿ ಬಗ್ಗೆ ಖಂಡನೆ

ಭಾಷಾ ಪ್ರಾಂತಗಳ-ವಿಶೇಷವಾಗಿ ಕರ್ನಾಟಕಪ್ರಾಂತ-ರಚನೆಯನ್ನು ತಡ ಮಾಡುವ ನೀತಿಯನ್ನು ಭಾರತ ಸರ್ಕಾರ ಅನುಸರಿಸುತ್ತಿರುವುದಕ್ಕಾಗಿ ಅದನ್ನು ಖಂಡಿಸುವ ನಿರ್ಣಯವೊಂದು ಈ ದಿನ ಇಲ್ಲಿ ಕಮ್ಯೂನಿಸ್ ಪಕ್ಷದ ಆಶ್ರಯದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಂಗೀಕೃತವಾಯಿತು

ಕರ್ನಾಟಕ ಪ್ರಾಂತವನ್ನು ತಕ್ಷಣ ರಚಿಸಬೇಕೆಂದು ನಿರ್ಣಯದಲ್ಲಿ ಒತ್ತಾಯ ಮಾಡಲಾಗಿದೆ.

ಹೊಸಪೇಟೆಯಲ್ಲಿ ಡಾ|| ರಾಧಾಕೃಷ್ಣನ್

ಭಾರತ ಉಪ ರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು 25-10-53 ಮಧ್ಯಾಹ್ನ ಹೊಸಪೇಟೆಗೆ ಆಗಮಿಸಿದರು. ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಡಾ|| ರಾಧಾಕೃಷ್ಣನ್‌ರನ್ನು ಸ್ವಾಗತಿಸಿದರು.

ಡಾ|| ರಾಧಾಕೃಷ್ಣನ್ ತುಂಗಭದ್ರಾ ಆಣೆಕಟ್ಟಿಗೆ ಭೇಟಿ ಕೊಟ್ಟರು ಅಲ್ಲಿಂದ ಹೈದರಾಬಾದ್ ಭಾಗಕ್ಕೂ ಅವರು ಭೇಟಿ ಕೊಟ್ಟರು ಅಲ್ಲಿ ಹೈದರಾಬಾದ್ ಶಿಕ್ಷಣ ಮಂತ್ರಿ ಶ್ರೀ ವೇಣೀ ಸಿಂಗ್ ಚವಾನ್‌ರವರು ಉಪ ರಾಷ್ಟ್ರಪತಿಯನ್ನು ಸ್ವಾಗತಿಸಿದರು.

ಡಾ|| ರಾಧಾಕೃಷ್ಣನ್ ಅನಂತರ ಹಂಪೆಗೆ ಭೇಟಿ ಕೊಟ್ಟು ಬಂದರು.

ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸೀಫರ ಕೋರ್ಟಿನಲ್ಲಿ

O. P. 27/1953

ಅರ್ಜಿದಾರರು :- ಆಸ್ಪಿ ರಾಜಶೇಖರ್ ವೈನರು ನಿಗೇವಾನಿ ಜನನ, ತಾಯಿ ಸಾವಿತ್ರಮ್ಮ, ಗಂಡ ಶಿವಬಸಪ್ಪ. ವಯಸ್ಸು 23 ವರ್ಷ, ಲಿಂಗಾಯತ್ತ ಜಮೀನ್ದಾರಳು, ಸಾ|| ರಾಮಸಾಗರ ತಾಲೂಕು ಹೊಸಪೇಟೆ.

ಅರ್ಜಿದಾರನು ಮೇಲ್ಕಂಡ ನಂಬರಿನಲ್ಲಿ ಜನರಲ್ ಅಜ್ಯೂರ್ ಅಶೂರೆನ್ಸ್ ಸೊಸೈಟಿ ಲಿಮಿಟೆಡ್ ಆಫೀಸರ್ ಇವರ ಕಡೆಯಿಂದ ಮೃತಪಟ್ಟ ತನ್ನ ತಂದೆಯಾದ ಶಿವಬಸಪ್ಪನ ಮರಣ ಫಂಡಿನ ಬಾಬ್ತ ರೂ. 2000-0-0 ಬರವಣಾಡಿಕೊಳ್ಳಲು ವಾರಸು ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿ ಇಟ್ಟಿರುತ್ತಾನೆ. ಸದರಿ ಅರ್ಜಿಗೆ ಯಾರದಾದರೂ ತಕರಾರು ಇದ್ದಲ್ಲಿ ಮೇಲ್ಕಂಡ ಕೋರ್ಟಿಗೆ 16-11-1953 ರ ವಾಯ್ದೆ ದಿನ ಖುದ್ದಾಗಿಯಾಗಲಿ, ವಕೀಲರ ಮೂಲಕವಾಗಿಯಾಗಲಿ ತಿಳಿಸಬೇಕೆಂದು ಈ ಪ್ರಕಟಣೆಯ ಮೂಲಕ ಎಲ್ಲರಿಗೂ ತಿಳಿಸಲಾಗಿದೆ.

ಎ. ಚನ್ನಬಸಪ್ಪ
ಅರ್ಜಿದಾರರ-ಆಡ್ವೋಕೇಟು

ಕರ್ನಾಟಕ ಪ್ರಾಂತ ರಚನೆ ಅತ್ಯಾವಶ್ಯ

ಕನ್ನಡ ಸಂಸ್ಕೃತಿಯಲ್ಲಿ ಧರ್ಮ, ಕಲೆ, ಪೂಜೆ, ನೀತಿ, ಸಾಮಾಜಿಕ ವ್ಯವಹಾರಗಳು ಅಡಕವಾಗುತ್ತಿವೆ. ಧರ್ಮದ ವಿಷಯ ಅನೇಕ ಮತಗಳಿವೆ. ಜೈನ, ಶೈವ, ಸ್ಮಾರ್ತ, ವೈಷ್ಣವ ಮೊದಲಾದ ಮತಗಳಿದ್ದರೂ ಎಲ್ಲರೂ ಸಹಾಯ, ಸೌಹಾರ್ದ, ಸಹಾನಭೂತಿಗಳನ್ನಿತ್ತು ಕನ್ನಡದ ಏಕತನಕ್ಕೆ ಕುಂದಾಗದಂತೆ ವ್ಯವಹರಿಸುತ್ತಿದ್ದಾರೆ; ವ್ಯವಹರಿಸುತ್ತಾರೆ.

ಕಲೆಯಲ್ಲಿ ಶಿಲ್ಪಕಲೆ ಮುಖ್ಯ ಇವುಗಳಿಗೆ ಹೊಯ್ಸಳರ ಶಿಲ್ಪಕಲೆಯೇ ಕರ್ನಾಟಕದ ವಿಶಿಷ್ಟಕಲೆಯು. ಸಾಹಿತ್ಯಕಲೆಯ ವಿಷಯ ಗಮನಿಸುವುದಾದರೆ ಜೈನ, ಶೈವ ಸ್ಮಾರ್ತ, ವೈಷ್ಣವರ ಗ್ರಂಥಗಳು ಕರ್ನಾಟಕದಲ್ಲಿ ಪ್ರಚಾರದಲ್ಲಿವೆ. ಜನಪದ ಸಾಹಿತ್ಯಗಳಿಂದು ಅಖಂಡಕರ್ನಾಟಕ ಪ್ರಾಚುರ್ಯವನ್ನು ಹೊಂದುತ್ತಿವೆ. ಕನ್ನಡೇತರ ಪ್ರದೇಶಗಳಲ್ಲಿ ಅವು ವ್ಯಾಪ್ತವಾಗಿಲ್ಲ. ಹೊಸಗನ್ನಡಕೃತಿಗಳು ಕರ್ನಾಟಕದಲ್ಲಿ ವ್ಯಾಪ್ತವಾಗಿವೆ ಧಾರವಾಡದವರು ಬರೆದ ಕಾದಂಬರಿ, ಕೃತಿಗಳೂ ಮೈಸೂರು, ದ ಕನ್ನಡದವರೂ ಓದಿ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಸಹಕರಿಸುತ್ತಾರೆ. ಇವರು ಬರೆದ ಕೃತಿಗಳಿಗೆ ಅವರೂ ಮನ್ನಣೆ ಕೊಡುತ್ತಾರೆ. ಸಂಗೀತಕಲೆಯಲ್ಲಿ ಪುರಂದರ ದಾಸಾದಿದಾಸರ ಪದಗಳು ಅಖಿಲ ಕರ್ನಾಟಕದಲ್ಲಿ ಕೇಳಬಹುದು. ಬಯಲಾಟಗಳಲ್ಲಿ ಭೇದವೆಸ್ಟೇ ಇದ್ದರೂ ಎಷ್ಟೋ ಸಾಮಾನ್ಯ ಅಂಶಗಳಿವೆ. ತ್ರಿಪದಿ ಷಟ್ಪದಿ, ಸಾಂಗತ್ಯಗಳೆಂಬ ಕನ್ನಡಛಂದಸ್ಸುಗಳು ಕನ್ನಡನಾಡಿನ ಎಲ್ಲೆಡೆಗಳಲ್ಲೂ ಸಾಧಾರಣ ಅವುಗಳನ್ನು ಬಳಸಿಕಟ್ಟಿದ ಕಾವ್ಯಗಳು ಕನ್ನಡದ ವೈಶಿಷ್ಟ್ಯವಲ್ಲವೇ? ಸರ್ವಜ್ಞ ಪದ್ಯಗಳು, ಬಸವೇಶ್ವರನ ವಚನಗಳು, ಸೋಮೇಶ್ವರಶತಕಗಳು ಮೊದಲಾದುವುಗಳು ಪ್ರಾಮುಖ್ಯ. ಹೊಲೆಯರ ಡೋಲುಕುಣಿತದ, ಬಸವನನ್ನು ಆಡಿಸುವವರ ಪದಗಳು ಎಲ್ಲವೂ ಕನ್ನಡದ್ದೇ.

ಭೂಶಕ್ತಿಆರಾಧನೆ ಸಕಲ ಕರ್ನಾಟಕ ವ್ಯಾಪ್ತಿಯುಳ್ಳದು. ಭೂತ, ಬಬ್ಬರ್ಯಿ, ಉಮ್ಮತ್ತೆ, ದೈವ, ಜಟ್ಟಿಗ ಎಂಬ ಭಿನ್ನ ನಾಮಗಳಿಂದ ಕನ್ನಡ ದೈವಾರಾಧನೆ ಕನ್ನಡಮಂತ್ರಗಳಿಂದ ನಡೆಯುತ್ತದೆ. ಕನ್ನಡದೇವತೆ ಶಿವ, ವಿಷ್ಣು ಪೂಜೆಯಲ್ಲಿ ಕನ್ನಡದ ಹಾಡುಗಳು ಕನ್ನಡಪ್ರಾರ್ಥನೆ, ಕರ್ನಾಟಕದ ಎಲ್ಲೆಡೆಗಳಲ್ಲಿಯೂ ಕಾಣಬರುತ್ತವೆ. ಕನ್ನಡಪದಗಳಿಂದ ನಡೆಯುವ ಪೂಜೆಗಳು (ಮಂಡಲ, ಕೋಲಾಟ, ಕೋಲ, ಲಾವಣಿ) ಕನ್ನಡೇತರ ಪ್ರದೇಶಗಳಲ್ಲಿ ಕಂಡುಬರಲಾರವು. ವ್ರತಾಚರಣೆ, ಪುರಾಣಪ್ರವಚನ, ಹರಿಕತೆ, ದೈವಲಿಖಿಸುವುದು, ಜ್ಯೋತಿಷ್ಯಹೇಳುವುದು, ಕಣಿ ಹೇಳುವುದು, ಸಾಮುದ್ರಿಕ ನೋಡುವುದು ಎಲ್ಲವೂ ಕನ್ನಡ ಮಾಧ್ಯಮದಲ್ಲಿ ಕನ್ನಡ ನಾಡಿನ ಎಲ್ಲೆಡೆಗಳಲ್ಲಿ ಕಂಡುಬರುವುವು. ಕರ್ನಾಟಕದ ವಿವಿಧ ಯಾತ್ರಾಸ್ಥಳಗಳಲ್ಲಿಯ ತೇರು, ಜಾತ್ರೆಗಳನ್ನು ಹೊಕ್ಕರೆ ಕನ್ನಡವಾತ್ಮ, ಕನ್ನಡವೇಷಭೂಷಣ ಕನ್ನಡರಸಿಕತೆ ಕನ್ನಡಮನೋರಂಜನೋಪಾಯಗಳು ಕಾಣಿಸುತ್ತವೆ.

ಕರ್ನಾಟಕದ ಹೊರಗಡೆ ಹೋಗಿ ಆ ವಿಭಾಗಿಯರ ಉಡಿಗೆತೊಡಿಗೆ ತೊಟ್ಟರೂ ಅಲ್ಲಿನ ವಿಭಾಗಿಗಳು ನಮ್ಮನ್ನು ಗುರುತಿಸಿ ಕನ್ನಡಿಗ' ಎನ್ನುವರು. ಏಕೆಂದರೆ ಕನ್ನಡ ಪದೇಶಿಯನ ವಾಕ್ಯಪ್ರಯೋಗನೀತಿ, ದಾಕ್ಷಿಣ್ಯಸ್ವಭಾವ, ಧ್ವನಿಗತಿಗಳು ಕನ್ನಡತನವನ್ನು ಗುರುತಿಸುತ್ತವೆ.

ಸಾಮಾಜಿಕ ವ್ಯವಹಾರಗಳು ಮದರಾಸು ಕರ್ನಾಟಕ ಮೈಸೂರು ಕರ್ನಾಟಕ ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕರ್ನಾಟಕಗಳಲ್ಲಿ ಪರಸ್ಪರ ನಡೆಯುವುವು. ದಿನೇ ದಿನೇಕೆಚ್ಚಾಗುತ್ತಿವೆ. ನೆಂಟಸ್ತಿಗೆ, ಆರ್ಥಿಕ ವ್ಯವಹಾರಗಳು ಈ ಉಪಪ್ರದೇಶಗಳಲ್ಲಿರುವ ಭೇದಗಳನ್ನು ಕಡಿಮೆಮಾಡುವುವು. ನೌಕರರಲ್ಲಿ ಒಂದು ಉಪಪ್ರದೇಶದವರು ಇನ್ನೊಂದು ಉಪಪ್ರದೇಶಗಳಲ್ಲಿರುವುದು ಕಾಣುವುದು. (ಹೋಟೇಲುಗಳು ಮುಖ್ಯ) ವಿವಾಹ ಉದ್ಯೋಗ ವ್ಯವಹಾರಗಳ ಸಾಮಾಜಿಕ ಸಂಪರ್ಕದಿಂದ ಕನ್ನಡತನ ಬೆಳೆದಿದೆ. ಪ್ರಸರಜ್ಜೀವನ ಹೊಂದಿರುತ್ತದೆ. ವುಸ್ತಕ' ವರ್ತ್ತಮಾನಗಳಿಂದ ಹಿಡಿದು ದಂತ ಚೂರ್ಣಗಳವರೆಗೆ ಸಾಮಾಗ್ರಿಗಳು ಕರ್ನಾಟಕದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವುದು ನಿತ್ಯವ್ಯವಹಾರವಾಗಿದೆ ಕೂಲಿಗಳ ಓಡಾಟ, ಪತ್ರಿಕೆ ಪುಸ್ತಕಗಳ ಪ್ರಚಾರಗಳ ಕನ್ನಡದ ಒಂದು ತನವನ್ನು ಸಾರುತ್ತವೆ. ಕನ್ನಡನಾಡೊಂದಾದ ಮರುದಿನದಿಂದ ಇಂಥ ಸೂತ್ರವ್ಯವಹಾರ ಇವ್ಯಾಡಿ—ಇವ್ಯಾಡಿಯಾಗಿ ಸಾಗಲಾರಂಭಿಸಿರುತ್ತದೆ.

ಮೇಲೆ ಹೇಳಿದ ವ್ಯವಹಾರಗಳು ಕನ್ನಡನಾಡಿನಲ್ಲಿ ಎಲ್ಲೆಲ್ಲೂ ಕನ್ನಡಭಾಷೆಯಿಂದಲೆ ನಡೆಯುತ್ತವೆ. ಭಾಷೆ ಆಚಾರ ವಿಚಾರಗಳ ನಡುವಣ ಸೇತುವೆ. ಶರೀರಕ್ಕೆ ಕಾಲು ಹೇಗೊ ಮನಸ್ಸಿಗೆ ಮಾತೂ ಹಾಗೆ. ಆದುದರಿಂದ ಮಾನವ ಜೀವನದ ಆತ್ಮವಾದ ಸಂಸ್ಕೃತಿಗೆ ಭಾಷೆಯೇ ಪ್ರಾಣ.

„ಕನ್ನಡ ರೂಪಕ್ಕೆ ಕನ್ನಡನೇ ಕನ್ನಡಿ„

ಪ್ರಜಾಪ್ರಭುತ್ವಗಳು ಯಶಸ್ವಿಯಾಗಿ ನಡೆಯಬೇಕಾದರೆ ಆಡಳಿತದಲ್ಲಿ ಪ್ರತಿನಿಧಿ ಸಭೆಗಳಲ್ಲಿ ಜನತೆಯ ಭಾಷೆ ಬಳಸುವುದು ಒಂದೇ ದಾರಿ ಎನ್ನುವುದನ್ನು ಈಗ ಎಲ್ಲರೂ ಒಪ್ಪುತ್ತಾರೆ. ಕೆಲವು ತಿಂಗಳ ಹಿಂದೆ ಮದ್ರಾಸ್ ಪ್ರತಿನಿಧಿ ಸಭೆಯಲ್ಲಿ ಆಂಧ್ರ ಪ್ರತಿನಿಧಿಯೊಬ್ಬರು ತೆಲುಗಿನಲ್ಲಿ ಪ್ರಶ್ನೆಯನ್ನು ಕೇಳಿದ್ದಕ್ಕೆ ಮಂತ್ರಿಯಾದವರು. ಉತ್ತರಕೊಡಲು ಅವಕಾಶಬೇಕೆಂದರು. ಮದ್ರಾಸ್ ಪ್ರಾಂತದಲ್ಲಿ ತೆಲುಗು, ಕನ್ನಡ ಮಲಯಾಳ ಭಾಷೆಗಳನ್ನು ಆಡುವವರಿದ್ದಾರೆ. ಈ ಜನರ ಕೆಲಸವನ್ನು ನಡೆಯಿಸುತ್ತಿರುವ ಮಂತ್ರಿ ಒಡನೆ ಉತ್ತರಕೊಡಬೇಕಾದರೆ ಪ್ರಶ್ನೆ ಇಂಗ್ಲಿಷಿನಲ್ಲಿರಬೇಕು. ಹಲವು ಭಾಷೆಗಳನ್ನೊಳಗೊಂಡ ಇಂತಹ ಯಾವ ಪ್ರಾಂತದಲ್ಲಿಯೂ ಪ್ರತಿನಿಧಿ ಸಭೆಯ ಗತಿಯಿಷ್ಟೆ. ಇದರಿಂದ ಗಿ ವಿಚಾರಿಸಿದರೆ ಭಾಷಾನುಗುಣ ಪ್ರಾಂತನಿರ್ಮಾಣ ವತ್ಯನತ್ಯ. ಕನ್ನಡಭಾಷೆಯನ್ನಾಡುವ ಜನಗಳನ್ನೊಳಗೊಂಡ ಕರ್ನಾಟಕಪ್ರಾಂತವೊಂದು ಕ್ಷಿಪ್ರದಲ್ಲಿ ನಿರ್ಮಾಣವಾಗಬೇಕು ಎಂಬ ಬಯಕೆಗೆ ಕಾರಣ ಇದೇ.

ಭಾಷೆಯ ದೃಷ್ಟಿಯಿಂದ, ಬುಡಕಟ್ಟಿನ ದೃಷ್ಟಿಯಿಂದ ಪ್ರಾಂತಗಳನ್ನು ಮಾಡುವುದು ಒಳ್ಳೆಯದು ಎನ್ನುವುದಕ್ಕೆ ಸಾಧಕ ಸೂತ್ರ. ಹೀಗೆ ಮಾಡುವುದರಿಂದ ಶಾಸನ ಸಭಾಕಾರ್ಯ ಜನತೆಯ ಭಾಷೆಯಲ್ಲಿ ನಡೆಯುವುದು ಸಾಧ್ಯವಾಗುತ್ತದೆ. ಇದರಿಂದ ಇಂಗ್ಲಿಷ ಪರಿಚಯವಿಲ್ಲದ ಜನರನ್ನೂ ರಾಜಕೀಯ ಕಾರ್ಯಕ್ಷೇತ್ರವು ಆಕರ್ಷಿಸುವುದು ಸಾಧ್ಯವಾಗುತ್ತದೆ. ವಿದ್ಯೆಯಲ್ಲಿ ಹಾಗೆಯೇ ಸಂಸ್ಕೃತಿಯಲ್ಲಿ ಮತ್ತು ಜೀವನದ ಅನೇಕ ಕ್ಷೇತ್ರಗಳಲ್ಲಿ ಕ್ಷಿಪ್ರವಾದ ಮುಂಬರಿವಿಗೆ ಭಾಷೆಯೇ ಸಾಧನವೆನ್ನುವುದು ಸರ್ವಸಮ್ಮತ ನಾವು ಖಂಡಿತವಾಗಿಯೂ ಇಂಗ್ಲಿಷ್ ಭಾಷೆಯ ವಿರೋಧಿಗಳಲ್ಲ. ವಾಸ್ತವವಾಗಿ ಈಗಿರುವ ಪರಿಸ್ಥಿತಿಯಲ್ಲಿ ಇನ್ನು ಕೆಲವು ಕಾಲದ ವರೆಗೂ ಕೇಂದ್ರ ಶಾಸನ ಸಭೆಯಲ್ಲಿ ಇತರ ಯಾವ ಭಾಷೆಗಿಂತಲೂ ಇಂಗ್ಲಿಷ್ ಭಾಷೆಯೇ ಬಳಕೆಯ ಭಾಷೆಯೆಂತ ನಾವೂಯಭಿಪ್ರಾಯ ಪಡುತ್ತೇವೆ. .

ಕರ್ನಾಟಕ ಪ್ರಾಂತ ರಚನೆಗೆ ಕಮ್ಯೂನಿಷ್ಟರ ಬೆಂಬಲ ಮಂಗಳೂರಿನಲ್ಲಿ ನಡೆದ ಅಧಿವೇಶನದ ನಿರ್ಣಯ

ಕರ್ನಾಟಕ ಏಕೀಕರಣ ಚಳವಳಿಗೆ ಬೆಂಬಲವನ್ನೂ, ಬಳ್ಳಾರಿ ಜಿಲ್ಲೆಯ ಸೇರ್ಪಡೆಗೆ ಸ್ವಾಗತವನ್ನೂ ವ್ಯಕ್ತಪಡಿಸುವ ನಿರ್ಣಯವನ್ನು ಅ. 5 ರಿಂದ 8 ರವರೆಗೆ ನಗರದಲ್ಲಿ ನಡೆದ ಕರ್ನಾಟಕ ಪ್ರಾಂತೀಯ ಕಮ್ಯೂನಿಸ್ಟ್ ಪಕ್ಷ ಸಭೆಯು ಅಂಗೀಕರಿಸಿದೆ.

ಡಿಸೆಂಬರ್ ತಿಂಗಳ ಕೊನೆಯ ವಾರದಲ್ಲಿ ಹೈದರಾಬಾದಿನಲ್ಲಿ ಜರುಗಲಿರುವ ಅಖಿಲ ಭಾರತ ಕಮ್ಯೂನಿಸ್ಟ್ ಪಾರ್ಟಿ ಅಧಿವೇಶನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಾರ್ಟಿ ಸಮ್ಮೇಳನವನ್ನು ಆ 28 ರಿಂದ 31 ರತನಕ ಬೆಂಗಳೂರಲ್ಲಿ ನಡೆಸಲು ನಿರ್ಧರಿಸಿದೆ. ಬೊಂಬಾಯಿ ಕರ್ನಾಟಕ, ಮೈಸೂರು, ಹೈದರಾಬಾದ್ ಕರ್ನಾಟಕ, ಕೊಡಗು ಮತ್ತು ದಕ್ಷಿಣ ಕನ್ನಡ ಪ್ರದೇಶಗಳಿಂದ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸುವರು. ಅಖಿಲ ಭಾರತ ಕಮ್ಯೂನಿಸ್ಟ್ ಪಾರ್ಟಿಯ ಹಂಗಾಮಿ ಕಾರ್ಯದರ್ಶಿಗಳಾದ ಶ್ರೀ ಇ. ಎಂ. ಎಸ್. ನಂಬೂದಿರಿ ಪಾದ್‌ರವರು ಸಮ್ಮೇಳನಕ್ಕೆ ಆಗಮಿಸುವರು. ನವಂಬರ್ 1 ರಂದು ಸಾರ್ವಜನಿಕ ಸಭೆಯನ್ನು ಏರ್ಪಡಿಸುವ ಯೋಜನೆಯಿದೆ.

ಏಕೀಕರಣ ಚಳವಳಿ ಬಗ್ಗೆ ನಿರ್ಣಯ

ಏಕೀಕರಣ ಚಳವಳಿ ಬಗ್ಗೆ ನಿರ್ಣಯದಲ್ಲಿ ಈ ರೀತಿ ಹೇಳಲಾಗಿದೆ.—

"ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿಯು ಕರ್ನಾಟಕದ ಆತ್ಯಂತವಾಗಿ ಬೆಳೆಯುತ್ತಿರುವ ಏಕೀಕರಣ ಚಳವಳಿಗೆ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ ಮತ್ತು ಏಕೀಕರಣಕ್ಕಾಗಿ ದೊಡ್ಡ ಹೋರಾಟವನ್ನು ಎದುರಿಸಿ ಹೋರಾಡುತ್ತಿರುವ ಜನರನ್ನು ಅಭಿನಂದಿಸುತ್ತದೆ. ಕರ್ನಾಟಕ ಪ್ರಾಂತ ನಿರ್ಮಾಣಕ್ಕೆ ಕೇಂದ್ರ ಸರ್ಕಾರವು ಪ್ರತಿಕೂಲವಾಗಿದೆಯೆಂದು ಇತ್ತೀಚಿನ ಪ್ರಕಟಣೆಗಳಿಂದ ಸ್ಪಷ್ಟವಾಗುತ್ತಿದೆಯೆಂದೂ, ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಅಲ್ಲಗಳೆದು ನೇಮಿಸಲ್ಪಟ್ಟಿರುವ ಉಚ್ಚ ಅಧಿಕಾರ ಸಮಿತಿಯು ಕರ್ನಾಟಕ ಏಕೀಕರಣವನ್ನು ಹಿಂದೂಡುವುದಕ್ಕೆ ಮಾತ್ರವಲ್ಲದೆ, ಅದನ್ನು ನಿರಾಕರಿಸುವುದಕ್ಕೂ ಕೇಂದ್ರ ಸರ್ಕಾರವು ಹೂಡಿರುವ ಕುತಂತ್ರವಾಗಿದೆಯೆಂದೂ, ಕಮ್ಯೂನಿಸ್ಟ್ ಪಾರ್ಟಿಯು ಅಭಿಪ್ರಾಯ ಪಡುತ್ತದೆ.

"ಕರ್ನಾಟಕದಲ್ಲಿರುವ ಎಲ್ಲಾ ಪ್ರಜಾಪ್ರಭುತ್ವವಾದೀ ಪಕ್ಷಗಳೂ, ವ್ಯಕ್ತಿಗಳೂ, ಒಂದುಗೂಡಿ ಅಖಂಡ ಕರ್ನಾಟಕ ರಾಜ್ಯಕ್ಕಾಗಿ ಹೋರಾಟದ ಮಾರ್ಗದಲ್ಲಿ ಮುನ್ನಡೆಯಬೇಕೆಂದು ಕಮ್ಯೂನಿಸ್ಟ್ ಪಾರ್ಟಿಯು ವಿನಂತಿ ಮಾಡುತ್ತದೆ. ಬೊಂಬಾಯಿ ಕರ್ನಾಟಕದಲ್ಲಿ ಏಕೀಕರಣ ಚಳವಳಿಯು ವಿರುದ್ಧವಾಗಿ ನಡೆಯುತ್ತಿರುವ ದಬ್ಬಾಳಿಕೆಯನ್ನು ಖಂಡಿಸಿ, ಎಲ್ಲಾ ಕಡೆಗಳಲ್ಲೂ ಹಾಕಲಾಗಿರುವ ನಿರ್ಬಂಧಾಜ್ಞೆಯನ್ನು ರದ್ದುಗೊಳಿಸಬೇಕೆಂದೂ, ಸ್ವಾತಂತ್ರ್ಯಬದ್ಧರನ್ನು ಸತ್ಯಾಗ್ರಹಿ ಕೈದಿಗಳನ್ನೂ ಕೂಡಲೇ ಬಿಡುಗಡೆ ಮಾಡಬೇಕೆಂದೂ, ವೈಕಲ್ಪಿಕ ಪ್ರಶ್ನೆಗಳನ್ನು ಹಿಂತೆಗೆದುಕೊಳ್ಳಬೇಕೆಂದೂ ಬೊಂಬಾಯಿ ಮತ್ತು ಕೇಂದ್ರ ಸರ್ಕಾರಗಳನ್ನು ಕಮ್ಯೂನಿಸ್ಟ್ ಪಾರ್ಟಿ ಒತ್ತಾಯಪಡಿಸುತ್ತದೆ. ಸೈಸೂರಿಗೆ ಸೇರಿರುವ ಬಳ್ಳಾರಿಯ ಕನ್ನಡ ಪ್ರದೇಶದ ಜನರಿಗೆ ಹೃತ್ಪೂರ್ವಕ ಸ್ವಾಗತವನ್ನು ನೀಡುವುದರ ಜತೆಗೆ ಎಲ್ಲಾ ಕನ್ನಡ ಪ್ರದೇಶಗಳನ್ನೊಳಗೊಂಡ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣವು ಕೂಡಲೇ ಆಗುವಂತೆ ಹೋರಾಟವನ್ನು ಮುಂದುವರಿಸಬೇಕೆಂದು ನಿರ್ಣಯಿಸುತ್ತದೆ."

ದೇಶದ ಇತರ ಕಡೆಗಳಲ್ಲಿರುವಂತೆಯೇ ಕರ್ನಾಟಕದಲ್ಲೂ ನಿರುದ್ಯೋಗವು ಬೆಳೆಯುತ್ತಿದೆ. ಕಾಂಗ್ರೆಸ್ ಸರಕಾರವು ನಿರುದ್ಯೋಗಿಗಳಿಗೆ ತಾತ್ಕಾಲಿಕ ಪರಿಹಾರ ಕೊಡಲು ಸಿದ್ಧವಿಲ್ಲ. ಕಾರ್ಖಾನೆಗಳು ಮುಚ್ಚುವುದನ್ನೂ ನಿಲ್ಲಿಸುತ್ತಿಲ್ಲ. ಕೈಮಗ್ಗದವರ ಪರಿಸ್ಥಿತಿ ಹೇಳಲಾರದಷ್ಟು ವಿಷಮಗೊಂಡಿದೆ.

ವಿಚಿತ್ರ ವಿಷಯಗಳು

ಚಂದ್ರಲೋಕಕ್ಕೆ ಪ್ರಯಾಣ

ಮನುಷ್ಯನು, ಆಧುನಿಕ ವಿಜ್ಞಾನದ ಸಹಾಯದಿಂದ, ಸ್ವಲ್ಪ ಆಧಿಕ ಪ್ರಯತ್ನದಿಂದ ಚಂದ್ರಲೋಕಕ್ಕೆ ಪ್ರಯಾಣ ಮಾಡುವುದು ಸಾಧ್ಯವಿದೆ ಎಂದು ಅನೇಕ ವರ್ಷಗಳಿಂದ ಆಗಾಗ್ಗೆ ಲೇಖನಗಳು ಪ್ರಕಟವಾಗುತ್ತಿದೆ. ಇತ್ತೀಚೆಗೆ ಜಿನೀವದಲ್ಲಿ ಹದಿನೇಳು ರಾಷ್ಟ್ರಗಳ ವಿಜ್ಞಾನಿಗಳು ಸಭೆ ಸೇರಿ, ಈ ವಿಷಯವನ್ನು ಎಲ್ಲ ದೃಷ್ಟಿಗಳಿಂದ ವಿಮರ್ಶಿಸಿ ಇನ್ನು ಹಲವು ಸಹಸ್ರ ವರ್ಷಗಳು ಚಂದ್ರಲೋಕಕ್ಕೆ ಪ್ರಯಾಣ ಸಾಧ್ಯವಾಗುವುದಿಲ್ಲವೆಂದು ತೀರ್ಮಾನಿಸಿದರು.

ಇತರ ದೇಶಗಳ ಯೋಚನೆ, ಶಾಸ್ತ್ರ ಜೀವನಗಳ ಸಂಪರ್ಕವನ್ನು ಬೆಳೆಸುವುದಕ್ಕೆ ನನಗೆ ಒಂದು ಹೊಸ ಭಾಷೆ ಬೇಕು. ಆವ ಭಾಷೆಯು ಬಹುಶಃ ಇಂಗ್ಲಿಷ್ ಆಗಿರುತ್ತದೆ ದು ನಮ್ಮ ಗೃಹಕೆ ಹೀಗಿದ್ದೂ ಈಗ ಭಾರತದ ಅನ್ಯ ಸಾಮಾನ್ಯ ಭಾಷೆಯಾಗಿರುವ ಹಿಂದಿಯನ್ನು ಇಡಿ ಭಾರತದ ಸಾರ್ವತ್ರಿಕ ಭಾಷೆಯಾಗಿ ಮಾಡಲು ಇದೆ ಎಲ್ಲ ಪ್ರಯತ್ನವನ್ನು ಕೈಗೊಳ್ಳಬೇಕೆನ್ನುವುದು ನಮ್ಮ ಖಚಿತ ಅಭಿಪ್ರಾಯ

ರೋಗಿಯುಷ್ಣಿತಿ ಅರಿಯಲು ರೇಡಿಯೋ ಸಹಾಯ

ಲಂಡನ್ ಆಸ್ಪತ್ರೆಯಲ್ಲಿ ಹೃದಯಸಂಬಂಧವಾದ ಮತ್ತು ನರಗಳಿಗೆ ಸಂಬಂಧಿಸಿದ ರೋಗಿಗಳ ಸ್ಥಿತಿಯನ್ನು ಅವರ ತಮ್ಮ ನಿತ್ಯ ಜೀವನದಲ್ಲಿ ರಿಯಾ ಕರಿಯಲ್ಲಿದ್ದರೂ ಸಹ ಡಾಕ್ಟರರು ಅರಿತುಕೊಳ್ಳುವಂತಹ ಒಂದು ಹೊಸ ವಿಧಾನವನ್ನು ಬ್ರಿಟನ್ನಿನಲ್ಲಿ ಇತ್ತೀಚೆಗೆ ಕಂಡುಹಿಡಿಯಲ್ಪಟ್ಟಿದೆ

ರೋಗಿಯ ಶರೀರಕ್ಕೆ ಒಂದು ಚಿಕ್ಕದಾದ ರೇಡಿಯೋ ಟ್ರಾನ್ಸ್‌ಮಿಟರ್ ಇಟ್ಟು ಅದನ್ನು ಹೃದಯಕ್ಕೆ ಇಲ್ಲವೆ ಮೆದುಳಿಗೆ ಕೂಡಿಸುವರು. ಇದರಿಂದ ರೋಗಿಯು ಮಹಡಿ ಹತ್ತುವಾಗ ನಡೆಯುತ್ತಿರುವಾಗ ವಿರಮ ಹೊಂದುತ್ತಿರುವಾಗ ಹೃದಯಕೋಶದ ಕ್ರಿಯೆಯ ಚಿತ್ರವು ರೇಡಿಯೋ ಸಲಕರಣೆಯಿಂದ ವೈದ್ಯರಿಗೆ ತಿಳಿಯುವುದು. ಇದೇ ರೀತಿ ಮನೋಪ್ರೇರಗದಿಂದ ನರಳುತ್ತಿರುವವರ ಮನಸ್ಸಿನ ಮೇಲೆ ಉಂಟಾಗುವ ಮೂರ್ಪಾಟುಗಳು ತಿಳಿಯುವವು.

ಬಳ್ಳಾರಿಯ ಅಭಿವೃದ್ಧಿ

ನೂತನ ಮಂತ್ರಿ ಡಾ|| ನಾಗನಗೌಡರ ವಿವರಣೆ

ಮೈಸೂರಿ ಹೊಸ ಮಂತ್ರಿ ಡಾ|| ಆರ್. ನಾಗನಗೌಡರು ಸೆಕ್ರೆಟೇರಿಯಟ್ಟಿಗೆ ಆಗಮಿಸಿ ತಮ್ಮ ಕಚೇರಿಯಲ್ಲಿ ಅಧಿಕಾರಾರೂಢರಾಗಿ ಪೋರ್ಟ್‌ಫೋಲಿಯೋಗಳನ್ನು ವಹಿಸಿಕೊಂಡರು.

ಸೆಕ್ರೆಟೇರಿಯಟ್ಟಿನಲ್ಲಿ ಅವರಿಗೆ ಮಂತ್ರಿಗಳೂ, ಸರ್ಕಾರದ ಉನ್ನತಾಧಿಕಾರಿಗಳೂ ಸಂಭ್ರಮದ ಸ್ವಾಗತವನ್ನು ಬಯಿಸಿದರು. ನಗರದ ಅನೇಕ ಗಣ್ಯರುಗಳು ಡಾ|| ಗೌಡರಿಗೆ ತಮ್ಮ ಶುಭಾಶಯಗಳನ್ನು ತಿಳಿಸಿದರು.

ಪತ್ರಿಕಾ ಪ್ರತಿನಿಧಿಗಳೊಂದಿಗೆ ಡಾ|| ಗೌಡರು ಮಾತನಾಡುತ್ತಾ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಮೈಸೂರು ಸರ್ಕಾರವು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ವಿವರಿಸಿದರು. ಯಾವಾಗಲೂ ನಾವು ಈ ರೀತಿ ಒಂದೇ ಆಗಿದ್ದೆವೆಂಬುದು ವ್ಯಕ್ತಪಡುವುದು. ಈಗ ಮುತ್ತೈ ಕ್ರಮಬದ್ಧವಾದ ಐಕ್ಯವಾಗಿದೆ ಆಷ್ಟೆ'' ಎಂದೂ ಶ್ರೀ ಗೌಡರು ಹೇಳಿದರು.

ಬಳ್ಳಾರಿ ಜಿಲ್ಲೆಯ ಖನಿಜ ಸಂಪತ್ತಿನ ಬಗ್ಗೆ ಮಂತ್ರಿಗಳು ಪ್ರಾಕಾಶಾಡುತ್ತಾ ಹೊಸಪೇಟೆಯ ಮತ್ತು ಸಂಡೂರಿನ ಭೂಮಿಯಲ್ಲಿ ಕಬ್ಬಿಣದ ಅದುರು ಹೇರಳವಾಗಿದೆಯೆಂದೂ, ಕಬ್ಬಿಣದ ಅಂಶವು ಸೇ. 70ರಿಂದ 75ರವರೆಗೆ ಇರುವುದಾಗಿ ವ್ಯಕ್ತಪಟ್ಟಿದೆಯೆಂದೂ ಆದ್ದರಿಂದ ಭದ್ರಾವತಿಯು ಈ ಕಬ್ಬಿಣದ ಅದುರನ್ನೇಕೆ ಉಪಯೋಗಿಸಬಾರದೆಂದು ತಾವು ಯೋಚಿಸುತ್ತಿರುವುದಾಗಿಯೂ ಡಾ|| ಗೌಡರು ನುಡಿದರು.

ಸದ್ಯಕ್ಕೆ ಮದ್ರಾಸ್ ಶಾಸನಗಳೇ ಜಾರಿಯಲ್ಲಿರುತ್ತವೆ

''ಬಳ್ಳಾರಿಯಲ್ಲಿ ಸದ್ಯಕ್ಕೆ ಮದ್ರಾಸ್ ಸರ್ಕಾರದ ಶಾಸನಗಳೇ ಜಾರಿಯಲ್ಲಿರುತ್ತವೆ. ಉದಾಹರಣೆಗೆ ದ್ವಿಪತ್ನೀತ್ವ ಕಾನೂನು ಮದ್ರಾಸಿನಲ್ಲಿ ಜಾರಿಯಲ್ಲಿದ್ದು, ಆ ಕಾನೂನು ಮೈಸೂರು ರಾಜ್ಯದಲ್ಲಿ ಇಲ್ಲದಿದ್ದರೂ, ಬಳ್ಳಾರಿಯಲ್ಲಿ ಅದು ಅನ್ವಯವಾಗುವುದು'' ಎಂದು ಡಾ|| ನಾಗನಗೌಡರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು.

''ಹೊಸಪೇಟೆಯಲ್ಲಿ ಜಿಲ್ಲಾ ಕಾರ್ಯಾಲಯಗಳ ಕಛೇರಿಗಳ ಕೇಂದ್ರವು ಸಮಂಜಸವಾಗಿದೆ. ಅನಂತರ ಸುತ್ತಮುತ್ತಲಿನ ಅಭಿವೃದ್ಧಿಗೊಳಿಸಬಹುದು. ಬಳ್ಳಾರಿಯು ಪ್ರಾದೇಶಿಕವಾಗಿ ಸಮಾತನೆ ಇಲ್ಲ. ಖನಿಜಾತ್ಮಕವಾಗಿಯೂ ಮೈಸೂರಿನಿಂದ ದೂರವಿದ್ದ ಭೂಭಾಗ'' ಎಂದವರು ನುಡಿದರು.

'ನೀರು ನಮ್ಮ ಮುಖ್ಯ ಸಮಸ್ಯೆ

'ನೀರು ನಮ್ಮ ಮುಖ್ಯ ಸಮಸ್ಯೆ ತುಂಗಭದ್ರಾ ಪ್ರಜೆಕ್ಟಿನಿಂದ ಕಂಪ್ಲಿ ಬಳಿ ಒಂದು ಲಕ್ಷ ಎಕರೆ ಪ್ರದೇಶವು ಸಾಗುವಳಿಗೆ ಬರಲಿದೆ. ೬೧೦೦ ಎಕರೆಗಳನ್ನು ಪ್ರದೇಶದಲ್ಲಿ ಕಬ್ಬಿನ ಬೆಳೆಯಲು ವಿಶೇಷವಾಗಿ ಅವಕಾಶವಾಗುವುದು. ೬೪೦೦೦ ಎಕರೆಗಳನ್ನು ಪ್ರದೇಶವನ್ನು ಭತ್ತ ಮುಂತಾದ ಬೆಳೆಗೂ, ಉಳಿದ ಪ್ರದೇಶವನ್ನು ಹತ್ತಿ-ಕಡಲೇಕಾಯಿ ಮುಂತಾದ ಬೆಳೆಗಳಿಗೂ, ಮೀಸಲಾಗಿಡಲಾಗುವುದು'' ಎಂಬುದಾಗಿ ಶ್ರೀ ನಾಗನಗೌಡರು ತಿಳಿಸಿದರು.

''ಕಂಪ್ಲಿ ಪ್ರದೇಶದಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಒಳ್ಳೆ ಅವಕಾಶವಿದೆ. ಈ ಕಾರ್ಯವನ್ನು ಸಹಕಾರ ಸಂಸ್ಥೆಗಳು ಕೈಗೊಂಡರೆ ಒಳ್ಳೆಯದೆಂದು ನನ್ನ ಭಾವನೆ'' ಎಂದೂ ಅವರು ಅಭಿಪ್ರಾಯಪಟ್ಟರು.

ಉತ್ತಮ ಕಂಬಳಿಗಳ ತಯಾರಿಕೆ

''ಬಳ್ಳಾರಿಯ ಕುಡುತಿನಿ ಕಂಬಳಿಗಳು ಪ್ರಖ್ಯಾತವಾದವು. ಅವು ನಾವಣಗೆರೆ ಕಂಬಳಿಗಳಷ್ಟೇ ಉತ್ಕೃಷ್ಟವಾದವು. ಒಳ್ಳೆಯ ತುಪ್ಪಟವನ್ನು ಕೊಡುವಂತಹ ಕುರಿಗಳ ತಳಿಗಳನ್ನು ಅಭಿವೃದ್ಧಿಗೊಳಿಸಲಾಗುತ್ತಿದೆ. ನಾವು ಬಿಕಾನೀರ್ ಟಗರುಗಳನ್ನು ಪ್ರಯೋಗಿಸಿ ಕುರಿಗಳ ತಳಿಗಳನ್ನು ಉತ್ತಮಪಡಿಸುತ್ತಿದ್ದೇವೆ'' ಎಂಬುದಾಗಿ ಡಾ|| ನಾಗನಗೌಡರು ನುಡಿದರು

ಈ ಸಂದರ್ಭದಲ್ಲಿ ನಾನೂ ಒಬ್ಬ ಕಾರ್ಯಕರ್ತ, ಎಂಬುದಾಗಿ ಮಂತ್ರಿಗಳು ನಗುತ್ತಾ ಹೇಳಿದರು.

''ಸಹಕಾರ ಚಳುವಳಿಯಲ್ಲಿ ತುಂಬಾ ನಂಬಿಕೆಯುಳ್ಳವನು ನಾನು. ವ್ಯವಸಾಯ ಯೋಜನೆಗಳು ಮತ್ತು ಉದ್ಯಮಗಳಿಗೆ ಹಣಕಾಸು ಒದಗಿಸುವುದಕ್ಕೆ ಸಹಕಾರವಿದ್ದಷ್ಟಿಂತ ಉತ್ತಮ ವಾದುದು ಇನ್ನಿಲ್ಲ'' ಎಂಬುದಾಗಿ ಅವರು ನುಡಿದರು

ಸಾಗುವಳಿಗೆ ವಿದ್ಯುಚ್ಛಕ್ತಿ ಸರಬರಾಜು

ಬಳ್ಳಾರಿಯ ರೈತರಿಗೆ ಸಾಗುವಳಿಗಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದುದು ಅಗತ್ಯವೆಂದು ಡಾ|| ನಾಗನಗೌಡರು ನುಡಿದರು. ಹಾಗೆ ಮಾಡಿದಲ್ಲಿ ರೈತರು ಮೈಸೂರು ಸರ್ಕಾರವನ್ನು ಸದಾ ಸ್ಮರಿಸುವರೆಂದೂ ಅವರು ಹೇಳಿದರು

ಈಗ ಕಪಿಲೆ ವಿಧಾನದಿಂದ ಒಂದು ಎಕರೆ ಜಮೀನಿಗೆ ನೀರೊದಗಿಸಲು 4 ರೂ. ವೆಚ್ಚ ಬೀಳುತ್ತಿದೆಯೆಂದೂ, ಅದೇ ವಿದ್ಯುಚ್ಛಕ್ತಿ ಮೂಲಕ ಒದಗಿಸಿದರೆ ಎಕರೆಗೆ ಎಂಟಾಣೆ ಖರ್ಚು ಸಹಾ ಆಗುವುದಿಲ್ಲವೆಂದೂ ಶ್ರೀ ನಾಗನಗೌಡರು ಹೇಳಿದರು. ಬಳ್ಳಾರಿಗೆ ಈಗಾಗಲೇ ನೈವೇಲಿಯಿಂದ ವಿದ್ಯುಚ್ಛಕ್ತಿ ಒದಗಿಸುತ್ತಿದ್ದರೂ ಅದಿನ್ನೂ ಬಳ್ಳಾರಿಯ ರೈತರನ್ನು ಮುಟ್ಟಲ್ಲವೆಂದು ನುಡಿದರು.

ಕಾಂಗ್ರೆಸ್ ಬಗ್ಗೆ ಎ. ಕೆ. ಗೋಪಾಲರ್ ಟೀಕೆ

ಕಾಂಗ್ರೆಸ್ಸು ತನ್ನ ಭರವಸೆಗಳಲ್ಲಿ ಹಿಂದೆ ಬಿದ್ದಿರುವುದಷ್ಟೇ ಅಲ್ಲದೆ ರಾಜ್ಯಾಂಗದ ನಿಯಮುಗಳನ್ನೂ ಮೀರಿ ನಡೆಯುತ್ತಿದೆಯೆಂದು ಕಮ್ಯೂನಿಸ್ಟ್ ಮುಖಂಡ ಶ್ರೀ ಎ. ಕೆ. ಗೋಪಾಲನ್ ಇಂದು ಇಲ್ಲಿ ತಿಳಿಸಿದರು.

ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ಐಕ್ಯತೆ ಒಡೆಯುವುದಿಲ್ಲವೆಂದೂ, ಅವರ ಬದಲು ಉಳಿಗ ಮಾನ್ಯ ಪದ್ಧತಿ ವಿರುದ್ಧ ಜನ ಹೆಚ್ಚು ಹೆಚ್ಚಾಗಿ ಒಂದುಗೂಡುವರೆಂದೂ ಅವರು ಹೇಳಿದರು.

ದೇಶದಲ್ಲಿ ಏರುತ್ತಿರುವ ನಿರುದ್ಯೋಗ ಸಮಸ್ಯೆಯನ್ನು ತಡೆಗಟ್ಟಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕೆಂದೂ ಅವರು ಒತ್ತಾಯ ಮಾಡಿದರು.

ನಿರುದ್ಯೋಗ ಸಮಸ್ಯೆ ನಿವಾರಣೆ ಹೇಗೆ?

ಶ ಶ

ನಿರುದ್ಯೋಗದ ಸಮಸ್ಯೆಯ ನಿವಾರಣೆಗೆ ಪಂಚ ವಾರ್ಷಿಕ ಯೋಜನೆಯಲ್ಲಿ ತಕ್ಕೆ ಸಿದ್ಧತೆಗಳನ್ನು ಮಾಡುವುದಾಗಿ ಭಾರತ ಸರ್ಕಾರದವರು ಸಿದ್ಧರಿರುವುದು ಆ ಬೃಹತ್ಪ್ರಶ್ನೆಯನ್ನು ಸ್ವಲ್ಪಮಟ್ಟಿಗೆ ಬಗೆ ಹರಿಸಿದಂತೆಯೇ ಎಂಬುದಾಗಿ ನಾವು ಹೇಳಬೆ ಪಡಿಯಿಲ್ಲ. ನಿರುದ್ಯೋಗ ಬಾಧೆಯನ್ನು ಈ ಕ್ಷಣ ಪರಿಹರಿಸುವುದು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಆದರೆ ಆ ಬಾಧೆಯನ್ನು ತಪ್ಪಿಸುವ ವಿಚಾರದಲ್ಲಿ ಸಾಧ್ಯ ಕಂಡ ಪ್ರಯತ್ನಗಳನ್ನು ಕೈಗೊಳ್ಳಬಹುದು. ದೇಶದ ಪ್ರತಿಯೊಬ್ಬರಿಗೂ ಉದ್ಯೋಗ ದೊರಕಿಸಿಕೊಡುವುದು ಸರ್ಕಾರದ ಕರ್ತವ್ಯಗಳಲ್ಲೊಂದೂ ಪರಾಧೀನತೆಯ ಸ್ಥಿತಿಯಿಂದ ಸ್ವಾತಂತ್ರ್ಯ ಸ್ಥಿತಿಗೆ ಒಂದೊಡನೆಯೇ ಆ ಭಿನ್ನ ಸ್ಥಿತಿಯನ್ನು ಕುದುರಿಸುವುದು ಯಾರಿಗಾದರೂ ಕಷ್ಟ. ಬ್ರಿಟಿಷ್ರ ಆಳ್ವಿಕೆಯಲ್ಲಿ ಎಲ್ಲರಿಗೂ ಉದ್ಯೋಗ ದೊರೆಯುತ್ತಿರಲಿಲ್ಲ ಒಪ್ಪತನವು ಭೀಕರವಾಗಿತ್ತು. ರೂಪಾಯಿಗೆ ಹದಿನಾರು ಸೇರು ಅಕ್ಕಿ ದೊರೆಯುತ್ತಿದ್ದಾಗಲೂ ಎಷ್ಟೋ ಜನ ಉಪವಾಸದಿಂದ ನರಳುತ್ತಿದ್ದರು. ಸ್ವತಂತ್ರ್ಯ ಬಂದ ತರುಣದಲ್ಲಿ ದೇಶಕ್ಕೆ ಅನೇಕ ಸಮಸ್ಯೆಗಳುದ್ಭವಿಸಿದವು ಲಕ್ಷಾಂತರ ಮಂದಿ ನಿರಾಶ್ರಿತರನ್ನು ಕಾಪಾಡಬೇಕಾಯಿತು ನೀರಾವರಿ ಕಾನುಗಾರಿಗಳಿಗೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಹಾಕಿ ಅವನ್ನು ಸಿದ್ಧಗೊಳಿಸಬೇಕಾಗಿತ್ತು. ನಾಡಿನ ಭಾರಿ ಕೈಗಾರಿಕೋದ್ಯಮಗಳಲ್ಲಿ ಎಷ್ಟೋ ಮಂದಿ ತರುಣರಿಗೆ ಉದ್ಯೋಗ ದೊರೆತಿದೆ. ಆದರೂ ಈ ಸಮಸ್ಯೆ ಇನ್ನೂ ಭೀಕರವಾಗಿದೆ. ಪಂಚ ವರ್ಷಿಕ ಯೋಜನೆಯ ಕಾರ್ಯಕ್ರಮಗಳು ಎಲ್ಲಾ ಕಡೆಯೂ ಆರಂಭವಾದರೆ ಆಗ ಈ ಬಾಧೆ ಸ್ವಲ್ಪಮಟ್ಟಿಗೆ ಪರಿಹಾರವಾಗಬಹುದು. ಈಗ ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಿದೆ ಯಾದರೂ, ಅವರಿಗೆ ಕೆಲಸಕ್ಕೆ ತಕ್ಕವರು ಸಿಕ್ಕದೆ ಯೋಚನೆಯಾಗಿದೆ. ನಮ್ಮ ಹಳೆಯ ವಿದ್ಯಾಭ್ಯಾಸ ಪೋಷಗಳಿಗಾಗಿ ಓದಿಸುವುದೇ ಹೊರತು, ಭಾರಿ ಭಾಷಿಕ ವಿಧಾನಗಳಲ್ಲಿಯೂ, ಔದ್ಯೋಗಿಕ ವಿಧಾನಗಳಲ್ಲಿಯೂ ಪರಿಶ್ರಮ ಹೊಂದಿಲ್ಲ. ಪ್ರಾಂತೀಯ ಮನೋಭಾವನೆಯಿಂದ ಒಂದು ಪ್ರಾಂತ್ಯದವರಿಗೆ ಇನ್ನೊಂದು ಪ್ರಾಂತ್ಯದಲ್ಲಿ ಉದ್ಯೋಗ ಸಿಗುವುದು ಕಷ್ಟವಾಗಿದೆ. ಉದ್ಯೋಗ ಸೌಕರ್ಯವುಳ್ಳ ಭಾರಿ ಸಂಸ್ಥೆಗಳಲ್ಲಿ ಮೇಲಧಿಕಾರಿಗಳ ಪ್ರಾಂತೀಯ ಪಕ್ಷಪಾತದಿಂದ ಅಹರ್ತೆಯುಳ್ಳ ಅನೇಕರಿಗೆ ಕೆಲಸ ಸಿಕ್ಕದೆ ಅವರು ಒದ್ದಾಡುತ್ತಿದ್ದಾರೆ. ಇವೆಲ್ಲಾ ಹೋಗಿ ಅಖಿಲ ಭಾರತದ ದೃಷ್ಟಿ ಪರಿಸಿದರೆ ಆಗ ಎಲ್ಲವೂ ಸರಿಯೋದೀತು. ನಿರುದ್ಯೋಗ ಸಮಸ್ಯೆಯನ್ನು ಯೋಜನಾರೂಪವಾಗಿ ಪರಿಹರಿಸಬೇಕೇ ಹೊರತು ಅಲ್ಲಿ ಇಲ್ಲಿ ಕೇಪೆ ಹಾಕುವುದರಿಂದ ಪ್ರಯೋಜನವಿಲ್ಲ. ಯಾವ ಕಡೆ ಎಷ್ಟರಮಟ್ಟಿನ ಔದ್ಯೋಗಿಕ ಸೌಲಭ್ಯಗಳವೆ ಎಂಬುದನ್ನು ನೋಡಿಕೊಂಡು ಅಷ್ಟು ಮಂದಿಯನ್ನು ತರಬೇತು ಮಾಡಬೇಕು. ಎಲ್ಲರಿಗೂ ವಿಶ್ವವಿದ್ಯಾಲಯದ ಶಿಕ್ಷಣ ಕೊಡುವುದಾಗಲಿ ಅಥವಾ ಎಲ್ಲರನ್ನೂ ಇಂಜನಿಯರುಗಳಾಗಿ ತರಬೇತು ಮಾಡುವುದಾಗಲಿ ತಪ್ಪು ಪ್ರಾಂತೀಯ ಭಾವನೆ ಮೊಳಲು ಹೋಗಬೇಕು. ದ್ವಿಸಂತರಿಗೂ ಎಲ್ಲಾ ಕಾಲಕ್ಕೂ, ಎಲ್ಲಾ ಕಡೆಯೂ ಉದ್ಯೋಗವು ದೊರೆಯಬೇಕು. ಈಗಾದರೆ ಈ ಸಮಸ್ಯೆ ಬಗೆಹರಿದಂತೆಯೇ ಸರಿ. ನಮ್ಮ ಆಡಳಿತಗಾರರು ಈ ಸಮಸ್ಯಾ ನಿವಾರಣೆಯ ಕ್ರಮದಲ್ಲಿ ಯೋಜನಾರೂಪದ ಏರ್ಪಾಡುಗಳಿಗೆ ಮೊದಲು ಗಮನ ಕೊಡಬೇಕು.

ಹೊಸದಿನ

ಬಾರದಿನವೆ, ಪೈರೋ ಬಾರದಿರಗಂಟಗಳಲಿ ತೋರಾ..!
ಎದೆಯ ಒಳಗಲಿವುಗಳಲಿ ಕೊರಳ
ಸವಿಹಾಡ ಕೇಳ ಬಾರಾ....!!

ಕೆಂಪುವ ನಂಜು ಎಸೆಕೊಡಿವ ಸುಂಜು
ಒಳಬಂದು ನೆರೆದುವೆನ್ನ
ವನ ಜಾತ ತಿಳಿ ಬೆಳಕ ತೋರ
ನಗ ನಯವು ಅಳವ ಮನ್ನೆ

ಕೊರಸಿರುಳಿನಲಿ ಕುಳಿರು ಗಾಳಿಗಳು
ಕೊರೆಮನೆನ್ನ ಎದೆಯಾ....!
ಎದೆಯ ಆಜಿಕೆಯು ದಾರಿ ತಡೆದು
ತಡೆ ತಡೆಯಿತೆನ್ನ ನಡೆಯಾ..!!

ಇಸಳು ಕತ್ತಲೆಯ ಮುಸುಕಿನೊಳಗೆ
ಕಾಸುಗಾರಿಲ್ಲಿ ಚಲುವು
ಜೀವರಸವು ಎದೆಗೇರಲಿಲ್ಲ
ಅರಳಾಗಲಿಲ್ಲ ಒಲವು.

ಮಬ್ಬುಗತ್ತಲ ಕಲ್ಲಮುಳ್ಳಿ ಹಾದು
ನಡೆವದಾರಿ ತೋರಾ..!
ಎದೆಯ ನೋವುಗಳ ನವೆಸುಖವು
ಮನದಳಲ ತಣಿಸು ಬಾರಾ...!

ಹೊಸತು ಬರಲಿ, ಅದು ಜಳಗಿ ಬರಲಿ
ಹೊಸ ಕಳೆಯ ತಳೆದು ಬರಲಿ...!
ಬಾರದಿನವೆ, ಹೊಸ ಹುಟ್ಟು ಬರಲಿ
ತಿಳಿ ಬೆಳಕ ಮೂಡಿಸಿರಲಿ....!!!

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸೀಫರ ಕೋರ್ಟಿನಲ್ಲಿ

O. P 29/1953

ಅರ್ಜಿದಾರ :- S. M. ವಿಶ್ವನಾಥಯ್ಯ ತಂದೆ S. M ಕೊಟ್ರಯ್ಯ ಸಿದ್ಧಾಂತಿ 21 ವರುಷ್ಟು, ಲಿಂಗಾಯತ, ಲ್ಯಾಂಡ್ ಲಾರ್ಡ್–ವ್ಯ, ಕೀರೇಹಡಗಲಿ. ತಾ ಹಡಗಲಿ

ಮೇಲ್ಕಂಡ ನಂಬರಿನಲ್ಲಿ ಅರ್ಜಿದಾರನು ನ್ಯಾಷನಲ್ ಸ್ಟಾರ್ ಅಂಡ್ ಕೆಮಿಕಲ್ಸ್ ಲಿಮಿಟೆಡ್ ಇವರ ಕಡೆಯಿಂದ ವ್ಯತಪಟ್ಟ ತನ್ನ ತಂದೆಯಾದ S. M. ಕೊಟ್ರಯ್ಯ ಸಿದ್ಧಾಂತಿ ಇವರ ಮರಣ ಕಂದು 606–0–0 ರೂಗಳನ್ನು ಒರಮಾಡಿಕೊಳ್ಳಲು ವಾರಸು ಸರ್ಟಿಫಿಕೇಟ್ರಿಗಾಗಿ ಅರ್ಜಿ ದಾಖಲು ಮಾಡಿರುತ್ತಾನೆ.

ಸದರಿ ಅರ್ಜಿಗೆ ಯಾರದಾದರೂ ತಕರಾರು ಇದ್ದಲ್ಲಿ ಮುಂದೆ ದಿನ 16–11–53 ನೆಯ ತಾರೀಖು ಮೇಲ್ಕಾಣಿಸಿದ ಕೋರ್ಟಿನಲ್ಲಿ ಖುದ್ದಾಗಿಯಾಗಲಿ, ವಕೀಲರ ದ್ವಾರಾಗಲಿ ಹಾಜರಾಗಿ ತಮ್ಮ ತಕರಾರನ್ನು ಸಾಬರಪಡಿಸತಕ್ಕದ್ದೆಂದು ಈ ಪ್ರಕಟಣೆ ದ್ವಾರ ಸಕಲರಿಗೂ ತಿಳಿಯಪಡಿಸಲಾಗಿದೆ.

ಎ. ಚನ್ನಬಸಪ್ಪ
ಅರ್ಜಿದಾರರ–ಅಡ್ವೋಕೇಟ್

Matinee at PRABHAT

3 DAYS 4 SHOWS FROM 6th Nove 1953

20th Fox's Present

LURE of the WILDERNESS

Technicolor

—: ಬಳ್ಳಾರಿ ಪ್ರಭಾತದಲ್ಲಿ :—

31-10-53 ರಿಂದ

ಗೂನ್‌ಜ್‌★ (ಹಿಂದೀ ಚಿತ್ರ)

ತಾರಾಗಣ :- ಸುರಯ್ಯ, ಸುರೇಶ್, ಮೊದಲಾದವರು

★ ವೀರ ಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಕ್ಕಳವನರಿಗೆ 5 ರೂಪಾಯಿ.

,, ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

Coming at "PRABHAT"

Watch for the Date

Warner Bros Astounding Feature in natural vision.

3 Dimension

★HOUSE OF WAX★

COLOR BY WARNER COLOR

ಶ್ರೀ ಗೋಲ್ವಾಲ್ಕರ್ ಆಗಮನ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥರಾದ ಶ್ರೀ ಎಂ. ಎಸ್ ಗೋಲ್ವಾಲ್ಕರ್ ರವರು ತಾರೀಖು 26-10-53ರಂದು ಬಳ್ಳಾರಿಗೆ ಬಂದರು ಸಂಜೆಯ ಸ್ವಯಂಸೇವಕರು ನಿಲಾಣದಲ್ಲಿ ಎದುರುಗೊಂಡು ಕರೆತಂದರು. ಸಾಯಂಕಾಲ ಸಾಲು ಗಂಟೆಗೆ ಸತ್ಯಾರವು ಸೆಂಟ್ರಲ್ ಕೋ-ಆಪರೇಟಿವ್ ಭವನದಲ್ಲಾಗಿ ಅವರು ತಮ್ಮ ನಿಲುವೆಯನ್ನು ಹಿಂದಿಯಲ್ಲಿ ವಿವರಿಸಿದರು. ಪ್ರಶ್ನೋತ್ತರಗಳಾದವು.

ಬಿ. ಡಿ. ಎ ಮೈದಾನದಲ್ಲಿ ಸಭೆ ಆಯಿತು. ಪ್ರಾಚೀನ ಭಾರತ ಸಂಸ್ಕೃತಿಯ ಪುನರುತ್ಥಾನವಾಗಬೇಕು. ಪ್ರಜಾತಂತ್ರ ತತ್ವಗಳಿಗನುಸಾರವಾಗಿ ಬಹು ಸಂಖ್ಯಾತರ ಅಭಿವಾಯಕ್ಕೆ ಮನ್ನಣೆ ಬೇಕು ಕೃತಕ ವಿಭಜನೆ ಯನ್ನು ಅಂತ ಗೊಳಿಸಿ ಅಖಂಡ ಭಾರತ ನಿರ್ಮಾಣವಾಗಬೇಕು. ಸಂಘಟನೆಗೆ ಪ್ರಾಶಸ್ತ್ಯ ಕೊಡಬೇಕು. ಎಲ್ಲ ವರ್ಗಗಳವರಲ್ಲಿಯೂ ಏಕಮತ್ಯ ಬೇಕು" ಎಂಬುವೇ ಅವರ ಭಾಷಣದ ಸಾರಾಂಶವಾಗಿದ್ದಿತು.

ಬಳ್ಳಾರಿಯಲ್ಲಿ ಡಾ॥ ರಾಧಾಕೃಷ್ಣನ್ ರಿಗೆ ಸ್ವಾಗತ

ಭಾರತದ ಉಪ ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಹೊಸಪೇಟೆಗೆ ಹೋಗುವಾಗ್ಗೆ ಬಳ್ಳಾರಿ ರೈಲ್ವೆ ನಿಲ್ದಾಣದಲ್ಲಿ ಅ. 25ರಂದು ಸಾವಿರಾರು ಜನ ಸೇರಿ ಸ್ವಾಗತಬಯಸಿದರು. ಪೌರ ಸಭಾಧ್ಯಕ್ಷರಾದ ಶ್ರೀ ಮುಲ್ಲಂಗಿಡೊಡ್ಡ ಬಸಪ್ಪನವರು ಹೂಮಾಲೆ ಹಾಕಿದರು. ಬಳ್ಳಾರಿ ಆಂಧ್ರ ಸಮಿತಿಯವರೂ ಇತರ ಸಂಘಗಳವರೂ ಹೂಮಾಲೆಗಳಿಂದ ಗೌರವಿಸಿದರು.

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
6ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.		Subscription will not be accepted for less than 6 months	

To 2-11-53

Sri.

Edited Printed& Published by T. B. Keshava Rao, at Nava Bharat Press, Bellry.

ನಾಗರಿಕನಿ

ಸೋಮವಾರ
ನವಂಬರ್
೧೬, ೧೯೫೩

ವರ್ಷ 16
ಸಂಚಿಕೆ 29

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿ ಬೋಧತ !!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವು

YOUTH FESTIVAL Hospet

From December 26th to 30th 1953.

ಯುವಜನ ಮಹೋತ್ಸವ

ಹೊಸಪೇಟೆ ಯುವಜನ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀಮುರಾರಿ ವೆಂಕಟಸ್ವಾಮಿಯವರು ಈ ರೀತಿ ಬರೆಯುತ್ತಾರೆ—

'ಡಿಸೆಂಬರ್‌ನಲ್ಲಿ ಹೊಸಪೇಟೆಯಲ್ಲಿ ಯುವಜನ ಮಹೋತ್ಸವವನ್ನು ನೆರವೇರಿಸುವುದಾಗಿ ನಿಶ್ಚಯಿಸಿದೆ. ತಮ್ಮೆಲ್ಲರಿಗೂ ತಿಳಿದಂತೆ ಈ ಉತ್ಸವವನ್ನು ಕಳೆದ ವರ್ಷ ಬಳ್ಳಾರಿಯಲ್ಲೂ, ಅದರ ಹಿಂದಿನ ವರ್ಷ ಕೂಡ್ಲಿಗಿಯಲ್ಲೂ ಅತ್ಯಂತ ವಿಜೃಂಭಣೆಯಿಂದ ಜರುಗಿಸಲಾಯಿತು. ಈ ಉತ್ಸವವನ್ನು ಹೊಸಪೇಟೆಯಲ್ಲಿ ಜರುಗಿಸುವ ಉದ್ದೇಶದಿಂದ ಅನೇಕ ಪುರಪ್ರಮುಖರನ್ನೊಳಗೊಂಡ ಯುವಜನೋತ್ಸವ ಸಮಿತಿಯೊಂದನ್ನು ಏರ್ಪಡಿಸಿದೆ.

ಇಂತಹ ರಾಷ್ಟ್ರೀಯ ಉತ್ಸವಗಳಿಂದ ಯುವಜನರು ಒಂದೆಡೆ ಕೂಡಿ ಬೆರೆತು ಜಾತಿ, ಮತ, ಬಾವುಟಗಳ ತಡೆಗಳನ್ನು ಮರೆತು ರಾಷ್ಟ್ರೀಯ ಐಕ್ಯತೆಯ ಸಾಧನೆಗೆ ಸಹಾಯಕರಾಗುವುದೆಂದು ಆಶಿಸಲಾಗಿದೆ. ಇದಲ್ಲದೆ ಈ ಉತ್ಸವದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಅವರು ತನ್ಮೂಲಕ ಶಾರೀರಿಕ ಮಾನಸಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಹೊಂದಲು ಉತ್ತೇಜನವನ್ನು ಪಡೆಯುವರೆಂಬ ಭರವಸೆಯು ನನಗೆ ಪೂರ್ಣವಾಗಿದೆ.

ಈ ಉತ್ಸವದಲ್ಲಿ ಫುಟ್‌ಬಾಲ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಬೇಸ್‌ಬಾಲ್, ಚಡುಗುಡು ಮುಂತಾದ ಆಟಗಳೂ ಓಟುಗಳೂ, ನೆಗೆತಗಳೂ ಏಕಾಂಕ ನಾಟಕ ಮತ್ತು ಸಂಗೀತ ಸ್ಪರ್ಧೆಗಳೂ ಮತ್ತು ಇನ್ನಿತರ ಅನೇಕ ಕಾರ್ಯಕಲಾಪಗಳೂ ಕೂಡಿವೆ.

ಆದರೆ ಇಂತಹ ಮಹತ್ಕಾರ್ಯಗಳನ್ನು ನಡಸಲು ಬಹಳ ಧನ ಬೇಕಾಗುತ್ತದೆ ಸುಮಾರು ರೂ. 7 ಸಾವಿರಗಳಾದರೂ ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಹಣವನ್ನು ಚಂದಾ ಮೂಲಕವೇ ಪಡೆಯಬೇಕಾದ ಕಾರಣ ಎಲ್ಲ ಪುರಜನರೂ, ಮುನಿಸಿಪಾಲಿಟಿ, ಜಿಲ್ಲಾ ಬೋರ್ಡು, ಪಂಚಾಯತಿ ಬೋರ್ಡು, ವಿದ್ಯಾ ಸಂಸ್ಥೆಗಳು ಮತ್ತು ಇನ್ನಿತರ ಸಾರ್ವಜನಿಕ ಸಂಸ್ಥೆಗಳೂ ಈ ಕಾರ್ಯಕ್ಕೆ ಧನ ಸಹಾಯವನ್ನು ತಪ್ಪಿ ರಕ್ತಿವಿಾರಿ ಮಾಡಬೇಕೆಂದು ಕೋರುತ್ತೇನೆ

ಪ್ರತಿಯೊಂದು ಆಟವನ್ನೂ ಆಯಾ ಪ್ರಾಂತೀಯ ಸಂಸ್ಥೆಗಳಿಗೆ ದಾಖಲೆ ಮಾಡುವುದರಿಂದ ಸ್ಪರ್ಧೆಗಾರರೂ ಮತ್ತು ಆಟಗ ತಂಡಗಳೂ ಬಹಳ ಉಚ್ಚ ದರ್ಜೆಯವರೂ ಬರಬಹುದು. ಬಂದ ಆಟಗಾರರಿಗೆ ಉಚಿತ ಭೋಜನ ಮತ್ತು ವಸತಿ ಸೌಕರ್ಯಗಳನ್ನು ಒದಗಿಸಲೇಕಾಗಿದೆ.

ವಯಸ್ಕರ ಶಿಕ್ಷಣ ಸಮಿತಿ ಸಭೆ

ವಯಸ್ಕರ ಶಿಕ್ಷಣ ಸಮಿತಿ ಸಭೆಯು ಡೆಪ್ಯೂಟಿ ಕಮಿಷನರ್ ಶ್ರೀ ಕೆ. ವೇಣುಗೋಪಾಲರಾಯರ ಅಧ್ಯಕ್ಷತೆಯಲ್ಲಿ ತಾ೧೯-೧೧-೫೩ ರ ಸಾಯಂಕಾಲ ಸಮಾವೇಶವಾಗಿದ್ದಿತು. ಕಾರ್ಯದರ್ಶಿ ಶ್ರೀ ಕೋ. ಚಿನ್ನಪ್ಪಸ್ವಾಮಿಗಳಿಗೆ ಬ್ಯಾಂಕಿನಲ್ಲಿ ಲೆಕ್ಕವನ್ನು ಪ್ರಾರಂಭಿಸಲು ಮತ್ತು ಹಣದ ವ್ಯವಹಾರ ಮಾಡಲು ಅಧಿಕಾರವನ್ನು ಕೊಡಲಾಯಿತು. 1954 ನೆಯ ಮಾರ್ಚಿ ಆಖೈರಿಗೆ ಅಂತ್ಯವಾಗುವ ವರ್ಷಕ್ಕೆ 5 ಸಾವಿರ ರೂ. ಖರ್ಚು ಮಾಡುವ ಅವಕಾಶ ಕೊಟ್ಟಿರುವುದಾಗಿಯೂ, ಸಮಿತಿಯು ತಿಂಗಳಿಗೆ ೫೦ ರೂ. ಪರಿಗೂ ಬಾಡಿಗೆಯ ಕಟ್ಟಡ, ಒಬ್ಬ ಗುಮಾಸ್ತ ಸೇವಕ ಮತ್ತು ತಲಾ ೫೦ ರೂ. ವೇತನದ ನಾಲ್ಕು ಜನ ಸೂಪರ್‌ವೈಸರ್‌ಗಳನ್ನು ಒದಗಿಸುವುದಾಗಿಯೂ ಪ್ರಧಾನಾಧಿಕಾರಿ ಶ್ರೀ ಟಿ. ವಿ. ತಿಮ್ಮಪ್ಪಗೌಡರು ತಿಳಿಸಿದರು ಇತರ ಖರ್ಚುಗಳ ಬಗ್ಗೆ ಅಂದಾಜು ಪಟ್ಟಿಯೊಂದನ್ನು ಮುಂದಿನ ಸಭೆಯಲ್ಲಿ ಸ್ಥಾಪಿಸಲು ಸೂಚಿಸಿದರು.

30 ರೂ. ಕೊಟ್ಟ ಗ್ರಾಮದವರಿಗೆ ಲೈಬ್ರರಿಗಾಗಿ ಸಮಿತಿಯು 70 ರೂ. ಕೊಡುತ್ತದೆ. ಒಂದು ನೂರು ಸಾಕ್ಷರರ ತರಗತಿಗಳನ್ನು ಆರಂಭಿಸಿ ಸಾಕ್ಷರನಾದ ಪ್ರತಿಯೊಬ್ಬನಿಗೆ ೨ ರೂ. ಸಂಭಾವನೆ ಕೊಡುವ ವಿಧಾನವನ್ನು ವಿವರಿಸಿ ಹೇಳಲಾಯಿತು. ಫೋಕ್ ಆರ್ಟ್ಸ್ ಫೈಸ್ಟಿವಲ್ ಮತ್ತು ಪೀಪಲ್ಸ್ ಎಜುಕೇಷನ್ ಅಸೋಸಿಯೇಷನ್‌ನ ಧ್ಯೇಯಗಳನ್ನು ವಿವರಿಸಿದರು.

—: ಬಳ್ಳಾರಿ ಪ್ರಭಾತದಲ್ಲಿ :—

ಶೀಘ್ರದಲ್ಲೇ ಬರಲಿದೆ.

ರೋಹಿಣಿಯವರ

★ ಪ್ರತಿಜ್ಞೆ ★

ತಾರಾಗಣ:— ಸಾವಿತ್ರಿ, ಮಧು, ಸೀತ, ಸಾರಂಗಪಾಣಿ

ಕಮ್ಯೂನಿಸ್ಟರಿಗೆ ವಿನೋಬಾರ ಉತ್ತರ

:- ತಮ್ಮ ಕಾರ್ಯದ ಬಗ್ಗೆ ಸಮರ್ಥನೆ -:

ವಿರುದ್ಧ ಪಕ್ಷದವರನ್ನು ತಮ್ಮ ಅಭಿಪ್ರಾಯದ ಕಡೆ ಒಲಿಸಿಕೊಳ್ಳುವುದರ ಮೂಲಕ ತಾವು ಹೇಗೆ ಅವರ ಬೆಂಬಲ ಮತ್ತು ಸಹಾನುಭೂತಿಗಳನ್ನು ಪಡೆದ ರೆಂಬುದನ್ನು ಆಚಾರ್ಯ ವಿನೋಬಾ ಭಾವೆ ಈ ದಿನ ಇಲ್ಲಿಗೆ ಸಮೀಪದ ಬೆಹತ್ ಎಂಬ ಹಳ್ಳಿಯಲ್ಲಿ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು.

ತಮ್ಮ ಕಾರ್ಯ ನಿಧಾನವಲ್ಲಿ ನಂಬಿಕೆ ಇಡಬೇಕೆಂದು ಆಚಾರ್ಯ ವಿನೋಬಾ ರವರು ಕಮ್ಯೂನಿಸ್ಟರನ್ನುದ್ದೇಶಿಸಿ ತಿಳಿಸಿದರು.

ಕಮ್ಯೂನಿಸ್ಟರು ಒಳ್ಳೆಯವರನ್ನೂ ಕೆಟ್ಟವರನ್ನೂ ಸಮಾನವಾಗಿ ಪರಿಗಣಿಸುವುದರಿಂದ ಅವರ ಎಮರುಪಕ್ಷದಲ್ಲಿರುವ ಒಳ್ಳೆಯವರ ಸಹಾನುಭೂತಿ ಮತ್ತು ಬೆಂಬಲಗಳನ್ನು ಕಳೆದುಕೊಳುತ್ತಿದ್ದಾರೆಂದು ಆಚಾರ್ಯಭಾವೆ ತಿಳಿಸಿದರು.

ರಾಜಮಹಾರಾಜರ ಮತ್ತು ಜಮೀನ್ದಾರರ ನಿಸ್ಪೃಹತೆಯನ್ನು ಕಮ್ಯೂನಿಸ್ಟರು ನಂಬುತ್ತಿಲ್ಲವೆಂದೂ, ನಂಬದೆ ಇರಲು ಕಾರಣವಿಲ್ಲವೆಂದೂ, ರಾಜ ಮಹಾರಾಜರು ನಿಜವಾಗಿ ನಿಸ್ಪೃಹರಾಗಿರದಿದ್ದಲ್ಲಿ ಅವರ ವಿಧಾನ ಖಂಡಿತವೆಂದೂ ಆಚಾರ್ಯ ಭಾವೆ ಹೇಳಿದರು. ಮಹಾರಾಜರೂ ಜಮೀನ್ದಾರರೂ ಒಂದು ವೇಳೆ ತತ್ವನಿಷ್ಠರಾದರೂ ಪೋಸಮಾಡಿದರೆ ಅವರ ದುಸ್ಪೇಕ್ಷ ಬಯಲಾಗುವುದೆಂದು ಆಚಾರ್ಯ ಭಾವೆ ಹೇಳಿದರು.

ತಾವು ಜಮೀನಿಲ್ಲದ ರೈತರ ಸಂಘಟನೆಯನ್ನು ಮಾಡುವ ಬದಲು ಹೃದಯ ಪರಿವರ್ತನೆಗೇ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರುವುದಕ್ಕಾಗಿ ತಮ್ಮನ್ನು ಕಮ್ಯೂನಿಸ್ಟರು ಆಕ್ಷೇಪಿಸಿರುವುದನ್ನು ಆಚಾರ್ಯ ಭಾವೆಯವರು ಪ್ರಸ್ತಾಪಿಸಿ, ಕಮ್ಯೂನಿಸ್ಟರು ತನ್ನೊಡನೆ ಬಂದು ತಮ್ಮ ಸಂದೇಶವನ್ನು ಕೇಳಲು ಜಮೀನಿಲ್ಲದೆ ರೈತರು ಹೇಗೆ ಸಹಸ್ರ ಸಂಖ್ಯೆಯಲ್ಲಿ ಬಂದು ಸೇರುತ್ತಾರೆಂಬುದನ್ನೂ, ಅಲ್ಲಿ ಕಂಡುಬಂದಿರುವ ಜಾಗೃತಿಯನ್ನು ನೋಡಬೇಕೆಂದೂ ಹೇಳಿದರು.

"ಮೊದಲು ಕಮ್ಯೂನಿಸ್ಟರೇ ಭೂದಾನಯಜ್ಞ ತಮ್ಮ ವಿರುದ್ಧ ಚಳವಳಿ ಎಂದು ಭಾವಿಸಿ. ಅವರನ್ನು ವಿರೋಧಿಸಲಿಲ್ಲವೆ? ಈಗ ಅವರೇ ನನ್ನ ಪ್ರಯತ್ನಗಳನ್ನು ಮೆಚ್ಚಿ, ಆದಕ್ಕೆ ವಿರೋಧ ಸೂಚಿಸುವುದನ್ನು ಬಿಟ್ಟಿಲ್ಲವೆ? ಇದು ಹೃದಯ ಪರಿವರ್ತನೆ ಅಲ್ಲದೆ ಮತ್ತೇನು?" ಎಂದು ಆಚಾರ್ಯ ಭಾವೆ ಕೇಳಿದರು.

ಬಡವರಿಂದಲೂ ಸಣ್ಣಪುಟ್ಟ ಹಿಡುವಳಿದಾರರಿಂದಲೂ ದಾನಗಳನ್ನು ಸ್ವೀಕರಿಸುತ್ತಿರುವುದಕ್ಕೆ ಬಂದಿರುವ ಆಕ್ಷೇಪಣೆಯನ್ನು ಆಚಾರ್ಯಭಾವೆ ಪ್ರಸ್ತಾಪಿಸಿ ಮಾಲೀಕ ಮನೋಭಾವವನ್ನು ಹೋಗಲಾಡಿಸುವುದೇ ತಮ್ಮ ಉದ್ದೇಶವೆಂದೂ ಪ್ರತಿಯೊಬ್ಬರೂ ತಮ್ಮ ಹಕ್ಕನ್ನು ಸಮಾಜಕ್ಕೆ ಒಪ್ಪಿಸ ಬೇಕೆಂದು ಅರಿಯುವಂತೆ ಮಾಡುವುದೇ ತಮ್ಮ ಉದ್ದೇಶವೆಂದೂ ಆಚಾರ್ಯ ಭಾವೆ ಹೇಳಿದರು.

ರಾಷ್ಟ್ರಪತಿ ಭವನದ ಬಳಿ ಒಬ್ಬನ ದಸ್ತಗಿರಿ

ಪಂಜಾಬಿ ಪ್ರಾಂತ ರಚನೆಗೆ ಒತ್ತಾಯ ಸೂಚಿಸಲು

ಪೆಪ್ಸು ಪ್ರಾಂತದಿಂದ ಬಂದನೆಂದು ಹೇಳಲಾದವನೊಬ್ಬನನ್ನು ಸೋಮವಾರ ಪೆಹಲಿ ಪೋಲೀಸಿನವರು ರಾಷ್ಟ್ರಪತಿ ಭವನದ ಬಳಿ ದಸ್ತಗಿರಿ ಮಾಡಿದರು.

ಪಂಜಾಬಿ ಭಾಷಾ ಪ್ರಾಂತ ರಚನೆ ಯಾಗಬೇಕೆಂಬ ಕೋರಿಕೆಗೆ ಸಹಾನುಭೂತಿ ತೋರಲು ತಾನು ಉಪವಾಸ ಮುಷ್ಕರ ನಡೆಸುತ್ತಿರುವುದಾಗಿ ತಿಳಿಸಿದ ಒಂದು ಪ್ರಕಟನೆ ಪತ್ರವನ್ನು ಆತ ಹಿಡಿದಿದ್ದನೆಂದು ತಿಳಿದುಬಂದಿದೆ.

ಆತ ಕೂಡಲೇ ದೆಹಲಿ ಪ್ರಾಂತವನ್ನು ಬಿಟ್ಟು ಹೊಗಬೇಕೆಂದೂ, ಇಲ್ಲದಿದ್ದಲ್ಲಿ ೩ ದಿನಗಳ ಕಾಲ ದೆಹಲಿ ಪ್ರಾಂತಕ್ಕೆ ಕಾಲಿಡಬಾರದೆಂದೂ ದೆಹಲಿಯ ಆಡಳಿತದ ಜಿಲ್ಲಾ ಮ್ಯಾಜಿಸ್ಟ್ರೇಟರು ಆತನಿಗೆ ಆಜ್ಞೆ ಮಾಡಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ನಿವಾರಣಾ ಯೋಜನೆಯಿಂದ ಜನತೆಗೆ ಮತ್ತು ದೇಶಕ್ಕೆ ಕ್ಷೇಮವಾಗಿಲಿ, ಎಂದು ಶ್ರೀಮನ್ಮಹಾರಾಜರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

ಹೊಸಪೇಟೆ ಡಿಸ್ಟ್ರಿಕ್ಟ್ ಮುನಸೀಫರ ಕೋರ್ಟಿನಲ್ಲಿ

O. P. NO. 26/1953

ಮಹಮ್ಮದ್ ಇಬ್ರಾಹಿಂ .... ಅರ್ಜಿದಾರ

1) ಮಹಬೂಬ್‌ಬಿ
2) ಮಹಮದ್ ಇಸ್ಮಾಯಿಲ್
3) ಜೈನಾಬ್‌ಬಿ
4) ಫಾತಿಮಾಬಿ
5) ಮಹಮದ್ ಅಬ್ದುಲ್ಲಾ
6) ಸಕೀನಾಬಿ

} ಪ್ರತಿವಾದಿಗಳು

ಮೇಲ್ಕಂಡ ನಂಬರಿನಲ್ಲಿ ಅರ್ಜಿದಾರನ ತಂದೆ ಅಬ್ದುಲ್ ರಹಿಮಾನ್ ಮಸ್ತ್ಯಾಗುತ್ತಿ ತಾಲೂಕು ಗುಂತಕಲ್ಲು ಗ್ರಾಮದಲ್ಲಿ ತಾ. 26-5-1953 ರಲ್ಲಿ ಮೃತಪಟ್ಟಿರುತ್ತಾರೆ. ಇವರು ಬಳ್ಳಾರಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರೂ. 7000-0-0 ಡಿಪಾಜಿಟ್ ಇಟ್ಟಿರುತ್ತಾರೆ. ಸದರಿ ನಿಧ್ಯನನ್ನು ವಸೂಲು ಮಾಡುವುದಕ್ಕೆ ವಾರಸು ಸರ್ಟಿಫಿಕೇಟ್ (*Succession Certificate*) ಪಡೆಯಲು ಅರ್ಜಿದಾರನು ಅರ್ಜಿ ದಾಖಲು ಮಾಡಿರುತ್ತಾನೆ. ಮೇಲೆ ಕಾಣಿಸಿದ ಪ್ರತಿವಾದಿಗಳಿಗೆ ಮತ್ತು ಇತರ ಯಾರಾದರೂ ಆಸ್ಪದಿದ್ದಲ್ಲಿ, ನಿನಾವರೂ ಆಕ್ಷೇಪಣೆ ಇದ್ದಲ್ಲಿ ತಾ. 21-11-53 ರ ಉದಯ 10-30 ಗಂಟೆಗೆ ಸರಿಯಾಗಿ ಸದರಿ ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದು. ಹೀಗೆ ಮಾಡಲು ತಪ್ಪಿದಲ್ಲಿ ಏಕಪಕ್ಷವಾಗಿ ವಿಚಾರಣೆ ನಡೆಸಲ್ಪಡುತ್ತದೆ.

V. A. SAYEED
Advocate for the petitioner.

ಸಾರಥಿ ನೆಹರು ಶತಾಯುವಾಗಲಿ!

ಅವರಿಂದ ಭಾರತದ ಭವಿಷ್ಯ ಬೆಳಗಲಿ.

ಮಹಾಕವಿ ಇಕ್ಬಲ್ ಒಂದು ಸಾರಿ ಪಂಡಿತ ನೆಹರೂ ಕುರಿತು:ಹೀಗೆ ಹೇಳಿದ್ದರು 'ನಿನ್ನನ್ನು ರಾಜಕಾರಣಿ ಎನ್ನುವುದಕ್ಕಿಂತಲೂ 'ದೇಶಭಕ್ತ' ಎನ್ನುವುದೇ ಹೆಚ್ಚು ಒಪ್ಪುತ್ತದೆ,

ಈ ಮಾತಿನಲ್ಲಿ ಸಾವಿರ ಅರ್ಥದ ಗಂಭೀರ ಸತ್ಯವಿದೆ. ಇಂದಿನ ಪಾಶವೀ ಜಗತ್ತಿನಲ್ಲಿ, ರಾಜಕಾರಣವೆಂದರೆ ಒಂದು ಜೂಜು–ಅಸತ್ಯ, ಅನ್ಯಾಯ, ಅಸೂಯೆಗಳ ಒಂದು ಕುಟಿಲ ಕಾರಸ್ಥಾನ. ಆದರೆ ನೆಹರೂ ಅಂತಹ ರಾಜಕಾರಣಿಗಳ ಸಾಲಿಗೆ ಸೇರಿಲ್ಲ. ಆದ್ದರಿಂದಲೇ ಇಂದು ಲೋಕದ ಜನ ನೆಹರೂಗೆ ಗೌರವಕೊಡುತ್ತಾರೆ. 'ನೆಹರೂ ನೀತಿ'ಗೆ ಲೋಕದಲ್ಲೇ ಒಂದು ಉನ್ನತ ಸ್ಥಾನವಿದೆ.

ನೆಹರೂ ಒಂದು ವ್ಯಕ್ತಿಯಲ್ಲ! ಭಾರತದ ಕೋಟಿ ಜನರ ಶಕ್ತಿ! ವಿಶಾಲ ವಿಶ್ವದ ಮಿಲಿಯಾನಧಿ ದಲಿತ ಜನ ಸಮೂಹದ ಒಂದು ಆಶಾಜ್ಯೋತಿ. ದಿನ ದಿನ ಕ್ಷೀಣ ನೆಹರೂ ಧೀಮಂತ ಪ್ರತಿಭೆ ದಾಸ್ಯ ಪ್ರಪಂಚದಲ್ಲಿ ಬೆಳಕು ಬೀರುತ್ತದೆ ಲೋಕದ ಎರಡು ಪ್ರಬಲ ರಕ್ತಿಗಳು ಅಸುರೀವೃತ್ತಿಯಿಂದ ತಮ್ಮ ಪ್ರತಿಷ್ಠೆ ಸಾಧಿಸಲು 'ಪ್ರಜಾ ಪ್ರಭುತ್ವ'ದ ಮುಸುಕಿನೊಳಗೆ ಕಾರಸ್ಥಾನ ನಡೆಸುತ್ತಿರುವುದು ಜಗಜನಿತವಿದೆ. ಆ ಮುಸುಕು ಹರಿದು ನಿರ್ದಾಕ್ಷಿಣ್ಯವಾಗಿ ಲೋಕದ ಜನಕ್ಕೆ ಆ ಪಾಶವೀ ಶಕ್ತಿಗಳ ಹೇಯವೃತ್ತಿಯ ನಿಜರೂಪವನ್ನು ತೋರಿದ ಅಸಮಾನ್ಯ ವ್ಯಕ್ತಿಯೆಂದರೆ ನೆಹರೂ ಒಬ್ಬರೇ.

ನೆಹರೂರ ರಾಜನೀತಿ ಉದಾತ್ತವೂ ಉನ್ನತವೂ ಆಗಿದೆ. ಭವನಾಜೀವಿಯು ನಿರ್ವಾಹಗಳೆಂಬ ಮೊದಮೊದಲು ತಾತ್ಕಾಲಿಕ ವೆನಿಸುತ್ತಿದ್ದ ತಜ್ಞರೂ ಕೂಡಾ, ಈಗ ನೆಹರೂ ಭಾವನೆಯೇ ವಾಸ್ತವಿಕವಾಗಿ ಸಂಭವಿಸಿದಾಗ ಬೆರಗಾಗಿದ್ದಾರೆ. ಪಂಡಿತಜೀಯ ಅಗಾಧ ದೂರದರ್ಶಿತ್ವಕ್ಕೆ-ಮೇಧಾವಿ ನ್ರತಿಭೆಗೆ ತಲೆಬಾಗಿತ್ತಾರೆ ಧನದ ಪೌಲತ್ತಿನಿಂದ, ಆಸ್ತಿ ಸೈನ್ಯಸಂಜ್ಞಾಮಗಳಿಂದ, ಅಥವಾ ಇನ್ನಾವುದೇ ಅಮಿತ ಅನುಕೂಲತೆಗಳಿಂದ - ಒಂದು ರಾಷ್ಟ್ರ ಪ್ರಪಂಚದಲ್ಲಿ ಬಲಶಾಲಿಯಾದರೆ, ಉನ್ನತ ಸ್ಥಾನವನಾಕ್ರಮಿಸಿದರೆ – ಅದೊಂದು ಆಶ್ಚರ್ಯವಲ್ಲ! ಇಂದು ರಷ್ಯಾವಾಗಲೀ, ಅಮೇರಿಕಾವಾಗಲೀ ಅಥವಾ ಬ್ರಿಟನ್ನೇ ಆಗಲೀ ಈ ಸ್ಥಾನದ ಮೇಲೆ ಮಂಡಿಸಿದರೆ ಅದು ನ್ಯಾಯದಿಂದ ದೊರೆತುದೆಂದಾಗಲಿಲ್ಲ. ಆದರೆ ಇಂತಹ ಯಾವುದೇ ಒಂದು ಅನುಕೂಲತೆ ಇಲ್ಲದೆ, ಕೇವಲ ತನ್ನ ನಿಷ್ಕಳಂಕ ಧ್ಯೇಯ, ಘೋರಕೆಗಳಿಂದ, ನಿರ್ಭೀಕವಾದ ಸ್ಪಷ್ಟವಾದಿತನದಿಂದ, ಲೋಕದ ವಾಸವೀತೆಯ ಅನುಕಂಪದಿಂದ ಭಾರತವು ಪ್ರಪಂಚದಲ್ಲೊಂದು ವಿಶಿಷ್ಟ ಸ್ಥಾನಪಡೆಯಿತು. ಅದಕ್ಕೆ ನೆಹರೂರವರ ಸಮರ್ಥ ಮುಂದಾಳುತನವೇ ಕಾರಣ.

ಬಾಪೂವಿನ ಉತ್ತರಾಧಿಕಾರಿಯಾದ ಜವಹರಲಾಲರು ಪ್ರಸಿದ್ಧ ರಾಜನೀತಿಜ್ಞರಂತೆಯೇ ಉತ್ತಮ ವಾಗ್ಮಿಗಳು. ವಾಸ್ತವಲ್ಲ ಲೋಕಪ್ರಸಿದ್ಧ ಬರಹಗಾರರೂ ಆಗಿದ್ದಾರೆ. ಕವಿತಾಮಯ ಶಬ್ದ ವೈಖರಿಯ ಅವರ ಶೈಲಿ ಮೋಹವಿದ್ದಂತೆಯೇ ಸಿಂಪ ಚೈತನ್ಯಯುಕ್ತವೂ ಆಗಿದೆ. ಇಡೀ ಲೋಕದ ಜನ ನೆಹರೂ ಸಾಹಿತ್ಯಕ್ಕಾಗಿ ಪಾಕೋರೆಯುತ್ತಿದ್ದಾರೆ. ಅವರು ಸ್ವತಃ ಒಪಿನ 'ಆತ್ಮ ಚರಿತ್ರೆ' ಲೋಕದ ಉತ್ತಮ ಸಾಹಿತ್ಯವೆಂದು ಪರಿಗಣಿತವಾಗಿದೆ

ಅಂತರಿಕವಾಗಿಯೂ ನೆಹರೂ ಭಾರತದ ಬಡತನಕ್ಕಾಗಿ ಒಂದು ಪೊಡ್ಡ ಹೋರಾಟವನ್ನೇ ಹೂಡಿದರು. ಭಿನ್ನ ಸಂಸ್ಕೃತಿಯ, ಜಾತಿಮತಭೇದಗಳ, ಹಲವು ಭಾಷೆಗಳ ತವರೂರು–ಈ ಭಾರತ. ಮೇಲಾಗಿ ಇಲ್ಲಿಯ ಜನ ನಿರಕ್ಷರರು. ನೂರಾರು ವರ್ಷಗಳ ಬಾಕ್ಯದಿಂದ ಶೋಷಣೆಗೆ ಪಾತ್ರರಾಗಿ ಅರೆಜೀವವಾದವರು. ಇಂತಹ ಜನ ಕೋಟಿಯಲ್ಲಿ ನವಚೈತನ್ಯ ತುಂಬಿ, ಬಾಪೂವಿನ ಕನಸಿನ ರಾಮರಾಜ್ಯವಾಗಿ ಭಾರತವನ್ನು ರೂಪಿಸುವುದು ಸುಲಭ ಸಾಧ್ಯವಲ್ಲ.

ಪ್ರಕೃತಿಯು ರೌದ್ರಾವತಾರದಿಂದ ಸಂಭವಿಸುವ ಮಹಾಪೂರ, ಬರಗಾಲ, ಅತಿವೃಷ್ಟಿಗಳು ಒಂದು ಕಡೆಯಾಡೆಯೊ ರಾಜಕೀಯ ಕಾರಣಗಳಿಂದಾಪ ನಿರಂತರ ಸಮಸ್ಯೆ, ಜಾತ್ಯಾಂಧತೆ, ಸ್ವಜನಪಕ್ಷಪಾತ ಚಿನೀತಿ ಚಳವಳಗಳು ಇನ್ನೊಂದು ಕಡೆ. ಇಂತಹ ಸಂಕ್ರಾಂತಿ ಕಾಲದಲ್ಲೇ ನೆಹರೂ ಭಾರತ ರಥದ ಸಾರಥ್ಯವಹಿಸಿದರು. 'ಈ ಅಜ್ಞಾನ ಭಾರತದ ಸ್ವತಂತ್ರ್ಯ ಎನ್ನುವಿನಿ?' ಎಂದು ಚರ್ಚಿಲ್ಲರಾದಿಯಾಗಿ ಅನೇಕರು ಅಣಕಿಸಿತೊಡಗಿದರು. ಆದರೆ ಕೆಚ್ಚೆದೆಯ ನೆಹರೂ ಅಂಜಲಿಲ್ಲ. ಭಾರತದ ಜನಕೋಟಿಯ ಸಹನಾಪರ ನಿಷ್ಠೆಕವನ್ನು ನಂಬಿದವರು ಪಂಡಿತಜೀ ಒಬ್ಬರೇ. ಅವರ ಹೃದಯದಲ್ಲಿ ಭಾರತದ ಮೂವತ್ತೈದು ಕೋಟಿ ಜನರ ಪ್ರತಿಬಿಂಬ ಕಾಣಬಹುದು. ಕಾರಣ ಜನ ನೆಹರೂವನ್ನೂ ಅರ್ಥಮಾಡಿಕೊಂಡಷ್ಟೇ ಅವರೂ ಭಾರತೀಯರನ್ನು ಆಳವಾಗಿ ಅರಿತ್ತಿದ್ದಾರೆ

ಭಾರತದ ಕ್ಲಿಷ್ಟ ಸಮಸ್ಯೆಗಳು ಎಷ್ಟು ರಾದಾಗಲೆಲ್ಲಾ ಆ ಪ ನ್ನು ಬಿಡಿಸುವಲ್ಲಿ ನೆಹರೂ ತೋರುವ ದೃಷ್ಟಿಕೋನ ನಿಜಕ್ಕೂ ಆಶೋಭನೀಯವಾದುದು ಭಾರತದ ಐಕಮತ್ಯ ನೆಹರೂ ದೃಷ್ಟಿಕೋನದಲ್ಲಿ ಪ್ರಾಮುಖ್ಯತೆ ಪಡೆದಿದೆ ಅಂತಹ ಒಂದು ಸಂಘಟನೆ ಚಿರಂತನವಾದರೇನೇ ಭಾರತದ ಬದುಕು ಬೆಳಗೀತು ಎಂದು ನಂಬಿದ್ದಾರೆ. ಅವರ ನಂಬಿಕೆ ಸಾವಿರ ಸತ್ಯವೆಂಬುದನ್ನು ಭಾರತದ ಗತ ಇತಿಹಾಸವನ್ನು ತೀರದ ನಮಗೆ ಮನವರಿಕೆಯಾಗಬೇಕ್ಕೇ ಬೇಕು.

ಇಂದು ಹಲವು ಸಮಸ್ಯೆಗಳ ಜಂಜಾಟದಲ್ಲಿ ಅನಾವಶ್ಯಕ ತಿರುಕಳ ಎಬ್ಬಿಸುತ್ತಿರುವ ಭಾಷಾವಾರು ಪ್ರಾಂತದ ಸಮಸ್ಯೆಗೆ ಕೆಲವೊಂದು ಜನ ಇಲ್ಲದ ಪ್ರಾಮುಖ್ಯತೆ ಕೊಡುತ್ತಿರುವುದು ಜೀವದ ವಿಚಾರ. ಭಾಷಾವಾರು ಪ್ರಾಂತದ ಮೊದಲ ಪುರಸ್ಕರ್ತರು ನೆಹರೂಗಳು. ಆದರೆ ಅವರು ಸಂಕುಚಿತವಾದದ ಪ್ರಾಂತೀಯತೆಯ ಕಡುವೈರಿಗಳು. ಇದು ಆಭ್ಯಾಸವಲ್ಲ ಭಾಷಾವಾರು ಪ್ರಾಂತವು ಭಾರತದ ಐಕಮತ್ಯದ ಪ್ರತೀಕವಾಗಬೇಕೇ ಹೊರತು ಚ್ಚಿಟ್ಟಪ, ಅಧಿಕಾರದಾಹದ ಕೂಸುಗಳ್ಳೇ ತ್ಪನ್ನಗಬಾರದೆಂದೇ ಅವರ ಮತ. ಜನರ ಅನುಕೂಲತೆಗಾಗಿ, ಭಾಷೆಯ ಐಕ್ಯಮತ್ಯಕ್ಕೆ ಘಾತುಕವಾಗುವ ಕೃತ್ಯಕ್ಕೆ ಪೊಲೀಯೂಗುವಾರರು.

ನೆಹರೂ, ಕಾಂಗ್ರೆಸ್ ಅಧ್ಯಕ್ಷರಾಗಿ ಸಹಾ ಅವರ ಸಂಘಟನೆಗಾಗಿ ನೇರವಾದ ಕಾರ್ಯಕ್ರಮ ಕೈಗೊಂಡಿದ್ದಾರೆ. ನಿರ್ದಿಷ್ಟ ತತ್ಪಸ್ಪತಿಪಾದನೆಯಲ್ಲಿ ಎಂತಹ ಆಹ್ವಾನ ಇದಿರಿಸಲೂ ಸಿದ್ಧರೇ. ಇಂತಹ ಜನರ ನೇರವಾದ ದೋರಣೆಯಿಂದಲೇ ಮದ್ರಾಸಿನಲ್ಲಿ ಕಾಂಗ್ರೆಸ್ ಸರಕಾರ ರಕ್ಷಿ ಪೂರ್ಣವಾಗಿ ಉಳಿಯುವಂತಾಯಿತು. ರಾಜಾಜಿಯರ್ನ್ನು ಉರುಳಿಸಿ ಜಾತೀಯ ವಿಷಪ್ರಸಾರ ಪ್ರಾರಂಭಿಸಿದವರ ಮಾಗುದಾರ್ಶನವನ್ನು ಬಲವಾಗಿ ಎಳೆದು ಎಚ್ಚರಿಸಿದ ಸಾಮರ್ಥ್ಯ ನೆಹರೂಗಲ್ಲದೆ ಮತ್ತಾರಿಗೂ ಬರಲಾರದು. ಕರ್ನಾಟಕದ ಕಾಂಗ್ರೆಸಿಗರೂ ಪ್ರಾತಃಸ್ಮರಣೆಯ ಹೆಸರಲ್ಲಿ ಅಡ್ಡಹಾದಿ ಹಿಡಿಯುತ್ತಿದ್ದಾಗ ಕಾಂಗ್ರೆಸ್ ಅಧ್ಯಕ್ಷಸ್ಥಾನದಿಂದ ಕೊಟ್ಟ ಭರವಸೆ ಕಾಂಗ್ರೆಸಿಗರ ಕರ್ತವ್ಯದ ಪರಿಜ್ಞಾನವನ್ನಾಡಿಕೊಟ್ಟಿತು. ತಪ್ಪಿದ ಕಡೆ

(ಆರನೇ ಪುಟಕ್ಕೆ)

ಕಾಂಗ್ರೆಸ್ ಕೆಟ್ಟಿಲ್ಲ - ನೆಹರೂ ಹಾದಿ ತಪ್ಪಿಲ್ಲ

ಆಂಧ್ರ ಮುಖ್ಯ ಮಂತ್ರಿಗಳಾದ ಟಿ. ಪ್ರಕಾಶಂರು ಸೊನ್ನೆ ಕರ್ನೂಲಿನ ಸಾರ್ವಜನಿಕ ಸಭೆಯಲ್ಲಿ ಬಿಚ್ಚಿದ ಮನಸ್ಸಿನಿಂದ ಆಡಿದ ಕೆಲವು ಮಾತುಗಳು ಅಂದಿನಿಂದ ಇಂದಿನ ತನಕ ಕಾಂಗ್ರೆಸ್ಸಿನಲ್ಲಿ ಶ್ರದ್ಧೆಯಿಂದ ಇರುವವರಿಗೆ ಸಂಸ್ಥೆಯಲ್ಲಿ ತಾವಿಟ್ಟು ಕೊಂಡಿದ್ದ ವಿಶ್ವಾಸ ತಪ್ಪಿಲ್ಲನೆಂಬ ಸಮಾಧಾನ ತರಲಾರದಾಗಿದೆ. ಅಂತೆಯೇ ಕಾಂಗ್ರೆಸ್ ಧುರೀಣತ್ವ ಗಾಂಧೀಜಿಯವರ ಮಾರ್ಗದರ್ಶನವನ್ನು ಮರೆತು ಅಡ್ಡದಾರಿ ಹಿಡಿದಿರುವುದೆಂಬ ಆಪಾದನೆ ಹೊರಿಸಿ ಕಾಂಗ್ರೆಸ್ ಬಿಟ್ಟು ಸಂಸ್ಥೆಯನ್ನು ಪ್ರತಿಭಟಿಸಿ ಕಟುವಾಗಿ ಹಳಿದ ಕಾಂಗ್ರೆಸ್ ಟೀಕಾಕಾರರಿಗೂ ತನ್ನ ಹೃದಯ ವಿಶಾಲತೆಯ ಸಭ್ಯವಾದ ಚಿಕಿತ್ಸೆ ಕೊಡುವಂತಹದು.

"ಪಂಡಿತ ನೆಹರೂಗಳು ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗ ಬಿಟ್ಟು ಅಡ್ಡ ದಾರಿ ಹಿಡಿದರೆಂದು ನಾನು ಒಮ್ಮೆ ನೆನೆಸಿದ್ದೆ. ಆದರೆ ಯಾವ ರೀತಿಯಲ್ಲೂ ನೆಹರು ತಪ್ಪು ದಾರಿ ಹಿಡಿಯದೆ ಗಾಂಧೀಜಿಯವರ ಆದರ್ಶವನ್ನೇ ಅನುಸರಿಸುತ್ತಿರುವರೆಂದು ನಾನೀಂದು ಕಂಡುಕೊಂಡಿರುವೆನು. ಆವರು ಗಾಂಧೀಜಿಯವರು ಉಪದೇಶಿಸಿದ ತತ್ವಗಳನ್ನೂ ಮರೆತಿಲ್ಲ? ಜನತಾ ಕಲ್ಯಾಣಕ್ಕಾಗಿ ಮಾಡಬೇಕಾದ ಕೆಲಸಗಳನ್ನೂ ಮರೆತಿಲ್ಲ. ಭಾರತದ ವಿದೇಶಾಂಗ ಮಂತ್ರಿಗಳಾಗಿದ್ದು ವಿದೇಶ ವಿಚಾರಗಳನ್ನು ಯಶಸ್ವಿಯಾಗಿ ನೆರವೇರಿಸುತ್ತಿರುವಂತೆ ಗಾಂಧೀಜಿಯವರ ಧ್ಯೇಯವಾಗಿದ್ದ ಆರ್ಥಿಕ ಸ್ವಾತಂತ್ರ್ಯತೆಯನ್ನು ಕಾರ್ಯಗತಮಾಡಲು ಅವರು ಕೆಲಸ ಮಾಡುತ್ತಿರಬಹುದು" ಎಂದು ಟಿ. ಪ್ರಕಾಶಂರು ಸ್ಪಷ್ಟಪಡಿಸಿದರು.

ಮನುಷ್ಯ ತಪ್ಪು ಮಾಡುತ್ತಾನೆ. ಆಬಳಿಕ ತನ್ನ ತಪ್ಪನ್ನು ಒಪ್ಪಿಕೊಂಡು ತನ್ನ ದಾರಿಯನ್ನು ತಿದ್ದಿಕೊಳ್ಳುವ ವಿವೇಕ ಎಲ್ಲರಲ್ಲೂ ಬರುವುದಿಲ್ಲ. ಶ್ರೀ ಟಿ. ಪ್ರಕಾಶಂರು ತನ್ನ ತಪ್ಪನ್ನು ಒಪ್ಪಿಕೊಂಡುದು ಅವರ ಘನಸ್ಫಿಕೆಯ ದ್ಯೋತಕವೆನ್ನಬಹುದು ಗಳಿಸಿದ ಮುಖ್ಯ ಮಂತ್ರಿಯ ಪದವಿಯನ್ನು ಉಳಿಸಿಕೊಳ್ಳಲು ಪ್ರಕಾಶಂ ತನ್ನ ಧಾಟಿಯನ್ನು ಬದಲಾಯಿಸಿದರೆಂದು ಕೆಲವರೆನ್ನಬಹುದು. ಇಂತಹ ಅಪಾದನೆ ಅವರ ರಾಜಕೀಯ ಸಾಧನೆಗೆ ಅಗತ್ಯವಿರಬಹುದು. ಇಂತಹ ರಾಜಕೀಯ ಕಾರ್ಯ ಸಾಧನೆಗಾಗಿಯೇ ಅವರು ಕಾಂಗ್ರೆಸ್ಸನ್ನು ಬಿಟ್ಟುದುದು ನಿಜವಾದ ಕಾಂಗ್ರೆಸ್ ಕೆಟ್ಟಿದೆಯೆಂದಲ್ಲ, ನೆಹರು ಹಾದಿ ಬಿಟ್ಟರೆಂದಲ್ಲ. ಅಥವಾ ತಾವು ಹೊರಿಸುತ್ತಿದ್ದ ಧೋರಣೆಯನ್ನು ಆಂತಃಕರಣ ಪೂರ್ವಕವಾಗಿ ನಂಬಿದರೆಂದೂ ಅಲ್ಲ. ಆದುದರಿಂದ ರಾಜಕೀಯ ಅನುಕೂಲತೆ ಮನಸಾಕ್ಷಿಗಿಂತ ಮಹತ್ವದ್ದೆಂದು ಅವರಿಗೂ ತಿಳಿಯುವ ಪ್ರಕಾಶಂರ ವಿವೇಕವಾಣಿ ಅವರ ಕರ್ಣರಂಧ್ರವನ್ನು ಸ್ಪರ್ಶಿಸುವುದಿಲ್ಲ, ಮನಸ್ಸಿನ ಮೇಲೆ ಪರಿಣಾಮ ಮಾಡುವುದಿಲ್ಲ. ಅವರು ನೆಹರೂಗಳನ್ನೂ ದೂರುತ್ತಲೆ ಇರಬಹುದು. ಪ್ರಕಾಶಂರ ಮಾತಿಗೆ ತಮಗನುಕೂಲವಾದ ವ್ಯಾಖ್ಯಾನವನ್ನು ಬರೆಯಬಹುದು. ಆದರೆ ಕಾಂಗ್ರೆಸ್ ಕೆಟ್ಟಿಲ್ಲ, ಆದರ ಧುರೀಣತ್ವ ಗಾಂಧೀಜಿಯವರ ತತ್ವವನ್ನು ಪರಿಪಾಲಿಸುತ್ತಲೇ ಇರುವುದೆಂಬುದು ಸತ್ಯ. ಈ ಸತ್ಯವನ್ನರಿತು ತಾವು ಕಾಂಗ್ರೆಸ್ಸನ್ನು ಪುನಃ ಸೇರಿ ಅದರ ಸಂಘಶಕ್ತಿ, ಸೈಯಾಶಕ್ತಿಯನ್ನು ವೃದ್ಧಿಗೊಳಿಸಲು ಪ್ರಯತ್ನಿಸುವುದು ಉಚಿತವಲ್ಲವೆ, ತಮ್ಮ ಕರ್ತವ್ಯವಲ್ಲವೆ ಎಂಬುದನ್ನು ಅವರೇ ತಮ್ಮ ಮನಸ್ಸಿನ್ನು ಪ್ರಶ್ನಿಸಿ ನಿರ್ಧರಿಸುವುದು ತಪ್ಪು ತಿಳುವಳಿಕೆಗೆ ಇಳಿಬಿದ್ದವರ ಜವಾಬ್ದಾರಿ.

ಅವರ ಧೋರಣೆ ಹೇಗಿದ್ದರೂ ಕಾಂಗ್ರೆಸ್ಸಿಗರು ತಾಳ್ಮೆ, ತಪ್ಪಬಾರದು, ಕೋಪಗೊಳ್ಳಬಾರದೆಂದು ರಾಜಾಜಿ ತಮ್ಮ ಮದ್ರಾಸು ಭಾಷಣದಲ್ಲಿ ಕೊಟ್ಟ ಸಲಹೆ ಸೂಕ್ತವಾದುದು "ನಮ್ಮ ಕಷ್ಟನೆಂಠ ಹದೇ ಇರಲಿ, ದೋಷ ಯಾವುದೇ ಇರಲಿ ಗಾಂಧೀಜೀಯವರು ತೋರಿಸಿದ ಶುಮಾರ್ಗದಲ್ಲಿ ಅಹಿಂಸೆಯಿಂದ ಕಾಂಗ್ರೆಸ್ಸು ಸ್ವಾತಂತ್ರ್ಯ ಗಳಿಸಿತು ಗಾಂಧೀಜಿಯವರ ಮಾರ್ಗದರ್ಶನ ಲಾಭವಿದೆಯೆಂದು ದೇಶದಾಡಳಿತೆಯ ಮಹತ್ಪದ ಜವಾಬ್ದಾರಿಯನ್ನು ಕಾಂಗ್ರೆಸ್ ಕೊಡಿತ್ತು. ಆನಂದ ಮಹಾತ್ಮಾ ಗಾಂಧಿಯವರನ್ನು ವಿಧಿ ಸೆಳೆದೊಯ್ದಿತು. ಆದುದರಿಂದ ಈಗ ನಮಗೆ ಬೇಕು ಪರಿಪಕ್ವ ವಿಚಾರರಕ್ತಿ, ನ್ಯಾಯ ಬದ್ಧ ಕಾರ್ಯಕ್ಷಮತೆ. ಧ್ಯೇಯಾನುಯೆಗಳು ನಮಗೆ ಬೇಡ. ವಿವೇಕ ಮತ್ತು ದೃಷ್ಟಿಯಿಂದ ನಾವು ಕಾರ್ಯತತ್ಪರರಾದರೆ, ಜಯಮಾಲೆ ನಮ್ಮ ಕೊರಳಿಗೇ ಬೀಳುವುದು" ಎಂದು ರಾಜಾಜಿ ಉಪದೇಶಿಸಿದರು.

ಬ್ರಿಟಿಷ್ ಸರಕಾರದ ಸೆರೆಮನೆಯಲ್ಲಿ ನಿಂತಿದ್ದ ಜಸ್ಟಿಸ್ ಪಕ್ಷವಿತ್ತು. 1937ರಲ್ಲಿ ಕಾಂಗ್ರೆಸ್ಸು ವಿತೇಷ ಬಹುಮತದಿಂದ ಆರಿಸಿ ಬಂದಾಗ ಸತ್ಯಮೂರ್ತಿಯವರು ಜಸ್ಟಿಸ್ ಪಕ್ಷದ ನಿರ್ನಾಮವಾಯಿತೆಂದರು ಆದರೆ ರಾಜಾಜಿ ಅಂದು "ಮರಹೋದರೂ ಮೊಳಕೆಗಳು ಹುಟ್ಟಬಹುದು' ಎಂಬ ಭವಿಷ್ಯವಾಣಿ ನುಡಿದಿದ್ದರು ಇಂದು ಕಾಂಗ್ರೆಸ್ ವಿರೋಧಿ ಪಕ್ಷಗಳು ಈ ಮೊಳಕೆಗಳ ವಿವಿಧ ರೂಪಾಂತರ ಇವುಗಳ ತಳಹದಿ ಮತ್ಸರ ಮತ್ತು ವೈಷಮ್ಯ ಇವೆರಡೂ ಮಾಯವಾದರೆ, ತಾತ್ವಿಕವಾಗಿ ಭೇದವಿರುವ ಒಂದೆರಡು ಪಕ್ಷಗಳನ್ನು ಬಿಟ್ಟರೆ, ಉಳಿದೆಲ್ಲವೂ ಕಾಂಗ್ರೆಸ್ ಧ್ಯೇಯಧೋರಣೆಗಳನ್ನು ಒಪ್ಪುವಂತಹವುಗಳು. ಈ ವೈಷಮ್ಯ ಹಾಗೂ ಮತ್ಸರವನ್ನು ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಸುವ ಪರ್ಯಾಸವನ್ನು ಕಾಂಗ್ರೆಸ್ಸಿಗರು ಇಟ್ಟುಕೊಳ್ಳಕೂಡದು, ಒದಲಿಗೆ ಅವುಗಳನ್ನು ಹೋಗಲಾಡಿಸುವ ಕಾರ್ಯ ಪ್ರವರ್ತರಾಗಬೇಕು. ಈ ದೃಷ್ಟಿಯಲ್ಲಿ ಇನ್ನೂ ತಿಳಿವಳಿಕೆ ಕಾಣದೆ ಕಾಂಗ್ರೆಸ್ಸನ್ನು ತಮ್ಮ ದೃಷ್ಟಿಕೋನದಲ್ಲಿಯೇ ಅಳೆದು ದೂಷಿಸುತ್ತಿರುವವರನ್ನು ಕಾಂಗ್ರೆಸ್ಸಿಗರು ಸಹನೆಯಿಂದ ನೋಡಬೇಕು.

ಎ. ಜೆ.

ಬಳ್ಳಾರಿ ಡಿಸ್ಟ್ರಿಕ್ಟು ಮುನ್ಸಿಫ್ ಕೋರ್ಟಿನಲ್ಲಿ

S C. 603/52, I. A. 157/53.

Between:—

ಇಟ್ಟಾಪುರದ ಮಹದೇವಮ್ಮ ವಾದಿ ಅರ್ಜಿದಾರರು

Vs.

ಹನುಮಂತ ಪಗೈರಾ ಪ್ರತಿವಾದಿಗಳು C.Ps

ನೋಟೀಸು.

To

ಈರಣ್ಣ s/o ಹನುಮಂತಪ್ಪ, ಮೇಜರ್, ನಾಯ್ಕ ಮುಷ್ಟಗಟ್ಟೆ ಬಳ್ಳಾರಿ ತಾ'

2 ಪ್ರತಿವಾದಿ C. P. 2

ಮೇಲ್ಕಂಡ ನಂಬರು ಅರ್ಜಿ 26-11-52ಕ್ಕೆ ವಾಯಿದಾ ಇದುತ್ತದೆ. ಸದ್ರಿ ನಂಬರಿನಲ್ಲಿ 2ನೇ ಪ್ರತಿವಾದಿಯಾದ ಈರಣ್ಣನು 11 ಗಂಟೆಗೆ ಖುದ್ದಾಗಿ ಆಗಲಿ ನಕೀಲು ದ್ವಾರಾ ಆಗಲಿ ಹಾಜರಾಗದ ಪಕ್ಷದಲ್ಲಿ ಮೇಲ್ಕಂಡ ಅರ್ಜಿ ಮತ್ತು ನಂಬರು ಎಕ್ಸ್ ಪಾರ್ಟೆ ಆಗಿ ವುತ್ತರವು, ಡಿಕ್ರಿ ಮಾಡಲಾಗುತ್ತದೆ.

ಬೆಳಜೋಣಿ ನರಸಿಂಗರಾವ್,
ವಾದಿ ಅಡ್ವೊಕೇಟ್.

ಅಖಂಡ ಭಾರತದ ಏಕ್ಯತೆಯ ಸ್ವರೂಪ

ಏಕ್ಯತೆ ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಿಕೊಂಡು ಬರಬೇಕು

ಆರ್ಥಿಕ ಪ್ರಗತಿ ಕುರಿತು ಜಂಡಿಸ್ಪೂರ್‌ನಲ್ಲಿ ಪ್ರಧಾನಿ ನೆಹರು ಭಾಷಣ

ಭಾರತವು ಅಖಂಡವಾದ ದೇಶ ಆದರೆ ಸಂಪೂರ್ಣ ಏಕ್ಯತೆ ಒಬ್ಬೆಯಲು ಸಾಧ್ಯವಿಲ್ಲ. ಭಾರತದಲ್ಲಿ ಅನೇಕ ರಾಜ್ಯಗಳೂ, ವಿವಿಧ ಭಾಷೆಗಳೂ, ವಿವಿಧ ಧರ್ಮಗಳೂ ಇದ್ದರೂ ಸಹಾ, ಭಾರತದ ಏಕ್ಯತೆ ಒಬ್ಬವಾಗಿದೆ. ಭಾರತದ ಏಕ್ಯತೆಯನ್ನೂ ಸ್ವಾತಂತ್ರ್ಯವನ್ನೂ ರಕ್ಷಿಸಿಕೊಂಡು ಬರುವುದು ಭಾರತೀಯರೆಲ್ಲರ ಕರ್ತವ್ಯ ಎಂಬುದಾಗಿ ಪ್ರಧಾನಿ ಜವಹರಲಾಲ್ ನೆಹರುರವರು ಇಲ್ಲಿ ಭಾಷಣ ಮಾಡುತ್ತಾ ನುಡಿದರು.

ಭಾರತ ಪಾಕಿಸ್ತಾನಗಳ ಪರಸ್ಪರ ಸಂಬಂಧವು ಮೈತ್ರಿ ಮತ್ತು ನ್ಯಾಯಾದರ್ಶಗಳಿಂದಲೇ ಕೂಡಿರಬೇಕು ಈ ಎರಡು ದೇಶಗಳಿಗೆ ಮೈಷಮ್ಯ ಬೆಳೆದು ಯುದ್ಧ ಸಂಭವ ಉಂಟಾಗಲು ಕಾರಣವಿಲ್ಲ. ಯಾವುದೇ ದೇಶದ ಮೇಲೆಯೂ ಭಾರತ ಆಕ್ರಮಣ ಭಾವನೆ ಹೊಂದಿಲ್ಲ. ಭಾರತ ಪಾಕಿಸ್ತಾನಗಳು ವಾಣಿಜ್ಯ ವ್ಯವಹಾರ ಮತ್ತು ಆರ್ಥಿಕ ವಿಚಾರಗಳಲ್ಲಿ ಪರಸ್ಪರ ಮೈತ್ರಿಯಿಂದ ಅಭಿವೃದ್ಧಿ ಹೊಂದಬೇಕು ಎಂದು ಪಂಡಿತ ನೆಹರು ತಮ್ಮ ಭಾಷಣದಲ್ಲಿ ನುಡಿದರು.

ಭಾರತದ ಅಭಿವೃದ್ಧಿರವು ಏಕಾ ಏಕಿ ಆಗಲಾರದು ಸಾವಕಾಶವಾಗಿ ನಡೆಯುವಂಥದ್ದು. ಭಾರತೀಯರೆಲ್ಲರೂ ಇದಕ್ಕಾಗಿ ನಿರಂತರ ಶ್ರಮಿಸಬೇಕು. ಐಕ್ಯತ್ಯದಿಂದ ಕಷ್ಟಪಟ್ಟು ಕೆಲಸ ಮಾಡಬೇಕು. ದೇಶದ ಆರ್ಥಿಕ ಉತ್ಪನ್ನ ಹೆಚ್ಚಿಸಬೇಕು. ಜನತೆಯು ಕಷ್ಟಪಟ್ಟು ಶ್ರಮಿಸಿ ಸಂಪತ್ತುಗಳನ್ನು ಗಳಿಸಬೇಕು. ಈಚಿನ ಐದಾರು ವರ್ಷಗಳಲ್ಲಿ ದೇಶವು ಕೈಗಾರಿಕೆ ಅಭಿವೃದ್ಧಿಯನ್ನು ಸಾಧಿಸಿದೆ. ಸಿಂಧಿ ಕಾರ್ಖಾನೆ, ಏರೋಪ್ಲೇನ್ ಕಾರ್ಖಾನೆ, ರೈಲ್ವೆ ಇಂಜಿನ್ನುಗಳ ತಯಾರಿಕೆ ಸನ್ನಿಯುತ್ತಿದೆ. ವೈಜ್ಞಾನಿಕ ಲೆಬೊರೇಟರಿಗಳನ್ನು ಸ್ಥಾಪಿಸಲಾಗಿದೆ. ಆದರೆ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಏನು ಶ್ರಮಿಸಬೇಕು. ಶಾಂತಿ, ಶಿಸ್ತು, ಶ್ರಮಪೂರಿತವಾದ ಕೆಲಸ, ಸಹನೆಗಳಿಂದ ದೇಶದ ಅಭಿವೃದ್ಧಿಯು ರೂಪುಗೊಳ್ಳುವುದು ಎಂದು ದಾಗ ಪ್ರಧಾನಿ ನೆಹರೂ ನುಡಿದರು.

ಜನತೆಯ ರಕ್ಷಣೆ

ವಕೀಲರು ಜಾಮೀನಿನ ಕುರಿತು ದಾ ಜಾ ಜೆ ಪ್ರಜಾಪ್ರಭುತ್ವ ತತ್ವಗಳನ್ನು ಪಾಲಿಸಬೇಕು.

"ದೇಶದ ಪ್ರಗತಿಗೆ ಮತ್ತು ಜನತೆಯ ಆರ್ಥಿಕ ಪ್ರಗತಿಗೆ ವಕೀಲರು ಸಹಕಾರಿಗಳಾಗಿ ಶ್ರಮಿಸಬೇಕು ಧನಿಕರಿಗೂ ಬಡವರಿಗೂ ಇರುವ ಅಂತರವು ಹೋಗಬೇಕು ನ್ಯಾಯ ಮತ್ತು ಜ್ಞಾನಾಭಿವೃದ್ಧಿ ಹೆಚ್ಚಿಸಲು ಶ್ರಮಿಸಬೇಕು"

ಎಂಬುದಾಗಿ ಮದ್ರಾಸಿನ ಮಾಜಿ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಈದಿನ ಇಲ್ಲಿ ಜಾರ್ ಅಸೋಸಿಯೇಷನ್ನಿನವರು ಲಾಯರ ವೃತ್ತಿಗೆ ಸೇರಿ ತರಬೇತಿ ಹೊಂದುತ್ತಿರುವವರಿಗೆ ಏರ್ಪಡಿಸಿದ ಉಪನ್ಯಾಸ ಮಾಲೆಯ ಆರಂಭೋತ್ಸವ ಸಮಾರಂಭದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ನುಡಿದರು.

ಜನತೆಯಲ್ಲಿರುವ ವಿವಾದಗಳು ಕೋರ್ಟಿನ ಮುಂದೆ ಬಂದಾಗ ಅವುಗಳನ್ನು ತೀರ್ಮಾನ ಮಾಡುವುದು. ಕೋರ್ಟಿನ ಕೆಲಸ ನ್ಯಾಯಾಂಗ ಮತ್ತು ಕಾರ್ಯಾಂಗ ಬೇರೆ ಆಗಿದೆ. ಲಾಯರುಗಳು ತಮ್ಮ ವೃತ್ತಿಯಲ್ಲಿ ಶ್ರದ್ಧೆಯಿಂದಲೂ, ದೇಶಸೇವನ ಭಾವನೆಯಿಂದಲೂ ವರ್ತಿಸಬೇಕು. ಲಾಯರುಗಳು ಸತ್ಯ ಪ್ರತಿವಾದಿಯಲ್ಲಿಯೇ ನಿರಂತರಾಗಬೇಕು ನ್ಯಾಯ ಮತ್ತು ಸತ್ಯಗಳನ್ನು ಎತ್ತಿ ಹಿಡಿಯಬೇಕು. ಇದು ಶ್ರಮವಾದರೂ ಕೀರ್ತಿ ಘನತೆಗಳನ್ನು ತರುತ್ತದೆ. "ಅಸೋಸಿಯೇಟ್ಸ್" ಲಾಯರುಗಳೂ ಜೂನಿಯರ್ ಲಾಯರುಗಳೂ, ಉನ್ನತ ನೀತಿ ನಡತೆಗಳನ್ನು ಅನುಸರಿಸಿ ಕೀರ್ತಿಯರಸ್ಸುಗಳನ್ನು ಹೊಂದಬೇಕು. ಸುಳ್ಳು ಸಾಕ್ಷ್ಯಗಳಿಗೆ ಅವಕಾಶ ಕೊಡಬಾರದು ಎಂದು ಶ್ರೀ ರಾಜಗೋಪಾಲಾಚಾರ್ಯರು ಹಿತನುಡಿಯಿತ್ತರು.

ಆರಂಭ ಭಾಷಣವನ್ನು ಮದ್ರಾಸ್ ಹೈಕೋರ್ಟಿನ ಚೀಫ್ ಜಸ್ಟೀಸರಾದ ಶ್ರೀ ಪಿ. ವಿ. ರಾಜಮನ್ನಾರ್‌ರವರು ಮಾಡಿದರು.

ಲಾಯರುಗಳು ಸ್ವಜಾಪ್ರಭುತ್ವ ತತ್ವಗಳನ್ನೂ ನಿಯಮುಗಳನ್ನೂ ರಕ್ಷಿಸಿಕೊಂಡು ಒರುವ ಜವಾಬ್ದಾರಿಯಿದೆ. ಸಾರ್ವಜನತ್ತ ನ್ಯಾಯ ಮತ್ತು ಹಿತ ರಕ್ಷಣೆ ವ್ಯವಸ್ಥೆ ಸೋಡಿಕೊಳ್ಳಬೇಕು. ನ್ಯಾಯಪಾಲನೆಗೆ ಲಾಯರುಗಳು ಜವಾಬ್ದಾರಿಕ ಎಂದು ಚೀಫ್ ಜಸ್ಟೀಸರು ನುಡಿದರು.

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟ್‌ನಲ್ಲಿ

O.S. 257/52

ಕೆ. ಲಕ್ಷ್ಮೀನಾರಾಯಣ ಶೆಟ್ಟಿ .... :– ವಾದಿ

ಮೈನರ್ ತಿಮ್ಮಪ್ಪ ಗೈಡಿಯನ್ ಅಡ್ಮಿನಿಟೇಟರ್ ಮತ್ತು ತಾಯಿ ಗಂಗಮ್ಮ ... ಪ್ರತಿವಾದಿಗಳು

ಪ್ರಕಟಣೆ

16-8-1948 ರಲ್ಲಿ ರೂ. 1000-0-0 (ಒಂದು ಸಾವಿರ ರೂ) ಗಳಿಗಾಗಿ ಒಳ್ಳಾರಿಯ ಜಿರಾಯ್ತಿ ಕಸಬಿನ – ಕಾಪು ಕುಲದ ಜಂಕಾ ಗೌರಯ್ಯನ ಮಗ ಗೋವಿಂದಪ್ಪನು ಬಳ್ಳಾರಿಯ ಆಮೀನ ಯಂಕಪ್ಪನ ಮಗ ವೆಂಡೋಕಾರಿ ನಾರಾಯಣಪ್ಪನ ಪರವಾಗಿ ವಿಕ್ರಯ ಪತ್ರವನ್ನು ಮಾಡಿಸಿದ್ದು ಮೋಸದ್ದಾಗಿರುವುದೆಂದು ಸದರಿ ಪೌತಿ ಗೋವಿಂದಪ್ಪನ ಕೈಡಿಟರ್ಸ್ ಪ್ರತಿನಿಧಿಯಾಗಿ ಈ ವಿಕ್ರಯ ಪತ್ರವನ್ನು ರದ್ದು ಪಡಿಸಲು ಮೇಲ್ಕಾಣಿಸಿದ ನಂಬರಿನಲ್ಲಿ ವಾದಿಯು ಮೇಲ್ಕಾಣಿಸಿದ ಪ್ರತಿವಾದಿಗಳ ಮೇಲೆ ದಾವೆ ಮಾಡಿರುತ್ತಾನೆ.

ಮೇಲ್ಕಾಣಿಸಿದ ದಾವೆಯಲ್ಲಿ ನಮ್ಮ ಪಕ್ಷಪರವಾಗಿಯಾಗಲಿ, ವಿರೋಧದಿಂದಾಗಲಿ ಭಾಗವಹಿಸಲಿಚ್ಛೆಯುಳ್ಳವರು 16-11-1953 ರ ದಿನಾಂಕ ಸ್ವತಃಕಾಲ 11 ಗಂಟೆಗೆ ಮುದ್ದಾಗಿ ಆಥವಾ ವಕೀಲರ ಮೂಲಕ ಹಾಜರಾಗಬೇಕೆಂದೂ ಇಲ್ಲವಾದರೆ ಈ ದಾವೆಯ ವಿಚಾರಣೆಯು ಏಕಪಕ್ಷವಾಗಿ ನಡೆಯುವುದೆಂದೂ ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ.

ಆರ್. ನಾರಾಯಣದಾಸ್,
ವಾದಿಯ-ಅಡ್ವೊಕೇಟ್.

Matinee at PRABHAT

3 DAYS 4 SHOWS FROM 20th Nove 1953

Warners Present

THE BIG TREES

Technicolor

—: ಬಳ್ಳಾರಿ ಪ್ರಭಾತದಲ್ಲಿ :—

★ ನಗ್ನ ★ ಹಿಂದಿ ಚಿತ್ರ

ತಾರಾಗಣ :- ಅಶೋಕ್ ಕುಮಾರ್, ನಡೀರ

★ ವೀರ ಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು :- ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ

ಪ್ರಕಾಶಕರು :- ಶ್ರೀ ಬಿ. ನಾ. ಬೈಚವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ವಿಕಾಸಕ್ಕಾಗಿಯೇ ಮೀಸಲಾಗಿಟ್ಟ ಮಾಸಪತ್ರಿಕೆ.

ವಾರ್ಷಿಕ ಚಂದಾ ಪರಸ್ಥಳದವರಿಗೆ 5 ರೂಪಾಯಿ.

" ಸ್ಥಳೀಯರಿಗೆ 4-8-0 ರೂಪಾಯಿ.

ಬಿಡಿ ಸಂಚಿಕೆ 6 ಆಣೆ

Coming at "PRABHAT"

Watch for the Date

Warner Bros Astounding Feature in natural vision.

3 Dimension

★ **HOUSE OF WAX** ★

COLOR BY WARNER COLOR

(೫ನೇ ಪುಟದಿಂದ)

ನೇರವಾಗಿ ತಿದ್ದುವ ಪ್ರವೃತ್ತಿ ನೆಹರೂಗಳಿಗಿದ್ದುದರಿಂದಲೇ ಕಾಂಗ್ರೆಸ್ ಸಂಸ್ಥೆ ಬೆಳಗಿದೆ ಭಾರತದ ಶಕ್ತಿ ಇಮ್ಮಡಿಸಿದೆ.

ಸರಕಾರದ ಸಹಕಾರ ಆಪೇಕ್ಷಿಸುವ ನಾವು ಆದರ ತೀರ್ಮಾನಕ್ಕೆ ಆಧೀನರಾಗಬೇಕಾದ್ದು ಅಗತ್ಯ. ಪ್ರಾಂತಗಳನ್ನು ಪುನರ್ಘಟಿಸುವಾಗ ಕೇವಲ ಭಾಷೆಯೊಂದೇ ತಳಹದಿಯಾಗದೆ, ಆಡಳಿತದ ಅನುಕೂಲತೆ, ಆರ್ಥಿಕ ದೃಷ್ಟಿಗೂ ಪ್ರಾಮುಖ್ಯತೆ ಕೊಡಬೇಕೆಂಬುದು ನೆಹರೂರವರ ಮತ. ಅಂತೆಯೇ ನೆಹರೂ ಇದೀಗ ಭಾಷಾವಾರು ಪ್ರಾಂತದ ಪುನರ್ಘಟನೆಗಾಗಿ ಒಂದು 'ಉಚ್ಚ ಮಟ್ಟದ ಆಯೋಗ' ರಚಿಸುವ ನಿರ್ಧಾರ ಮಾಡಿದ್ದಾರೆ. ಇದಕ್ಕೆ ನಾವು ಬೆಂಬಲ ಕೊಡಬೇಕು. ಭಾರತದ ಐಕ್ಯತೆಯನ್ನು ಖಂಡತುಂಡ ಘೋರಣೆಯಿಂದ ಕಾಪಾಡಿದ ಕೀರ್ತಿ ನೆಹರೂರವರಿಗೆ ಸಲ್ಲಬೇಕು.

ನೆಹರೂ ದಿನದ 18 ಗಂಟೆ ಕಾಲ ವಿಶ್ರಾಂತಿ ಇಲ್ಲದೆ ಭಾರತವನ್ನು ರಾಮರಾಜ್ಯವಾಗಿ ರೂಪಿಸಲು ದುಡಿಯುತ್ತಿರುವ ಮಹಾ ವ್ಯಕ್ತಿ. ಭಾರತದ ಸಾರಥ್ಯ ಅವರ ಶೈಯಲ್ಲಿ ಭದ್ರವಾಗಿರುವ ತನಕ ನಮಗೆ ಆಂತರಿಕವಾಗಿಯಾಗಲೀ, ಅಂತರಾಷ್ಟ್ರೀಯವಾಗಿಯಾಗಲೀ ಯಾವ ಹೆದರಿಕೆಯೂ ಇಲ್ಲ.

ಪೋತಿಲಾಲ್ ಹಿಂದೊಮ್ಮೆ ಹೇಳಿದ 'ನೆಹರೂ ಇರುವ ತನಕ ಭಾರತದ ಧ್ವಜ ಅಪವಿತ್ರವಾಗಲಾರದು' ಎಂಬ ಭವಿಷ್ಯವಾಣಿ ಇಂದು ಸತ್ಯವಾಗಿ ಪರಿಣಮಿಸಿದೆ.

ಇದೀಗ 64 ವತ್ಸರಗಳ ಹೊಸಿಲು ದಾಟುತ್ತಿದ್ದಾರೆ. ಭಾರತದ ಜನಕೋಟಿಯ ಉದ್ಧಾರಕ್ಕೆ-ರಾಮರಾಜ್ಯದ ನಿರ್ಮಾಣಕ್ಕೆ-ದಲಿತ ಜನರ ಸುಖದುಸಿರು ಕೇಳುವುದಕ್ಕೆ-ಪ್ರಪಂಚದ ಶಾಂತಿ ಶಾಶ್ವತವಾಗುವುದಕ್ಕೆ ಜನನಾಯಕ ನೆಹರು ಚಿರಂಜೀವಿಯಾಗಲಿ! ಅವರ ಚೈತನ್ಯಪೂರ್ಣ ಜೀವನವು ಚಿರಂಜೀವಿಯಾಗಲಿ! ಭಾರತದ ಭಾಗ್ಯ ಬೆಳಗಲಿ!

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
6ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ ಚಂದಾಸ್ವೀಕರಿಸುವುದಿಲ್ಲ.		Subscription will not be accepted for less than 6 months	

To 16-11-53

Sri.

Edited Printed & Published by T. B. Keshava Rao, Nava Bharat Printing Press, Bellary.

ನವಭಾರತ

ಸೋಮವಾರ
ಡಿಸೆಂಬರ್
೭, ೧೯೫೩

ವರ್ಷ 16 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ | ಸಂಪಾದಕರು ಮತ್ತು ಪ್ರಕಾಶಕರು
ಸಂಚಿಕೆ 30 | ಉಷಃಪತ್ರ! ಜಾಗ್ರತೆ!! ಸಾಹಸವಾದ ಬೋಧನೆ!!! | ಟಿ. ಬಿ. ಕೇಶವರಾವ್

ನಿರುದ್ಯೋಗ ನಿವಾರಣೆ ಹೇಗೆ?

ಉದ್ಯೋಗಾವಕಾಶ ಹೆಚ್ಚಿಸಿದವರಿಗೆ ಹಣ ಸಹಾಯ ಮಾಡುವುದಾಗಿ ಮಂತ್ರಿಗಳ ಭರವಸೆ

ದೇಶದಲ್ಲಿ ಈಗೊದಗಿರುವ ನಿರುದ್ಯೋಗ ಪರಿಸ್ಥಿತಿಯನ್ನು ನಿವಾರಿಸಲು ಸಾರ್ವಜನಿಕ ಮತ್ತು ಖಾಸಗಿ ವಿಭಾಗಗಳೆರಡಾದ್ದೂ ಹೆಚ್ಚು ಬಂಡವಾಳ ಹಾಕಬೇಕಾದ ಅಗತ್ಯವಿರುವುದಾಗಿಯೂ, ಆದಕ್ಕೆ ಅವಕಾಶವೂ ಇರುವುದಾಗಿಯೂ ಆರ್ಥಿಕ ಮಂತ್ರಿ ಶ್ರೀ ಸಿ. ಡಿ. ದೇಶಮುಖ್ ಈ ದಿನ ಲೋಕಸಭೆಯಲ್ಲಿ ತಿಳಿಸಿದರು.

ನಿರುದ್ಯೋಗ ಪರಿಸ್ಥಿತಿಯನ್ನು ನಿವಾರಿಸಲು ಕೈಗೊಳ್ಳಬೇಕಾದ ಸ್ವಲ್ಪ ಕಾಲಾವಧಿ ಕ್ರಮಗಳ ಜೊತೆಗೆ ಸುದೀರ್ಘ ಕಾಲಾವಧಿ ಕ್ರಮಗಳನ್ನೂ ಸೂಚಿಸಿದ ಸಂತೆ ಬಂಡವಾಳವನ್ನೂ ಹಾಕಬೇಕೆಂದು ಅವರು ತಿಳಿಸಿದರು. ಆ ರೀತಿ ಮಾಡಿ ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕೆಂದರು.

ಲೋಕಸಭೆಯಲ್ಲಿ ಈ ದಿನ ಕಾಂಗ್ರೆಸ್ ಸದಸ್ಯರಾದ ಶ್ರೀ ಎಸ್. ವಿ. ಗಾಡ್ಗಿಲ್‌ರವರು ಮಾಡಿದ ನಿರುದ್ಯೋಗಿಗಳಿಂದ ಪ್ರತಿನಿಧಿಸಿ ಕರುಣಾಜನಕ ಪತ್ರಗಳು ಒಮ್ಮತ್ತುವುದಾಗಿಯೂ, ನಿರುದ್ಯೋಗ ಸಮಸ್ಯೆ ವಿಷಯವಾಗಿ ಬೆಳೆಸು ನಿರ್ಣಯಿಯಾಗುತ್ತಿರುವುದಾಗಿಯೂ, ಬೇಗ ಏನಾದರೂ ಮಾಡಿ ಅದನ್ನು ಪರಿಹರಿಸದೆ ಇದ್ದರೆ ಹಿಂದೆಂದೂ ಇಲ್ಲದಂಥ ಭಾರಿ ಬಿಕ್ಕಟ್ಟು ದೇಶದಲ್ಲಿ ಉಂಟಾಗುವುದೆಂದೂ ತಿಳಿಸಿದರು

ಲೋಕಸಭೆಯಲ್ಲಿ ಈ ದಿನ ಕಾಂಗ್ರೆಸ್ ಸದಸ್ಯರಾದ ಶ್ರೀ ಎಸ್. ವಿ. ಗಾಡ್ಗಿಲ್‌ರವರು ಮಾಡಿದ ನಿರುದ್ಯೋಗಿಗಳಿಂದ ಪ್ರತಿನಿಧಿಸಿ ಕರುಣಾಜನಕ ಪತ್ರಗಳು ಒಮ್ಮತ್ತುವುದಾಗಿಯೂ, ನಿರುದ್ಯೋಗ ಸಮಸ್ಯೆ ವಿಷಯವಾಗಿ ಬೆಳೆಸು ನಿರ್ಣಯವನ್ನು ಮಂಡಿಸಲಿರುವುದಾಗಿಯೂ, ಬೇಗ ಏನಾದರೂ ಮಾಡಿ ಅದನ್ನು ಪರಿಹರಿಸದೆ ಇದ್ದರೆ ಹಿಂದೆಂದೂ ಇಲ್ಲದಂಥ ಭಾರಿ ಬಿಕ್ಕಟ್ಟು ದೇಶದಲ್ಲಿ ಉಂಟಾಗುವುದೆಂದೂ ತಿಳಿಸಿದರು

ಪಂಚವಾರ್ಷಿಕ ಯೋಜನೆಯ ಪುನರಾಣವನ್ನು 175 ಕೋಟಿ ರೂಪಾಯಿಗಳಷ್ಟು ಹೆಚ್ಚಿಸಬೇಕೆಂದು ಪ್ಲಾನಿಂಗ್ ಕಮಿಷನ್ ನಿರ್ಧರಿಸಿರುವುದರಿಂದ ಸಾರ್ವಜನಿಕ ವಿಭಾಗಗಳಲ್ಲಿ ಮುಂದಿನ ಎರಡು ವರ್ಷಗಳಲ್ಲಿ ವರ್ಷಕ್ಕೆ 625 ಕೋಟಿ ರೂಪಾಯಿಗಳಷ್ಟು ಹೆಚ್ಚಿಸಬೇಕಾಗುವುದೆಂದೂ, ನೊದಲೆರಡು ವರ್ಷಗಳಲ್ಲಿ ವರ್ಷಕ್ಕೆ 300 ಕೋಟಿ ರೂಪಾಯಿಗಳಷ್ಟು ಸ್ವಲ್ಪ ಕಡಮೆಯೂ, ಈ ವರ್ಷ 415 ಕೋಟಿ ರೂಪಾಯಿಗಳು ಮಾತ್ರವೂ ಹೆಚ್ಚಾಗಲಿರುವುದೆಂದೂ ಅವರು ತಿಳಿಸಿದರು.

ಪಂಚವಾರ್ಷಿಕ ಯೋಜನೆಯನ್ನು ಪೂರ್ಣವಾಗಿ ರದ್ದು ಗೊಳಿಸಬೇಕೆಂದು ಡಾ|| ಸ್ಯಾಮ್ಯಾಸ್ವಾಮಿ ಹೇಳಿದರು. ಹೊಸ ಯೋಜನೆಯನ್ನು ಮಾಡಬೇಕೆಂದು ಅವರು ತಿಳಿಸಿದರು.

ಈ ದಿನ ಸಭೆ ಎದ್ದಾಗ ನಿರ್ಣಯದ ಬಗ್ಗೆ ಚರ್ಚೆ ಇನ್ನೂ ಮುಗಿದಿರಲಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ವೆಚ್ಚ ಹೆಚ್ಚು ಇರುವುದರಿಂದ ಒಳನಾಡಿನಲ್ಲಿ ಹಣದ ಪರಿಮಾಣ ಹೆಚ್ಚುವುದೆಂದೂ, ಉದ್ಯೋಗ ವೆಚ್ಚುವೆಂದೂ ಅವರು ಹೇಳಿದರು.

ಖಾಸಗಿ ವಿಭಾಗ

ಖಾಸಗಿ ವಿಭಾಗದಲ್ಲಿ ವೆಚ್ಚು ಬಂಡವಾಳ ಬರಲು ತಮ್ಮ ಕೈಲಾದುದನ್ನೆಲ್ಲ ಮಾಡಲೇಕೆಂದು ಸರ್ಕಾರ ಆರಿಸಿರುವುದಾಗಿ ಶ್ರೀ ದೇಶಮುಖ್ ಹೇಳಿದರು. ದೀರ್ಘ ಕಾಲಾವಧಿ ಹಣ ಸಹಾಯವು ಖಾಸಗಿ ಕೈಗಾರಿಕೆಗಳಿಗೆ ಇಲ್ಲದಿದ್ದರೆ, ಸರಿಯಾದ ಯೋಜನೆಗಳನ್ನು ಮುಂದಿಡುವವರಿಗೆ ದೀರ್ಘಕಾಲಾವಧಿ ಹಣ ಸಹಾಯವನ್ನು ನೀಡಲು ಸರ್ಕಾರ ಮುಂದೆ ಬರುವುದಾಗಿಯೂ ಶ್ರೀ ದೇಶಮುಖ್ ತಿಳಿಸಿದರು

ಕೊನೆಯ ಪುಟಕ್ಕೆ

ಬಳ್ಳಾರಿಯ ಆಡಿಷನಲ್ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O S 363/51 I. A. 22 /53

BETWEEN

ಮೆವೆಹಾಳು ಬಾಲನರಸಪ್ಪ, ತಂದೆ ಮೆವೆಹಾಳು ಹನುಮಂತಪ್ಪ, ಮರ್ಚೆಂಟ್, ಬ್ರೂಸ್‌ಪೇಟ್, ಬಳ್ಳಾರಿ ... ವಾದಿ

Vs

ಯಿನ್ನೆ ಬಸಪ್ಪ, ತಂದೆ ಯಿನ್ನೆ ಯೆಂಕಪ್ಪ, ಜರಾಯ್ತಿ ಬಾದನಹಟ್ಟಿ ಗ್ರಾಮ, ಬಳ್ಳಾರಿ ತಾಲೂಕು ... ಪ್ರತಿವಾದಿ

ಮೇಲ್ಕಾಣಿಸಿದ I. A. ನಂಬರು 223/53 ಪೈನಲ್ ಡಿಕ್ರಿ – ಯಾ – ಅಂತಿಮ ತೀರ್ಮಾನಕ್ಕಾಗಿ 24-12-1953 ಕ್ಕೆ ವಾಯ್ದೆ ಹಾಕಲಾಗಿದೆ ಆದಿನ ಮೇಲ್ಕಾಣಿಸಿದ ಕೋರ್ಟಿನಲ್ಲಿ ಪ್ರಾತಃಕಾಲ 10-30ಕ್ಕೆ ಆಕ್ಷೇಪಣೆಗಳಿಳ್ಳವರು, ಖುದ್ದಾಗಲಿ ಅಥವಾ ವಕೀಲರ ಮೂಲಕವಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಾದರುಪಡಿಸಲು ಈ ಮೂಲಕ ತಿಳಿಸಲ್ಪಟ್ಟಿರುತ್ತಾರೆ.

ಬಿ. ಕಲ್ಲಪ್ಪ ರಾವ್
ಮಾನಿಯರು — ಅಡ್ವೊಕೇಟ್

'ಈಶಾನ್ಯ ಗಡಿಯಲ್ಲಿ ಶಾಂತಿ ಸ್ಥಾಪಿಸುತ್ತೇವೆ'

ಲೋಕ ಸಭೆಯಲ್ಲಿ ಪಂ. ನೆಹರೂರವರ ಭರವಸೆ

ಅದರ ಅಭಿಯ ಜನರನ್ನು ನಾಶಗೊಳಿಸುವುದು ಸರ್ಕಾರದ ನೀತಿಯಲ್ಲ

ಇತ್ತೀಚೆಗೆ ಐದು ಮಂದಿ ಅಸ್ಸಾಂ ಸೈನಿಕರೂ, ಮೂವತ್ತು ಮಂದಿ ಗುಪ್ತಗಾಮಿನ ಜನರೂ ಸತ್ತ ಈಶಾನ್ಯ ಗಡಿಯಲ್ಲಿರುವ ಅಡಳಿತಕ್ಕೊಳಗಾಗದ ಪ್ರದೇಶದಲ್ಲಿ ಜನರ ಮನಸ್ಸಿಗೆ ಭೀತಿಯುಂಟುಮಾಡುವುದಾಗಲಿ, ಕೊಲ್ಲುವುದಾಗಲಿ, ನಾಶ ಮಾಡುವುದಾಗಲಿ, ಭಾರತ ಸರ್ಕಾರದ ನೀತಿಯಲ್ಲ. ಎಂಬುದಾಗಿ ಪ್ರಧಾನಿ ಪಂಡಿತ ನೆಹರೂರವರು ಲೋಕ ಸಭೆಯಲ್ಲಿ ತಿಳಿಸಿದರು.

"ಆ ಗಡಿಯಲ್ಲಿ ಖಂಡಿತ ನಾವು ಶಾಂತಿ ಸ್ಥಾಪನೆ ಮಾಡುತ್ತೇವೆ. ನಿಜವಾದ ತಪ್ಪಿತಸ್ಥರನ್ನು ಮತ್ತು ದೌರ್ಜನ್ಯಕ್ಕೆ ಕಾರಣರಾದ ಮುಖಂಡರನ್ನು ಶಿಕ್ಷಿಸುತ್ತೇವೆ. ಆದರೆ ನಿರಪರಾಧಿಗಳನ್ನು, ತಿರುವಳಿಕೆ ಇಲ್ಲದೆ ತಪ್ಪುಗ್ರಹಿಕೆಯಲ್ಲಿ ಬ್ಬರನ್ನೂ ಶಿಕ್ಷಿಸಲು ನಾವು ಇಷ್ಟಪಡುವುದಿಲ್ಲ," ಎಂಬುದಾಗಿ ಪಂಡಿತ ನೆಹ್ರೂರವರು ಹೇಳಿದರು.

ಶ್ರೀ ದೇವೇಶ್ವರ್ ಶರ್ಮಾರವರು ಹಾಕಿದ ತುರ್ತು ಪ್ರಶ್ನೆಗೆ ಉತ್ತರ ಕೊಟ್ಟು ಪ್ರಧಾನಿ ನೆಹ್ರೂ ಮೇಲಿನಂತೆ ತಿಳಿಸಿದರು. ಈಶಾನ್ಯ ಗಡಿ ಪ್ರದೇಶದಲ್ಲಿ ನಡೆದ ಘಟನೆಗಳನ್ನು ಅವರು ತಿಳಿಸಿ ಸರ್ಕಾರ ಕೈಗೊಳ್ಳಬೇಕೆಂದಿರುವ ಕ್ರಮಗಳನ್ನು ವಿವರಿಸಿದರು.

"ಏಪರೀತ ಕೆಮ್ಮೆಯುಳ್ಳ ಈ ಒಲಿಷ್ಟ ಜನರ ನೇಲೆ ತೀವ್ರ ಶಿಕ್ಷಾ ಕ್ರಮವನ್ನು ಕೈಗೊಳ್ಳುವುದೇನೂ ನಮಗೆ ಕಷ್ಟವಾಗಿರಲಿಲ್ಲ. ಅವರ ಹಳ್ಳಿಗಳ ಮೇಲೆ ಬಾಂಬ್‌ಗಳನ್ನು ಹಾಕಿ ಅವರಲ್ಲನೇಕರನ್ನು ಕೊಲ್ಲಬಹುದಾಗಿತ್ತು. ಅದಕ್ಕೇನೂ ಹೆಚ್ಚು ಕೌಶಲತೆ ಬೇಕಾಗಿಲ್ಲ. ಆದರೆ, ಈ ಪ್ರಕರಣವನ್ನು ಕೇವಲ ಒಂದು ಶಕಾಯಿತ ಅಥವಾ ಗಲಭೆ ಪ್ರಕರಣದಂತೆ ಭಾವಿಸಲು ನಾವು ಇಷ್ಟಪಟ್ಟಿದ್ದೇವೆ," ಎಂದು ನೆಹ್ರೂ ಹೇಳಿದರು.

ದೃಢವಾದ, ಪ್ರಬಲವಾದ ಮತ್ತು ಸಹಾನುಭೂತಿಯುಕ್ತವಾದ ನೀತಿಯನ್ನು ಅನುಸರಿಸುವುದರಿಂದ ಸರ್ಕಾರ ಈ ಜನರ ಮೈತ್ರಿ ಮತ್ತು ಗೌರವಗಳನ್ನು ಸಂಪಾದಿಸಲು ಸಾಧ್ಯವೆಂದು ಪ್ರಧಾನಿ ನೆಹ್ರೂ ತಿಳಿಸಿದರು. ಸೆರೆಹಿಡಿದಿರುವವರನ್ನೂ, ಶಸ್ತ್ರಾಸ್ತ್ರಗಳನ್ನೂ ಒಂದು ನಿರ್ದಿಷ್ಟ ದಿನಕ್ಕೆ ಮೊದಲು ಒಪ್ಪಿಸಬೇಕೆಂದೂ ಇಲ್ಲದಿದ್ದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ಕೊಡಲಾಗಿದೆಯೆಂದೂ ಕೆಲವು ಮುಖಂಡರು ಸರ್ಕಾರಕ್ಕೆ ಸಹಕಾರ ನೀಡಲು ಮುಂದೆ ಬಂದಿರುವುದಾಗಿಯೂ ನೆಹ್ರೂ ಸೂಚಿಸಿದರು.

ಸಲುವಳಿ ಸೂಚನೆಗೆ ತಿರಸ್ಕಾರ

ಇದಕ್ಕೆ ಮೊದಲು ಇದೇ ವಿಚಾರವಾಗಿ ಬಂದಿದ್ದ ನಿಲುವಳಿ ಸೂಚನೆಯೊಂದನ್ನು ಸ್ಪೀಕರ್ ಮಾವಲಂಕರ್ ರವರು 'ಪ್ರಧಾನಿ ನೆಹ್ರೂರವರು ಈ ವಿಚಾರವಾಗಿ ಹೇಳಿಕೆ ಕೊಡುವುದು, ಎಂಬುದಾಗಿ ಹೇಳಿ ತಿರಸ್ಕರಿಸಿದರು.

ಈಶಾನ್ಯ ಗಡಿ ಪ್ರದೇಶದ ಜನರಿಗೆ ಅರ್ಥಿಕ ಮತ್ತು ಇವರ ದೀರ್ಘ ಕಾಲಾವಧಿ ಸಹಾಯಗಳನ್ನು ಕೊಡುತ್ತಿರುವುದಾಗಿ ನೆಹ್ರೂ ವ್ಯೂಫೆರ್ ಹೆಚ್. ಎನ್. ಮುಖರ್ಜಿಯವರಿಗೆ ತಿಳಿಸಿದರು.

ಕಾಶ್ಮೀರ ಕಬಳಿಸಲು ಪಾಕ್ ಹಂಚಿಕೆ

ಪಾಕಿಸ್ತಾನ-ಅಮೆರಿಕಾ ಮಿಲಿಟರಿ ಸಂಧಾನ ರದ್ದು

'ಪಾಕಿಸ್ತಾನವು ಅಮೆರಿಕಾ ಸಂಯುಕ್ತ ಸಂಸ್ಥಾನದೊಡನೆ ಮಿಲಿಟರಿ ಒಪ್ಪಂದಕ್ಕಾಗಿ ಮಾತುಕತೆ ನಡೆಸುತ್ತಿರುವುದು ಕಾಶ್ಮೀರವನ್ನು ಕಬಳಿಸುವುದಕ್ಕೇ ಆಗಿದೆ ಈ ಹಂಚಿಕೆಯನ್ನೂ, ದ್ರೋಹವನ್ನೂ ಕಾಶ್ಮೀರವು ತೀವ್ರವಾಗಿ ಸಂಗ್ರಹಿಸುವುದು' ಎಂಬುದಾಗಿ ಕಾಶ್ಮೀರದ ವಿದ್ಯಾಮಂತ್ರಿ ಶ್ರೀ ಜಿ ಎಂ. ಸಾದಿಕ್ ರು ಬಾರಾಮುಲ್ಲಾದಲ್ಲಿ ಸಾರ್ವಜನಿಕ ಸಭೆಯಲ್ಲಿ ಘೋಷಣೆ ಮಾಡುತ್ತಿರುವುದಾಗಿ ತಿಳಿಸಿದರು.

೩೦ ಲಕ್ಷರೂ. ಬೆಲೆ ಬಾಳುವ ಇಂದ್ರನೀಲಮಣಿ ಪತ್ತೆ

ಅದು ಯಾರಿಗೆ ಸೇರಿತ್ತೆಂಬ ಬಗ್ಗೆ ಕೋರ್ಟಿನಲ್ಲಿ ವಿವಾದ

ಅದನ್ನು ಕೊಳ್ಳುವವರು ಅಮೆರಿಕಾದವರ ಹೊರತು ಮತ್ತಾರೂ ಇಲ್ಲ

ಉತ್ತರ ಬರ್ಮಾದ ಮೊಗಾಕ್ ಎಂಬಲ್ಲಿ ಪ್ರಪಂಚದಲ್ಲಿಯೇ ಭಾರಿಯಾದ ಇಂದ್ರ ನೀಲಮಣಿ ಸಿಕ್ಕಿದೆ.

ಮೊಗಕ್ ಪ್ರದೇಶವು ನೀಲಮಣಿಗೆ ಪ್ರಶಸ್ತವಾದ ಸ್ಥಳ.

ಈಗ ಸಿಕ್ಕಿರುವ ಇಂದ್ರ ನೀಲಮಣಿ ನಕ್ಷತ್ರಾಕಾರದಲ್ಲಿದ್ದು, ಚೆನ್ನಾಗಿ ಒಂದೇ ಒಂದು ಮಣಿಯಂತೆ ಅದನ್ನು ಕತ್ತರಿಸಿದರೆ 30 ಸಾವಿರ ಕ್ಯಾರೆಟ್‌ಗಳಷ್ಟು ತೂಕವಾಗಿರುತ್ತದೆ.

ಆದರೆ ಈಗಿನ ಬೆಲೆ ಸುಮಾರು 30 ಲಕ್ಷರೂ. ಗಳಾಗಬಹುದು. ಬರ್ಮಾ ದೇಶದಲ್ಲಿ ಯಾರಿಗೂ ಅದನ್ನು ಕೊಂಡು ಕೊಳ್ಳಲು ಶಕ್ತಿಯಿಲ್ಲ.

ಪ್ರಾಯಶಃ ಕುಬೇರ ಸಂಪತ್ತಿರುವ ಅಮೆರಿಕಾ ದೇಶದವರು ಇದನ್ನು ಅರು ಲಕ್ಷ ಡಾಲರುಗಳಿಗೆ ಕೊಂಡು ಕೊಳ್ಳಬಹುದು.

ಅದು ಯಾರಿಗೆ ಸೇರಿರಬೇಕೆಂಬ ಬಗ್ಗೆ ಕೋರ್ಟ್ ವ್ಯವಹಾರ ಬೆಳೆದಿರುವುದರಿಂದ ಅದು ಕೋರ್ಟಿನ ವಶದಲ್ಲಿದೆ.

ಒಬ್ಬ ಬರ್ಮಾ ದೇಶದವನ್ನು ಆ ಮಣಿ ತನ್ನದೆಂದು ಹೇಳುತ್ತಿದ್ದಾನೆ. ಆದರೆ ಅದು ಸಿಕ್ಕಿದ ಸ್ಥಳ ಒಬ್ಬ ಚೀನಾದವನಿಗೆ ಸೇರಿದ್ದು.

4 ವರ್ಷದಲ್ಲಿ ವಿಶಾಲಾಂಧ್ರದ ಸ್ಥಾಪನೆ

ಕರ್ನೂಲಿನಿಂದ ರಾಜಧಾನಿ ವರ್ಗವಾಗುವುದು

ಆಂಧ್ರ ಅಸೆಂಬ್ಲಿಯಲ್ಲಿ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರ ಹೇಳಿಕೆ

ಇನ್ನು ಮೂರು ವರ್ಷಗಳೊಳಗೆ ವಿಶಾಲಾಂಧ್ರ ಸ್ಥಾಪನೆಯ ಪ್ರಶ್ನೆ ಇತ್ಯರ್ಥವಾಗದಿದ್ದರೆ, ಆಗ ಆಂಧ್ರದ ಮಧ್ಯಂತರ ರಾಜಧಾನಿಯನ್ನು ಗುಂಟೂರು ಅಥವಾ ವಿಜಯವಾಡಾ ಅಥವಾ ವಾಟ್ಟೇರ್‌ಲ್ಲಿ ಸಂದರ್ಭೋಚಿತವಾಗಿ ಸ್ಥಾಪಿಸಲು ಸರ್ಕಾರ ಕ್ರಮಗಳನ್ನು ಕೈಗೊಳ್ಳುವುದಾಗಿ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರವರು ಈ ದಿನ ಆಂಧ್ರ ಅಸೆಂಬ್ಲಿಯಲ್ಲಿ ತಿಳಿಸಿದರು.

ಶ್ರೀಕೃಷ್ಣ ಸೂತ್ರಕ ನಿರ್ಣಯಕ್ಕೆ ರಾಜಧಾನಿ ಪ್ರಶ್ನೆಯ ಸಂಬಂಧವಾಗಿ ಸೂಚಿಸಲಾಗಿರುವ ತಿದುಪಡಿಗಳ ಮೇಲೆ ನಿರ್ಧಾರ ಕೈಗೊಳ್ಳಲಿರುವ ಆಂಧ್ರ ಅಸೆಂಬ್ಲಿ ಈ ದಿನ ಒಂದು ರೀತಿಯಲ್ಲಿ ವಿಚಿತ್ರವಾದ ವಾತಾವರಣದಲ್ಲಿ ಸಭೆ ಸೇರಿತು. ವಿಜಯವಾಡಾ-ಗುಂಟೂರು ಪ್ರದೇಶದಲ್ಲಿ ಆಂಧ್ರದ ಮಧ್ಯಂತರ ರಾಜಧಾನಿಯನ್ನು ಸ್ಥಾಪಿಸಲಾಗುವುದೆಂದು ನಿರ್ಧರಿಸಿದರೆ, ಸಾಮೂಹಿಕವಾಗಿ ರಾಜೀನಾಮೆ ಕೊಡಲಿದ್ದಾಗಿ ರಾಯಲಸೀಮೆಯ 23 ಮಂದಿ ಸದಸ್ಯರು ನಿರ್ಧರಿಸಿರುವುದರಿಂದ ಈ ಬಿಕ್ಕಟ್ಟು ಉಂಟಾಗಿದೆ.

ರಾಜಧಾನಿ ವಿಚಾರದಲ್ಲಿ ಒಂದು ಒಪ್ಪಿಗೆಗೆ ಬರಲು ನಿನ್ನೆ ರಾತ್ರಿ ಅಸೆಂಬ್ಲಿಯಲ್ಲಿನ ಕಮ್ಯೂನಿಸ್ಟೇತರ ಪಕ್ಷಗಳ ಪ್ರಮುಖರೊಡನೆ ಮಾತುಕತೆ ನಡೆಸಿದ ಶ್ರೀ ಪ್ರಕಾಶಂರವರು ತಾವು ಈ ದಿನ ವಾತಾವರಣ ಸಲಹೆ ವಿವಿಧ ಪಂಗಡಗಳ ಅಭಿಪ್ರಾಯಗಳನ್ನು ಸರಿಹೊಂದುವಂತೆ ರೂಪಿಸುವುದಾಗಿ ಹೇಳಿದರು.

ಸರ್ಕಾರದ ನಿಲುವು

ಸರ್ಕಾರದ ನಿಲುವನ್ನು ಶ್ರೀ ಟಿ. ಪ್ರಕಾಶಂರವರು ವಿವರಿಸುತ್ತ, ಕರ್ನೂಲನ್ನು ತಾತ್ಕಾಲಿಕ ರಾಜಧಾನಿಯಾಗಿ ನಾವು ಅರಿವಿದ್ದೆವು. ಪ್ರಾಯಂ ರಾಜಧಾನಿಯಾಗುವವರೆಗೂ ಕರ್ನೂಲೇ ರಾಜಧಾನಿಯಾಗಿರುವುದು. ಪ್ರಾಯಂ ರಾಜಧಾನಿಯ ನೇಮಕ ಪ್ರಾಂತಗಳ ಪುನರ್ವ್ಯವಸ್ಥೆಗಾಗಿ ನೇಮಕವಾಗಲಿರುವ ಫೈಜಲ್ ಕಮಿಷನ್ನಿನ ಕಾರ್ಯಾರಂಭವನ್ನೇ ಕಮಲಂಬಿಸಿದೆ. ಈ ಕಾರ್ಯ ಸಪ್ಟೆಂಬರ್‌ಲ್ಲೇ ಆರಂಭವಾಗುವುದೆಂದು ನಾವು ನಿರೀಕ್ಷಿಸಿದ್ದೇವೆ.

"ಫೈಜಲ್ ಕಮಿಷನ್ನಿನ ನಿರ್ಧಾರದ ಫಲವಾಗಿ ಹೈದರಾಬಾದಿನ ತೆಲುಗು ಪ್ರದೇಶಗಳುನ್ನು ಪ್ರಾಂತಕ್ಕೆ ಸೇರಿದರೆ, ಆಗ ಅವಶ್ಯಕತೆ ರಾಜ್ಯಕ್ಕೆ ಹೈದರಾಬಾದ್ ಸ್ಥಳ ನಿಕಟವಾಗಿರಲಿ ರಾಜಧಾನಿಯಾಗುವುದು. ಆದರೆ ಈ ಪ್ರಶ್ನೆ ಇನ್ನೂ ಮುಂದಿನ ವರ್ಷಗಳಲ್ಲಿ ಇತ್ಯರ್ಥವಾಗದಿದ್ದರೆ ಆಂಧ್ರದ ಮಧ್ಯಂತರ ರಾಜಧಾನಿಯನ್ನು ಗುಂಟೂರು ವಿಜಯವಾಡಾ ಅಥವಾ ವಾಟ್ಟೇರ್‌ಲ್ಲಿ ಸಂದರ್ಭೋಚಿತವಾಗಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದು" ಎಂದೂ ಹೇಳಿದರು.

ಸಲಹೆ ಎಲ್ಲರ ಅಭಿಪ್ರಾಯಗಳಿಗೂ ಸರಿಹೊಂದುವಂತಿರುವುದೆಂದು ಸದಸ್ಯರು ತಿದ್ದುಪಡಿಗಳನ್ನು ವಾಪಸು ತೆಗೆದುಕೊಂಡು ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಗುವಂತೆಯೂ, ಶಾಂತಿಯುತ ವಾತಾವರಣ ಕಾಪಾಡುವಂತೆಯೂ ಮಾಡಬೇಕೆಂದು ಶ್ರೀ ಪ್ರಕಾಶಂ ಮನವಿ ಮಾಡಿಕೊಂಡರು.

ಶ್ರೀ ಪ್ರಕಾಶಂರವರು ತೆಲುಗು ಭಾಷೆಯಲ್ಲಿ ಭಾಷಣ ಮಾಡಿದರು. ಅನಂತರ ಅವರ ಹೇಳಿಕೆಯನ್ನು ಉಪ ಪ್ರಧಾನ ಮಂತ್ರಿ ಶ್ರೀ ಎಸ್ ಕಂಜ್ಯರ ಲೆಡ್ಡಿಯವರು ಇಂಗ್ಲಿಷಿನಲ್ಲಿ ಓದಿದರು.

ಬಳ್ಳಾರಿ ಆಂಧ್ರಕ್ಕೆ ಸೇರಬೇಕಂತೆ!

ಬಳ್ಳಾರಿ ಪೌರಸಭೆಯ ತೀರ್ಮಾನ

ಬಳ್ಳಾರಿ ನಗರ-ಜಿಲ್ಲೆಯ ಗುತ್ತಿ, ಮೋಕಾ ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಿಕೊಂಡು ಆಂಧ್ರಕ್ಕೆ ಸೇರಬೇಕೆಂತಲೂ, ವಿಶಾಲಾಂಧ್ರ ರಾಜಧಾನಿಯನ್ನು ಕರ್ನೂಲಿನಲ್ಲಿ ಸ್ಥಾಪಿಸಬೇಕಾಗಿಯೂ ಬಳ್ಳಾರಿ ಪೌರಸಭೆಯು 23-11-53ರಲ್ಲಿ ತನ್ನ ವಿಶೇಷ ಸಭೆಯಲ್ಲಿ ಒಂದು ನಿರ್ಣಯ ಮಾಡಿದೆ. 19 ಜನರು ಪರವಾಗಿಯೂ ನಿಲು ಜನರು ವಿರೋಧವಾಗಿಯೂ ಓಟು ಮಾಡಿದರು. ಅಕ್ಟೋಬರು 1ರಿಂದ ಬಳ್ಳಾರಿ ನಗರವು ಎಲ್ಲ ವಿಧಗಳಿಂದಲೂ ಜಾಗತಿಯಿಂದಲೂ ನಿರ್ಣಯದಲ್ಲಿ ಹೇಳಲಾಗಿದೆ.

ಈ ಪ್ರಸ್ತಾಪನೆಯನ್ನು ರದ್ದುಪಡಿಸಿ ಆಂಧ್ರ ಕರ್ನಾಟಕ ಸಮಸ್ಯೆಯ ಬಗ್ಗೆ ಎಷ್ಟು ಜನ ಪೌರಾಭಿಗೆ ಆಗಿ ಬರಬಹುದೆಂದು ಸನ್ನು ನೋಡಬೇಕೆಂದು ಜನರು ಆಶಿಸುತ್ತಾರೆ.

ಜರ್ಮನಿಯ ಸುಹಿಲೆಗೆ ಯೋಗಭ್ಯಾಸ

ಜರ್ಮನಿಯ ಪ್ರಾಕ್ಟಾರ್ಸನ ಕಂಪೆನಿಯ ಮಾಲಿಕಾಗಿದ್ದ ಫ್ರೌ ಹೆಲರ್ ಎಂಬ ಮಹಿಳೆಯೊಬ್ಬಳು ಸಮ ೧೧೦೧ ನೆಲೆಯ ಪ್ರಯಾಣ ಬೆಳೆಸಿ ಭಾರತಕ್ಕೆ ಬಂದಿದ್ದಾಳೆ. ಋಷಿಕೇಶದಲ್ಲಿರುವ ಸ್ವಾಮಿ ಶಿವಾನಂದರ ಶಿಷ್ಯೆಯಾಗಿ ಯೋಗಾಭ್ಯಾಸ ಕಲಿಯುವಳಂತೆ.

—ಕರ್ನಾಟಕ ಸಂಘ, ಮದ್ರಾಸು—

- ಕಥಾ ಸ್ಪರ್ಧೆ -

ಸಂಘದ ಆಶ್ರಯದಲ್ಲಿ ನಡೆಯಲಿರುವ ಕಥಾಸ್ಪರ್ಧೆಗೆ, ಕತೆಗಳನ್ನು ಕಳುಹಿಸುವವರಿಗೆ ಸಮಯವನ್ನು ಹಿಂದಿನ 15 ನೇ ತಾರೀಖಿನವರೆಗೆ ಮುಂದುವರಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಆಪೇಕ್ಷೆಯುಳ್ಳವರು ಕತೆಗಳನ್ನು ಕಾರ್ಯದರ್ಶಿ, ಕರ್ನಾಟಕ ಸಂಘ, 16ವೀರಸ್ವಾಮಿ ಪಿಳ್ಳೆ ಬೀದಿ ಮದ್ರಾಸ್ 8 ಇವರಿಗೆ ತಾ 15-12-1953 ಒಳಗೆ ತಲಪುವಂತೆ ಕಳುಹಿಸಬೇಕು. ಪ್ರತಿಯೊಂದು ಕಥೆಯೊಡನೆ ಪ್ರವೇಶ ಧನ ಆಣೆ ಎಂಟನ್ನು ಪೋಸ್ಟಲ್ ಆರ್ಡರ್ ಮೂಲಕ ಕಳುಹಿಸಬೇಕು.

Matinee at PRABHAT

3 DAYS 4 SHOWS FROM 10th Dec 1953

20th Fox Present

PONY SOLDIER (Technicolor)

—: ಬಳ್ಳಾರಿ ಪ್ರಭಾತದಲ್ಲಿ :—

ರೋಹಿಣಿಯವರ

★ ಪ್ರತಿಜ್ಞೆ ★ 2 ನೆ ವಾರ

ತಾರಾ ಗಣ:— ಸಾವಿತ್ರಿ, ಮಧು, ಗೀತ, ಸಾರಂಗಪಾಣಿ

★ ವೀರಮಾತೆ ★

ಕನ್ನಡ ಮಾಸಪತ್ರಿಕೆ ಧಾರವಾಡ

ಇಂದೇ ಚಂದಾದಾರರಾಗಿರಿ.

ಮುಖ್ಯ ಸಂಪಾದಿಕೆಯರು: ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ.

ಪ್ರಕಾಶಕರು :— ಶ್ರೀ ಬಿ. ನಾ. ಬೈಜವಾಲ ಬಿ. ಎ.

"ವೀರಮಾತೆ" ಕಾರ್ಯಾಲಯ ಧಾರವಾಡ.

ಕೇವಲ ಸ್ತ್ರೀಯರ ಸಹಾಯಕ್ಕಾಗಿಯೆ: ನಿಮ್ಮ ಮಾಸಪತ್ರಿಕೆ.

ವಾರ್ಷಿಕ ಚಂದಾ ಪದ್ಧತಿಗಳಿಗೆ ಒಪ್ಪಿಗೆಯಾಯಿ.

" ಸ್ಟೇಯಿಂಗೆ 4—8—0 ರೂಪಾಯಿ.

ಬಡಿ ಸಂಚಿಕೆ 6 ಆಣೆ

Coming at "PRABHAT"

Watch for the Date

Warner Bros Astounding Feature in natural vision.

3 Dimension

★ HOUSE OF WAX ★

COLOR BY WARNER COLOR

ಒಂದನೆ ಪುಟದಿಂದ

ಸ್ವಲ್ಪ ಕಾಲಾವಧಿ ಕ್ರಮಗಳು

ಸ್ವಲ್ಪ ಕಾಲಾವಧಿಯ ಪರಿಹಾರಗಳನ್ನು ಶ್ರೀ ದೇವರುಗಳು ಪ್ರಸ್ತಾಪಿಸಿ ಆಗಿಂದಾಗ್ಗೆ ಉಂಟಾಗುವ ನಿರುದ್ಯೋಗ ಪರಿಸ್ಥಿತಿಗಳನ್ನೆದುರಿಸಲು ವಿಸ್ತರಿಸಲ್ಪಡಬಹುದಾದ ಅಥವಾ ಸಂಕುಚಿತಗೊಳಿಸಲ್ಪಡಬಹುದಾದ ಯೋಜನೆಗಳನ್ನು ಮಾಡಬೇಕಾಗಿದೆಯೆಂದು ಹೇಳಿದರು.

ದೇಶದ ವಿದೇಶೀ ವಿನಿಮಯ ಸಾಧನ ಸಂಪತ್ತನ್ನು ಇನ್ನೂ ಪೂರ್ಣವಾಗಿ ಉಪಯೋಗಿಸಿಕೊಂಡಿಲ್ಲವೆಂದು ಶ್ರೀ ದೇವರುಗಳು ಭಾವಿಸಿದರು.

ಬರುವ ನಗ್ನ ಅಕ್ಕಿ ಆಮದಿಲ್ಲ

ಕಿಡ್ವಾಯ್‌ರವರ ಭರವಸೆ

ದೇಶದ ಆಹಾರೋತ್ಪತ್ತಿ ಈಗ ನಂತೆಯೇ ಬರುವ ಎಳಸು ವರ್ಷಗಳಲ್ಲೂ ನಡೆಯುವವರೆಗೆ ಆಮದು ಆಹಾರದ ಸಹಿತರ ಕ್ರಮಗಳಿಗೆ ಬೇಕಾಗಿಲ್ಲವೆಂದು ಕೇಂದ್ರದ ಆಹಾರ ಸಚಿವ ಶ್ರೀ ರಫೀ ಅಹಮದ್ ಕಿದ್ವಾಯ್ ಹೇಳಿದರು.

ರಫೀ ಸಾಹೇಬರು ಎರಡು ದಿವಸಗಳ ಭೇಟಿಗಾಗಿ ಕಲ್ಕತ್ತಾವಿಗೆ ಬಂದಿದ್ದಾರೆ. ಕಲ್ಕತ್ತೆಯ ಸೈಗಾರಿಕಾ ಪರಿಸ್ಥಿತಿ ಬಗ್ಗೆ ವರ್ಷವಲ್ಲಿ ಆಹಾರ ಧಾನ್ಯಗಳು ಏರುಪೇರುಗಳ ಗತ್ತಿಗೆ

ಭಾರತದಲ್ಲಿ ಭೂಮಿಯ ಜೀವ ಜೆನ್ನಿಗೆ ಬರುವಂತೆ ಅಕ್ಕಿಯನ್ನು ಹೊರಗೆ ಸಾಗಿಸುವ ಪ್ರಮೇಯವೇ ಇಲ್ಲ ಎಂದರು.

ರೇಷನಿಂಗ್ ಪದ್ಧತಿಯು ಎಂದು ಹೋಗುವುದೋ ಆದರೆ ಬೇಳೆ ಸಕ್ಕರೆಯನ್ನು ತಿಳಿಸುವುದಕ್ಕಾಗುವುದಿಲ್ಲವೆಂದು ಹೇಳಿದರು.

NAVA BHARAT, BELLARY. (Regd.M.No. 4746)

ನವಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ	6—0—0	One Year	6—0—0
6 ತಿಂಗಳಿಗೆ	3—8—0	Six months	3—8—0
ಆರು ತಿಂಗಳ ಕಡಿಮೆ.		Subscription will not be	
ಚಂದಾ ಸ್ವೀಕರಿಸುವದಿಲ್ಲ.		accepted for less than 6 months	

To 7-12-53

Sri.

Edited Pinted & Published by T. B. Keshava Rao, at Nava Bharat Printing Press, Bellary.

ಸಂಚಿಕೆ

ಸೋಮವಾರ
ಡಿಸೆಂಬರ್
೨೧, ೧೯೫೩

ವರ್ಷ 16 | ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರ ಪತ್ರಿಕೆ | ಸಂಪಾದಕರು
ಸಂಚಿಕೆ 31 | ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ನಿಬೋಧತ !!! | ಟಿ. ಬಿ. ಈಶ್ವರಯ್ಯ

ಭಾರತ-ಪಾಕಿಸ್ತಾನಗಳ -ಪ್ರಜಾಪ್ರಭುತ್ವ-

ಭಾರತ ಮತ್ತು ಪಾಕಿಸ್ತಾನಗಳಿಗೆ ಸ್ವಾತಂತ್ರ್ಯ ದೊರೆತುದು ಒಂದೇ ಸಮಯದಲ್ಲಾದರೂ ಭಾರತ ಎಷ್ಟೋ ವಿಚಾರಗಳಲ್ಲಿ ಪ್ರಗತಿಪಥದಲ್ಲಿ ಮುಂದೆ ಸಾಗಿದೆ ಎನ್ನುವುದು. ಪಾಕಿಸ್ತಾನ ಇನ್ನೂ ಸಂಧಿಗಾಲದಲ್ಲಿಯೇ ಸಾಗುತ್ತಿರುವಂತೆ ಕಾಣಿಸುತ್ತಿದೆ.

ಭಾರತದಲ್ಲಿ ಅಮೂಲಾಗ್ರ ಬದಲಾವಣೆ ಘಟಿಸಿದ್ದರೂ ಸಂವಿಧಾನವಾಗಿ ಆದರೆ ಶಾಂತಿಯುತವಾಗಿ ಮಹಾ ಚುನಾವಣೆಯನ್ನಾಗಿ ಪ್ರಜಾಸತ್ತಾತ್ಮಕ ಸಭ್ಯಸ್ಥರೂ ಪದವಿಯಲ್ಲಿ ಸ್ಥಾಪಿಸಲ್ಪಟ್ಟಿದ್ದು. ಘಟನೆಯಲ್ಲಿ ಸ್ವೀಕಾರವಾದ ಕೆಲವು ಉತ್ಪತ್ತಿಗಳು ಜಾಗೃತ ಪ್ರಜೆಗಳಿಗೆ ಸಾಕ್ಷಿಯಾಗಿರುವುವು. ಜಾತಿ-ಮತ-ಕುಲ ಭೇದವಿಲ್ಲದೆ ವಯಸ್ಕರಿಗೆಲ್ಲ ಸಮತೆದ ಸಮೀಯುವ, ಸಮಾನ ಪದವಿಕಾರ ಹಾಗೂ ಸಮುಸ್ಥಾತಂತ್ರ್ಯದ ಮೂಲಭೂತ ಹಕ್ಕುಗಳ ಭದ್ರತೆಯನ್ನು ಪ್ರಜೆಗಳಿಗೀಯುವ ಘಟನೆ ಏಕಾ ಮನೋವೃತ್ತಿಯುವರ್ಣದಂತಿರುವುದು. ಅಂತೆಯೆ ಸಾರ್ವಭೌಮ ತೃತ್ವಿತರುತಂತ್ರವಹಮು. ಪಂಡಿತ ನೆಹರುಗಳ ವರ್ಚಸ್ವೀ ನಾಯಕತ್ವದರ್ಶನವೆ. ಂತಹ ಉಜ್ವಲ ಘಟನೆಯನ್ನು ಭಾರತ ಸಾಧಿಸಲ್ಪಟ್ಟಿತು.

ಸ್ವಾತಂತ್ರ್ಯ ದೊರೆತೆ ಏಳನೆಯ ವರುಷದಲ್ಲಾದರೂ ಪಾಕಿಸ್ತಾನ ತನ್ನ ಘಟನೆಯ ನಿರ್ಣಯಕ್ಕೆ ಇದೀಗ ಬಂದಿದಿರುವುದು. ಭಾರತ ಜಾತ್ಯತೀತ ರಾಷ್ಟ್ರವಾಗಿರುವಾಗ ಪಾಕಿಸ್ತಾನ 'ಇಸ್ಲಾಂ ಪ್ರಜಾ ಪ್ರಭುತ್ವ'ದ ನಿರ್ಣಯ ಮಾಡಿರುವುದು ಹಿಂದೂ ಮತ್ತು ಮುಸ್ಲಿಂ ತತ್ವದ ಮೇಲೆ ರಚಿಸಲ್ಪಟ್ಟ ಪಾಕಿಸ್ತಾನಕ್ಕೆ ಮುಸ್ಲಿಂ ಪ್ರಜಾತ್ರಭುತ್ವವೇ ಒಪ್ಪುವಂತಹದೆ ದು ಅಲ್ಲಿಯ ಘಟನಾಸಮಿತಿಯಲ್ಲಿ ಮುಸ್ಲಿಂ ಸದಸ್ಯರೇತರು ವಾದಿಸಿದರು ಮಾತ್ರವಲ್ಲ ಸಮಿತಿಯ ನಿರ್ಣಯವಂತೆ ಪಾಕಿಸ್ತಾನದ ಅಧಿಕಾರ ಮುಖ್ಯಸ್ಥಿತಿ ಮುಸ್ಲಿಂರಿಗೇ ಸಲ್ಲುವಂತಾಗಿದ್ದು ಅದರಿಂದ ಸ್ವಿಧೇತರರನ್ನು ಈ ಕಾರಣದಿಂದ ಈ ಉನ್ನತ ಪದವಿಗೆ ಗೈರುಹಾಜರಿಡಿಸಿರುವಂತಾಯಿತು. ಇದು ಅವರಲ್ಲಿ ತೀವ್ರ ಅತೃಪ್ತಿಯನ್ನುಂಟುಮಾಡಿರುವ ಸಂಭವನೀಯವಿದೆ. ಜನಸಾಂಗಿಕ ಒಂದು ಸಭಾ ಜನರಲ್ಲಿ ಇಂತಹ ಅತೃಪ್ತಿ ಅಸೂಯೆಗಳು ಹುಟ್ಟುವ ಆ ರಾಜ್ಯದ ಪ್ರಜಾಪ್ರಭುತ್ವ ಮುಸ್ಲಿಂರಿಗಿ ನ ದೆಯಾಗುವುದು ಸಹಜವೇ ಸರಿ.

ಅಧಿಕಾರದಲ್ಲಿರುವ ರಾಜಕೀಯ ಪಕ್ಷ ಸಂಕುಚಿತ ದೃಷ್ಟಿಯುಳ್ಳದ್ದಾಗಿದ್ದರೆ ಈ ರೀತಿ ಪರಿಸ್ಥಿತಿ ಒದಗಲು ಕಾರಣವಾಗುವುದು. ಭಾರತದಲ್ಲಿ ಕಾಂಗ್ರೆಸ್ಸಿನ ದಿಗ್ದರ್ಶನದಿಂದ ಮಹತ್ವದ ಘಟನೆಯ ಲಾಭ ಪಡೆಯಿತು. ಕಾಂಗ್ರೆಸ್ಸಿನ ವಿರೋಧಿಗಳೂ ಈ ವಾತನ್ನು ಒಪ್ಪಲೇಬೇಕು! ಅಲ್ಪ ಸಂಖ್ಯಾಕರು ಈ ವಿಷಯದಲ್ಲಿ ಕೃತಜ್ಞರಾಗಿರಬೇಕು.

ಸ್ವಾತಂತ್ರ್ಯದೊರತೊಡನೆ ಕಾಂಗ್ರೆಸ್ ತನ್ನ ಕೆಲಸವನ್ನು ಪೂರ್ತಿಮಾಡಿದಂತಾಯಿತು, ಇನ್ನು ಅದರ ಅಗತ್ಯವಿಲ್ಲ, ಅದರ ಬರ್ಖಾಸ್ತು ಮಾಡಬಹುದು ಎಂದು ಅನೇಕರು ಅಭಿಪ್ರಾಯಪಟ್ಟಿದ್ದರು. ಆದರೆ ಪಾಕಿಸ್ತಾನದಲ್ಲಿ ನಡೆಯುತ್ತಿರುವ ಘಟನೆಗಳನ್ನು ನೋಡಿಯಾದರೂ ಉದಾತ್ತ ತತ್ವಗಳನ್ನು ಎಷ್ಟುಕೊಂಡಿರುವ ಪ್ರಭಾವೀ ಸಂಸ್ಥೆಗಳ ಆವಶ್ಯಕತೆಯನ್ನು ಇವರು ಮನಗಂಡಿರಬಹುದು.

ಭಾರತ ಪ್ರಧಾನಿಗಳಾದ ಪಂಡಿತ ನೆಹರುಗಳು ವಿಟ್ಟಾದಲ್ಲಿ ನೂಡಿದ ತಮ್ಮ ಭಾಷಣದಲ್ಲಿ ಇದನ್ನೇ ಹೇಳಿರುವರು. ಕೆಲವು ಸಂಸ್ಥೆಗಳನ್ನು ಸರಿಪಡಿಸಲಾಗಿದೆ ಎಂದು ಪ್ರಸ್ತಾಪಿಸಿದ್ದಾರೆ, ಬೇಡವೆ ಎಂಬ ಪ್ರಶ್ನೆಯನ್ನು ಮನಸ್ಸಿನಲ್ಲಿ ಉದಯಿಸುವಾಗ ಕಾಂಗ್ರೆಸ್ಸಿನ ಆವಶ್ಯಕತೆ ಇಂದಿಗಿಂತಲೂ ಇಂದು ಜಗತ್ತಿನೆಂಬ ಸಂಸ್ಥೆ ಸಧಿಕಾರ ನಸ್ಸಿಲ್ಲಿ ಉಂಟಾಗಿರುವುದೆ ಎಂದು ಅವರ ಮಾತಿನ ಸತ್ಯ. ಪಂಡಿತ ನೆಹರುಗಳು ಲಭಿಯರಾದಲ್ಲಿ ಮಾಡಿದ ಭಾಷಣದಲ್ಲಿ ಜಾತಿ ಆಧಿಪತ್ಯದರ್ಶಯ ವಿಭೇದವನ್ನು ಭಾರತದಲ್ಲಿ ಕಿತ್ತೊಗೆಯಬೇಕೆಂದು ಎಚ್ಚರಿಸಿದ್ದಾರೆ ಎಂಬ ಅವರ ಅಭ್ಯಾಸನೆ ಪ್ರಸ್ತುತವಾದ ಕಾಲಕ್ಕೆ ನಾವಾನವರಿಗೆ ದ ಇಂದಿನ ಭಾರತದಲ್ಲಿ ದಿವ್ಯಜ್ಯೋತಿಯನ್ನು ಬೆಳಗಿಸಿದಂತಾಗಿದೆಯೆನ್ನುವುದು.

ಕಾಂಗ್ರೆಸ್ಸು ಅಧಿಕಾರ ಹೊತ್ತಿರುವ ಪಕ್ಷ. ರಾಷ್ಟ್ರದ ಆಯುರ್ವಾನದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗುತ್ತಿರುವ ಪರ್ವಕಾಲವಿದು. ಕಲ್ಯಾಣ ಪಥದಲ್ಲಿ ರಾಷ್ಟ್ರವನ್ನು ಸಾಗಿಸುವ ಜವಾಬ್ದಾರಿ ಕಾಂಗ್ರೆಸ್ಸಿದು. ಆದುದರಿಂದ ಸಹಸ್ರ ಜಡ್ಡುಕ್ಕೆ ಕಾಂಗ್ರೆಸ್ಸಿಗರು ಒಳಗಾಗದೆ ರಾಷ್ಟ್ರಶ್ರೇಯೋವೃದ್ಧಿಯ ಕಾರ್ಯದಲ್ಲಿ ಹುಮ್ಮನಸ್ಸಿನಿಂದ ಪ್ರವರ್ತರಾಗಬೇಕು.

SPECIAL MATINEE AT "PRABHAT"
FOR HAPPY CHRISTMAS

Miracle of Lady Fatima

(Technicolor)

—: ಬಳ್ಳಾರಿ ಪ್ರಭಾತದಲ್ಲಿ :—

20-12-53 ರಿಂದ

ದಾ ಜ ಕ ಮ ಳ ರವರ

ಸು ರ ಂ ಗ್

ಹಳ್ಳಿಗಳ ಸುಧಾರಣೆ ಹೇಗೆ?

ಗಾಂಧೀಜಿ ತೋರಿಸಿದ ಮಾರ್ಗ

ಹಳ್ಳಿಗಳ ಶ್ರೇಯೋಭಿವೃದ್ಧಿಯೇ ಗಾಂಧೀಜಿಯ ಉಸಿರಾಗಿತ್ತು; ಅವರು ಜೀವನದ ಪ್ರತಿಯೊಂದಲ್ಲಿ ಬೆಡುವಿದ್ದಾಗೆಲ್ಲಾ ಸ್ವತಃ ಹಳ್ಳಿಗಳಿಗೆ ಹೊರಟುಹೋಗಿ, ಹಳ್ಳಿಯ ಜನರ ಮುಗ್ಧ ಜನಸಾಮಾನ್ಯರ ಬಡತನ, ಅವರ ಸಮಸ್ಯೆಗಳಲ್ಲಿ ಭಾಗಿಯಾಗುತ್ತಿದ್ದರೆಂದರೆ — ಗಾಂಧಿಜೀಗೆ ಅವರ ಬಗ್ಗೆ ಇದ್ದ ಕಳಕಳಿ ಎಷ್ಟು ಪ್ರಮುಖವಾದುದು ಮತ್ತೊಂದರಲ್ಲಿಲ್ಲ. ಸ್ವಕ್ಷತ ಲೇಖನದಲ್ಲಿ ಗಾಂಧೀಜಿಯವರೇ ಸ್ವತಹ ಹೇಳಿದ ಹಳ್ಳಿಗಳ ಉದ್ಧಾರದ ಬಗೆಯ ಸಂಕ್ಷಿಪ್ತ ವಿವರಣೆ ಇದೆ

"ಒಂದು ದೇಶದ ಸಂಪತ್ತು ಅದರ ಕೃಷಿಕಳವಾದ ಉತ್ಪತ್ತಿ ಮತ್ತು ಜನದಶಂಕ್ಯರದ ಮೇಲೆ ಕೂಡಿಕೊಂಡಿದೆ. ಈ ಮಾತನ್ನು ಗಾಂಧೀಜಿ ಎಷ್ಟೋ ಬಾರಿ ಹೇಳಿರಬಹುದು ಎಂದರೆ ಒಂದು ದೇಶ ಪ್ರಗತಿಯ ಹಾದಿಯಲ್ಲಿ ಸಾಗುವಾಗ ಅದಕ್ಕೆ ಜನಸಾಮಾನ್ಯರಾದ ಹೋಸಕ ಮಸ್ತ ಇಲ್ಲದೇನೇ ಆ ಪ್ರಗತಿ ಸಾಧಿಸಿತು ಎಂದು ಗಾಂಧೀಜಿಯ ವಾದವು ತುಂಬಾ ಸಂಬಂಧ. ಸ್ವಾತಂತ್ರ್ಯೋತ್ತರ ಭಾರತ ಇಂದಿನ ಪ್ರಾಥಮಿಕ ಪ್ರಮುಖ ಸಮಸ್ಯೆಗಳನ್ನು ಸಾಧಿಸಬೇಕಾಗಿದ್ದರೆ ಅದು ಬರಿ ನಿಯಮ ಲಕ್ಷ್ಯ ಪೂರ್ಣಗೊಂಡಲ್ಲದೆ— ಅವಿಳು ಲಕ್ಷ ಹಳ್ಳಿಗಳ ಸುಧಾರಣೆಯಾಗದೆ. ಸಾಧ್ಯವಾಗುವುದಿಲ್ಲವೆಂದು— ಗಾಂಧೀಜಿ ಹೊರಲು ಸಮಗೆಲ್ಲ ಬೋಧಿಸುತ್ತಿದ್ದ ಪಾಠವಾಗಿತ್ತು.**

ಒಬ್ಬರ ಬಳಿ ಗಾಂಧೀಜಿಯ ಪ್ರಶ್ನೆಯಿರಲು — ಭಾರತ ಎಷ್ಟೆಷ್ಟು ಲಕ್ಷ ಹಳ್ಳಿಗಳ ಸಮೂಹ ಹೊಂದಿರಬಹುದು ಹಳ್ಳಿಗಳ ಭಾರತ ಎಷ್ಟು ಜನರಿದ್ದಾರೆ ಎಂದು ಕೇಳಿದ್ದಾರೆಯೆ. ಇಂಗ್ಲಿಷ್ ಸ್ವಯಂ ಗಾಂಧೀಜಿ ಪಟ್ಟಿಕೆ ನೀಡುವ ಉತ್ತರ ಪ್ರಶ್ನೆಯೊಳಗಿತ್ತು.

ಬಿಳಿಸರ್ಕಾರದ ಸೃಷ್ಟಿಯಲ್ಲಿ ಎಂದು ಕೊಂಡ ಕೆಯುಂಟು. ಪಟ್ಟಿಣದ ಇಷ್ಟವಸ್ತುಗಳನ್ನು ಪೂರೈಸಿ, ಕಿಸೆಯನದಕ್ಕಾಗಿಯೇ ಹಳ್ಳಿಗಳ ನಿರ್ಮಾಣವಾಗಿದೆ ಎಂದು. ಈ ಭಾವನೆ ಹೆಚ್ಚುಮಟ್ಟಿಗೆ ವಿಧಾನವೇ ಆಗಿದೆ. ಆದರೆ ಅದೇ ಪಟ್ಟಣಗಳ ಧಾರಕ ಪಂಥವದು, ಹಳ್ಳಿಯ ಜಗಳಕ್ಕೆ ಉಡಲು — ಊಟಲು ಸಾಕ್ಷಿದೆಯೇ ಅಥವಾ ಚಳಿ-ಬಿಸಿಲು, ಗಾಳಿ-ಮಳೆಗಳಿಂದ ರಕ್ಷಿಸಿಕೊಳ್ಳಲು ಒಂದು ಗೂಡೆ ಯಷ್ಟಾದರೂ ಸರಿಯಾದ ನೆರಲಾದರೂ ಅವರಿಗಂಟೇ ಎಂದು ಯೋಚಿಸಿದ್ದಿಲ್ಲ.

ಹಳ್ಳಿಗಳ ಉದ್ಧಾರಕ್ಕಾಗಿರುವ ಪಟ್ಟಣಿಗರ ಈ ಉದಾಸೀನ ಭಾವನೆ ದೇಶಕ್ಕೆ ಅನ್ಯಪೂರಿತವಾದುದೆಂದೇ ಗಾಂಧೀಜಿಯವರ ವಾದ. ಇನ್ನೂ ಸರಳವಾಗಿ ಹೇಳುವುದಾದರೆ, ಪಟ್ಟಣಿಗರು ಹಳ್ಳಿಯ ಜನರನ್ನು ಬಳಸಿಕೊಂಡೇ ಜೀವನ ನಿರ್ವಹಿಸುತ್ತಿದ್ದಾರೆ ಎಂದು ಅವರು ವಾದಿಸುತ್ತಿದ್ದರು. ಭಾರತ ಹಳ್ಳಿಯ ಜನರ ಕಲ್ಪನೆಯೇ ಭಾವನೆಗಳ ಕುರಿತಾಗಲ್ಲಿ ಎಷ್ಟೋ ಜನರು ಬರೆದಿದ್ದುಂಟು. ಆದರೆ, ನಮ್ಮ ಹಳ್ಳಿಯ ಜನರು ಹೇಗೆ ಬದುಕುತ್ತಿದ್ದಾರೆ, ಅವರಿಗೆ ಕ್ಷೇಮವಾಗಿರಲು ತಕ್ಕ ಸೌಕರ್ಯಗಳಿವೆಯೇ ಎಂದೆಲ್ಲಾ ವಿವೇಚಿಸಿ ಯಾರೊಬ್ಬರೂ ಬರೆದಿದ್ದು ನನಗೆ ತಿಳಿದಿಲ್ಲವೆಂದು ಗಾಂಧೀಜಿ ಹೇಳಿಕೊಂಡಿದ್ದಾಗ ಹೇಳುತ್ತಿದ್ದರು.

ಉದ್ಧಾರಕ್ಕೆ ಹೇಗೆ

ನಮ್ಮ ಹಳ್ಳಿಯ ಜನರ ಸ್ಥಿತಿಗತಿಗಳು ಅಸಹಕಾರಿಯ ಅಜ್ಞಾನಗಳಿಂದಾಗಿ, ಉಳ್ಳವರ ಕೊಡಕಿನಿಂದಾಗಿ ಸುರಿದು ಸುರಿಯುತ್ತಿರುವ ಬೆಗಾರಿಕೆಗಳು ಅಸೌಕರ್ಯವಿನೆ ಅಂಶಗಳನ್ನು ಪೂರ್ಣ ಬೆಳೆಸಿಕೊಳ್ಳಲಾಗಿದೆ. ಆ ಉತ್ಪತ್ತಿಗೆ ಅನುಗುಣವಾದವರು ಕಟ್ಟಿಯನ್ನು ಬಲ್ಲವರು ಸಾವು ಯತ್ನಿಸಬೇಕಾಗಿದೆ.

ಆ ಪ್ರಭುತ್ವ ಹಿನ್ನೆಲೆಯಿಂದ ನಮ್ಮ ಹಳ್ಳಿಗಳ ಜನರು ಕೃಷಿ, ಕರಕುಶಲ ಕೈಗಾರಿಕೆ ಇವುಗಳಲ್ಲಿ ಪರಿಣತರಾಗಿದ್ದರೂ ಅವರಿಗೆ ಅಲ್ಲಿ ಕಲಿಸಿದ ಪರಿಣತಿಯನ್ನು ಪರಿಪೂರ್ಣವಾಗಿ ಉಪಯೋಗಿಸುವ ಸೌಕರ್ಯವಿಲ್ಲ. ಅಂಥ ಸೌಕರ್ಯವ

ರಾಜಕಾರಣೆ ರಾಜಾಜಿಯ ರಾಜನೀತಿ

ಮೇಂದ್ರಾಸಿನ ಪ್ರಧಾನ ಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಪಶ್ಚಿಮ ರಾಯಲಯ ತಮ್ಮ ಸಂಚಾರದಲ್ಲಿ ಜನರ ಯ ಸುಪ್ತ ಚೇತನವನ್ನು ತಮ್ಮ ಆ ಮೋಘವೂ ಸುಸ್ಪಷ್ಟವೂ ಆದ ಭಾಷಣ ಗಳಿಂದ ಹೊಡೆದೆಬ್ಬಿಸಿದ್ದಾರೆ. ಈ ತಮ್ಮ ೃವಾಸಕಾಲದಲ್ಲಿ ತಮ್ಮ ಅಪಾರವಯ ಸ್ಸನ್ನು ಲೆಕ್ಕಿಸದೆ ಸ್ಫೂರ್ತಿಯುತ ಭಾಷ ಣಗಳಿಂದ ಜನರಲ್ಲಿ ಕರ್ತವ್ಯದ ಕುರಿತು ಜಾಗ್ರತಿ ಹುಟ್ಟಿಸಿದರು. ಈ ಮಹಾ ಮೇಧಾವಿಯ ಸ್ಫೂರ್ತಿಯೊಂದು ಮಾತಿಗೂ ಬೆಲೆಯಿದೆ. ಗಾಂಧೀಧರ್ಮತೆಯಿಂದೆ ಆವು ದರಿಂಲೇ ಜನ ಅವರು ಕೋರಿದೆಲ್ಲಿಲ್ಲ ಸಹಸ್ರಗಟ್ಟಲೆಯಲ್ಲಿ ನೆರೆಯುತ್ತಿದ್ದರು.

ಒಂದೊಮ್ಮೆ ಮಲಬಾರಿನ ರಾಜಕೀ ಯ ವಾತಾವರಣದಲ್ಲೇ ಗುಂಟರಗಾಳಿಯ ಹುಯ್ಲೆಬ್ಬಿಸಿ ಪ್ರಲಯವಂತೆಕರಂತೆ ಮುಂಬಂದ ಕಮ್ಯುನಿಸ್ಟರು, ಬಲಗುಂದು ವಂದು ಮುಂಬಾಗಿ ತಿಳಿದೇ ರಾಜಾಜಿ ಕಮ್ಯುನಿಸ್ಟರನ್ನು "ತತ್ಕ್ಷಣ ವಂ!" ಎಂದು ಘಾತಿಸ್ತೇ ಅಧಿಕಾರ ಸೂತ್ರ ಹಿಡಿದರು. ಅವನ್ನೇ ಒಟ್ಟಾಲಯವಂತೆ ಲ್ಲಿ ಜನತೆಯ ಮುಂದೆ ಹೇಳಬಿಟ್ಟರು.

ವಿಷವಿದ್ದರೆ ಮಾತ್ರ ಹಾವಿಗೆ ಭೀತಿ ಪಡಬೇಕು. ಹಾವಾಡಿಗನ ಹಾವಿನಂತಾ ದ ಈ ಕಮ್ಯುನಿಸ್ಟರು ವಿಷವನ್ನೂ ಮಾಡ ಲಾರರು. ಕೇವಲ ಅಬ್ಬರ, ಬಿಟ್ಟೋಪ ಗಳಿಂದ ಅವರಿಗಾವ ಕೆಲಸ ಸಾಧಿಸಿಕೊ ಳ್ಳಲೂ ಸಾಧ್ಯವಿಲ್ಲ. ಮನುಷ್ಯನ ಉದ್ಧಾರ ಹೊಂದಬೇಕಾದರೆ ದೇವರ ಭೀತಿ ಗೆ ಒಳಗಾಗಬೇಕು. ನಾವು ದೇವರನ್ನು ನಂಬುತ್ತೇವೆ. ನಂಗೆ ದೇವರಲ್ಲಿ ಭಕ್ತಿ ಇದೆ. ಆದರೆ ದೇವರ ಅಸ್ತಿತ್ವವನ್ನೇ ನಂಬದ ಕಮ್ಯುನಿಸ್ಟರನ್ನು ಮತ್ಯಾರು ನಂಬುವುದು? ಒಂದು ಧರ್ಮವು ಆಗ ಬೈನಾದುದಲ್ಲವೆಂದು ಬೋಧಿಸುತ್ತಿದ್ದಾರೆ. ಅಂತಹ ಜನರು ಭೀತಿಗೆ ವಂಚಿತರಾಗ ಬೇಡಿ. ಗಾಂಧೀ ಧರ್ಮವು ಜನರ ಮನಸ್ಸಿನಲ್ಲಿ ಬಲವಾಗಿ ನೆಲೆ ಊರಬೇ ಕೆಂದು ಬೋಧಿಸುತ್ತಿದ್ದರು. ನಾನಾವ ನಾತರೂ ಆದೇ ಪ್ರಯತ್ನ ಮಾಡುತ್ತಿದ್ದೇನೆ ಹತ್ತಾರು ವರ್ಷಗಳಿಂದ ಲಂಚಗುಳಿತನ, ಕಾಳಸಂತೆ, ಅತ್ಯಾಸೆ ಮೊದಲಾದ ಅಪ್ಪೆ ಸಗಳನ್ನು ದೇಶವಲ್ಲಿ ನಾವು ಕೊಳುತ್ತಿದ್ದೇ ವೆ. ಆವರೆ ಆವುಗಳನ್ನು ಅಡಗಿಸಲು ಕೇವಲ ಪೊಲೀಸ್ ಸಿಬ್ಬಂದಿಗಳಿಂದ ಸಾ ಧ್ಯವಿಲ್ಲ. ಇವುಗಳ ನಿರ್ಮೂಲನಕ್ಕೆ ಬೇಕಾದರೆ ಬಹುಮೊತ್ತ 'ಪೊಲೀಸ್ ಇ ನ್ಸ್‌ಪೆಕ್ಟರ್ ಜನರಲ್' ಎನ್ನಿಸಿಕೊಂಡಿ ರುವ ಸರವಾತ್ಯನಿಂದ ಮಾತ್ರ ಸಾಧ್ಯ' ಈತನನ್ನು ನಾವು ತಂದೆ, ತಾಯಿ ಎಂದು ಪೂಜಿಸುವೆವು. ಆದುದರಿಂದ ಅವನ ಕೆಲಸ ಸುಲಭ ಸಾಧ್ಯವಾಗುವುದು. ಇದೇ ನಮ್ಮ ಧರ್ಮ. ಈ ಧರ್ಮಕ್ಕೆ ಹಿಂದೂ, ಮುಸ್ಲಿಂ ಧರ್ಮಗಳೆಂಬ ಭೇದಭಾವವೆ ಇಲ್ಲ. ಅಂತಹ ಭಾವನೆಗಳ ಭಂಡಾರ ವಾದ ನಮ್ಮ ಪ್ರಾಚೀನ ಸಂಸ್ಕೃತಿಯೇ ನಮ್ಮ ಸಕರ ಸಂಪತ್ತು, ನಮ್ಮ ದೇಶದ ಸಂಪತ್ತು. ಇದು ಹಿಮಾಲಯ ಗಂಗಾ ನದಿಗಳಿರುವವರೆಗೂ ನಶಿಸದು. ಂತಹ ನಮ್ಮ ಉದಾತ್ತ ಸಂಸ್ಕೃತಿ, ಧರ್ಮವ ನ್ನು ಯಾರು ಉಳಿಸುವೆವೆಂದು ಭರವಸೆ ಕೊಡುವರೋ ಅವರಿಗೆ ನಮ್ಮ ಸರಕಾರ ಒಪ್ಪಿಸಿಕೊಡಬಹುದು.

"ಉತ್ತಮ ಪರಿಕಾರವಿದ್ದರೇನೇ ಜನತೆಯ ಕಲ್ಯಾಣವಾಗುವುದು. ಇಂತಹ ಕ ಲ್ಯಾಣವನ್ನು ಬರೀ ನೀತಿನ ಮಲ್ಲಿಂದ ಸಾಧಿಸಲು ಸಾಧ್ಯವಿಲ್ಲ' ಬೇಕಾದಷ್ಟು ಕೆ ಲಸ ಕೆಲಸವಾಡಲು ಸರಕಾರಕ್ಕೆ ಸಾ ಕಷ್ಟು ವ್ಯವಧಾನವನ್ನು ಕೊಡಬೇಕು. ನರುಷವರುಷ ಸರಕಾರ ಬದಲಾಯಿಸು ವುದು ಪ್ರಗತಿಯಲ್ಲ. ಇದರಿಂದ ಯಾವ ಪ್ರಯೋಜನವೂ ಇಲ್ಲ.

"ಈಗ ನಮ್ಮ ಪ್ರಾಂತವಾದದ ಕೋ ಲಾಹಲ ಜನರಲ್ಲಿ ಮತ್ತ ತಳಮಳ ಹೆ ಚ್ಚಿಸಿದೆ. ತೆಂಲುಗರವರು ತಮ್ಮ ಪ್ರಾಂತ ಪಕ್ಷೆಮ್ಮನ್ನಪ್ಪತ್ತರಾದರು. ಆದರೆ ಈ ಸೃಷ್ಟಿ ಥುಜ್ಞಾಂತದ ಪ್ರಗತಿಯಭವಿಷ್ಯವನ್ನು ಹೊಂದಿಕೊಂಡಿದೆ ಆದುದರಿಂದ ನಾವು ಇನ್ನಷ್ಟು ಕೆಲವು ಸಮಯ ಕಾದು ನೋ ಡಬೇಕು. ತತ್ಕಾಲಕ್ಕೆ ಸರಿಹೋಗೆನೆಗಾ ಗಿ ಒಂದು ಮಿಶ್ರ ಭಾಷೆಯ ಪ್ರಾಂತ, ತ ನ್ನೊಂದು ಗಾನಾಪ್ರಾಂತ--ಹೀಗೆಯೇ ಇರಲಿ ಯಾರು ಯಾವ ರೀತಿ ಪ್ರಗತಿ ಸಾಧಿಸುವಿಂದು ಕೆಲವು ಸಮಯ ನಿರೀಕ್ಷಿ ಸಿ ಪ್ರತ್ಯೇಕರಿಸಿದವರು ಬೇರೊಬ್ಬರಿಗೆ ನಿ ದರ್ಶನರಾದರೆ ನಾವೂ ಅವರನ್ನು ಅನುಸ ರಿಸುವಾ. ಅವರು ಸಂಕಟಕ್ಕೆ ಪುತ್ತಾದ ರೆ. ಈ ಮಾತು ಅನಪದಿಂದಲೇ ಅನಿ ಷ್ಟವೆಂಬ ತಿಳುವಳಿಕೆಯುಳ್ಳವನಿಗೆ ಮಾ ತ್ರ ಸಹನೆಯಾಗಬಹುದಲ್ಲದೆ ಅಧಿಕಾರಾ ಳ್ಬಾಷಿಗಳಿಗೆ ಅತ್ಯಂತ ಕಹಿಯಾದೀತು.

"ಪರೋಧಿ ವಸ್ತ್ರ ಸೇರಿಕೊಂಡ ಕೆಲ ವರೂ ಈಗೀಗ ತನ್ನು ತಪ್ಪು ತಿಳಿದು ಕೊಂಡಂತಿದೆ. ಆದರೆ ಅವರು ಒಮ್ಮೆಲೆ ಸಕ್ಷನನ್ನು ತ್ಯಜಿಸ ಅಸಮರ್ಥರಾ ದ್ದಾರೆ ಕಾರಣ ಅವರ ಅಂತರ್ಯ ಪ ಕಾಶಕ್ಕೆ ಬಂದಿದ್ದರೂ ಬಹಿರಂಗದ ಹೊ ದಿಕೆ ಇನ್ನಷ್ಟ ಶೀಘ್ರ ಹೋಗಲಾರದು. ಇ ದರೂ ಇಸರೆ ಕಳಚಲು ಹೆಚ್ಚು ಸಮಯ ಕಾಯಬೇಕೆಂದಿಲ್ಲ.

"ಒಂದು ಸ್ತ್ರೀ ಮಾತ್ರ ನಾವು ಒಂದ ಶಪ್ಪು ಮಾಡಿಯಾಯಿತೆಂದ ನುಂದೆಂ ದೂ ಅಂತಹ ತಪ್ಪು ಮಾಡಬೇಕೆಂದಿಲ್ಲ. ನಾವು ಮಾಡಲೇ ಬಾರದು. ಆದುದರಿಂ ದಲೇ ನಾವು ಬರುವ ಚುನಾವಣೆಯಲ್ಲಾ ದರೂ ಕಮ್ಯುನಿಸ್ಟರನ್ನು ಅರಿಸಿ ಕಳುಹಿಸ ಬಾರದು. ಅಧಿಕಾರದಿಂದ ಜನರನ್ನು ಬ ಗ್ಗಿಸುವ ಧೋರಣೆಯ ಟ್ಟುಕೊಂಡಿರು ವ ರವ್ಯವ ಗೀತೆಯನ್ನು ಪಾಲಿಸುವ ಕ ಬ್ಯುನಿಸ್ಟ್ ಸೀತಿಗೆ ಏಂದೆಂದೂ ಉಳಿಗಾ ಲವಿಲ್ಲ.

"ಒಟ್ಟು ಕೊಡುವ ಜವಾಬ್ದಾರಿ ಬಹು ದೊಡ್ಡದು. ನಿನ್ನು ಮುಂದಿನ ಚುನಾವಣೆಯಲ್ಲಿ ನಮ್ಮ ಮುಂದಿರುವ ಪ್ರಶ್ನೆಯೆಂದರೆ ನಿನ್ನ ಉಣಬೇಕೇ? ಅಥ ವಾ ವಿಷ ಕುಡಿಯಬೇಕೇ? ಎಂಬು ದಾಗಿದೆ. ನಿನ್ನ ಉಣಬೇಕಾದರೆ ಉತ್ತ ಮ ಸರಕಾರವನ್ನೇ ಬೆಳಿಸಬೇಕು. ನಮ್ಮ ಮತಪತ್ರವನ್ನು ಚಿನಿವಾರಕಟ್ಟೆಗೆ ಹೋ ಲಿಸಲಾಯಿತು. ಅಲ್ಲಿ ನಾವು ಭಂಗಾರ ಪರೆಯಬೇಕಲ್ಲದೆ ಭಂಗಾರ ಶುದ್ಧೀಕರಿ ಸುವ ದ್ರಾವಕ ಸೇವಿಸುವುದಲ್ಲ. ಕಮ್ಯು ನಿಸ್ಟರನ್ನೇ ಚುನಾಯಿಸಿ ಕಳುಹಿಸಬೇ ಕೆಂದಿದ್ದರೆ ಕೇಂದ್ರದಾದಿಯಾಗಿ ಎಲ್ಲಾ ಪ್ರಾಂತಗಳಲ್ಲೂ ಕಮ್ಯುನಿಸ್ಟ್ ಸರಕಾ ರಜನೆಯಾಗುವಂತಿರಬೇಕು. ಇ ವಾದರೆ ಅವರು ಸರಸ್ಪಾಂತವನ್ನು ಕೇಂದ್ರವನ್ನೋ ನಾವು ಳಿ ವಸೆಮುನ್ನು ಚಾರಿಸಿಕೊಳ್ಳಬಲ್ಲರು. ಧ ರ್ಮಿಕ ಹಾಗೂ ಸತ್ಯಧರ್ಮಗಳ ನಿಷಾ ನುವರ್ತಿಯಾದ ಭಾರತದಲ್ಲಿ ಕಮ್ಯುನಿ ರು ಎಲ್ಲಕಡೆ ಅಧಿಕಾರಕ್ಕೆ ಬರುವಂತಿ ಅಲ್ಲಲ್ಲಿ ಒಬ್ಬೊಬ್ಬರನ್ನು ಆರಿಸಿದರೆ ಅವ ಜನತೆಗೆ ವಿಷ ಪ್ರಾಯರಂತೆಯೇ ಸರಿ.

"ಇನ್ನು ಕಾಂಗ್ರೆಸಿನ ಕುರಿತು ಹೇ ಬೇಕೆಂದರೆ, ಕಳೆದ ಚುನಾವಣೆಯ ಕಾಂಗ್ರೆಸಿಗೆ ಉಂಟಾದ ವಿಜಯವು ಸಂಸ್ಥೆಯ ಹಿತದೃಷ್ಟಿಯಿಂದಾ ಪ್ರಯೋಜನಕಾರಿಯಾಯಿತು. ಎಂ

ನಾಲ್ಕನೆಯ ಪುಟಕ್ಕೆ

ಹೊಸಪೇಟೆಯ ಡಿಸ್ಟ್ರಿಕ್ಟ್ ಮುನ್ಸೀಫರ ಕೋರ್ಟನಲ್ಲಿ

O. S. 441/53.

ವಾದಿಗಳು –

ಕಡೆಬಿಹಳ್ಳಿ ವೆಂಕಟನರಸಪ್ಪ ಅಂಡ್ ಸನ್ಸ್

1) ಜಗನಳ್ಳಿ ವೀರಮ್ಮ – ಮಲ್ಲಪ್ಪ
2) ಕೋಗಳಿ ಲಿಂಗಪ್ಪ
3) ,, ಕೊಟ್ರಪ್ಪ

ಪ್ರತಿವಾದಿಗಳು

O. A. 1284/53 ರಲ್ಲಿ ವಾದಿಯು ಪ್ರಾತಿನಿಧ್ಯ ರೂಪದಿಂದ ದಾವೆಹೂಡಲು ಅಪ್ಪಣೆ ಕೇಳಿದ್ದಾನೆ. ಸದರಿ 1284/53 24-12-'53 ಕ್ಕೆ ವಾಯ್ದೆ ಹಾಕಲಾಗಿದೆ. ಮೇಲಾಗಾದರೂ ಆಕ್ಷೇಪಣೆಯಿದ್ದಲ್ಲಿ ಅದಿನ ಹಗಲು 11 ಗಂಟೆಗೆ ಖುದ್ದಾಗಿಯಾಗಲಿ ವಕೀಲರ ಮೂಲಕವಾಗಿಯಾಗಲಿ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಸಾದರು ಮಾಡಲು ಈ ಮೂಲಕ ತಿಳಿಸಲಾಗಿದೆ.

ಎಂ ರಂಗಸಾಧ್ಯಾಚಾರಿ
ವಾದಿಯ – ವಕೀಲ

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫರ ಕೋರ್ಟನಲ್ಲಿ

S. C. 603/52 I. A. 157/53.

BETWEEN:–

ಇಟ್ಟಾಪುರದ ಮಹದೇವಮ್ಮ — ಪಾವಿ ಅರ್ಜಿದಾರರು

Vs

1) ಹನುಮಂತಪ್ಪ S/o ಸಣ್ಣ ಬಸಪ್ಪ, ಮೇಜರು, ನಾಯ್ಕ, ಮುಷ್ಟಗಟ್ಟಿ, ಒಳ್ಳಾರಿ ತಾಲೂಕು.
2) ಈರಣ್ಣ S/o ಹನುಮಂತಪ್ಪ, ಮೇಜರು, ನಾಯ್ಕ, ಮುಷ್ಟಗಟ್ಟಿ, ಬಳ್ಳಾರಿ ತಾಲೂಕು.
3) ಬಸ್ಯ S/o ಹನುಮಂತಪ್ಪ ಮೇಜರು, ನಾಯ್ಕ, ಮುಷ್ಟಗಟ್ಟಿ, ಒಳ್ಳಾರಿ ತಾಲೂಕು
— ಪ್ರತಿವಾದಿಗಳು, *Cps.*

ನೋಟೀಸು

ಮೇಲ್ಕಂಡ ನಂಬರು ಅರ್ಜಿಯು 24-12-53 ಕ್ಕೆ ವಾಯಿದಾ ಇರುತ್ತದೆ. ಪ್ರತಿವಾದಿಗಳು ಸದರಿ ತೇದಿ 11 ಗಂಟೆಗೆ ವೇಳ್ಕಂಡ ಕೋರ್ಟಿನಲ್ಲಿ ಖುದ್ದಾಗಿಯಾಗಲಿ ವಕೀಲರ ಮೂಲಕವಾಗಲಿ ಹಾಜರಾಗಿದ್ದಲ್ಲಿ ಮೇಲ್ಕಂಡ ಅರ್ಜಿ ಮತ್ತು ನಂಬರು ಎಕ್ಸ್‌ಪಾರ್ಟೆ ಆಗಿ ಉತ್ತರವನ್ನು ಕ್ರಮ ಮಾಡಲಾಗುತ್ತದೆ

ಬೆಳಜೋಣಿ ನರಸಿಂಗರಾವ್
ವಾದಿ ಅಡ್ವೊಕೇಟು

Coming at "PRABHAT"

Watch for the Date

Warner Bros Astounding Feature in natural vision.

3 Dimension

★ HOUSE OF WAX ★

COLOR BY WARNER COLOR

3 ನೆ ಪುಟದಿಂದ

ಭಾಷಣಗಳಿಂದಲೂ ಸಾಧ್ಯವಾಗದ ಮಹತ್ಪ್ರಯೋಜನ ಈ ಅಪಜಯದಿಂದಾಯಿತು. ಇದರಿಂದ ನಾವು ಕಲಿತ ಪಾಠವೆಂದರೆ ನಾವು ನಮ್ಮೊಳಗೆ ಜಗಳಾಡಬಾರದು ಮತ್ತೊಬ್ಬರ ಇಟ್ಟುಕೊಳ್ಳುಕೂಡದ್ದು ಸಂಘಟನಾಶಕ್ತಿಯೊಂದೇ ಬೇರೆ ಭಿನ್ನತೆಯನ್ನು ಕಾಯಬಲ್ಲದು ಎಂಬುದೇ ಸತ್ಯ. ನಾವೆಲ್ಲರೂ ಏಳವ್ರೈ ಕೈಯ್, ಯವಿಟ್ಟುಕೊಂಡಿನ ಸೈನಿಕರಂತಿರುವೆವು. ಸೈನಿಕರಲ್ಲೂ ಅಧಿಕಾರಭೇದವಿದೆ ಸಂಬಳವ್ಯತ್ಯಾಸವಿದೆ. ಹಾಗೆಂದು ಅವರು ಅವರೊಳಗೆ ಕಚ್ಚಾಡಿಕೊಳ್ಳುತ್ತಾರೆಯೇ? ಹಾಗೆಯೇ ಕಾಂಗ್ರೆಸಿಗರಾದ ನಮ್ಮೊಳಗೆ ಅಧಿಕಾರಲಾಲಸೆಯಿಂದ ಮತ್ಸರ ಉಂಟಾದರೆ ನಮ್ಮ ಐಕ್ಯತೆಗೆ ಭಂಗ ಬರುವುದು."

ರಾಜಾಜಿ ಪಶ್ಚಿಮ ಕರ್ನಾಟಕದ ಕೆಲವು ಕಡೆಗಳಲ್ಲಿ ಮಾಡಿದ ಭಾಷಣದ ಮುಖ್ಯ ಸಾರಾಂಶವನ್ನು ಮೇಲೆ ಕೊಟ್ಟಿದಾಗಿದೆ.

ನಮ್ಮ ಜಿಲ್ಲೆಯ ಸಚಿವಾಕಾಲದ ಶ್ರೀ ರಾಜಾಜಿ ಜಿಲ್ಲೆಯ ಅಸಂಖ್ಯಾತ ಜನರ ಬಹುದಿನದ ಬೇಡಿಕೆಯೊಂದನ್ನು ಈರಿತು ಸುಸ್ವಸ್ಥವಾದ ಭರವಸೆ ಇತ್ತುದು ಆಶಾದಾಯಕವಾದೆ. ಜಿಲ್ಲೆಯ ಕಾಸನ ಸಭಾಸದರು ಒಟ್ಟಾಗಿ ಕೇಳಿದ್ದಲ್ಲಿ ಈ ಮಹಾಮೆಯನ್ನು ತಾನು ಇದೇ ಬರುವ-ದಶಂಬರ ತಿಂಗಳ ಅಧಿವೇಶನದಲ್ಲಿ ಮುಂಡಿಡುವುದಾಗಿ ರಾಜಾಜಿ ಆಶ್ವಾಸನೆ ಇತ್ತುದು ಜಿಲ್ಲೆಯ ಬಡ ಬೋರೆ ಗೌಡರ ಭಾಗ್ಯೋದಯ ಕಾಲವೆಂದು ನಿರಾತಂಕವಾಗಿ ಹೇಳಬಹುದು.

NAVA BHARAT, BELLARY. (Regd.M.No. 4746)

ನವ ಭಾರತ ಬಳ್ಳಾರಿ

(NATIONALIST WEEKLY)

ಚಂದಾದರಗಳು. Subscription Rates.

ವರ್ಷಕ್ಕೆ 6—0—0	One Year 6—0—0
ಕಿತಿಂಗಳಿಗೆ 3—8—0	Six months 3—8—0
ಆರು ತಿಂಗಳ ಕಡಿಮೆ ಚಂದಾವ್ಯೀಕರಿಸುವುದಿಲ್ಲ.	Subscription will not be accepted for less than 6 months

To 21-12-53

Sri.

Published by T. B. Keshava Rao, at Nava Bharat Printing Press, Bellary.

Edited Printed & Published by T. B. Keshava Rao at Nava Bharat Press, Bellary.

ನಾಡಿಕಾರಿ

ಸೋಮವಾರ
೨ ನವಂಬರ
೧೯೬೫

ಪುಟ 17 | ಬಳ್ಳಾರಿಯ ಉಜ್ವಲ ಭವಿಷ್ಯಕ್ಕಾಗಿ ಪಾರಿಸಂಕೆ | ಸಂಪಾದಕ ಮತ್ತು ಪ್ರಕಾಶಕ
ಸಂಪುಟ 31 | ಉತ್ತಿಷ್ಠತ ! ಜಾಗ್ರತ !! ಪ್ರಾಪ್ಯವರಾನ್ ಬೋಧತ !!! | ಟಿ. ಬಿ. ಕೇಶವರಾವ

ಪಾಕಿಸ್ತಾನಕ್ಕೆ ಅಮೆರಿಕಾದ ಸಹಾಯ.

ಶಾಂತಿಯುಂದ ಬದುಕಬೇಕೆಂದು ಬಯಸುವ ಮನಸಿನ ಕೋಟಿಯ ಹಾರೈಕೆಯನ್ನು ಕಡೆಗೆಣಿಸಿ ತಮ್ಮ ದರ್ಪ ತೌಲುಗಳ ತೇಂಕಾರವಲ್ಲಿ ಕೆಲವು ದೇಶಗಳು ಜಗತ್ತನ್ನು ಯುದ್ಧ ರಂಗದಲ್ಲಿ ತಳ್ಳಬಯಸುವೇ ಎಂಬ ಸಂದೇಹವು ದಿನೇ ದಿನೇ ಬಲವಾಗುತ್ತಿದೆ. ಈ ಶತಕದಲ್ಲಿಯೆ ಆಗಿಹೋದ ಎರಡು ಮಹಾ ಸಂಗ್ರಾಮಗಳೂ ಈ ಕವಿಯ ಕುತೂಹಲಿಗಳಿಗೆ ಬುದ್ಧಿ ಕಲಿಸಿಲ್ಲವೆಂಬುದು ಪ್ರಪಂಚದ ದುರ್ದೈವವೆ ಸರಿ!

ಅಮೇರಿಕೆಯಂತೂ 'ಕಮ್ಯುನಿಸಂ'ದ ಭೂತಕ್ಕೆ ಹೆದರಿ ಪೂರ್ಣ ವಿವೇಕವನ್ನು ಕಳೆದುಕೊಂಡು ಯಾವುದೆ ಪ್ರತ್ಯಕ್ಷ ಬೆದ್ದುಳಿವನ್ನು ಪ್ರದರ್ಶಿಸುವ ಹಾಗೆ ಕಾಣುತ್ತಿದೆ. ಅನೇಕ ದೇಶಗಳನ್ನು ತನ್ನ ಕಾಲಿನ ಅಡಿಪಡಲ್ಲಿ ಬಿಲಕಿಸಿಕೊಂಡು ಪ್ರಪಂಚವನ್ನೇ ತನ್ನ ಅಂಕಿತದಲ್ಲಿರಿಸುವ ಹಂಬಲದಲ್ಲಿ ಹೆಜ್ಜೆಯಿಕ್ಕುತ್ತಲಿರುವ ಅಮೇರಿಕೆಯ ಪ್ರಾಮೂಖ ಜಾಪಲ್ಯಕ್ಕೆ ನಮ್ಮನೆರೆ ರಾಷ್ಟ್ರವಾದ ಪಾಕಿಸ್ತಾನವೂ ಬಲಿಬೀಳುವ ಲಕ್ಷಣಗಳು ಸ್ಪಷ್ಟವಾಗಿ ಕಾಣುತ್ತಿರುವುದರಿಂದ ಭಾರತ ದೇಶವು ತುಂಬ ಎಚ್ಚರದಿಂದ ಇರಬೇಕಾಗಿ ಬಂದಿದೆ. ಕಾಶ್ಮೀರನ್ನು ಹೇಗಾದರೂ ಪಕ್ಕಿ ಸಿಕೊಳ್ಳಬೇಕೆಂದಿರುವ ಪಾಕಿಸ್ತಾನವು ಪೂರ್ವಾಪರ ಯೋಚನೆಯಿಲ್ಲದೆ ಅಮೇರಿಕೆಯೊಡನೆ ಸೈನಿಕ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅಸಂಭವನೇನಲ್ಲ. ಕಾಶ್ಮೀರವನ್ನು ಕೊಳ್ಳಿ ಕೊಡೆಯಲು ನೆರವಾಗುವ ನೆವನಿಂದ ಸೈನಿಕಶಕ್ತಾಸ್ತ್ರಗಳನ್ನು ಪಡೆದು ತಳಮೂರುವುದು ಅಮೇರಿಕೆಯ ಉದ್ದೇಶವಾಗಿರಬಹುದು. ಆದರೆ ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಕಾಶ್ಮೀರದ ಹೋರಾಟಕ್ಕೆ ಹೊಸ ಸ್ವರೂಪವು ಬಂದೇ ಬರುವುದು ಎಂದು ಬಿಡಿಸಿ ಹೇಳಬೇಕಾಗಿಲ್ಲ. ಪಾಕಿಸ್ತಾನವು ಇಂಥ ಸಂದರ್ಭದಲ್ಲಿ ಸೈನಿಕ ದೃಷ್ಟಿಯಿಂದ ಉಚ್ಚರಿಸಿ ಬರುವ ಇತರ ಮಾರ್ಗಗಳನ್ನು ಅನಿವಾರ್ಯವಾಗಿಯಾದರೂ ಅನುಸರಿಸಿ ತನ್ನ ಭದ್ರತೆಯನ್ನು ಕಾಪಾಡಿಕೊಳ್ಳಬೇಕಾಗಿದೆ.

ರಷಿಯಾವನ್ನು ಎಂದಾದರೂ ಸದೆಬಡಿದು ಭೂಲೋಕಮೇಲೆ ತನ್ನ ಪಿಡಿತವಿರಿಸಿಕೊಳ್ಳುವ ಕನಸಿನಲ್ಲಿರುವ ಅಮೇರಿಕೆಗೆ ಹಿಂದೂದೇಶದ ಸ್ವತಂತ್ರ ಧೋರಣವು ತಿರೋವೇದನೆಯನ್ನು ಉಂಟುಮಾಡಿದಂತಿದೆ! ಆದುದರಿಂದಲೆ ಭಾರತವನ್ನು ಹೇಗಾದರೂ ಅಂಜಿಸಿ ಬಗ್ಗಿಸಬೇಕಾದ ತಂತ್ರಗಾರಿಕೆ ನೀತಿಯಂತೆ ದೆಯಿಂದು ಆನು ಮಾಡಿಸಲೆಯೆಂ. ಆಸ್ತ ಪಾಕಿಸ್ತಾನದಲ್ಲಿ ಸೈನಿಕ ತಾಣವನು ಪಡೆದು ಪುನಃ ಪಾಕಿಸ್ತಾನದಲ್ಲಿಯೂ, ಇತ್ತ ಫ್ರಾನ್ಸ್ ಪೋರ್ಚುಗಲ್ ರಕಾಯದಿಂದಗೋವೆ ಪಾಂಡಿಚೇರಿಗಳಲ್ಲಿಯೂ, ಸಿಂಹಳದ ಸಹಾಯದಿಂದ ಸಿಂಹಳದಲ್ಲಿಯೂ ಬೇರಾದ ಪೌರ್ಯ ಪಡೆದು ಸೈನಿಕ ಕಾವಲಿಟ್ಟುಕೊಂಡರೆ ಹಿಂದೂದೇಶವು ತಾನಾಗಿಯೆ ಬಗ್ಗಬಹುದೆಂದು ಲೆಕ್ಕಾಚಾರ ಹಾಕಿದಂತಿದೆ ಅಮೆರಿಕ. ತೋಕರಿಸಿ ನೋಡಿದರೆ ಪಾಕಿಸ್ತಾನದ ಮೂಲಕ ಕಾಶ್ಮೀರದ ಕಾರಣವಾಗಿ ಹಸ್ತಾಗಿ ಬಹುದೆಂದು ಯೋಚಿಸಿರಲೂ ಸಾಕು! ಇಷ್ಟು ಮಾಡಿಕೊಂಡರೆ ರಷಿಯಾ ನುತ್ತು ಚೀನಾಗಳ ಮೇಲೆ ಅಳವೋಗಿರುವ ತಕ್ಕೆ ಸುಲಭವಾದೀತು ಎಂದು ತರ್ಕಿಸಿರಬಹುದೋ ಏನೋ!

ಒಟ್ಟಾರೆ ಯೂರೋಪು ಖಂಡದಲ್ಲಿ ಯುದ್ಧವನ್ನು ಕೆದಿ ಸಿದಿರೆಂದು ಇದ್ದುದು ಪಾಕಿಸ್ತಾನದ ಅವಜಾರದ ಫಲವಾಗಿ ಏಷಿಯಾ ಖಂಡದಲ್ಲಿಯೆ ಸಿಡಿಯಬಹುದೋ ಎಂಬ ಭೀತಿಗೆ ಆಸ್ಪದವಾಗುತ್ತಾಗಿದೆ. ಕೇಳ್ ಅಬ್ದುಲ್ಲಾ ರನ್ನು ಕೈವರದಡಿಕೊಂಡು ಮಾಡಬೇಕೆಂದಿದ್ದ ಪಿತೂರಿಯನ್ನು ಭಾರತ ವಿಫಲಗೊಳಿಸಿದ್ದರಿಂದ ಪಾಕಿಸ್ತಾನವೂ ಅಮೇರಿಕೆಯೂ ಮುಖಭಂಗ ತೊಂದಿ ಈಗ ಹೇಗಾದರೂ ಆ ನೋಡು ತೀರಿಸುವ ಹವ್ಯಾಸದಲ್ಲಿರುವಹಾಗೆ ತೋರುತ್ತಿದೆ!

ಈ ವಿಷ್ಯವಾಸಗಳನ್ನೆಲ್ಲ ಉಹಿಸಿಯೆ, ಅಥವಾ ಸರಿಯಾದ ತಿಳುವಳಿಕೆಯುದ್ದೇ ನನ್ನು ಮಹಾ ಪ್ರಧಾನಿಗಳಾದ ಶ್ರೀ ಜವಹರಲಾಲ ನೆಹರೂರವರು ಪಾಕಿಸ್ತಾನ ಸರ್ಕಾರದೆಯಿಂದ ವಿಲಿಯಾಕ್ಕೆಯ ಗಂಭಾತಾವು ಟು ಎಂದು ಅರ್ಥಗರ್ಭಾಗಿ ಮಾತಾಡಿದ್ದಾರೆ. ಅಮೇರಿಕೆಯು ಇಂದು ಸಹಾಯಕರ ಕಣ್ಣು ವೇಷದಬ್ಬಿಬರಬಹುದು. ಪಾಕಿಸ್ತಾನವು ಹಿಂದಮುಂದು ನೋಡದೆ ಬಾಲು ಹೆರೆಒಳಗೆ ಬರವಾಡಿಕೊಳ್ಳಬಹುದು. ಆದರೆ ಈ ಸಣ್ಣ ರೂಪಿನಲ್ಲಿ ಒಳಬಂವನು ನಾಳೆ ಬೃಹದಾಕಾರವಾಗಿ ಬೆಳೆಭೂತವಾಗಿ ನುಂಗಿಯಾನು ಎಂಬುದನ ಶ್ರೀ ನೆಹರೂರವರು ದೇಶರುನಂತೆ ಪಾಸ್ತಾನವು ತಿಳಿದೆ ಇನ್ನುವು ವಿಷಾದವಾಗಿದೆ.

ಪಾಕಿಸ್ತಾನವು ಸ್ವತಂತ್ರ ದೇಶ. ಅದು ತನಗೆ ಬೇಕಾದಂತೆ ನಡೆದುಕೊಳ್ಳುವ ಸ್ವತಂತ್ರವನಿದೆ ಆದರೆ ಲೋಕ ಶಾಂತಿ ಹಾನಿಯಾಗುವಂಥದನ್ನು ಯಾರು ಮಾಡುವುದು ಭೂಷಣವಲ್ಲ. ಅಮೇರಿಯೊಡನೆ ಸೈನಿಕ ಒಡಂಬಡಿಕೆಯನ್ನು ಮಾಡಿಕೊಳ್ಳುವುದರಿಂದಾಗುವ ದುಷ್ಪರಿಣಾಮವನ್ನು ದೇಶ-ವಿದೇಶಗಳ ಬುದ್ಧಿವಂತರು ಸಾರಿ ತಿಳಿಸಿಯಾಗಿದೆ. ಭಾರತ ಚೀನ, ರಷಿಯಾಗಳಂಥ ಮಹಾರಾಷ್ಟ್ರಗಳು ಪ್ರತಿಭಟಿಸಿಯಾಗಿದೆ. ಇನ್ನೆಲ್ಲವನ್ನೂ ಪಾಕಿಸ್ತಾನ ಸರಕಾರವು ಮನ್ನಿಸುವಂತಾಡುವುದಿಲ್ಲ. ಒಟ್ಟಾರೆ ನೆರೆಯನಾಜೊಂದು ಮುಕ್ಷಸ್ವಿತನದಿಂದ ನಡೆದುಕೊಳ್ಳುವಾಮ್ಯಾಕ್ಯನಾದಿಗಳ ಕಾರಸ್ಥಾನದಲ್ಲಿ ಗೊಂಬೆಯಾಗುವ ಲಕ್ಷಣವಿರುವುದನ್ನು ತಿಳಿಸು, ಆದರಿಂದ ನನ್ನು ದೇಶದ ಮೆಲಾಗುವ ಪರಿಣಾಮವನ್ನು ಅರಿತು ಜವಹರಲಾಲ ನೆಹರೂರವರು ದೇಶ

(೩ನ್ನು ನೇ ಪುಟದಲ್ಲಿ ಒಕ್ಕುನ್ನದ